ಮಧ್ಯಕಾಲೀನ ಕರ್ನಾಟಕ

(ಜಿ. ಎಸ್. ದೀಕ್ಷಿತ್ ಅವರ ಆಯ್ದ ಬರಹಗಳು)

ಸಂಪಾದಕರು

ಡಾ. ಶ್ರೀನಿವಾಸ ಹಾವನೂರ



ಪ್ರಸಾರಾಂಗ
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮಧ್ಯಕಾಲೀನ ಕರ್ನಾಟಕ

(ಡಾ. ಜಿ.ಎಸ್. ದೀಕ್ಷಿತ್ ಅವರ
ಐತಿಹಾಸಿಕ ಲೇಖನಗಳ ಸಂಗ್ರಹ)

ಸಂದರ್ಭಸಾಹಿತ್ಯ ಮಾಲೆ-೩

ಮಧ್ಯಕಾಲೀನ ಕರ್ನಾಟಕ

(ಡಾ. ಜಿ.ಎಸ್. ದೀಕ್ಷಿತ್ ಅವರ ಐತಿಹಾಸಿಕ ಲೇಖನಗಳ ಸಂಗ್ರಹ)

ಸಂಪಾದಕ

ಡಾ. ಶ್ರೀನಿವಾಸ ಹಾವನೂರ

ಪ್ರಸಾರಾಂಗ

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

MADHYA KAALEENA KARNATAKA : (Dr. G.S. Dikshi
avara AITHIHASIKA LEKHANAGALU : A Collection o
Essays on medivial History of Karnataka.) Edited by
Dr. Srinivasa Havanur.


Published by
The Registrar
Karnataka State Open University
Manasagangotri, Mysore-570 006

Pp : 428 Price: Rs. 100
First Impression - 2008
www.ksoumysore.com

ಪ್ರಕಾಶಕರು
ಕುಲಸಚಿವರು
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ,
ಮಾನಸಗಂಗೋತ್ರಿ, ಮೈಸೂರು-೫೭೦ ೦೦೬.

ಪುಟಗಳು : ೪೨೮
ಬೆಲೆ ರೂ. ಒಂದುನೂರು ಮಾತ್ರ.
ಬೆಲೆ : ರೂ. ೧೦೦.೦೦
ಮೊದಲ ಮುದ್ರಣ : ೨೦೦೮

ಅಕ್ಷರ ಸಂಯೋಜನೆ ಮತ್ತು ಮುದ್ರಣ
ಮೆ॥ ಪ್ರಿಂಟ್ ಪಾರ್ಕ್
#೧೪೯೬/೪, ಮೂರನೆಯ ಅಡ್ಡರಸ್ತೆ, ಮಹಾಕವಿ ಕುವೆಂಪು ರಸ್ತೆ,
ಮರಿಯಪ್ಪನಪಾಳ್ಯ, ಶ್ರೀರಾಂಪುರಂ ಪೋಸ್ಟ್,
ಬೆಂಗಳೂರು - ೫೬೦ ೦೨೧.
ದೂ : ೦೮೦-೨೩೪೨ ೨೮೩೮



ಡಾ. ಜಿ.ಎಸ್. ದೀಕ್ಷಿತ್

ಬದ್ಧತೆಯಿಂದ ಬುದ್ಧತೆಯೆಡೆಗೆ

'ಉನ್ನತ ಶಿಕ್ಷಣ ಎಲ್ಲರಿಗೂ ಎಲ್ಲೆಡೆ' ಎನ್ನುವ ಕನಸನ್ನು ಹೊತ್ತ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ಶಿಕ್ಷಣವನ್ನು ಪಡೆಯುವ ಅವಕಾಶಗಳ ಆವರಣದ ಪರಿಧಿಗಳನ್ನು ನಿರಂತರವಾಗಿ ವಿಸ್ತರಿಸುವ ಕೆಲಸವನ್ನು ಮಾಡುತ್ತಿದೆ. ಶಿಕ್ಷಣವನ್ನು ಪಡೆಯಲು ಅವಕಾಶವನ್ನು ಕಲ್ಪಿಸುವುದು ಮತ್ತು ಅಂತಹ ಶಿಕ್ಷಣವು ಬದುಕಿನೊಂದಿಗೆ ಸಂಬಂಧ ಹೊಂದುವಂತೆ ಮಾಡುವುದು ಮುಖ್ಯವಾದ ಸಂಗತಿ. ಮುಕ್ತತೆ ಎನ್ನುವುದು ಒಂದು ಮನೋಧರ್ಮವಾಗಿ ಇದ್ದಾಗ, ಶಿಕ್ಷಣವನ್ನು ಕಲಿಸುವ ಮತ್ತು ಕಲಿಯುವ ಎನ್ನುವ ಭೇದ ಮಾಯವಾಗಿ, ಕಲಿಯುವವರ ಜಗತ್ತೊಂದು ನಿರ್ಮಾಣವಾಗುತ್ತದೆ. ಸಾವಿರಾರು ವರ್ಷಗಳಿಂದ ಕಲಿತುಕೊಂಡು ಬಂದ ಜ್ಞಾನವನ್ನು ಎಲ್ಲೆಡೆ ಪಸರಿಸುವ ಕಾಯಕದಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ಹದಿನೈದು ವಸಂತಗಳನ್ನು ಹಾದು ಬಂದಿದೆ. ಜ್ಞಾನ ಪ್ರಸರಣವನ್ನು ಮಾಡುವ ಅನಂತ ಬಗೆಗಳು ಇಂದು ತೆರೆದುಕೊಂಡಿವೆ. ಮೌಖಿಕ ಪರಂಪರೆ ಮತ್ತು ಲಿಖಿತ ಪರಂಪರೆಗಳ ಜೊತೆಯಲ್ಲಿ ವಿದ್ಯುನ್ಮಾನ ಪರಂಪರೆಯೊಂದು ಹೊಸ ಜಗತ್ತನ್ನು ಸೃಷ್ಟಿಸಿದೆ. ಕರ್ನಾಟಕದಂತಹ ರಾಜ್ಯದಲ್ಲಿ ಪರಂಪರಾಗತ ಮೌಖಿಕ ಪರಂಪರೆ, ಶೈಕ್ಷಣಿಕ ವಲಯದ ಲಿಖಿತ ಪರಂಪರೆ ಮತ್ತು ತಂತ್ರಜ್ಞಾನ ಯುಗದ ವಿದ್ಯುನ್ಮಾನ ಸಂವಹನ– ಇವು ಒಂದರೊಡನೊಂದು ಸಂಘರ್ಷಿಸುತ್ತಾ ಸಮನ್ವಯಗೊಳ್ಳುತ್ತಾ ಸಾಗುತ್ತಿವೆ. ಶಿಕ್ಷಣವನ್ನು ಹೊಂದುವ ಏಕಧಾರೆಯ ವಾಹಿನಿ ಕಣ್ಮರೆಯಾಗಿ ಬಹುಧಾರೆಯ ಸಂವಹನ ವಾಹಿನಿಗಳು ತೆರೆದುಕೊಂಡಿವೆ. ದೂರಶಿಕ್ಷಣ ಸಂಕಥನದ ಸ್ವಯಂಕಲಿಕಾ ಪಠ್ಯಗಳು ಮತ್ತು ಸಾಮಗ್ರಿಗಳು ಇರುವಂತೆಯೇ ಸಂಪರ್ಕ ತರಗತಿಗಳು, ಪೂರಕ ಕಲಿಕೆಗಳು ಸಕ್ರಿಯವಾಗಿವೆ. ಸಿ.ಡಿ. ರೂಪದ ಕಲಿಕಾ ಸಾಮಗ್ರಿಗಳು, ವಿದ್ಯುನ್ಮಾನ ಮಾಧ್ಯಮದ ಕಲಿಕಾ ಪ್ರವಾಹ–ಇವು ದೂರಶಿಕ್ಷಣವನ್ನು ಇನ್ನಷ್ಟು ಸಮೀಪ ಶಿಕ್ಷಣವನ್ನಾಗಿ ಮಾರ್ಪಡಿಸಿವೆ. ತಂತ್ರಜ್ಞಾನ ಮತ್ತು ಕಲಿಕಾ ಸಾಮಗ್ರಿಗಳೊಂದಿಗೆ ಜನರು ಬೆರೆತು ಹೊಸ ಶಿಕ್ಷಣಸಂಸ್ಕೃತಿಯೊಂದು ನಿರ್ಮಾಣಗೊಂಡಿದೆ.

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಕಾಲದಲ್ಲಿ ಆರಂಭವಾದ ಪ್ರಚಾರೋಪನ್ಯಾಸ ಮಾಲಿಕೆ ಮತ್ತು ಶ್ರೀ ಕುವೆಂಪುರವರ ಕನಸಿನ

ಕೂಸಾಗಿ ವಿಶ್ವವಿದ್ಯಾನಿಲಯಗಳಿಗೆ ಸಾಮಾಜಿಕ ಸಾಂಸ್ಕೃತಿಕ ಆಯಾಮಗಳನ್ನು ಕೊಟ್ಟ ಪ್ರಸಾರಾಂಗ, ಮುಂದೆ ಕರ್ನಾಟಕದ ಎಲ್ಲ ವಿಶ್ವವಿದ್ಯಾನಿಲಯಗಳ ವಿಸ್ತರಣೆಯ ಭಾಗವಾಗಿ ರೂಪುಗೊಳ್ಳುತ್ತಾ ಬಂದಿತು. ಬೋಧನೆ ಸಂಶೋಧನೆಗಳ ಜೊತೆಗೆ ಅಷ್ಟೇ ಮುಖ್ಯವಾಗಿ 'ಪ್ರಸಾರಾಂಗ' ಎನ್ನುವುದು ಸಮಾಜಮುಖಿಯಾಗಿ ವಿಶ್ವವಿದ್ಯೆಯನ್ನು ಜನಗಳೆಡೆಗೆ ಕೊಂಡೊಯ್ಯಲು ಪ್ರಮುಖ ರಹದಾರಿಯಾಯಿತು. ಒಂದು ಅರ್ಥದಲ್ಲಿ **ಪ್ರಸಾರಾಂಗ** ಎಂದರೆ **ಮುಕ್ತ ವಿಶ್ವವಿದ್ಯಾನಿಲಯ** ಎನ್ನುವ ಅರ್ಥವನ್ನು ಹೊಂದಿತು. ಹದಿನಾರು ವರ್ಷಗಳ ಇತಿಹಾಸವಿರುವ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಪ್ರಸ್ತುತ ಸಂದರ್ಭದಲ್ಲಿ ಪ್ರಸಾರಾಂಗದ ಆಕೃತಿ ಮತ್ತು ಆಶಯಗಳು ಅನನ್ಯ ಮತ್ತು ಅರ್ಥಪೂರ್ಣವಾಗಿರಬೇಕು ಎನ್ನುವ ಅಪೇಕ್ಷೆ ನಮ್ಮದು. ಪ್ರಕಟಣೆಗಳು, ಉಪನ್ಯಾಸಗಳು, ವಿಚಾರಸಂಕಿರಣಗಳು, ಕಮ್ಮಟಗಳು, ಯೋಜನೆಗಳು-ಇವೆಲ್ಲವು ಪ್ರಸಾರಾಂಗದ ಕಾಯಕಶರೀರದ ಭಾಗವಾದರೂ ಅವಯವಗಳ ಸ್ವರೂಪ ಮತ್ತು ಕಾರ್ಯನಿರ್ವಹಣೆ ಇಂದು ಭಿನ್ನವಾಗಬೇಕಾಗಿದೆ. ವಿಶಿಷ್ಟವಾಗಬೇಕಾಗಿದೆ. ವಿಶ್ವವಿದ್ಯಾನಿಲಯವು ಜ್ಞಾನವನ್ನು ಕೊಡುವ ಅಥವಾ ಹರಡುವ ಪ್ರಸರಣ ಕೇಂದ್ರ ಎನ್ನುವ ಭಾವನೆಯನ್ನು ಬದಲಿಸಿ ಪ್ರಸಾರಾಂಗವು ಚಿಂತನೆ ಹಾಗೂ ಕ್ರಿಯಾಶೀಲತೆಯನ್ನು ಕಲೆಹಾಕುವ ಮತ್ತು ಬಳಸಲು ಅವಕಾಶ ಕಲ್ಪಿಸುವ ಸಂಪನ್ಮೂಲ ಕೇಂದ್ರ ಎನ್ನುವ ಅರ್ಥವ್ಯಾಪ್ತಿಯನ್ನು ಪಡೆಯಬೇಕು. ಮುಕ್ತತೆ ಎನ್ನುವುದು ಮುಗ್ಧತೆಯಿಂದ ಆರಂಭವಾಗಿ ಪಕ್ವತೆಯಲ್ಲಿ ಕೊನೆಗೊಳ್ಳಬೇಕು. ಅಂತಹ ಪಕ್ವತೆಯು ಮುಗ್ಧತೆಯನ್ನು ಬಿಟ್ಟುಕೊಡಬಾರದು. ಹೀಗೆ ಮುಗ್ಧತೆ, ಮುಕ್ತತೆ ಮತ್ತು ಪಕ್ವತೆಗಳ ಸಂಗಮವಾಗಿ ಕರ್ನಾಟಕದ ತಿಳುವಳಿಕೆಗೆ ಸಂವಹನದ ತರಂಗಾಂತರಗಳನ್ನು ಹರಿಯಗೊಡುವುದು ನಮ್ಮ ಪ್ರಸಾರಾಂಗದ ಪ್ರಮುಖ ಕಾಳಜಿ.

ಡಾ.ಜಿ.ಎಸ್.ದೀಕ್ಷಿತ್ ಅವರ ಐತಿಹಾಸಿಕ ಲೇಖನಗಳ ಸಂಗ್ರಹವು ಮಧ್ಯಕಾಲೀನ ಕರ್ನಾಟಕ ಇತಿಹಾಸ ಸಂಶೋಧನೆಯ ದೃಷ್ಟಿಯಿಂದ ಒಂದು ಮಹತ್ವದ ಕೃತಿ. ಡಾ.ಜಿ.ಎಸ್.ದೀಕ್ಷಿತ್ **'ಮಧ್ಯಯುಗೀನ ಕರ್ನಾಟಕ'**ವನ್ನು ಕುರಿತು ನಡೆಸಿದ ಆಳವಾದ ಅಧ್ಯಯನದ ಫಲವಾಗಿ ರೂಪುಗೊಂಡ ಸಂಪ್ರಬಂಧಗಳು ಇಲ್ಲಿ ಸಂಕಲಿತವಾಗಿವೆ. ವಚನಕಾರರು, ವಿಜಯನಗರದ ಅರಸರು, ಕೆಳದಿ ಮನೆತನಗಳು ಇಂತಹ ವಿಶಿಷ್ಟ ಅಧ್ಯಯನದೊಂದಿಗೆ ಕೆರೆಗಳು ಮತ್ತು ಸ್ಥಳೀಯ ಸಂಸ್ಥೆಗಳ ಅಧ್ಯಯನವನ್ನು ವಿಶೇಷವಾಗಿ ಇಲ್ಲಿ ನಡೆಸಲಾಗಿದೆ. ಮಧ್ಯಯುಗೀನ ಕನ್ನಡ ಕೃತಿಗಳ ವಿಮರ್ಶೆ ಕೂಡ ಸಾಹಿತ್ಯದ ಮೂಲಕ ಇತಿಹಾಸವನ್ನು ಶೋಧಿಸುವ ಅಪೂರ್ವ ಪ್ರಯತ್ನ. ಸಾಹಿತ್ಯ-ಸಂಸ್ಕೃತಿಯ ಚಿಂತಕರ ಲೇಖಕರ ವ್ಯಕ್ತಿ ಚಿತ್ರಗಳು

ತುಂಬಾ ಅಪೂರ್ವವಾಗಿ ಇಲ್ಲಿ ಮೂಡಿಬಂದಿವೆ. ಕನ್ನಡ ಸಾಹಿತ್ಯ ಮತ್ತು ಸಂಶೋಧನೆಯ ಅರುಣೋದಯದ ಚಿರಂಜೀವಿ ಸಂಶೋಧಕರಾದ ಡಾ. ಶ್ರೀನಿವಾಸ ಹಾವನೂರ ಅವರು ದೀಕ್ಷಿತ್ ಅವರ ಸಂಪ್ರಬಂಧಗಳ ಸಂಕಲನವನ್ನು ಸಂಪಾದಿಸಿಕೊಟ್ಟು ಉಪಕರಿಸಿದ್ದಾರೆ. ಆಕರಗಳ ಶೋಧವನ್ನು ಸಾಗರದಾಚೆಯಿಂದಲೂ ಹೆಕ್ಕಿ ತಂದ, ಇತಿಹಾಸಕ್ಕೆ ಕನ್ನಡ ಸಾಹಿತ್ಯ–ಸಂಸ್ಕೃತಿಯ ಮೂಲಕ ಹೊಸ ಅಧ್ಯಯನ ವಿಧಾನವನ್ನು ರೂಪಿಸಿದ, ಶೋಧಕ ಕ್ರಿಯಾಶೀಲತೆಯ ಪ್ರತಿರೂಪವಾಗಿರುವ ಹಿರಿಯ ಸಂಶೋಧಕ ಡಾ. ಶ್ರೀನಿವಾಸ ಹಾವನೂರ ಅವರು ನಮ್ಮ ನಡುವಿನ ನಡೆದಾಡುವ ಸಂಶೋಧನ ಆಕರ. ನಾನು ಸದಾ ಕಾಲ ಗೌರವಿಸುವ ಹಿರಿಯರೂ ಹಿತೈಷಿಗಳೂ ವಿನಯ–ವಿದ್ವತ್ತುಗಳ ವಿದ್ಯುದಾಲಿಂಗನದ ಸಂಶೋಧಕರೂ ಆಗಿರುವ ಡಾ. ಶ್ರೀನಿವಾಸ ಹಾವನೂರ ಅವರು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಪ್ರಸಾರಾಂಗದ ವತಿಯಿಂದ ಈ ಗ್ರಂಥವನ್ನು ಪ್ರಕಟಿಸಲು ಒಪ್ಪಿಗೆ ಕೊಟ್ಟಿರುವುದಕ್ಕಾಗಿ ಅವರಿಗೆ ಗೌರವದ ನಮನಗಳನ್ನು ಸಲ್ಲಿಸುತ್ತೇನೆ.

ಕನ್ನಡದ ಹಿರಿಯ ವಿದ್ವಾಂಸರೂ ಅನುಭವಿ ಆಡಳಿತಗಾರರೂ ಆಗಿರುವ ಡಾ. ಡಿ.ಕೆ. ರಾಜೇಂದ್ರ ಅವರು ನಮ್ಮ ವಿಶ್ವವಿದ್ಯಾನಿಲಯ ಪ್ರಸಾರಾಂಗದ ಮೊದಲ ಗೌರವ ನಿರ್ದೇಶಕರಾಗಿ ಹೊಸ ಅಡಿಪಾಯವನ್ನು ಸಮರ್ಥವಾಗಿ ಹಾಕಿಕೊಟ್ಟಿದ್ದಾರೆ. ಇವರ ಪ್ರೀತಿ ವಿಶ್ವಾಸದ ಕಾಯಕದ ಫಲವಾಗಿ ನಮ್ಮ ವಿಶ್ವವಿದ್ಯಾಲಯದ ಸಂದರ್ಭಸಾಹಿತ್ಯ ಮಾಲೆಯಲ್ಲಿ ಈ ಗ್ರಂಥ ಪ್ರಕಟವಾಗುತ್ತಿದೆ. ಆತ್ಮೀಯರಾದ ಡಾ.ಡಿ.ಕೆ.ರಾಜೇಂದ್ರ ಅವರಿಗೆ ವಿಶ್ವಾಸದ ವಂದನೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಈ ಗ್ರಂಥವನ್ನು ಅಚ್ಚುಕಟ್ಟಾಗಿ ಮುದ್ರಿಸಿರುವ ಪ್ರಿಂಟ್ ಪಾರ್ಕ್, ಬೆಂಗಳೂರು, ಇವರಿಗೆ ಕೃತಜ್ಞತೆಗಳು.

ಬಿ.ಎ. ವಿವೇಕ ರೈ
ಕುಲಪತಿ

■

ನಿರ್ದೇಶಕರ ನುಡಿ

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ 'ಪ್ರಸಾರಾಂಗ' ಅಧಿಕೃತವಾಗಿ ಆರಂಭಗೊಂಡು ಇಂದಿಗೆ ಎಂಟು ತಿಂಗಳು. ಎಂಟು ತಿಂಗಳುಗಳ ಈ ಅವಧಿಯಲ್ಲಿ ಪ್ರಸಾರಾಂಗ ಹಲವು ಮಹತ್ವದ ಹೆಜ್ಜೆಗಳನ್ನು ಇಟ್ಟಿದೆ. ಪ್ರಾತಿನಿಧಿಕವಾಗಿ ಎರಡು ಕೃತಿಗಳನ್ನು ಬಿಡುಗಡೆಗೊಳಿಸುವುದರ ಮೂಲಕ ಉದ್ಘಾಟನೆಗೊಂಡ ಪ್ರಸಾರಾಂಗ ಅದೇ ವೇಗವನ್ನು ಕಾಯ್ದುಕೊಳ್ಳಲು ಉತ್ಸುಕವಾಗಿದೆ.

'ಪ್ರಸಾರಾಂಗ' ಉದ್ಘಾಟನೆಗೊಂಡ ಸಂದರ್ಭದಲ್ಲಿ ಅಲ್ಲಿ-ಇಲ್ಲಿ ಕೆಲವೊಂದು ಮಾತುಗಳು ಕೇಳಿ ಬಂದದ್ದುಂಟು. ಎಲ್ಲಾ ವಿಶ್ವವಿದ್ಯಾನಿಲಯಗಳೂ ಪ್ರಸಾರಾಂಗವನ್ನು ಆರಂಭಿಸಿವೆ. ಪುಸ್ತಕ ಪ್ರಕಟಣೆ ಮಾಡುತ್ತಿವೆ. ಮತ್ತೆ ಇದೂ ಆ ಕೆಲಸವನ್ನೇ ಮಾಡುವುದಾದರೆ ಅದರ ಅಗತ್ಯ ಇದೆಯೇ? ಇದು ಅವರು ಎತ್ತಿದ ಪ್ರಶ್ನೆ. ಮೇಲ್ನೋಟಕ್ಕೆ ಕೆಲವರಿಗೆ ಸರಿ ಎನಿಸಬಹುದು.

ಆದರೆ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯಕ್ಕೆ ತನ್ನದೇ ಆದ ವಿಶೇಷತೆ ಇದೆ. ಆದರಿಂದಾಗಿ ಅದು ತನ್ನದೇ ಆದ ಗುರಿಯನ್ನು ಹೊಂದಿದೆ. ಧೋರಣೆಗಳನ್ನು ರೂಪಿಸಿಕೊಂಡಿದೆ.

'ಉನ್ನತ ಶಿಕ್ಷಣ ಎಲ್ಲರಿಗೂ ಎಲ್ಲೆಡೆ' ಇದು ಮುಕ್ತ ವಿಶ್ವವಿದ್ಯಾನಿಲಯದ ಘೋಷಣೆ. ಶಿಕ್ಷಣವಂಚಿತರಿಗೆ ಹಾಗೂ ಹೆಚ್ಚಿನ ಶಿಕ್ಷಣಾಕಾಂಕ್ಷಿಗಳಿಗೆ ಅನುಕೂಲಗಳನ್ನು ಎಲ್ಲಾ ರೀತಿಯಲ್ಲಿಯೂ ಕಲ್ಪಿಸಿಕೊಡುವುದು ಇದರ ಧ್ಯೇಯ. ಆ ಹಿನ್ನೆಲೆಯಲ್ಲಿ ವಿವಿಧ ಕ್ಷೇತ್ರಗಳ, ವಿವಿಧ ಬಗೆಯ ವಿಷಯಗಳಿಗೆ ಸಂಬಂಧಿಸಿದ ಕೃತಿಗಳನ್ನು ಮುದ್ರಿಸಿ ಹೊರತರಬೇಕೆಂಬ ಉದ್ದೇಶವನ್ನು ಪ್ರಸಾರಾಂಗ ಹೊಂದಿದೆ. ಜ್ಞಾನಕ್ಷೇತ್ರ ಬತ್ತಲಾಗದ, ಬತ್ತಲಾರದ ಸಾಗರ. ಆದರಿಂದ ಜ್ಞಾನಗಂಗೆಯನ್ನು ಎಷ್ಟು ವಿಧದಲ್ಲಿ ಎಷ್ಟು ಜನ ಎಷ್ಟು ರೂಪಗಳಲ್ಲಿ ತುಂಬಿ ಹಂಚಿದರೂ ಹೊಸತನ ಇದ್ದೇ ಇರುತ್ತದೆ. ಆ ಕೆಲಸವನ್ನು ಕರಾಮುವಿಯ ಪ್ರಸಾರಾಂಗ ಮಾಡುತ್ತಿದೆ.

ಪ್ರಸಾರಾಂಗ ಪ್ರಸ್ತುತ ಕೆಲವೊಂದು ಪುಸ್ತಕ ಮಾಲೆಗಳನ್ನು ಆರಂಭಿಸಿವೆ - ಸಂದರ್ಭ ಸಾಹಿತ್ಯ ಮಾಲೆ, ಆರೋಗ್ಯ ಮಾಲೆ, ಕೃಷಿಮಾಲೆ, ಸಾಧಕರ ಮಾಲೆ,

ಮನೋವಿಜ್ಞಾನ ಮಾಲೆ ಇತ್ಯಾದಿ. ಪ್ರಸಾರಾಂಗ ವಿದ್ಯಾರ್ಥಿಗಳಿಗೆ ಸಂಬಂಧಿಸಿದ ಪಠ್ಯಗಳ ಪೂರಕ ಸಾಹಿತ್ಯ ಸಾಮಗ್ರಿಯನ್ನು ಹೆಚ್ಚಿನ ರೀತಿಯಲ್ಲಿ ಒದಗಿಸುವುದರ ಜೊತೆಗೆ, ಅದರಿಂದ ಹೊರಗುಳಿದ ಇತರರನ್ನೂ ದೃಷ್ಟಿಯಲ್ಲಿಟ್ಟುಕೊಂಡು ಕೃತಿಗಳನ್ನು ಹೊರತರಲು ಯೋಜಿಸಿದೆ. ಮುಂದೆ ವಿದ್ಯಾರ್ಥಿಗಳಿಗೆ ಸಂಬಂಧಿಸಿದಂತೆ ವಿಶ್ವವಿದ್ಯಾನಿಲಯ ನಡೆಸುವ 'ಸಂಪರ್ಕ ಶಿಬಿರ'ಗಳಲ್ಲಿ ವಿಶೇಷ ಉಪನ್ಯಾಸಗಳನ್ನು ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ ಏರ್ಪಡಿಸಿ ಅವನ್ನು ಪುಸ್ತಕ ರೂಪದಲ್ಲಿ ಹೊರತರುವ ಯೋಜನೆಯನ್ನೂ ಹೊಂದಿದೆ. ಕೆಲವನ್ನು ಪುಸ್ತಕ ರೂಪದಲ್ಲಿಯೇ ಅಲ್ಲದೆ ಅವನ್ನು ಸಿ.ಡಿ. ರೂಪದಲ್ಲಿಯೂ ಹೊರತರಬೇಕೆಂಬ ಆಲೋಚನೆ ಪ್ರಸಾರಾಂಗಕ್ಕಿದೆ.

ಈ ಸಂದರ್ಭದಲ್ಲಿ ಇವೆಲ್ಲಕ್ಕೂ ಬೆನ್ನೆಲುಬಾಗಿ ನಿಂತಿರುವ ಕುಲಪತಿಗಳಾದ ಪ್ರೊ. ಬಿ.ಎ. ವಿವೇಕ ರೈ ಅವರ ಬಗ್ಗೆ ಒಂದೆರಡು ಮಾತುಗಳನ್ನು ಹೇಳಲೇ ಬೇಕು. ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಪ್ರಸಾರಾಂಗದ ಪ್ರಾಮುಖ್ಯತೆಯನ್ನು ಹೆಚ್ಚಿನ ರೀತಿಯಲ್ಲಿ ಮನಗಂಡವರು ಪ್ರೊ. ರೈ ಅವರು. ಹಾಗಾಗಿ ಅವರು ಅಧಿಕಾರ ಸ್ವೀಕರಿಸಿದ ಸಂದರ್ಭದಲ್ಲಿಯೇ ಆ ಬಗ್ಗೆ ತಮ್ಮ ಅನಿಸಿಕೆಯನ್ನು ವ್ಯಕ್ತಪಡಿಸಿದರು ಹಾಗೂ ಅಷ್ಟೇ ಬೇಗ ಅದನ್ನು ಕಾರ್ಯರೂಪಕ್ಕೂ ತಂದರು. ಪ್ರಸಾರಾಂಗದ ಗೌರವ ನಿರ್ದೇಶಕನಾಗಿ ನಾನು ಹೆಮ್ಮೆಯಿಂದ ಹೇಳಿಕೊಳ್ಳುವ ಸಂಗತಿ ಎಂದರೆ, ಇಂತಹ ಕುಲಪತಿ ಯಾವುದೇ ವಿಶ್ವವಿದ್ಯಾನಿಲಯದ ಅಧಿಕಾರ ಹಿಡಿದರೂ ಅದರ ಸರ್ವತೋಮುಖ ಅಭಿವೃದ್ಧಿ ಸಾಧ್ಯ ಎಂಬುದು. ಪ್ರಸಾರಾಂಗದಿಂದ ಹೋಗುವ ಯಾವುದೇ ಪ್ರಸ್ತಾವನೆ ಐದು ನಿಮಿಷಗಳಲ್ಲಿ ಅವರ ಕಛೇರಿಯಿಂದ ಅನುಮೋದನೆಗೊಂಡು ಹೊರಬರುತ್ತದೆ. ಇಂತಹ ಸಹಕಾರಕ್ಕಾಗಿ ನಾನು ಅವರಿಗೆ ವಂದಿಸುತ್ತೇನೆ. ಹಾಗೂ ಹೃತ್ಪೂರ್ವಕ ಅಭಿನಂದನೆಗಳನ್ನೂ ಸಲ್ಲಿಸುತ್ತೇನೆ. ಅವರು ನೀಡುತ್ತಿರುವ ಮಾರ್ಗದರ್ಶನ ಹಾಗೂ ಸಹಕಾರಕ್ಕೆ ನಾನು ಋಣಿ.

ಇನ್ನು ಆಡಳಿತಾತ್ಮಕವಾಗಿ ಸಹಕಾರ ನೀಡುತ್ತಿರುವ ಕುಲಸಚಿವರಾದ ಶ್ರೀ ಕೆ.ಆರ್. ಜಯಪ್ರಕಾಶ್ ರಾವ್ ಅವರಿಗೆ, ಹೆಚ್ಚಿನ ಕಾಲ ದ್ವಿಪಾತ್ರಧಾರಿಗಳಾಗಿ ಕುಲಸಚಿವ ಸ್ಥಾನ ಹಾಗೂ ಹಣಕಾಸಿನ ಹೊಣೆಹೊತ್ತು ಕಾರ್ಯನಿರ್ವಹಿಸಿದ ಶ್ರೀಮತಿ ಜಿ. ನಾಗಮಣಿ ಅವರಿಗೆ ಹಾಗೂ ಪ್ರೊ. ಜಗದೀಶ ಡೀನ್ ಶೈಕ್ಷಣಿಕ ಅವರ ಸಹಕಾರ ಹಾಗೂ ಪ್ರೋತ್ಸಾಹಕ್ಕೆ ಆಭಾರಿಯಾಗಿದ್ದೇನೆ. ಸಿದ್ಧಪಾಠ ಹಾಗೂ ಪ್ರಸಾರಾಂಗದ ಮುದ್ರಣ ಕಾರ್ಯಗಳನ್ನು ಜವಾಬ್ದಾರಿಯುತವಾಗಿ ನೋಡಿಕೊಳ್ಳುತ್ತಿರುವ ಉಪಕುಲಸಚಿವರಾದ ಡಾ. ಎ. ರಂಗಸ್ವಾಮಿ ಅವರ ಸಹಕಾರವನ್ನೂ ಇಲ್ಲಿ ಸ್ಮರಿಸುತ್ತೇನೆ. ಕೃತಿ ಹೊರಬರುವಲ್ಲಿ ನೆರವಾದ ಶ್ರೀ ಎನ್.ಎಸ್.

ಶಾರದಾಪ್ರಸಾದ್, ಡಾ. ಎ.ವೈ. ವಿಜಯಕುಮಾರ್ ಮತ್ತು ಡಾ. ಎ.ಎಸ್. ಮಹದೇವ ಇವರುಗಳನ್ನೂ ಈ ಸಂದರ್ಭದಲ್ಲಿ ನೆನೆಯುತ್ತೇನೆ. ಹಾಗೂ ನನ್ನ ಕಚೇರಿಯ ಸಿಬ್ಬಂದಿ ಶ್ರೀ ಆರ್. ಶಿವಕುಮಾರ ಮತ್ತು ಜಿ. ಮಂಜುಳ ಅವರನ್ನು ಹಾಗೂ ಎನ್.ದೀಪಕ್, ಸುರೇಶ್, ಎಸ್.ಸುರೇಶ್ ಅವರುಗಳ ಸಹಕಾರವೂ ಇಲ್ಲಿ ಉಲ್ಲೇಖನೀಯ.

ಈ ಕೃತಿಯನ್ನು ಸಂಪಾದಿಸಿಕೊಟ್ಟಿರುವ ಡಾ. ಶ್ರೀನಿವಾಸ ಹಾವನೂರ ಅವರು ಖ್ಯಾತ ಸಂಶೋಧಕರು ಹಾಗೂ ಲೇಖಕರು. ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಹೆಸರು ಮಾಡಿದವರು. ಇತಿಹಾಸ ಹಾಗೂ ಪ್ರಾಚೀನ ಸಾಹಿತ್ಯದ ಬಗ್ಗೆ ಹೆಚ್ಚಿನ ಒಲವನ್ನು ಉಳ್ಳ ಅವರು ದಿ. ದೀಕ್ಷಿತ್ ಅವರು ಇತಿಹಾಸಕ್ಕೆ ಸಂಬಂಧಿಸಿದಂತೆ ಬರೆದಿರುವ ಸಂಶೋಧನ ಬರಹಗಳನ್ನು ಬಹಳ ಶ್ರಮ ವಹಿಸಿ ಸಂಗ್ರಹಿಸಿ ಇಲ್ಲಿ ಕೊಟ್ಟಿದ್ದಾರೆ. ಅಭಿಮಾನವಿಟ್ಟು ಅವರು ಮಾಡಿಕೊಟ್ಟಿರುವ ಈ ಕೆಲಸಕ್ಕಾಗಿ ಅವರನ್ನು ಅಭಿನಂದಿಸುತ್ತ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಈ ಗ್ರಂಥವನ್ನು ಅಚ್ಚುಕಟ್ಟಾಗಿ ಮುದ್ರಿಸಿಕೊಟ್ಟಿರುವ ಮೆ॥ ಪ್ರಿಂಟ್ ಪಾರ್ಕ್, ಬೆಂಗಳೂರು ಅವರು ಈ ಕೃತಿ ಸುಂದರವಾಗಿ ಹೊರಬರುವಲ್ಲಿ ಆಸಕ್ತಿವಹಿಸಿದ್ದಾರೆ, ಮುಖಪುಟ ಅಂದವಾಗಿ ಕಾಣಲು ಕಲಾವಿದ ಶ್ರೀ ಮಂಜುನಾಥ್ ಅವರು ಶ್ರದ್ಧೆವಹಿಸಿದ್ದಾರೆ. ಡಾ. ಬಿಸ್ಲೇಹಳ್ಳಿ ಪ್ರಭು ಈ ಕಾರ್ಯದಲ್ಲಿ ಆಸಕ್ತಿ ತಳೆದಿದ್ದಾರೆ. ಇವರೆಲ್ಲರನ್ನೂ ಈ ಸಂದರ್ಭದಲ್ಲಿ ನಾನು ಪ್ರೀತಿಗೌರವಗಳಿಂದ ನೆನೆಯುತ್ತೇನೆ.

ಡಿ.ಕೆ. ರಾಜೇಂದ್ರ
ಗೌರವ ನಿರ್ದೇಶಕ
ಪ್ರಸಾರಾಂಗ

■

ಲೇಖಕರ ಮಾತು

ಇತಿಹಾಸದ ವಿಷಯಗಳಲ್ಲಿ ಉನ್ನತ ಮಟ್ಟದ ಪ್ರಾಧ್ಯಾಪಕರಾಗಿದ್ದ ಡಾ. ಜಿ.ಎಸ್. ದೀಕ್ಷಿತರು ಅನೇಕ ಮೌಲಿಕವಾದ ಲೇಖನ-ಗ್ರಂಥಗಳನ್ನು ಬರೆದಿದ್ದಾರೆ. ತಮ್ಮ ಸಂಶೋಧನೆಯಲ್ಲಿ ಸ್ವೋಪಜ್ಞವಾದ ಹೊಸ ಅಂಶಗಳನ್ನು ಕಂಡು ಹಿಡಿದಿದ್ದಾರೆ. ಅಖಿಲ ಭಾರತ ಮಟ್ಟದಲ್ಲಿ ಇತಿಹಾಸ ಸಮ್ಮೇಳನಗಳ ಅಧ್ಯಕ್ಷತೆ ವಹಿಸಿದ್ದಾರೆ. ನೂರಾರು ವಿದ್ಯಾರ್ಥಿಗಳಿಗೆ ಇತಿಹಾಸದ ದೀಕ್ಷೆಯನ್ನೇ ಕೊಟ್ಟ ದೀಕ್ಷಿತರಿವರು!

ತಮ್ಮ ಸುದೀರ್ಘ ಕಾಲದ ಅಕೆಡೆಮಿಕ್ ಮಟ್ಟದಲ್ಲಿ ದೀಕ್ಷಿತರು ಬರೆದಿದ್ದ ಲೇಖನಗಳು ಬೇರೆ ಬೇರೆ ಪತ್ರಿಕೆಗಳಲ್ಲಿ ಚದರಿ ಹೋಗಿವೆ. ಹೆಚ್ಚಿನವು ಮಧ್ಯಕಾಲೀನ ಕರ್ನಾಟಕವನ್ನು ಸುಸ್ಪಷ್ಟವಾಗಿ ಚಿತ್ರಿಸುವಂತಿದೆ. ಅವನ್ನೆಲ್ಲ ಸಂಪಾದಿಸಿ ಹೊರತಂದದ್ದಾದರೆ. ಇತಿಹಾಸದ ಅಭ್ಯಾಸಿಗಳಿಗೆ, ಆ ಕಾಲದ ಒಂದು ಪ್ರಮಾಣೀಭೂತವಾದ ದಾಖಲೆಯನ್ನು ನೀಡಿದಂತಾಗುವುದು-ಎಂಬುದಾಗಿ ಅವರ ಅಭಿಮಾನಿಗಳಲ್ಲಿ ಕೆಲವರು ಲೇಖನ ಸಂಗ್ರಹದಲ್ಲಿ ತೊಡಗಿಕೊಂಡರು.

ಅವರಲ್ಲಿ ಎದ್ದು ಕಾಣುವ ಹೆಸರು ಮುಂಬಯಿಯ ಡಾ. ಬಿ. ಲೀಲಾ ಅವರದು. ಅವರಿಗೆ ಜೊತೆಗೂಡಿದವರು ಡಾ. ಜ್ಯೋತ್ಸ್ನಾ ಕಾಮತರು; ದೂರ ದೂರದಿಂದ ಲೇಖನ ದೊರಕಿಸಿ ತಂದಿದ್ದಾರೆ. ಇತಿಹಾಸ ಅಕಾಡೆಮಿಯ ಡಾ. ಎಚ್.ಎಸ್. ಗೋಪಾಲರಾಯರು ಈ ಗ್ರಂಥಕ್ಕಾಗಿ ದೀಕ್ಷಿತರ ಕಿರುಪರಿಚಯವನ್ನು ಬರೆದು ಕೊಟ್ಟಿದ್ದಾರೆ. ಮತ್ತು ಆಗಾಗ ಸಲಹೆ ನೀಡಿದ್ದಾರೆ. ಶ್ರೀ ಎಂ.ಬಿ. ಪಾಟೀಲರು "ಈ ಸಂಬಂಧದಲ್ಲಿ ಏನು ಬೇಕಾದ ಕೆಲಸ ಕೊಡಿರಿ" ಎಂಬ ಮನೋಭಾವದವರು; ಪ್ರಕೃತ ಅಚ್ಚಿನ

ಕರಡನ್ನು ತಿದ್ದುವಲ್ಲಿ ನೆರವಾಗಿದ್ದಾರೆ. ಪ್ರೊ. ದೀಕ್ಷಿತರ ಸೊಗಸಾದ ಚಿತ್ರವನ್ನು ಒದಗಿಸಿದವರು ಛಾಯಾಚಿತ್ರಾನ್ವಿತ ಇತಿಹಾಸದಲ್ಲಿ (Photo-history) ಪರಿಣತರಾದ ಡಾ. ಎಚ್. ಚಂದ್ರಶೇಖರರು. ಪ್ರೊ. ದೀಕ್ಷಿತರ ಪತ್ನಿಯವರಾದ ತಾರಾಬಾಯಿಯವರದು ಸದ್ದಿಲ್ಲದ ಸಹಾಯ.

ಇದರ ಪ್ರಕಟನೆಯ ಕುರಿತು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕುಲಪತಿಗಳಾದ ಡಾ. ಬಿ.ಎ. ವಿವೇಕ ರೈ ಹಾಗೂ ಪ್ರಸಾರಾಂಗದ ನಿರ್ದೇಶಕರಾದ ಡಾ. ಡಿ.ಕೆ. ರಾಜೇಂದ್ರ ಅವರಲ್ಲಿ ಪ್ರಸ್ತಾಪ ಮಾಡಿದ್ದೇ ತಡ ಆ ಕೂಡಲೇ ಒಪ್ಪಿಕೊಂಡುಬಿಟ್ಟರು. ಅಂತೂ ಆರಂಭದಿಂದ ಪ್ರಕಟನೆಯ ವರೆಗಿನ ಕೆಲಸ ೩-೪ ತಿಂಗಳಲ್ಲಿಯೇ ಮುಗಿದದ್ದು ಸಂತೋಷ ದಾಯಕವಾದದ್ದು. ಅದರಲ್ಲಿ ಮೇಲಿನವರು ಪಾಲುಗಾರರಾಗಿದ್ದಾರೆ.

ಈ ಗ್ರಂಥದಲ್ಲಿ ದೀಕ್ಷಿತರ ಎಲ್ಲಾ ಕನ್ನಡ ಲೇಖನಗಳಿವೆ. ಇಂಗ್ಲಿಷ್‌ನಲ್ಲಿ ಬರೆದ ನೂರರಷ್ಟು ಲೇಖನಗಳನ್ನು ಪ್ರತ್ಯೇಕ ಸಂಗ್ರಹವಾಗಿ ತರುವ ಯೋಜನೆಯಿದೆ.

ಡಾ. ಶ್ರೀನಿವಾಸ ಹಾವನೂರ

#೬೩ ಸೌತ್ ಕ್ರಾಸ್ ರಸ್ತೆ
ಬಸವನಗುಡಿ, ಬೆಂಗಳೂರು-೦೪
ನವೆಂಬರ್-೨೦೦೮

■

ಪರಿವಿಡಿ

ಭಾಗ-೨
ಐತಿಹಾಸಿಕ ಲೇಖನಗಳು – ಸಮ್ಮಿಶ್ರ

ಭಾಗ–೩
ಅನುಬಂಧ

ಸರಳತೆ, ಸಜ್ಜನಿಕೆಗಳ ಮೂರ್ತರೂಪ / ಪ್ರೊ. ದೀಕ್ಷಿತರು

–ಡಾ. ಎಚ್. ಎಸ್. ಗೋಪಾಲರಾವ್

ಕೆಲವು ವ್ಯಕ್ತಿಗಳ ಪರಿಚಯವಿತ್ತು ಎಂದು ಹೇಳಿಕೊಳ್ಳುವುದೇ ಹೆಮ್ಮೆಯ ವಿಚಾರ. ಆ ವ್ಯಕ್ತಿಗಳ ವ್ಯಕ್ತಿತ್ವ ಅಷ್ಟು ವಿಶೇಷವಾದದ್ದು. ಅಂತಹ ವ್ಯಕ್ತಿತ್ವ ಹೊಂದಿದ್ದವರು ಶ್ರೀ ಗಿರಿ ಶ್ರೀಧರ ದೀಕ್ಷಿತ್. ಪ್ರೊ. ಜಿ.ಎಸ್. ದೀಕ್ಷಿತ್ ಎಂದೇ ಖ್ಯಾತರಾಗಿದ್ದ ಅವರೊಡನೆ ನನಗೆ ಹದಿನೆಂಟು ವರ್ಷಗಳ ಕಾಲ ನಿರಂತರ ಸಂಪರ್ಕ ಇತ್ತು ಎಂದು ಹೇಳಿಕೊಳ್ಳಲು ಹೆಮ್ಮೆ ಆಗುತ್ತದೆ.

೧೯೮೬ರಲ್ಲಿ ಕರ್ನಾಟಕ ಇತಿಹಾಸ ಅಕಾಡೆಮಿಯ ಅಧ್ಯಕ್ಷರಾದಂದಿನಿಂದ ೨೦೦೪ರಲ್ಲಿ ನಿಧನರಾಗುವವರೆಗೆ ಪ್ರೊ. ದೀಕ್ಷಿತ್ ಅವರನ್ನು ನಾನು ಆಗಾಗ ಭೇಟಿ ಆಗುತ್ತಲೇ ಇದ್ದೆ. ಅವರೊಡನೆ ಭೇಟಿ ಎಂದರೆ ಕೇವಲ ಬಾಯುಪಚಾರ, ಚಹಾ ಮತ್ತು ಕ್ಷೇಮ ಸಮಾಚಾರಗಳ ವಿನಿಮಯಕ್ಕೆ ಸೀಮಿತ ಆಗುತ್ತಿರಲಿಲ್ಲ. ಕರ್ನಾಟಕದ ಇತಿಹಾಸ ಮತ್ತು ಸಂಸ್ಕೃತಿಯನ್ನು ಕುರಿತಾದ ಯಾವುದಾದರೂ ಹೊಸ ವಿಷಯದ ಬಗ್ಗೆ ಚರ್ಚೆ ಅಥವಾ ವಿಚಾರ ವಿನಿಮಯ ಆಗುತ್ತಿತ್ತು.

೧೯೮೮ರ ಕೊನೆಯ ಭಾಗದಲ್ಲಿ ನಾನು ಪಿಎಚ್.ಡಿ. ಪದವಿಗಾಗಿ ಮೈಸೂರು ವಿಶ್ವವಿದ್ಯಾನಿಲಯಕ್ಕೆ ನನ್ನ ಮಹಾಪ್ರಬಂಧವನ್ನು ಸಲ್ಲಿಸಿದ್ದೆ. ಅದಕ್ಕೂ ಮೊದಲು ಹಲವು ಬಾರಿ ನನ್ನ ಸಂಶೋಧನೆಯ ವಿಷಯವಾಗಿ ಪ್ರೊ. ದೀಕ್ಷಿತರು ವಿಚಾರಿಸಿದ್ದರು; ಸಲಹೆ, ಸೂಚನೆಗಳನ್ನು ನೀಡಿದ್ದರು. ಒಂದು ದಿನವಂತೂ, ಬೆಂಗಳೂರಿನ ಮಲ್ಲೇಶ್ವರ ಬಡಾವಣೆಯಲ್ಲಿನ ಕೈಲಾಶ್ ಅಪಾರ್ಟ್‌ಮೆಂಟ್ಸ್‌ನ ಅವರ ನಿವಾಸ ಪಕ್ಕದ ಬಟ್ಟೆ ಒಗೆಯುವ ಕಟ್ಟೆಯ ಬಳಿ ನಾವಿಬ್ಬರೇ ಕುಳಿತು ಆಡಿದ ಮಾತುಗಳನ್ನು ನಾನು ಇಂದಿಗೂ ಮರೆತಿಲ್ಲ. ಮರೆಯಲು ಸಾಧ್ಯವೂ ಆಗಿಲ್ಲ. ಸುಮಾರು ಎರಡು ಗಂಟೆಗಳ ಕಾಲ ನನ್ನ ಮಹಾಪ್ರಬಂಧದಲ್ಲಿನ ಅಧ್ಯಾಯಗಳ ವಿಂಗಡನೆ, ಅದರಲ್ಲಿನ ಶೀರ್ಷಿಕೆಗಳು, ಉಪಶೀರ್ಷಿಕೆಗಳು, ಚರ್ಚಿತ ವಿಚಾರಗಳು, ಸಂಬಂಧಿಸಿದ ಆಕರಗಳು, ಕ್ಷೇತ್ರ ಕಾರ್ಯದ ವಿವರಗಳು ಇತ್ಯಾದಿಗಳ ಬಗ್ಗೆ ಅಲ್ಲಿ ಓಡಾಡುತ್ತಿದ್ದ ಯಾರನ್ನೂ ಗಮನಿಸದೆ, ನಡೆಯುತ್ತಿದ್ದ ಯಾವ ಚಟುವಟಿಕೆಯ ಅರಿವೂ ಇಲ್ಲದಂತೆ

ಮಾತನಾಡಿದೆವು. ನನ್ನೊಡನೆ ಚರ್ಚಿಸಿದಂತೆಯೇ ಸಂಶೋಧನೆಯಲ್ಲಿ ತೊಡಗಿಕೊಂಡಿದ್ದ ಅನೇಕರ ಜೊತೆಗೆ ಅವರು ಹಾಗೆಯೇ ಚರ್ಚಿಸುತ್ತಿದ್ದರು ಬೆನ್ನು ತಟ್ಟಬೇಕಾದ ಸಂದರ್ಭದಲ್ಲಿ ಯಾವ ಹಮ್ಮು-ಬಿಮ್ಮು ಇಲ್ಲದಂತೆ ಮೆಚ್ಚುಗೆಯ ಮಾತನಾಡುತ್ತಿದ್ದರು. ಎಚ್ಚರಿಸಬೇಕಾದ ಸಂದರ್ಭದಲ್ಲಿ ಸಂಕೋಚಭಾವದಿಂದಲೇ ಸೂಚ್ಯವಾಗಿ ತಿಳಿಸುತ್ತಿದ್ದರು. ಸಂಶೋಧನೆಯ ವಿಚಾರದಲ್ಲಿ ನಿಜವಾದ ಪ್ರಾಧ್ಯಾಪಕನಿಗೆ ಇರಬೇಕಾದ ನಿರೀಕ್ಷೆ, ಆಸಕ್ತಿ ಮತ್ತು ಕುತೂಹಲಗಳು ದೀಕ್ಷಿತರಲ್ಲಿ ಸದಾ ಜಾಗೃತ ಆಗಿರುತ್ತಿದ್ದವು.

ದಿ. ೧೦-೧-೧೯೧೧ ರಂದು ಮೈಸೂರು ಸಂಸ್ಥಾನದ ಹರಿಹರದಲ್ಲಿ ಜನಿಸಿದ ದೀಕ್ಷಿತರು ೯೪ ವರ್ಷಗಳ ಸಾರ್ಥಕ ಬದುಕನ್ನು ನಡೆಸಿದ ೨೫-೦೬-೨೦೦೪ ರಂದು ಧಾರವಾಡದಲ್ಲಿ ನಿಧನರಾದರು. ಧಾರವಾಡ ಪ್ರೊ. ದೀಕ್ಷಿತರ ದೀರ್ಘ ಕಾಲದ ಕರ್ಮಭೂಮಿ. ಅಧ್ಯಯನ ಮತ್ತು ಅಧ್ಯಾಪನಗಳಲ್ಲಿ ಅತ್ಯಂತ ನಿಷ್ಠರಾಗಿದ್ದ ಪ್ರೊ. ದೀಕ್ಷಿತ್ ಸಂಶೋಧನೆಗೆ ತೊಡಗಿದ್ದ ಶಿಷ್ಯವೃಂದಕ್ಕೆ ಕೇವಲ ಪ್ರಾಧ್ಯಾಪಕರು ಮಾತ್ರ ಆಗಿರಲಿಲ್ಲ; ಕೇವಲ ಪಿಎಚ್.ಡಿ., ಮಾರ್ಗದರ್ಶಿ ಯಾಗಿರಲಿಲ್ಲ. ಬದಲಿಗೆ ಇಡೀ ಬದುಕಿನಲ್ಲಿ a friend, philosopher ಮತ್ತು guide ಆಗಿದ್ದರು. ತಮ್ಮ ಅರಿವಿಗೆ ಬಂದ ಇತಿಹಾಸ ಸಂಶೋಧನೆ ಕುರಿತ ಯಾವುದೇ ಸಮ್ಮೇಳನ, ವಿಚಾರಗೋಷ್ಠಿ ಮತ್ತು ಕಾರ್ಯಾಗಾರಗಳಲ್ಲಿ ಸಕ್ರಿಯವಾಗಿ ತೊಡಗಲು ವಿದ್ಯಾರ್ಥಿಗಳಿಗೆ / ಶಿಷ್ಯರಿಗೆ ಕರೆ ನೀಡುತ್ತಿದ್ದರು; ಪ್ರೋತ್ಸಾಹಿಸುತ್ತಿದ್ದರು ಬೇಕಾದ ನೆರವು ನೀಡುತ್ತಿದ್ದರು. ಬದುಕಿನಲ್ಲಿ ಬಹು ಉನ್ನತ ಪದವಿಗೆ ಏರಿದ್ದ ಅವರ ಹಲವು ಶಿಷ್ಯರಂತೂ, ಗುರುವಿನ ಮಾತಿಗೆ ಸದಾ ತಲೆಬಾಗುತ್ತಿದ್ದರು ವಿಧೇಯ ಶಿಷ್ಯರಾಗಿರುತ್ತಿದ್ದರು. ಒಮ್ಮೆ ಅವರ ಪ್ರಭಾವಲಯಕ್ಕೆ ಬಂದವರು, ಅ ವಲಯದಿಂದ ಸುಲಭವಾಗಿ ತಪ್ಪಿಸಿಕೊಳ್ಳಲಾಗುತ್ತಿರಲಿಲ್ಲ.

ಹುಟ್ಟೂರು ಹರಿಹರದಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ ಮುಗಿಸಿ, ದಾವಣಗೆರೆಯಲ್ಲಿ ಪ್ರೌಢಶಾಲಾ ವಿದ್ಯಾಭ್ಯಾಸ ಮಾಡಿದ ದೀಕ್ಷಿತರು ೧೯೨೭ರ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ತೇರ್ಗಡೆ ಆದರು. ಆ ಹೊತ್ತಿಗೇ ದೀಕ್ಷಿತರಿಗೆ ದೇಶದ ಬಗ್ಗೆ ದೇಶದ ಸ್ವಾತಂತ್ರ್ಯದ ಬಗ್ಗೆ ಭಕ್ತಿಭಾವ ಹುಟ್ಟಿತ್ತು. ಆ ಭಾವ ಅವರು ನಿಧನರಾಗುವವರೆಗೂ ನಿರಂತರವಾಗಿ ಉಳಿದಿತ್ತು. ದೇಶದ, ರಾಜ್ಯದ ಅಂತಃಸತ್ವವನ್ನು ಅರಿತಿದ್ದ ಪ್ರೊ. ದೀಕ್ಷಿತರು ಮೊದಲ ಇಂಟರ್‌ಮೀಡಿಯೆಟ್ ಪರೀಕ್ಷೆಯನ್ನು ಶಿವಮೊಗ್ಗೆಯಲ್ಲಿ ಮುಗಿಸಿ, ಎರಡನೆಯ ವರ್ಷದ ಇಂಟರ್‌ಮೀಡಿಯೆಟ್ ಓದಿಗೆಂದು ಮೈಸೂರಿಗೆ ತೆರಳಿದವರು, ಮೈಸೂರನ್ನು ಬಿಡುವ ಹೊತ್ತಿಗೆ ಇತಿಹಾಸದ ಅಧ್ಯಾಪಕರಾಗುವ ಸಾಮರ್ಥ್ಯ ಗಳಿಸಿದ್ದರು.

೧೯೨೯-೩೨ ರ ಅವಧಿಯಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಬಿ.ಎ., ಆನರ್ಸ್ ವಿದ್ಯಾರ್ಥಿಯಾಗಿದ್ದ ದೀಕ್ಷಿತರಿಗೆ ಎರಡನೆಯ ಇಂಟರಮೀಡಿಯೆಟ್ ತರಗತಿಯಲ್ಲಿ ಇತಿಹಾಸ ಬೋಧಿಸಿದವರು ಕನ್ನಡದ ಹೆಸರಾಂತ ಸಾಹಿತಿ ನಾ. ಕಸ್ತೂರಿ. ಆನರ್ಸ್ ತರಗತಿಯಲ್ಲಿ ದೀಕ್ಷಿತರನ್ನು ಸಾಣೆ ಹಿಡಿದವರು ಡಾ. ಎಂ.ಹೆಚ್. ಕೃಷ್ಣ ಮತ್ತು ಪ್ರೊ. ಎಸ್.ವಿ. ವೆಂಕಟೇಶ್ವರ. ಇತಿಹಾಸ ಕ್ಷೇತ್ರದಲ್ಲಿ, ಅದರಲ್ಲೂ ದಕ್ಷಿಣ ಭಾರತದ ಇತಿಹಾಸ ಕ್ಷೇತ್ರದಲ್ಲಿ ಆ ಎರಡೂ ಹೆಸರುಗಳು ಚಿರಂಜೀವಿ ಪಟ್ಟ ಪಡೆದಿವೆ. ಅಂತಹ ಅಧ್ವರ್ಯುಗಳ ಶಿಷ್ಯರೆಂದು ಹೇಳಿಕೊಳ್ಳಲು ಪ್ರೊ. ದೀಕ್ಷಿತ್ ಹೆಮ್ಮೆಪಡುತ್ತಿದ್ದರು. ಬಿ.ಎ., ಆನರ್ಸ್ ಪರೀಕ್ಷೆಯಲ್ಲಿ ಪ್ರಥಮರಲ್ಲಿ ಪ್ರಥಮರಾಗಿ ಸುವರ್ಣ ಪದಕವನ್ನು ಪಡೆದ ದೀಕ್ಷಿತರು ೧೯೩೨ರಲ್ಲಿ ಸಂಶೋಧಕ ಶಿಷ್ಯ ವೃತ್ತಿ ಪಡೆದು, ಡಾ. ಎಂ.ಹೆಚ್. ಕೃಷ್ಣ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ ಪ್ರೌಢ ಪ್ರಬಂಧ ಶ್ರೀಕೃಷ್ಣದೇವರಾಯನ ಜೀವಿತ ಕಾಲವನ್ನು ಕುರಿತದ್ದು. ವಿದ್ಯಾರ್ಥಿ ಜೀವನದಲ್ಲೇ ದೀಕ್ಷಿತರ ಕುತೂಹಲವನ್ನು ಕೆರಳಿಸಿದ್ದ ಕೃಷ್ಣದೇವರಾಯ, ಅವರ ಬದುಕಿನ ಇಳಿದಿನಗಳಲ್ಲೂ ಸಂಪರ್ಕ ಪಡೆದಿದ್ದ. ಹಾಗೆಯೇ ದೀಕ್ಷಿತರನ್ನು ಹೆಚ್ಚು ಆವರಿಸಿಕೊಂಡಿದ್ದುದು ಶ್ರೀ ಬಸವೇಶ್ವರರು. ಅದರಲ್ಲೂ ಅವರ ಕೊನೆಯ ದಿನಗಳ ಬಗ್ಗೆ ದೀಕ್ಷಿತರು ಅನಾವರಣಗೊಳಿಸಿರುವ ವಿಚಾರಗಳು ಸಂಶೋಧನೆಯ ಮಹತ್ವಕ್ಕೆ ಹಿಡಿದ ಕೈಗನ್ನಡಿಗಳಾಗಿವೆ. ಈ ಬಗ್ಗೆ ಮುಂದೆ ಸ್ವಲ್ಪ ವಿಸ್ತಾರವಾಗಿ ಪ್ರಸ್ತಾಪಿಸಲು ಅವಕಾಶಗಳಿವೆ.

ಬಿ.ಎ., ಆನರ್ಸ್ ಪದವಿ ಪಡೆದ ತರುಣದಲ್ಲೇ, ಇಪ್ಪತ್ತೆರಡು ವರ್ಷದ ತರುಣ ಜಿ.ಎಸ್. ದೀಕ್ಷಿತರು, ಈಗಿನ ಕರ್ನಾಟಕದ ಆಚೆಗೆ ಒರಿಸ್ಸಾ ಮತ್ತು ಆಂಧ್ರ ಪ್ರದೇಶದ ಗಡಿಭಾಗದಲ್ಲಿರುವ (ಆಗ ಮದರಾಸ್ ಅಧಿಪತ್ಯದ ಭಾಗ) ಪರ್ಲಾಕಿಮುಡಿಯ ಮಹಾರಾಜಾ ಕಾಲೇಜಿನಲ್ಲಿ ಇತಿಹಾಸದ ಉಪನ್ಯಾಸಕರಾಗಿ ವೃತ್ತಿ ಜೀವನವನ್ನು ಆರಂಭಿಸಿದರು. ಟೆನಿಸ್ ಆಟದಲ್ಲೂ ಆಸಕ್ತಿ ಇರಿಸಿಕೊಂಡಿದ್ದ ದೀಕ್ಷಿತರು ಪರ್ಲಾಕಿಮುಡಿಯ ರಾಜರನ್ನು ಆಕರ್ಷಿಸಿದ್ದರಲ್ಲಿ ಆಶ್ಚರ್ಯವಿರಲಿಲ್ಲ.

ಬದುಕಿನ ಎಲ್ಲ ಕ್ಷಣಗಳಲ್ಲೂ ಹೊಸದಕ್ಕೆ ತುಡಿಯುವ ವಿಶಿಷ್ಟ ಗುಣವನ್ನು ದೀಕ್ಷಿತರು ತಮ್ಮ ಬಾಲ್ಯದಿಂದಲೂ ಜತನದಿಂದ ಕಾಪಾಡಿಕೊಂಡಿದ್ದರೆಂದು ಅವರನ್ನು ಬಲ್ಲ ಕೆಲವರಿಗಾದರೂ ತಿಳಿದಿದೆ. ಹೊಸ ವಿಷಯಗಳ ಸಂಗ್ರಹಣೆಗೆ, ಪುಸ್ತಕಗಳ ಓದಿನ ಜೊತೆಗೆ ಕ್ಷೇತ್ರ ಕಾರ್ಯ ಅತಿ ಮುಖ್ಯ ಎಂಬ ತಿಳುವಳಿಕೆ ದೀಕ್ಷಿತರದಾಗಿತ್ತು. ಅದಕ್ಕೆಂದೇ ಅವರು ಯೌವನಾವಸ್ಥೆಯಲ್ಲೇ, ವಿವಾಹಪೂರ್ವದಲ್ಲೇ ಐತಿಹಾಸಿಕ ಸ್ಥಳಗಳ ಸಂದರ್ಶನ ಮಾಡಿದರು. ದಕ್ಷಿಣ ಭಾರತದಲ್ಲಿ ಮಾತ್ರವಲ್ಲದೆ, ಇಡೀ ಭಾರತದಲ್ಲೇ ಪ್ರಖ್ಯಾತಿ ಪಡೆದಿದ್ದ ತಮ್ಮ ಗುರು ಡಾ. ಎಂ.ಹೆಚ್. ಕೃಷ್ಣ ಅವರ

ಜೊತೆಗೆ ೧೯೩೫ರಲ್ಲಿ ಮುಂಬಯಿ, ಅಹಮದಾಬಾದ್, ಮೌಂಟ್ ಅಬು, ಅಜ್ಮೀರ್, ಚಿತ್ತೂರುಘಡ, ಉದಯಪುರ, ಜಯಪುರ, ದೆಹಲಿ, ಆಗ್ರಾ, ಝಾನ್ಸಿ, ಖಜುರಾಹೋ, ಅಮೃತಸರ, ಲಾಹೋರ್, ಹರಪ್ಪಾ, ಪೇಶಾವರ್, ಖೈಬರ್‌ಪಾಸ್, ಅಫ್‌ಘಾನಿಸ್ಥಾನ, ಬಾರಾಮುಲಾ, ಶ್ರೀನಗರ, ಗುಲ್‌ಮಾರ್ಗ್, ಶಿಮ್ಲಾ, ಡೆಹ್ರಾಡೂನ್, ಹರಿದ್ವಾರ, ಲಕ್ನೋ, ಅಲಹಾಬಾದ್, ಕಾಶಿ, ಪಾಟ್ನಾ, ನಳಂದಾ, ಗಯಾ, ಕಲ್ಕತ್ತಾ, ಕೋನಾರ್ಕ್, ಪುರಿ, ಸಿಂಹಾಚಲ, ತಿರುಪತಿ ಇತ್ಯಾದಿ ಭಾರತದ ಪ್ರಸಿದ್ಧ ಐತಿಹಾಸಿಕ ಕ್ಷೇತ್ರಗಳ ಸಂದರ್ಶನ ಮಾಡಿದರು. ಈ ಕ್ಷೇತ್ರ ಸಂಚಾರವು ಜಿ.ಎಸ್. ದೀಕ್ಷಿತರಲ್ಲಿದ್ದ ಇತಿಹಾಸ ಪ್ರಜ್ಞೆಯನ್ನು ಪ್ರಜ್ವಲಗೊಳಿಸಿತು. ಡಾ. ಎಂ.ಹೆಚ್. ಕೃಷ್ಣ ಅವರು ತಮ್ಮ ವಿದ್ಯಾರ್ಥಿಗಳ ಬಗ್ಗೆ ಇರಿಸಿಕೊಂಡಿದ್ದ ಪ್ರೀತ್ಯಾದರಗಳು ಮತ್ತು ವಿದ್ವತ್ ಕ್ಷೇತ್ರದಲ್ಲಿ ಶಿಷ್ಯರನ್ನು ಬೆಳೆಸುವ ಪರಿ ದೀಕ್ಷಿತರಿಗೂ ಒಲಿಯಿತು.

೧೯೩೮ ರಲ್ಲಿ ತಾರಾಬಾಯಿ ಅವರನ್ನು ವಿವಾಹವಾದ ಜಿ.ಎಸ್. ದೀಕ್ಷಿತ್ ನಂತರ ಪರ್ಲಾಕಿಮುಡಿಯಿಂದ ಹೊರಬಂದು ಮೈಸೂರು ಪುರಾತತ್ವ ಇಲಾಖೆಯಲ್ಲಿ ಹಂಗಾಮಿಯಾಗಿ ಕಾರ್ಯ ನಿರ್ವಹಿಸಿದರು. ಆದರೆ, ಅದು ದೀರ್ಘ ಕಾಲದ ಉದ್ಯೋಗವಾಗಿರಲಿಲ್ಲ. ೧೯೪೦ರಲ್ಲಿ ಸಾಂಗ್ಲಿಯ ವಿಲಿಂಗ್‌ಡನ್ ಕಾಲೇಜಿನಲ್ಲಿ ಇತಿಹಾಸದ ಉಪನ್ಯಾಸಕರಾಗಿ ನೇಮಕಗೊಂಡ ಜಿ.ಎಸ್. ದೀಕ್ಷಿತರು, ನಂತರ ತಮ್ಮ ಬದುಕಿನುದ್ದಕ್ಕೂ ಇತಿಹಾಸವನ್ನೇ ಬೋಧಿಸಿದರು. ಬದುಕನ್ನು ಇತಿಹಾಸಕ್ಕೆ ಮುಡಿಪಾಗಿಟ್ಟರು. ಅವರು ಸಾಂಗ್ಲಿಯ ವಿಲಿಂಗ್‌ಡನ್ ಕಾಲೇಜಿನಲ್ಲಿ ನೇಮಕಗೊಂಡಾಗ ಅಲ್ಲಿ ಪ್ರಾಂಶುಪಾಲರಾಗಿದ್ದವರು ಕನ್ನಡದ ಮೇರುಸಾಹಿತಿ ವಿ.ಕೃ. ಗೋಕಾಕ್. ದೀಕ್ಷಿತರ ಅದೃಷ್ಟವೆಂದರೆ ಕಾಲೇಜು ವಿದ್ಯಾಭ್ಯಾಸದ ಆರಂಭದ ದಿನಗಳಿಂದಲೂ ಅವರಿಗೆ ಕನ್ನಡ ಸಾಹಿತ್ಯ ಸಂಸ್ಕೃತಿಗಳ ಅಧ್ವರ್ಯುಗಳು ಎನಿಸಿಕೊಂಡಿದ್ದ ಸಜ್ಜನ ವಿದ್ವಾಂಸರ ನಿಕಟ ಸಂಪರ್ಕ ಲಭ್ಯವಾಗಿತ್ತು. ೧೯೪೦-೪೨ರ ಅವಧಿಯಲ್ಲಿ ಮುಂಬಯಿ ವಿಶ್ವವಿದ್ಯಾಲಯದಿಂದ ಇತಿಹಾಸ ಎಂ.ಎ., ಪದವಿಯನ್ನು ಪಡೆದ ದೀಕ್ಷಿತರು ತಮ್ಮ ವೃತ್ತಿಜೀವನವನ್ನು ಸಾಂಗ್ಲಿ ಮತ್ತು ಪುಣೆಯಲ್ಲಿ ಮುಂದುವರಿಸಿದರು. ಆ ಸಂದರ್ಭದಲ್ಲಿ ಅವರಿಗೆ ಗೋಕಾಕರು ಮಾತ್ರವಲ್ಲದೆ, ರಂ.ಶ್ರೀ.ಮುಗಳಿ, ದ.ರಾ.ಬೇಂದ್ರೆ, ಡಿ.ಸಿ. ಪಾವಟೆ ಅವರ ನಿಕಟ ಸಂಪರ್ಕ ಲಭ್ಯವಾಯಿತು. ೧೯೪೬ರಲ್ಲಿ ಡಿ.ಸಿ. ಪಾವಟೆ ಅವರ ಬೆಂಬಲದಿಂದ ಪುಣೆಯ ರಾಸ್ತಾ ಪೇಟೆಯಲ್ಲಿ ಕನ್ನಡ ಶಾಲೆಯೊಂದನ್ನು ಆರಂಭಿಸಿದ ಕೀರ್ತಿಯೂ ಪ್ರೊ. ಜಿ.ಎಸ್. ದೀಕ್ಷಿತರಿಗಿದೆ. ಆ ಹೊತ್ತಿಗೆ ದೀಕ್ಷಿತರು ಸಾಂಗ್ಲಿಯಿಂದ ಪುಣೆಗೆ ವರ್ಗಾವಣೆಗೊಂಡಿದ್ದರು. ಸಾಂಗ್ಲಿ ಮತ್ತು ಪುಣೆಯಲ್ಲಿ ದೀಕ್ಷಿತರು ಇದ್ದ ೧೯೪೦ರಿಂದ ೧೯೪೬ರವರೆಗಿನ ಅವಧಿಯಲ್ಲಿ ಅವರು ಇತಿಹಾಸ ಬೋಧನೆಯ ಜೊತೆಗೆ ಆಸಕ್ತರ ನೆರವು ಪಡೆದು ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಗೆ ಸಂಬಂಧಿಸಿದ ಅನೇಕ

ಕಾರ್ಯಕ್ರಮಗಳನ್ನು ನಡೆಸಿ, ಇತಿಹಾಸದ ಜೊತೆಗೆ ಸಾಹಿತ್ಯ ಮತ್ತು ಸಂಸ್ಕೃತಿಗಳ ನಂಟನ್ನು ಬೆಳೆಸಿಕೊಂಡರು ಮತ್ತು ಉಳಿಸಿಕೊಂಡರು. ಪ್ರೊ. ಜಿ.ಎಸ್. ದೀಕ್ಷಿತರ ಮೇಲೆ ಪ್ರೊ. ವಿ.ಕೃ. ಗೋಕಾಕ ಮತ್ತು ದ.ರಾ. ಬೇಂದ್ರೆ ಅವರ ಪ್ರಭಾವ ದಟ್ಟವಾಗಿಯೇ ಇತ್ತು.

೧೯೫೫ರಲ್ಲಿ ಪ್ರೊ. ಜಿ.ಎಸ್. ದೀಕ್ಷಿತರು ಪುಣೆಯಿಂದ ಧಾರವಾಡಕ್ಕೆ ಕರ್ನಾಟಕ ವಿಶ್ವವಿದ್ಯಾಲಯದ ಇತಿಹಾಸ ವಿಭಾಗದ ಪ್ರಾಧ್ಯಾಪಕರಾಗಿ ಬಂದರು. ಡಾ. ಬಿ.ಎ. ಸಾಲೆತೊರೆ ಅವರ ಮಾರ್ಗದರ್ಶನದಲ್ಲಿ 'ಲೋಕಲ್ ಸೆಲ್ಫ್‌ಗವರ್ನ್‌ಮೆಂಟ್ ಇನ್ ಕರ್ನಾಟಕ' ಎಂಬ ವಿಷಯವಾಗಿ ಮಹಾಪ್ರಬಂಧ ಸಿದ್ಧಪಡಿಸಿ, ಪಿಎಚ್.ಡಿ., ಪದವಿ ಪಡೆದರು. ೧೯೫೫ರಿಂದ ೧೯೭೧ರವರೆಗೆ ೧೬ ವರ್ಷಗಳ ಕಾಲ ಕರ್ನಾಟಕ ವಿಶ್ವವಿದ್ಯಾಲಯದ ಇತಿಹಾಸ ವಿಭಾಗದಲ್ಲಿ ಇತಿಹಾಸ ಬೋಧನ ಮಾಡುತ್ತಾ, ೧೯ ಜನರಿಗೆ ಪಿ.ಎಚ್.ಡಿ., ಪದವಿಗಾಗಿ ಮಾರ್ಗದರ್ಶನ ಮಾಡಿದರು. ನಿವೃತ್ತರಾದ ಮೇಲೆ ಪ್ರೊ. ಎಸ್. ದೀಕ್ಷಿತ್ ಅದೇ ವಿಶ್ವವಿದ್ಯಾಲಯದಲ್ಲಿ ಯು.ಜಿ.ಸಿ. ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುವ ಗೌರವವನ್ನೂ ಪಡೆದರು. ೧೯೬೧-೬೨ರಲ್ಲಿ ಫುಲ್‌ಬ್ರೈಟ್ ವಿದ್ಯಾರ್ಥಿವೇತನ ಪಡೆದು, ಅಮೆರಿಕಾದ ವಿಸ್ಕಾನ್‌ಸನ್ ವಿಶ್ವವಿದ್ಯಾಲಯದ ಮ್ಯಾಡಿಸನ್‌ನಲ್ಲಿ ಸಂಶೋಧಕ ಪ್ರಾಧ್ಯಾಪಕರಾಗಿಯೂ ಸೇವೆ ಸಲ್ಲಿಸಿದ ಕೀರ್ತಿ ಪ್ರೊ. ಜಿ.ಎಸ್. ದೀಕ್ಷಿತರಿಗೆ ಸಲ್ಲುತ್ತದೆ. ೧೯೭೧ರಲ್ಲಿ ಕೆನಡಾದ ಟೊರಾಂಟೋ ವಿಶ್ವವಿದ್ಯಾಲಯದಲ್ಲಿಯೂ ಪ್ರೊ. ಜಿ.ಎಸ್. ದೀಕ್ಷಿತರು ಸಂದರ್ಶಕ ಪ್ರಾಧ್ಯಾಪಕರಾಗಿದ್ದರು. ಇತಿಹಾಸ ಬೋಧನೆಯ ಜೊತೆಗೆ ಸಂಶೋಧನೆಯಲ್ಲೂ ಮಹತ್ವದ ಸಾಧನೆಗಳನ್ನು ಮಾಡಿದ ಪ್ರೊ. ಜಿ.ಎಸ್. ದೀಕ್ಷಿತ್ ಯಾವುದೇ ವಿಚಾರದಲ್ಲಿ ವೈಜ್ಞಾನಿಕ ಮತ್ತು ವೈಚಾರಿಕ ವಿಶ್ಲೇಷಣೆಯನ್ನು ಒಪ್ಪಿಕೊಂಡಿದ್ದವರು. ಹಿಂದಿನವರ ಎಲ್ಲ ಹೇಳಿಕೆಗಳನ್ನೂ ಹಾಗೆಯೇ ಒಪ್ಪಿಕೊಳ್ಳುವ ಸ್ವಭಾವ ಅವರದಾಗಿರಲಿಲ್ಲ. ಪ್ರೊ. ದೀಕ್ಷಿತ್ ಪ್ರಾಧ್ಯಾಪಕರಾಗಿ ಒಳ್ಳೆಯ ಹೆಸರನ್ನು ಪಡೆದಿದ್ದವರು. ಈಗಲೂ ಅವರ ಅನೇಕ ಶಿಷ್ಯರು ಅವರೊಡನೆ ಚರ್ಚೆಗಳಲ್ಲಿ ಪಾಲ್ಗೊಂಡ ಕ್ಷಣಗಳನ್ನು ನೆನಪು ಮಾಡಿಕೊಳ್ಳುತ್ತಾರೆ. ಯಾವುದೇ ವಿಶೇಷ ವಿಚಾರ ಸಂಕಿರಣಗಳಾದರೂ, ತಮ್ಮ ಹಾಲಿ ಶಿಷ್ಯರನ್ನು ಮಾತ್ರವಲ್ಲದೆ, ಮಾಜಿ ಶಿಷ್ಯರನ್ನೂ ಸಕ್ರಿಯವಾಗಿ ತೊಡಗುವಂತೆ ಪ್ರೇರಣೆ ನೀಡುವುದು ಮಾತ್ರವಲ್ಲದೆ ಪ್ರೋತ್ಸಾಹಿಸುತ್ತಿದ್ದರು. ಅವರ ಶಿಷ್ಯರಲ್ಲಿ ಮಾಜಿ ಎನಿಸಿಕೊಳ್ಳುವವರು ಇರಲೇ ಇಲ್ಲ ಎಂದರೆ ಉತ್ಪ್ರೇಕ್ಷೆಯ ಮಾತಾಗಲಾರದು.

ಪ್ರೊ. ದೀಕ್ಷಿತರು ಕರ್ನಾಟಕದಲ್ಲಿ ಮಾತ್ರವೇ ಅಲ್ಲದೆ, ದಕ್ಷಿಣ ಭಾರತ ಮತ್ತು ಅಖಿಲ ಭಾರತ ಮಟ್ಟದ ಅನೇಕ ಇತಿಹಾಸ ಸಂಘಟನೆಗಳ ಜೊತೆಗೆ ಸಂಪರ್ಕ ಇರಿಸಿಕೊಂಡಿದ್ದರು. ಹಲವಾರು ಸಂಸ್ಥೆಗಳ ಸ್ಥಾಪಕ ಸದಸ್ಯರಾಗಿದ್ದ ಪ್ರೊ. ದೀಕ್ಷಿತ್

ಕೆಲವು ಸಮ್ಮೇಳನಗಳ ಅಧ್ಯಕ್ಷರೂ ಆಗಿದ್ದರು. ಅವರು ಹೆಚ್ಚು ಸಂಪರ್ಕ ಇರಿಸಿಕೊಂಡಿದ್ದ ಸಂಸ್ಥೆಗಳೆಂದರೆ, ಇಂಡಿಯನ್ ಕಾಂಗ್ರೆಸ್ ಆಫ್ ಅಮೆರಿಕನ್ ಹಿಸ್ಟರಿ, ಕೊಲ್ಕತ್ತಾದ ಇನ್ಸ್ಟಿಟ್ಯೂಟ್ ಆಫ್ ಹಿಸ್ಟಾರಿಕಲ್ ಸ್ಟಡೀಸ್, ಹೊಸ ದೆಹಲಿಯ ಇಂಡಿಯನ್ ಹಿಸ್ಟರಿ ಕಾಂಗ್ರೆಸ್, ಕರ್ನಾಟಕದಲ್ಲಿ ಕರ್ನಾಟಕ ಇತಿಹಾಸ ಅಕಾಡೆಮಿ ಇತ್ಯಾದಿಗಳು ಪ್ರಮುಖವಾದುವು. ಭಾರತ, ದಕ್ಷಿಣಭಾರತ, ಆಂಧ್ರ ಮತ್ತು ಕರ್ನಾಟಕಗಳಲ್ಲಿ ನಡೆದ ಹಲವು ಸಮ್ಮೇಳನಗಳಲ್ಲಿನ ವಿಚಾರಗೋಷ್ಠಿಗಳ ಅಧ್ಯಕ್ಷತೆ ವಹಿಸಿದ್ದ ಪ್ರೊ. ದೀಕ್ಷಿತ್ ಕೆಲವು ಸಮ್ಮೇಳನಗಳ ಅಧ್ಯಕ್ಷತೆಯ ಗೌರವವನ್ನೂ ಪಡೆದಿದ್ದರು. ೧೯೮೩ ರಿಂದ ೧೯೯೬ ರವರೆಗೆ ಪ್ರೊ. ದೀಕ್ಷಿತ್ ಹಲವು ಇತಿಹಾಸ ಸಮ್ಮೇಳನಗಳ ಅಧ್ಯಕ್ಷತೆ ವಹಿಸಿದ್ದರಲ್ಲಿ ನನಗೆ ತಿಳಿದಂತೆ ಕೊನೆಯ ಸಮ್ಮೇಳನ ನಡೆದದ್ದು ೧೯೯೬ರಲ್ಲಿ, ಅದು ಧಾರವಾಡದಲ್ಲಿ ನಡೆದ, ಅವರೇ ಸ್ಥಾಪಕ ಅಧ್ಯಕ್ಷರಾಗಿದ್ದ, ಕರ್ನಾಟಕ ಇತಿಹಾಸ ಅಕಾಡೆಮಿಯ ಹತ್ತನೇ ವಾರ್ಷಿಕ ಸಮ್ಮೇಳನ. ೧೯೮೬ರಲ್ಲಿ ಪ್ರೊ. ಜಿ.ಎಸ್. ದೀಕ್ಷಿತ್ ಅವರು ಬೆಂಗಳೂರಿಗೆ ಬಂದು ನೆಲೆಸಿದರು. ವಿಷಯ ತಿಳಿದೊಡನೆಯೇ ಕರ್ನಾಟಕ ಇತಿಹಾಸ ಅಕಾಡೆಮಿಯ ಸ್ಥಾಪನೆಗೆ ಪ್ರಯತ್ನಿಸುತ್ತಿದ್ದ ಹಲವು ಆಸಕ್ತರ ಆಹ್ವಾನಕ್ಕೆ ಪ್ರೀತಿಯಿಂದ ಒಪ್ಪಿಕೊಂಡ ಪ್ರೊ. ದೀಕ್ಷಿತ್ ಸಂಸ್ಥೆಯ ಅಧ್ಯಕ್ಷರಾಗಿ ಹತ್ತು ವರ್ಷಗಳ ಕಾಲ ಹಲವು ಮಹತ್ವದ ಮತ್ತು ಘಟ್ಟಿಯಾದ ಕಾರ್ಯಕ್ರಮಗಳ ರೂವಾರಿಯಾದರು.

ಪ್ರೊ. ಜಿ.ಎಸ್. ದೀಕ್ಷಿತರು ಕೆಲಸ ಮಾಡಬಲ್ಲವರನ್ನು ಗುರುತಿಸಿ, ಅವರನ್ನು ಕೆಲಸಕ್ಕೆ ತೊಡಗಿಸಿ, ಕೆಲಸ ಮಾಡಿಸುತ್ತಿದ್ದ ಪರಿ ಅನನ್ಯ. ಡಾ. ಎ.ಕೆ. ಶಾಸ್ತ್ರಿಯವರಲ್ಲಿದ್ದ ಸಂಶೋಧಕರನ್ನು ಗುರುತಿಸಿ, ಅವರಿಂದ ಹಸ್ತಪ್ರತಿಗಳಿಗೆ ಸಂಬಂಧಿಸಿದ ಕೆಲಸಗಳನ್ನು ಮಾಡಿಸಬಹುದೆಂಬ ತೀರ್ಮಾನದೊಂದಿಗೆ ಶೃಂಗೇರಿಯ ಕಡತಗಳನ್ನು ಮತ್ತು ಅವುಗಳಲ್ಲಿ ಅಡಗಿದ್ದ ಎಷ್ಟೋ ಮಹತ್ವದ ವಿಷಯಗಳನ್ನು ಅನಾವರಣಗೊಳಿಸಿದರು. ಕನ್ನಡ ಸಾಹಿತ್ಯದಲ್ಲಿ ಪಿಎಚ್.ಡಿ. ಮಾಡಿದ್ದ ಡಾ. ಶ್ರೀನಿವಾಸ ಹಾವನೂರರನ್ನು ಇತಿಹಾಸ ಸಂಶೋಧನೆಯತ್ತ ತಿರುಗಿಸಿದವರು ದೀಕ್ಷಿತರೇ. ಕೆಳದಿಯ ಇತಿಹಾಸಕ್ಕೆ ಸಂಬಂಧಿಸಿದ ಅಧ್ಯಯನ ಮತ್ತು ಸಂಶೋಧನೆಗೆ ಹೊಸ ಹೊಳಪು ನೀಡಿದರು. ವಿದ್ಯಾರ್ಥಿ ಡಾ. ಕೆ.ಎನ್. ಚಿಟ್ನಿಸ್ ಅವರಿಂದ 'ಕೆಳದಿ ಪಾಲಿಟಿ' ಕುರಿತು ಮಹತ್ವದ ಗ್ರಂಥ ಪ್ರಕಟಣೆಗೆ ಕಾರಣರಾದರು. ಶ್ರೀ ಎಸ್.ಕೆ. ಮೋಹನ್ ಮತ್ತು ಡಾ. ಜಿ.ಆರ್. ಕುಪ್ಪುಸ್ವಾಮಿ ಅವರನ್ನು ಕೆರೆಗಳ ಅಧ್ಯಯನದಲ್ಲಿ ತೊಡಗಿಸಿ, ಸಂಯುಕ್ತವಾಗಿ ಪ್ರಕಟಿಸಿದ ಕರ್ನಾಟಕದ ಕೆರೆಗಳ ಅಧ್ಯಯನ ಗ್ರಂಥವು ಇತಿಹಾಸದ ವಿದ್ಯಾರ್ಥಿಗಳಿಗೆ ಮಾತ್ರವೇ ಅಲ್ಲದೆ, ನೀರಾವರಿಯ ಬಗ್ಗೆ ಅಧ್ಯಯನ ಮಾಡುವವರಿಗೆ ಮತ್ತು ವಿಶೇಷವಾಗಿ ಕೆರೆಗಳ ಬಗ್ಗೆ ಅಕಸ್ಮಾತ್ ಆಸಕ್ತಿವಹಿಸುವ ಆಡಳಿತಗಾರರಿಗೆ ಮಹತ್ವದ

ಆಕರ ಗ್ರಂಥವಾಗಿದೆ. ಇಳಿವಯಸ್ಸಿನಲ್ಲೂ ತಮ್ಮ ಸ್ನೇಹಿತರಾದ ಪ್ರೊ. ಬಿ. ರಾಮಸ್ವಾಮಿ ಮತ್ತು ಶಿಷ್ಯೆ ಶ್ರೀಮತಿ ಭಾರ್ಗವಿ ಶಿವಯ್ಯ ಅವರುಗಳ ಜೊತೆ ಸೇರಿ ಪ್ರೊ. ದೀಕ್ಷಿತ್ ಪ್ರಕಟಿಸಿದ 'ಶ್ರೀ ಕೃಷ್ಣದೇವರಾಯ-ಜೀವನ, ಸಾಧನೆಗಳು' ಒಂದು ಮಹತ್ವ ಕೃತಿಯಾಗಿದೆ. ದೀಕ್ಷಿತರು ತರುಣರನ್ನು ಮಾತ್ರವಲ್ಲದೆ, ಆಸಕ್ತ ಹಿರಿಯರನ್ನೂ ಕೆಲಸಗಳಲ್ಲಿ ತೊಡಗಿಸುತ್ತಿದ್ದ ಪರಿ ಬೆರಗುಗೊಳಿಸುತ್ತದೆ. ಕೊನೆಯ ದಿನಗಳಲ್ಲಿ ಪ್ರೊ. ಎಸ್.ಹೆಚ್. ರಿತ್ತಿ ಮತ್ತು ಪ್ರೊ. ಬಿ. ರಾಮಸ್ವಾಮಿ ಅವರೊಂದಿಗೆ ಕರ್ನಾಟಕ ವ್ಯಾಖ್ಯಾನ ಸಹಿತ ನೀತಿ ವಾಕ್ಯಾಮೃತವನ್ನು ಪ್ರಕಟಿಸಿದರು. ಸಂಘಟನೆಗೆ ದೀಕ್ಷಿತರದು ಹೇಳಲೇಬೇಕಾದ ಹೆಸರು. ಸದ್ದು ಗದ್ದಲವಿಲ್ಲದೆ, ಕೆಲಸಗಳನ್ನು ಮಾಡುತ್ತಿದ್ದ ಮತ್ತು ಮಾಡಿಸುತ್ತಿದ್ದ ದೀಕ್ಷಿತರಂತಹವರು ಎಲ್ಲ ಕಾಲಕ್ಕೂ ಸಲ್ಲುತ್ತಾರೆ.

ಈಗಿನ ನಮ್ಮ ತಿಳುವಳಿಕೆಯಂತೆ ಜಿ.ಎಸ್. ದೀಕ್ಷಿತರ ಮೊಟ್ಟ ಮೊದಲ ಪ್ರಕಟಿತ ಲೇಖನ "Economic conditions in the times of Krishnadevaraya". ಇದು ಅವರು ೧೯೩೬ರಲ್ಲಿ ಹಂಪೆಯಲ್ಲಿ ನಡೆದ ವಿಜಯನಗರ ಸಾಮ್ರಾಜ್ಯ ಸ್ಥಾಪನೆಯ ೬೦೦ನೇ ವರ್ಷದ ಸ್ಮರಣೆಯ ಸಮಾರಂಭದ ಸಂದರ್ಭದಲ್ಲಿ ನಡೆದ ವಿಚಾರ ಸಂಕಿರಣದಲ್ಲಿ ಮಂಡಿಸಿದ ಲೇಖನ. ಆಗ ಕೃಷ್ಣದೇವರಾಯನ ಬಗ್ಗೆ ಹುಟ್ಟಿದ ಆಸಕ್ತಿ ನಿರಂತರವಾಗಿ ಮುಂದುವರಿದಿರುವುದನ್ನು ಅವರ ಹಲವು ಲೇಖನಗಳು ಸ್ಪಷ್ಟಪಡಿಸಿವೆ. ಮಿಥಿಕ್ ಸೊಸೈಟಿಯ ತ್ರೈಮಾಸಿಕ ಪತ್ರಿಕೆಯ ೩೧ನೇ ಸಂಚಿಕೆಯಲ್ಲಿ (೧೯೪೦) ಕೃಷ್ಣದೇವರಾಯ ರಾಯಚೂರು ಕೋಟೆಯನ್ನು ಗೆದ್ದ ಬಗ್ಗೆ ಲೇಖನ ಇದೆ. ೧೯೯೭ ರಲ್ಲಿ ಕರ್ನಾಟಕ ಸರ್ಕಾರದ ಪುರಾತತ್ವ ಮತ್ತು ವಸ್ತು ಸಂಗ್ರಹಾಲಯ ಇಲಾಖೆ ಪ್ರಕಟಿಸಿದ ಶ್ರೀಕೃಷ್ಣದೇವರಾಯ – ಜೀವನ, ಸಾಧನೆ ಕೃತಿಯ ಸಹಕೃತಿಕಾರರು ಪ್ರೊ. ಜಿ.ಎಸ್. ದೀಕ್ಷಿತ್. ಅಂತೆಯೇ ಅವರನ್ನು ಹೆಚ್ಚು ದಣಿಸಿದ ವಿಷಯವೆಂದರೆ ಬಸವೇಶ್ವರರ ಜೀವನದ ಕೊನೆಯ ಕಾಲ. ೧೯೮೦ರಲ್ಲಿ ಪ್ರಕಟವಾದ ಶಂ.ಬಾ.ಜೋಶಿ ಅಭಿನಂದನ ಗ್ರಂಥ 'ಅಧ್ಯಯನ' ದಲ್ಲಿ ಬಸವಣ್ಣನವರ ಜೀವನ ಕಾಲ ಎಂಬ ಲೇಖನವನ್ನು ಮೊಟ್ಟ ಮೊದಲ ಬಾರಿಗೆ ಬರೆದ ಪ್ರೊ. ದೀಕ್ಷಿತ್ ೨೦೦೨ರಲ್ಲಿ ರಾಮಚಂದ್ರಾಪುರದಲ್ಲಿ ನಡೆದ ಕರ್ನಾಟಕ ಇತಿಹಾಸ ಅಕಾಡೆಮಿಯ ಹದಿನೇಳನೆಯ ವಾರ್ಷಿಕ ಸಮ್ಮೇಳನದಲ್ಲಿ 'ಬಸವೇಶ್ವರರ ಒಂದು ಐತಿಹಾಸಿಕ ವಚನದ ವಿಶ್ಲೇಷಣೆ' ಎಂಬ ಕೊನೆಯ ಲೇಖನವನ್ನು ಬರೆದರು. ಬಸವಣ್ಣನವರ ಅಂತ್ಯಕಾಲದ ಬಗೆಗೇ ಪ್ರೊ. ದೀಕ್ಷಿತ್ ಇಂಗ್ಲೀಷ್, ಕನ್ನಡ ಭಾಷೆಗಳಲ್ಲಿ ಆರು ಪ್ರಬಂಧಗಳನ್ನು ಪ್ರಕಟಿಸಿದ್ದಾರೆ. ಒಂದು ವಿಷಯದ ಬೆನ್ನು ಹತ್ತಿ, ಅದರ ವಿವಿಧ ಆಯಾಮಗಳನ್ನು ಪರಾಮರ್ಶಿಸುವುದು ದೀಕ್ಷಿತರ ಮಾದರಿ. ಕಲಚುರ್ಯ ಬಿಜ್ಜಳನ ಸಾವು ಕ್ರಿ.ಶ. ೧೧೬೪ರಲ್ಲಿ ಮತ್ತು

ಬಸವೇಶ್ವರರ ಸಾವು ಕ್ರಿ. ೧೧೮೪ರಲ್ಲಿ ಸಂಭವಿಸಿರಬೇಕು ಎಂಬುದು ಪ್ರೊ. ದೀಕ್ಷಿತರ ಖಚಿತ ಅಭಿಪ್ರಾಯವಾಗಿತ್ತು. ಇದಕ್ಕೆ ಪ್ರೊ. ದೀಕ್ಷಿತರು ಐತಿಹಾಸಿಕ ವಿಚಾರಗಳನ್ನಲ್ಲದೆ, ವಚನ ಸಾಹಿತ್ಯ ಮತ್ತು 'ಪಂಡಿತಾರಾಧ್ಯ ಚರಿತಮು' ಇತ್ಯಾದಿ ತೆಲುಗು ಸಾಹಿತ್ಯ ಕೃತಿಗಳನ್ನೂ ಪರಾಮರ್ಶಿಸಿದ್ದರು. ಇಂತಹ ಎಷ್ಟೋ ವಿಚಾರಗಳ ಬಗ್ಗೆ ಕೂಲಂಕಷವಾಗಿ ಅಧ್ಯಯನ ಮಾಡಿದ್ದ ಪ್ರೊ. ದೀಕ್ಷಿತ್ ಅವರ ಸಂಶೋಧನೆಗಳ ಪೈಕಿ ಅವರು ಕರ್ನಾಟಕದ ಕೆರೆಗಳನ್ನು ಕುರಿತು ಮಾಡಿದ್ದ ಅಧ್ಯಯನವು ಅನ್ವಯಿಕ ಸಂಶೋಧನೆಗೆ ಒಂದು ಮಾದರಿ. ಬಹು ದೀರ್ಘ ಕಾಲ ಉಪಯೋಗಕ್ಕೆ ಬರುವ ಸಾಮರ್ಥ್ಯ ಆ ಸಂಶೋಧನೆಗಿದೆ.

ಸುಮಾರು ೫೦ ಕನ್ನಡ ಲೇಖನಗಳನ್ನೂ, ಒಂದು ನೂರರಷ್ಟು ಇಂಗ್ಲೀಷ್ ಲೇಖನಗಳನ್ನೂ ಪ್ರಕಟಿಸಿರುವ ಪೊ. ದೀಕ್ಷಿತ್ ಹೆಚ್ಚು ಗ್ರಂಥಗಳನ್ನು ಪ್ರಕಟಿಸಿಲ್ಲ ಎಂಬ ಆಕ್ಷೇಪಣೆ ಇದೆ ಎಂದ ಮಾತ್ರಕ್ಕೆ ಅಂತಹವರ ವಿದ್ವತ್ತಿನ ಬಗ್ಗೆ ಯಾರಿಗೂ ಅನುಮಾನಗಳು ಇರಬೇಕಾಗಿಲ್ಲ. ಪ್ರೊ. ದೀಕ್ಷಿತರ ಪಿಎಚ್.ಡಿ. ಮಹಾಪ್ರಬಂಧವಾದ Local Self Government in medieval Karnataka ಕೃತಿ ಮಾತ್ರ ಅವರ ಹೆಸರಿನಲ್ಲಿದೆ. ಉಳಿದ ಏಳು ಗ್ರಂಥಗಳು ಅವರ ಸಂಪಾದಕತ್ವದಲ್ಲಿ ಪ್ರಕಟವಾಗಿವೆ. ೧೯೬೭-೬೮ನೇ ಸಾಲಿನ Mysore State Year Book ಅನ್ನು ಪ್ರೊ॥ ದೀಕ್ಷಿತರು ಸರ್ಕಾರಕ್ಕಾಗಿ ಸಂಪಾದಿಸಿದ್ದಾರೆ. American History by Indian Historians, Studies in Keladi History, Studies in Early Vijayanagar History ಮತ್ತು Tank Irrigation in Karnataka ಗ್ರಂಥಗಳು ಸಂಪಾದಿತ ಕೃತಿಗಳು. ಪ್ರೊ. ದೀಕ್ಷಿತರು ಸಹ ಸಂಪಾಕದರಿಗೆ ಸಲ್ಲಬೇಕಾದ ಗೌರವವನ್ನು ಸಲ್ಲಿಸುವುದನ್ನು ಯಾವ ಸಂದರ್ಭದಲ್ಲೂ ಮರೆತಿಲ್ಲ. ಕರ್ನಾಟಕ ವಿಶ್ವವಿದ್ಯಾಲಯದ ಪಠ್ಯಪುಸ್ತಕವಾಗಿ ಪ್ರಕಟವಾದ ಅಮೆರಿಕೆಯ ಇತಿಹಾಸ ಗ್ರಂಥದಲ್ಲೂ ದೀಕ್ಷಿತರ ಗಂಭೀರ ಅಧ್ಯಯನವನ್ನು ಕಾಣಬಹುದು. ಮೇಲೆ ಹೇಳಿದ ಕೆಲವು ಗ್ರಂಥಗಳು ಕನ್ನಡಕ್ಕೂ ಅನುವಾದ ಆಗಿವೆ. ಆ ಸಂದರ್ಭದಲ್ಲಿ ಅನುವಾದಕರ ಹೆಸರನ್ನೂ ದಾಖಲಿಸುವ ಸಜ್ಜನಿಕೆಯನ್ನು ಪ್ರೊ. ದೀಕ್ಷಿತ್ ತೋರಿದ್ದಾರೆ. ಕೆಳದಿ ಇತಿಹಾಸ ಎಂಬುದು ಪ್ರೊ. ದೀಕ್ಷಿತರ ಪ್ರಸಾರಾಂಗದ ಕಿರು ಹೊತ್ತಿಗೆ. ಶ್ರೀ ಕೃಷ್ಣದೇವರಾಯ ಜೀವನ, ಸಾಧನೆಗಳು ಮತ್ತು ನೀತಿವಾಕ್ಯಾಮೃತಂ – ಕರ್ನಾಟಕ ವ್ಯಾಖ್ಯಾನ ಸಹಿತ ಕೃತಿಗಳೂ ಸಹ ಸಂಪಾದಿತ ಕೃತಿಗಳು. ಸಹಸಂಪಾದಕರಾಗಿದ್ದವರೆಲ್ಲರೂ ಆಯಾ ವಿಷಯಗಳಲ್ಲಿ ಪರಿಣತಿ ಪಡೆದಿದ್ದವರು. ದೀಕ್ಷಿತರ ಜೊತೆಯಲ್ಲಿ ಕೆಲಸ ಮಾಡುವುದನ್ನು ಅನೇಕ ವಿದ್ವಾಂಸರು ಗೌರವ ಎಂದು ಭಾವಿಸುತ್ತಿದ್ದರು.

ಅವರು ಕರ್ನಾಟಕ ಇತಿಹಾಸ ಅಕಾಡೆಮಿಯ ಅಧ್ಯಕ್ಷರಾಗಿದ್ದ ಅವಧಿಯಲ್ಲಿ

ಆರು ವರ್ಷಗಳ ಕಾಲ ಪ್ರಧಾನ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸಿದ ಹೆಮ್ಮೆ ನನಗಿದೆ. ಅವರೊಡನೆ ಕೆಲಸ ಮಾಡುವುದು ಎಂದರೆ ಕಲಿಕೆ ಎಂದೇ ಅರ್ಥ. ಸಮಯಪಾಲನೆ, ಅಧ್ಯಯನದ ಶಿಸ್ತು, ಕಾರ್ಯಕ್ರಮದ ರೂಪುರೇಷೆಯ ನಿರ್ಧಾರ ಮತ್ತು ವಂದನೆಯನ್ನು ಸಲ್ಲಿಸುವವರೆಗಿನ ಅಚ್ಚುಕಟ್ಟುತನ ಇತ್ಯಾದಿಗಳ ಬಗ್ಗೆ ಅವರಿಗಿದ್ದ ಕಾಳಜಿ ಅಚ್ಚರಿ ಹುಟ್ಟಿಸುತ್ತಿತ್ತು. ಕೆಲವು ವ್ಯಕ್ತಿಗಳ ದೌರ್ಬಲ್ಯವನ್ನು ಅರ್ಥ ಮಾಡಿಕೊಂಡು, ಅದಕ್ಕೆ ತಕ್ಕಂತೆ ಪರಿಸ್ಥಿತಿಯನ್ನು ನಿಭಾಯಿಸುವ ಚಾತುರ್ಯವನ್ನು ಅವರಿಂದಲೇ ನಾನು ಕಲಿತದ್ದು.

ಯಾವುದೇ ವ್ಯಕ್ತಿ ಉಳಿಯುವುದು ಅವನ ಬದುಕು ಮತ್ತು ಕೃತಿಗಳಿಂದ. ಆ ನಿಟ್ಟಿನಲ್ಲಿ. ದೀಕ್ಷಿತ್ ಚಿರಂಜೀವಿ. ಅವರ ಗ್ರಂಥಗಳು ಮತ್ತು ಲೇಖನಗಳು ಮಾತ್ರವಲ್ಲದೆ, ಅವರು ಕರ್ನಾಟಕದ ಇತಿಹಾಸ ಸಂಶೋಧನೆಗೆ ಅಣಿಗೊಳಿಸಿರುವ ಶಿಷ್ಯರ ಮೂಲಕ ಪ್ರೊ. ದೀಕ್ಷಿತ್ ಚಿರಂಜೀವಿಯಾಗಿ ಉಳಿಯುತ್ತಾರೆ. ಸರಳತೆ ಮತ್ತು ಸಜ್ಜನಿಕೆಗಳ ಮೂರ್ತರೂಪವಾಗಿದ್ದ ಪ್ರೊ. ಜಿ.ಎಸ್.ದೀಕ್ಷಿತ್ ಅವರಿಗೆ ಗತ ಇತಿಹಾಸ ಮತ್ತು ವರ್ತಮಾನದ ಬದುಕಿನ ಬಗೆಗೆ ಇದ್ದ ಜೀವನ ಪ್ರೀತಿ ಮತ್ತು ಉತ್ಸಾಹವನ್ನು ಹೆಚ್ಚು ಜನ ಅವಾಹನೆ ಮಾಡಿಕೊಳ್ಳುವ ಕೆಲಸ ಆಗಬೇಕಾಗಿದೆ.

■

ಬಸವೇಶ್ವರರ ಸಾವು ಕ್ರಿ. ೧೧೮೪ರಲ್ಲಿ ಸಂಭವಿಸಿರಬೇಕು ಎಂಬುದು ಪ್ರೊ. ದೀಕ್ಷಿತರ ಖಚಿತ ಅಭಿಪ್ರಾಯವಾಗಿತ್ತು. ಇದಕ್ಕೆ ಪ್ರೊ. ದೀಕ್ಷಿತರು ಐತಿಹಾಸಿಕ ವಿಚಾರಗಳನ್ನಲ್ಲದೆ, ವಚನ ಸಾಹಿತ್ಯ ಮತ್ತು 'ಪಂಡಿತಾರಾಧ್ಯ ಚರಿತಮು' ಇತ್ಯಾದಿ ತೆಲುಗು ಸಾಹಿತ್ಯ ಕೃತಿಗಳನ್ನೂ ಪರಾಮರ್ಶಿಸಿದ್ದರು. ಇಂತಹ ಎಷ್ಟೋ ವಿಚಾರಗಳ ಬಗ್ಗೆ ಕೂಲಂಕಷವಾಗಿ ಅಧ್ಯಯನ ಮಾಡಿದ್ದ ಪ್ರೊ. ದೀಕ್ಷಿತ್ ಅವರ ಸಂಶೋಧನೆಗಳ ಪೈಕಿ ಅವರು ಕರ್ನಾಟಕದ ಕೆರೆಗಳನ್ನು ಕುರಿತು ಮಾಡಿದ್ದ ಅಧ್ಯಯನವು ಅನ್ವಯಿಕ ಸಂಶೋಧನೆಗೆ ಒಂದು ಮಾದರಿ. ಬಹು ದೀರ್ಘ ಕಾಲ ಉಪಯೋಗಕ್ಕೆ ಬರುವ ಸಾಮರ್ಥ್ಯ ಆ ಸಂಶೋಧನೆಗಿದೆ.

ಸುಮಾರು ೫೦ ಕನ್ನಡ ಲೇಖನಗಳನ್ನೂ, ಒಂದು ನೂರರಷ್ಟು ಇಂಗ್ಲೀಷ್ ಲೇಖನಗಳನ್ನೂ ಪ್ರಕಟಿಸಿರುವ ಪ್ರೊ. ದೀಕ್ಷಿತ್ ಹೆಚ್ಚು ಗ್ರಂಥಗಳನ್ನು ಪ್ರಕಟಿಸಿಲ್ಲ ಎಂಬ ಆಕ್ಷೇಪಣೆ ಇದೆ ಎಂದ ಮಾತ್ರಕ್ಕೆ ಅಂತಹವರ ವಿದ್ವತ್ತಿನ ಬಗ್ಗೆ ಯಾರಿಗೂ ಅನುಮಾನಗಳು ಇರಬೇಕಾಗಿಲ್ಲ. ಪ್ರೊ. ದೀಕ್ಷಿತರ ಪಿಎಚ್.ಡಿ. ಮಹಾಪ್ರಬಂಧವಾದ Local Self Government in medieval Karnataka ಕೃತಿ ಮಾತ್ರ ಅವರ ಹೆಸರಿನಲ್ಲಿದೆ. ಉಳಿದ ಏಳು ಗ್ರಂಥಗಳು ಅವರ ಸಂಪಾದಕತ್ವದಲ್ಲಿ ಪ್ರಕಟವಾಗಿವೆ. ೧೯೬೭-೬೮ನೇ ಸಾಲಿನ Mysore State Year Book ಅನ್ನು ಪ್ರೊ|| ದೀಕ್ಷಿತರು ಸರ್ಕಾರಕ್ಕಾಗಿ ಸಂಪಾದಿಸಿದ್ದಾರೆ. American History by Indian Historians, Studies in Keladi History, Studies in Early Vijayanagar History ಮತ್ತು Tank Irrigation in Karnataka ಗ್ರಂಥಗಳು ಸಂಪಾದಿತ ಕೃತಿಗಳು. ಪ್ರೊ. ದೀಕ್ಷಿತರು ಸಹ ಸಂಪಾಕದರಿಗೆ ಸಲ್ಲಬೇಕಾದ ಗೌರವವನ್ನು ಸಲ್ಲಿಸುವುದನ್ನು ಯಾವ ಸಂದರ್ಭದಲ್ಲೂ ಮರೆತಿಲ್ಲ. ಕರ್ನಾಟಕ ವಿಶ್ವವಿದ್ಯಾಲಯದ ಪಠ್ಯಪುಸ್ತಕವಾಗಿ ಪ್ರಕಟವಾದ ಅಮೆರಿಕೆಯ ಇತಿಹಾಸ ಗ್ರಂಥದಲ್ಲೂ ದೀಕ್ಷಿತರ ಗಂಭೀರ ಅಧ್ಯಯನವನ್ನು ಕಾಣಬಹುದು. ಮೇಲೆ ಹೇಳಿದ ಕೆಲವು ಗ್ರಂಥಗಳು ಕನ್ನಡಕ್ಕೂ ಅನುವಾದ ಆಗಿವೆ. ಆ ಸಂದರ್ಭದಲ್ಲಿ ಅನುವಾದಕರ ಹೆಸರನ್ನೂ ದಾಖಲಿಸುವ ಸಜ್ಜನಿಕೆಯನ್ನು ಪ್ರೊ. ದೀಕ್ಷಿತ್ ತೋರಿದ್ದಾರೆ. ಕೆಳದಿ ಇತಿಹಾಸ ಎಂಬುದು ಪ್ರೊ. ದೀಕ್ಷಿತರ ಪ್ರಸಾರಾಂಗದ ಕಿರು ಹೊತ್ತಿಗೆ. ಶ್ರೀ ಕೃಷ್ಣದೇವರಾಯ ಜೀವನ, ಸಾಧನೆಗಳು ಮತ್ತು ನೀತಿವಾಕ್ಯಾಮೃತಂ – ಕರ್ನಾಟಕ ವ್ಯಾಖ್ಯಾನ ಸಹಿತ ಕೃತಿಗಳೂ ಸಹ ಸಂಪಾದಿತ ಕೃತಿಗಳು. ಸಹಸಂಪಾದಕರಾಗಿದ್ದವರೆಲ್ಲರೂ ಆಯಾ ವಿಷಯಗಳಲ್ಲಿ ಪರಿಣತಿ ಪಡೆದಿದ್ದವರು. ದೀಕ್ಷಿತರ ಜೊತೆಯಲ್ಲಿ ಕೆಲಸ ಮಾಡುವುದನ್ನು ಅನೇಕ ವಿದ್ವಾಂಸರು ಗೌರವ ಎಂದು ಭಾವಿಸುತ್ತಿದ್ದರು.

ಅವರು ಕರ್ನಾಟಕ ಇತಿಹಾಸ ಅಕಾಡೆಮಿಯ ಅಧ್ಯಕ್ಷರಾಗಿದ್ದ ಅವಧಿಯಲ್ಲಿ

ಆರು ವರ್ಷಗಳ ಕಾಲ ಪ್ರಧಾನ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸಿದ ಹೆಮ್ಮೆ ನನಗಿದೆ. ಅವರೊಡನೆ ಕೆಲಸ ಮಾಡುವುದು ಎಂದರೆ ಕಲಿಕೆ ಎಂದೇ ಅರ್ಥ. ಸಮಯಪಾಲನೆ, ಅಧ್ಯಯನದ ಶಿಸ್ತು, ಕಾರ್ಯಕ್ರಮದ ರೂಪುರೇಷೆಯ ನಿರ್ಧಾರ ಮತ್ತು ವಂದನೆಯನ್ನು ಸಲ್ಲಿಸುವವರೆಗಿನ ಅಚ್ಚುಕಟ್ಟುತನ ಇತ್ಯಾದಿಗಳ ಬಗ್ಗೆ ಅವರಿಗಿದ್ದ ಕಾಳಜಿ ಅಚ್ಚರಿ ಹುಟ್ಟಿಸುತ್ತಿತ್ತು. ಕೆಲವು ವ್ಯಕ್ತಿಗಳ ದೌರ್ಬಲ್ಯವನ್ನು ಅರ್ಥ ಮಾಡಿಕೊಂಡು, ಅದಕ್ಕೆ ತಕ್ಕಂತೆ ಪರಿಸ್ಥಿತಿಯನ್ನು ನಿಭಾಯಿಸುವ ಚಾತುರ್ಯವನ್ನು ಅವರಿಂದಲೇ ನಾನು ಕಲಿತದ್ದು.

ಯಾವುದೇ ವ್ಯಕ್ತಿ ಉಳಿಯುವುದು ಅವನ ಬದುಕು ಮತ್ತು ಕೃತಿಗಳಿಂದ. ಆ ನಿಟ್ಟಿನಲ್ಲಿ, ದೀಕ್ಷಿತ್ ಚಿರಂಜೀವಿ. ಅವರ ಗ್ರಂಥಗಳು ಮತ್ತು ಲೇಖನಗಳು ಮಾತ್ರವಲ್ಲದೆ, ಅವರು ಕರ್ನಾಟಕದ ಇತಿಹಾಸ ಸಂಶೋಧನೆಗೆ ಅಣಿಗೊಳಿಸಿರುವ ಶಿಷ್ಯರ ಮೂಲಕ ಪ್ರೊ. ದೀಕ್ಷಿತ್ ಚಿರಂಜೀವಿಯಾಗಿ ಉಳಿಯುತ್ತಾರೆ. ಸರಳತೆ ಮತ್ತು ಸಜ್ಜನಿಕೆಗಳ ಮೂರ್ತರೂಪವಾಗಿದ್ದ ಪ್ರೊ. ಜಿ.ಎಸ್.ದೀಕ್ಷಿತ್ ಅವರಿಗೆ ಗತ ಇತಿಹಾಸ ಮತ್ತು ವರ್ತಮಾನದ ಬದುಕಿನ ಬಗೆಗೆ ಇದ್ದ ಜೀವನ ಪ್ರೀತಿ ಮತ್ತು ಉತ್ಸಾಹವನ್ನು ಹೆಚ್ಚು ಜನ ಅವಾಹನೆ ಮಾಡಿಕೊಳ್ಳುವ ಕೆಲಸ ಆಗಬೇಕಾಗಿದೆ.

■

ಭಾಗ - ಒಂದು

ಮಧ್ಯಯುಗ

೧

ಕಲ್ಯಾಣ ಕ್ರಾಂತಿಯ ಕಾಲ

ಕಲ್ಯಾಣ ಕ್ರಾಂತಿಯು ೧೧೬೭–೬೮ರಲ್ಲಿ ನಡೆಯಿತೆಂದು ಸದ್ಯದ ತಿಳಿವಳಿಕೆ. ಇದಕ್ಕೆ ಇರುವ ಒಂದೇ ಒಂದು ಆಧಾರವೆಂದರೆ ಬಿಜ್ಜಳನ ಕೊನೆಯ ಶಾಸನ ೧೧೬೮ರದು.[*೧] ಇದಾದ ಮೇಲೆ ಅವನ ಶಾಸನಗಳು ಇಲ್ಲದಿರುವುದರಿಂದ ಅವನ ಕೊಲೆ ೧೧೬೮ರಲ್ಲಿ ಆಗಿರಬೇಕು; ಅದಕ್ಕೆ ಸ್ವಲ್ಪ ಮುಂಚೆ ಬಸವಣ್ಣನವರು ಮತ್ತು ಶರಣರು ಬೇರೆ ಬೇರೆ ಕಡೆ ಹೋದರು; ಆಗ ಕಲ್ಯಾಣದಲ್ಲಿ ಕ್ಷೋಭೆಯಾಯಿತು; ಆ ಪಟ್ಟಣವು ಕೆಟ್ಟು ಹಾಳಾಯಿತು: ಈ ಬೆಳವಣಿಗೆಗೆ ಎಲ್ಲರೂ ಕಲ್ಯಾಣ ಕ್ರಾಂತಿಯೆನ್ನುತ್ತಾರೆ. ಇದು ೧೧೬೮ರಲ್ಲಿ ಆಯಿತೆಂದು ಎಲ್ಲರೂ ಒಪ್ಪಿಕೊಂಡ ಹಾಗೆ ಕಾಣುತ್ತದೆ.

೧೧೬೮ ರಲ್ಲಿ ಬಿಜ್ಜಳನ ಕೊನೆಯ ಶಾಸನ ದೊರಕುವುದರಿಂದ ಮತ್ತು ಮುಂದೆ ಅವನ ಶಾಸನವಿಲ್ಲದಿರುವುದರಿಂದ ಅವನೇ ಇಲ್ಲವೆಂದು ಹೇಳುವುದು ಅಷ್ಟು ಸಮಂಜಸವಲ್ಲ. ಅವನು ೧೧೬೮ರವರೆಗು ಜೀವಿಸಿದ್ದ ಮತ್ತು ಆಗ ಅವನ ಕೊಲೆ ಮತ್ತು ಕಲ್ಯಾಣ ಕ್ರಾಂತಿ ಆಯಿತೆಂದು ಹೇಳಲು ಹೆಚ್ಚು ನಂಬಲರ್ಹ ಆಧಾರವಿದೆಯೆಂದು ತೋರಿಸುವುದೇ ಈ ಪ್ರಬಂಧದ ಉದ್ದೇಶ.

ಇದನ್ನು ತಿಳಿದುಕೊಳ್ಳಲಿಕ್ಕೆ ಕಲ್ಯಾಣದಲ್ಲಿ ಕಲಚುರಿಗಳ ಆಳಿಕೆ ಬಗ್ಗೆ ಒಂದೆರಡು ಮಾತುಗಳನ್ನು ಹೇಳುವುದು ಅವಶ್ಯ.[*೨] ಮಹಾಮಂಡಳೇಶ್ವರ ಬಿಜ್ಜಳನು ಬಲಿಷ್ಠನಾದುದರಿಂದ ಮತ್ತು ಅವನ ಚಕ್ರವರ್ತಿ ಚಾಳುಕ್ಯ ಮೂರನೆ ತೈಲಪನು ಬಲಹೀನನಾದುದರಿಂದ ಅವನನ್ನು ಬದಿಗೊತ್ತಿ ಅವನ ಸಿಂಹಾಸನವನ್ನು ಬಿಜ್ಜಳನು ಆಕ್ರಮಿಸಿದುದು ಎಲ್ಲರಿಗೂ ತಿಳಿದ ವಿಷಯ. ಈ ಆಕ್ರಮಣವನ್ನು ಚಾಳುಕ್ಯ ವಂಶಜರು ಮತ್ತು ಅವನಿಗೆ ನಿಷ್ಠಾವಂತರಾದ ಅಧಿಕಾರಿಗಳು ಸಹಿಸಿರಲಿಲ್ಲ. ಇದಲ್ಲದೆ

*೧ ARSIE 1935, No. 58

*೨ ದೇಸಾಯಿ ಪಾಂಡುರಂಗರಾಯರು, ಕರ್ನಾಟಕದ ಕಲಚುರಿಗಳು, ಅಧ್ಯಾಯ ೧, ಪುಟ ೧೦.

ಬಿಜ್ಜಳನ ಮನೆತನದಲ್ಲಿಯೇ ಅವನ ತಮ್ಮ, ಕೆಲವು ಮಕ್ಕಳು, ಒಬ್ಬ ಮೊಮ್ಮಗ – ಇವರೆಲ್ಲಾ ಬಿಜ್ಜಳನ ಮಾದರಿಯನ್ನು ಅನುಸರಿಸಿ ಅವನ ವಿರುದ್ಧ ದಂಗೆಯೆದ್ದರು ಪರಿಸ್ಥಿತಿಯನ್ನು ಸುಧಾರಿಸುವುದು ತನ್ನಿಂದ ದುಸ್ತರವೆಂದು ೧೧೬೭ರಲ್ಲಿ ಬಿಜ್ಜಳನು ಪದತ್ಯಾಗ ಮಾಡಿ ತನ್ನ ಸ್ಥಾನದಲ್ಲಿ ತನ್ನ ಮಕ್ಕಳಲ್ಲಿ ಸಮರ್ಥನು, ತನಗೆ ಬೇಕಾದವನು ಆದ ಸೋವಿದೇವನಿಗೆ ಪಟ್ಟವನ್ನು ಕಟ್ಟಿದನು.*೩

ಈ ಬದಲಾವಣೆಯಿಂದ ಪರಿಸ್ಥಿತಿಯು ಸುಧಾರಿಸಲಿಲ್ಲ. ದಾಯಾದಿಗಳಲ್ಲಿ ಮತ್ತು ಸಹೋದರರಲ್ಲಿ ತಿಕ್ಕಾಟವು ನಡದೇ ಇತ್ತು. ಅದೇ ವೇಳೆಯಲ್ಲಿ ಬಸವಣ್ಣನವರ ಚಳವಳಿಯು ನಡೆದಿತ್ತು. ಹೀಗೆ ರಾಜಕೀಯ ಮತ್ತು ಧಾರ್ಮಿಕ ಘರ್ಷಣೆಗಳು ಕಲ್ಯಾಣದಲ್ಲಿ ಅಲ್ಲೋಲ ಕಲ್ಲೋಲವನ್ನುಂಟುಮಾಡಿದವು. ಈ ಪರಿಸ್ಥಿತಿಯಿಂದ ಕಲಚುರಿಗಳ ಬಲವು ಕುಂದುತ್ತಾ ಬಂದಿತು. ಧಾರ್ಮಿಕ ವಿರೋಧಿಗಳನ್ನು ಎದುರಿಸಲು ಬಿಜ್ಜಳನು ತನ್ನನ್ನು ತಾನು ತೊಡಗಿಸಿಕೊಂಡು ರಾಜಕೀಯ ವಿರೋಧಿಗಳನ್ನು ಎದುರಿಸಲು ತನ್ನ ಮಕ್ಕಳಿಗೆ ಬಿಟ್ಟ ಹಾಗೆ ಕಾಣುತ್ತದೆ.

ಇದು ಆಂತರಿಕ ಪರಿಸ್ಥಿತಿಯಾದರೆ, ಬಾಹ್ಯ ಪರಿಸ್ಥಿತಿಯೂ ಕಲಚುರಿಗಳಿಗೆ ಅಷ್ಟೇ ಪ್ರತಿಕೂಲವಾಗಿತ್ತು. ಸೇವುಣರು ಮತ್ತು ಹೊಯ್ಸಳರು ಕಲಚುರಿಗಳನ್ನು ನಾಶಮಾಡಲು ಹವಣಿಸುತ್ತಿದ್ದರು. ಅನೇಕ ಸಲ ಅವರನ್ನು ಸೋಲಿಸಿ ಬಲಹೀನರನ್ನಾಗಿ ಮಾಡಿದ್ದರು. ಹೀಗೆ ಆಂತರಿಕ ಮತ್ತು ಬಾಹ್ಯ ಪರಿಸ್ಥಿತಿಗಳು ಕಲಚುರಿಗಳಿಗೆ ವಿರುದ್ಧವಾಗಿದ್ದವು. ಇಂತಹ ಸಮಯಕ್ಕೆ *೪ ಕಾಯುತ್ತಿದ್ದ ಚಾಲುಕ್ಯ ಮೂರನೇ ತೈಲಪನ ಮಗ ನಾಲ್ಕನೆಯ ಸೋಮೇಶ್ವರನು ಕಲ್ಯಾಣದ ಮೇಲೆ ೧೧೮೪ರಲ್ಲಿ ದಾಳಿ ಮಾಡಿದನು.*೫ ಹೀಗೆ ದಾಳಿ ಮಾಡಲಿಕ್ಕೆ ಇನ್ನೂ ಒಂದು ಪ್ರಮುಖ ಕಾರಣವಿತ್ತು. ಕಲಚುರಿಗಳ ಮಹಾಪ್ರಧಾನ ಮತ್ತು ಸೇನಾಪತಿ ಬರ್ಮರಸ ಅಥವಾ ಬಮ್ಮಯ್ಯ ಅತ್ಯಂತ ಸಮರ್ಥನೆಂದು ಹೆಸರುವಾಸಿಯಾಗಿದ್ದ. ಈತನು ಕಲಚುರಿಗಳು ಸೋಲುವುದು, ಚಾಲುಕ್ಯರು ಗೆಲ್ಲುವುದು ಖಚಿತವೆಂದು ತಿಳಿದು ಸೋಲುವ ಕಲಚುರಿ ಪಕ್ಷವನ್ನು ಬಿಟ್ಟು ಗೆಲ್ಲುವ ಚಾಲುಕ್ಯ ಪಕ್ಷವನ್ನು ಸೇರಿದನು ಮತ್ತು ಚಾಲುಕ್ಯರಲ್ಲಿ ಅದೇ ಪ್ರಮುಖಸ್ಥಾನವನ್ನು ಗಳಿಸಿ ನಾಲ್ಕನೆಯ ಸೋಮೇಶ್ವರನ ರಾಜ್ಯ ಸ್ಥಾಪನ ಕಾರ್ಯದಲ್ಲಿ ಮುಖ್ಯ ಪಾತ್ರವನ್ನು ವಹಿಸಿದನು. ೧೧೮೪ರ ಅಣ್ಣಿಗೇರಿ ಶಾಸನದಲ್ಲಿ ಕಲಚುರಿ ಕುಳಕಾಳಾನಳ ಅಂದರೆ ಕಲಚುರಿ ಕುಲಕ್ಕೆ ಕಾಡ್ಗಿಚ್ಚು ಎಂದೆನಿಸಿಕೊಂಡನು*೬ ಮತ್ತು ಅಬ್ಬಲೂರು ಶಾಸನದಲ್ಲಿ *೭ ತ್ರಿಭುವನಮಲ್ಲ

---

*೩ EC VII, SK 92

*೪ SII IX, Pt 1, No. 277

*೫ SII XV, No. 59

ಸೋಮೇಶ್ವರ ದೇವಂ ಸಕಳ ಚಮೂನಾಥ ಶಿರೋಮಣಿಯುಂ ಚಾಲುಕ್ಯರಾಜ್ಯ ಪ್ರತಿಷ್ಠಾಪಕನಪ್ಪ ಕುಮಾರ ಬಮ್ಮಯ್ಯನೆಂದು ಮೆರೆದನು ಎಂದಿದೆ. ಕಲಚುರಿಗಳ ಕುಲನಾಶವಾಗಲಿಕ್ಕೆ ಈ ಬಮ್ಮಯ್ಯನೇ ಮುಖ್ಯ ಕಾರಣ.

ಈ ಬಮ್ಮಯ್ಯ ಬೇರೆ ಯಾರೂ ಅಲ್ಲದೆ ಪಂಡಿತಾರಾಧ್ಯ ಚರಿತ್ರೆ ಮುಂತಾದ ವೀರಶೈವ ಪುರಾಣಗಳಲ್ಲಿ ಬಿಜ್ಜಳನ ಕೊಲೆಗಾರನೆಂದು ಹೆಸರಾದ ಜಗದೇವ ಮೊಲ್ಲ ಬೊಮ್ಮಯ್ಯಗಳಲ್ಲಿ ಕೊನೆಯವನಾದ ಬಮ್ಮಯ್ಯನೆಂದು ನನ್ನ ಮತ. ೧೧೮೪ರ ಅಣ್ಣಿಗೇರಿ ಶಾಸನದಲ್ಲಿ ಇವನನ್ನು ಮೇಲೆ ಹೇಳಿದ ಹಾಗೆ ಕಲಚುರಿ ಕುಳಕಾಳಾನಳನೆಂದು ಕರೆದಿರುವುದಲ್ಲದೆ ಇವನ ತಮ್ಮ ನಾರಸಿಂಹನು ಬಿಜ್ಜಳನ ಮಗ ಸಂಕಮನನ್ನು ಕೊಂದನೆಂದು, ಸಂಕಮನಂ ಕೊಂದ ನಾರಸಿಂಹ ಸಮ ಸಮರದೊಳ್ ಎಂದು ಸ್ಪಷ್ಟವಾಗಿ ಹೇಳಿದೆ. ಹೀಗೆ ೧೧೮೪ರಲ್ಲಿ ಬಿಜ್ಜಳನು ಮತ್ತು ಅವನ ಸಂತತಿಯವರು ಬಮ್ಮಯ್ಯ ಮತ್ತು ನಾರಸಿಂಹ ಮತ್ತು ಜಗದೇವ ಮತ್ತು ಮಲ್ಲಯ್ಯ ಅಥವಾ ಮಲ್ಲದೇವ ಇವರಿಂದ ಹತರಾದರು. ಈ ಹತ್ಯಾಕಾಂಡ ೧೧೮೪ ರಲ್ಲಿ ಆಗಿದ್ದುದರಿಂದ ಕಲ್ಯಾಣ ಕ್ರಾಂತಿಯು ಆಗ ಆಯಿತೆನ್ನಬಹುದು.

ಈ ಅಭಿಪ್ರಾಯವನ್ನು ಒಪ್ಪಿಕೊಂಡರೆ ಎರಡು ಪ್ರಶ್ನೆಗಳು ಉದ್ಭವಿಸುತ್ತವೆ – (೧) ೧೧೮೪ ರವರೆಗು ಬಿಜ್ಜಳನು ಜೀವಂತವಿದ್ದನೆಂದು ಹೇಳುವುದಕ್ಕೆ ಬೇರೆ ಏನಾದರೂ ಆಧಾರವಿದೆಯೆ? ಮತ್ತು (೨) ೧೧೬೭ ರಲ್ಲಿ ಪದತ್ಯಾಗ ಮಾಡಿದ ಬಿಜ್ಜಳನು ೧೧೮೪ ರವರೆಗು ಏನು ಮಾಡುತ್ತಿದ್ದ?

ಬಿಜ್ಜಳನು ೧೧೮೪ ರವರೆಗು ಜೀವಂತವಿದ್ದನೆನ್ನುವುದಕ್ಕೆ ಏನು ಸಾಕ್ಷಿ ಎಂದು ಕೇಳಿದರೆ ಬಿಜ್ಜಳನ ಸಾವಿಗೂ ಬಸವಣ್ಣನವರು ಐಕ್ಯರಾದುದಕ್ಕೂ ಕೆಲವೇ ತಿಂಗಳ ಅಂತರವಿತ್ತೆಂದು ಮುಕ್ತಿ ಕಂಠಾಭರಣದ ಹೇಳಿಕೆಯಿಂದ ಊಹಿಸಿದೆ.[೬] ನಾವು ಈ ಅಂತರ ೧ ವರ್ಷ ಅಥವಾ ೧ ೧/೨ ವರ್ಷವೆಂದು ಇಟ್ಟುಕೊಳ್ಳಬಹುದು. ಬಸವಣ್ಣನವರು ೧೧೮೫–೮೬ ರಲ್ಲಿ ಐಕ್ಯರಾಗಿದ್ದು ಅವರ ಅಭಿಮಾನಿ ಮತ್ತು ಅನುಯಾಯಿ ಮಲ್ಲಿಕಾರ್ಜುನಪಂಡಿತಾರಾಧ್ಯರು ಐಕ್ಯರಾಗುವುದಕ್ಕೆ ಸುಮಾರು ೧ ವರ್ಷ ಮುಂಚೆ ಎಂದು ಪಂಡಿತರ ಚರಿತ್ರೆಯಿಂದ ನಾವು ತಿಳಿದುಕೊಳ್ಳಬಹುದು.[೮] ಪಂಡಿತರ ಕೊನೆಯ ಶಾಸನ ೧೧೮೭ ಅಕ್ಟೋಬರಿನದು. ಇದು ಸಂಗಮೇಶ್ವರದಲ್ಲಿದೆ.[೯]

---

೬ EI V, PP. 245 ff

೭ EP.B. Desai : Basaveswara and his times, p. 288

೮ ಪಂಡಿತಾರಾಧ್ಯ ಚರಿತ್ರೆ, ಸೋಮನಾಥ ವಿರಚಿತ

೯ Telengana Inscriptions, II, No. 14

ಬೀದರ ಹತ್ತಿರದ ನೆಲ್ಲಹೊಳಲಿನಲ್ಲಿ ಅವರ ಸಮಾಧಿ ಇದೆ. ಅವರ ಸಮಕಾಲೀನರು ಮತ್ತು ಸಮವಯಸ್ಕರಾದ ಬಸವಣ್ಣನವರು ೧ ಅಥವಾ ೧ ೧/೨ ವರ್ಷ ಮುಂಚೆ ಐಕ್ಯರಾದುದನ್ನು ಅದೇ ಚರಿತ್ರೆಯು ಹೇಳುತ್ತದೆ.[13] ಅಂದರೆ ಅವರು ಐಕ್ಯರಾದುದು ೧೧೮೫–೮೬ರಲ್ಲಿ. ಅವರಿಗೆ ಒಂದು ವರ್ಷ ಅಥವಾ ಒಂದೂವರೆ ವರ್ಷ ಮುಂಚೆ ಬಿಜ್ಜಳನು ೧೧೮೪ರಲ್ಲಿ ಹತನಾಗಿರಬೇಕು. ಆದ್ದರಿಂದ ಕಲ್ಯಾಣ ಕ್ರಾಂತಿ ಅದೇ ವೇಳೆಗೆ ಆಯಿತೆಂದು ಹೇಳಬಹುದು.

ಬಿಜ್ಜಳನು ೧೧೬೮ ರಿಂದ ೧೧೮೪ ರವರೆಗು ಏನು ಮಾಡುತ್ತಿದ್ದನೆನ್ನುವ ಪ್ರಶ್ನೆಯನ್ನು ಉತ್ತರಿಸಲು ಅವನಿಗೂ ಬಸವಣ್ಣನವರಿಗೂ ಇದ್ದ ಸಂಬಂಧದ ತಿಳುವಳಿಕೆ ಅವಶ್ಯ. ಅವರಿಬ್ಬರಿಗೂ ವಯಸ್ಸಿನಲ್ಲಿ ವಿಶೇಷ ಅಂತರವಿದ್ದಹಾಗೆ ಕಾಣುವುದಿಲ್ಲ. ಇಬ್ಬರೂ ಸು. ೧೧೩೨ ರಲ್ಲಿ ಮಂಗಳವಾಡದಲ್ಲಿ ತಮ್ಮ ಸಾರ್ವಜನಿಕ ಕಾರ್ಯವನ್ನು ಆರಂಭಿಸಿದರು. ಬಿಜ್ಜಳನು ಮಹಾಮಂಡಳೇಶ್ವರನಾಗಿ, ಬಸವಣ್ಣನವರು ಅವನ ಆಸ್ಥಾನದಲ್ಲಿ ಕರಣಿಕರಾಗಿ ಇಬ್ಬರೂ ಮಂಗಳವಾಡದಲ್ಲಿ ಅನ್ಯೋನ್ಯವಾಗಿದ್ದರು. ಬಿಜ್ಜಳನು ಬಸವಣ್ಣನವರ ಕೆಲಸವನ್ನು ಮೆಚ್ಚಿ ಕೊನೆಗೆ ಅವರಿಗೆ ಮಂತ್ರಿಪದವಿಯನ್ನು ಕೊಟ್ಟನು. ಕ್ರಮೇಣ ಅವರಲ್ಲಿ ವಿರಸ ಉಂಟಾಗಿ ಬಸವಣ್ಣನವರು ಕಲ್ಯಾಣಕ್ಕೆ ಸು ೧೧೪೮ ರಲ್ಲಿ ಹೊರಟುಹೋದರು. ಬಿಜ್ಜಳನು ೧೧೫೨ರಲ್ಲಿ ಕಲ್ಯಾಣದಲ್ಲಿ ಚಕ್ರವರ್ತಿಯಾದನು ಮತ್ತು ೧೧೬೭ರಲ್ಲಿ ಪದತ್ಯಾಗ ಮಾಡಿ ೧೧೮೪ರಲ್ಲಿ ಹತನಾದನು. ಬಸವಣ್ಣನವರು ಅದೇ ವರ್ಷ ಎರಡನೆಯ ಸಲ ಕೂಡಲಸಂಗಮಕ್ಕೆ ಹೋದರು.

ಬಸವಣ್ಣನವರು ೩೬ ವರ್ಷ ಕಲ್ಯಾಣದಲ್ಲಿದ್ದರೆಂದು ಮುಕ್ತಿಕಂಠಾಭರಣದಲ್ಲಿ ಹೇಳಿದೆ.[14] ೧೧೮೪ ರಲ್ಲಿ ಕಲ್ಯಾಣ ಬಿಟ್ಟಿದ್ದರೆ ಕಲ್ಯಾಣಕ್ಕೆ ಅವರು ೧೧೪೮ರಲ್ಲಿ ಬಂದಿರಬೇಕು. ೧೧೬೮ರಲ್ಲಿ ಕಲ್ಯಾಣಕ್ರಾಂತಿ ಆಯಿತೆಂದು ಇಟ್ಟುಕೊಂಡರೆ ೩೬ ವರ್ಷ ಕಲ್ಯಾಣದಲ್ಲಿರಬೇಕಾದರೆ ಅವರು ಅಲ್ಲಿಗೆ ೧೧೩೨ರಲ್ಲಿ ಬಂದಿರಬೇಕಾಗುತ್ತದೆ. ನಾವು ಮೇಲೆ ನೋಡಿದ ಹಾಗೆ ೧೧೩೨ರಲ್ಲಿ ಬಂದಿದ್ದರೆ ಮಾತ್ರ ಅಲ್ಲಿ ೧೬ ವರ್ಷವಿದ್ದು ಕರಣಿಕ ಪದವಿಯಿಂದ ಮಂತ್ರಿ ಪದವಿಗೆ ಏರಲು ಅವಕಾಶವಿರುತ್ತಿತ್ತು. ೧೧೬೮ರಲ್ಲಿ ಕ್ರಾಂತಿ ಆಗಿದ್ದರೆ ಮಂಗಳವಾಡದಲ್ಲಿ ಅವರಿಗೆ ಇರಲು ಅವಕಾಶವಿರುತ್ತಿರಲಿಲ್ಲ. ಆದ್ದರಿಂದ ಈ ಕಾರಣದಿಂದಲೂ ೧೧೮೪ರಲ್ಲಿ ಕ್ರಾಂತಿ ಆಯಿತೆನ್ನುವುದು ಸೂಕ್ತ.

---

[13] [illegible]
[14] ಮುಕ್ತಿಕಂಠಾಭರಣ. ಸಂ. ೨೨. ಪದ್ಯ ೧೧೨

ಬಿಜ್ಜಳ ೧೧೬೮ರಿಂದ ೧೧೮೪ ರವರೆಗು ಕಲ್ಯಾಣದಲ್ಲಿ ಏನು ಮಾಡುತ್ತಿದ್ದನೆನ್ನುವ ಪ್ರಶ್ನೆಗೆ ಈಗ ಉತ್ತರ ಹೇಳಬಹುದು. ಈ ಉತ್ತರ ಬಸವರಾಜ ದೇವರ ರಗಳೆ[12] ಮತ್ತು ಬಸವ ಪುರಾಣಗಳಲ್ಲಿದೆ. ಮೊದಲನೆಯದರ ಪ್ರಕಾರ ಬಿಜ್ಜಳನಿಗೆ ಬಸವಣ್ಣನವರ ಸುಧಾರಣಾ ಚಳವಳಿ ಸರಿತೋರಲಿಲ್ಲ. ಆತನು ಕಟ್ಟಾ ಸನಾತನಿ. ಚಳವಳಿಯನ್ನು ನಿಲ್ಲಿಸೆಂದು ಎಷ್ಟು ಹೇಳಿದರು ಬಸವಣ್ಣ ಕೇಳಲಿಲ್ಲ. ಈ ಚಳವಳಿಯು ಮುಂದುವರಿಯಿತು. ಬಸವಪುರಾಣದ ಪ್ರಕಾರ ಬಿಜ್ಜಳನಿಂದ ಸುಧಾರಕರಾದ ಹರಳಯ್ಯ - ಮಧುಮಯ್ಯ ಇವರ ಕೊಲೆಯಾಯಿತು. ಕೊನೆಗೆ ಈ ಕೊಲೆ ಬಿಜ್ಜಳನ ಕೊಲೆಯಲ್ಲಿ ಪರಿಣಮಿಸಿತು. ಮತ್ತು ಈ ಕೊಲೆ ಚಾಳುಕ್ಯರಿಗೂ ಮತ್ತು ಕಲಚುರಿಗಳಿಗೂ ನಡೆದ ಕೊನೆಯ ಯುದ್ಧದ ಮುಖ್ಯ ಭಾಗವಾಯಿತು. ಇದು ಆಗಿದ್ದು ೧೧೮೪ರಲ್ಲಿ. ಆದ್ದರಿಂದ ಮೇಲೆ ಹೇಳದ ಹಾಗೆ ಕಲ್ಯಾಣ ಕ್ರಾಂತಿ ೧೧೮೪ರಲ್ಲಿ ಆಯಿತು.

---

೧೨ ಬಸವರಾಜದೇವರ ರಗಳೆ., ಸ್ಥಳ ೧೦, ಪು ೬೭-೬೯.

೨

ಬಸವಣ್ಣನವರ ಜೀವಮಾನದ ಕಾಲ

ಬಸವಣ್ಣನವರ ಜೀವಮಾನದ ಕಾಲವನ್ನು ನಿರ್ಧರಿಸುವುದಕ್ಕೆ ಕರ್ನಾಟಕದಲ್ಲಿ ಇದುವರೆಗೂ ನಡೆದ ಚರ್ಚೆಯ ಫಲಿತಾಂಶ ಹೀಗಿದೆ. ಅವರು ಹುಟ್ಟಿದ್ದು ಸು. ಕ್ರಿ.ಶ. ೧೧೦೫. ಅವರು ಲಿಂಗೈಕ್ಯರಾಗಿದ್ದು ಸು. ಕ್ರಿ.ಶ. ೧೧೬೭ . ಈ ವಾದದ ಪ್ರಕಾರ ಅವರು ಸುಮಾರು ೬೨ ವರ್ಷಗಳು ಜೀವಿಸಿದ್ದರು. ಕೆಲವರು ಬಸವಣ್ಣನವರು ೩೬ ವರ್ಷ ಜೀವಿಸಿದ್ದರೆಂದು ನಂಬುತ್ತಾರೆ. ಅವರ ಪ್ರಕಾರ ಬಸವಣ್ಣನವರು ಹುಟ್ಟಿದ ವರ್ಷ ಸು. ೧೧೩೧. ಎರಡನೆಯ ವಾದದಲ್ಲಿ ನಂಬಿಕೆ ಉಳ್ಳವರು ತೀರ ಸರಳ. ಮೊದಲನೆಯ ವಾದವು ಬಹುಜನ ವಿದ್ವಾಂಸರಿಗೆ ಒಪ್ಪಿಗೆಯಾಗಿದೆ.

ಕರ್ನಾಟಕದಲ್ಲಿ ಈ ಚರ್ಚೆ ನಡೆದ ವೇಳೆಯಲ್ಲಿಯೇ ಆಂಧ್ರದಲ್ಲಿಯೂ ಇದೇ ವಿಷಯದ ಬಗ್ಗೆ ಚರ್ಚೆ ನಡೆಯಿತು. ಅಲ್ಲಿಯ ವಿದ್ವಾಂಸರ ಪೈಕಿ ಬಂಡಾರು ತಮ್ಮಯ್ಯನವರು ಕರ್ನಾಟಕ ವಿದ್ವಾಂಸರ ಮತವನ್ನು ಅಂಗೀಕರಿಸಿದರು. ಪ್ರಸಿದ್ಧ ಇತಿಹಾಸಕಾರ ಎನ್. ವೆಂಕಟರಮಣಯ್ಯನವರು ಪಾಲ್ಕುರಿಕೆ ಸೋಮನಾಥನ ತೆಲುಗು ಭಾಷೆಯಲ್ಲಿರುವ ಪಂಡಿತಾರಾಧ್ಯ ಚರಿತ್ರವನ್ನು ಅನುಸರಿಸಿ ಬಸವಣ್ಣನವರು ೧೧೮೪ರಲ್ಲಿ ಲಿಂಗೈಕ್ಯರಾಗಿರಬಹುದೆಂದಿದ್ದರು. ಇತ್ತೀಚೆಗೆ ಅವರಿಂದಲೇ ಪ್ರಕಟವಾದ ಕರ್ನೂಲ್ ಜಿಲ್ಲೆಯ ಸಂಗಮೇಶ್ವರದಲ್ಲಿಯ ಒಂದು ತೆಲುಗು ಶಾಸನವು ಈ ವಾದವನ್ನು ಸಮರ್ಥಿಸುವಂತಿದೆ. ಈ ಲೇಖನದ ಉದ್ದೇಶ ತೆಲುಗು ಆಧಾರಗಳಾದ ಪಂಡಿತಾರಾಧ್ಯ ಚರಿತ್ರೆ ಮತ್ತು ಸಂಗಮೇಶ್ವರ ಶಾಸನಗಳು ಬಸವಣ್ಣನವರು ಸುಮಾರು ೮೦ ವರ್ಷಗಳ ಕಾಲ ಬಾಳಿದರು ಮತ್ತು ಅವರು ಲಿಂಗೈಕ್ಯರಾದದ್ದು ಸು. ೧೧೮೫ ಎನ್ನುವ ನಿರ್ಧಾರಕ್ಕೆ ಬರಲು ಹೇಗೆ ಸಹಾಯ ಮಾಡುತ್ತವೆನ್ನುವುದನ್ನು ತೋರಿಸುವುದು.

ಎಲ್ಲರಿಗೂ ತಿಳಿದಂತೆ ಮಲ್ಲಿಕಾರ್ಜುನ ಪಂಡಿತಾರಾಧ್ಯರು ಮತ್ತು ಬಸವಣ್ಣನವರು ಸಮಕಾಲೀನರು. ಇಷ್ಟೇ ಅಲ್ಲ. ಪಂಡಿತಾರಾಧ್ಯ ಚರಿತ್ರೆಯ

ಪ್ರಕಾರ ಅವರಿಬ್ಬರೂ ಸಮವಯಸ್ಕರು. ಆದ್ದರಿಂದ ಒಬ್ಬರ ಜೀವಮಾನದಲ್ಲಿ ನಡೆದ ಘಟನೆಗಳು ಅವರಿಬ್ಬರ ಜೀವಮಾನ ಕಾಲವನ್ನು ನಿರ್ಧರಿಸಲು ಉಪಯೋಗವಾಗುತ್ತದೆ. ಸೋಮನಾಥನು ಬರೆದ ಪಂಡಿತಾರಾಧ್ಯ ಚರಿತ್ರದಲ್ಲಿ ವರ್ಣಿಸಿರುವ ಕೆಲವು ಘಟನೆಗಳು ಈ ದೃಷ್ಟಿಯಿಂದ ಅತ್ಯಂತ ಉಪಯುಕ್ತವಾಗುತ್ತವೆ. ವೆಲನಾಡು ಚೋಳರು ಗುಂಟೂರು ಜಿಲ್ಲೆಯ ಸನದವೋಲಿನಲ್ಲಿ ಆಳುತ್ತಿದ್ದರು. ಆ ರಾಜರ ಪೈಕಿ ಒಬ್ಬನಾದ ಎರಡನೆಯ ಚೋಡನ ಆಸ್ಥಾನಕ್ಕೆ ಪಂಡಿತಾರಾಧ್ಯರು ಹೋಗಿದ್ದರು. ಅದೇ ಆಸ್ಥಾನದಲ್ಲಿ ಬೌದ್ಧನೆಂಬ ಬೌದ್ಧಮತೀಯ ಮುಖಂಡನು ರಾಜಾಶ್ರಯ ಪಡೆದಿದ್ದನು. ಪಂಡಿತಾರಾಧ್ಯರಿಗೂ ಬೌದ್ಧನಿಗೂ ಮತೀಯ ಸಂಬಂಧದ ವಾದವಾಯಿತು. ಪಂಡಿತಾರಾಧ್ಯರು ಬೌದ್ಧನನ್ನು ಸೋಲಿಸಿದರು. ಬೌದ್ಧನಿಗೆ ಸಿಟ್ಟುಬಂದು ಪಂಡಿತಾರಾಧ್ಯರ ಪೂಜೆಗೆ ಭಂಗತರುವ ಉದ್ದೇಶದಿಂದ ಅವರ ಪೂಜಾಸಾಮಗ್ರಿಗಳಲ್ಲಿದ್ದ ದೀಪದ ಸಮೇವುಗಳನ್ನು ಕಳವು ಮಾಡಿಸಿದ. ಪಂಡಿತಾರಾಧ್ಯರ ಶಿಷ್ಯರು ರೊಚ್ಚಿಗೆದ್ದು ಬೌದ್ಧನನ್ನು ಕೊಂದರು. ಕೊಲ್ಲುವಾಗ ಬಸವಣ್ಣನವರ ಅನುಯಾಯಿಗಳು ಬಿಜ್ಜಳನನ್ನು ಕೊಂದಂತೆ ಬೌದ್ಧನನ್ನು ಕೊಂದೆವು ಎಂದರು. ಇದರಿಂದ ಇಷ್ಟು ಹೊತ್ತಿಗೆ (೧೧೬೦) ಬಿಜ್ಜಳನ ಕೊಲೆಯಾಗಿದ್ದು ಅದರ ಸುದ್ದಿ ಪಂಡಿತಾರಾಧ್ಯರಿಗೆ ತಿಳಿದಿರಬೇಕು. ಚೋಡನು ತನ್ನ ಆಸ್ಥಾನ ಪಂಡಿತ ಬೌದ್ಧನ ಕೊಲೆಯಾದುದಕ್ಕೆ ಶಿಕ್ಷೆಯೆಂದು ಪಂಡಿತಾರಾಧ್ಯರನ್ನು ಕುರುಡನನ್ನಾಗಿ ಮಾಡುತ್ತಾನೆ. ಹೀಗೆ ಮಾಡಿದ್ದಕ್ಕೆ ಪಂಡಿತಾರಾಧ್ಯರು ಚೋಡನ ವಂಶ ನಾಶವಾಗಲೆಂದು ಶಪಿಸಿ ಸನದವೋಲಿನಿಂದ ಅಮರಾವತಿಗೆ ಬರುತ್ತಾರೆ. ಅಮರಾವತಿಗೆ ಬರುವ ಹೊತ್ತಿಗೆ ಚೋಡನಿಗೆ ವಿಪತ್ತು ಒದಗಿ ಕಾಲವಶನಾದನೆಂದು ಪಂಡಿತಾರಾಧ್ಯರಿಗೆ ತಿಳಿದುಬರುತ್ತದೆ. ಎರಡನೆಯ ಚೋಡನ ಅಂತ್ಯ ೧೧೬೦ರ ಸುಮಾರಿಗೆ ಆದುದರಿಂದ ಬಿಜ್ಜಳನ ಕೊಲೆ ಈ ಹೊತ್ತಿಗೆ ಆಗಿರಬೇಕು.

ಪಂಡಿತಾರಾಧ್ಯರು ಅಮರಾವತಿಯಲ್ಲಿರುವಾಗ ಬಸವಣ್ಣನವರನ್ನು ಕಂಡುಬರಲು ಅವರು ಕಳಿಸಿದ ಜಂಗಮರು ಹಿಂತಿರುಗಿದರು. ಅವರು ಬಸವಣ್ಣನವರಿಂದ ಪಂಡಿತಾರಾಧ್ಯರಿಗೆ ವಿಭೂತಿಯನ್ನು ತಂದರು. ಮತ್ತು ಪಂಡಿತಾರಾಧ್ಯರಿಗೆ ಕಣ್ಣಡ ಬರಲೆಂಬ ಅನುಗ್ರಹವನ್ನೂ ತಂದರು. ಬಸವಣ್ಣನವರ ದರ್ಶನಾರ್ಥಿಯಾಗಿ ಪಂಡಿತಾರಾಧ್ಯರು ಕಲ್ಯಾಣದತ್ತ ಸಾಗಿದರು. ದಾರಿಯಲ್ಲಿ ನಿರುಗುಡಮುಲ, ಪಾನುಗಲ್ಲು ಮತ್ತು ವನಿಪುರಗಳಲ್ಲಿ ತಂಗಿದ್ದರು. ವನಿಪುರದಿಂದ ಕಲ್ಯಾಣಕ್ಕೆ ಹೊರಡಲು ಉದ್ಯುಕ್ತರಾದಾಗ ಬಸವಣ್ಣನವರು ಕೇವಲ ಒಂದು ವಾರದ ಹಿಂದೆ ಕೂಡಲ ಸಂಗಮದಲ್ಲಿ ಲಿಂಗೈಕ್ಯರಾದರೆನ್ನುವ ಆಘಾತಕರ ಸುದ್ದಿಯು ಅವರಿಗೆ ತಲುಪುತ್ತದೆ. ಬಸವಣ್ಣನವರ ದರ್ಶನಕ್ಕಾಗಿ ಕಾತರರಾಗಿದ್ದ

ಪಂಡಿತಾರಾಧ್ಯರನ್ನು ಈ ಸುದ್ದಿ ವಿಹ್ವಲರನ್ನಾಗಿ ಮಾಡಿತು. ಸಮಾಧಾನ ಹೊಂದುವುದಕ್ಕಾಗಿ ಶ್ರೀಶೈಲದತ್ತ ತಿರುಗಿದರು. ದಾರಿಯಲ್ಲಿ ವೆಲ್ಲಟೂರಿನಲ್ಲಿ ತಂಗಿದರು. ಅಲ್ಲಿಂದ ಶ್ರೀಶೈಲ ಪರ್ವತವು ಜಾಜ್ವಲ್ಯಮಾನವಾದ ಲಿಂಗದ ಹಾಗೆ ಅವರಿಗೆ ಕಾಣಿಸಿತು. ಆಗ ಶಿವರಾತ್ರಿಯ ಮುನ್ನ ವೃದ್ಧಾಪ್ಯದಿಂದ ಪಂಡಿತಾರಾಧ್ಯರಿಗೆ ಬೆಟ್ಟದ ಮೇಲೆ ಹೋಗುವುದು ಅಸಾಧ್ಯವೆನಿಸಿತು. ತಮ್ಮ ಪ್ರಿಯಶಿಷ್ಯ ದೋಸಯ್ಯನಿಗೆ ನೀನು ಶ್ರೀಶೈಲಕ್ಕೆ ನನ್ನ ಪರವಾಗಿ ಹೋಗಿ ಶಿವರಾತ್ರಿಯನ್ನು ಆಚರಿಸಿ ಬಾ ಎಂದು ಕಳಿಸಿಕೊಟ್ಟರು. ಅವನು ಹಿಂತಿರುಗಿದ ಮೇಲೆ, ಬಸವಣ್ಣನವರು ಇಲ್ಲದಿರುವಾಗ ತಾವು ಜೀವಿಸುವುದರಲ್ಲಿ ಅರ್ಥವಿಲ್ಲವೆಂದು ಕೊರಗುತ್ತಾ, ಪಂಡಿತಾರಾಧ್ಯರು ವೆಲ್ಲಟೂರಿನಲ್ಲಿ ದೇಹಾವಸಾನ ಮಾಡಿದರು. ಇದರಿಂದ ಬಸವಣ್ಣನವರು ಲಿಂಗೈಕ್ಯರಾದ ಒಂದು ಶಿವರಾತ್ರಿಯ ನಂತರ ಪಂಡಿತಾರಾಧ್ಯರ ದೇಹಾವಸಾನವಾಯಿತೆಂದ ಹಾಗಾಯಿತು.

ಬಸವಣ್ಣನವರು ಲಿಂಗೈಕ್ಯರಾದ ಕಾಲವನ್ನು ನಿಶ್ಚಯಿಸುವಾಗ ಎನ್. ವೆಂಕಟರಮಣಯ್ಯನವರು ಸೋಮನಾಥನು ಬಸವಪುರಾಣದಲ್ಲಿ ಹೇಳುವ ಸಂಗತಿಗಳ ಕ್ರಮವನ್ನು ಲಕ್ಷ್ಯದಲ್ಲಿಟ್ಟುಕೊಂಡರು. ತನ್ನ ಶಿಷ್ಯರಾದ ಅಲ್ಲಯ್ಯ ಮತ್ತು ಮಧುವಯ್ಯ ಇವರಿಗೆ ಬಿಜ್ಜಳನು ವಿಧಿಸಿದ ಕ್ರೂರಶಿಕ್ಷೆಯನ್ನು ಕೇಳಿದ ಕೂಡಲೆ ಬಸವಣ್ಣನವರು ಬಿಜ್ಜಳನ ಸಂತತಿ ಹಾಳಾಗಲೆಂದು ಶಪಿಸಿ, ಕಲ್ಯಾಣವನ್ನು ಬಿಟ್ಟು ಕೂಡಲಸಂಗಮಕ್ಕೆ ತೆರಳಿದರು ಮತ್ತು ಅವನ ಸಂತತಿ ನಾಶವಾದ ಒಡನೆಯೇ ಸಂಗಮನಲ್ಲಿ ಐಕ್ಯರಾದರೆಂದು ಬಸವಪುರಾಣ ಹೇಳುತ್ತದೆ. ಬಿಜ್ಜಳನ ವಂಶ ಕೊನೆಗಾಣುವುದು ೧೧೮೩ರಲ್ಲಿ. ವೆಂಕಟರಮಣಯ್ಯನವರ ಪ್ರಕಾರ ಬಸವಣ್ಣನವರು ಕಾಲವಶವಾಗುವುದು ೧೧೮೩ನೇ ಇಸ್ವಿ ಆದ ಕೂಡಲೆ. ಅದಾದ ಒಂದು ಶಿವರಾತ್ರಿಯ ನಂತರ ಪಂಡಿತಾರಾಧ್ಯರು ನಿಧನರಾಗಿರಬೇಕೆನ್ನುವುದು ಅವರ ಮತ.

ಈ ಸೂಚನೆಗಳನ್ನು ವೆಂಕಟರಮಣಯ್ಯನವರು ಮಾಡಿದಾಗ ಈ ವಿಷಯದಲ್ಲಿ ಆಂಧ್ರದಲ್ಲಿ ನಿಷ್ಣಾತರಾದ ಬಂಡಾರು ತಮ್ಮಯ್ಯನವರು ಅವುಗಳನ್ನು ಒಪ್ಪಲಿಲ್ಲ. ಮೇಲೆ ಹೇಳಿದಂತೆ ಅವರು ಬಿಜ್ಜಳ ಮತ್ತು ಬಸವಣ್ಣನವರ ದೇಹಾವಸಾನ ೧೧೬೭ರಲ್ಲಿ ಆಗಿರಬೇಕೆನ್ನುತ್ತಿದ್ದರು. ಇತ್ತೀಚೆಗೆ ದೊರಕಿರುವ ಸಂಗಮೇಶ್ವರದಲ್ಲಿಯ ಒಂದು ಶಿಲಾಶಾಸನದಿಂದ ವೆಂಕಟರಮಣಯ್ಯನವರ ಮತಕ್ಕೆ ಪುಷ್ಟಿ ದೊರಕಿದೆ. ಈ ಶಾಸನವನ್ನು ವೆಂಕಟರಮಣಯ್ಯನವರೇ ಪ್ರಕಟಿಸಿದರೂ ಪ್ರಕೃತ ಚರ್ಚೆಗೆ ಅದರಿಂದಾಗುವ ಸಹಾಯವನ್ನು ಅವರು ಸೂಚಿಸಲಿಲ್ಲ. ಈ ಶಾಸನದಲ್ಲಿ ಕನ್ನಾಟ ಗೋಕರ್ಣದೇವ ಮಹಾರಾಜನು ಮಲ್ಲಿಕಾರ್ಜುನ ಪಂಡಿತರಿಗೆ ದಾನ ಮಾಡಿದನೆಂದು ಹೇಳಿದೆ. ಈ ತೆಲುಗು ಶಾಸನದ ತಾರೀಖು ಶಕ ೧೧೦೭ ಅಥವಾ ಕ್ರಿ.ಶ.

೧೧೮೫. ಈ ಸಂಗಮೇಶ್ವರ ಕೃಷ್ಣಾನದಿಯ ಒಂದು ದಡದ ಮೇಲಿದೆ. ಇವರ ಎದುರಿಗಿನ ದಡದಲ್ಲಿ ವೆಲ್ಲಟೂರು ಇದೆ. ಆದ್ದರಿಂದ ವೆಂಕಟರಮಣಯ್ಯನವರು ಈ ಶಾಸನದಲ್ಲಿ ಹೇಳಿದ ಮಲ್ಲಿಕಾರ್ಜುನ ಪಂಡಿತರು ಪ್ರಸಿದ್ಧ ಮಲ್ಲಿಕಾರ್ಜುನ ಪಂಡಿತಾರಾಧ್ಯರಾಗಿರಬೇಕು ಮತ್ತು ಪಂಡಿತಾರಾಧ್ಯ ಚರಿತ್ರದಲ್ಲಿ ಹೇಳಿದಂತೆ ಶ್ರೀಶೈಲಕ್ಕೆ ಹೋಗಲಾರದೆ ಅಲ್ಲಿ ಅವರು ಉಳಿದುಕೊಂಡಿರಬೇಕೆಂದು ಊಹಿಸಿದ್ದಾರೆ. ಈ ಊಹೆ ಸಮಂಜಸವಾಗಿದೆ. ಆದ್ದರಿಂದ ಪಂಡಿತಾರಾಧ್ಯರ ನಿಧನ ೧೧೮೫ರಲ್ಲಿ ಆಗಿರಬೇಕು. ಒಂದು ಶಿವರಾತ್ರಿ ಮುಂಚೆ ಅಂದರೆ ೧೧೮೪-೮೫ ರಲ್ಲಿ ಬಸವಣ್ಣನವರು ಲಿಂಗೈಕ್ಯರಾಗಿರಬೇಕು. ಹಿಂದೆ ಹೇಳಿದ ಹಾಗೆ ಪಂಡಿತಾರಾಧ್ಯ ಚರಿತ್ರೆ ಮಲ್ಲಿಕಾರ್ಜುನ ಪಂಡಿತಾರಾಧ್ಯರು ಮತ್ತು ಬಸವಣ್ಣನವರು ಸಮವಯಸ್ಕರೆಂದು ಹೇಳುವುದರಿಂದ ಅವರ ಜೀವಿತ ಕಾಲ ಸು.ಕ್ರಿ.ಶ. ೧೧೦೫ ರಿಂದ ಕ್ರಿ.ಶ. ೧೧೮೫ ರವರೆಗೆಂದು ಸ್ಥೂಲವಾಗಿ ಹೇಳಬಹುದು.*

ಅನುಬಂಧ

ಸಂಗಮೇಶ್ವರದಲ್ಲಿಯ ತೆಲುಗು ಶಾಸನ

ಶ್ರೀ ಮಲ್ಲಿಕಾರ್ಜುನದೇವ ದಿವ್ಯಪಾದಾರಾಧಕ ನಾಮಾದಿ ಸಮಸ್ತ ಪ್ರಶಸ್ತಿ ಸಹಿತಂ ಶ್ರೀಮನ್ಮಹಾ ಮಂಡಲೇಶ್ವರ ಕನ್ನಾಟ ಗೋಕಣ್ಣ ದೇವ ಮಹಾರಾಜುಲು ತಮಸಪ್ತ ಗೋತ್ರಜ ಬಧುತೋಡನು ತಮ್ಮ ತಂಡ್ರಿ ಪೋಜಿರಾಜುನುಕು ಪುಣ್ಯಮುಗಾನು ಸ್ವಸ್ತಿ ಶ್ರೀ ಶಕ ವರ್ಷಮುಲು ೧೧೦೭ ಯಗು ಪ್ಲವಂಗ ಸಂವತ್ಸರ ಕಾರ್ತ್ತೀಕ ಶುದ್ಧ ಪಂಚದಶಿ ಸೋಮವಾ(ರ). . ದಾರಾಪೂರ್ವಕಮು ಸೇಶಿಯಿಚ್ಚಿನ ನೀರು ನೆಲಯದು ಮತ್ತರುಲು ದಿನಕಿ ತಪ್ಪಿನವಾರು ಶ್ರೀಪರ್ವತ ಅಂದುಪಟ್ಟೆದು.. ಮಲ್ಲಿಕಾರ್ಜುನ ಪಂಡಿತುಕಡ್ಲುಗಡಗಿ ಸಮಸ್ತ ಬಡವಲಗನು ಸರ್ವಯಲನಿ ಧಾ(ರಾ) ಪೂರ್ವ್ವಕಮು ಸೇಶಿಯಿಚ್ಚಿರಿ.

ಟಿಪ್ಪಣಿ

ಸಂಗಮೇಶ್ವರ ಶಾಸನದ ತೆಲುಗು ಪಾಠವನ್ನು ಕನ್ನಡ ಅಕ್ಷರದಲ್ಲಿ ನನಗೆ ಬೇಕಾದ ಭಾಗವನ್ನು ಮಾತ್ರ ಮೇಲೆ ಕೊಟ್ಟಿದ್ದೇನೆ. ಪೂರ್ತಿಪಾಠವನ್ನು ಎನ್. ವೆಂಕಟರಮಣಯ್ಯನವರು ಸಂಪಾದಿಸಿರುವ 'ತೆಲಂಗಾಣ ಶಾಸನಮುಲು' ಎರಡನೆಯ ಸಂಪುಟ, ಹೈದರಾಬಾದ್, ೧೯೬೦, ಪು. ೧೭೧ರಲ್ಲಿ ನೋಡಬಹುದು. ತೆಲುಗು ಆಧಾರಗಳಿಗೂ ಮತ್ತು ಆಂಧ್ರದೇಶದಲ್ಲಿ ಪ್ರಸ್ತುತ ವಿಷಯದ ಮೇಲಿನ ಚರ್ಚೆಗೂ ನನ್ನ ಆಧಾರ ಡಾ. ಕೆ. ಲಲಿತಾ ಅವರ 'ಆಂಧ್ರದಲ್ಲಿಯ ವೀರಶೈವ ಮತ' ಎನ್ನುವ ಅಪ್ರಕಟಿತ ನಿಬಂಧ. ಈ ನಿಬಂಧವನ್ನು ಅವರು ನನ್ನ

ಮಾರ್ಗದರ್ಶನದಲ್ಲಿ ತಯಾರಿಸಿ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿ ೧೯೭೬ರಲ್ಲಿ ಪಿ.ಎಚ್‌ಡಿ. ಪದವಿಯನ್ನು ಪಡೆದರು.

ಕರ್ನಾಟಕದಲ್ಲಿ ಬಸವಣ್ಣನವರ ಜೀವಮಾನ ಕಾಲದ ಬಗ್ಗೆ ಇತ್ತೀಚಿಗಿನ ಚರ್ಚೆಯನ್ನು ಡಾ. ಎಂ.ಎಂ. ಕಲಬುರ್ಗಿಯವರ ಬಸವಣ್ಣನವರನ್ನು ಕುರಿತ ಶಾಸನಗಳು ಎನ್ನುವ ೧೯೭೩ರಲ್ಲಿ ಪ್ರಕಟವಾದ ಕರ್ನಾಟಕ ವಿಶ್ವವಿದ್ಯಾಲಯದ ಪ್ರಕಟಣೆಯ ಪುಟ ೫೩ರಲ್ಲಿಯೂ ಮತ್ತು ಅದಕ್ಕೂ ಸ್ವಲ್ಪ ಮುಂಚೆಯದಾದ (೧೯೬೮) ಡಾ. ಪಿ.ಬಿ. ದೇಸಾಯಿಯವರ Basaveshvara and his Times ಪುಸ್ತಕದ ಪು. ೨೯೮–೯೯ ರಲ್ಲಿಯೂ ಬಸವನಾಳ ಸ್ಮಾರಕ ಸಂಪುಟ (೧೯೫೬)ದಲ್ಲಿ ೪೭೬–೮೬ ಪುಟಗಳಲ್ಲಿಯೂ ನೋಡಬಹುದು.

* ಇದೇ ವಿಷಯವನ್ನು ಕುರಿತು ಸಂಯುಕ್ತ ಕರ್ನಾಟಕ ಹುಬ್ಬಳ್ಳಿ ಪತ್ರಿಕೆಯ ೧೯–೧೦–೧೯೯೪ರ ಸಂಚಿಕೆಯಲ್ಲಿ ಬಂದಿದೆ.

■

೩

ಬಿಜ್ಜಳನ ಸಾವಿನ ಬಗೆ ಮತ್ತು ಕಾಲ

ವೀರಶೈವ ಪುರಾಣಗಳು ಬಿಜ್ಜಳನನ್ನು ಬಸವಣ್ಣನವರ ಅನುಯಾಯಿಗಳಾದ ಜಗದೇವ ಮೊಲ್ಲಬೊಮ್ಮಯ್ಯಗಳು ಕೊಂದರೆಂದು ಹೇಳುತ್ತವೆ. ಇದಕ್ಕೆ ಕಲ್ಯಾಣ ಕ್ರಾಂತಿಯೆನ್ನುತ್ತಾರೆ. ಇದು ನಡೆದದ್ದು ಕ್ರಿ.ಶ. ೧೧೬೭–೬೮ರಲ್ಲಿ ಎಂದು ಸಾಧಾರಣವಾಗಿ ಎಲ್ಲರೂ ಒಪ್ಪಿಕೊಂಡಿದ್ದಾರೆ. ಈ ಅಭಿಪ್ರಾಯಗಳನ್ನು ಪ್ರಶ್ನಿಸಿ ಅವುಗಳ ಖಚಿತತೆಯನ್ನು ಗೊತ್ತು ಮಾಡುವುದು ಈ ಪ್ರಬಂಧದ ಉದ್ದೇಶ.

೧೯೯೭ರ ಕ.ಇ. ಅಕಾಡೆಮಿಯ ಶಿರ್ಸಿ ಸಮ್ಮೇಳನದಲ್ಲಿ*[೧] ಕಲ್ಯಾಣಕ್ರಾಂತಿಯಾಗಿದ್ದು ೧೧೬೭–೬೮ರಲ್ಲಿ ಅಲ್ಲ ಅದು ಆಗಿದ್ದು ೧೧೮೪ರಲ್ಲಿ ಆಗಿರಬಹುದೆನ್ನುವ ಆಶಯದ ಪ್ರಬಂಧಗಳನ್ನು ಓದಿದೆ. ೧೧೮೪ರಲ್ಲಿ ಚಾಳುಕ್ಯ ನಾಲ್ಕನೆಯ ಸೋಮೇಶ್ವರನು ತನ್ನ ಸೇನಾಪತಿ ಬಮ್ಮಯ್ಯನ ಸಹಾಯದಿಂದ ಕಲಚುರಿಗಳನ್ನು ಸೋಲಿಸಿದನು. ಅದೇ ಯುದ್ಧದಲ್ಲಿ ಬಮ್ಮಯ್ಯನು ಕಲಚರಿ ಕುಲಕಾಲಾನಲನೆನ್ನುವ ಬಿರುದನ್ನು ಧರಿಸಿದನೆಂದು ಅದೇ ವರ್ಷದ ಅಣ್ಣಿಗೇರಿ ಶಾಸನವು ಹೇಳುತ್ತದೆ. ಆದ್ದರಿಂದ ಅವನೂ ಬಿಜ್ಜಳನ ಕೊಲೆಗಾರರಲ್ಲಿ ಒಬ್ಬನೆಂದು ವಾದಿಸಿದೆನು. ಈ ಪ್ರಬಂಧವನ್ನು ಕೇಳಿದ ನನ್ನ ಸ್ನೇಹಿತ ಡಾ॥ ಹೆಚ್. ಚಂದ್ರಶೇಖರರು ಈ ಅಭಿಪ್ರಾಯಕ್ಕೆ ವಿರುದ್ಧ ಅಭಿಪ್ರಾಯವಿರುವ ಡಾ॥ ಬಿ.ಜಿ.ಎಲ್. ಸ್ವಾಮಿಯವರ ಲೇಖನವನ್ನು ನನ್ನ ಅವಗಾಹನೆಗೆ ತಂದುಕೊಟ್ಟು ಉಪಕರಿಸಿದರು.*[೨] ಅವರೇ ಆ ಲೇಖನವನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಈ ಅನುವಾದವು "ಕಲಚೂರಿ ಎರಡನೇ ಬಿಜ್ಜಳನ ಸಾವನ್ನು ಕುರಿತು" ಎನ್ನುವ ಶೀರ್ಷಿಕೆಯಲ್ಲಿ ಅಕ್ಟೋಬರ್ ೧೯೯೮ರ "ಬಸವಪಥ" ದಲ್ಲಿ ಪ್ರಕಟವಾಗಿದೆ. ಈ ಲೇಖನದಲ್ಲಿ ಬಿಜ್ಜಳನ ಸಾವು

---

೧. "ಇತಿಹಾಸ ದರ್ಶನ" ೧೯೯೬. ಕಲ್ಯಾಣದ ಕ್ರಾಂತಿಯ ಕಾಲ. ಈ ಲೇಖನ ಅದರ ಮುಂದಿನ ಭಾಗ.

೨. B.G.L. Swamy, ***"On the death of Kalachuri Bijjala"***, QJMS. LXXXI Nos. 1-2, Jan-June, 1980.

೧೧೬೭-೬೮ರಲ್ಲಿ ಆಯಿತೆಂದು ಹೇಳಿವೆ. ಸಾವಿನ ಬಗೆಗೆ ಡಾ॥ ಸ್ವಾಮಿಯವರ ಅಭಿಪ್ರಾಯವು ವೀರಶೈವಪುರಾಣಗಳ ಅಭಿಪ್ರಾಯಕ್ಕೆ ವ್ಯತಿರಿಕ್ತವಾಗಿದೆ. ಪುರಾಣಗಳು ಬಸವಣ್ಣನವರ ಅನುಯಾಯಿಗಳು ಕೊಂದರೆಂದು ಹೇಳಿದರೆ, ಸ್ವಾಮಿಯವರು ಧಾರ್ಮಿಕ ಕಾರಣಕ್ಕಿಂತ ಈ ಕೊಲೆ ರಾಜಕೀಯ ಕಾರಣದಿಂದ ಆಗಿರಬಹುದೆಂದೆನ್ನುತ್ತಾರೆ.

ತಮ್ಮ ವಾದಕ್ಕೆ ಅವರು ತೆಲುಗಿನಲ್ಲಿರುವ ನಂದೂರು ತಾಮ್ರ ಶಾಸನವನ್ನು ಮತ್ತು ಅದೇ ಭಾಷೆಯಲ್ಲಿರುವ ಕೇಯೂರ ಬಾಹುಚರಿತೆಯನ್ನು ಉದಾಹರಿಸುತ್ತಾರೆ.*೩ ಬಿಜ್ಜಳನ ಸಾವಿಗೆ ಆಂಧ್ರಪ್ರದೇಶದ ಗುಂಟೂರು ಸಮೀಪದಲ್ಲಿರುವ ವೆಲನಾಡು ಕಲ್ಯಾಣದ ಚಾಳುಕ್ಯರಿಗೂ ತಮಿಳುನಾಡಿನ ಚೋಳರಿಗೂ ಯುದ್ಧಕ್ಕೆ ಕಾರಣವಾಗಿತ್ತು. ಆರನೇ ವಿಕ್ರಮಾದಿತ್ಯ ಈ ವೆಲನಾಡನ್ನು ಗೆದ್ದಿದ್ದ. ಕುಲೋತ್ತುಂಗ ಚೋಳ ಅದನ್ನು ವಶಪಡಿಸಿಕೊಂಡ. ಚಾಳುಕ್ಯರು ಮತ್ತು ಕಲಚುರಿಗಳು ತಮ್ಮ ಹಕ್ಕನ್ನು ಬಿಟ್ಟುಕೊಡಲು ಸಿದ್ಧರಿರಲಿಲ್ಲ. ನಂದೂರು ಶಾಸನದ ಪ್ರಕಾರ ವೆಲನಾಡಿನ ರಾಜೇಂದ್ರ ಚೋಳನ ಸೇನಾಪತಿ ಕೊಮ್ಮಣ್ಣನಿಗೂ ಬಿಜ್ಜಳನ ಅಳಿಯ ಎರಡನೆ ಚಾವುಂಡನಿಗೂ ಕೋಚೆರ್ಲಕೋಟಾ ಎನ್ನುವಲ್ಲಿ ಯುದ್ಧವಾಯಿತು. ಈ ಯುದ್ಧದಲ್ಲಿ ಚಾವುಂಡನು ಸತ್ತನು. ಡಾ॥ ಸ್ವಾಮಿಯವರ ಪ್ರಕಾರ ಅಳಿಯ ಚಾವುಂಡನ ಜತೆಗೆ ಬಿಜ್ಜಳನೂ ಈ ಯುದ್ಧದಲ್ಲಿ ಪಾಲುಗೊಂಡಿರಬೇಕು ಮತ್ತು ಆ ಯುದ್ಧದಲ್ಲಿ ಅವನು ಸತ್ತಿರಬೇಕು ಇಲ್ಲವೇ ಗಾಯಗೊಂಡಿರಬೇಕು. ಗಾಯಗೊಂಡ ನಂತರ ಕಲ್ಯಾಣಕ್ಕೆ ಬಂದು ಸತ್ತಿರಬೇಕೆಂದು ಊಹಿಸುತ್ತಾರೆ. ಈ ಊಹೆಗೆ ಅವರು ಕೊಡುವ ಕಾರಣವೆಂದರೆ (೧) ೧೧೬೬-೬೮ರ ನಂತರ ಬಿಜ್ಜಳನ ಶಾಸನಗಳು ಸಿಗುವುದಿಲ್ಲ. ಆದ್ದರಿಂದ ಅವನು ಅಷ್ಟೊತ್ತಿಗೆ ಸತ್ತಿರಬೇಕು. (೨) ಹರಪನಹಳ್ಳಿ ತಾಲ್ಲೂಕಿನ ಕುಂಜಾಪುರದ ಒಂದು ಶಾಸನದಲ್ಲಿ "ಬಿಜ್ಜಿಗ ಶಿರಚ್ಛೇದಕ" ನೆನ್ನುವ ಬಿರುದನ್ನು ಗುತ್ತಲದ ಒಬ್ಬ ರಾಜನಿಗೆ ಕೊಟ್ಟಿದೆ.*೪ ಶ್ರೀ ಹುಲ್ಲೂರು ಶ್ರೀನಿವಾಸ ಜೋಯಿಸರು ಈ ಬಿರುದನ್ನು ಹೊತ್ತವನು ಗುತ್ತಗಮಲ್ಲದೇವ. ಅವನು ೧೧೬೭-೬೮ರಲ್ಲಿ ಬಿಜ್ಜಳನನ್ನು ಕೊಂದಿರಬೇಕೆನ್ನುತ್ತಾರೆ. ಡಾ॥ ಸ್ವಾಮಿಯವರು ಶ್ರೀ ಜೋಯಿಸರ ವಾದವನ್ನು ಅನುಮೋದಿಸಿ, ಈ ಕೊಲೆ ಕೋಚೆರ್ಲಕೋಟೆಯ ಕದನದ ನಂತರ ನಡೆದಿರಬೇಕೆನ್ನುತ್ತಾರೆ.

---

*೩. "Nandur Inscription", Ed. B.V. Krishna Rao, EI-29.

*೪. ಹುಲ್ಲೂರ ಶ್ರೀನಿವಾಸ ಜೋಯಿಸ್ : "ಬಿಜ್ಜಿಗ ಶಿರಚ್ಛೇದಕ", ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ, ಸಂಪುಟ ೩೫, ಸಂಚಿಕೆ ೧ : ೧೯೫೦.

ಶ್ರೀ ಹುಲ್ಲೂರು ಶ್ರೀನಿವಾಸ ಜೋಯಿಸರ ವಾದವನ್ನು ಅಂದರೆ ಗುತ್ತಲದ ಮಲ್ಲಿದೇವನು "ಬಿಜ್ಜಿಗ ಶಿರಚ್ಛೇದಕ"ನು ಎನ್ನುವ ವಾದವನ್ನು ಒಪ್ಪುವುದು ಕಷ್ಟ. ಯಾಕೆಂದರೆ, ಈ ತ್ರುಟಿತ ಶಾಸನದಲ್ಲಿ ತೇದಿಯಿಲ್ಲ.[೫] ಬಿಜ್ಜಿಗ ಶಿರಚ್ಛೇದಕನೆಂದು ಆ ಶಾಸನದಲ್ಲಿದ್ದರೂ, ಕಲಚುರಿಯವರಲ್ಲಿ ಇರುವ ಮೂವರು ಬಿಜ್ಜಳರಲ್ಲಿ ಯಾವ ಬಿಜ್ಜಳನೆಂದು ಹೇಳುವುದು ದುಸ್ತರ. ಮೊದಲನೆ ಬಿಜ್ಜಳ, ಪ್ರಸಿದ್ಧ ಎರಡನೆ ಬಿಜ್ಜಳನ ಪೂರ್ವಜ. ಪ್ರಸಿದ್ಧ ಬಿಜ್ಜಳ ಎರಡನೆಯವನು, ಮೂರನೆಯವನು ಎರಡನೆಯ ಬಿಜ್ಜಳನ ಮೊಮ್ಮಗ, ವೀರ ಬಿಜ್ಜಳ. ತೇದಿಯಿಲ್ಲದ ಈ ಶಾಸನದಿಂದ ಯಾವ ಬಿಜ್ಜಳ ಹತನಾದನೆಂದು ಹೇಳಲು ಬರುವುದಿಲ್ಲ. ಈ ಮೂವರಲ್ಲದೆ, ಬೇರೆ ವಂಶದಲ್ಲಿಯೂ ಅದೇ ಕಾಲದಲ್ಲಿ ಬಿಜ್ಜಳನೆನ್ನುವವರಿದ್ದಾರೆ. "ಬಿಜ್ಜಿಗ ಶಿರಚ್ಛೇದಕ"ನೆಂದಾದ ಮೇಲೆ ಈ ಶಾಸನದಲ್ಲಿ ಅಕ್ಷರಗಳಿಲ್ಲ. ಮುಂದೆ ಕೆಲವು ಸಾಲುಗಳಾದ ಮೇಲೆ ಮಲ್ಲಿದೇವನ ಹೆಸರು ಬರುತ್ತದೆ. ಆದ್ದರಿಂದ ಅವನೇ ಬಿಜ್ಜಳನನ್ನು ಕೊಂದನೆಂದು ಈ ಶಾಸನದಿಂದ ಹೇಳಲು ಬರುವುದಿಲ್ಲ. ಕೆಲವು ವಿದ್ವಾಂಸರು ಈ ಶಾಸನ ಎರಡನೆ ಬಿಜ್ಜಳನ ಕಾಲದ್ದಲ್ಲ, ಆರನೆ ವಿಕ್ರಮಾದಿತ್ಯನ ಕಾಲದ್ದೆಂದು ತಿಳಿದಿದ್ದಾರೆ. ಹೀಗೆ ಅನೇಕ ಕಾರಣಗಳಿಂದ ಬಿಜ್ಜಳನ ಸಮಸಾಮಯಿಕ ಮಲ್ಲಿದೇವ ಅವನ ಕೊಲೆಗಾರನೆಂದು ಈ ಶಾಸನ ಹೇಳುವುದಿಲ್ಲ.

ಇನ್ನು ಡಾ || ಸ್ವಾಮಿಯವರು ಊಹಿಸಿದ ಹಾಗೆ ಬಿಜ್ಜಳನು ಕೋಟಿಲಿಂಗಕೋಟೆಯ ಕದನದಲ್ಲಿ ಭಾಗವಹಿಸಿದ್ದನೆನ್ನುವ ಊಹೆಯನ್ನು ಒಪ್ಪುವುದಾಗುವುದಿಲ್ಲ. ಆ ಯುದ್ಧ ನಡೆದಾಗ (೧೧೬೭-೬೮) ತನ್ನ ರಾಜ್ಯದಲ್ಲಿಯೇ ಪರಿಸ್ಥಿತಿ ಅವನ ಹತೋಟಿಯಲ್ಲಿರಲಿಲ್ಲ. ನನ್ನ ಈ ಮೊದಲನೆ ಲೇಖನದಲ್ಲಿ ಹೇಳಿದ ಹಾಗೆ ಬಿಜ್ಜಳನು ೧೧೬೭ರಲ್ಲಿ ಪದತ್ಯಾಗಮಾಡಿ ತನ್ನ ಎರಡನೆ ಮಗ ಸೋವಿದೇವನಿಗೆ ಪಟ್ಟ ಕಟ್ಟಿದ್ದರಿಂದ ಅವನ ಇತರ ಮಕ್ಕಳು ಮತ್ತು ಇತರ ಬಂಧುಗಳಲ್ಲಿ ಕಿತ್ತಾಟ ಆರಂಭವಾಯಿತು. ಅದೇ ಹೊತ್ತಿಗೆ ಬಸವಣ್ಣನವರ ಧಾರ್ಮಿಕ ಚಳವಳಿಯು ಪ್ರಬಲವಾಯಿತು. ಬಿಜ್ಜಳ-ಬಸವಣ್ಣನವರಲ್ಲಿ ಮತೀಯ ಭಿನ್ನಾಭಿಪ್ರಾಯಗಳು ವಿಕೋಪಕ್ಕೆ ಹೋದವು. ಬಸವಣ್ಣನವರಿಗೆ ಪ್ರಚಂಡ ಜನ ಬಲವಿರುವುದನ್ನು ನೋಡಿ ಬಿಜ್ಜಳನು ಅವರ ಕೊಲೆ ಮಾಡಬೇಕೆಂದು ಹೊಂಚು ಹಾಕುತ್ತಿದ್ದನು. ಇಂತಹ ಧಾರ್ಮಿಕ ಮತ್ತು ರಾಜಕೀಯ ಪರಿಸ್ಥಿತಿ ಕಲ್ಯಾಣದಲ್ಲಿರುವಾಗ, ಅದನ್ನು ಬಿಟ್ಟು ದೂರದ ಆಂಧ್ರಕ್ಕೆ ಕ್ಷುಲ್ಲಕ ಕಾರಣಕ್ಕೆ ಯುದ್ಧ ಮಾಡಲು ಹೋಗಿದ್ದನೆನ್ನುವುದು ಅಸಂಭವ. ತನಗೆ ಹೋಗಲಿಕ್ಕೆ ಆಗುವುದಿಲ್ಲವೆಂದೇ ತನ್ನ ಅಳಿಯ ಚಾವುಂಡನನ್ನು ಕಳಿಸಿರಬೇಕು.

---

೫. SII IX(1) No. 217, ಕುಂಚೂರು ಅಥವಾ ಕುಂಜಾಪುರದ ಶಾಸನ

ಬಿಜ್ಜಳ ಯುದ್ಧದಲ್ಲಿ ಸಾಯದಿದ್ದರೆ ಹೇಗೆ ಸತ್ತನೆನ್ನುವ ಪ್ರಶ್ನೆ ಉಳಿಯುತ್ತದೆ. ವೀರಶೈವ ಪುರಾಣಗಳು ಹೇಳುವ ಅಭಿಪ್ರಾಯಕ್ಕೆ ಅನುಕೂಲವಾಗುವ ಕೆಲವು ಆಧಾರಗಳು ಈಚೆಗೆ ಹೊರಬರುತ್ತವೆ. ಇತ್ತೀಚೆಗೆ ಡಾ॥ ಬಿ.ವಿ. ಶಿರೂರರಿಗೆ*೬ ಯಲಬುರ್ಗಿಯ ಹಿರೇಮಠದಲ್ಲಿ ಧೂಪದ ರಾಜೇಶಕೃತ "ಮೊಲ್ಲೆ ಬೊಮ್ಮಯ್ಯಗಳ ಕಾವ್ಯ"ವೊಂದು ಲಭಿಸಿದೆ. ಸು. ೧೬೫೦ರಲ್ಲಿ ಇದನ್ನು ಬರೆದಿರಬೇಕೆಂದು ಹೇಳುತ್ತಾರೆ. ಇದರಲ್ಲಿ ಜಗದೇವನೊಂದಿಗೆ ಬಿಜ್ಜಳನನ್ನು ಕೊಂದ ವ್ಯಕ್ತಿ "ಮೊಲ್ಲೆ ಬೊಮ್ಮಯ್ಯ"ನೆಂದು ಸ್ಪಷ್ಟವಾಗಿ ಹೇಳಿದೆ. ಸಿಂದ ವಂಶದ ಎರಡನೇ ಚಾವುಂಡನು ಈ ಮೊಲ್ಲೆ ಬೊಮ್ಮಯ್ಯನಿಗೆ ಒಂದು ಶಾಸನವನ್ನು ಕೊಟ್ಟನೆಂದು ಅದರಲ್ಲಿ ಹೇಳಿದೆ. ಆದರೆ ಆ ಶಾಸನ ಲಭ್ಯವಿಲ್ಲ. ಕಾವ್ಯದಲ್ಲಿಯ ಮಾಹಿತಿಯನ್ನು ಅಂದರೆ ಮೊಲ್ಲೆಬೊಮ್ಮಯ್ಯನ ಅಸ್ತಿತ್ವವನ್ನು ಒಂದು ಶಾಸನವು ಬೆಂಬಲಿಸುತ್ತದೆ. ಈ ಶಾಸನವು*೮ ರೋಣ ತಾಲ್ಲೂಕಿನ ಕೋಡಿಕೊಪ್ಪ ಗ್ರಾಮದ ಮೂಲ ಬ್ರಹ್ಮ ದೇವರ ಗುಡಿಯಲ್ಲಿ ಸಿಕ್ಕಿದೆ. ಇವರ ತೇದಿ ಕ್ರಿ.ಶ. ೧೧೪೪. ಅದರಲ್ಲಿ ಮೊಲ್ಲೆಯ ಬೊಮ್ಮಣ್ಣ ತನ್ನ ಊರಿನ ನೂರಾನಾಲ್ವರು ಮಹಾಜನಗಳ ಸಮ್ಮುಖದಲ್ಲಿ ದಾನ ಮಾಡಿದ ವಿವರಗಳಿವೆ. ಇವುಗಳ ಪ್ರಕಾರ ಮೊಲ್ಲೆ ಬೊಮ್ಮಣ್ಣನು ತನ್ನ ಮನೆಯ ದೇವರು ಕಿರು ನರೆಯಂಗಲ್ಲಿನ ಶ್ರೀ ಬ್ರಹ್ಮೇಶ್ವರ ದೇವರಿಗೆ ದತ್ತಿಯನ್ನು ಕೊಟ್ಟಿದ್ದಾನೆ. ಮೇಲೆ ಹೇಳಿದ ಕಾವ್ಯವು ಅವನ ಮನೆ ದೈವಕರುಗಲ್ಲ ಬೊಮ್ಮನೆಂದು ಹೇಳುತ್ತದೆ. ಎರಡರಲ್ಲಿಯೂ ಅವನ ಮನೆದೇವರು ಬ್ರಹ್ಮದೇವನೆಂದು ಹೇಳಿದೆ. ಆದ್ದರಿಂದ ಮೊಲ್ಲಬೊಮ್ಮಯ್ಯನು ಶಾಸನವಿರುವ ನರೆಯಂಗಲ ಪ್ರಾಂತದಲ್ಲಿ ಹುಟ್ಟಿದವನೆಂದು ಸ್ಪಷ್ಟವಾಗುತ್ತದೆ.

ಈ ಶಾಸನ ಮತ್ತು ಕಾವ್ಯದಲ್ಲಿ ಮಾಹಿತಿಯನ್ನು ಅಲ್ಲಿಯ ಜನರ ನಂಬಿಕೆಯು ಪೋಷಿಸುತ್ತದೆಂದು ಡಾ ॥ ಶಿರೂರರು ಹೇಳುತ್ತಾರೆ. ಇಂದಿಗೂ ಕೋಡಿಕೊಪ್ಪ ಗ್ರಾಮದಲ್ಲಿ ಅಲ್ಲಿಯ ಕಲ್ಲಪ್ಪನ ಗುಡಿಯ ಮುಂದಿನ ಕಟ್ಟೆಯ ಎರಡು ಕಲ್ಲುಗಳನ್ನು ಮೊಲ್ಲೆಬೊಮ್ಮಯ್ಯ ಮತ್ತು ಜಗದೇವಯ್ಯ ಎಂದು ಪೂಜಿಸುತ್ತಾರೆ. ಇದೇ ರೀತಿ ನರೇಗಲ್ಲಿನ ಕಲ್ಮೇಶ್ವರ ದೇವಾಲಯ ಮತ್ತು ಕಲ್ಲೂರಿನ ಕಲ್ಲಿನಾಥ ದೇವಾಲಯಗಳ ಮುಂದಿರುವ ಎರಡು ಕಲ್ಲುಗಳನ್ನು ಮೊಲ್ಲಬೊಮ್ಮಯ್ಯ ಮತ್ತು ಜಗದೇವಯ್ಯಗಳೆಂದು ಪೂಜಿಸುತ್ತಾರೆ.

ಹೀಗೆ ಮೊಲ್ಲೆಬೊಮ್ಮಯ್ಯ ಮತ್ತು ಜಗದೇವಯ್ಯಗಳು ಬಿಜ್ಜಳನ ಕೊಲೆಗಾರರೆಂದು ಯಲಬುರ್ಗಿ ಮತ್ತು ರೋಣ ತಾಲ್ಲೂಕುಗಳಲ್ಲಿಯ ಐತಿಹ್ಯ

---

*೬. ಮೊದಲನೆ ಟಿಪ್ಪಣಿಯಲ್ಲಿನ ಲೇಖನ ನೋಡಿ

*೭. ಡಾ ॥ ಬಿ.ವಿ. ಶಿರೂರ : ಬಿಜ್ಜಳನನ್ನು ಕೊಂದ ಮೊಲ್ಲೆಬೊಮ್ಮಯ್ಯ ಸಾಧನೆ

*೮. SII. XV No. 28, ಕೋಡಿಕೊಪ್ಪದ ಶಾಸನ, ಕ್ರಿ.ಶ. ೧೧೪೪

ಮತ್ತು ಶಾಸನ ಮತ್ತು ಮೊಲ್ಲೆ ಬೊಮ್ಮಯ್ಯಗಳ ಕಾವ್ಯ ಮತ್ತು ಪಾಲ್ಕುರಿಕೆ ಸೋಮನಾಥನ ಪಂಡಿತಾರಾಧ್ಯ ಚರಿತ್ರೆ ಮತ್ತು ಬಸವಪುರಾಣಗಳು ಹೇಳುತ್ತವೆ. ಮೊಲ್ಲೆಬೊಮ್ಮಯ್ಯನು ಐತಿಹಾಸಿಕ ವ್ಯಕ್ತಿಯೆಂದು ಕೋಡಿ ಕೊಪ್ಪದ ಶಾಸನ ಹೇಳುತ್ತದೆ. ಮತ್ತು ಅದೇ ಶಾಸನ ಮೊಲ್ಲಬೊಮ್ಮ ಒಬ್ಬನ ಹೆಸರೆಂದು ಹೇಳುತ್ತದೆ. ಕೆಲವು ನಂತರದ ಪುರಾಣಗಳು ಇವರು ಮಲ್ಲಯ್ಯ ಮತ್ತು ಬಮ್ಮಯ್ಯ ಎನ್ನುವ ಇಬ್ಬರು ವ್ಯಕ್ತಿಗಳೆಂದು ಹೇಳುತ್ತವೆ. ಈಗ ಅದು ಒಬ್ಬ ವ್ಯಕ್ತಿಯ ಹೆಸರೆನ್ನುವುದು ಖಚಿತ. ಈ ಶಾಸನದ ಕಾಲದಲ್ಲಿ (೧೧೪೪) ಈ ಮೊಲ್ಲಬೊಮ್ಮಯ್ಯ ಒಬ್ಬ ಅಧಿಕಾರಿಯಾಗಿದ್ದ.

ಮೇಲೆ ಹೇಳಿದ ಕೋಡಿಕೊಪ್ಪದ ಮೊಲ್ಲೆಬ್ರಹ್ಮದೇವರ ದೇವಸ್ಥಾನದಲ್ಲಿರುವ ಇನ್ನೊಂದು ಮೊಲ್ಲೆಬೊಮ್ಮನ ಶಾಸನ ಈಚೆಗೆ ನನ್ನ ಲಕ್ಷ್ಯಕ್ಕೆ ಬಂತು. ಅದರ ತೇದಿ ಕ್ರಿ.ಶ. ೧೧೨೦-೨೧. ಅದರಲ್ಲಿ ಅಂಕಕಾರ ಪಕ್ಕದ ಅಧಿಷ್ಟಾಯಕ ಮೊಲ್ಲೆಬೊಮ್ಮನು ತನ್ನ ಮನೆದೇವರು ಬ್ರಹ್ಮದೇವರಿಗೆ ದತ್ತಿಯನ್ನು ಕೊಟ್ಟ ವಿವರಗಳಿವೆ. ಈ ಶಾಸನದ[೯] ಕಾಲದಲ್ಲಿ ಅವನ ವಯಸ್ಸು ೨೦ ಎಂದು ಇಟ್ಟುಕೊಂಡರೆ ಅವನು ೧೧೮೨ರ ಕಲ್ಯಾಣದ ಕ್ರಾಂತಿಯಲ್ಲಿ ಬಿಜ್ಜಳನನ್ನು ಕೊಂದಾಗ ೮೨ ವಯಸ್ಸಿನವನಿರಬಹುದು. ೧೧೨೦-೨೧ರಲ್ಲಿ ಸಣ್ಣ ಅಧಿಕಾರಿಯಾಗಿದ್ದ ಮೊಲ್ಲಬೊಮ್ಮಯ್ಯ ಅಥವಾ ಬಮ್ಮಯ್ಯ (ಎರಡು ಹೆಸರೂ ಎರಡೂ ಶಾಸನಗಳಲ್ಲಿವೆ). ಮುಂದೆ ಚಾಳುಕ್ಯ ನಾಲ್ಕನೆ ಸೋಮೇಶ್ವರ ಸೇನಾಧಿಪತಿಯಾಗಿ ಬಿಜ್ಜಳನನ್ನು ಕೊಂದಿರಬಹುದು ಅಥವಾ ಮೊಲ್ಲೆಬೊಮ್ಮಯ್ಯ ಬೇರೆ, ಸೇನಾಧಿಪತಿ ಬಮ್ಮಯ್ಯ ಬೇರೆ ಎಂದಾದರೆ, ಸೇನಾಧಿಪತಿ, ಬಿಜ್ಜಳನನ್ನು ಬಿಟ್ಟು ಉಳಿದ ಕಲಚುರಿಗಳನ್ನು ನಾಶಮಾಡಿರಬೇಕು.

ಕೊಲೆಗಾರರ ವಿಷಯದಲ್ಲಿ ಸಂದಿಗ್ಧತೆಯಿದ್ದರೂ ಕೊಲೆಯ ಕಾಲ ೧೧೮೨-೮೪ ರೊಳಗಿನ ಕಾಲದಲ್ಲಿ ಇಂತಹ ಅನುಮಾನಕ್ಕೆ ಆಸ್ಪದವಿಲ್ಲ. ಬಿಜ್ಜಳನ ಸಾವಿಗೂ ಮತ್ತು ಬಸವಣ್ಣನವರ ಐಕ್ಯಕ್ಕೂ ಬಹಳ ಅಂತರವಿಲ್ಲದಿರುವುದರಿಂದ ಬಿಜ್ಜಳನ ಸಾವು ಸು. ೧೧೮೨-೮೪ರಲ್ಲಿ ಬಸವಣ್ಣನವರು ಐಕ್ಯರಾಗಿದ್ದು ಸು. ೧೧೮೫-೮೬ರಲ್ಲಿ ಎಂದು ಇಟ್ಟುಕೊಳ್ಳಬಹುದು. ಮತ್ತು ಅವರ ಸಮಕಾಲೀನರು ಮತ್ತು ಸಮವಯಸ್ಕರು ಆದ ಮಲ್ಲಿಕಾರ್ಜುನ ಪಂಡಿತಾರಾಧ್ಯರು ಐಕ್ಯರಾಗಿದ್ದು ಕ್ರಿ.ಶ. ೧೧೮೬ರಲ್ಲಿ ಅನ್ನುವುದಕ್ಕೆ ಅದೇ ವರ್ಷದ ಸಂಗಮೇಶ್ವರದ ಅವರ ಶಾಸನವು[೧೦]

---

೯. JBBRAS XI J.F. Fleet, Od Canarese and Sanskrit Inscriptions relating to the Chieftains of Sindavamsa, Pp. 247-251.

೧೦. Telangana Inscriptions II. No. 14 P. 214

ಮತ್ತು ಅದರ ಪಕ್ಕದಲ್ಲಿರುವ ವೆಲ್ಲಟೂರಿನಲ್ಲಿರುವ ಅವರ ಸಮಾಧಿಯು ನಿರ್ವಿವಾದದ ಸಾಕ್ಷಿಗಳಾಗಿವೆ.[*೧೧]

ಬಿಜ್ಜಳ ಕೊಲೆಯಾದ ಬಗ್ಗೆ ಒಂದು ಊಹೆ

ಮಲ್ಲೆಬೊಮ್ಮ ಮತ್ತು ಜಗದೇವ ಎಂಬ ವೀರರು ಬಿಜ್ಜಳನನ್ನು ಕೊಂದು ಹಾಕಿದವರೆಂದು ಪಾಲ್ಕುರಿಕೆ ಸೋಮನಾಥನ ಪಂಡಿತಾರಾಧ್ಯಚರಿತ್ರೆಯ ಮಹಿಮಾ ಪ್ರಕರಣದಲ್ಲಿ ಹೇಳಿದೆ. ಇವರಿಗೆ ಚಾಳುಕ್ಯ ನಾಲ್ಕನೆಯ ಸೋಮೇಶ್ವರನ ದಂಡನಾಥನಾದ ಬಮ್ಮರಸ ಅಥವಾ ಬಮ್ಮದೇವನು ಏಕೆ ಸಹಾಯ ಮಾಡಿದನೆಂಬುದೇ ಈ ಪ್ರಬಂಧದ ವಿಷಯ. ಕಲಚುರ್ಯರ ಸೇನಾಪತಿ ಕಾವಣ[*೧೨]. ಅವರನ್ನು ಈ ಸೇನಾಪತಿಯು ಕೊನೆಯವರೆಗೂ ನಿಷ್ಠೆಯಿಂದ ಸೇವಿಸಿದನು. ಇವನಿಗೆ, ಬಮ್ಮರಸ, ಕೇಶವ ಮತ್ತು ನಾರಸಿಂಹರೆಂಬ ಮೂವರು ಮಕ್ಕಳು. ಕಡ್ಲೆವಾಡದ ಒಂದು ಶಾಸನವು[*೧೩] ಬಮ್ಮರಸನು ಕಲಚುರಿ ಸೋವಿದೇವನ ದಂಡನಾಥನಾಗಿದ್ದುದನ್ನು ಹೇಳುತ್ತದೆ. ಹೀಗೆ ಕೆಲವು ವರ್ಷಗಳು ತಂದೆ ಕಾವಣ, ಮಗ ಬಮ್ಮರಸರು, ಕಲಚುರ್ಯರ ಪ್ರಮುಖ ಸೇನಾಪತಿಗಳಾಗಿದ್ದರು. ಬಮ್ಮರಸನಿಗೆ ತಂದೆಯ ಬಗ್ಗೆ ಅಪಾರ ಗೌರವವಿದ್ದುದನ್ನು ಮೇಲೆ ಹೇಳಿದ ಕಡ್ಲೆವಾಡದ ಶಾಸನವು ಸ್ಪಷ್ಟಪಡಿಸುತ್ತದೆ. ಅವನನ್ನು ಕಲಚುರಿಗಳು ಅನುಮಾನದಿಂದ ನೋಡುತ್ತಾರೆಂದೂ ಅಥವಾ ಸೋವಿದೇವನ ನಂತರ ಕಲಚುರಿಗಳಲ್ಲಿ ಬಲಿಷ್ಠರಾದ ರಾಜರು ಇಲ್ಲದಿದ್ದುದರಿಂದ ಚಾಳುಕ್ಯರು ಅವರನ್ನು ಸುಲಭವಾಗಿ ಸೋಲಿಸುವರೆಂಬ ಅಂದಾಜೋ ಅಥವಾ ಎರಡು ಕಾರಣಗಳಿಂದಲೂ ಬಮ್ಮರಸನು, ಕಲಚುರಿಗಳನ್ನು ಬಿಟ್ಟು ನಾಲ್ಕನೆಯ ಸೋಮೇಶ್ವರನನ್ನು ಸೇರಿ ಅವನ ಮುಖ್ಯ ಸೇನಾಧಿಪತಿಯಾದನು. ಈ ಬದಲಾವಣೆ ಬಹುಶಃ ಕ್ರಿ.ಶ. ೧೧೮೩ರ ವೇಳೆಗೆ ಆಗಿ ಹೋಗಿತ್ತು. ಅವನ ಜತೆಗೆ ಅವನ ತಮ್ಮ ನಾರಸಿಂಹನೂ ಚಾಳುಕ್ಯರ ಪಕ್ಷವನ್ನು ಸೇರಿದನು. ತಂದೆ ಕಾವಣನ ಜತೆಗೆ ಅವನ ಎರಡನೆಯ ಮಗ ಕೇಶವನು ಕಲಚುರ್ಯರ ಸೇವೆಯಲ್ಲಿಯೇ ಉಳಿದನು. ೧೧೮೩ರ ಸುಮಾರಿನಲ್ಲಿ ನಡೆದ ಒಂದು ಕದನದಲ್ಲಿ ಕಲಚುರ್ಯರ ಮುಖ್ಯ ಸೇನಾಪತಿ ಕಾವಣ ಮತ್ತು ಚಾಳುಕ್ಯರ ಮುಖ್ಯ ಸೇನಾಪತಿ ಬಮ್ಮರಸರಾಗಿದ್ದರು. ಈ ಕದನದಲ್ಲಿ ಬಮ್ಮರಸನು ಕಲಚುರ್ಯರ ೬೦ ಆನೆಗಳನ್ನು

---

*೧೧. ಕನ್ನಡ ವಿಶ್ವಕೋಶ, ಕರ್ನಾಟಕ ವಿಷಯ, ಮಲ್ಲಿಕಾರ್ಜುನ ಪಂಡಿತಾರಾಧ್ಯರ ಬಗೆಗೆ ಬರೆದಿದ್ದನ್ನು ನೋಡಿ.

12. SII, XV, ನಂ. ೫೯.

13. SII, XX, ನಂ. ೧೫೪

ಚಾಳುಕ್ಯರ ಕಡೆ ಬರುವ ಹಾಗೆ ಮಾಡಿ ಅವರನ್ನು ಸಂಪೂರ್ಣವಾಗಿ ಸೋಲಿಸಿದನು. ಗದುಗಿನ ಒಂದು ಶಾಸನದಿಂದ ಫ್ಲೀಟರು ಹೀಗೆ ಊಹಿಸಿದ್ದಾರೆ.*[೧೪] ಬಮ್ಮರಸನು ಮೊದಲು ಕಲಚುರಿ ಸೈನ್ಯದಲ್ಲಿ ಅಧಿಕಾರಿಯಾಗಿದ್ದುದರಿಂದ ಅಲ್ಲಿ ಅವನ ಸಹಾಯಕರು ಇದ್ದಿರಬಹುದು. ಆದರೆ ಕಲಚುರಿಗಳು, ಕಾವಣನು ಹೀಗೆ ದ್ರೋಹ ಮಾಡಿರಬೇಕೆಂದು ಶಂಕಿಸಿ, ಅವನು ತಮ್ಮ ಪಕ್ಷದಲ್ಲಿ ಮುಂದುವರಿದರೆ, ತಮಗೆ ಸೋಲು ನಿಶ್ಚಯವೆಂದು, ಅವನನ್ನು ಕೊಂದುಹಾಕಿದರು. ಬಮ್ಮರಸನ್ನು ಪರಶುರಾಮನಂತೆ ಪಿತೃಭಕ್ತಿ ಪರಾಯಣನು. ತನ್ನ ತಂದೆಯನ್ನು ಮೋಸದಿಂದ ಕೊಂದ ಕಲಚುರಿಗಳನ್ನು ನಿರ್ಮೂಲ ಮಾಡಿ, ಚಾಳುಕ್ಯರನ್ನು ಧರಾಧೀಶರನ್ನಾಗಿ ಮಾಡುವೆನೆಂದು ವೀರಬಮ್ಮಯ್ಯನು, ಪ್ರಪಂಚಕ್ಕೆ ಸಾರಿ ಹೇಳುತ್ತಾ ಶಪಥಮಾಡಿದನೆಂದು ಅಣ್ಣಿಗೆರೆಯ ೧೧೮೪ರ ಶಾಸನವು ಹೇಳುತ್ತದೆ.*[೧೫] ಅದೇ ಶಾಸನವು ಕಾವಣನನ್ನು ಪರಶುರಾಮನ ತಂದೆ ಜಮದಗ್ನಿಗೆ ಹೋಲಿಸಿ ಅವನನ್ನು ಮೋಸದಿಂದ ಕೊಂದ ಕಾರ್ತವೀರ್ಯಾರ್ಜುನನನ್ನು ಪರಶುರಾಮನು ಕೊಂದ ಹಾಗೆ ಬಮ್ಮರಸನು ಕಲಚುರ್ಯರನ್ನು ನಾಶಮಾಡಿದನೆಂದು ಹೇಳುತ್ತದೆ. ಮತ್ತು ಅದೇ ಕದನದಲ್ಲಿ ಬಮ್ಮರಸನ ತಮ್ಮ ನಾರಸಿಂಹನು ಕಲಚುರಿ ಕೊನೆಯ ಅರಸು ಸಂಕಮನನ್ನು ಕೊಂದನೆಂದು ಹೇಳಿದೆ.*[೧೬] ಈ ಶಾಸನದ ತೇದಿ ೧೧೮೪. ಇಷ್ಟೊತ್ತಿಗೆ ಕಲಚುರಿವಂಶವು ಕೊನೆಗೊಂಡಿತು. ಇದು ಕಲ್ಯಾಣ ಕ್ರಾಂತಿಯ ರಾಜಕೀಯ ಪರಿಣಾಮ. ಆದ್ದರಿಂದ ಈ ಕ್ರಾಂತಿಯು ೧೧೬೮ರಲ್ಲಿ ಆಗಲಿಲ್ಲ. ೧೧೮೩–೧೧೮೪ರಲ್ಲಿ ಆಯಿತೆಂದು ನನ್ನ ಊಹೆ.

ಮೇಲೆ ಹೇಳಿದ ಅಣ್ಣಿಗೆರೆಯ ಶಾಸನದಲ್ಲಿ ಬಮ್ಮರಸನು ಕೊಲ್ಲಿಸಿದ ಕಲಚುರಿ ಮುಖಂಡನು ಯಾರೆಂದು ಹೇಳಿಲ್ಲ. ಆದರೆ ಅದರಲ್ಲಿ ಎಲ್ಲಾ ಕಲಚುರಿಗಳು ನಾಶವಾದರೆಂದು ಹೇಳಿದೆ. ಬಿಜ್ಜಳನೂ ಇದೇ ವೇಳೆಗೆ ಹತನಾಗಿರಬೇಕು. ಇದಕ್ಕೂ ಮುಂಚೆ ಅವನು ಹತನಾದನೆಂದು ಎಲ್ಲಿಯೂ ಹೇಳಿಲ್ಲ. ೧೧೬೮ರಲ್ಲಿ ಅವನ ಕೊನೆಯ ಶಾಸನವಿರುವುದರಿಂದ ಆಗಲೇ ಅವನು ನಿಧನವಾಗಿರಬೇಕು. ಆಗಲೇ ಕಲ್ಯಾಣಕ್ರಾಂತಿಯಾಯಿತೆಂದು ಇದುವರೆಗೂ ಅನೇಕ ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಇದಕ್ಕೆ ಯಾವ ಶಾಸನದ ಬೆಂಬಲವೂ ಇಲ್ಲ. ೧೧೮೩–೮೪ರಲ್ಲಿ ಕೊನೆಯ ಕಲಚುರಿ ಅರಸ ಸಂಕಮ ಮತ್ತು ಎಲ್ಲಾ ಕಲಚುರಿಗಳು ನಾಶವಾದರೆಂದು ಆ ಕಾಲದ ಅಣ್ಣಿಗೆರೆ ಶಾಸನವು ಹೇಳುತ್ತದೆ. ಸಂಕಮನ

---

೧೪. EL, VI, ಪು. ೯೨

೧೫. SII, XV, ಸಂ. ೫೯

೧೬. ಅದೇ ಶಾಸನದಲ್ಲಿ ೧೭ನೇ ಸಾಲು.

ಕೊನೆಯ ತಮ್ಮ ಸಿಂಘಣ.*[೧೭] ಇವನು ಚಾಳುಕ್ಯರಿಗೆ ಶರಣಾಗತನಾಗಿ ಉಳಿದುಕೊಂಡನು. ಇನ್ನು ಉಳಿದ ಕಲಚುರಿ ಮುಖಂಡ ಬಿಜ್ಜಳ. ಅಣ್ಣಿಗೆರೆ ಶಾಸನವು ಪರಶುರಾಮನನ್ನು ಬಮ್ಮರಸನಿಗೂ, ಅವನ ತಂದೆ ಜಮದಗ್ನಿಯನ್ನು ಕಾವಣನಿಗೂ ಹೋಲಿಸುವುದರಿಂದ ಜಮದಗ್ನಿಯನ್ನು ಕೊಂದ ಕಾರ್ತವೀರಾರ್ಜುನನು ಬೇರೆ ಯಾರು ಅಲ್ಲದೆ ಬಿಜ್ಜಳನು ಮೋಸದಿಂದ ಶತ್ರುಗಳನ್ನು ಕೊಲ್ಲುವುದು ಬಿಜ್ಜಳನು ಮೊದಲಿನಿಂದಲೂ ಮಾಡಿಕೊಂಡು ಬಂದ ಕೆಲಸ. ತನ್ನ ಒಡೆಯರಾದ ಎಲ್ಲಾ ಚಾಳುಕ್ಯರನ್ನು ಸಂಹರಿಸಿದ. ನಾಲ್ಕನೆಯ ಸೋಮೇಶ್ವರನು ಈ ಹತ್ಯಾಕಾಂಡ ನಡೆದಾಗ ಕಲ್ಯಾಣದಲ್ಲಿರಲಿಲ್ಲವಾದ್ದರಿಂದ ಉಳಿದುಕೊಂಡ ತನ್ನನ್ನು ಬಿಟ್ಟು ಉಳಿದ ಎಲ್ಲಾ ಚಾಳುಕ್ಯ ಅರಸುಮನೆತನದವರನ್ನು ನಾಶಮಾಡಿದ ಬಿಜ್ಜಳನನ್ನು ತನ್ನ ಸೇನಾಪತಿ ಮುಖಾಂತರ ನಾಶಮಾಡಿಸಿದ.

ಆದರೆ ಬಿಜ್ಜಳನನ್ನು ಕೊಂದವರು ಜಗದೇವ ಮತ್ತು ಮಲ್ಲೆಬೊಮ್ಮರೆಂದು ನಾವು ಮೊದಲು ನೋಡಿದ್ದೇವೆ. ಈ ಜಂಗಮರಿಗೆ ಒಬ್ಬ ರಾಜನನ್ನು ಕೊಲ್ಲುವ ಶಕ್ತಿ ಎಲ್ಲಿಂದ ಬಂತು. ಆ ಶಕ್ತಿಯೇ ಬಮ್ಮರಸ. ಇವನು ಅವರಿಗೆ ತನ್ನ ಸೈನ್ಯದ ಸಹಾಯವನ್ನು ಕೊಟ್ಟಿರಬೇಕು. ಈ ಸೈನ್ಯದ ನೆರವಿನಿಂದ ಅವರು ಬಿಜ್ಜಳನ ಅರಮನೆಗೆ ಹೋಗಿ ಅವನನ್ನು ಕೊಂದಿರಬೇಕೆಂದು ನನ್ನ ಊಹೆ. ಈ ಕೊಲೆಗಾರರ ಜತೆಗೆ ಗುತ್ತಿಯ ಅರಸ ಮಲ್ಲಿದೇವನು ಇದ್ದಿರಬಹುದು. ಯಾಕೆಂದರೆ ಕುಂಜಾಪುರದ ಶಾಸನದಲ್ಲಿ ಅವನನ್ನು 'ಬಿಜ್ಜಿಗೆ ಶಿರಚ್ಛೇದಕ'ನೆಂದು ಕರೆದಿದೆ.*[೧೮] ಈ ಶಿರಚ್ಛೇದನ ೧೧೬೭–೬೮ರಲ್ಲಿ ಆಗಿರಲಾರದು. ಮೇಲೆ ಹೇಳಿದ ಕಾರಣಗಳಿಂದ ೧೧೮೩–೮೪ರಲ್ಲಿ ಆಗಿರಬೇಕು. ಆದ್ದರಿಂದ ೧೧೮೩–೧೧೮೪ರಲ್ಲಿ ಜಗದೇವ, ಮಲ್ಲೆಬೊಮ್ಮ ಮತ್ತು ಮಲ್ಲಿದೇವರು ಬಮ್ಮರಸನ ಸೈನ್ಯದ ಸಹಾಯದಿಂದ ಬಿಜ್ಜಳನನ್ನು ಕೊಂದಿರಬೇಕು.

■

*೧೭. SII., XV, ನಂ. ೫೮.

*೧೮. SII., IX. ನಂ. ೨೧೭.

೪

ಬಸವಣ್ಣನವರ ಒಂದು ಐತಿಹಾಸಿಕ ವಚನದ ವಿಶ್ಲೇಷಣೆ

ಅರಸು ವಿಚಾರ, ಸಿರಿಯು, ಶೃಂಗಾರ, ಸ್ಥಿರವಲ್ಲ ಮಾನವಾ ಕೆಟ್ಟಿತ್ತು ಕಲ್ಯಾಣ, ಹಾಳಾಯಿತು ನೋಡಾ

ಒಬ್ಬ ಜಂಗಮದ ಅಭಿಮಾನದಿಂದ
ಚಾಳುಕ್ಯರಾಯನ ಆಳಿಕೆ ತೆಗೆಯಿತ್ತು
ಸಂದಿತ್ತು ಕೂಡಲ ಸಂಗಮದೇವ ನಿಮ್ಮ ಕವಳಿಗೆಗೆ.[೧]

ಈ ವಚನದಲ್ಲಿ ಎರಡು ವಿಷಯಗಳಿವೆ. ಮೊದಲನೆಯದು, ಕಲ್ಯಾಣ ಹಾಳಾಗಿದ್ದು. ಅದರಿಂದ ನಾವು ಕಲಿಯತಕ್ಕದ್ದೇನೆಂದರೆ. ಅರಸನ ಅಧಿಕಾರ, ಸಂಪತ್ತು ಮತ್ತು ಸೌಂದರ್ಯಗಳು ಸ್ಥಿರವಲ್ಲ. ಯಾಕೆಂದರೆ ಕಲ್ಯಾಣ ಕ್ರಿ.ಶ. ೧೦೭೬ ರಿಂದ ೧೧೨೬ ರವರೆಗೆ ಆರನೇ ವಿಕ್ರಮಾದಿತ್ಯನ ರಾಜಧಾನಿಯಾಗಿ ಮೆರೆದಿದ್ದನ್ನು ಅವನ ಆಸ್ಥಾನ ಕವಿ ವಿಜ್ಞಾನೇಶ್ವರನು ಅಂತಹ ಪಟ್ಟಣ ಹಿಂದೆ ಇರಲಿಲ್ಲ, ಇಂದಿಲ್ಲ, ಮುಂದೆ ಇರುವುದಿಲ್ಲವೆಂದು ಹೊಗಳಿದ್ದಾನೆ. ಕೇವಲ ೬೦ ವರ್ಷಗಳ ನಂತರ, ವಿಕ್ರಮಾದಿತ್ಯನ ನಂತರ ಆಳಿದ ಅವನ ಮಕ್ಕಳ ಮತ್ತು ನಂತರ ಆಳಿದ ಬಿಜ್ಜಳ ಕಲಚುರಿ ಮತ್ತು ಅವನ ಮಕ್ಕಳ ನಂತರದ ಕಾಲದಲ್ಲಿ ಕಲ್ಯಾಣ ನೆಲಸಮವಾಯಿತು.

ಎರಡನೆಯದಾಗಿ ಕಲ್ಯಾಣ ಮತ್ತು ಚಾಳುಕ್ಯರು ಹೇಗೆ ಹಾಳಾದರೆನ್ನುವುದನ್ನು ಈ ವಚನದಲ್ಲಿ ಹೇಳಿದೆ. ಈ ಪಟ್ಟಣದ ಮತ್ತು ಚಾಳುಕ್ಯರ ಪತನಕ್ಕೆ ಅನೇಕ ಕಾರಣಗಳಿರಬಹುದು. ಇಲ್ಲಿ ಹೇಳಿರುವುದು, ಕೊನೆಯ ಕಾರಣ. ಅದು ಏನೆಂದರೆ, ಒಬ್ಬ ಜಂಗಮದ ಅಭಿಮಾನದಿಂದ ಚಾಳುಕ್ಯರಾಯನ ಆಳಿಕೆ ತೆಗೆಯಿತ್ತು. ಇದರಲ್ಲಿ ಹೇಳಿರುವ ಚಾಳುಕ್ಯರಾಯನು ಯಾರು ಎನ್ನುವ ಪ್ರಶ್ನೆ ಉದ್ಭವಿಸುತ್ತದೆ. ಇದಕ್ಕೆ ಅನೇಕ ಉತ್ತರಗಳನ್ನು ವಿದ್ವಾಂಸರು ಕೊಟ್ಟಿದ್ದಾರೆ. ಗೋವಿಂದ ಪೈ ಮತ್ತು ಪಿ.ಬಿ.

---

೧. ಸಂಖ್ಯೆ ೬೨೫., ಬಸವಣ್ಣನವರ ವಚನ ಸಂಪುಟ. [ಸಂ]., ಎಂ.ಎಂ. ಕಲಬುರ್ಗಿ.

ದೇಸಾಯಿಯವರು ಮೂರನೇ ತೈಲನೆಂದಿದ್ದರೆ, ಎಲ್. ಬಸವರಾಜು ಅವರು ಮೂರನೆ ತೈಲನ ಕಾಲದಲ್ಲಿ ಅಂದರೆ ೧೧೬೨ರಲ್ಲಿ ಅಲ್ಲ, ನಾಲ್ಕನೇ ಸೋಮೇಶ್ವರನ ಕಾಲದಲ್ಲಿ ಅಂದರೆ ೧೧೮೪ರಲ್ಲಿ ಎಂದು ಊಹಿಸಿದ್ದಾರೆ.

ಯಾವ ಚಾಳುಕ್ಯರಾಯನ ಕಾಲದಲ್ಲಿ ಅವರ ಆಳಿಕೆ ತೆಗೆಯಿತ್ತೆಂದು ತಿಳಿದುಕೊಳ್ಳಲು ಬಿಜ್ಜಳನ ಅಂತ್ಯಕಾಲದ ಇತಿಹಾಸವನ್ನು ತಿಳಿದುಕೊಳ್ಳುವುದು ಅವಶ್ಯ. ೧೧೬೭ರಲ್ಲಿ ಬಿಜ್ಜಳನು ರಾಜ್ಯತ್ಯಾಗ ಮಾಡಿ ತನ್ನ ಎರಡನೇ ಮಗ ಸೋವಿದೇವನಿಗೆ ಪಟ್ಟವನ್ನು ಕಟ್ಟಿದನು. ಸೋವಿದೇವ ಮತ್ತು ಅವನ ತಮ್ಮಂದಿರು ೧೧೮೩ – ೮೪ ರವರೆಗೂ ಆಳಿದರು. ಆ ವರ್ಷ ನಾಲ್ಕನೇ ಸೋಮೇಶ್ವರನ ಕಲಚುರಿಗಳನ್ನು ನಾಶಮಾಡಿದನು. ನಾಲ್ಕನೇ ಸೋಮೇಶ್ವರನನ್ನು ಹೊಯ್ಸಳ ಎರಡನೇ ವೀರ ಬಲ್ಲಾಳನು ಸೋಲಿಸಿದನು. ಅವನನ್ನು ಯಾದವ ಅಥವಾ ಸೇವುಣ ಭಿಲ್ಲಮನು ಸೋಲಿಸಿ ಕಲ್ಯಾಣವನ್ನು ಕಿತ್ತುಕೊಂಡನು. ಇದು ಆಗಿದ್ದು ೧೧೮೯ – ೯೦ ರಲ್ಲಿ. ಅಷ್ಟೊತ್ತಿಗೆ ಕಲ್ಯಾಣವು ಅಧೋಗತಿಗೆ ಇಳಿದಿತ್ತು.

ನನ್ನ ಪ್ರಕಾರ ವಚನದಲ್ಲಿ ಹೇಳಿರುವ ಚಾಳುಕ್ಯರಾಯನು ಮೂರನೇ ತೈಲನೂ ಅಥವಾ ಅವನ ಮಗ ನಾಲ್ಕನೆ ಸೋಮೇಶ್ವರನೂ ಅಲ್ಲ, ಬಿಜ್ಜಳನೆ ಆ ಚಾಳುಕ್ಯರಾಯ. ಈ ಅಭಿಪ್ರಾಯಕ್ಕೆ ಪಾಲ್ಕುರಿಕೆ ಸೋಮನಾಥನ ಪಂಡಿತಾರಾಧ್ಯ ಚರಿತ್ರೆಯ ಆಧಾರ. ಆ ಚರಿತ್ರೆಯಲ್ಲಿ[೨] ಒಂದು ಹೇಳಿಕೆಯ ಸಾರಾಂಶ ಹೀಗಿದೆ :

"ಬಿಜ್ಜಳನು ಶಿವಭಕ್ತನಾದ ಹರಳಯ್ಯ ಮತ್ತು ಮಧುವಯ್ಯ ಅವರನ್ನು ಅವರ ತಪ್ಪಿಗಾಗಿ ದಂಡಿಸಲು ನಿಶ್ಚಯಿಸಿದ್ದರಿಂದ ಅವನ ಐಶ್ವರ್ಯವು ಅವನಿಯಲ್ಲಿ ಚಾಳುಕ್ಯ ಎಂಬ ಹೆಸರಿಲ್ಲದಂತೆ, ಕಲ್ಯಾಣ ಕಟಕ ಸಮೇತ ನಾಶವಾಗಲೆಂದು ಬಸವಣ್ಣನವರು ಶಪಿಸಿದರು. ಜಗದೇವ ಮತ್ತು ಮೊಲ್ಲಬೊಮ್ಮಯ್ಯ ಇವರುಗಳು ಬಿಜ್ಜಳನನ್ನು ಕೊಂದರು."

ಬಿಜ್ಜಳನಿಗೆ ಬಸವಣ್ಣನವರು ಕೊಟ್ಟ ಶಾಪ ಮತ್ತು ಅವರ ವಚನ ಎರಡೂ ಒಂದೇ ವಿಷಯಕ್ಕೆ ಸಂಬಂಧಿಸಿವೆ. ಎಲ್ಲಾ ವೀರಶೈವ ಪುರಾಣಗಳು ವಚನಗಳನ್ನು ಮತ್ತು ಪಾರಂಪರಿಕ ಇತಿಹಾಸಗಳನ್ನು ಆಧರಿಸಿವೆ. ಮೇಲಿನ ಹೇಳಿಕೆಯಲ್ಲಿ ಬಿಜ್ಜಳನು ಹರಳಯ್ಯ – ಮಧುವಯ್ಯ – ಇವರನ್ನು ದಂಡಿಸಿದ್ದರಿಂದ ಅವನ ಐಶ್ವರ್ಯವು, ಚಾಳುಕ್ಯವೆನ್ನುವ ಹೆಸರು ಮತ್ತು ರಾಜಧಾನಿ ಕಲ್ಯಾಣ ನಾಶವಾದವೆಂದಿದೆ. ಇದರಲ್ಲಿ ಬಿಜ್ಜಳನ ಅಂತ್ಯ ಮತ್ತು ಚಾಳುಕ್ಯ ವಂಶದ ಅಂತ್ಯ ಒಂದೇ ಎಂದಿದೆ. ಇದಲ್ಲಿ ಬಿಜ್ಜಳನನ್ನು ಕಲಚುರಿವಂಶದವನೆಂದು ಕರೆಯದೆ.

೨. ತೆಲುಗು ವಿಶ್ವವಿದ್ಯಾಲಯ ಪ್ರಕಟಣೆ ಪು. ೨೦೩.

ಚಾಳುಕ್ಯ ವಂಶದವನೆಂದು ಹೇಳಿದೆ. ವೀರಶೈವ ಪುರಾಣಗಳಲ್ಲಿ ಎಲ್ಲಿಯೂ ಬಿಜ್ಜಳನನ್ನು ಕಲಚುರಿ ವಂಶದವನೆಂದು ಕರೆದಿಲ್ಲ, ಚಾಳುಕ್ಯ ವಂಶದವನೇ ಎಂದು ಹೇಳಿದೆ. ಬಹುಶಃ ಪುರಾಣಗಳನ್ನು ಬರೆಯುವಾಗ ಎರಡೂ ವಂಶಗಳ ವ್ಯತ್ಯಾಸ ಗೊತ್ತಿಲ್ಲದೆ, ಎರಡೂ ಒಂದೇ ಎಂದು ಹೀಗೆ ಬರೆದಿರಬಹುದು. ಅಥವಾ ಬಿಜ್ಜಳ ಆರನೇ ವಿಕ್ರಮಾದಿತ್ಯನ ಮಗಳ ಮಗ ಮತ್ತು ಮೂರನೇ ತೈಲಪ ಮಗನ ಮಗ. ಆದ್ದರಿಂದ ಇಬ್ಬರೂ ಒಂದೇ ಅಂದರೆ ಚಾಳುಕ್ಯ ಮನೆತನದವರೆಂದು ಪೌರಾಣಿಕರು ಅಂದುಕೊಂಡಿರಬಹುದು. ಏನೇ ಆದರೂ ಬಿಜ್ಜಳ ಕಲಚುರಿವಂಶದವನೆಂದು ಒಂದು ಪುರಾಣವೂ ಹೇಳಿಲ್ಲ. ಆದ್ದರಿಂದ ಬಸವಣ್ಣನವರು ಬಿಜ್ಜಳನ ರಾಜ್ಯವನ್ನು ಚಾಳುಕ್ಯ ರಾಜ್ಯವೆಂದು ಕರೆದಿದ್ದಾರೆ. ಮುಂದೆ ಇದೇ ಶಾಸನದಲ್ಲಿ ಜಗದೇವಮಲ್ಲ ಬೊಮ್ಮಯ್ಯಗಳು ಕೊಂದರೆಂದೂ ಹೇಳಿದೆ. ಅವರು ಹಾಗೆ ಮಾಡಲು ಕಾರಣವನ್ನು ವಚನದಲ್ಲಿ ಜಂಗಮದ ಅಭಿಮಾನದಿಂದವೆಂದು ಹೇಳಿದೆ. ಹೀಗೆ ವಚನ ಮತ್ತು ಪಂಡಿತಾರಾಧ್ಯ ಚರಿತ್ರೆ ಒಂದಕ್ಕೊಂದು ಪೂರಕವಾಗಿವೆ. ಈ ಎರಡೂ ಆಧಾರಗಳಿಂದ ಚಾಳುಕ್ಯ ಅಂದರೆ ಕಲಚುರಿ ಎಂದೂ ಮತ್ತು ಜಂಗಮದ ಅಭಿಮಾನವು ಚಾಳುಕ್ಯರಾಯನ ಆಳಿಕೆ ತೆಗೆದುದರ ಕಾರಣವೆಂದೂ ಸ್ಪಷ್ಟವಾಗಿ ಹೇಳಿದೆ. ಜಗದೇವ ಮೊಲ್ಲಬೊಮ್ಮಯ್ಯಗಳು ಜಂಗಮದ ಅಂದರೆ ಬಸವಣ್ಣನವರ ಮೇಲಿನ ಅಭಿಮಾನದಿಂದ ಬಿಜ್ಜಳನನ್ನು ಕೊಂದರು. ಹಾಗೆ ಕೊಂದದ್ದರಿಂದ ಚಾಳುಕ್ಯರಾಯನ ಅಂದರೆ ಬಿಜ್ಜಳನ ಆಳಿಕೆ ಮುಗಿಯಿತು. ಹೀಗೆ ಅರ್ಥ ಮಾಡಬೇಕೆಂದು ನನ್ನ ಅಭಿಪ್ರಾಯ.

ಎಲ್. ಬಸವರಾಜು ಅವರು[೩] ಈ ವಚನದಲ್ಲಿರುವ ಚಾಳುಕ್ಯರಾಯ, ನಾಲ್ಕನೇ ಸೋಮೇಶ್ವರ (೧೧೮೩–೮೭) ಅವನ ಆಳಿಕೆ ಮುಗಿದಿದ್ದು ೧೧೮೭. ಅದಕ್ಕೆ ಕಾರಣ ಅವನನ್ನು ಹೊಯ್ಸಳ ಎರಡನೇ ವೀರಬಲ್ಲಾಳ ಸೋಲಿಸಿ ಪದಚ್ಯುತನನ್ನಾಗಿ ಮಾಡಿದ. ಅಲ್ಲಿಯವರೆಗೂ ಬಸವಣ್ಣನವರು ಜೀವಂತವಿದ್ದರು. ಆಗ ಕಲ್ಯಾಣ ಹಾಳಾಗಿರಲಿಲ್ಲ. ಸೇವುಣ ಭಿಲ್ಲಮನು ಹೊಯ್ಸಳ ವೀರಬಲ್ಲಾಳನನ್ನು ಸೋಲಿಸಿ ಕಲ್ಯಾಣವನ್ನು ಗೆದ್ದ. ಅಲ್ಲಿಂದ "ಕಲ್ಯಾಣದ ಜೀವಕಳೆಗೆ ಇತಿಶ್ರೀಯಾಗಿರಬೇಕೆಂದು ಗೋವಿಂದ ಪೈಗಳು (ಮೂರು ಉಪನ್ಯಾಸಗಳು. ಪು – ೭೩) ಊಹಿಸಿರುವುದು ನಿಜವಾದರೆ ಕಲ್ಯಾಣ ಹಾಳಾದುದು ಕ್ರಿ.ಶ. ಸುಮಾರು ೧೧೮೭–೯೧ರ ಮಧ್ಯಂತರದಲ್ಲಿ. ಕನಿಷ್ಠ ಪಕ್ಷ ಅಲ್ಲಿಯವರೆಗಾದರೂ ಬಸವಣ್ಣನವರು ಬದುಕಿದ್ದರು. ಹೀಗಾಗಿ ಚಾಳುಕ್ಯರಾಯನ ಆಳ್ವಿಕೆ ಮುಗಿದ ಮತ್ತು ಕಲ್ಯಾಣ ಹಾಳಾದ ಮಾತಿರುವ

---

೩. ಬಸವಣ್ಣನವರ ಷಟ್ಸ್ಥಲದ ವಚನಗಳು. ಪು. ೨೧೮

ಈ ವಚನ - ಬಸವಣ್ಣನವರು ಭಂಡಾರಿ ಪದವಿಯಿಂದ ನಿವೃತ್ತರಾಗಿ ಕೂಡಲ ಸಂಗಮಕ್ಕೆ ಹೋಗಿ ಅಲ್ಲಿ ನೆಲೆಸಿದ್ದ ಕಾಲಕ್ಕೆ ಬರೆದುದಾಗಿರಬೇಕು."

ಬಸವರಾಜು ಅವರು ಜಂಗಮದ ಅಭಿಮಾನದಿಂದ ಕಲ್ಯಾಣ ಹಾಳಾಯಿತೆಂದು ಹೇಳುವುದಿಲ್ಲ. ಅವರ ಪ್ರಕಾರ ಕಲ್ಯಾಣ ಹಾಳಾಗಿದ್ದು, ಸೇವುಣ ಭಿಲ್ಲಮನು ಅದನ್ನು ವಶಪಡಿಸಿಕೊಂಡಂದಿನಿಂದ ಅದರ ಜೀವಕಳೆಗೆ ಇತಿಶ್ರೀಯಾಯಿತೆನ್ನುವುದನ್ನು ಒಪ್ಪಿಕೊಂಡಿದ್ದಾರೆ. ಹೀಗೆ ಹೇಳುವುದರಿಂದ ಅವರ ಪ್ರಕಾರ ಕಲ್ಯಾಣ ಹಾಳಾಗಿದ್ದು ೧೧೮೭-೧೯೧. ನನ್ನ ಪ್ರಕಾರ ೧೧೮೩-೧೧೮೪. ಕಾಲದ ಬಗ್ಗೆ ನಮ್ಮಿಬ್ಬರಲ್ಲಿ ಭಾರೀ ವ್ಯತ್ಯಾಸವಿಲ್ಲ. ಅವರು ಬಸವಣ್ಣನವರು ೧೧೯೬ರವರೆಗು ಜೀವಿಸಿದ್ದರೆನ್ನುತ್ತಾರೆ. ನಾವು ಕಲ್ಯಾಣಕ್ರಾಂತಿ ಆಗಿದ್ದು ೧೧೮೩-೮೪; ಬಸವಣ್ಣನವರು ಐಕ್ಯವಾಗಿದ್ದು ೧೧೮೫-೮೬ ಎಂದು ವಾದಿಸಿದ್ದೇನೆ. ಬಿಜ್ಜಳನ ಸಂತತಿ ೧೧೮೩-೮೪ರಲ್ಲಿ ಮುಗಿದ ಕೂಡಲೇ ಕಲ್ಯಾಣದ ಇತಿಹಾಸ ಮುಗಿಯಿತು. ಬಸವರಾಜು ಅವರು ಹೇಳಿದ ಹಾಗೆ ಸೇವುಣರು ಅದನ್ನು ೧೧೮೭-೯೧ರಲ್ಲಿ ಗೆಲ್ಲುವ ಹೊತ್ತಿಗೆ ಅದರ ನಾಶವಾಗಿ ಹೋಗಿತ್ತು.

ನಾನು ಕಳೆದ ಸಮ್ಮೇಳನದಲ್ಲಿ ಹೇಳಿದಂತೆ ನಾಲ್ಕನೇ ಸೋಮೇಶ್ವರ ಸೇನಾಪತಿ ಬಮ್ಮರಸನೂ ಬಿಜ್ಜಳನ ಕೊಲೆಗೆ ಕಾರಣ. ಅದೇ ಸಮ್ಮೇಳನದಲ್ಲಿ ಬಿಜ್ಜಳ ಮತ್ತು ಬಮ್ಮರಸರ ನಡುವೆ ವೈಮನಸ್ಸಿನ ಕಾರಣ, ಬಿಜ್ಜಳ ಬಮ್ಮರಸನ ತಂದೆ ಕಾವಣನನ್ನು ಕೊಂದದ್ದು ಎಂದು ಹೇಳಿದ್ದೇನೆ. ಪ್ರಸ್ತುತ ವಚನ ಮತ್ತು ಬಸವಣ್ಣನವರ ಶಾಪ ಇವೆರಡರಿಂದ ಜಗದೇವ ಜಂಗಮದ ಅಭಿಮಾನದಿಂದ ಕೊಂದನೆಂದು ಹೇಳಿರಬಹುದು. ನನ್ನ ತರ್ಕವೇನೆಂದರೆ ಜಗದೇವನೊಬ್ಬನಿಂದಲೇ ಅಥವಾ ಜಗದೇವಮೊಲ್ಲಬೊಮ್ಮಯರಿಂದ ಬಿಜ್ಜಳನ ಕೊಲೆ ಸಾಧ್ಯವಾಗುತ್ತಿರಲಿಲ್ಲ. ಅವರಿಗೆ ಬಮ್ಮರಸನ ಸೈನ್ಯ ಬಲದ ಬೆಂಬಲದಿಂದ ಸಾಧ್ಯವಾಗಿರಬೇಕು. ಆದ್ದರಿಂದ ಕಲ್ಯಾಣ ಕ್ರಾಂತಿಯಾಗಿದ್ದು ೧೧೮೩-೮೪ ರಲ್ಲಿ. ಹೀಗೆ ವಚನ ಮತ್ತು ಪುರಾಣಗಳು ಹೇಳುವ ಹಾಗೆ ಜಗದೇವ ಅವರು ಜಂಗಮದ ಅಭಿಮಾನಕ್ಕೆ ಮತ್ತು ಬಮ್ಮರಸ ಚಾಲುಕ್ಯ ರಾಜ್ಯ ಸ್ಥಾಪನೆಗೆ ಮತ್ತು ಸೇಡನ್ನು ತೀರಿಸಿಕೊಳ್ಳಲಿಕ್ಕೆ ಬಿಜ್ಜಳನನ್ನು ಮುಗಿಸಬೇಕಾಗಿತ್ತು. ಹೀಗಾಗಿದ್ದನ್ನು ಪುರಾಣಗಳು ಬಸವಣ್ಣನವರ ಶಾಪದಿಂದ ಆಯಿತೆಂದಿವೆ.

ಗೋವಿಂದ ಪೈಯವರು ವಚನದಲ್ಲಿ ಹೇಳಿರುವ ಚಾಲುಕ್ಯರಾಯ ಮೂರನೇ ತೈಲನಿರಬೇಕೆನ್ನುತ್ತಾರೆ. ಜಂಗಮದ ಅಭಿಮಾನವೆನ್ನುವುದಕ್ಕೆ ಜಂಗಮರನ್ನು ಹಿಂಸಿಸಿದುದಕ್ಕೆ ಎಂದು ಅರ್ಥೈಸಿದ್ದಾರೆ. ಮೂರನೆ ತೈಲ ಜಂಗಮರನ್ನು ಹಿಂಸಿಸಿದ. ಕೋಶದಲ್ಲಿ ಅಭಿಮಾನವೆಂದರೆ ಹಿಂಸಿಸು ಎಂದೂ ಇದೆ. ಇವರು ಈ ಅರ್ಥವನ್ನು

ಒಪ್ಪಿಕೊಂಡು ಮೂರನೇ ತೈಲ ಜಂಗಮರನ್ನು ಹಿಂಸಿಸಿದನು. ಆದ್ದರಿಂದ ಬಸವಣ್ಣನನಿಗೆ ಇದನ್ನು ಸಹಿಸಲಾಗಲಿಲ್ಲ. ಸಹಜವಾಗಿ ಅವರು ಮೂರನೇ ತೈಲನ ವಿರುದ್ಧವಾದರು. ಬಿಜ್ಜಳನಿಗೆ ಮೂರನೇ ತೈಲನನ್ನು ಮನೆಗೆ ಕಳಿಸಿ ಅವನ ಸಿಂಹಾಸನವನ್ನು ಆಕ್ರಮಿಸಬೇಕಾಗಿತ್ತು. ಆದ್ದರಿಂದ ಬಿಜ್ಜಳ ಮತ್ತು ಬಸವಣ್ಣನವರು ಸೇರಿ ಮೂರನೇ ತೈಲನನ್ನು ಪದಚ್ಯುತ ಮಾಡಿದರೆಂದು ವಾದಿಸಿದ್ದಾರೆ. ಈ ವಾದವನ್ನು ನಂಬಲಸಾಧ್ಯ. ಯಾಕೆಂದರೆ ಮೂರನೇ ತೈಲ ಜಂಗಮವನ್ನು ಹಿಂಸಿಸಿದ್ದಕ್ಕೆ ಪುರಾವೆ ಇಲ್ಲ. ಅದಲ್ಲದೆ ಬಸವಣ್ಣನವರು ಇನ್ನೊಬ್ಬರ ಕೊಲೆಗೆ ಸಮ್ಮತಿಸಿದರೆಂದು ಹೇಳುವುದು ಅವರ ತತ್ವಕ್ಕೆ ವಿರೋಧವಾದದ್ದು.

ಪಿ.ಬಿ. ದೇಸಾಯಿಯವರು, ವಚನದಲ್ಲಿರುವ ಚಾಳುಕ್ಯರಾಯ, ಪೈ ಅವರು ಹೇಳಿದಹಾಗೆ ಮೂರನೇ ತೈಲನೇ ಎಂದು ಹೇಳುತ್ತಾರೆ. ಇವರ ಪ್ರಕಾರ ಬಿಜ್ಜಳನು ಹಳೇ ತರಹ ಶೈವ. ಅವನಿಗೆ ಹೊಸ ಶಿವಭಕ್ತರು ಅಥವಾ ಹೊಸ ಶೈವರು ಸೇರುತ್ತಿದ್ದಿಲ್ಲ. ಆದರೆ ಚಾಳುಕ್ಯರು ಮತೀಯ ವಿಷಯದಲ್ಲಿ ಉದಾರರು. ಮೂರನೇ ತೈಲನು ಇತರ ಚಾಳುಕ್ಯ ರಾಜರಂತೆ ಎಲ್ಲಾ ಮತಗಳನ್ನು ಪ್ರೋತ್ಸಾಹಿಸಿದನು ಮತ್ತು ನೂತನ ಶಿವಭಕ್ತರನ್ನು ಅಥವಾ ಜಂಗಮರನ್ನು ಅಭಿಮಾನದಿಂದ ನೋಡಿದನು. ಮೂರನೇ ತೈಲನು ಜಂಗಮರನ್ನು ಅಭಿಮಾನದಿಂದ ನೋಡಿದ್ದು ಅವನನ್ನು ತೆಗೆದು ಹಾಕಲು ಬಿಜ್ಜಳನಿಗೆ ಇನ್ನೂ ಒಂದು ಕಾರಣವು ಸಿಕ್ಕಿತ್ತು. ಆದ್ದರಿಂದ ಬಿಜ್ಜಳನು ಅವನನ್ನು ಬದಿಗೊತ್ತಿ ಅವನ ಸ್ಥಾನಕ್ಕೆ ೧೧೬೨ರಲ್ಲಿ ಬಂದನು. ೧೧೬೮ರಲ್ಲಿ ಬಸವಣ್ಣನ ಅನುಯಾಯಿಗಳು ಬಿಜ್ಜಳನನ್ನು ಕೊಂದರು. ದೇಸಾಯಿಯವರ ಈ ಅಭಿಪ್ರಾಯಕ್ಕೆ ೧೧೬೮ರಲ್ಲಿ ಬಿಜ್ಜಳನ ಕೊಲೆಯಾಯಿತೆನ್ನುವುದಕ್ಕೆ ಯಾವ ಆಧಾರವು ಇಲ್ಲ. ೧೧೮೩-೮೪ರಲ್ಲಿ ಇದು ಆದುದಕ್ಕೆ ಅನೇಕ ಪುರಾವೆಗಳನ್ನು ನಾನು ತೋರಿಸಿದ್ದೇನೆ ಮತ್ತು ಮೂರನೇತೈಲನಿಗೆ ಹೊಸಶೈವರು ಅಥವಾ ಶಿವಭಕ್ತರ ಬಗ್ಗೆ ಅಭಿಮಾನ ಇತ್ತೆನ್ನುವುದು ಸಂಶಯಾಸ್ಪದ.

ಗೋವಿಂದ ಪೈಗಳು ಮೂರನೆ ತೈಲ ಜಂಗಮರನ್ನು ಹಿಂಸಿಸಿದನೆಂದು ಹೇಳಿದರೆ, ದೇಸಾಯಿಯವರು ಮೂರನೇ ತೈಲ ಜಂಗಮರನ್ನು ಅಭಿಮಾನದಿಂದ

---

4. P.B. Desai., Basaveshwara and his times, p. 154 : The Virasaiva Puranas.... except in rare instances do not specify the Kalachuri dynasty of Bijjala who is generally described as if he belonged to the Chalukya house. ಪಂಡಿತಾರಾಧ್ಯ, ಚರಿತ, ಮಹಿಮಾಪ್ರಕರಣ, ಪು. ೧೮೯ - ೧೯೦.

ಪ್ರೋತ್ಸಾಹಿಸಿದನೆಂದು ಅಭಿಪ್ರಾಯ ಪಡುತ್ತಾರೆ. ಇಬ್ಬರೂ ಅವರು ಹೇಳುವ ಕಾರಣಗಳಿಂದ ಬಿಜ್ಜಳನ ಕೊಲೆ ೧೧೬೦ ರ ದಶಕದಲ್ಲಿ ಆಯಿತೆನ್ನುತ್ತಾರೆ. ಆದರೆ ಆಗ ವಚನ ಹೇಳಿದ ಹಾಗೆ ಚಾಳುಕ್ಯ ರಾಯನ ಅಥವಾ ಬಿಜ್ಜಳನ ಆಳಿಕೆ ತೆಗೆಯಲಿಲ್ಲ. ಅದು ತೆಗೆದದ್ದು ೧೧೮೩-೮೪ರಲ್ಲಿ. ಈ ಅಭಿಪ್ರಾಯವನ್ನು ವಚನ, ಬಸವಣ್ಣನವರ ಶಾಪ ಮತ್ತು ಅಣ್ಣಿಗೆರೆಯ ಆತೇಪಿಯ ಶಾಸನ ಅನುಮೋದಿಸುತ್ತವೆ.

■

---

5. Sri Chilakuri Narayana Rao writes in the introduction "Bijjala had insulted Virasaiva devotees (names given). Basava cursed that the Chalukyas with their capital and kingdom would get destroyed. Basava Purana says that Basava saw this happen before his death. ಕೊನೆಯ ವಾಕ್ಯದಿಂದ ಬಸವಣ್ಣನವರು ತಮ್ಮ ಶಾಪ ಸತ್ಯವಾದುದನ್ನು ಅಂದರೆ ಬಿಜ್ಜಳ ಸತ್ತದ್ದನ್ನು ನೋಡಿ ಐಕ್ಯವಾದರು. ಅಂದರೆ ಬಿಜ್ಜಳನ ಅಂತ್ಯ ನಾನು ಹೇಳಿದ ಹಾಗೆ ೧೧೮೩-೮೪ನಲ್ಲಿ ಆಗಿದ್ದರೆ, ಅವರು ಐಕ್ಯರಾಗಿದ್ದು ೧೧೮೫-೮೬ನಲ್ಲಿ ಎಂದು ಹೇಳಬಹುದು.

೬. ಮೇಲಿನ ಮೊದಲಿನ ಟಿಪ್ಪಣಿಗೆ ಪೂರಕವಾಗಿ ಪಿ.ಬಿ. ದೇಸಾಯಿಯವರ ಪುಸ್ತಕದ ೨೪೭ನೇ ಪುಟದಲ್ಲಿ ಹೀಗಿದೆ.
These Writers (authors of Veerasaiva Puranas) whenever they refer to his family mention it as Chalukya only. Singiraja, in one place describes Bijjala as a scion of the Chalukya Kalachuri house and in another place explicitly addressed him as lord of the Kalachuri house.

೫

ಕರ್ನಾಟಕದ ಕಲಚುರಿಗಳು : ಒಂದು ಟಿಪ್ಪಣಿ

ಈ ಕಲಚುರಿಗಳಿಗೆ ಕಲ್ಯಾಣದ ಕಲಚುರಿಗಳೆಂದು ಕರೆಯುವುದು ರೂಢಿ ಅತ್ಯಲ್ಪ ಕಾಲ ಇವರ ರಾಜಧಾನಿಯಾಗಿದ್ದ ಕಲ್ಯಾಣದ ಹೆಸರನ್ನು ಈ ಮನೆತನಕ್ಕೆ ಅಂಟಿಸುವುದು ಅಷ್ಟು ಸರಿಯಾಗಲಾರದು. ಉತ್ತರದಲ್ಲಿ ಆಳಿದ ಕಲಚುರಿಗಳು ಕೇವಲ ಕಲಚುರಿಗಳು ಎಂಬುದಾಗಿ ನಿರ್ದೇಶಗೊಂಡಿದ್ದಾರೆ. ಆದ್ದರಿಂದ ಅವರಿಗಿಂತ ಇವರು ಭಿನ್ನವೆಂದು ತೋರಿಸಲಿಕ್ಕೆ ಇವರನ್ನು ದಕ್ಷಿಣದ ಕಲಚುರಿಗಳು ಅಥವಾ ಕರ್ನಾಟಕದಲ್ಲಿ ಮಾತ್ರ ಆಳಿದ್ದರಿಂದ ಕರ್ನಾಟಕದ ಕಲಚುರಿಗಳು ಎಂದು ಕರೆಯುವುದು ಯುಕ್ತವೆನಿಸುತ್ತದೆ. ಕರ್ನಾಟಕದ ಕಲಚುರಿಗಳ ಪ್ರಶಸ್ತಿಯಲ್ಲಿ ಪದೇ ಪದೇ ಕಾಣಿಸಿಕೊಳ್ಳುವ ಕಾಲಂಜರಪುರವರಾಧೀಶ್ವರ ಎಂಬ ಇವರ ಬಿರುದಿನಿಂದ ಇವರ ಮೂಲಸ್ಥಾನ ಮಧ್ಯಭಾರತವೆಂಬುದು ಸಿದ್ಧವಾಗುತ್ತದೆ. ಒಂಬತ್ತನೆಯ ಶತಮಾನದಲ್ಲಿ ಉತ್ತರದಲ್ಲಿ ತಮ್ಮ ರಾಜ್ಯವನ್ನು ಕಳೆದುಕೊಂಡ ಕಲಚುರಿಗಳಲ್ಲಿ ಕೆಲವರು ದಕ್ಷಿಣಕ್ಕೆ ಬಂದು ಕರ್ನಾಟಕದಲ್ಲಿ ನೆಲೆಸಿದರು. ಇವರು ನೆಲೆಸಿದ್ದು ತರಿಕಾಡುನಾಡಿನಲ್ಲಿ, ಮಂಗಳವೇಡೆ ಇವರ ಮುಖ್ಯಪಟ್ಟಣವಾಯಿತು. ಹತ್ತನೆಯ ಶತಮಾನದ ಆದಿಯಲ್ಲಿ ಉಜಿತನೆಂಬವನಿಂದ ಈ ಕರ್ನಾಟಕ ಕಲಚುರಿಗಳ ವಂಶ ಆರಂಭವಾಯಿತು. ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಆ ಚಕ್ರಾಧಿಪತ್ಯ ಬೆಳೆದ ಹಾಗೆ ಅವರ ಈ ಸಾಮಂತರ ಬಲವೂ ಬೆಳೆಯಿತು. ಆರನೆಯ ವಿಕ್ರಮಾದಿತ್ಯನ ಕಾಲಕ್ಕೆ ಕಲಚುರಿಗಳು ಎಷ್ಟು ಬಲಿಷ್ಠರಾದರೆಂದರೆ ಆ ಕಾಲದ ಕಲಚುರಿ ಸಾಮಂತ ಜೋಗಮನು ತನ್ನ ಮಗಳು ಚಂದಲದೇವಿಯನ್ನು ವಿಕ್ರಮಾದಿತ್ಯನಿಗೆ ಕೊಟ್ಟನು. ಮುಂದೆ ಚಂದಲದೇವಿ-ವಿಕ್ರಮಾದಿತ್ಯರ ಮಗಳನ್ನು ಜೋಗಮನ ಮಗ ಪೆರ್ಮಾಡಿಯು ಮದುವೆಯಾದನು. ಈ ಚಾಲುಕ್ಯ ರಾಜಪುತ್ರಿ ಮತ್ತು ಪೆರ್ಮಾಡಿಯರ ಮಗ ಬಿಜ್ಜಳ. ಬಿಜ್ಜಳನು ಚಾಲುಕ್ಯ ಸಿಂಹಾಸನಕ್ಕೆ ವಾರಸುದಾರನಂತೆ ವರ್ತಿಸುವುದನ್ನು ನಾವು ಸುಲಭವಾಗಿ ಊಹಿಸಬಹುದು.

ವೀರನಿಗೆ ಸಿರಿ ಎಂಬುದು ಬಿಜ್ಜಳನ ರಾಜನೀತಿಯ ಮುಖ್ಯತಂತ್ರ. ಅವನು

ಎಷ್ಟು ಬಲಾಢ್ಯನಾಗಿದ್ದನೊ ಚಾಲುಕ್ಯ ಮೂರನೆಯ ತೈಲಪ ಅಷ್ಟು ಸಾಮಾನ್ಯನಾಗಿದ್ದ. ಬಿಜ್ಜಳನ ಮಹತ್ವಾಕಾಂಕ್ಷೆ ಈಡೇರುವುದಕ್ಕೆ ಆಗಿನ ಕಾಲದ ಮತಕ್ರಾಂತಿಯು ನೆರವಾಗಿರಬೇಕೆಂಬ ಊಹೆಯೂ ಇದೆ. ಬಸವೇಶ್ವರನ ವಚನವೊಂದರಲ್ಲಿ ಬರುವ "ಕಟ್ಟಿತ್ತು ಕಲ್ಯಾಣ ಹಾಳಾಯ್ತು ನೋಡಯ್ಯ-ಒಬ್ಬ ಜಂಗಮದಭಿಮಾನದಿಂದ ಚಾಳುಕ್ಯರಾಯನ ಆಳಿಕೆ ತೆಗೆಯಿತ್ತು." ಈ ಸಾಲುಗಳು ಮತ್ತು ಇತರ ಆಧಾರಗಳಿಂದ ರಾಜ್ಯಕ್ರಾಂತಿ ಹೀಗೆ ನಡೆದಿರಬಹುದೆಂದು ಭಾವಿಸಬಹುದು. ಬಿಜ್ಜಳನಿಗೂ ಆತನ ಆಶ್ರಯದಲ್ಲಿದ್ದ ಬಸವೇಶ್ವರನಿಗೂ ಎಲ್ಲರಿಗೂ ತಿಳಿದಿರುವಂತೆ ಭಿನ್ನ ಮತಾಭಿಮಾನದ ಮೂಲಕ ಹಗೆತನ ಉಂಟಾಯಿತು. ಇನ್ನು ಮುಂದೆ ಬಿಜ್ಜಳನ ಓಲಗದಲ್ಲಿ ಮುಂದುವರಿಯುವುದು ಆಯುಕ್ತವೆಂದು ಬಸವೇಶ್ವರನು ಮಂಗಳವಾಡದಿಂದ ಕಲ್ಯಾಣಕ್ಕೆ ಬಂದಿರಬೇಕು. ಅಲ್ಲಿ ಮುಮ್ಮಡಿ ತೈಲಪನ ಮುಂದೆ ಬಿಜ್ಜಳನ ವಿರುದ್ಧವಾಗಿ ಆತನು ವೀರಶೈವರಿಗೆ ಕೊಡುತ್ತಿದ್ದ ಹಿಂಸೆಯ ಬಗೆಗೆ ದೂರಿಕೊಂಡಿರಬೇಕು. ಈ ಹೊತ್ತಿಗೆ ಬಿಜ್ಜಳನ ಚಟುವಟಿಕೆಗಳಿಂದ ಬೇಸತ್ತ ತೈಲಪನು ಈ ಸಂಧಿಯನ್ನು ಕಳೆದುಕೊಳ್ಳಬಾರದೆಂದು ಆಲೋಚಿಸಿ ಬಸವೇಶ್ವರನ ಮತ್ತು ಶಿವಭಕ್ತ ಜಂಗಮರ ಅಭಿಮಾನ ಹಿಡಿದು ಅವನನ್ನು ದಂಡಿಸಲು ಹೊರಟಿರಬೇಕು. ಬಿಜ್ಜಳನಾದರೂ ಇಂತಹ ಅವಕಾಶಕ್ಕೆ ಕಾದುಕೊಂಡಿರಬೇಕು. ಮುಂದೆ ನಡೆದ ಕದನದಲ್ಲಿ ತೈಲಪನು ಹತವಾಗಿರಬೇಕು. ಆತನ ರಾಜಧಾನಿ ಬಿಜ್ಜಳನ ರಾಜಧಾನಿ ಆಗಿರಬೇಕು. ಅಲ್ಲಿ ನಡೆದ ಕದನದಿಂದ ಕೆಲಕಾಲ ಹಾಳಾಗಿದ್ದಾಗ ಮೇಲೆ ಉದ್ಧರಿಸಿದ ವಚನವನ್ನು ಬಸವೇಶ್ವರನು ಬರೆದಿರಬೇಕು.

ಆದರೆ ಅನ್ಯಾಯದಿಂದ ಗಳಿಸಿದ ಬಿಜ್ಜಳನ ರಾಜ್ಯದಿಂದ ಯಾರಿಗೂ ಹಿತವಾಗಲಿಲ್ಲ. ಸ್ವತಃ ಬಿಜ್ಜಳನಿಗೂ ಹಿತವಾಗಲಿಲ್ಲ. ಆತನು ಬಸವೇಶ್ವರನ ಅನುಯಾಯಿಗಳ ಮತ್ತು ಚಾಲುಕ್ಯರ ಪರವಾಗಿದ್ದ ಸಾಮಂತರ ದ್ವೇಷವನ್ನು ಎದುರಿಸಬೇಕಾಯಿತು. ಎದುರಿಸುವಲ್ಲಿ ಅಷ್ಟೇನು ಯಶಸ್ವಿಯಾಗಿರಲಿಕ್ಕಿಲ್ಲ. ೫-೬ ವರ್ಷಗಳ ನಂತರ ಪರಿಸ್ಥಿತಿ ಸುಧಾರಿಸದಿರಲು ರಾಜ್ಯತ್ಯಾಗ ಮಾಡಬೇಕಾಯಿತು. ಮುಂದೆ ಸ್ವಲ್ಪ ಕಾಲದಲ್ಲಿಯೆ, ವೀರಶೈವಪುರಾಣಗಳು ಹೇಳುವಂತೆ, ವೀರಶೈವ ಭಕ್ತರಿಂದ ಬಿಜ್ಜಳನು ಹತನಾಗಿರಬೇಕು. ಬಿಜ್ಜಳನ ನಂತರ ಬಂದ ಅವನ ಸಂತತಿಯವರು ಕಲ್ಯಾಣದಲ್ಲಿ ಬಹಳ ವರ್ಷ ಆಳಲಿಲ್ಲ. ಈ ರಾಜ್ಯಕ್ರಾಂತಿಯಾಗಿದ್ದು ೧೧೬೨ರಲ್ಲಿ. ಅದರ ಪ್ರತಿಕ್ರಾಂತಿಯಾಗಿದ್ದು ೧೧೮೪ರಲ್ಲಿ. ಆಗ ಚಾಲುಕ್ಯ ರಾಜ್ಯ ಪುನಃಪ್ರತಿಷ್ಠಾಪನೆಯಾಯಿತು.

ಬಿಜ್ಜಳ ಮತ್ತು ಬಸವೇಶ್ವರ ಮೂಲಕ ಉಂಟಾದ ರಾಜಕೀಯ ಮತ್ತು ಮತೀಯ ಆಂದೋಲನಗಳ ಪರಿಣಾಮಗಳಿಂದ ಧರ್ಮ ಮತ್ತು ಸಾಹಿತ್ಯ ಈ

ಎರಡು ಕ್ಷೇತ್ರಗಳಲ್ಲಿ ಹಲವಾರು ಕವಲುದಾರಿಗಳಿಗೆ ಅವಕಾಶವನ್ನು ಕಲ್ಪಿಸಿ ಕೊಡುವ ಸಂಕ್ರಮಣ ಕಾಲವಾಯಿತೆಂದು ಹಲವಾರು ವಿದ್ವಾಂಸರು ಎತ್ತಿ ತೋರಿಸಿದ್ದಾರೆ. ಈ ಕಾಲದಲ್ಲಿ ಶೈವಮತದಲ್ಲಿ ಕಾಶ್ಮೀರಶೈವ, ಪಾಶುಪತ ಮತ್ತು ಅದ್ವೈತಶೈವ ಎಂಬ ಪ್ರಭೇದಗಳಿದ್ದವು. ಈ ಪಂಥಗಳ ಜತೆಗೆ ಶಕ್ತಿಪ್ರಧಾನ ಅಥವಾ ತಾಂತ್ರಿಕಶೈವ ಮತವೂ ಕರ್ನಾಟಕದಲ್ಲಿ ಪ್ರಬಲವಾಗತೊಡಗಿತೆನ್ನುವುದನ್ನು ಇಲ್ಲಿ ವ್ಯಕ್ತಪಡಿಸಬಹುದು.

■

೭

ವಿಜಯನಗರ ಸಾಮ್ರಾಜ್ಯ ಸ್ಥಾಪನೆ

ವಿಜಯನಗರ ಸಾಮ್ರಾಜ್ಯ ಸ್ಥಾಪಕರು ತೆಲುಗರು ಅಲ್ಲದಿದ್ದರೂ ತೆಲುಗು ಾದವಲ್ಲಿ ಎರಡು ಅಂಶಗಳಿಗೆ ಇತ್ತೀಚಿಗಿನ ಸಂಶೋಧನೆಯಿಂದ ಬೆಂಬಲ ುಕ್ಕಿರುವುದನ್ನು ತೋರಿಸುವುದು ಈ ಲೇಖನದ ಉದ್ದೇಶ. ಈ ಅಂಶಗಳು: ೧) ಸಂಗಮ ಸೋದರರು ಕಾಕತೀಯರ ಆಸ್ಥಾನದಲ್ಲಿ ಭಂಡಾರಿಗಳಾಗಿದ್ದರು. ೨) ಹೊಯ್ಸಳ–ಸಂಗಮರ ಸಂಬಂಧ ಮೈತ್ರಿಯುತವಾಗಿತ್ತೆಂಬುದರ ಬಗ್ಗೆ ಸಂಶಯ.

ಎಸ್. ವೆಂಕಟರಮಣಯ್ಯನವರು ವಿಜಯನಗರ ಸ್ಥಾಪಕರು ತೆಲುಗರು ುಂದು ವಾದಿಸಿದ್ದಾರೆ.[1] ಇವರ ವಾದದ ಪ್ರಕಾರ, ಸಂಗಮ ಸೋದರರು ಮೊದಲು ಾಕತೀಯರಲ್ಲಿ ಭಂಡಾರಿಗಳಾಗಿದ್ದರು. ೧೩೨೭ರಲ್ಲಿ ಆ ರಾಜ್ಯವು ನಶಿಸಿದ ಮೇಲೆ ಂಗಮರು ಕಂಪ್ಲಿ ರಾಜ್ಯದಲ್ಲಿ ಸೇವೆಗೈದರು. ಆ ರಾಜ್ಯಕ್ಕೂ ಹೊಯ್ಸಳರಿಗೂ ಯುದ್ಧವಾದಾಗ ಆ ಯುದ್ಧದಲ್ಲಿ ಸಂಗಮರು ಪಾಲ್ಗೊಂಡರು. ೧೩೨೭ರಲ್ಲಿ ಂಪ್ಲಿ ರಾಜ್ಯವು ನಾಶವಾದ ಮೇಲೆ ಸಂಗಮರು ಸ್ವತಂತ್ರರಾದಂತೆ ವರ್ತಿಸಿದರು. ಾಗಲೂ ಅವರು ಹೊಯ್ಸಳರ ಶತ್ರುಗಳಾಗಿ ಹೋರಾಡಿದರು. ಹೀಗೆ ಅವರು ಾಕತೀಯರ ಮಿತ್ರರು ಮತ್ತು ಹೊಯ್ಸಳರ ಶತ್ರುಗಳಾಗಿದ್ದುದಕ್ಕೆ ಕಾರಣ ಅವರು ಲುಗರು ಎನ್ನುವುದು ವೆಂಕಟರಮಣಯ್ಯನವರ ಮತ.

ಎಸ್.ಕೆ. ಅಯ್ಯಂಗಾರ್, ಫಾದರ್ ಹೆರಾಸ್, ಬಿ.ಎ. ಸಾಲೆತೊರೆ, ಡಿ.ಬಿ. ೇಸಾಯಿ ಮತ್ತು ವಸುಂಧರಾ ಫಿಲಿಯೋಜಾ ಇವರು ಸಂಗಮ ಸೋದರರು ನ್ನಡಿಗರೆಂದು ವಾದಿಸಿದ್ದಾರೆ. ಈ ವಾದಕ್ಕೆ ಶಾಸನಗಳ ಆಧಾರವಿದೆ. ಈ ವಾದದ

---

1. ಎಸ್. ವೆಂಕಟರಮಣಯ್ಯ, *Vijayanagara, Origin of the city and the Empire, Madras, 1933.*

[illegible] (ಶ್ರೀ ಎಂ.ಜಿ. ನಾಗರಾಜ್ ಅಭಿನಂದನ ಗ್ರಂಥ) ಸಂ : ಡಾ| ಎಚ್.ಎಸ್.ಗೋಪಾಲರಾವ್
: ಎಂ.ಜಿ. ನಾಗರಾಜ್ ಅಭಿನಂದನ ಸಮಿತಿ, ಬೆಂಗಳೂರು ೧೯೯೪

ಪ್ರಕಾರ ಸಂಗಮ ಸೋದರರು ಹಂಪೆಯ ಪರಿಸರದವರು.[೨] ಅವರ ಶಾಸನಗಳೂ ಕನ್ನಡದಲ್ಲಿವೆ. ಹಂಪೆಯ ವಿರುಪಾಕ್ಷ ಅವರ ಕುಲದೈವ. ಅದರ ಅಂಕಿತದಲ್ಲಿ ಇವರು ಆಳಿದರು. ಕನ್ನಡನಾಡು, ನುಡಿಗಳ ಬಗ್ಗೆ ಅವರಿಗೆ ಅಪಾರ ಪ್ರೀತಿ ಇತ್ತು ಇವೆಲ್ಲಾ ಕಾರಣಗಳಿಂದ ಅವರು ಕನ್ನಡಿಗರೆನ್ನುವುದು ಸ್ಪಷ್ಟ.

ತೆಲುಗುವಾದ ಆರಂಭವಾದದ್ದು ಕರ್ನಾಟಕದಲ್ಲಿ. ನಮ್ಮಲ್ಲಿ ಬರೆದಂಥ ವಿದ್ಯಾರಣ್ಯ ಕಾಲಜ್ಞಾನ, ಗುರುವಂಶಕಾವ್ಯ ಮತ್ತು ಕೆಳದಿ ನೃಪವಿಜಯ ಈ ಗ್ರಂಥಗಳೆಲ್ಲಾ ವಿಜಯನಗರ ಸ್ಥಾಪನೆಯಾದ ೩೦೦-೪೦೦ ವರ್ಷಗಳ ನಂತರ ಬರೆದವು. ಇವುಗಳನ್ನು ಬರೆದ ಕಾಲಕ್ಕೆ ಇದ್ದ ವಿಜಯನಗರ ಅರಸರ ಸಂತತಿಯವರು ಅರವೀಡು ಮನೆತದ ತೆಲುಗು ಜನರು. ಈ ಗ್ರಂಥಗಳ ಲೇಖಕರು ಈ ಕಾರಣದಿಂದ ಮೊದಲಿನಿಂದಲೂ ವಿಜಯನಗರದ ಅರಸರು ತಲುಗು ಜನರೆಂದು ಬರೆದಿರುವ ಹಾಗೆ ಕಾಣುತ್ತದೆ. ಈಗ ಹಾಗೆ ಹೇಳಲಿಕ್ಕೆ ಯಾವ ಕಾರಣವೂ ಇಲ್ಲ. ಅವರು ಓರಂಗಲ್ಲಿನಲ್ಲಿದ್ದಿರಬಹುದು. ಆದ್ದರಿಂದ ಅವರು ತೆಲುಗರು ಆಗುವುದಿಲ್ಲ.

ಸಂಗಮ ಸೋದರರ ಬಗ್ಗೆ ಈಗ ಯಾವುದಾದರೂ ವಾದವಿದ್ದರೆ, ಅದು ಅವರ ಎಲ್ಲಿಯವರು ಎಂದಲ್ಲ. ಅವರ ಬಗ್ಗೆ ಇತ್ಯರ್ಥವಾಗಬೇಕಾದ ಪ್ರಶ್ನೆ ಅವರಿಗೂ ಹೊಯ್ಸಳರಿಗೂ ಯಾವ ರೀತಿಯ ಸಂಬಂಧವಿತ್ತು ಎನ್ನುವುದು. ಅವರು ಕಂಪಿಲರಾಯನ ಅಧಿಕಾರಿಯಾಗಿದ್ದಾಗ ಹೊಯ್ಸಳರ ಜತೆಗೆ ಹೋರಾಡಿದರು ಅದರ ಬಗ್ಗೆ ಪ್ರಶ್ನೆಯಿಲ್ಲ. ಅವರು ಕಂಪ್ಲಿಯಿಂದ ಹಂಪಿಗೆ ಬಂದು ಹೆಚ್ಚು ಕಡಿಮೆ ಸ್ವತಂತ್ರರಾಗಿ ಮೇಲುನೋಟಕ್ಕೆ ಹೊಯ್ಸಳರ ಅಧೀನರಾಗಿರಬೇಕಾದರೆ, ಅವರ ಸಂಬಂಧಗಳು ಹೇಗಿದ್ದವು? ಲಭ್ಯವಿರುವ ಸಮಕಾಲೀನ ಆಧಾರಗಳಲ್ಲಿ ಇವರಿಬ್ಬರೂ ಸ್ಪಷ್ಟವಾಗಿ ಮಿತ್ರರೆಂದಾಗಲಿ ಅಥವಾ ಶತ್ರುಗಳೆಂದಾಗಲಿ ಹೇಳುವುದಿಲ್ಲ. ಬಹುಶಃ ರಾಜಕಾರಣದಲ್ಲಿ ಇಂತಹ ಪ್ರಶ್ನೆಗೆ ಉತ್ತರ ಸಿಗಲಿಕ್ಕಿಲ್ಲ. ಆದ್ದರಿಂದ ಅವರಿಬ್ಬರ ಮಧ್ಯೆ ನಡೆದ ವ್ಯವಹಾರಗಳಿಂದ ನಾವೇ ಊಹಿಸಬೇಕು. ಇತ್ತೀಚೆಗೆ ವಸುಂಧರಾ ಫಿಲಿಯೋಜಾ ಅವರು[೩] ಇವರಿಬ್ಬರ ಸಂಬಂಧ ಅತ್ಯಂತ ಮೈತ್ರಿಯುತವಾಗಿತ್ತೆಂದು ಬರೆದಿದ್ದಾರೆ. ಎಸ್. ರಾಜಶೇಖರರು[೪] ಅವರು ಶತ್ರುಗಳಾಗಿ ಹೊಡೆದಾಡಿದರೆಂದು ಬರೆದಿದ್ದಾರೆ. ಒಂದನೆಯ ಹರಿಹರನು ಮಹಾಮಂಡಲೇಶ್ವರನೆಂಬ ಬಿರುದನ್ನು

---

೨. ಎ.ಕ. IV ಯಳಂದೂರು ೪೬, ಕ್ರಿ.ಶ. ೧೩೭೬, ಪಂಪಾಪುರಿ ಪರಿಸರೇ ಭವ ಸಂಗಮಾಖ್ಯ!!

೩. ವಸುಂಧರಾ ಫಿಲಿಯೋಜಾ, ವಿಜಯನಗರ ಸಾಮ್ರಾಜ್ಯ ಸ್ಥಾಪನೆ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೮೦

೪. ಎಸ್. ರಾಜಶೇಖರ, ಹೊಯ್ಸಳ-ಸಂಗಮರ ಸಂಬಂಧ, ಕರ್ನಾಟಕ ಭಾರತಿ, ಸಂಪುಟ ೬, ಸಂಚಿಕೆ ೩, ಸಂಕ್ರಮಣ ಸಂಚಿಕೆ, ೧೯೭೪

ಹೊತ್ತಿದ್ದನು. ಇದರಿಂದ ಈತನು ಹೊಯ್ಸಳರ ಮಹಾಮಂಡಲೇಶ್ವರನಾಗಿರಬೇಕೆಂದು ಕಾಣುತ್ತದೆ. ರಾಜಶೇಖರರ ಪ್ರಕಾರ ಈ ಬಿರುದಿಗೆ ಅರ್ಥವಿರಲಿಲ್ಲ. ಬಿರುದನ್ನು ಧರಿಸಿದ ಹೊಯ್ಸಳರು ಕಲ್ಯಾಣದ ಚಾಲುಕ್ಯರ ವಿರುದ್ಧ ಹೋರಾಡುತ್ತಿದ್ದರೆನ್ನುತ್ತಾರೆ. ಅದೇ ರೀತಿ ಸಂಗಮರು ಹೊಯ್ಸಳರ ಜತೆಗೆ ಯುದ್ಧ ಮಾಡಿ, ಅವರ ಅಧಿಕಾರಿಗಳನ್ನು ತಮ್ಮ ಕಡೆಗೆ ಮಾಡಿಕೊಂಡು, ಅವರ ಅಂತ್ಯಕ್ಕೆ ಇವರೇ ಕಾರಣರೆಂದು ಹೇಳುತ್ತಾರೆ. ಅವರು ಕೊಡುವ ನಿದರ್ಶನಗಳನ್ನು ನೋಡಿದರೆ, ಇವರಿಬ್ಬರ ನಡುವೆ ಘೋರ ಯುದ್ಧವಾಗಿಲ್ಲ; ಅದು ಅವಶ್ಯವೂ ಆಗಿರಲಿಲ್ಲ. ಹೊಯ್ಸಳರು ತಮ್ಮಷ್ಟಕ್ಕೆ ತಾವೇ ನಿರ್ಲಿಪ್ತರಾದರು. ಅವರ ಸ್ಥಳಕ್ಕೆ ಸಂಗಮರು ಅವಿರೋಧವಾಗಿ ನಿರಾಯಾಸವಾಗಿ ಬಂದರು. ಇಬ್ಬರ ಘರ್ಷಣೆಗಳಾದವೆಂದು ಹೇಳುವುದಕ್ಕೆ ಸರಿಯಾದ ಪುರಾವೆ ಇಲ್ಲ.

ಹೊಯ್ಸಳರ ಮತ್ತು ಸಂಗಮರ ನಡುವೆ ಇದ್ದ ಇನ್ನೊಂದು ಸಮಸ್ಯೆ, ಹೊಯ್ಸಳ ಅಧಿಕಾರಿಗಳು ಸಂಗಮರ ಕಡೆಗೆ ಬಂದ ರೀತಿ. ರಾಜಶೇಖರರ ಪ್ರಕಾರ ಸಂಗಮರು ಹೊಯ್ಸಳರನ್ನು ಸೋಲಿಸಿದ್ದರಿಂದ ಹೊಯ್ಸಳರ ಅಧಿಕಾರಿಗಳು ಯುದ್ಧದಲ್ಲಿ ಗೆದ್ದಂಥ ಸಂಗಮರ ಅಧಿಕಾರಿಗಳಾದರು. ಫಿಲಿಯೋಜಾರವರು ಅನೇಕ ಹೊಯ್ಸಳ ಅಧಿಕಾರಿಗಳು ಶಾಂತಿಯುತವಾಗಿ ಸಂಗಮರ ಅಧಿಕಾರಿಗಳಾಗಿರುವುದಕ್ಕೆ ನಿದರ್ಶನಗಳನ್ನು ಕೊಟ್ಟಿದ್ದಾರೆ. ಅದರಲ್ಲಿ ಕೆಲವರು ಉದಾಹರಣೆಗೆ ಬಲ್ಲಪದಂಡ ನಾಯಕನಂಥವರು ಸಂಗಮರ ಜತೆಗೆ ರಕ್ತಸಂಬಂಧವನ್ನು ಬೆಳೆಸಿದ್ದು ಪ್ರಸಿದ್ಧವಾಗಿದೆ. ಇಂತಹ ಉದಾಹರಣೆ ಇನ್ನೊಂದು ಇರುವುದನ್ನು ಮುಂದೆ ನೋಡುತ್ತೇವೆ. ಫಿಲಿಯೋಜಾ ಅವರು ಹೊಯ್ಸಳರ ದಾನಗಳನ್ನು ಸಂಗಮರು ಮುಂದುವರಿಸಿದ ಉದಾಹರಣೆಗಳನ್ನು ಕೊಟ್ಟಿದ್ದಾರೆ. ಕೆಲವೇ ವರ್ಷಗಳಲ್ಲಿ ಸಂಗಮರು ಪೂರ್ವ ಪಶ್ಚಿಮ ಸಮುದ್ರಾಧಿಪತಿಗಳಾಗಿರುವುದನ್ನು ನೋಡಿದರೆ ಸಂಗಮರಿಗೆ ಕರ್ನಾಟಕದಲ್ಲಿಯಾಗಲಿ ಆಂಧ್ರದಲ್ಲಿಯಾಗಲಿ ಯಾವ ವಿರೋಧವು ಇದ್ದ ಹಾಗೆ ಕಾಣುವುದಿಲ್ಲ. ಇಷ್ಟೇ ಅಲ್ಲ, ಅವರಿಗೆ ಎಲ್ಲಾ ಧರ್ಮಗಳ ಗುರುಗಳಿಂದಲೂ, ಸಾರ್ವಜನಿಕರಿಂದಲೂ ಬೆಂಬಲವಿತ್ತೆಂದೂ ಹೇಳಬಹುದು. ಜೊತೆಗೆ ಹೊಯ್ಸಳರ ಮುಖ್ಯ ಅಧಿಕಾರಿಗಳನ್ನು ಒಲಿಸಿಕೊಳ್ಳುವ ಚಾತುರ್ಯವೂ ಅವರಲ್ಲಿತ್ತೆನ್ನುವುದನ್ನು ನಾವು ಊಹಿಸಬಹುದು. ಇದಕ್ಕೆ ಸೀತಾರಾಮ ಜಾಗಿರದಾರರು[೫] ಇತ್ತೀಚೆಗೆ ಹಳೇಬೀಡಿನ ಒಂದು ಶಾಸನವನ್ನು[೬] ಮೊದಲಿಗಿಂತ ಬೇರೆ ವಿಧದಲ್ಲಿ ಅರ್ಥೈಸಿರುವುದು ಸಹಾಯಕವಾಗುತ್ತದೆ. ಈ ಶಾಸನ ಹೀಗಿದೆ:

---

೫. ಸೀತಾರಾಮ ಜಾಗೀರದಾರರು ೧೩-೪-೧೯೮೯ರಂದು ಬೆಂಗಳೂರಿನ ಮಿಥಿಕ್ ಸೊಸೈಟಿಯಲ್ಲಿ ಮಾಡಿದ ಭಾಷಣ

೬ ಎ.ಕ. XV ಬೇಲೂರು ನಂ. ೩೫೬

ಶ್ರೀ ನಖರೇಶ್ವರದ ವೋರುಂಗಲ
ವೀರಭದ್ರದೇವರಿಗೆ ಶ್ರೀ ವೀರ ಹರಿ
ಹರ ಮಹಾರಾಯರ ಅಳಿಯ ಪುಲ್ಲ ಖಂಡ
ಸಿದರಾಜರು ಪಂಡಿತನ ಹಳ್ಳಿಯ ಕೆಳಗೆ
ಗದ್ದೆ (ಕೊಟ್ಟರು)

ಸಂಗಮ ಸೋದರರು ವೋರಂಗಲ್ಲಿನಲ್ಲಿ ಕಾಕತೀಯರ ಆಸ್ಥಾನದಲ್ಲಿ ಭಂಡಾರಿಗಳಾಗಿದ್ದರೆಂದು ಪ್ರಬಲವಾದ ಐತಿಹ್ಯವಿದೆ. ಈ ಐತಿಹ್ಯದ ಸಮರ್ಥನೆಗೆ ಈಚೆಗೆ ಎರಡು ಶಾಸನಗಳು ದೊರಕಿವೆ. ಒಂದು ಕೊಡಮೂರು ಶಾಸನ,[೭] ಇನ್ನೊಂದು ಮೇಲೆ ಹೇಳಿದ ಹಳೇಬೀಡಿನ ಶಾಸನ. ಹಳೆಬೀಡು ಶಾಸನದಿಂದ ಹರಿಹರ, ವೋರಂಗಲ್ಲಿನಲ್ಲಿದ್ದುದಕ್ಕೆ ಸಮರ್ಥನೆ ಸಿಗಬಹುದು. ಇಷ್ಟು ದಿನ ಈ ಶಾಸನ ಎರಡನೆಯ ಹರಿಹರನಿಗೆ ಸಂಬಂಧಿಸಿದ್ದೆಂದು ಅದರ ಲಿಪಿಯ ಆಧಾರದ ಮೇಲೆ ನಿರ್ಧರಿಸಲಾಗಿತ್ತು. ಆದ್ದರಿಂದ ವಿಜಯನಗರ ಸ್ಥಾಪನೆಗೂ ಈ ಶಾಸನಕ್ಕೂ ಸಂಬಂಧವಿಲ್ಲವೆಂದು ತಿಳಿದಿದ್ದರು. ಆದರೆ ಈಚೆಗೆ ಸೀತಾರಾಮ ಜಾಗೀರದಾರರು ಈ ಶಾಸನವು ಒಂದನೆಯ ಹರಿಹರನ ಕಾಲದ್ದೆಂದು ಹೇಳಿದ್ದಾರೆ. ಅವರು ಹೇಳುವುದು ಸರಿಯೆಂದು ಒಪ್ಪಿಕೊಳ್ಳಬಹುದು. ನಾಣ್ಯಗಳಲ್ಲಿ ಎರಡನೆಯ ಹರಿಹರನನ್ನು ಪ್ರತಾಪ ಹರಿಹರನೆಂದೂ ಮೊದಲನೆ ಹರಿಹರನನ್ನು ವೀರ ಹರಿಹರನೆಂದೂ ಕರೆಯಲಾಗಿದೆ. ಈ ಶಾಸನದಲ್ಲಿ ವೀರ ಹರಿಹರನೆಂದು ಹೇಳಿರುವುದರಿಂದ ಇದು ಮೊದಲನೆ ಹರಿಹರನಿಗೆ ಸಂಬಂಧಪಟ್ಟದ್ದು. ಹಾಗಾದರೆ ಈ ಶಾಸನವು ವಿಜಯನಗರ ಸಾಮ್ರಾಜ್ಯ ಸ್ಥಾಪನೆಯ ವಿಷಯಕ್ಕೆ ಉಪಯೋಗವಾಗುತ್ತದೆ. ಮೊದಲನೆಯ ಹರಿಹರನ ಅಳಿಯ ಪುಲ್ಲಖಂಡ ಸಿದ್ಧರಾಜನು ವೋರುಂಗಲ್ಲ ವೀರಭದ್ರನ ಒಕ್ಕಲಾಗಿರಬೇಕು. ಆ ವೀರಭದ್ರನಿಗೆ ಹಳೇಬೀಡಿನ ನಖರೇಶ್ವರ ದೇವಸ್ಥಾನದ ಆವರಣದಲ್ಲಿ ಸಿದ್ಧರಾಜನು ದೇವಸ್ಥಾನವನ್ನು ಕಟ್ಟಿಸಿ ಆ ದೇವರಿಗೆ ದಾನ ಮಾಡಿದನು. ಆತನು ವೋರಂಗಲ್ಲಿನಿಂದ ಹಳೇಬೀಡಿಗೆ ಬಂದಿರಬೇಕು. ವೋರಂಗಲ್ಲಿನ ಪತನದ ನಂತರ ಹರಿಹರ ಹೇಗೆ ಪಂಪಾಪುರಿ ಪರಿಸರಕ್ಕೆ ಬಂದನೊ ಹಾಗೆ ಸಿದ್ಧರಾಮನು ಹೊಯ್ಸಳರ ಅಧಿಕಾರಿಯಾಗಿ ಹಳೇಬೀಡಿಗೆ ಬಂದು ನೆಲೆಸಿರಬೇಕು. ಹರಿಹರ ಮತ್ತು ಸಿದ್ಧರಾಜರ ಹಿನ್ನೆಲೆ ಒಂದೇ. ಇಬ್ಬರೂ ವೋರಂಗಲ್ಲಿನಲ್ಲಿ ಜತೆಗಿದ್ದಿರಬೇಕು. ಅಲ್ಲಿಂದ ಇಬ್ಬರೂ ಬಂದು ಹೊಯ್ಸಳರ ಸೇವೆಯನ್ನು ಅಂಗೀಕರಿಸಿರಬೇಕು. ಕೆಲವು ವರ್ಷ ಅಂದರೆ ೧೩೨೩ರಿಂದ ೧೩೨೭ರ ವರೆಗೂ ಹರಿಹರ ಬುಕ್ಕರು ಕಂಪಿಲಿರಾಯನಲ್ಲಿ ಭಂಡಾರಿಗಳಾಗಿದ್ದಿರಬಹುದು. ಆಗ ಹೊಯ್ಸಳರ ಜತೆಗೆ ಯುದ್ಧವನ್ನು

೭. Annual Report on Epigraphy, 1960-61, B. 32

ಮಾಡಿರಬಹುದು. ಕಂಪ್ಲಿಯ ಪತನದ ನಂತರ ಹೊಯ್ಸಳರ ಸೇವೆಗೆ ಸೇರುವುದು ಅನಿವಾರ್ಯವಾಗಿರಬೇಕು ಕೆಲವರು ಸಂಗಮರು ಸ್ವತಂತ್ರರಾಗಿದ್ದರೆಂದು ಹೇಳುತ್ತಾರೆ. ಹೊಯ್ಸಳರ ಸೇನೆಯಲ್ಲಿದ್ದವೆಂದು ಹೇಳಿಕೊಂಡು ಸ್ವತಂತ್ರರಾಗಿ ವರ್ತಿಸಿರಬಹುದು. ಹರಿಹರ ಮತ್ತು ಪುಲ್ಲಖಂಡರ ಬಂಧುತ್ವ ಹೊಯ್ಸಳರ ಕಾಲದಲ್ಲಿ ಆಗಿರಬಹುದು. ಯಾವಾಗ ಬಂಧುತ್ವವಾಗಿದ್ದರೂ ನಮ್ಮ ವಾದಕ್ಕೆ ವ್ಯತ್ಯಯವಾಗುವುದಿಲ್ಲ. ಆ ವಾದವೆಂದರೆ, ಪುಲ್ಲಖಂಡ ಸಿದ್ಧರಾಜರ ಮನೆತನಕ್ಕೂ ಹರಿಹರನ ಮನೆತನಕ್ಕೂ ಸಖ್ಯವಾಗಿದ್ದು ವೋರಂಗಲ್ಲಿನಲ್ಲಿರಬೇಕಾದರೆ ಆಗಿರಬೇಕು ಮತ್ತು ಆ ಬಂಧುತ್ವ ಇಬ್ಬರೂ ಹೊಯ್ಸಳರ ಸೇವೆಯಲ್ಲಿರಬೇಕಾದರೆ ಮುಂದುವರೆದಿರಬೇಕು. ಹರಿಹರ ಧೂರ್ತ, ಹೊಯ್ಸಳರ ಸರದಾರರನ್ನು ತನ್ನ ಕಡೆಗೆ ಸೆಳೆಯುತ್ತಿದ್ದ ಅಥವಾ ಅವರೇ ಇವರು ಹೊಯ್ಸಳರ ಉತ್ತರಾಧಿಕಾರಿಗಳೆಂದು ಇವರ ಕಡೆಗೆ ಬರುತ್ತಿದ್ದರು. ಅಂತೂ ಹಳೇಬೀಡಿನಲ್ಲಿ ಪುಲ್ಲಖಂಡ ಪ್ರತಿಷ್ಠಿತನಾಗಿರಬೇಕು. ಹೊಯ್ಸಳರ ಸಹಾಯದಿಂದ ಇರಬಹುದು, ಅಥವಾ ಹರಿಹರನ ಸಹಾಯದಿಂದ ಇರಬಹುದು ಅವನು ಪ್ರತಿಷ್ಠಿತನಾಗಿದ್ದುದರಿಂದ ಅಲ್ಲಿ ಒಂದು ದೇವಸ್ಥಾನವನ್ನು ಕಟ್ಟಿಸಿದ, ಕೆರೆ ಕಟ್ಟಿಸಿದ ಮತ್ತು ಅದರ ಕೆಳಗಿನ ಭೂಮಿಯನ್ನು ಅಥವಾ ಹಳ್ಳಿಯನ್ನು ದಾನ ಮಾಡಿದ. ಹಳೇಬೀಡಿನ ಶಾಸನದಿಂದ ಸಂಗಮರು ವೋರಂಗಲ್ಲಿನಲ್ಲಿದ್ದರೆಂದು ಊಹಿಸಬಹುದಾದರೆ, ಇನ್ನೊಂದು ಶಾಸನದಿಂದ ಅದೇ ನಿರ್ಧಾರಕ್ಕೆ ಬರಬಹುದು. ಆ ಶಾಸನ ೧೩೪೦ರ ಕೊಡಮೂರಿನದು. ಈ ಶಾಸನದ ಪ್ರಕಾರ ಹರಿಹರ ಗುತ್ತಿಯಿಂದ ಆಳುತ್ತಿದ್ದ. ಇವನಿಗೆ ಈ ಶಾಸನದಲ್ಲಿ ಶ್ರೀ ಭಂಡಾರಿ ಎನ್ನುವ ಬಿರುದು ಇದೆ. ಇದರಿಂದ ಕಾಕತೀಯರಲ್ಲಿ ಸಂಗಮ ಸೋದರರು ಭಂಡಾರಿಗಳಾಗಿದ್ದುದು ಖಚಿತವೆಂದು ಹೇಳಬಹುದು.

ಹೀಗೆ ಹಳೇಬೀಡು ಮತ್ತು ಕೊಡಮೂರು ಶಾಸನಗಳಿಂದ ಅನೇಕ ದಂತ ಕಥೆಗಳಲ್ಲಿ ಹೇಳುವಂತೆ ಸಂಗಮ ಸೋದರರು ವೋರಂಗಲ್ಲಿನಲ್ಲಿ ಕಾಕತೀಯರಲ್ಲಿ ಮತ್ತು ನಂತರ ಕಂಪಿಲರಾಯನಲ್ಲಿ ಭಂಡಾರಿಗಳಾಗಿದ್ದರೆನ್ನಬಹುದು.

■

2

ವಿಜಯನಗರ ಸಾಮ್ರಾಜ್ಯ ಸ್ಥಾಪನೆಯ ಬಗ್ಗೆ ಶ್ರೀಕಂಠಯ್ಯನವರ ಅಭಿಪ್ರಾಯ

Early Vijayanagar Studies in its History and Culture – Proceedings of S. Srikanthayya Centenary Seminar, 1991

ಸಕಲೇಶಪುರ ಶ್ರೀಕಂಠಯ್ಯನವರು, ಅಕ್ಟೋಬರ್ ೧೯೩೦ರಲ್ಲಿ, ಅಣ್ಣಾಮಲೈ ವಿಶ್ವವಿದ್ಯಾನಿಲಯದಲ್ಲಿ ವಿಜಯನಗರ ಸಾಮ್ರಾಜ್ಯ ಸ್ಥಾಪನೆ ಮತ್ತು ಅದರಲ್ಲಿ ವಿದ್ಯಾರಣ್ಯರ ಪಾತ್ರ – ಈ ವಿಷಯವನ್ನು ಕುರಿತು ವ್ಯಾಖ್ಯಾನ ಮಾಡಿದರು. ೧೯೩೮ರಲ್ಲಿ ಈ ವ್ಯಾಖ್ಯಾನವು 'ವಿಜಯನಗರದ ಸ್ಥಾಪಕರು' ಎನ್ನುವ ಶೀರ್ಷಿಕೆಯೊಡನೆ ಪುಸ್ತಕ ರೂಪವನ್ನು ತಾಳಿತು. ವಿಜಯನಗರ ಸಾಮ್ರಾಜ್ಯದ ಸ್ಥಾಪನೆಯ ವಿಷಯದಲ್ಲಿ ಶ್ರೀಕಂಠಯ್ಯನವರ ನಿರ್ಣಯವು ಈ ರೀತಿ ಇದೆ.[1] ವಿಜಯನಗರ ಪಟ್ಟಣವು ಹರಿಹರ ಬುಕ್ಕರ ರಾಜಧಾನಿಯಾಗುವ ಮುಂಚೆ ಹೊಸನಗರವೆನ್ನುವ ಹೆಸರಿನಲ್ಲಿ ಕರೆಯುಲ್ಪಟ್ಟಿತ್ತು. ಬುಕ್ಕನ ಕಾಲದಲ್ಲಿ ವಿಜಯನಗರವೆಂದು ಕರೆಯಲ್ಪಟ್ಟಿತು. ಅವನು ಅದನ್ನು ಕಟ್ಟಿದನು. ಅದು ಹೊಯ್ಸಳ ರಾಜ್ಯದಲ್ಲಿತ್ತು ಮತ್ತು ಹರಿಹರ ಬುಕ್ಕರು ಹೊಯ್ಸಳರ ಅಧೀನರಾಗಿದ್ದರು.

ಈ ನಿರ್ಣಯಗಳೆಲ್ಲಾ ಎಸ್.ಕೆ. ಅಯ್ಯಂಗಾರ್, ಹೆರಾಸ್, ಸಾಲೆತೊರೆಯವರ ನಿರ್ಣಯಗಳಾಗಿದ್ದರೂ, ಅನೇಕ ವಿವರಗಳಲ್ಲಿ ಶ್ರೀಕಂಠಯ್ಯನವರು ಹೊಸದಾದ್ದನ್ನು ಹೇಳುತ್ತಾರೆನ್ನುವುದನ್ನು ಮುಂದೆ ಹೇಳುವುದರಿಂದ ತಿಳಿದುಕೊಳ್ಳಬಹುದು.

ಮೂರನೆಯ ಬಲ್ಲಾಳನ ಜತೆಗೆ ಸಂಗಮ ಸಹೋದರರ ಸೇರ್ಪಡೆ ಅನಿವಾರ್ಯ

ಎನ್. ವೆಂಕಟರಮಣಯ್ಯನವರ ಪ್ರಕಾರ ಬಲ್ಲಾಳರ ಮೇರೆಗಳು ಹಳೆ ಮೈಸೂರಿನ ಮೇರೆಗಳಾಗಿದ್ದವು. ಅಂದರೆ ಹೊಸಪಟ್ಟಣ ಅಥವ ವಿಜಯನಗರವು ಬಲ್ಲಾಳರ ರಾಜ್ಯದಲ್ಲಿರಲಿಲ್ಲ. ವಾರಂಗಲ್ಲಿನ ಪತನದ ನಂತರ, ಅಲ್ಲಿ ಕೆಲಸ ಮಾಡುತ್ತಿದ್ದ ಸಂಗಮ ಸಹೋದರರು ಕಂಪ್ಲಿಯ ರಾಜನ ಸಂಗಡ ಸೇರಿಕೊಂಡರು

ಮತ್ತು ಬಲ್ಲಾಳರ ಜೊತೆಗೆ ಹೊಡೆದಾಡಿದರು. ಅವರು ಕಾಕತೀಯರ ಅಧಿಕಾರಿಗಳಲ್ಲ ಅವರ ನೆಂಟರೂ ಆಗಿದ್ದಿರಬಹುದು. ವೆಂಕಟರಮಣಯ್ಯನವರ ಈ ವಾದ ಶ್ರೀಕಂಠಯ್ಯನವರ ಉತ್ತರ ಹೀಗಿದೆ : ವಾದದ ಸಲುವಾಗಿ, ಸಂಗಮ ಸಹೋದರರ ಮೊದಲು ಕಾಕತೀಯರಲ್ಲಿದ್ದರು, ನಂತರ ಕಂಪ್ಲಿಯವರಲ್ಲಿದ್ದರು ಮತ್ತು ಕಂಪ್ಲಿಯವ ಅಧೀನರಾಗಿ ಹೊಯ್ಸಳರ ಜೊತೆಗೆ ಹೊಡೆದಾಡಿದರೆಂದು ಒಪ್ಪಿಕೊಂಡರೂ ೧೩೨೮ರಲ್ಲಿ ಕಂಪ್ಲಿಯ ಪತನವಾದ ನಂತರ ಈ ಸಹೋದರರು ಏನು ಮಾಡಿದರ ಎಂದು ಪ್ರಶ್ನೆಯನ್ನು ಹಾಕಿಕೊಂಡು ಅದಕ್ಕೆ ತಾವೇ ಈ ಉತ್ತರವನ್ನು ಹೇಳುತ್ತಾ ಅದೇನೆಂದರೆ ಅವರು ಹೊಯ್ಸಳರನ್ನು ಸೇರುವುದು ಅನಿವಾರ್ಯವಾಯಿತು. ಯಾ ಎನ್ನುವುದನ್ನು ಅವರು ಹೀಗೆ ವಿವರಿಸುತ್ತಾರೆ. "ಅನೇಕ ವರ್ಷಗಳ ಯುದ್ಧ ಕ್ಷೇತ್ರವಾದ ಹಂಪಿಯ ಪ್ರದೇಶದಲ್ಲಿ ತಮ್ಮ ಸ್ವಂತ ಸೈನ್ಯವನ್ನು ಸಿದ್ಧಪಡಿಸಲ ಸಾಧ್ಯವಿರಲಿಲ್ಲ. ಒಂದು ವೇಳೆ ಸೈನಿಕರು ಸಿಗುವ ಹಾಗಿದ್ದರೂ ಅವರಿಗೆ ಸಂಬ ಕೊಡಲು ಸಂಗಮ ಸಹೋದರರಲ್ಲಿ ಹಣವಿರಲಿಲ್ಲ. ಅದೂ ಅಲ್ಲದೆ ಅವರಿ ಹೊಯ್ಸಳರ ಸಖ್ಯವು ಅನುಕೂಲವಾಗಿತ್ತು. ಮುಂದೆ ಅವರೊಡ ಜಗಳವಾಡಬೇಕಾಗಿದ್ದರೂ ತಾತ್ಕಾಲಿಕವಾಗಿ ಅವರ ಸ್ನೇಹ ಅನುಕೂಲವಾಗಿತ್ತು ಸಂಗಮ ಸಹೋದರರು ಡೆಲ್ಲಿಯವರ ಜೊತೆಗಿದ್ದು ಹೊಯ್ಸಳರ ಜೊತೆಗೆ ೧೩೨೮ ನಂತರ ಹೊಡೆದಾಡಿದರೆಂದು ಕೆಲವರು ಹೇಳುತ್ತಾರೆ. ಆದರೆ ಇದಕ್ಕೆ ಆಧಾರವಿ ಆದ್ದರಿಂದ ಒಳ್ಳೆಯ ವ್ಯವಹಾರಿಗಳ ಹಾಗೆ ಸಂಗಮರು ಹೊಯ್ಸಳರನ ಸೇರಿಕೊಂಡರೆಂದು" ಶ್ರೀಕಂಠಯ್ಯನವರು ಹೇಳುತ್ತಾರೆ.

ಮೂರನೇ ಬಲ್ಲಾಳನು ವಿಜಯನಗರ ರಾಜಧಾನಿಯನ್ನು ಸ್ಥಾಪಿಸಿದನು

ಸರ್ವಸಾಮಾನ್ಯವಾಗಿ, ಹರಿಹರನು ವಿಜಯನಗರ ಊರನ್ನು ಸ್ಥಾಪಿಸಿದನೆಂ ನಂಬಿದರೆ, ಶ್ರೀಕಂಠಯ್ಯನವರು ಮೂರನೆ ಬಲ್ಲಾಳನು ಸ್ಥಾಪಿಸಿದನೆಂದು ಹೇಳುತ್ತಾ ಅವರು ಈ ವಿಷಯದಲ್ಲಿ ಏನು ಹೇಳುತ್ತಾರೆಂದರೆ "ವಿಜಯನಗರ ಊರಿ ಸ್ಥಾಪಕರು ಕೆಲವು ದಿನಗಳು ಡೆಲ್ಲಿ ಸುಲ್ತಾನನ ಸೆರೆಮನೆಯಲ್ಲಿದ್ದು ಬಂದವನೆಂ ಎಲ್ಲಾ ವರದಿಗಳು ಹೇಳುತ್ತವೆ." ಹಾಗಿದ್ದರೆ, ಇವನು ಯಾರಿರಬಹುದೆಂದು ಪ್ರಶ್ನಿಸುತ ಅವರೇ ಮುಂದೆ ಹೇಳುವ ಹಾಗೆ ಹೇಳುತ್ತಾರೆ.

ನ್ಯೂನಿಜನು ಬೀಸನಗರ (ವಿಜಯನಗರ)ದ ಹೊಸ ಹಿಂದೂ ರಾಜನನ ದೇವರಾವ್ ಎಂದು ಕರೆದು, ಇವನನ್ನು ಡೆಲ್ಲಿ ಸುಲ್ತಾನನು ಸೆರೆ ಹಿಡಿದು ನಂತ ಬಿಟ್ಟಿದ್ದನೆನ್ನುತ್ತಾನೆ. ದೇವರಾಜ್ ಎನ್ನುವುದು ಎಲ್ಲಾ ವಿಜಯನಗರದ ಅರಸ ಬಿರುದು ಎಂದು ಸಿವೆಲ್ಲರು ಹೇಳುತ್ತಾರೆ. ಹರಿಹರನಿಗಾಗಲಿ ಅಥವಾ ವಿಜಯನಗ ಸ್ಥಾಪಕರೆಂದು ಕರೆಯಿಸಿಕೊಳ್ಳುವವರು ಇನ್ನು ಯಾರಿಗಾಗಲೀ ಇಂತಹ ಬಿರುದ

ಇರಲಿಲ್ಲವೆಂದು ಶ್ರೀಕಂಠಯ್ಯನವರ ಹೇಳಿಕೆ. ಇದಕ್ಕೆ ವ್ಯತಿರಿಕ್ತವಾಗಿ ಮೂರನೆಯ ಬಲ್ಲಾಳನನ್ನು ವೀರಬಲ್ಲಾಳ ದೇವರಸನೆಂದು ಕರೆಯುತ್ತಿದ್ದರೆಂದು ಅವರು ಹೇಳುತ್ತಾರೆ. ಸೆರೆ ಹಿಡಿದು, ಡೆಲ್ಲಿಗೆ ಕರೆದುಕೊಂಡು ಹೋದಮೇಲೆ ಅವನನ್ನು ಬಂಧನಮುಕ್ತನನ್ನಾಗಿ ಮಾಡಿ, ಅವನ ರಾಜ್ಯಕ್ಕೆ ಕಳಿಸಿದನೆಂದು, ಒಂದು ಶಾಸನವು ಮತ್ತು ಮುಸ್ಲಿಮ್ ಇತಿಹಾಸಕಾರರು ಹೇಳುತ್ತಾರೆ. ಆದ್ದರಿಂದ ನ್ಯೂನಿಜ್‌ನ ದೇವರಾವ್ ಮೂರನೆಯ ಬಲ್ಲಾಳನಿರಬೇಕು. ಫೆರಿಸ್ತಾ ಮುಂದೆ ಹೇಳುವುದನ್ನು ಗಮನಿಸಿದರೆ ನಮ್ಮ ಈ ಹೇಳಿಕೆಯಲ್ಲಿ ನಂಬಿಕೆ ಹುಟ್ಟುತ್ತದೆ. "ಬಲ್ಲಾಳ ದೇವ್ ತನ್ನ ಬಂಧುಗಳ ಸಭೆಯನ್ನು ಕರೆದು, ತನ್ನ ರಾಜ್ಯದಲ್ಲಿಯ ಕೋಟೆಗಳನ್ನು ಬಲಪಡಿಸಿ, ತನ್ನ ರಾಜಧಾನಿಯನ್ನು ಪರ್ವತ ಪ್ರದೇಶಕ್ಕೆ ಬದಲಾಯಿಸುತ್ತಾನೆ." ಫೆರಿಸ್ತಾ ಮುಂದುವರೆದು ಹೀಗೆ ಹೇಳುತ್ತಾನೆ, "ಅವನು ಒಂದು ಬಲವಾದ ಕೋಟೆಯುಳ್ಳ ಊರನ್ನು ತನ್ನ ರಾಜ್ಯದ ಸರಹದ್ದಿನಲ್ಲಿ ಕಟ್ಟುತ್ತಾನೆ ಮತ್ತು ತನ್ನ ಮಗ ಬೀಜ (ವಿಜಯ)ನ ಹೆಸರನ್ನು ಇಡುತ್ತಾನೆ. ಮುಂದೆ ಅದಕ್ಕೆ ನಗರವೆನ್ನುವ ಅಭಿದಾನವನ್ನು ಸೇರಿಸಿ ಬೀಜ(ವಿಜಯ)ನಗರವೆಂದು ಕರೆಯುತ್ತಾರೆ." ಹದಿನಾರನೆಯ ಶತಮಾನದಲ್ಲಿ ಅಂದರೆ ಫೆರಿಸ್ತಾ ಬರೆದ ವೇಳೆಯಲ್ಲಿ, ವಿಜಯನಗರಕ್ಕೆ ಬಹಳ ದೂರವಿಲ್ಲದ ಬಿಜಾಪುರದಲ್ಲಿ ಈ ಪರಂಪರಾಗತ ಸಮಾಚಾರ ಫೆರಿಸ್ತಾನ ಕಿವಿಯ ಮೇಲೆ ಬಿದ್ದುದರಲ್ಲಿ ಆಶ್ಚರ್ಯವೇನಿಲ್ಲ. ಆಗಿನವರೆಗೂ ಈ ವರದಿ ಜೀವಂತವಿದ್ದಿರಬೇಕು.

ಮೂರನೆಯ ಬಲ್ಲಾಳನ ಮಗ ವೀರವಿರೂಪಾಕ್ಷ ಬಲ್ಲಾಳದೇವನು ಈ ಹೊಸ ಊರಿನಲ್ಲಿ ಪಟ್ಟಾಭಿಷಿಕ್ತನಾದನು. ಈ ಊರಿಗೆ ವಿಜಯ ವಿರೂಪಾಕ್ಷಪುರವೆಂಬ ಹೆಸರೂ ಇತ್ತು. ಈ ಹೆಸರು ಮೂರನೆ ಬಲ್ಲಾಳನ ಮಗನ ಹೆಸರು. ಮೂರನೆ ಬಲ್ಲಾಳನು ಇದನ್ನು ತನ್ನ ಒಂದು ರಾಜಧಾನಿಯನ್ನಾಗಿ ಉಪಯೋಗಿಸುತ್ತಿದ್ದನು ಮತ್ತು ಆಗಿಂದಾಗ್ಗೆ ಅಲ್ಲಿ ತಂಗಿರುತ್ತಿದ್ದನು. ಉದಾಹರಣೆಗೆ ೧೩೪೪ ರಲ್ಲಿ ಅಲ್ಲಿದ್ದನು.[೨]

ನ್ಯೂನಿಜನ ಪ್ರಕಾರ ದೇವರಾವ್ ತೀರ ಮುದುಕ. ಬಲ್ಲಾಳನೂ ತೀರ ಮುದುಕ. ಹರಿಹರನು ವಿಜಯನಗರ ಸ್ಥಾಪನೆಯ ಕಾಲದಲ್ಲಿ ಮುದುಕನೆಂದು

---

೧. ಹೆರಾಸರ ಅಭಿಪ್ರಾಯಗಳ ಬಗ್ಗೆ ಶ್ರೀಕಂಠಯ್ಯನವರು ಮಾಡಿರುವ ಟೀಕೆಗಳು ಅವರ ಪುಸ್ತಕ "ಫೌಂಡರ್ಸ್ ಆಫ್ ವಿಜಯನಗರ" (ಬೆಂಗಳೂರು, ೧೯೩೮)ದ ಪುಟಗಳು ೧೦೬–೧೩೫ರಲ್ಲಿವೆ. ಈ ಲೇಖನದಲ್ಲಿರುವ ಅವರ ಉದಾಹೃತಭಾಗಗಳೆಲ್ಲ ಅದೇ ಪುಟಗಳಲ್ಲಿವೆ.

೨. ಅದೇ, ಪುಟಗಳು ೧೪೧–೧೫೧.

ಯಾರೂ ಹೇಳುವುದಿಲ್ಲ. ಬಹಳವೆಂದರೆ ೬೦ ವರ್ಷದ ವಯಸ್ಸಿನವನಿದ್ದಿರಬಹುದು. ಈ ಎಲ್ಲಾ ಕಾರಣಗಳಿಂದ ಮುಂದೆ ವಿಜಯನಗರವಾದ ಹೊಸಪಟ್ಟಣದ ಸ್ಥಾಪಕನು ಮೂರನೆ ಬಲ್ಲಾಳನೆಂದು ಶ್ರೀಕಂಠಯ್ಯನವರ ಮತ.

ಹೊಸಪಟ್ಟಣ – ಮೂರನೆ ಬಲ್ಲಾಳನ ಒಂದು ಮುಖ್ಯರಾಜಧಾನಿ

ದೋರಸಮುದ್ರ ಮತ್ತು ತಿರುವಣ್ಣಾಮಲೆಗಳ ಜತೆಗೆ ಹೊಸಪಟ್ಟಣವೂ ಒಂದು ಮುಖ್ಯ ರಾಜಧಾನಿಯಾಯಿತು. ಕಂಪ್ಲಿಯ ಪತನದ ನಂತರ ಮೂರನೆ ಬಲ್ಲಾಳನಿಗೆ ತನ್ನ ರಾಜ್ಯವನ್ನು ಉತ್ತರಕ್ಕೆ ವಿಸ್ತರಿಸುವ ಹಂಬಲವುಂಟಾಗಿರಬೇಕು. ಈ ದಿಕ್ಕಿನಲ್ಲಿ ಯಾರ ಪೈಪೋಟಿಯೂ ಇರಲಿಲ್ಲ. ಡೆಲ್ಲಿ ಸುಲ್ತಾನನು ಅನೇಕ ದಂಗೆಗಳನ್ನು ಎದುರಿಸಬೇಕಾಗಿತ್ತು. ಇಂತಹ ಅನುಕೂಲವಾದ ವಾತಾವರಣದಲ್ಲಿ ರಾಜ್ಯ ವಿಸ್ತರಿಸುವ ಹಂಬಲ ಅಸಹಜವೆನ್ನುವ ಹಾಗಿರಲಿಲ್ಲ. ಮೂರನೇ ಬಲ್ಲಾಳನ ವಿನಾ ಇನ್ನು ಯಾರಿಂದಲೂ ದಕ್ಷಿಣದ ಹಿಂದೂ ರಾಜ್ಯಗಳ ರಕ್ಷಣೆ ಸಾಧ್ಯವಿರಲಿಲ್ಲ.

ಬಲ್ಲಾಳನಿಂದ ಹರಿಹರನ ಪಟ್ಟಾಭಿಷೇಕ

ಸು. ೧೩೩೬ರಲ್ಲಿ ಹರಿಹರನನ್ನು ಮಹಾಮಂಡಲೇಶ್ವರನ್ನಾಗಿ ಮಾಡಿರಬೇಕು. ಪರಂಪರಾಗತ ವರದಿಗಳ ಪ್ರಕಾರ, ವಿಜಯನಗರ ಸಾಮ್ರಾಜ್ಯವು ೧೩೩೬ರಲ್ಲಿ ಸ್ಥಾಪನೆಯಾಯಿತು. ಶ್ರೀಕಂಠಯ್ಯನವರ ಪ್ರಕಾರ ಇದರರ್ಥ ಮೂರನೆ ಬಲ್ಲಾಳನು ಹರಿಹರನನ್ನು ಮಹಾಮಂಡಲೇಶ್ವರನನ್ನಾಗಿ ಮುಂದಿನ ವಿಜಯನಗರವಾದ ಹೊಸಪಟ್ಟಣದಲ್ಲಿ ನೇಮಿಸಿರಬೇಕು. ಇದನ್ನು ಸಾಮ್ರಾಜ್ಯಕ್ಕೆ ಒಂದು ಹೆಜ್ಜೆಯೆಂದು ಹರಿಹರನು ತಿಳಿದುಕೊಂಡಿರಬೇಕು. ಸ್ವಾತಂತ್ರ್ಯವನ್ನು ಹರಿಹರನು ಘೋಷಿಸಲಿಲ್ಲವೆನ್ನುವುದು ಸ್ಪಷ್ಟ. ೧೩೩೬ರಲ್ಲಿ ಹರಿಹರನು ಸ್ವತಂತ್ರನಾಗುವಷ್ಟು ಬಲಿಷ್ಠನಾಗಿರಲಿಲ್ಲ. ಯಾಕೆಂದರೆ ೧೩೪೦ರಲ್ಲಿ ನಾಲ್ಕನೆ ಬಲ್ಲಾಳನ ಪಟ್ಟಾಭಿಷೇಕವು ಅಲ್ಲಿ ಆಯಿತು.

೧೩೩೬ರಲ್ಲಿ ಹರಿಹರನು ಬಾರಕೂರಿನಲ್ಲಿ ಒಂದು ಕೋಟೆಯನ್ನು ಕಟ್ಟಿದನು. ೧೩೩೮ರಲ್ಲಿ ಮೂರನೆ ಬಲ್ಲಾಳನು ಆ ಕೋಟೆಯನ್ನು ಪರೀಕ್ಷಿಸುವ ಸಲುವಾಗಿ ಅಲ್ಲಿಗೆ ಹೋದನು. ಇದರರ್ಥ, ಹಿಂದೆ ಹೊಯ್ಸಳರು ಚಾಲುಕ್ಯರ ಮಹಾಮಂಡಲೇಶ್ವರರಾಗಿದ್ದ ಹಾಗೆ, ಹರಿಹರನು ಮೂರನೆ ಬಲ್ಲಾಳನ ಮಹಾಮಂಡಲೇಶ್ವರನಾಗಿದ್ದಿರಬೇಕು. ಯಾಕೆಂದರೆ, ೧೩೩೯ರಲ್ಲಿ ಮೂರನೆ ಬಲ್ಲಾಳನು ವಿಜಯನಗರದಲ್ಲಿ ತನ್ನ ಸಾಮರ್ಥ್ಯದಿಂದಲೇ ಸುಖಸಂಕಥಾ ವಿನೋದದಿಂದ ಆಳುತ್ತಿದ್ದನು. ಇದರಿಂದ ವಿಜಯನಗರ ಸಾಮ್ರಾಜ್ಯದ ಸ್ಥಾಪನೆ ಅಥವಾ ಹರಿಹರನು ಮಹಾಮಂಡಳೇಶ್ವರನಾದ ಮೂರು ವರ್ಷಗಳ ನಂತರವೂ

ಹರಿಹರ ಬುಕ್ಕರು ಹೊಯ್ಸಳರ ಮೇಲಾಧಿಕಾರವನ್ನು ಕಿತ್ತುಹಾಕುವ ಆಲೋಚನೆಯನ್ನು ಮಾಡುವ ಹಾಗಿರಲಿಲ್ಲ. ಯಾಕೆಂದರೆ ಮೂರನೆ ಬಲ್ಲಾಳನ ಹತ್ತಿರ ಮುಸ್ಲಿಂ ಸೈನಿಕರನ್ನೊಳಗೊಂಡ ಭಾರೀ ಸೈನ್ಯವಿತ್ತು. ಒಂದು ವೇಳೆ ಸಂಗಮ ಸಹೋದರರು ಡೆಲ್ಲಿ ಸುಲ್ತಾನರ ಅಧೀನರಾಗಿದ್ದರೆಂದು ನಾವು ಇಟ್ಟುಕೊಂಡರೂ ಮತ್ತು ಅವರ ಸಹಾಯ ಇವರಿಗೆ ಸಿಗಬಹುದಾಗಿದ್ದರೂ ಬಲ್ಲಾಳನನ್ನು ಎದುರಿಸುವ ಸಾಮರ್ಥ್ಯ ಇವರಿಗೆ ಇರಲಿಲ್ಲ. ಒಂದು ಶಾಸನದ ಪ್ರಕಾರ ೧೩೪೦ರಲ್ಲಿ ಬಾದಾಮಿಯಲ್ಲಿ ಅಲ್ಲಿಯ ನಾಯಕ ಚಾಮರಾಜನು ಒಂದು ಕೋಟೆಯನ್ನು ಕಟ್ಟಿದನು. ಅವನು ಹರಿಹರನ ಅಧಿಕಾರಿ ಮತ್ತು ಹರಿಹರನನ್ನು ಕೀರ್ತಿವಂತ ಮಹಾಮಂಡಲೇಶ್ವರನೆಂದು ವರ್ಣಿಸಿದ್ದಾನೆ. ದೋರಸಮುದ್ರದಿಂದ ತಿರುವಣ್ಣಾಮಲೆಗೆ ರಾಜಧಾನಿಯ ಬದಲಾವಣೆಗೆ ಕಾರಣ ತಮ್ಮ ಅಧೀನರಾದ ಸಂಗಮ ಸಹೋದರರ ಉತ್ಕರ್ಷವೇ ಹೊರತು ಮುಸ್ಲಿಂರ ದಾಳಿಗಳ ಭೀತಿಯಲ್ಲವೆಂದು ಹೆಚ್. ಕೃಷ್ಣಶಾಸ್ತ್ರಿಗಳು ಎನ್ನುತ್ತಾರೆ. ಶ್ರೀಕಂಠಯ್ಯನವರ ಪ್ರಕಾರ ಮೂರನೆ ಬಲ್ಲಾಳನಿಗೆ ಈ ಹೆದರಿಕೆಯ ಅರಿವಿತ್ತು. ಯಾಕೆಂದರೆ ಅವನು ಮಧುರೈ ಸುಲ್ತಾನನ ಮೇಲೆ ದಾಳಿ ಮಾಡುವ ಮುಂಚೆ ತನ್ನ ಅವಿಧೇಯ ಅಧಿಕಾರಿಗಳನ್ನು ಅವನು ಎಂದೂ ಮರೆಯುವವನಲ್ಲ. ಮಧುರೈ ಸುಲ್ತಾನನ ಮೇಲೆ ೧೩೪೨ರಲ್ಲಿ ಬೆರಿಬಿ (ಚಿರಚಿ)ಯಲ್ಲಿ ಯುದ್ಧ ಮಾಡುವಾಗ ಅವನು ಸತ್ತನು. ಅವನು ಮೇಲೆ ಹೇಳಿದ ಮುನ್ನೆಚ್ಚರಿಕೆಯನ್ನು ತೆಗೆದುಕೊಂಡಿದ್ದುದರಿಂದ ಅವನ ಮಗ ನಾಲ್ಕನೆ ಬಲ್ಲಾಳನು ಶಾಂತರೀತಿಯಲ್ಲಿ ಪಟ್ಟಾಭಿಷಿಕ್ತನಾದನು. ಆದರೆ ಅವನು ಅಷ್ಟು ಸಮರ್ಥನಲ್ಲದ್ದರಿಂದ ಹರಿಹರ ಬುಕ್ಕರಿಗೆ ಸ್ವತಂತ್ರರಾಗುವುದಕ್ಕೆ ಬೇಕಾದ ಅವಕಾಶ ಸಿಕ್ಕಿತು.

ಹೊಯ್ಸಳರಿಗೆ ಸಂಗಮವಂಶದ ವಿಧೇಯತೆ

ಹೊಯ್ಸಳ ವಂಶ ನಷ್ಟವಾದ ಮೇಲೆ ಸಂಗಮ ವಂಶ್ಥರು ಸ್ವತಂತ್ರವಾದರೂ, ಅದು ಆಗುವವರೆಗೂ, ಸಂಗಮರು ಹೊಯ್ಸಳವಂಶಕ್ಕೆ ವಿಧೇಯರಾಗಿದ್ದುದಕ್ಕೆ ಶ್ರೀಕಂಠಯ್ಯನವರು ಕೆಳಗಿನ ಉದಾಹರಣೆಗಳನ್ನು ಕೊಡುತ್ತಾರೆ. ಮೂರನೆ ಬಲ್ಲಾಳನು ಹರಿಹರನನ್ನು ಮಹಾಮಂಡಲೇಶ್ವರನನ್ನಾಗಿ ನೇಮಿಸಿದುದರಿಂದಲೂ ಮತ್ತು ಸಂಗಮ ಸಹೋದರರು ಉತ್ತರ ಗಡಿಗಳನ್ನು ದಕ್ಷ ರೀತಿಯಲ್ಲಿ ರಕ್ಷಿಸುತ್ತಿದ್ದುದರಿಂದಲೂ, ಈ ಅಧಿಕಾರಿಗಳು ತಮ್ಮ ರಾಜನನ್ನು ನಿಷ್ಠೆಯಿಂದ ಸೇವಿಸುತ್ತಿದ್ದರೆನ್ನುವುದನ್ನು ತಿಳಿದುಕೊಳ್ಳಬಹುದು. ಈ ಅಧಿಕಾರಿಗಳಿಗೆ ಹೀಗೆ ಮಾಡದೇ ವಿಧಿಯೇ ಇರಲಿಲ್ಲ. ಕೆಲವು ಸಣ್ಣಪುಟ್ಟ ಘಟನೆಗಳನ್ನು (ಬಾರಕೂರಿನಲ್ಲಿ ನಡೆದಿದ್ದಿರ ಬಹುದಾದಂಥ) ಬಿಟ್ಟರೆ, ಹೊಯ್ಸಳ ಸಾಮ್ರಾಜ್ಯವಾಗಿದ್ದ ಪ್ರದೇಶದಲ್ಲಿ ಸಂಗಮರು ತಮ್ಮ ರಾಜ್ಯವನ್ನು

ವಿಸ್ತರಿಸುವ ಸಲುವಾಗಿ ಯಾವ ಯುದ್ಧವನ್ನೂ ಮಾಡಲಿಲ್ಲ. ಹರಿಹರ ಬುಕ್ಕರು ಹೊಯ್ಸಳ ಸಾಮ್ರಾಜ್ಯದ ಹೃದಯವೆನಿಸುವ ಭಾಗದಲ್ಲಿದ್ದ ಶೃಂಗೇರಿಗೆ ತಮ್ಮ ಸಾಮ್ರಾಜ್ಯದ ವಿಜಯೋತ್ಸವವನ್ನು ಆಚರಿಸಲು ಹೋಗಿದ್ದರು. ಅದೇ ವರ್ಷ ಕೊನೆಯ ಸಾಮ್ರಾಟನು ನಿಧನ ಹೊಂದಿದನು ಮತ್ತು ಅದೇ ವರ್ಷ ಶೃಂಗೇರಿಯಲ್ಲಿ ಮೇಲೆ ಹೇಳಿದ ಉತ್ಸವವಾಯಿತು. ಈ ವರ್ಷದ ನಂತರ ಹೊಯ್ಸಳ ರಾಜರ ಶಾಸನಗಳು ಲಭ್ಯವಿಲ್ಲ. ಆದ್ದರಿಂದ ಅಧಿಕಾರದ ಹಸ್ತಾಂತರವು ಒಂದು ಸಂತತಿಯಿಂದ ಇನ್ನೊಂದು ಸಂತತಿಗೆ ಶಾಂತರೀತಿಯಲ್ಲಿ ಆಯಿತೆನ್ನುವುದು ಸ್ಪಷ್ಟ. ಅದೇ ವರ್ಷ ಹೊಯ್ಸಳ ಸಾಮ್ರಾಜ್ಯವಾಗಿದ್ದ ಪ್ರದೇಶದಲ್ಲಿ ಹರಿಹರನ ಅಧಿಕಾರದ ಸ್ಥಾಪನೆಯಾಯಿತು. ಹರಿಹರನ ಅಳಿಯ ಬಳ್ಳಪ್ಪ ದಂಡನಾಯಕನು ಶೃಂಗೇರಿಯ ಉತ್ಸವದಲ್ಲಿ ಭಾಗಿಯಾಗಿದ್ದನು. ಇವನು ಬಲ್ಲಾಳನ ಸರ್ಕಾರದಲ್ಲಿ ಪ್ರಮುಖ ಅಧಿಕಾರಿಯಾಗಿ ರಾಜಧಾನಿಯಲ್ಲಿ ಆಳುತ್ತಿದ್ದನು. ಆರು ವರ್ಷಗಳ ನಂತರ ಬುಕ್ಕನು ಹೊಯ್ಸಳ ರಾಜಧಾನಿಯಲ್ಲಿ ಆಳುತ್ತಿದ್ದನು.

ಚಾಲುಕ್ಯರ ನಂತರವೂ ಹೊಯ್ಸಳರು ತಮ್ಮನ್ನು ಮಹಾಮಂಡಲೇಶ್ವರರೆಂದು ಹೇಗೆ ಕರೆದುಕೊಂಡರೋ, ಹಾಗೆಯೇ ಹೊಯ್ಸಳರ ನಂತರವೂ ಸಂಗಮರು ತಮ್ಮನ್ನು ಮಹಾಮಂಡಲೇಶ್ವರರೆಂದೇ ಕರೆದುಕೊಂಡರು. ಎರಡನೆ ಹರಿಹರನು ಮೊದಲ ಸಲ ಸಾಮ್ರಾಟನೆಂದು ಕರೆದುಕೊಂಡನು. ಮುಸ್ಲಿಮರ ದಾಳಿಯಿಂದ ದಕ್ಷಿಣ ಭಾರತವನ್ನು ರಕ್ಷಿಸುವ ಕಾರ್ಯವನ್ನು ಹೊಯ್ಸಳರು ಆರಂಭಿಸಿದರು. ಸಂಗಮರು ಅದನ್ನು ಪೂರ್ತಿ ಮಾಡಿದರು.

ಈಚೆಗಿನ ಚರ್ಚೆಗಳು ಮತ್ತು ಶೋಧನೆಗಳು ಶ್ರೀಕಂಠಯ್ಯನವರ ಅಭಿಪ್ರಾಯಗಳನ್ನು ಸಮರ್ಥಿಸುತ್ತವೆ. ಇವುಗಳೆಲ್ಲಾ ದೇಸಾಯಿ ಪಾಂಡುರಂಗರಾಯರವು[೩] ಇಲ್ಲವೇ ಅವರ ಸಹೋದ್ಯೋಗಿಗಳವು. ದೇಸಾಯಿಯವರ ಮುಂಚೆ ಬಿ.ಎ. ಸಾಲೆತೊರೆಯವರು ಒಂದು ಶಾಸನದಲ್ಲಿ ಸಂಗಮನು ಕರ್ನಾಟಕದವನು ಮತ್ತು ಅವನು ಅದನ್ನು ಅಲಂಕರಿಸಿದನೆಂದು ಹೇಳುತ್ತದೆನ್ನುವುದನ್ನು ತೋರಿಸಿದ್ದರು.[೪] ಇದಕ್ಕೂ ಹೆಚ್ಚು ನಿರ್ಣಾಯಕವಾದ ಆಧಾರವನ್ನು ದೇಸಾಯಿಯವರು ತೋರಿಸಿದ್ದಾರೆ. ಅದು ಎಡತೊರೆ ತಾಲ್ಲೂಕಿನ ಶಾಸನ.[೫] ಅದರಲ್ಲಿ 'ಪಂಪಾಪುರೀ ಪರಿಸರೇ ಭವಸಂಗಮಾಖ್ಯ'ವೆಂದಿರುವುದರಿಂದ

---

೩. ಐ.ಎ. XLV ಪುಟಗಳು ೧೭ ಮತ್ತು ನಂತರದವು.

೪. ವಿರೂಪಾಕ್ಷನ ಶ್ರೀಶೈಲಂ ತಾಮ್ರಪಟಗಳು, ಶಕ. ಸಂ. ೧೩೮೮, ಎ.ಇ. XV, ಪು. ೧೧..

೫. ವಿ.ಎಸ್.ಸಿ.ವಿ. ಪು. ೧೫೨.

ಸಂಗಮನೆಂದು ಪ್ರಸಿದ್ಧಿಯಾದವನು. ಪಂಪಾಪುರ ಪರಿಸರದವನೆನ್ನುವುದು ನಿರ್ವಿವಾದ. ಸಂಗಮ ವಂಶದವರು ಕರ್ನಾಟಕಸ್ಥರೆನ್ನುವುದಕ್ಕೆ ಇದಕ್ಕಿಂತ ಹೆಚ್ಚಿನ ಆಧಾರ ಅನವಶ್ಯ. ಒಂದು ವೇಳೆ ಸಂಗಮ ವಂಶಸ್ಥರು ಕಾಕತೀಯ ಮತ್ತು ಕಂಪ್ಲಿಯವರ ಅಧಿಕಾರದಲ್ಲಿದ್ದರೂ ಮತ್ತು ಹೊಯ್ಸಳರ ಜೊತೆಗೆ ಯುದ್ಧ ಮಾಡಿದ್ದರೂ, ಅವರು ಕರ್ನಾಟಕದವರೇ ಆಗುತ್ತಾರೆ. ಈ ಶೋಧನೆಯನ್ನು ದೇಸಾಯಿಯವರ ಇನ್ನೊಂದು ಶೋಧನೆಯು ಸಮರ್ಥಿಸುತ್ತದೆ. ಅದು ನೆಲ್ಲೂರು ಜಿಲ್ಲೆಯ ಗೋಜಲವೀಡು ಶಾಸನದ ವಾಸ್ತವವಾದ ತೇದಿ. ಈ ಶಾಸನವನ್ನು ನೆಲ್ಲೂರು ಜಿಲ್ಲೆಯ ಶಾಸನಗಳೆನ್ನುವ ಪುಸ್ತಕದಲ್ಲಿ ಮುದ್ರಿಸಿದ್ದಾರೆ.[೬] ಅದರ ಸಂಪಾದಕರು ಅದರ ತೇದಿಯನ್ನು ಕ್ರಿ.ಶ. ೧೩೧೪ಕ್ಕೆ ಸಮನಾದದ್ದೆಂದು ಓದಿದ್ದಾರೆ. ವೆಂಕಟರಮಣಯ್ಯನವರು[೭] ಈ ತೇದಿಯನ್ನು ಸರಿಯೆಂದು ತಿಳಿದುಕೊಂಡು ೧೩೧೪ರಲ್ಲಿ ನೆಲ್ಲೂರು ಪ್ರಾಂತ್ಯದಲ್ಲಿ ಬುಕ್ಕರಾಜನೆಂಬ ಸ್ಥಳೀಯ ರಾಜನಿದ್ದಿರಬೇಕು ಮತ್ತು ಹರಿಹರ ಬುಕ್ಕರ ತಂದೆ ಸಂಗಮನ ತಂದೆಯಾಗಿರಬೇಕೆಂದು ಹೇಳಿದ್ದಾರೆ. ಮತ್ತು ಆಗ ಕಾಕತೀಯನು ಈ ಭಾಗದ ಒಡೆಯನಾಗಿದ್ದುದರಿಂದ ಬುಕ್ಕನು ಒಬ್ಬ ಸ್ಥಳೀಯ ಅಧಿಕಾರಿಯಾಗಿ ಕಾಕತೀಯರ ಅಂಕಿತದಲ್ಲಿದ್ದಿರಬೇಕೆಂದು ವಾದಿಸಿದ್ದಾರೆ. ಮತ್ತು ನೆಲ್ಲೂರು ಪ್ರಾಂತ್ಯವು ತೆಲುಗು ಭಾಷಿಕದ ಪ್ರಾಂತ್ಯವಾಗಿದ್ದುದರಿಂದ ಈ ಬುಕ್ಕನು ಮತ್ತು ಅವನ ಮಕ್ಕಳು ತೆಲುಗು ದೇಶದವರೆಂದು ನಿರ್ಧರಿಸಿದರು. ದೇಸಾಯಿಯವರು ಈ ಶಾಸನದ ತೇದಿ ಕ್ರಿ.ಶ. ೧೩೧೪ ಆಗುವುದಿಲ್ಲವೆಂದು ಅದು ಕ್ರಿ.ಶ. ೧೩೭೪ಕ್ಕೆ ಸರಿಹೋಗುತ್ತದೆಂದು ಈಚೆಗೆ ಆ ಶಾಸನದ ಪುನರಭ್ಯಾಸದಿಂದ ಕಂಡುಹಿಡಿದಿದ್ದಾರೆ.[೮] ಆ ಶಾಸನದಲ್ಲಿರುವ ಬುಕ್ಕರಾಜನು ಎರಡನೆಯ ಬುಕ್ಕನೆನ್ನುವುದು ಸುಸ್ಪಷ್ಟ. ಇದು ಅವನ ಬಿರುದುಗಳಿಂದಲೂ ಸಿದ್ಧವಾಗುತ್ತದೆ. ಹೀಗಿದ್ದರೂ, ಆರ್. ಸುಬ್ರಹ್ಮಣ್ಯಂ ಅವರು ಅನೇಕ ಕಡೆಗಳಲ್ಲಿ ಸಂಗಮರು ತೆಲುಗರು ಎನ್ನುವ ವಾದವನ್ನೇ ಮಂಡಿಸಿದ್ದಾರೆ. ಹೆಚ್.ಕೆ. ಷೇರವಾನಿ ಮತ್ತು ಪಿ.ಎಂ. ಜೋಷಿಯವರು ಸಂಪಾದಿಸಿದ Mediaeval History of Deccan ನಲ್ಲಿ ಮಾತ್ರ ತೆಲುಗು ಮತ್ತು ಕರ್ನಾಟಕ ವಾದಗಳನ್ನು ಕೊಡಲಾಗಿದೆ.

ಸದ್ಯ, ವಿಜಯನಗರ ಸಾಮ್ರಾಜ್ಯದ ಸಂಸ್ಥಾಪಕರ ಬಗ್ಗೆ ಏನಾದರೂ ವಾದವಿವಾದವಿದ್ದರೆ, ಅದು ಅವರು ತೆಲುಗು ಅಥವಾ ಕನ್ನಡ ಎಂದಾಗಲಿ, ಅಥವಾ ಅವರು ವಾರಂಗಲ್, ಕಂಪ್ಲಿ ಮತ್ತು ಹೊಯ್ಸಳರ ಅಧೀನರಾಗಿದ್ದರೆ

---

೬ 'ಫೌಂಡರ್ಸ್ ಆಫ್ ವಿಜಯನಗರ', ಪು. ೧೫೨.
೭. ಪಿ.ಎಸ್.ಸಿ.ಪಿ. ಪು. ೧೬೪.
೮. ಅದೇ ಪುಟದಲ್ಲಿ.

ಎನ್ನುವುದರ ಬಗೆಗಾಗಲಿ ಅಲ್ಲ. ವಾರಂಗಲ್ ಮತ್ತು ಕಂಪ್ಲಿಯವರ ಕೆಳಗಿದ್ದು ನಂತರ ಹೊಯ್ಸಳರ ಅಧಿಕಾರಿಗಳಾಗಿದ್ದಿರಬಹುದು. ಈಗಿರುವ ವಾದಗ್ರಸ್ತ ಪ್ರಶ್ನೆ ಒಂದೇ, ಅದೆಂದರೆ, ಎಸ್.ಕೆ. ಅಯ್ಯಂಗಾರ್, ಹೆರಾಸ್, ಬಿ.ಎ. ಸಾಲೆತೊರೆ, ಎಸ್. ಶ್ರೀಕಂಠಯ್ಯ ಮತ್ತು ಪಿ.ಬಿ. ದೇಸಾಯಿಯವರು ಹೇಳುವಂತೆ ಅವರು ಹೊಯ್ಸಳರಿಗೆ ತ್ರಿಕರಣಶುದ್ಧಿಯಾಗಿ ವಿಧೇಯರಾಗಿದ್ದರೇ ಅಥವಾ ಹೆಚ್.ಕೆ. ಶಾಸ್ತ್ರಿಯವರು ಅನುಮಾನಿಸಿದಂತೆ ಹೊಯ್ಸಳರಿಗೆ ಅಧೀನರಾಗಿದ್ದರೂ, ಅವರಿಗೆ ನಿಷ್ಠಾವಂತರಾಗಿರಲಿಲ್ಲವೇ? ಎರಡನೇ ಅಭಿಪ್ರಾಯವನ್ನು ಅನುಮೋದಿಸುವವರು ಸಂಗಮರಿಗೂ ಹೊಯ್ಸಳರಿಗೂ ವಿರೋಧವಿತ್ತೆಂದು ತೋರಿಸುವ ವೆಂಕಟರಮಣಯ್ಯನವರು ಉದಾಹರಿಸುವ ಹೊಯ್ಸಳ-ಸಂಗಮ ಘರ್ಷಣೆಗಳಿಂದ ತಮ್ಮ ವಾದವನ್ನು ಪುಷ್ಟೀಕರಿಸಲು ಸಾಧ್ಯ.[೬] ಹೇಗೆಂದರೆ ೧೩೩೦ರಲ್ಲಿ ಬಾರಕೂರಿನಲ್ಲಿ ಹರಿಹರನು ಒಂದು ಕೋಟೆಯನ್ನು ಕಟ್ಟಿದನು. ಕೆಲವು ವರ್ಷಗಳ ನಂತರ ಮೂರನೆ ಬಲ್ಲಾಳನು ಅಲ್ಲಿಗೆ ಹೋಗಿ ಅದರ ಕಾವಲುಗಾರನನ್ನಾಗಿ ತನ್ನ ಮನುಷ್ಯನನ್ನು ನೇಮಿಸಿದನು. ಇವನು ಹೀಗೆ ಮಾಡಿದ್ದಕ್ಕೆ ಏನು ಕಾರಣ? ಸಂಗಮರ ವಿಧೇಯತ್ವದ ಬಗ್ಗೆ ಅವನಿಗಿದ್ದ ಸಂಶಯವೇ? ಅಥವಾ ಮೂರನೆ ಬಲ್ಲಾಳನ ಮಗನಿಗೆ ಅವರ ಸಹಾಯ ಅಗತ್ಯವಿದ್ದುದರಿಂದ ಅವರ ಕಾರ್ಯವನ್ನು ಹೀಗೆ ಸಮರ್ಥಿಸಿದನೇ? ಹೊಯ್ಸಳರ ಪ್ರಮುಖ ಅಧಿಕಾರಿಯಾಗಿದ್ದ ಬಳ್ಳಪ್ಪ ದಂಡನಾಯಕನು ಹರಿಹರನ ಅಳಿಯನಾದನು. ಇದರಿಂದ ನಾವು ಯಾವ ಅರ್ಥವನ್ನು ಮಾಡಿಕೊಳ್ಳಬೇಕು? ಎರಡು ಮನೆತನದವರು ಸ್ನೇಹಿತರೆಂದು ಈ ಮದುವೆ ಆಯಿತೇ ಅಥವಾ ಸಂಗಮರು ಹೊಯ್ಸಳರನ್ನು ಹಿಂದೂಡಿದ್ದರಿಂದ ಅವರ ಅಧಿಕಾರಿಗಳು ಒಬ್ಬೊಬ್ಬರಾಗಿ ಗೆದ್ದೆತ್ತಿನ ಬಾಲವನ್ನು ಹಿಡಿದುಕೊಂಡರೇ?

ಈಗ ನಮಗೆ ಗೊತ್ತಿರುವುದರ ಮೇಲೆ ಈ ವಾದಕ್ಕೆ ಇದೇ ಸರಿಯಾದದ್ದು ಎಂದು ಉತ್ತರಿಸಲು ಸಾಧ್ಯವಿಲ್ಲ. ಆದರೆ ಈ ಕಥೆಯು ಮುಗಿದ ರೀತಿಯಿಂದ, ಅದು ಹೇಗೆ ಆರಂಭವಾಯಿತೆಂದು ನಾವು ಊಹಿಸಬಹುದು. ಈ ಕಥೆ ಹೇಗೆ ಮುಗಿಯಿತೆಂದರೆ, ಹೊಯ್ಸಳರು ಆರಂಭಿಸಿದ ಸ್ವಾತಂತ್ರ್ಯಹೋರಾಟವನ್ನು ಸಂಗಮರು ಮುಗಿಸಿದರು. ಮತ್ತು ದಕ್ಷಿಣ ಭಾರತವನ್ನು ನೂರಾರು ವರ್ಷಗಳು ಅಂತಹ ದಾಳಿಗಳ ಭೀತಿಯಿಲ್ಲದ ಹಾಗೆ ಮಾಡಿದರು. ಹೀಗೆ ಮಾಡುವಾಗ ಹೊಯ್ಸಳರು ಸ್ಥಾಪಿಸಿದ ಒಂದು ರಾಜಧಾನಿಯನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡರು. ಅವರ ಕೆಲವು ಅಧಿಕಾರಿಗಳು ಇವರ ಅಧಿಕಾರಿಗಳಾದರು. ಅಧಿಕಾರಿವನ್ನು ನಡೆಯಿಸುವಾಗ ಹೊಯ್ಸಳರ ಧ್ಯೇಯಗಳನ್ನು ತಮ್ಮ ಧ್ಯೇಯಗಳನ್ನಾಗಿ ಮಾಡಿಕೊಂಡರು. ಇದನ್ನೆಲ್ಲಾ ನೋಡಿದರೆ ನಾವು ಏನು ಹೇಳಬಹುದೆಂದರೆ ಅವರ ಸಂಬಂಧಗಳು ಅನ್ಯೋನ್ಯವಾಗಿದ್ದವು. ಅಥವಾ ಸಂಗಮರು

ಧ್ಯೇಯವಾದಿಗಳಾದರೂ ವಾಸ್ತವವಾದಿಗಳೂ ಅಹುದು. ಅಥವಾ ಹೊಯ್ಸಳರ ಜೊತೆಗೆ ತಮ್ಮ ವ್ಯವಹಾರಗಳನ್ನು ನಡೆಯಿಸುವಲ್ಲಿ ತಮ್ಮ ಹಿತಾಸಕ್ತಿಗಳನ್ನು ಮುಂದಿಟ್ಟಿದ್ದರು. ಅಥವಾ ಶ್ರೀಕಂಠಯ್ಯನವರು ಹೇಳುವ ಹಾಗೆ ಅವರು ಹೊಯ್ಸಳರ ಅಧೀನರಾಗಿದ್ದರು ಸ್ವತಂತ್ರರಾಗಲು ಆತುರದಲ್ಲಿದ್ದ ಅಧೀನರಾಗಿದ್ದರೆಂದು ಹೇಳಬಹುದು.

ವಿದ್ಯಾರಣ್ಯರ ಪಾತ್ರದ ಬಗ್ಗೆ ಸಕಲೇಶಪುರ ಶ್ರೀಕಂಠಯ್ಯನವರ ಅಭಿಪ್ರಾಯ

ವಿಜಯನಗರ ಸಾಮ್ರಾಜ್ಯ ಸ್ಥಾಪನೆಯ ನಂತರದ ಶಾಸನಗಳು ಮತ್ತು ಸಾಹಿತ್ಯ ಗ್ರಂಥಗಳಲ್ಲಿ ಬಂದ ಪರಂಪರಾಗತ ವರದಿಗಳೂ ಮತ್ತು ನ್ಯೂನಿಜ್, ಬ್ಯುಕಾನನ್ನರಂತಹ ವಿದೇಶಿ ಪ್ರವಾಸಿಗಳ ಬರಹಗಳೂ, ವಿದ್ಯಾರಣ್ಯರು ವಿಜಯನಗರ ಸಾಮ್ರಾಜ್ಯದ ಸ್ಥಾಪನೆಯಲ್ಲಿ ಪಾತ್ರ ವಹಿಸಿದ್ದರೆನ್ನುತ್ತವೆ. ಇನ್ನು ಒಂದು ಹೆಜ್ಜೆ ಮುಂದೆ ಹೋಗಿ ನ್ಯೂನಿಜನು ವಿದ್ಯಾರಣ್ಯರ ಗೌರವಾರ್ಥವಾಗಿ ರಾಜಧಾನಿಗೆ ವಿದ್ಯಾನಗರವೆಂದು ಹೆಸರಿಟ್ಟರೆಂದೂ ಹೇಳುತ್ತಾನೆ.

ಶ್ರೀಕಂಠಯ್ಯನವರು ಈ ಪರಂಪರಾಗತ ಅಭಿಪ್ರಾಯವನ್ನು ಅನುಮೋದಿಸುತ್ತಾರೆ.[೧] ಈ ವಿಷಯದಲ್ಲಿ ಸಮಕಾಲೀನ ವರದಿಗಳು ಏನೂ ಹೇಳಲಿಲ್ಲವಾದ್ದರಿಂದ ವಿದ್ಯಾರಣ್ಯರ ಪಾತ್ರವಿಲ್ಲವೆನ್ನುವ ಹೆರಾಸರ ಮತವನ್ನು ಖಂಡಿಸುವುದೇ ಅವರ ಉದ್ದೇಶ. ವಿದ್ಯಾರಣ್ಯರ ಕುರಿತಾಗಿ ಈ ಕೆಳಗೆ ಹೇಳಿದ ಘಟನೆಗಳು ಸತ್ಯವಾದುವೆಂದು ಹೆರಾಸನೂ ಒಪ್ಪಿಕೊಳ್ಳುತ್ತಾರೆ:

೧. ಕಾಶಿಗೆ ಹೋಗಿದ್ದ ವಿದ್ಯಾರಣ್ಯರನ್ನು ೧೩೫೬ರಲ್ಲಿ ವಿಜಯನಗರಕ್ಕೆ ಆಹ್ವಾನಿಸಲಾಯಿತು.

೨. ೧೩೬೮ರಲ್ಲಿ ಅವರು ಬುಕ್ಕರಾಯನ ಮಂತ್ರಿಗಳಾಗಿದ್ದರು.

೩. ೧೩೮೦ರ ಹೊತ್ತಿಗೆ ಅವರು ಜಗದ್ಗುರುಗಳಾಗಿದ್ದರು.

೪. ೧೩೮೫ರಲ್ಲಿ ಚಿಕ್ಕರಾಯರಿಂದ ಅವರಿಗೆ ಭೂದಾನ ಸಂದಿತು.

೫. ೧೩೮೬ರಲ್ಲಿ ಅವರ ವಿದೇಹಮುಕ್ತಿಯಾಯಿತು.

ವಿಜಯನಗರ ಸ್ಥಾಪನೆಯಲ್ಲಿ ವಿದ್ಯಾರಣ್ಯರ ಪಾತ್ರವಿತ್ತೆನ್ನುವ ಅಭಿಪ್ರಾಯವು ನಂತರದ ಸೃಷ್ಟಿಯೆಂಬುದು ಹೆರಾಸರ ಮತ. ಈ ಸೃಷ್ಟಿ ಹೇಗೆ ಮತ್ತು ಯಾವಾಗ ಆಯಿತೆನ್ನುವುದನ್ನು ಕಂಡುಹಿಡಿಯಲು ಅವರು ಪ್ರಯತ್ನಿಸುತ್ತಾರೆ. ಅವರ ಪ್ರಕಾರ ವಿಜಯನಗರ ಅದರ ಮೊದಲ ಹೆಸರು. ವಿದ್ಯಾನಗರವೆಂಬುದು ನಂತರದ ಅದರ ಅಪಭ್ರಂಶ. ಈ ಬದಲಾವಣೆ ಭಾಷಿಕ ಬದಲಾವಣೆಯಲ್ಲ.

ಪ್ರಯತ್ನಪೂರ್ವಕವಾಗಿ ಮಾಡಿದ್ದು. ಸಾಮ್ರಾಜ್ಯ ಸ್ಥಾಪನೆಯ ಸಂಬಂಧದಲ್ಲಿ ಹುಟ್ಟಿಸಿದ ಅನೇಕ ಕೃತಕ ಭೂದಾನಗಳು ತೋರಿಸುವಂತೆ ಈ ಅಪಭ್ರಂಶ ಅಪೇಕ್ಷಣೀಯವಾಗಿತ್ತು ಮತ್ತು ಇದನ್ನು ಉದ್ದೇಶಪೂರ್ವಕವಾಗಿ ಮಾಡಿದರೆಂದು ಹೆರಾಸರು ಹೇಳುತ್ತಾರೆ. ಮುಂದುವರೆದು ಅವರು ಏನು ಹೇಳುತ್ತಾರೆಂದರೆ ಕೃತಕ ಶಾಸನಕರ್ತರು ಬುದ್ಧಿವಂತರು ಮತ್ತು ಸುಶಿಕ್ಷಿತರು. ತಮ್ಮ ಕೃತಕ ಕಥೆಗಳನ್ನು ಸಾಮ್ರಾಜ್ಯದಾದ್ಯಂತ ಪ್ರಸಾರ ಮಾಡುವುದರಲ್ಲಿ ಯಶಸ್ವಿಯಾದರು. ಅಲ್ಲದೆ ಸಮಕಾಲೀನರ, ಶತಮಾನಗಳ ನಂತರದ ಮುಂದಿನ ಪೀಳಿಗೆಯವರ ಮತ್ತು ಇತಿಹಾಸಕಾರರ ಒಪ್ಪಿಗೆಯನ್ನು ತಮ್ಮ ಅಭಿಪ್ರಾಯಗಳಿಗೆ ದೊರಕಿಸುವುದರಲ್ಲಿಯೂ ಸಮರ್ಥರಾಗಿದ್ದಾರೆ.

ಸಾಮಾನ್ಯವಾಗಿ ನ್ಯಾಯವಾದಿಗಳಲ್ಲಿ ಪ್ರಚಲಿತವಿರುವ ಯಾವ ಪ್ರಯೋಜನಕ್ಕಾಗಿ ಇಷ್ಟೆಲ್ಲಾ ಮಾಡಲಾಯಿತೆನ್ನುವ ಪ್ರಶ್ನೆಯನ್ನು ಈ ಸಂದರ್ಭದಲ್ಲಿ ಕೇಳಬಹುದೆಂದು ಹೆರಾಸರು ಹೇಳುತ್ತಾರೆ. ತಮ್ಮ ಹಿಂದಿನ ಜಗದ್ಗುರುಗಳಲ್ಲಿ ಒಬ್ಬರು ಸಾಮ್ರಾಜ್ಯಸ್ಥಾಪನೆಯ ಕಾಲದಲ್ಲಿ ಮಹತ್ವ ಪಾತ್ರ ವಹಿಸಿದ್ದರೆನ್ನುವ ಸುಳ್ಳು ಕಥೆಯ ಪ್ರಸಾರ ಮುಂದಿನ ಜಗದ್ಗುರುಗಳಿಗೆ ಬಹು ಲಾಭಕಾರಿ. ಈ ಸುಳ್ಳು ಕಥೆಯನ್ನು ಸಾಮ್ರಾಜ್ಯದಾದ್ಯಂತ ಎಲ್ಲರೂ ನಂಬಿದರೆ, ಅವರು ಏನು ಪ್ರತಿಫಲ ಬೇಕಾದರೂ ಅಪೇಕ್ಷಿಸಬಹುದಾಗಿತ್ತು. ಯಾವ ಭೂದಾನ ಬೇಕಾದರೂ, ಯಾವಾಗ, ಎಲ್ಲಿ ಬೇಕಾದರೂ. ಮೊದಲನೆ ಹರಿಹರನನ್ನು ಸಿಂಹಾಸನಾರೂಢರನ್ನಾಗಿ ಮಾಡಿದರೋ ಅಂತಹ ವಿದ್ಯಾರಣ್ಯರಿಗೆ ಅವರಿಂದ ಉಪಕೃತರಾದ ಹರಿಹರನ ವಂಶಸ್ಥರಿಂದ ಸಹಜವಾಗಿ ನಿರೀಕ್ಷಿಸಬಹುದಾಗಿತ್ತು. ಹದಿನಾರನೆ ಶತಮಾನದ ಆದಿಯಲ್ಲಿ ಶೃಂಗೇರಿ ಪೀಠದ ಸ್ವಾಮಿಗಳು ಈ ಕೃತಕ ದಾಖಲೆಗಳನ್ನು ಸೃಷ್ಟಿಸಿದರೆನ್ನುವುದು ಅವರ ನಿರ್ಣಯ.

ಇದಕ್ಕೆ ಉತ್ತರವಾಗಿ ಶ್ರೀಕಂಠಯ್ಯನವರು "ಜಗತ್ತಿನಾದ್ಯಂತ, ತಮ್ಮ ಸನ್ಯಾಸಿಗಳ ವಿದ್ವತ್ತು, ಶ್ರದ್ಧೆ, ಭಕ್ತಿ, ಅಭ್ಯಾಸ ಇವುಗಳಿಗೆ ಹೆಸರುವಾಸಿಯಾದ ಸೊಸೈಟಿ ಆಫ್ ಜೀಸಸ್ ಸಂಸ್ಥೆಯ ಸದಸ್ಯರೊಬ್ಬರು (ಅಂದರೆ ಫಾದರ್ ಹೆರಾಸರು) ಶೃಂಗೇರಿಯ ಜಗದ್ಗುರುಗಳೆಲ್ಲರನ್ನೂ ಮೋಸಗಾರರೆಂದು ಆಪಾದಿಸುವುದು ದುರದೃಷ್ಟಕರ. ಶೃಂಗೇರಿಯ ಜಗದ್ಗುರುಗಳಿಗೂ ಹರಿಹರ-ಬುಕ್ಕರಿಗೂ ಇದ್ದ ಅನ್ಯೋನ್ಯ ಸಂಬಂಧ ಎಲ್ಲರಿಗೂ ಗೊತ್ತಿದೆ. ಮಾಧವ ಸಾಯಣರು ಸಂಗಮರ ಮಂತ್ರಿಗಳು. ಸಂಗಮ ವಂಶಸ್ಥರು ಈ ಗುರುಗಳಿಂದ ರಾಜಕೀಯ ಮತ್ತು ಧಾರ್ಮಿಕ ವಿಷಯಗಳಲ್ಲಿ ಮಾರ್ಗದರ್ಶನವನ್ನು ಅಪೇಕ್ಷಿಸುತ್ತಿದ್ದರು. ವಿದ್ಯಾರಣ್ಯರು ಹಂಪಿಯಲ್ಲಿ ದೇಹ ವಿಮುಕ್ತಿಮಾಡಿದರು. ಆದಾದ ನಂತರ ಅವರ ಚರಮಸ್ತುತಿ ಮತ್ತು ಅವರ

ನಂತರ ಬಂದ ಗುರುಗಳಿಗೆ ವಿಶೇಷ ದಾನಗಳಾದವು. ಹೆರಾಸರೇ ಒಪ್ಪಿಕೊಂಡ ಈ ಘಟನೆಗಳಿಂದ, ಶೃಂಗೇರಿಮಠ ಮತ್ತು ಅದರ ಗುರುಗಳ ಬಗ್ಗೆ ಸಂಗಮ ವಂಶಸ್ಥರು ಎಂತಹ ಆದರಾಭಿಮಾನಗಳನ್ನು ಹೊಂದಿದ್ದರೆಂಬುದು ವಿದಿತ."

ಮೊದಲಿನ ಮೂವರು ಜಗದ್ಗುರುಗಳಲ್ಲದೆ, ಅವರ ನಂತರದ – ಅದರಲ್ಲೂ ಹದಿನಾರನೆ ಶತಮಾನದ ರಾಮಚಂದ್ರ ಭಾರತಿಯವರಿಗಾಗಲಿ (ಇವರೇ ಕೃತಕ ದಾಖಲೆಯ ಸೃಷ್ಟಿಕರ್ತರೆಂದು ಹೆರಾಸರಿಂದ ಆಪಾದಿಸಲ್ಪಟ್ಟವರು) ಮತ್ತು ಅವರ ನಂತರದವರಿಗಾಗಲಿ ವಿಜಯನಗರದ ಅರಸರಿಂದ ಯಾವ ಲಾಭವೂ ದೊರೆಯಲಿಲ್ಲ. ಇದರಿಂದ ಕೃತಕ ದಾಖಲೆಯ ಸೃಷ್ಟಿ ಆಗಲಿಲ್ಲವೆನ್ನುವುದು ಸ್ಪಷ್ಟವೆಂದು ಶ್ರೀಕಂಠಯ್ಯನವರ ಮತ.

ವಿದ್ಯಾರಣ್ಯರ ಕುರಿತು ಇತರ ಸಮಸ್ಯೆಗಳಿವೆ. ಅವುಗಳ ಬಗ್ಗೆ ಶ್ರೀಕಂಠಯ್ಯನವರ ಅಭಿಪ್ರಾಯವೇನಿತ್ತೆಂದು ಈಗ ನೋಡೋಣ. ಮಾಧವರು ವಿದ್ಯಾರಣ್ಯರು ಒಬ್ಬರೇ ಎನ್ನುವುದು ಅವರ ಮತ. ಮತ್ತು ವಿದ್ಯಾರಣ್ಯರೂ, ಕ್ರಿಯಾಶಕ್ತಿಗಳೂ, ಬೇರೆ ಬೇರೆಯೆಂದೂ ಅವರ ಅಭಿಪ್ರಾಯ.[೨] ಈ ಸಂಬಂಧದಲ್ಲಿ ಇನ್ನೊಂದು ಸಮಸ್ಯೆಯನ್ನು ಇನ್ನು ಸ್ವಲ್ಪ ವಿಸ್ತಾರವಾಗಿ ಚರ್ಚಿಸಬೇಕು. ಅದು ಯಾವುದೆಂದರೆ, ಸಾಮ್ರಾಜ್ಯ ಸ್ಥಾಪನೆಯಲ್ಲಿ ಶೃಂಗೇರಿ ಜಗದ್ಗುರುಗಳ ಪಾತ್ರವನ್ನು ಒಪ್ಪಿಕೊಂಡು, ಈ ಪಾತ್ರ ವಿದ್ಯಾರಣ್ಯರದಲ್ಲ, ಅದು ಅವರ ಗುರುಗಳಾಗಿದ್ದ ವಿದ್ಯಾತೀರ್ಥರದು ಎನ್ನುವ ವಾದ. ಹೀಗೆ ಹೇಳುವವರು ಎರಡು ಕಾರಣಗಳಿಂದ ಈ ರೀತಿ ವಾದಿಸುತ್ತಾರೆ. ಮೊದಲನೆಯದು, ೧೩೪೬ ರ ಶೃಂಗೇರಿ ಶಾಸನ. ಇದರಲ್ಲಿ ಸಂಗಮ ಸಹೋದರರು ಸಾಮ್ರಾಜ್ಯ ಸ್ಥಾಪನೆಯಾದ್ದಕ್ಕೆ ಆಚರಿಸಿದ ವಿಜಯೋತ್ಸವ ಮತ್ತು ಈ ವಿಜಯಗಳಿಗೆ ಸಹಾಯ ಮಾಡಿದ್ದಕ್ಕೆ ಶೃಂಗೇರಿ ಜಗದ್ಗುರುಗಳಿಗೆ ವಂದನಾರ್ಪಣೆ – ಇವುಗಳ ಉಲ್ಲೇಖವಿದೆ. ಈ ಶಾಸನದಲ್ಲಿ ವಿದ್ಯಾತೀರ್ಥರ ಹೆಸರಿದೆಯೆ ವಿನಾ ವಿದ್ಯಾರಣ್ಯರದ್ದಿಲ್ಲ. ವಿದ್ಯರಣ್ಯರಿಗೆ ಸಂಬಂಧಿಸಿದ ಶಾಸನಗಳೆಲ್ಲಾ ಬುಕ್ಕ ಮತ್ತು ಎರಡನೆಯ ಹರಿಹರನ ಕಾಲದಲ್ಲಿವೆ. ಅವರಿಗೆ ಸಮುಬಂಧಿಸಿದ ಶಾಸನ ಮೊದಲನೆಯ ಹರಿಹರನ ಕಾಲದಲ್ಲಿ ಒಂದೂ ಇಲ್ಲ. ಇಂತಹ ವಿದ್ವಾಂಸರಲ್ಲಿ ಅಂದರೆ ಸಾಮ್ರಾಜ್ಯಸ್ಥಾಪನೆಗೆ ಸಹಾಯ ಮಾಡಿದ ಶೃಂಗೇರಿಯ ಜಗದ್ಗುರು ವಿದ್ಯಾತೀರ್ಥರೆನ್ನುವುದರಲ್ಲಿ ಮೊದಲನೆಯ ವಿದ್ವಾಂಸರು ಆರ್. ನರಸಿಂಹಾಚಾರ್ಯರು.[೩] ಅವರ ನಂತರ ಟಿ.ಎ. ಗೋಪಿನಾಥರಾಯರು ಅದೇ ತರಹ ಹೀಗೆ ಹೇಳಿದ್ದಾರೆ. – "ವಿದ್ಯಾರಣ್ಯರ ಗುರುಗಳಾದ ವಿದ್ಯಾತೀರ್ಥರು ಮೊದಲನೆಯ ಹರಿಹರನಿಗೆ ವಿಜಯನಗರವನ್ನು ಕಟ್ಟಬೇಕೆಂದು ಉಪದೇಶ ಮಾಡಿರಬೇಕು. ಯಾಕೆಂದರೆ ವಿದ್ಯಾರಣ್ಯರು ಬುಕ್ಕ ಮತ್ತು ಎರಡನೆ ಹರಿಹರನ ಕಾಲದಲ್ಲಿ ಪ್ರಸಿದ್ಧಿಗೆ ಬಂದರು."[೪] ಬಿ.ಎ.

ಸಾಲೆತೊರೆಯುವರು ಇದೇ ಅಭಿಪ್ರಾಯವನ್ನು ತೀಕ್ಷ್ಣವಾಗಿ ಈ ರೀತಿ ಹೇಳಿದರು, "ವಿದ್ಯಾರಣ್ಯ ಶ್ರೀಪಾದರು ಮೊದಲನೆ ಹರಿಹರನಿಗೆ ರಾಜಧಾನಿ ಕಟ್ಟಲು ಸಹಾಯ ಮಾಡಿದರೆನ್ನುವುದನ್ನು ನಂಬುವವರು ಅಸತ್ಯವನ್ನು ಸತ್ಯವೆಂದು ನಂಬುವವರು."

ವಿದ್ಯಾರಣ್ಯರಿಗೆ ಸಲ್ಲುವ ಕೀರ್ತಿಯನ್ನು ವಿದ್ಯಾತೀರ್ಥರಿಗೆ ಕೊಡಬಯಸುವ ವಿದ್ವಾಂಸರು ಅವರಿಬ್ಬರ ವ್ಯಕ್ತಿತ್ವದಲ್ಲಿರುವ ವ್ಯತ್ಯಾಸವನ್ನು ಅಲಕ್ಷಿಸುತ್ತಿದ್ದಾರೆಂದು ಡಿ.ವಿ. ಗುಂಡಪ್ಪನವರು ತಮ್ಮ ಕನ್ನಡ ಪುಸ್ತಕ 'ವಿದ್ಯಾರಣ್ಯರ ಸಮಕಾಲೀನರು' ಇದರಲ್ಲಿ ಚೆನ್ನಾಗಿ ತೋರಿಸಿದ್ದಾರೆ. ಶೃಂಗೇರಿ ಜಗದ್ಗುರುಗಳಲ್ಲೆಲ್ಲಾ ವಿದ್ಯಾತೀರ್ಥರು ಅತ್ಯಂತ ದೊಡ್ಡವರೆನ್ನುವುದರಲ್ಲಿ ಸಂಶಯವಿಲ್ಲ.[೬] ಎಲ್ಲಾ ಸಮಕಾಲೀನರು ಇದನ್ನು ಒಪ್ಪಿಕೊಳ್ಳುತ್ತಾರೆ. ವಿದ್ಯಾರಣ್ಯರು, ಸಾಯಣರು, ಸಂಗಮ ವಂಶದ ಮೊದಲಿನ ಮೂವರು ರಾಜರೆಲ್ಲರೂ ವಿದ್ಯಾತೀರ್ಥರ ಸಾಧನೆಗಳನ್ನು ವಿಶೇಷವಾಗಿ ಪ್ರಶಂಸಿಸುತ್ತಾರೆ. ಈ ಸಾಧನೆಗಳೆಲ್ಲಾ ಆಧ್ಯಾತ್ಮಿಕ. ಅದರಲ್ಲಿಯೂ ಯೋಗದಲ್ಲಿ ಅವರು ಮಹತ್ವದ ಸಾಧನೆಗಳನ್ನು ಮಾಡಿದ್ದರು. ಅಂಥವರಿಗೆ ಲೌಕಿಕ ವ್ಯವಹಾರಗಳಲ್ಲಿ ಕೈಹಾಕುವುದು ಅವರ ಸ್ವಭಾವಕ್ಕೆ ಹೊಂದುತ್ತಿರಲಿಲ್ಲ. ವಿದ್ಯಾರಣ್ಯರಿಗೆ ಅಂತಹ ವ್ಯವಹಾರಗಳಲ್ಲಿ ತೊಡಗುವುದು ಶಿವಾಜಿಯ ಗುರುಗಳಾದ ರಾಮದಾಸರಿಗೆ ಇಷ್ಟವಾದ ಹಾಗೆ ಇವರಿಗೂ ಇಷ್ಟ. ಇದು ಗುಂಡಪ್ಪನವರ ವಾದ.

ಮೇಲೆ ಹೇಳಿದ ತಮ್ಮ ಗ್ರಂಥದಲ್ಲಿ ಗುಂಡಪ್ಪನವರು ವಿದ್ಯಾರಣ್ಯರ ಒಂದು ಸ್ವಭಾವವನ್ನು ಚೆನ್ನಾಗಿ ಹೇಳಿದ್ದಾರೆ. ಇದನ್ನು ಸರಿಯಾಗಿ ಅರ್ಥಮಾಡಿಕೊಳ್ಳದೆ ಕೆಲವು ವಿದ್ವಾಂಸರು ವಿದ್ಯಾತೀರ್ಥರು ಸಾಮ್ರಾಜ್ಯ ಸ್ಥಾಪನೆಗೆ ಕಾರಣರೆನ್ನುವ ತಪ್ಪು ಅಭಿಪ್ರಾಯಕ್ಕೆ ಬಂದ ಹಾಗೆ ಕಾಣುತ್ತದೆ. ಇದು ಯಾವುದೆಂದರೆ ತಮ್ಮ ಸಾಧನೆಗಳಿಗೆಲ್ಲಾ ತಮ್ಮ ಗುರುವೇ ಕಾರಣವೆನ್ನುತ್ತಿದ್ದರು. ವಿದ್ಯಾರಣ್ಯರು ಮಾತ್ರವಲ್ಲದೆ ಅವರ ಜತೆಗೆ ಕೆಲಸ ಮಾಡಿದವರೆಲ್ಲರೂ ತಮ್ಮ ಯಶಸ್ಸಿಗೆ ವಿದ್ಯಾತೀರ್ಥರೇ ಕಾರಣವೆನ್ನುತ್ತಿದ್ದರು. ಈ ವಿದ್ವಾಂಸರು ವಿದ್ಯಾರಣ್ಯರು ಹೇಳಿದ್ದನ್ನು ಅಕ್ಷರಶಃ ನಿಜವೆಂದು ತಿಳಿದು ವಿದ್ಯಾತೀರ್ಥರೇ ಎಲ್ಲವನ್ನು ಸಾಧಿಸಿರಬೇಕೆಂದು ಹೇಳಿರಬೇಕು. ವಿದ್ಯಾರಣ್ಯರ ಹಾಗೆ ಈಚೆಗೆ ನಡೆದುಕೊಂಡವರಲ್ಲಿ ಸ್ವಾಮಿ ವಿವೇಕಾನಂದರನ್ನು ಹೆಸರಿಸಬಹುದು. ತಾವು ಏನು ಮಾಡಿದರೂ ಅವರು ಅದನ್ನು ತಮ್ಮ ಗುರು ರಾಮಕೃಷ್ಣರ ಹೆಸರಿನಲ್ಲಿ ಮಾಡುತ್ತಿದ್ದರು. ಪ್ರಪಂಚದ ವಿವಿಧ ಭಾಗಗಳಲ್ಲಿ ತಮ್ಮ ಕೆಲಸವನ್ನು ಮಾಡುವ ಸಲುವಾಗಿ ರಾಮಕೃಷ್ಣ ಮಠಗಳನ್ನು ಸ್ಥಾಪಿಸಿದರು. ರಾಮಕೃಷ್ಣರಿಗೆ ವಿವೇಕಾನಂದರು ಇದ್ದಹಾಗೆ, ವಿದ್ಯಾತೀರ್ಥರಿಗೆ ವಿದ್ಯಾರಣ್ಯರು ಇದ್ದರು.

ವಿಜಯನಗರ ಸಾಮ್ರಾಜ್ಯ ಸ್ಥಾಪನೆಯಲ್ಲಿ ಶೃಂಗೇರಿಯ ಗುರುಗಳ

ಮಹತ್ವ ಪಾತ್ರವಿತ್ತೆಂದು ಎಲ್ಲರೂ ಹೇಳಿದರೂ ಆ ಪಾತ್ರದ ಸ್ವರೂಪವನ್ನು ಯಾರೂ ಸ್ಪಷ್ಟವಾಗಿ ಹೇಳಿಲ್ಲ. ಶೃಂಗೇರಿ ಮಠದ ಪ್ರಭಾವ ಮತ್ತು ಸಂಪತ್ತು ಇವುಗಳು ಹರಿಹರ ಬುಕ್ಕರಿಗೆ ಲಭ್ಯವಿದ್ದವೆಂದು ತಿಳಿಯುವುದು ಅಸಮಂಜಸವೇನಾಗಲಿಕ್ಕಿಲ್ಲವೆಂದು ಶ್ರೀಕಂಠಯ್ಯನವರು ಹೇಳಿದ್ದಾರೆ.[೬] ಈ ಹೇಳಿಕೆಯನ್ನು ನಾವು ಸರಿಯಾಗಿ ಅರ್ಥಮಾಡಿಕೊಳ್ಳಬೇಕು. ಹಾಗೆ ಮಾಡಿಕೊಳ್ಳುವುದಕ್ಕೆ ಶೃಂಗೇರಿಯ ಪೂರ್ವೇತಿಹಾಸದ ಜ್ಞಾನವು ಅವಶ್ಯ. ಆದಿಶಂಕರರ ಮತ್ತು ಅವರ ಶಿಷ್ಯ ಸುರೇಶ್ವರಾಚಾರ್ಯರ ಕಾಲವಾದ ಮೇಲೆ ಶೃಂಗೇರಿಯ ಆಶ್ರಮವು ಕೆಟ್ಟದಿನಗಳನ್ನು ಕಂಡಿತು. ಮೂರು ಶತಮಾನಗಳ ನಂತರ ಕಾಂಚೀಪೀಠದಲ್ಲಿದ್ದ ವಿದ್ಯಾತೀರ್ಥರು ಶೃಂಗೇರಿ ಪೀಠಕ್ಕೆ ಬಂದರು. ಇದು ಸುಮಾರು ೧೩ನೇ ಶತಮಾನದ ಕೊನೆಯ ಭಾಗದಲ್ಲೆಂದು ಕಾಣುತ್ತದೆ. ವಿದ್ಯಾತೀರ್ಥರು ಕಂಚಿಯಿಂದ ಶೃಂಗೇರಿಗೆ ಬರುವ ಹಾಗೆ ಮನವೊಲಿಸಿದವರು ವಿದ್ಯಾರಣ್ಯರಿರಬೇಕೆಂದು ಗುಂಡಪ್ಪನವರ ಊಹೆ. ವಿಜಯನಗರಕ್ಕೂ ವಿದ್ಯಾರಣ್ಯರಿಗೂ ಸಂಬಂಧವು ಆರಂಭವಾದ ಮೇಲೆ, ಅಲ್ಲಿಯ ರಾಜರು ಒಂದಾದ ಮೇಲೊಂದು ದಾನವನ್ನು ಶೃಂಗೇರಿಯ ಮಠಕ್ಕೆ ಕೊಟ್ಟರು. ಇವುಗಳಿಂದ ಆ ಮಠದ ಆರ್ಥಿಕ ಸ್ಥಿತಿಯು ಸುಧಾರಿಸಿತು. ಹೀಗೆ ಆಗುವವರೆಗು ಶೃಂಗೇರಿಯ ಗುರುಗಳಲ್ಲಿ ಯಾವ ಸಂಪತ್ತೂ ಇರಲಿಲ್ಲ. ಆದ್ದರಿಂದ ಸಾಮ್ರಾಜ್ಯ ಸ್ಥಾಪನೆಗೆ ಶೃಂಗೇರಿ ಗುರುಗಳು ಧನಸಹಾಯ ಮಾಡುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಆದರೂ ಇನ್ನೊಂದು ಅರ್ಥದಲ್ಲಿ ಶೃಂಗೇರಿ ಮಠದವರು ಧನಸಹಾಯ ಮಾಡಿದರೆನ್ನುವ ಶ್ರೀಕಂಠಯ್ಯನವರ ಅಭಿಪ್ರಾಯ ನಿಜವಾದದ್ದೆನ್ನಬಹುದು. ಪರಂಪರಾಗತವಾಗಿ ಬಂದ ಒಂದು ನಂಬಿಕೆಯ ಪ್ರಕಾರ ಸಾಮ್ರಾಜ್ಯವನ್ನು ಮತ್ತು ರಾಜಧಾನಿಯನ್ನು ಸ್ಥಾಪಿಸಿದ ಮೇಲೆ ವಿದ್ಯಾರಣ್ಯರು ಒಂದು ಸುವರ್ಣವೃಷ್ಟಿಯನ್ನು ಕರೆದರಂತೆ. ಲಲಿತಾಸಹಸ್ರನಾಮದ ಕೆಲವು ಪ್ರತಿಗಳಲ್ಲಿ ಈ ದಂತಕಥೆಯಿದೆ. ಇದರರ್ಥ ನಾವು ಹೀಗೆ ಮಾಡಬಹುದು. ನಿಮ್ಮ ದೇಶ ಮತ್ತು ನಿಮ್ಮ ಧರ್ಮಗಳು ಸಂಕಟಕ್ಕೆ ಈಡಾಗಿವೆ. ಅವುಗಳನ್ನು ರಕ್ಷಿಸಲಿಕ್ಕೆ ನಿಮ್ಮ ಬಂಗಾರವನ್ನು ದಾನ ಮಾಡಿ ಎಂದು ವಿದ್ಯಾರಣ್ಯರು ತಮ್ಮ ಸಮಕಾಲೀನರಿಗೆ ಮನವಿ ಮಾಡಿರಬೇಕು. ಅದರನ್ವಯ ಸುವರ್ಣವೃಷ್ಟಿಯಾಗಿರಬೇಕು.

ದೇಶಕ್ಕೆ ಬಂದೊದಗಿದ ಆಪತ್ತನ್ನು ಎದುರಿಸುವಲ್ಲಿ ಜನಸಾಮಾನ್ಯರಲ್ಲಿ ಒಗ್ಗಟ್ಟನ್ನು ಉಂಟುಮಾಡಿದ ಹಾಗೆ, ವಿದ್ಯಾರಣ್ಯರು ತಮ್ಮ ಕಾಲದ ವಿವಿಧ ಧಾರ್ಮಿಕ ಮುಖಂಡರಲ್ಲಿಯೂ ಒಗ್ಗಟ್ಟನ್ನುಂಟು ಮಾಡಿದ ಹಾಗೆ ಕಾಣುತ್ತದೆ. ತಮ್ಮ ಮುತ್ಸದ್ದಿತನದಿಂದ ಮತ್ತು ರಾಜಕೀಯ ಪ್ರಭಾವದಿಂದ ವೇದಾಂತ ದೇಶಿಕರ ಮತ್ತು ಅಕ್ಷೋಭ್ಯತೀರ್ಥರ ಮತ್ತು ಇತರ ಧಾರ್ಮಿಕ ಮುಖಂಡರ ಸಹಕಾರವನ್ನು

ವಿದ್ಯಾರಣ್ಯರು ದೊರಕಿಸುವುದರಲ್ಲಿ ಯಶಸ್ವಿಯಾಗಿರಬೇಕು.[೯] ಈ ರೀತಿಯಾಗಿ ಶ್ರೀಕಂಠಯ್ಯನವರ ಮತ್ತು ಡಿ.ವಿ. ಗುಂಡಪ್ಪನವರ ಸಂಶೋಧನೆಗಳಿಂದ ವಿದ್ಯಾರಣ್ಯರ ಜೀವನವು ವಿಜಯನಗರ ಸಾಮ್ರಾಜ್ಯದ ಚರಿತ್ರೆಯಲ್ಲಿ ಮೊದಲಿನಿಂದಲೂ ಹಾಸುಹೊಕ್ಕಗಿತ್ತೆಂದು ಸಿದ್ಧವಾಗಿದೆ.

ಟಿಪ್ಪಣಿಗಳು ಮತ್ತು ಸಂದರ್ಭಗ್ರಂಥಗಳು

೧. ಶ್ರೀಕಂಠಯ್ಯನವರ ಹೇಳಿಕೆಗಳು ಅವರ ಪುಸ್ತಕ 'ಫೌಂಡರ್ಸ್ ಆಫ್ ವಿಜಯನಗರ (ಪುಟಗಳು ೪೧ ರಿಂದ ೯೫)ದಲ್ಲಿವೆ. ಅಲ್ಲಿಯ ಆಧಾರಗಳೆಲ್ಲಾ ಇವೆ.

೨. ಎ.ಕೆ. IX ಹೊಸಕೋಟೆ ೪೩.

೩. ದೇಸಾಯಿ ಪಾಂಡುರಂಗರಾಯ ಅಭಿಪ್ರಾಯಗಳು ಈ ವಿಷಯದ ಮೇಲ ಅವರು ಬರೆದಿರುವ ಕೆಳಗೆ ಕಾಣಿಸಿರುವ ಲೇಖನಗಳಲ್ಲಿವೆ:

(೧) 'ಜರ್ನಲ್ ಆಫ್ ದಿ ಕರ್ನಾಟಕ್ ಯೂನಿವರ್ಸಿಟಿ - ಸೋಷಿಯಲ ಸೈನ್ಸಸ್' ಸಂಪುಟ ೬ (ಧಾರವಾಡ, ೧೯೭೦) ಪು. ೧೭೫ ಮತ್ತು ಅದರ ಮುಂದೆ.

(೨) ಬಿ.ಷೇಕ್ ಅಲಿ (ಸಂ) 'ದಿ ಹೊಯ್ಸಳ ಡೈನಾಸ್ಟಿ' (ಮೈಸೂರು, ೧೯೭೨) ಪು. ೩೨೯ ಮತ್ತು ಅದರ ಮುಂದೆ. ಅಲ್ಲಿ ಆಧಾರಗಳನ್ನೆಲ್ಲಾ ಕೊಟ್ಟಿದ್ದಾರ

(೩) ಪಿ.ಬಿ. ದೇಸಾಯಿ (ಸಂ), 'ಎ ಹಿಸ್ಟರಿ ಆಫ್ ಕರ್ನಾಟಕ' (ಧಾರವಾಡ ೧೯೭೦), ಪು. ೩೦೫ ಮತ್ತು ಅದರ ಮುಂದೆ.

(೪) ಎ.ಕ. III ಮಳವಳ್ಳಿ ೧೨೧ ಮತ್ತು ಎ.ಕ. VIII ನಗರ ೬೯.

(೫) ಎ.ಕ. IV ಯಡತೊರೆ ೪೬.

(೬) ಎನ್.ಡಿ.ಐ. i cp ೧೫

(೭) ವೆಂಕಟರಮಣಯ್ಯ, ಎನ್., 'ವಿಜಯನಗರ, ದಿ ಆರಿಜನ್ ಆಫ್ ದಿ ಸಿಟಿ ಅಂಡ್ ದಿ ಎಂಪೈರ್' (ಮದ್ರಾಸ್, ೧೯೩೩), ಪು. ೯೮-೧೦೦

(೮) 'ಎ ಹಿಸ್ಟರಿ ಆಫ್ ಕರ್ನಾಟಕ' ಪು. ೩೧೨-೧೩.

(೯) 'ಕರ್ನಾಟಕ ಭಾರತೀ'ಯ ೧೯೭೪ ರ ಸಂಕ್ರಮಣ ಸಂಪುಟ, ಪುಟಗಳ ೨೭-೩೮ರಲ್ಲಿ 'ಹೊಯ್ಸಳ-ಸಂಗಮರ ಸಂಬಂಧ'ವೆನ್ನುವ ವಿದ್ವತ್ಪೂರ್ಣ ಲೇಖನದಲ್ಲಿ ಎಸ್. ರಾಜಶೇಖರರು ಸಂಗಮರು ಮಹಾಮಂಡಲೇಶ್ವರರೆಂದು ಕರೆದುಕೊಂಡರೂ ಸ್ವತಂತ್ರರಾಗಿದ್ದರೆಂದು ವಾದಿಸುತ್ತಾರೆ. ಇದನ್ನು ನಂಬುವುದು ಕಷ್ಟ.ಆದರೆ ಹೊಯ್ಸಳ-ಸಂಗಮರ ಸಂಬಂಧಗಳು ಅನ್ಯೋನ್ಯವಾಗಿರಲಿಲ್ಲವೆನ್ನುವ ಅವರ ಅಭಿಪ್ರಾಯವು ಹೆಚ್ಚು ಸಮಂಜಸವಾಗಿದೆ.'

ಗ್ರಂಥಋಣ

೧. ಡಿ.ವಿ. ಗುಂಡಪ್ಪ "ವಿದ್ಯಾರಣ್ಯರ ಸಮಕಾಲೀನರು" (ಬೆಂಗಳೂರು, ೧೯೩೩)

೨. ಆರ್. ಚಕ್ರವರ್ತಿ "ವಿದ್ಯಾರಣ್ಯ ವಿಮರ್ಶೆ" (ಮೈಸೂರು, ೧೯೭೭)

೩. ವಿದ್ಯಾರಣ್ಯ ವಿದ್ಯಾಪೀಠ ಟ್ರಸ್ಟ್ "ಶ್ರೀ ವಿದ್ಯಾರಣ್ಯ" (ಹಂಪೆ, ೧೯೮೩)

೪. ಉತ್ತಾಂಕಿತ ಸಂಸ್ಕೃತ ವಿದ್ಯಾರಣ್ಯ ಶಾಸನಗಳು, ಸಂಪುಟ ೧ "ಶ್ರೀ ವಿದ್ಯಾರಣ್ಯ". (ಬಾಂಬೆ ೧೯೮೫)

೫. ಮತ್ತು

೬. ಡಾ॥ ವೇಣೀಮಾಧವ ಶಾಸ್ತ್ರಿ ಮತ್ತು ಡಾ॥ ಎಂ. ಕೃಪಾಚಾರ್ಯುಲು – ಇವರುಗಳು ಈಚೆಗೆ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ವಿದ್ಯಾರಣ್ಯರ ಕುರಿತು ಪಿಎಚ್. ಡಿ. ಪದವಿಗೆ ಮಹಾಪ್ರಬಂಧಗಳನ್ನು ಒಪ್ಪಿಸಿ ಆ ಪದವಿಯನ್ನು ಸಂಪಾದಿಸಿದ್ದಾರೆ. ಈ ಎರಡೂ ಪ್ರಬಂಧಗಳನ್ನು ನಾನು ಓದಿದ್ದೇನೆ. ಡಾ॥ ವೇಣೀಮಾಧವ ಶಾಸ್ತ್ರಿಗಳು ಪ್ರಸ್ತುತ ಗ್ರಂಥದಲ್ಲಿ ಎರಡು ಲೇಖನಗಳನ್ನು ಬರೆದಿದ್ದಾರೆ. ಡಾ॥ ಕೃಪಾಚಾರ್ಯುಲು ಇವರ ಪ್ರಬಂಧ ಮೊನ್ನೆ ಮೊನ್ನೆ ಪ್ರಕಟವಾಗಿದೆ. ಅದರ ಹೆಸರು "ಸಾಯಣ ಮತ್ತು ಮಾಧವ ವಿದ್ಯಾರಣ್ಯ" (ಗುಂಟೂರು, ೧೯೮೬). "Hindu" ದಿನಪತ್ರಿಕೆ (೧-೧೨-೧೯೮೭)ಯಲ್ಲಿ ಅದರ ವಿಮರ್ಶೆ ಬಂದಿದೆ.

■

೮

ವಿದ್ಯಾರಣ್ಯರ ಮಹತ್ಕಾರ್ಯ

ದೇಶದಲ್ಲಿ ಪುನರುಜ್ಜೀವನವಾಗುತ್ತಿರುವ ಈಗಿನ ಸಮಯದಲ್ಲಿ ವಿದ್ಯಾರಣ್ಯರ ಜೀವನದಿಂದ ನಾವು ಸ್ಫೂರ್ತಿಯನ್ನು ಪಡೆಯಬೇಕು. ವಿದ್ಯಾರಣ್ಯರ ಪೂರ್ವಾಶ್ರಮದ ಹೆಸರು ಮಾಧವಾಚಾರ್ಯ. ಅವರ ತಮ್ಮ ಸಾಯಣಾಚಾರ್ಯ. ಇವರಿಬ್ಬರೂ ಉದ್ದಾಮ ಪಂಡಿತರಾಗಿದ್ದರಲ್ಲದೆ ವಿಜಯನಗರಸಾಮ್ರಾಜ್ಯದಲ್ಲಿ ಮಂತ್ರಿಗಳೆಂದು ಹೆಸರುವಾಸಿಯಾಗಿದ್ದರು. ಇಬ್ಬರಿಗೂ ವಿದ್ಯಾತೀರ್ಥರು ಗುರುಗಳಾಗಿದ್ದರು. ಶೃಂಗೇರಿಯ ಮಠದಲ್ಲಿ ಮೊದಲು ವಿದ್ಯಾತೀರ್ಥರೂ ನಂತರ ವಿದ್ಯಾರಣ್ಯರೂ ಜಗದ್ಗುರುಗಳಾಗಿದ್ದರು. ಇವರೆಲ್ಲರೂ ಜೀವಿಸಿದ ಕಾಲ ದಕ್ಷಿಣ ಭಾರತದ ಇತಿಹಾಸದಲ್ಲಿ ಪರ್ವಕಾಲ. ಪ್ರಳಯಕಾಲವೆಂದರೂ ತಪ್ಪಾಗದು. ಹದಿನಾಲ್ಕನೆಯ ಶತಮಾನದ ಆದಿಭಾಗದಲ್ಲಿ ಮಲ್ಲಿಕಾಫರ್ ಮತ್ತು ಮಹಮದ್ ತುಘಲಕರು ದಕ್ಷಿಣ ಭಾರತದ ಎಲ್ಲಾ ಹಿಂದೂ ರಾಜ್ಯಗಳನ್ನು ನಾಶಮಾಡಿದರು. ಈ ಭಾಗದ ಹಿಂದೂ ದೇವಾಲಯಗಳನ್ನು ಲೂಟಿ ಮಾಡಿದರು. ಜನಜೀವನ ಅಸ್ತವ್ಯಸ್ತವಾಯಿತು. ಹಿಮಾಲಯದಿಂದ ರಾಮೇಶ್ವರದವರೆಗೂ ಮುಸಲ್ಮಾನರ ಕೈ ಮೇಲಾಯಿತು. ನಮ್ಮ ಪ್ರಾಚೀನ ಧರ್ಮ ಮತ್ತು ಸಂಸ್ಕೃತಿ ಕೊನೆಗಾಣುವ ಸ್ಥಿತಿ ಬಂದಿತು. ಇಂತಹ ಪರಿಸ್ಥಿತಿಯಿಂದ ನಮ್ಮ ಸಂಸ್ಕೃತಿಯನ್ನು ಕಾಪಾಡಿದವರಲ್ಲಿ ವಿದ್ಯಾರಣ್ಯರು ಅಗ್ರಗಣ್ಯರು. ಇವರು ಹರಿಹರ ಬುಕ್ಕರಿಗೆ ಮಾರ್ಗದರ್ಶನ ಮಾಡಿ ೧೩೩೬ ರಲ್ಲಿ ವಿಜಯನಗರ ಸಾಮ್ರಾಜ್ಯವನ್ನು ಸ್ಥಾಪನೆಮಾಡಿದರೆಂದು ನಮ್ಮ ಜನ ನಂಬಿದ್ದಾರೆ.

ಈ ನಂಬಿಕೆಯ ಸತ್ಯವೋ, ಅಸತ್ಯವೋ ಇದನ್ನು ಪರಾಮರ್ಶಿಸಬೇಕು. ಕೆಲವು ಸಂಶೋಧಕರು ಈ ಸಾಮ್ರಾಜ್ಯಸ್ಥಪನೆಯಲ್ಲಿ ವಿದ್ಯಾರಣ್ಯರಿಗೆ ಸ್ಥಾನವಿಲ್ಲವೆನ್ನುತ್ತಾರೆ. ಇಂಥವರಲ್ಲಿ ಕವಿಚರಿತೆಕಾರರಾದ ಆರ್. ನರಸಿಂಹಾಚಾರ್ಯರು ಒಬ್ಬರು. ಅವರ ಪ್ರಕಾರ ವಿದ್ಯಾರಣ್ಯರಿಗೆ ಸಂಬಂಧಪಟ್ಟ ಒಂದೂ ಶಾಸನವು ಮೊದಲನೆಯ ಹರಿಹರನ ಕಾಲದಲ್ಲಿ ಇಲ್ಲದಿರುವುದರಿಂದಲೂ, ಅವುಗಳು ಬುಕ್ಕ ಮತ್ತು ಎರಡನೆಯ ಹರಿಹರನ ಕಾಲದಲ್ಲಿ ಇರುವುದರಿಂದಲೂ, ಅವರ ಚಟುವಟಿಕೆಗಳೆಲ್ಲಾ ಬುಕ್ಕ ಮತ್ತು ಎರಡನೆಯ ಹರಿಹರನ ಕಾಲದಲ್ಲಿಯೇ ಆಗಿರಬೇಕು.

ಮೇಲಾಗಿ ಮೊದಲನೆಯ ಹರಿಹರ ಮತ್ತು ಬುಕ್ಕ ಇವರು ವಿದ್ಯಾತೀರ್ಥರೇ ತಮ್ಮ ಪ್ರೇರಕರೆಂದು ಹೇಳಿಕೊಂಡಿದ್ದಾರೆ. ೧೩೩೬ರಲ್ಲಿ ಈ ಸಹೋದರರು ವಿಜಯನಗರಸಾಮ್ರಾಜ್ಯವನ್ನು ಸ್ಥಾಪಿಸಿ ಮುಂದಿನ ಹತ್ತೇ ವರ್ಷಗಳಲ್ಲಿ ದಕ್ಷಿಣ ಭಾರತದ ಬಹು ಭಾಗವನ್ನು ಗೆದ್ದರು. ೧೩೪೬ರಲ್ಲಿ ತಮ್ಮ ಕೆಲಸವನ್ನು ಸುಲಭ ಮಾಡಿಸಿದ ಜಗದ್ಗುರು ಶ್ರೀ ವಿದ್ಯಾತೀರ್ಥರ ಸಂದರ್ಶನಕ್ಕೆ ಶೃಂಗೇರಿಗೆ ಹೋಗಿ ವಿಜಯೋತ್ಸವವನ್ನು ಆಚರಿಸಿದರು. ಈ ಉತ್ಸವದಲ್ಲಿ ಅವರು ತಮ್ಮ ಕೃತಜ್ಞತೆಯನ್ನು ಶ್ರೀವಿದ್ಯಾತೀರ್ಥರಿಗೆ ಸಲ್ಲಿಸಿದರು. ಈ ಸಂದರ್ಭದಲ್ಲಿ ವಿದ್ಯಾರಣ್ಯರ ಹೆಸರೇ ಇಲ್ಲ. ನಿಜವಾಗಿಯೂ ವಿದ್ಯಾರಣ್ಯರು ಈ ಸಹೋದರರಿಗೆ ಅಷ್ಟು ಸಹಾಯ ಮಾಡಿದ್ದರೆ ವಿಜಯೋತ್ಸವದಲ್ಲಿ ಅವರನ್ನು ಸ್ಮರಿಸಬೇಕಾಗಿತ್ತು. ಹಾಗೆ ಮಾಡದಿರುವುದರಿಂದ ಸಾಮ್ರಾಜ್ಯ ಸ್ಥಾಪನೆಗೂ ಅವರಿಗೂ ಯಾವ ಸಂಬಂಧವೂ ಇಲ್ಲ. ಈ ಗೌರವ ವಿದ್ಯಾತೀರ್ಥರಿಗೆ ಸಲ್ಲತಕ್ಕದ್ದು. ಇದು ನರಸಿಂಹಾಚಾರ್ಯರ ವಾದ.

ವಿದ್ಯಾರಣ್ಯರೇ ಸಾಮ್ರಾಜ್ಯಸ್ಥಾಪಕರೆಂದು ವಾದಿಸುವವರು ಡಿ.ವಿ. ಗುಂಡಪ್ಪನವರು. ಅವರು ಹೇಳುವುದೇನೆಂದರೆ : ವಿದ್ಯಾತೀರ್ಥರು ಯಾವಾಗಲೂ ಯೋಗಾಭ್ಯಾಸದಲ್ಲಿ ನಿರತರಾಗಿರುತ್ತಿದ್ದರು. ಅವರಿಗೂ ಲೌಕಿಕಕ್ಕೂ ಬಹು ದೂರವಾಗಿತ್ತು. ಅವರ ಶಿಷ್ಯರಾದ ವಿದ್ಯಾರಣ್ಯರು ಸ್ವಭಾವದಲ್ಲಿ ತಮ್ಮ ಗುರುಗಳಿಗಿಂತ ಭಿನ್ನವಾಗಿದ್ದರು. ಯತಿಗಳಾಗಿದ್ದರೂ ರಾಜಕೀಯ ಪರಿಸ್ಥಿತಿಯ ಅರಿವು ಅವರಿಗೆ ಚೆನ್ನಾಗಿತ್ತು. ರಾಜಕೀಯ ಸರಿಯಾಗಿಲ್ಲದಿದ್ದರೆ, ಯಾವುದೂ ಸರಿಯಾಗಿರುವುದಿಲ್ಲವೆನ್ನುವ ಮತದವರಾಗಿದ್ದರು. ಎಲ್ಲಾ ಕೆಲಸಗಳಲ್ಲಿಯೂ ತಮ್ಮ ಗುರುಗಳನ್ನೇ ಮುಂದಿಟ್ಟುಕೊಂಡು, ಅವರ ಹೆಸರಿನಲ್ಲಿಯೇ ವಿದ್ಯಾರಣ್ಯರು ಕಾರ್ಯ ನಿರ್ವಹಿಸುತ್ತಿದ್ದರು. ದೊಡ್ಡವರ ಹೆಸರಿನಲ್ಲಿ ಕೆಲಸ ನಡೆಸಿಕೊಂಡು ಹೋಗುವುದು ನಮ್ಮಲ್ಲಿಯ ಸಂಪ್ರದಾಯ. ಇದೇ ರೀತಿಯಾಗಿ ಸ್ವಾಮಿ ವಿವೇಕಾನಂದರು ರಾಮಕೃಷ್ಣ ಪರಮಹಂಸರ ಹೆಸರಿನಲ್ಲಿ ಕೆಲಸ ಮಾಡುತ್ತಿದ್ದರು. ವಿದ್ಯಾರಣ್ಯರು ಕಲಿಸಿದ ಪಾಠದಿಂದಾಗಿ ಹರಿಹರ ಬುಕ್ಕರು ತಮ್ಮ ಸಾಧನೆಗಳೆಲ್ಲ ವಿದ್ಯಾರಣ್ಯತೀರ್ಥರ ಅನುಗ್ರಹದಿಂದ ಆಯಿತೆಂದು ಹೇಳಿರಬೇಕು. ನಿಜವಾಗಿಯೂ ಈ ಸಾಧನೆಗಳೆಲ್ಲ ವಿದ್ಯಾತೀರ್ಥರ ಮಾರ್ಗದರ್ಶನ ಫಲ. ಇದು ಡಿ.ವಿ. ಗುಂಡಪ್ಪನವರ ವಾದ.

ವಿದ್ಯಾರಣ್ಯರ ಜೀವನಚರಿತ್ರೆಯನ್ನು ನಾವು ನೋಡಿದರೆ ವಿಜಯನಗರಸಾಮ್ರಾಜ್ಯ ಸ್ಥಾಪನೆಯ ಕಾಲದಲ್ಲಿ (೧೩೩೬) ಅವರು ಸೇವೆ ಸಲ್ಲಿಸಿದ್ದು ಅಸಾಧ್ಯವೆಂದು ಹೇಳುವ ಹಾಗಿಲ್ಲ. ಅವರು ಹುಟ್ಟಿದ್ದು ಸುಮಾರು ೧೨೯೬ ರಲ್ಲಿ. ಅವರ ೩೫ನೇ ವಯಸ್ಸಿನಲ್ಲಿ ಅಂದರೆ ೧೩೩೧ರಲ್ಲಿ ಅವರು ಸನ್ಯಾಸಗ್ರಹಣ ಮಾಡಿದರಂತೆ. ಆದ್ದರಿಂದ ೧೩೩೬ರಲ್ಲಿ ಅಂದರೆ ಅವರ ೪೦ನೇ ವಯಸ್ಸಿನಲ್ಲಿ ಸಾಮ್ರಾಜ್ಯಸ್ಥಾಪನೆಯ

ಕೆಲಸವನ್ನು ಕೈಕೊಂಡಿರಬೇಕು. ಕೈಕೊಂಡ ಕೆಲಸ ಮುಗಿಯಿತೆಂದು ಅವರು ಕಾಶಿಗೆ ಹೊರಟುಹೋಗಿರಬೇಕು. ಈ ಕಾರಣದಿಂದ ೧೩೪೬ರ ವಿಜಯೋತ್ಸವದಲ್ಲಿ ಅವರ ಹೆಸರು ಬರಲಿಲ್ಲ.

ಅವರು ಕಾಶಿಗೆ ಹೋದಮೇಲೆ ಮೊದಲನೆಯ ಹರಿಹರನು ೧೩೩೬ ರಿಂದ ೧೩೫೬ ರವರೆಗೆ ಆಳಿದನು. ಅವನ ತರುವಾಯ ಬುಕ್ಕರಾಯ ಪಟ್ಟಕ್ಕೆ ಬಂದನು. ಬಂದ ತಕ್ಷಣ ಕಾಶಿಯಲ್ಲಿದ್ದ ವಿದ್ಯಾರಣ್ಯರನ್ನು ತನ್ನ ಸಹಾಯಕ್ಕೆ ಕರೆಯಿಸಿಕೊಳ್ಳಬೇಕೆಂದು ಹವಣಿಸಿದನು. ತಾನೇ ಪತ್ರ ಬರೆದರೆ ವಿದ್ಯಾರಣ್ಯರು ಬರುತ್ತಾರೋ ಇಲ್ಲವೋ ಎನ್ನುವ ಸಂಶಯವಿದ್ದುದರಿಂದ ತನ್ನ ಪತ್ರದ ಜೊತೆಗೆ ವಿದ್ಯಾತೀರ್ಥರ ಪತ್ರವನ್ನೂ ಕಳಿಸಿದನು. ಗುರುಗಳ ಆಜ್ಞೆಯನ್ನು ಮೀರದ ವಿದ್ಯಾರಣ್ಯರು ವಿಜಯನಗರಕ್ಕೆ ಹಿಂತಿರುಗಬೇಕಾಯಿತು. ಬಂದ ತಕ್ಷಣ ತಮ್ಮ ಗುರುಗಳ ದರ್ಶನಕ್ಕಾಗಿ ಶೃಂಗೇರಿಗೆ ಹೋಗಿಬಂದರು. ಮುಂದೆ ಅವರು ಬುಕ್ಕ ಮತ್ತು ಎರಡನೆ ಹರಿಹರರಿಗೆ ಮಂತ್ರಿಗಳಾಗಿದ್ದರು. ೧೩೮೬ರಲ್ಲಿ ಅಂದರೆ ಅವರ ತೊಂಬತ್ತನೆಯ ವಯಸ್ಸಿನಲ್ಲಿ ಕೈವಲ್ಯವನ್ನು ಪಡೆದಂತೆ ತಿಳಿದು ಬರುತ್ತದೆ.

ಇನ್ನು ಇವರ ಗುಣಗಳನ್ನು ಮತ್ತು ಸಾಧನೆಗಳನ್ನು ಅವಲೋಕಿಸೋಣ. ಇವರ ಗುರುಗಳಾದ ವಿದ್ಯಾತೀರ್ಥರು, ಭಾರತೀತೀರ್ಥರು ಮತ್ತು ಶಿಷ್ಯರಾದ ಹರಿಹರ ಮತ್ತು ಬುಕ್ಕರು ಇವರಲ್ಲಿ ಸಂಪೂರ್ಣ ವಿಶ್ವಾಸವಿಟ್ಟದ್ದರಲ್ಲಿ ಏನೂ ಆಶ್ಚರ್ಯವಿಲ್ಲ. ಇತರ ಮತೀಯಮುಖಂಡರ ವಿಶ್ವಾಸವನ್ನೂ ಇವರು ಸಂಪಾದಿಸಿದ್ದರು. ಮಾಧ್ವ ಗುರುಗಳಾದ ಅಕ್ಷೋಭ್ಯತೀರ್ಥರೂ, ಟೀಕಾಚಾರ್ಯರೂ ಮತ್ತು ನರಹರಿತೀರ್ಥರೂ ಇವರ ಕಾಲದಲ್ಲಿ ಹಂಪೆಯಲ್ಲಿ ಇದ್ದರು. ಟೀಕಾಚಾರ್ಯರ ಮೇರುಕೃತಿಯನ್ನು ವಿಜಯನಗರದ ರಾಜಬೀದಿಯಲ್ಲಿ ವಿದ್ಯಾರಣ್ಯರು ಮೆರವಣಿಗೆ ಮಾಡಿಸಿದರೆಂದು ಪ್ರತೀತಿ ಇದೆ. ಇವರಿಗೂ ಅಕ್ಷೋಭ್ಯತೀರ್ಥರಿಗೂ ಒಂದು ಚರ್ಚೆ ನಡೆಯಿತು. ಇದಕ್ಕೆ ಶ್ರೀವೈಷ್ಣವ ಮುಖಂಡ ವೇದಾಂತದೇಶಿಕರು ಅಧ್ಯಕ್ಷರಾಗಿದ್ದರು. ಇಂಥ ತಾತ್ವಿಕವಾದ ವಿವಾದಗಳಿಂದ ದೇಶದ ಒಗ್ಗಟ್ಟಿಗೆ ಧಕ್ಕೆ ಬರಲಿಲ್ಲ.

ವಿಜಯನಗರ ಸಾಮ್ರಾಜ್ಯದ ಸ್ಥಾಪನೆಗೆ ಮಾರ್ಗದರ್ಶನವಲ್ಲದೆ ವಿದ್ಯಾರಣ್ಯರು ಧನ ಸಹಾಯವನ್ನೂ ಮಾಡಿದರೆನ್ನುವ ದಂತಕಥೆ ಇದೆ. ಲಲಿತಾ ಸಹಸ್ರನಾಮದ ಕೆಲವು ಪ್ರತಿಗಳ ಕೊನೆಗೆ ಈ ಕಥೆ ಇದೆ. ಈ ಸಹಸ್ರನಾಮವನ್ನು ವಿದ್ಯಾರಣ್ಯರು ನವರಾತ್ರಿಯಲ್ಲಿ ಪಾರಾಯಣ ಮಾಡಿದರಂತೆ. ಪಾರಾಯಣ ಮುಗಿದ ಮೇಲೆ ವಿಜಯನಗರದಲ್ಲಿ ಸುವರ್ಣವೃಷ್ಟಿ ಆಯಿತಂತೆ. ವಿಜಯನಗರದಲ್ಲಿ ವಿದ್ಯಾರಣ್ಯರು ಸುವರ್ಣವೃಷ್ಟಿ ಮಾಡಿಸಿದರೆನ್ನುವುದಕ್ಕೆ ಬೇರೆ ರೀತಿಯಲ್ಲಿ ಅರ್ಥಮಾಡಬಹುದು.

ದೇಶಕ್ಕೆ ಬಂದ ವಿಪತ್ತನ್ನು ವಿದ್ಯಾರಣ್ಯರು ಜನರಿಗೆ ಮನವರಿಕೆ ಮಾಡಿಕೊಟ್ಟು ಸ್ವಾತಂತ್ರ್ಯ ಸಂರಕ್ಷಣೆಗೆ ನೀವು ನಿಮ್ಮ ಬಂಗಾರವನ್ನು ಕೊಡಿರೆಂದು ಕೇಳಿರಬೇಕು. ಆಗ ಜನರೆಲ್ಲ ತಮ್ಮಲ್ಲಿಯ ಬಂಗಾರವನ್ನು ತಂದುಕೊಟ್ಟಿರಬೇಕು. ಇದೇ ಸುವರ್ಣವೃಷ್ಟಿಯ ದಂತಕಥೆ.

ವಿದ್ಯಾರಣ್ಯರು ಮಾಡಿದ ಇನ್ನೊಂದು ಪವಾಡವೆಂದರೆ ವಿಶ್ವಕೋಶರಚನೆ. ಈ ಕೆಲಸದಲ್ಲಿ ಸಾಯಣಾಚಾರ್ಯರು ವಿದ್ಯಾರಣ್ಯರ ಬಲಗೈ ಆಗಿದ್ದರು. ಇಬ್ಬರೂ ಸೇರಿ ಆ ಕಾಲದ ಪ್ರಮುಖ ಪಂಡಿತರನ್ನು ವಿಜಯನಗರ ಮತ್ತು ಶೃಂಗೇರಿಗಳಲ್ಲಿ ಒಟ್ಟುಗೂಡಿಸಿ ಅವರಿಂದ ವೇದ, ವೇದಾಂತ, ಸಾಹಿತ್ಯ, ಧರ್ಮಶಾಸ್ತ್ರ, ಸಂಗೀತ, ಆಯುರ್ವೇದ ಇತ್ಯಾದಿ ಭಾರತೀಯ ಜ್ಞಾನದ ಬೇರೆ ಬೇರೆ ಭಾಗಗಳಲ್ಲಿ ಅಲ್ಲಿಯವರೆಗೂ ಆದ ಸಾಧನೆಯನ್ನು ಬರೆಸಿಟ್ಟಿದ್ದಾರೆ. ಸರ್ವದರ್ಶನ ಸಂಗ್ರಹ, ಪರಾಶರ ಮಾಧವೀಯ ಇತ್ಯಾದಿ ಗ್ರಂಥಗಳು ಈ ಉಪಕ್ರಮದಿಂದ ಆದವು.

ಇದೇ ರೀತಿಯಾಗಿ ವಿದ್ಯಾರಣ್ಯರು ನಮ್ಮ ವಾಸ್ತುಶಿಲ್ಪವನ್ನೂ ಉಳಿಸಿದರು. ವಿಜಯನಗರ ಸಾಮ್ರಾಜ್ಯದ ಮೊದಲು ಕರ್ನಾಟಕದಲ್ಲಿ ಚಾಲುಕ್ಯ ರೀತಿಯ ವಾಸ್ತುಶಿಲ್ಪ ಚೆನ್ನಾಗಿ ಬೆಳೆದಿತ್ತು. ಮುಸಲ್ಮಾನರ ದಾಳಿಯಿಂದ ಈ ಕಲೆಯು ಸಂಪೂರ್ಣವಾಗಿ ನಾಶವಾಗಿತ್ತು. ವಿದ್ಯಾರಣ್ಯರು ಬೇರೆ ಬೇರೆ ಭಾಗಗಳಿಂದ ಶಿಲ್ಪಿಗಳನ್ನು ಕರೆತಂದು ಶೃಂಗೇರಿಯಲ್ಲಿ ವಿದ್ಯಾಶಂಕರ (ವಿದ್ಯಾತೀರ್ಥರ ಇನ್ನೊಂದು ಹೆಸರು) ದೇವಾಲಯವನ್ನು ಕಟ್ಟಿಸಿದರು. ಇದೊಂದು ಅಪೂರ್ವ ಕಲಾಕೃತಿ. ಮುಂದೆ ವಿಜಯನಗರದ ಅರಸರು ಈ ಕಲೆಯನ್ನು ಪ್ರೋತ್ಸಾಹಿಸಿದ್ದರಿಂದ ಅದು ಇವತ್ತಿನವರೆಗೂ ಉಳಿದಿದೆ. ಹೀಗೆ ನಮ್ಮ ಸಂಸ್ಕೃತಿಯನ್ನು ಕಾಪಾಡಿದ ವಿದ್ಯಾರಣ್ಯರನ್ನು ನಾವು ನೆನೆಯುವುದು ಅತ್ಯವಶ್ಯ.

■

೯

ಡಿ.ವಿ.ಜಿ. ಅವರ ದೃಷ್ಟಿಯಲ್ಲಿ ವಿದ್ಯಾರಣ್ಯರು

(ಭಾರತ ಇತಿಹಾಸದ, ವಿಶೇಷವಾಗಿ ಕರ್ನಾಟಕದ ಇತಿಹಾಸದ, ತಜ್ಞರಾದ ಡಾ॥ ಜಿ.ಎಸ್. ದೀಕ್ಷಿತರು ಈ ಲೇಖನದಲ್ಲಿ, – ಡಿ.ವಿ.ಜಿ. ಅವರು ಬರೆದು ಪ್ರಕಟಿಸಿದ 'ವಿದ್ಯಾರಣ್ಯರು ಮತ್ತು ಅವರ ಕಾಲ' (೧೯೨೦), 'ವಿದ್ಯಾರಣ್ಯರ ಸಮಕಾಲೀನರು' (೧೯೩೩), ಎಂಬೆರಡು ಗ್ರಂಥಗಳಲ್ಲಿ ವಿದ್ಯಾರಣ್ಯರು ಹೇಗೆ ವಿಜಯನಗರ ಸ್ಥಾಪನೆಗೆ ಕಾರಣರಾದರು. ಧಾರ್ಮಿಕವಾಗಿ, ರಾಜಕೀಯವಾಗಿ, ಅವರ ವ್ಯಕ್ತಿತ್ವದ ಸ್ವರೂಪವೇನು ಎಂಬ ಬಗೆಗೆ ಡಿ.ವಿ.ಜಿ. ಅವರು ಪ್ರತಿಪಾದಿಸಿರುವ ಸಂಶೋಧನಾತ್ಮವೂ ನಿರ್ಣಾಯಕವೂ ಆದ ವಿಚಾರಗಳ ಸಾರವನ್ನು ಬಹು ವಿಶದವಾಗಿ ಪರಿಚಯ ಮಾಡಿಕೊಟ್ಟಿದ್ದಾರೆ. ಮತ್ತು ಈಚಿನ ಕೆಲವು ವಿದ್ವಾಂಸರ ತೀರ್ಮಾನಗಳಿಂದ ಡಿ.ವಿ.ಜಿ. ಅವರ ಶೋಧನೆಗಳಿಗೆ ಹೇಗೆ ಸಮರ್ಥನೆ ದೊರೆತಿದೆ ಎಂಬುದನ್ನು ತಿಳಿಸಿಕೊಟ್ಟಿದ್ದಾರೆ.)

ವಿದ್ಯಾರಣ್ಯರ ವೃತ್ತಾಂತವನ್ನು ಡಿ.ವಿ.ಜಿ.ಯವರು ಮೂರು ಭಾಗಗಳಲ್ಲಿ ಪ್ರಕಟಿಸಬೇಕೆಂದು ಆಶಿಸಿದ್ದರು. ಇವುಗಳಲ್ಲಿ ಮೊದಲನೆಯದಾದ 'ವಿದ್ಯಾರಣ್ಯರು ಮತ್ತು ಅವರ ಕಾಲ' ೧೯೨೦ರಲ್ಲಿ ಪ್ರಕಟವಾಯಿತು. ಎರಡನೆಯದಾದ 'ವಿದ್ಯಾರಣ್ಯರ ಸಮಕಾಲೀನರು' ೧೯೩೩ರಲ್ಲಿ ಪ್ರಸಿದ್ಧವಾಯಿತು. ಅದರ ಪೀಠಿಕೆಯಲ್ಲಿ ಮೂರನೆಯ ಸಂಪುಟದ ಬಗೆಗೆ ಹೀಗೆ ಬರೆದಿದ್ದಾರೆ : "ಕ್ರಿಯಾಶಕ್ತ್ಯಾಚಾರ್ಯ, ಆಂಗಿರಸ ಮಾಧವ, ಇರುಗಪ ದಂಡೇಶ ಮೊದಲಾದ ಪ್ರಮುಖ ಪುರುಷರು ಇನ್ನೂ ಕೆಲವು ಮಂದಿ ವಿದ್ಯಾರಣ್ಯರ ಸಮಕಾಲೀನರಲ್ಲಿ ಗಣ್ಯರಾಗತಕ್ಕವರಿದ್ದಾರೆ. ಅವರ ವೃತ್ತಾಂತಗಳನ್ನೂ, ಪ್ರಾಸಂಗಿಕವಾದ ಇತರ ವಿಷಯಗಳನ್ನೂ ಸೇರಿಸಿ ಒಂದು ಸಂಪುಟವನ್ನು ಮೂರನೆಯ ಭಾಗವಾಗಿ ಪ್ರಕಟಪಡಿಸಬೇಕೆಂದು ಸಂಕಲ್ಪವಿದೆ." ದುರದೃಷ್ಟವಶಾತ್ ಈ ಸಂಕಲ್ಪ ನೆರವೇರಲೆ ಇಲ್ಲ.

ಡಿ.ವಿ.ಜಿ.ಯವರು 'ವಿದ್ಯಾರಣ್ಯ ವಿಜಯ ಅಥವಾ ವಿಜಯನಗರ ರಾಜ್ಯ ಸ್ಥಾಪನೆ'ಯೆನ್ನುವ ನಾಟಕವನ್ನು ಬರೆದಿದ್ದಾರೆ. ಆ ನಾಟಕ ಬರೆಯುವ ಉದ್ದೇಶವನ್ನು ಅವರು ಹೀಗೆ ಹೇಳಿದ್ದಾರೆ : "ಉಪನ್ಯಾಸದ ರೀತಿಯಲ್ಲಿ ಸಮರ್ಪಕವಾಗಿ

ಬಣ್ಣಿಸಲಾಗದ ಐತಿಹಾಸಿಕ ತತ್ವಗಳು ಕೆಲವುಂಟು. ಅವುಗಳನ್ನು ಕಾವ್ಯದ ರೀತಿಯಲ್ಲಿ ಜನರ ಊಹಾಶಕ್ತಿಗೆ ಗೋಚರಪಡಿಸಬಹುದು. ಈ ನಂಬಿಕೆಯಿಂದ ವಿದ್ಯಾರಣ್ಯರ ಕಾರ್ಯರೀತಿಯನ್ನು ತೋರಿಸಲು ಒಂದು 'ನಾಟಕ'ವನ್ನು ಬರೆದಿರುವೆನು. ಈ ಉಪನ್ಯಾಸವನ್ನು ಓದುವ ಮಹಾಶಯರು ಇದರ ಪರಿಶಿಷ್ಟ ಭಾಗವಾದ ಆ 'ನಾಟಕ'ವನ್ನು ನೋಡಬೇಕೆಂದು ಬೇಡುತ್ತೇನೆ." ಈ ನಾಟಕವನ್ನು ಬಿಟ್ಟು ಮೇಲೆ ಹೇಳಿದ ಎರಡು ಪುಸ್ತಕಗಳ ಮುಖ್ಯಾಂಶಗಳು ಹೀಗಿವೆ.

ಮಾಧವಾಚಾರ್ಯರು – ಬಾಲ್ಯದಿಂದ ರಾಜ್ಯಸ್ಥಾಪನೆಯವರೆಗೆ

ಪರಕೀಯರ ದಾಳಿಯಾದಾಗ ಒಂದು ದೇಶದವರ ಐಕಮತ್ಯ ಮತ್ತು ಧೈರ್ಯ ಸಾಹಸಗಳು ಸಜವಾಗಿ ಹೊರಹೊಮ್ಮುತ್ತವೆ. ಇಂತಹ ಅವಕಾಶವು ಕರ್ನಾಟಕದ ಜನರಿಗೆ ೧೪ನೇ ಶತಮಾನದಲ್ಲಿ ದೊರಕಿತು. ಆ ಅವಕಾಶವನ್ನುಪಯೋಗಿಸಿ ಕೊಳ್ಳುವುದರಲ್ಲಿ ಮಾರ್ಗದರ್ಶಕರಾಗಿದ್ದವರೇ ವಿದ್ಯಾರಣ್ಯರು. ಪೂರ್ವಾಶ್ರಮದಲ್ಲಿ ಮಾಧವಾಚಾರ್ಯರೆಂದೂ ಸಂನ್ಯಾಸಾಶ್ರಮದಲ್ಲಿ ವಿದ್ಯಾರಣ್ಯರೆಂದೂ ಪ್ರಖ್ಯಾತರಾದರೆನ್ನುವುದು 'ಮಣಿಮಂಜರೀ ಭೇದಿನಿ' ಎಂಬ ಗ್ರಂಥದಿಂದ ಸ್ಪಷ್ಟವಾಗುವುದು. ಅವರ ತಾಯಿತಂದೆಗಳು ಶ್ರೀಮತಿ ಮಾಯಣರು. ಅವರ ಸಹೋದರರು ಸಾಯಣ ಭೋಗನಾಥರು, ಅವರ ಗೋತ್ರ ಭಾರದ್ವಾಜ, ಸೂತ್ರ ಬೋಧಾಯನ, ಯಜು ಶ್ಯಾಖಾನುವರ್ತಿಗಳು. ಈ ವಿಷಯಗಳೆಲ್ಲಾ ಪರಾಶರ ಮಾಧವೀಯದಲ್ಲಿ ಮತ್ತು ಕಂಚಿಯ ವರದರಾಜ (ಅರುಳಾಳ ಪೆರುಮಾಳ್) ದೇವಾಲಯದ ಗೋಡೆಯ ಮೇಲಿರುವ ಒಂದು ಶಿಲಾಶಾಸನದಿಂದ[೧] ಸ್ಪಷ್ಟವಾಗಿದೆ. ಚಿಕ್ಕವಯಸ್ಸಿನಲ್ಲಿ ಮಾಧವಾಚಾರ್ಯರು ತಮ್ಮಂದಿರೊಡನೆ ಕಾಂಚೀಪುರಕ್ಕೆ ತೆರಳಿ, ವಿದ್ಯಾತೀರ್ಥರ ಶಿಷ್ಯರಾದರು. ಅಲ್ಲಿ ವೇದಾಂತದೇಶಿಕರು ಅವರ ಸಹಾಧ್ಯಾಯಿಗಳೆಂದು ಐತಿಹ್ಯವುಂಟು. ಆಗ ಕಂಚಿಯಲ್ಲಿದ್ದ ವಿದ್ಯಾತೀರ್ಥರ ಮಾಧವಾಚಾರ್ಯರ ಮತ್ತು ಅವರ ಸಹೋದರರ ಮೊದಲನೆಯ ಗುರು. ಅಲ್ಲಿಯೆ ಇದ್ದ ಭಾರತೀಕೃಷ್ಣ ತೀರ್ಥರು ಇವರ ಎರಡನೆಯ ಗುರು. ಕಂಚಿಯ ವಾಸಿಗಳಾದ ಶ್ರೀಕಂಠನಾಥರು ಇವರ ಮೂರನೆಯ ಗುರು.

ವಿದ್ಯಾರ್ಥಿಜೀವನ ಮುಗಿದಮೇಲೆ ಮಾಧವಾಚಾರ್ಯರು ಹಂಪಿಗೆ ಬಂದು ವಿರೂಪಾಕ್ಷ ಕ್ಷೇತ್ರದಲ್ಲಿ ಭುವನೇಶ್ವರಿ ಸಾನ್ನಿಧ್ಯದಲ್ಲಿ ತಪಸ್ಸು ಮಾಡಿದರಂತೆ. ಮುಂದೆ ಸಂನ್ಯಾಸವನ್ನು ಸ್ವೀಕರಿಸಬೇಕೆಂದು ಶೃಂಗೇರಿಗೆ ಪ್ರಯಾಣ ಮಾಡಿ, ಅಲ್ಲಿ ಭಾರತೀ ಕೃಷ್ಣತೀರ್ಥರಿಂದ ಸಂನ್ಯಾಸವನ್ನು ಸ್ವೀಕರಿಸಿ ವಿದ್ಯಾರಣ್ಯರೆಂಬ ಹೆಸರನ್ನು ಪಡೆದರೆಂದು 'ಮಣಿಮಂಜರೀ ಭೇದಿನಿ' ತಿಳಿಸುತ್ತದೆ. ಶೃಂಗೇರಿ ಮಠದ ಪಟ್ಟಿಕೆಯಿಂದ ಮಾಧವಾಚಾರ್ಯರು ಸಂನ್ಯಾಸವನ್ನು ಸ್ವೀಕರಿಸಿದ್ದು ೧೩೩೧ರಲ್ಲಿ ಅಂದರೆ ಅವರ

೬೩-೬೪ನೇ ವಯಸ್ಸಿನಲ್ಲಿ. ಇವರು ಶೃಂಗೇರಿ ಮಠಾಧಿಪತಿಗಳ ಪರಂಪರೆಯಲ್ಲಿ ಸೇರಿದ್ದರೂ, ಶೃಂಗೇರಿಯಲ್ಲಿ ಬಹುಕಾಲ ನಿಲ್ಲಲಿಲ್ಲ. ಹಂಪಿಯಲ್ಲಿಯೆ ರಾಜ್ಯಭಾರಕಾರ್ಯಕದಲ್ಲಿ ನಿಂತಂತೆ ಕಾಣುತ್ತದೆ.

ವಿದ್ಯಾರಣ್ಯರ ಕಾಲದಲ್ಲಿ ಆಂಧ್ರ ದ್ರಾವಿಡ ಕರ್ನಾಟಕಗಳಲ್ಲಿ ಅಲ್ಲಿಯ ರಾಜರುಗಳಲ್ಲದೆ, ಪಂಡಿತರು, ಮಠಾಧಿಪತಿಗಳು, ವಿದೇಶಿಯರ ಪ್ರಾಬಲ್ಯದಿಂದ ವ್ಯಾಕುಲಿತರಾಗಿದ್ದರೆಂದು ವೇದಾಂತ ದೇಶಿಕರ 'ಅಭೀತಿಸ್ತವ'ದಿಂದ ತಿಳಿದುಕೊಳ್ಳಬಹುದು. ದೇಶಾಭಿಮಾನ ಮತ್ತು ಮತಾಭಿಮಾನಗಳು ಎಲ್ಲೆಲ್ಲಿಯೂ ಸಹಜವಾಗಿರತಕ್ಕ ಗುಣಗಳು. ಆದರೆ ದೇಶ ಮತಗಳಿಗೆ ಉಪದ್ರವವಾದಾಗ ಈ ಗುಣಗಳು ಪ್ರಜ್ವಲಿಸಿ ಜನರಲ್ಲಿ ನವಚೈತನ್ಯವನ್ನುಂಟುಮಾಡುತ್ತವೆ. ಆಗಿನ ಕಾಲದ ರಾಜರುಗಳಿಗೆ ಒಬ್ಬರನ್ನು ಕಂಡರೆ ಇನ್ನೊಬ್ಬರಿಗೆ ಆಗುತ್ತಿರಲಿಲ್ಲ. ಈ ಮಾತ್ಸರ್ಯದ ಲಾಭವನ್ನು ವಿದೇಶಿಯರು ಪಡೆದು ಎಲ್ಲರನ್ನೂ ಹತ್ತಿಕ್ಕಿದ್ದರು. ಇಂತಹ ರಾಜರಲ್ಲಿ ಧೈರ್ಯ ಶೌರ್ಯ ದೇಶಾಭಿಮಾನಗಳನ್ನು ಹುಟ್ಟಿಸುವುದು ಅತ್ಯಗತ್ಯವಾಗಿತ್ತು. ಹೀಗೆ ಮಾಡತಕ್ಕಂಥ ಸಾಹಸಿಯಾದ ಒಬ್ಬ ರಾಜನು ಅವಶ್ಯನಾಗಿದ್ದ. ಇಂತಹ ಶಿಷ್ಯನು ವಿದ್ಯಾರಣ್ಯರಿಗೆ ೧೩೩೫-೩೬ ರಲ್ಲಿ ದೊರಕಿದ ಹಾಗೆ ಕಾಣುತ್ತದೆ. ಈತನೇ ಸಂಗಮ ವಂಶದ ಹರಿಹರನು. ಈತನು ಓರುಗಲ್ಲಿನ ಪ್ರತಾಪರುದ್ರನ ಸೇವಕನೆಂದೂ, ಹೊಯ್ಸಳರ ಮಹಾಮಂಡಳೇಶ್ವರನೆಂದೂ ಅಥವಾ ಆನೆಗೊಂದಿಯ ಸಂಸ್ಥಾನದ ಪ್ರಜೆಯಾಗಿ ಅಲ್ಲಿಯೆ ಪ್ರಬಲನಾದನೆಂದೂ ಹೇಳುತ್ತಾರೆ. ಈ ವಿಷಯ ಏನಾದರೂ ಇರಲಿ, ಹರಿಹರನೂ ಆತನ ಸಹೋದರರೂ ಕನ್ನಡಿಗರೆನ್ನುವುದು ಅವರ ಹೆಸರುಗಳಿಂದ ಮತ್ತು ಅವರು ಸಾಹಸಿಗಳೆಂಬುದು ಅವರ ಕೃತಿಗಳಿಂದ ತಿಳಿದುಬರುತ್ತದೆ.

ವಿದ್ಯಾರಣ್ಯ – ಹರಿಹರರ ಸಂಬಂಧ

ಗುರುಶಿಷ್ಯರು ಮತ್ತು ಅವರ ಸಂಬಂಧ ಕುಲಕ್ರಮವಾಗಿತ್ತೆಂದು 'ಪರಾಶರ ಮಾಧವೀಯ' ಹೇಳುತ್ತದೆ. ಅದೇ ಆಧಾರದಿಂದ ಮಾಧವಾಚಾರ್ಯರ ತಂದೆ ಮಾಯಣರು ಹರಿಹರನ ತಂದೆ ಸಂಗಮನ ಪುರೋಹಿತರೆಂದು ಊಹಿಸಬಹುದು. ಮಹಮದ್ ತೊಗ್ಲಕನ ರಾಜ್ಯಾಕಾಂಕ್ಷೆ ಮಿತಿಮೀರಿದ್ದರಿಂದ ಅವನು ಗೆದ್ದ ರಾಜ್ಯಗಳನ್ನು ತನ್ನ ಹತೋಟಿಯಲ್ಲಿಟ್ಟುಕೊಳ್ಳಲು ಅಸಮರ್ಥನಾದನು. ಒಂದಾದ ಮೇಲೆ ಒಂದರಂತೆ ಅವನು ಗೆದ್ದ ಭಾಗಗಳು ಸ್ವತಂತ್ರವಾಗತೊಡಗಿದವು. ಆನೆಗೊಂದಿಯಲ್ಲಿಯೂ ಅವನ ಪ್ರತಿನಿಧಿಯನ್ನು ಜನರು ದಂಗೆಯೆದ್ದು ಕಿತ್ತು ಹಾಕಿದರು. ಹರಿಹರನು ಈ ರಾಜ್ಯದ ಸ್ವತಂತ್ರ ರಾಜನಾದನು. ಆಗ ವಿದ್ಯಾರಣ್ಯರ ಸಂಕಲ್ಪವು ಕೈಗೂಡಲು ಅನುಕೂಲವಾದ ವಾತಾವರಣವು ಉಂಟಾಯಿತು. ಹರಿಹರನ ರಾಜ್ಯಾಭಿಷೇಕವೂ

ವಿಜಯನಗರ ಜೀರ್ಣೋದ್ಧಾರವೂ ಕ್ರಿ.ಶ. ೧೩೩೬ರಲ್ಲಿ ವಿದ್ಯಾರಣ್ಯರ ಪ್ರಯತ್ನದಿಂದ ಆದವೆನ್ನುವುದಕ್ಕೆ 'ವಿದ್ಯಾರಣ್ಯಾಷ್ಟೋತ್ತರ ಶತನಾಮ' ವೆಂಬ ಗ್ರಂಥವೇ ಆಧಾರವು. ಕ್ರಿ.ಶ. ೧೩೪೪ರ ಮುಳಬಾಗಲ ೧೫೮ನೇ ಶಾಸನವು ವಿದ್ಯಾರಣ್ಯರು ವಿದ್ಯಾನಗರವನ್ನೂ ವಿಜಯನಗರ ರಾಜ್ಯವನ್ನು ಸ್ಥಾಪಿಸಿದರೆಂದು ಹೇಳುತ್ತದೆ. ಇದಾದ ಮೇಲೆ ಕರ್ನಾಟಕದ ಬಹುಭಾಗವು ಕ್ರಮೇಣ ಹರಿಹರನ ವಶಕ್ಕೆ ಸೇರಿತು. ಕ್ರಿ.ಶ. ೧೩೪೬ನೇ ಇಸ್ವಿಯ ಶೃಂಗೇರಿಯ ಒಂದನೆಯ ಶಾಸನದಿಂದ ಹರಿಹರನ ದಿಗ್ವಿಜಯವು ಅತ್ಯಂತ ಯಶಸ್ವಿಯಾಯಿತೆಂದು ತಿಳಿಸುತ್ತದೆ. ಶಾಸನದ ಪೀಠಿಕೆಯಲ್ಲಿ ಈ ಯಶಸ್ಸಿಗೆ ಕಾರಣರಾದ ಮತ್ತು ಭಾರತೀತೀರ್ಥರಿಗೆ ಮತ್ತು ವಿದ್ಯಾರಣ್ಯರಿಗೆ ಮುಖ್ಯ ಗುರುಗಳಾಗಿದ್ದ ವಿದ್ಯಾತೀರ್ಥರ ಉಪಕಾರಸ್ಮರಣೆಯಿದೆ. ಅನಂತರ ಈ ಶಾಸನವು ಭಾರತೀತೀರ್ಥರಿಗೆ ಹರಿಹರನು ತನ್ನ ಬಂಧುಬಳಗದವರೊಂದಿಗೆ ದಾನಮಾಡಿದನೆಂದು ಹೇಳುತ್ತದೆ. ಈ ಶಾಸನದಲ್ಲಿ ವಿದ್ಯಾರಣ್ಯರ ಹೆಸರು ಇಲ್ಲದೆ ಇರುವುದರಿಂದ ಆ ಶಾಸನದ ಕಾಲದಲ್ಲಿ ಅಂದರೆ ಕ್ರಿ.ಶ. ೧೩೪೬ರಲ್ಲಿ ಅವರು ಶೃಂಗೇರಿಯಲ್ಲಿರಲಿಲ್ಲವೆನ್ನಬಹುದು. ಅವರು ಕಾಶಿಗೆ ಹೋಗಿ ಅಲ್ಲಿಯೇ ಅನೇಕ ವರ್ಷಗಳಿದ್ದರೆಂದು ಕಾಣುತ್ತದೆ. ಹರಿಹರ ಕಾಲ ಕ್ರಿ.ಶ. ೧೩೫೪ರಲ್ಲಿ ಮುಗಿಯಿತು.

ಬುಕ್ಕರಾಯನ ಆಡಳಿತ

ಆತನ ತಮ್ಮ ಬುಕ್ಕರಾಯನು ಕ್ರಿ.ಶ. ೧೩೫೪ರಿಂದ ೧೩೭೬ರವರೆಗೂ ಆಳಿದನು. ಅವನು ರಾಜನಾದ ಕೂಡಲೆ ಕಾಶಿಯಲ್ಲಿದ್ದ ವಿದ್ಯಾರಣ್ಯರಿಗೆ ಒಂದು ಪತ್ರವನ್ನು ಬರೆದು ವಿಜಯನಗರಕ್ಕೆ ಹಿಂತಿರುಗಬೇಕೆಂದು ಬಿನ್ನವಿಸಿಕೊಳ್ಳುತ್ತಾನೆ. ತಾನೇ ಬರೆದರೆ ಅವರು ಬರುತ್ತಾರೊ ಇಲ್ಲವೊ ಎಂದು ಶಂಕಿಸಿ ತನ್ನ ಪತ್ರದ ಜತೆಗೆ ಅದೇ ಆಶಯದ ವಿದ್ಯಾತೀರ್ಥರ ನಿರೂಪವನ್ನು ಕಳಿಸುತ್ತಾನೆಂದು ಶೃಂಗೇರಿಯ ಮಠದಲ್ಲಿರುವ ಕಡತಗಳಿಂದ ತಿಳಿಯಬರುತ್ತದೆ. ವಿದ್ಯಾರಣ್ಯರು ಹಿಂತಿರುಗಿ ವಿಜಯನಗರದಲ್ಲಿ ಬುಕ್ಕನಿಗೆ ರಾಜ್ಯಭಾರದಲ್ಲಿ ನೆರವಾದರು. ಅವರ ಗುರುಗಳಾದ ಭಾರತೀ ಕೃಷ್ಣತೀರ್ಥರು ಕ್ರಿ.ಶ. ೧೩೮೦ರವರೆಗೂ ಮೊದಲು ವಿದ್ಯಾತೀರ್ಥರಿಗೆ ಕಿರಿಯ ಸ್ವಾಮಿಗಳಾಗಿದ್ದರು. ನಂತರ ಅವರು ಹಿರಿಯ ಸ್ವಾಮಿಗಳಾದ ಮೇಲೆ ವಿದ್ಯಾರಣ್ಯರು ಅವರ ಕಿರಿಯ ಸ್ವಾಮಿಗಳಾದರು. ಆದರೂ ವಿದ್ಯಾರಣ್ಯರು ಶೃಂಗೇರಿಯಲ್ಲಿ ಭಾರತೀ ಕೃಷ್ಣತೀರ್ಥರು ಅಲ್ಲಿರುವವರೆಗೂ ಇರಲಿಲ್ಲ. ರಾಜ್ಯಭಾರನಿಮಿತ್ತ ಅವರು ವಿಜಯನಗರದಲ್ಲಿಯೆ ಇರಬೇಕಾಗಿತ್ತು. ಬುಕ್ಕರಾಯನು ಆಗಾಗ ಶೃಂಗೇರಿಗೆ ಭೇಟಿಕೊಟ್ಟು ವಿದ್ಯಾತೀರ್ಥರ ಮತ್ತು ಭಾರತೀಕೃಷ್ಣತೀರ್ಥರ ಸೇವೆಯನ್ನು ಮಾಡಿ ಅಲ್ಲಿಯ ಮಠಕ್ಕೆ ಭೂದಾನ ಸುವರ್ಣದಾನಗಳನ್ನು ಮಾಡಿ ಬರುತ್ತಿದ್ದನು. ಬುಕ್ಕರಾಯನ ನಿಧನದ ವೇಳೆಗೆ (೧೩೭೬) ವಿದ್ಯಾರಣ್ಯರಿಗೆ ೧೦೮

ವರ್ಷಗಳಾಗಿದ್ದವು. ಆಮೇಲೆ ಅವರು ಇನ್ನೂ ೧೦ ವರ್ಷಗಳ ಕಾಲ ದೇಹಧಾರಣ ಮಾಡಿದ್ದರೆಂದು ಶಾಸನದಿಂದ ತಿಳಿದುಕೊಳ್ಳಬಹುದು. ಆಗ ಬುಕ್ಕನ ಹಿರಿಯ ಮಗ ಇಮ್ಮಡಿ ಹರಿಹರರಾಯನು ಆಳುತ್ತಿದ್ದನು. ಈತನ ಆಳ್ವಿಕೆಯ ೧೧ನೇ ವರ್ಷದಲ್ಲಿ ಅಂದರೆ ೧೩೮೬ರಲ್ಲಿ ಹಂಪೆಯಲ್ಲಿ ವಿದ್ಯಾರಣ್ಯರು ದೈವಾಧೀನರಾದರು. ಹಂಪೆಯ ಶ್ರೀ ವಿರೂಪಾಕ್ಷ ದೇವಾಲಯದ ಹಿಂಭಾಗದಲ್ಲಿ ಅವರ ಸಮಾಧಿಯನ್ನು ಈಗಲೂ ನೋಡಬಹುದು. ಅವರ ಜ್ಞಾಪಕಾರ್ಥವಾಗಿ ಇಮ್ಮಡಿ ಹರಿಹರನು ವಿದ್ಯಾರಣ್ಯಪುರವೆಂಬ ಅಗ್ರಹಾರವನ್ನು ಶೃಂಗೇರಿಯ ಹತ್ತಿರ ಕಟ್ಟಿಸಿದನು.

ವಿದ್ಯಾತೀರ್ಥರು

ವಿದ್ಯಾತೀರ್ಥರ ಚರಿತ್ರೆಯು ವಿದ್ಯಾರಣ್ಯರ ಚರಿತ್ರೆಯ ಒಂದು ಅಂಗ

ವಿದ್ಯಾತೀರ್ಥರು ವಿದ್ಯಾರಣ್ಯರ ಮುಖ್ಯ ಗುರುಗಳು. ಕಂಚಿಯಲ್ಲಿ ಆಶ್ರಮ ಸ್ವೀಕಾರ ಮಾಡಿ ಸ್ವಲ್ಪ ಕಾಲದನಂತರ ಇವರು ಶೃಂಗೇರಿಯಲ್ಲಿ ಅಧಿಕಾರ ವಹಿಸಿ ಕೊಂಡರೆಂಬುದು 'ಪುಣ್ಯಶ್ಲೋಕ ಮಂಜರಿ'ಯಿಂದ ಸ್ಪಷ್ಟವಾಗುತ್ತದೆ. ಹೀಗೆ ಮಾಡುವುದಕ್ಕೆ ವಿದ್ಯಾರಣ್ಯರ ಒತ್ತಾಯವು ಮತ್ತು ಅವರು ಕನ್ನಡಿಗರಾಗಿದ್ದುದು ಕಾರಣಗಳಾಗಿರಬೇಕು. ಅವರು ಕನ್ನಡಿಗರೆನ್ನುವುದಕ್ಕೆ ಕಂಚಿಯ ಮಠಾಧೀಶ್ವರರು ಅದ್ಯಾಪಿ ಕರ್ನಾಟಕರಾಗಿರುವುದು ಕನ್ನಡಿಗರಾದ ಮಾಧವ ಸಾಯಣರು ಅವರನ್ನು ಹುಡುಕಿಕೊಂಡು ದೂರದ ಕಂಚಿಗೆ ಹೋಗಿ ಅವರ ಶಿಷ್ಯರಾದದ್ದು ಕಾರಣಗಳಾಗಿರಬೇಕು. ವಿದ್ಯಾತೀರ್ಥರು ಕೇವಲ ಯೋಗಾಸಕ್ತರು. ಲೌಕಿಕ ಕಾರ್ಯಾಸಕ್ತರಲ್ಲ. ವಿದ್ಯಾರಣ್ಯರಾದರೊ ಸದಾ ಕಾರ್ಯನಿರತರು. ಅವರು ಯಾವಾಗಲೂ ತಮ್ಮ ಜತೆಗೆ ಪಂಡಿತರನ್ನೂ ಸಂನ್ಯಾಸಿಗಳನ್ನೂ ಕೂಡಿಕೊಂಡು ಧರ್ಮರಕ್ಷಣೆಗೆ ಶ್ರಮಿಸುತ್ತಿದ್ದರು. ಇಂತಹ ಸಮುದಾಯಕ್ಕೆ ಮಹಾತಪಸ್ವಿಗಳೂ, ಅಸಾಧಾರಣ ವಿದ್ವಾಂಸರೂ ಆದ ವಿದ್ಯಾತೀರ್ಥರು ಸ್ಫೂರ್ತಿದಾಯಕರಾಗಿದ್ದರು. ದೇಶೋನ್ನತಿಗೂ ಧರ್ಮೋನ್ನತಿಗೂ ಬೇಕಾದ ಮಹಾಸಮಾರಂಭಕ್ಕೆ ಮಹಾಪುರುಷರಾದವರ ಆಶ್ರಯವು ಅವಶ್ಯವೆನ್ನುವುದನ್ನು ವಿದ್ಯಾರಣ್ಯರು ಮನಗಂಡಿದ್ದರು. ಆದ್ದರಿಂದ ಅವರು ಎಲ್ಲಾ ಸಮಾರಂಭಗಳಿಗೂ ವಿದ್ಯಾತೀರ್ಥರನ್ನು ಮುಂದಿಟ್ಟುಕೊಂಡು ಅವರ ಆಸರೆಯಲ್ಲಿ ತಮ್ಮ ದೇಶ ಧರ್ಮೋದ್ಧಾರ ಕಾರ್ಯಗಳನ್ನು ನಡೆಯಿಸುತ್ತಿದ್ದರು.

ಇಂತಹ ಕಾರ್ಯದಲ್ಲಿ ಮುಖ್ಯವಾದ ಒಂದು ಕಾರ್ಯ ಶೃಂಗೇರಿಯ ಜೀರ್ಣೋದ್ಧಾರ. ವಿದ್ಯಾತೀರ್ಥರು ಶೃಂಗೇರಿಗೆ ಬರುವ ಮುಂಚೆ ಅದು ಒಂದು ಆಶ್ರಮವಾಗಿತ್ತು. ಶೃಂಗೇರಿ ಮಠಕ್ಕೆ ವಿದ್ಯಾತೀರ್ಥರು ಅಧಿಪತಿಗಳಾಗಿ ಕಡೆಗೆ ಅಲ್ಲಿಯೇ ಸಮಾಧಿ ಹೊಂದಿದರು. ಅವರ ಸಮಾಧಿರೂಪವಾದ ವಿದ್ಯಾಶಂಕರ

ದೇವಾಲಯವನ್ನು ವಿದ್ಯಾರಣ್ಯರು ಶೃಂಗೇರಿಯಲ್ಲಿ ಕಟ್ಟಿಸಿ ತಮ್ಮ ಗುರುಗಳ ಖ್ಯಾತಿಯನ್ನು ಶಾಶ್ವತಗೊಳಿಸಿದರು. ಈ ದೇವಸ್ಥಾನವನ್ನಲ್ಲದೆ, ಶಾರದಾದೇವಿಯ ಲೋಹಪ್ರತಿಮೆಯನ್ನು ಇವರೇ ಮಾಡಿಸಿಕೊಟ್ಟರು. ಹೀಗೆ ಆಶ್ರಮವಾಗಿದ್ದ ಶೃಂಗೇರಿಯನ್ನು ಪ್ರಸಿದ್ಧ ಕ್ಷೇತ್ರವಾಗಿ, ವಿದ್ಯಾಕೇಂದ್ರವಾಗಿ, ಆಚಾರ ವ್ಯವಹಾರ ವಿಚಾರಗಳಿಗೆ ನಿರ್ಣಯಸ್ಥಾನವಾಗಿ ವಿದ್ಯಾತೀರ್ಥರೂ ವಿದ್ಯಾರಣ್ಯರೂ ಬೆಳೆಸಿದರು.

ಭಾರತೀಕೃಷ್ಣತೀರ್ಥರು

ಇವರು ವಿದ್ಯಾರಣ್ಯರ ಎರಡನೆಯ ಗುರುಗಳು. ಇವರೂ ವಿದ್ಯಾತೀರ್ಥರ ಹಾಗೆ ಕಂಚಿಯನ್ನು ಬಿಟ್ಟು ಶೃಂಗೇರಿಯಲ್ಲಿ ನೆಲಸಿದ್ದರ ಕಾರಣವು ಇವರು ಕನ್ನಡಿಗರಾಗಿದ್ದರು, ಕರ್ನಾಟಕವೇ ತಮ್ಮ ಕಾರ್ಯಕ್ಷೇತ್ರಕ್ಕೆ ಯೋಗ್ಯವೆನ್ನುವ ಅವರ ನಿರೀಕ್ಷಣೆ ಇರಬಹುದು. ವಿದ್ಯಾರಣ್ಯರಿಗೆ ಇವರೇ ಸಂನ್ಯಾಸಾಶ್ರಮವನ್ನು ಕೊಟ್ಟವರು. ಕ್ರಿ.ಶ. ೧೩೪೬ ರ ಹೊತ್ತಿಗೆ ಇವರು ಶೃಂಗೇರಿಗೆ ಬಂದು ಅಲ್ಲಿ ಕಿರಿಯಸ್ವಾಮಿಗಳಾಗಿದ್ದರು. ವಿದ್ಯಾರಣ್ಯರು ವಿಜಯನಗರದಲ್ಲಿ ರಾಜಕೀಯ ಮತ್ತು ಲೌಕಿಕ ಕಾರ್ಯಗಳಲ್ಲಿ ನಿರತರಾಗಿದ್ದುದರಿಂದ ಶೃಂಗೇರಿಯ ಮಠದ ದಿನಚರ್ಯೆಯನ್ನು ಭಾರತೀಕೃಷ್ಣತೀರ್ಥರು ನಿರ್ವಹಿಸುತ್ತಿದ್ದರು. ವಿದ್ಯಾತೀರ್ಥರಿಗೂ ಹಾಗೆಯೆ. ಇದಕ್ಕೆ 'ಪಂಚದಶೀ' ಗ್ರಂಥ ಒಂದು ಒಳ್ಳೆಯ ಉದಾಹರಣೆ. ಪಂಚದಶೀ ಗ್ರಂಥಲೇಖನವನ್ನು ಭಾರತೀತೀರ್ಥರೆ ಪ್ರಾರಂಭಿಸಿ ಯಾವದೊ ಕಾರಣದಿಂದ ಅದನ್ನು ಮುಗಿಸಲಿಕ್ಕೆ ಆಗಲಿಲ್ಲವೆಂದು ಕಾಣುತ್ತದೆ. ವಿದ್ಯಾರಣ್ಯರು ಉಳಿದ ಎರಡು ಪಂಚಕಗಳನ್ನು ಬರೆದು ಆ ಗ್ರಂಥಲೇಖನವನ್ನೂ ಮುಗಿಸಿರಬೇಕು. ಈ ತರಹ ಸಹಕಾರ ಆ ಕಾಲದ ಇತರ ಗ್ರಂಥಗಳಿಗೂ ಅನ್ವಯಿಸುತ್ತದೆ.

ಆ ಕಾಲದ ಸಾರಸ್ವತ ಸಹಕಾರ

ಆ ಕಾಲದ ಸಾರಸ್ವತ ಪ್ರಪಂಚಕ್ಕೆ ಮಾಧವ ಸಾಯಣರು ಸೂರ್ಯಚಂದ್ರರಾಗಿದ್ದರು. ಅವರ ಸುತ್ತಮುತ್ತ ಅವರನ್ನವಲಂಬಿಸಿಕೊಂಡು ಅನೇಕ ಗ್ರಹಗಳೂ ನಕ್ಷತ್ರಗಳೂ ಸಂಚರಿಸುತ್ತಿದ್ದವು. ಮಾಧವ ಸಾಯಣರ ಹೆಸರಿನಲ್ಲಿ ನಮಗೆ ಲಭ್ಯವಿರುವ ಗ್ರಂಥಗಳಲ್ಲಿ ಪ್ರತಿಯೊಂದನ್ನೂ ಅವರೇ ಬರೆದಿರಲಿಲ್ಲ. ವಿದ್ಯಾರಣ್ಯರು ಆ ಕಾಲದಲ್ಲಿ ಬಹಳ ಪ್ರಸಿದ್ಧರಾಗಿದ್ದುದರಿಂದ ಅವರ ಹೆಸರಿನಲ್ಲಿ ಅವರ ಶಿಷ್ಯಮಂಡಲಿಯವರು ಬರೆದಿರಬೇಕು. ಅಥವಾ ಕೆಲವು ಪಂಡಿತರು ತಾವು ಬರೆದ ಗ್ರಂಥಗಳನ್ನು ಇವರಿಗೆ ಅಂಕಿತ ಮಾಡಿರಬಹುದು. ಅಥವಾ ಮಾಧವ-ಸಾಯಣರು ಕೆಲವು ಪಂಡಿತರ ಯೋಗ್ಯತೆಯನ್ನು ಗುರುತಿಸಿ ಅವರಿಗೆ ಕೆಲವು ಗ್ರಂಥಗಳನ್ನು ಬರೆಯಲು ನಿಯಮಿಸಿರಬಹುದು. ಅಥವಾ ಕೆಲವು ಗ್ರಂಥಗಳನ್ನು ಮಾಧವ-ಸಾಯಣರಿಬ್ಬರಲ್ಲಿ ಯಾರಾದರೂ ಒಬ್ಬರ

ಬರೆಯಲಾರಂಭಿಸಿ ಇತರ ಪಂಡಿತರಿಗೆ ಮುಗಿಸುವಂತೆ ಹೇಳಿರಬಹುದು. ಅಥವಾ ಇತರ ಪಂಡಿತರು ಬರೆದು ತಂದ ಪ್ರಬಂಧಗಳನ್ನು ರಾಜಾಸ್ಥಾನದಲ್ಲಿ ಪ್ರಕಾಶಪಡಿಸಿರಬಹುದು. ಹೀಗೆ ಹಿರಿಯರು ಕಿರಿಯರು ಕೂಡಿಕೊಂಡು ಈಗಿನ ಕಾಲದ ವಿಶ್ವವಿದ್ಯಾನಿಲಯಗಳು ಅಥವಾ ಅಕಾಡೆಮಿಗಳು ಮಾಡುವ ಕೆಲಸವನ್ನು ಮಾಡಿದರು. ಈ ಸಮುದಾಯದ ಮುಖ್ಯ ಉದ್ದೇಶ ಜನಬೋಧೆ. ಇವರಲ್ಲಿ ಯಾರೂ ತಮ್ಮ ಪ್ರತಿಷ್ಠೆ ಹೆಚ್ಚಿಸಿಕೊಳ್ಳಬೇಕೆಂಬ ದುರಾಸೆಯನ್ನು ಇಟ್ಟುಕೊಂಡಿರಲಿಲ್ಲ. ಹಿರಿಯರು ಕಿರಿಯರನ್ನು ಮುಂದೆ ತರಬೇಕೆಂದೂ ಕಿರಿಯರು ತಮ್ಮ ಸೇವೆಯನ್ನು ಹಿರಿಯರು ಅಂಗೀಕರಿಸಬೇಕೆಂದೂ ಹಾತೊರೆಯುತ್ತಿದ್ದರು.

ಈ ಪಂಡಿತ ಸಮುದಾಯಕ್ಕೆ ಬುಕ್ಕರಾಯ ಬೆನ್ನೆಲುಬು. ಆತನ ಆಶ್ರಯವಿಲ್ಲದಿದ್ದಲ್ಲಿ ಈ ಮಹಾಕಾರ್ಯಕ್ಕೆ ಅಗತ್ಯವಿದ್ದ ಪಂಡಿತ ಮಂಡಲಿಯು ಸೇರುತ್ತಿರಲಿಲ್ಲ. ಆ ಮಹಾರಾಯನು ಆ ಕಾರ್ಯಕ್ಕೆ ಪ್ರೋತ್ಸಾಹದಾಯಕನೂ, ಪೋಷಕನೂ ಆಗಿದ್ದನಲ್ಲದೆ ಮೂಲಪ್ರೇರಕನೂ ಆಗಿದ್ದನೆಂದು ಸಾಯಣ ವೇದಭಾಷ್ಯದ ಉಪೋದ್ಘಾತದಿಂದ ತಿಳಿಯಬಹುದು.

"ವಿದ್ಯಾತೀರ್ಥರ ಕಟಾಕ್ಷ ಬಲದಿಂದ (ರಾಜ) ರೂಪವನ್ನು ತಾಳಿದ ಬುಕ್ಕ ಮಹೀಪತಿಯು ಮಾಧವಾಚಾರ್ಯರನ್ನು ಕುರಿತು ವೇದಗಳ ಅರ್ಥವನ್ನು ಪ್ರಕಾಶ ಪಡಿಸಬೇಕೆಂದು ಆಜ್ಞಾಪಿಸಿದನು. ಅವರು ಆ ನರಪತಿಯನ್ನು ಕುರಿತು – ರಾಜನೇ, ನನ್ನ ತಮ್ಮ ಸಾಯಣಾರ್ಯನು ಎಲ್ಲವನ್ನು ತಿಳಿದವನು; ಆತನನ್ನು ಆ ವ್ಯಾಖ್ಯಾನ ಕಾರ್ಯಕ್ಕೆ ನಿಯಮಿಸೋಣವಾಗಲಿ" ಎಂದು ಹೇಳಿದರು. ಆ ಮಾತನ್ನು ಕೇಳಿ ವೀರ ಬುಕ್ಕ ಭೂಪತಿಯು ವೇದಾರ್ಥ ಪ್ರಕಾಶದ ಕಾರ್ಯವನ್ನು ಕುರಿತು ಸಾಯಣಾಚಾರ್ಯರಿಗೆ ಅಪ್ಪಣೆ ಕೊಟ್ಟನು."[೨]

ಹೀಗೆ ಬುಕ್ಕರಾಯನ ಪ್ರೇರಣೆ – ಪ್ರೋತ್ಸಾಹಗಳಿಂದ ವಿದ್ಯಾರಣ್ಯ – ಸಾಯಣರು ತಜ್ಞರ ಸಹಾಯದಿಂದ ಆದುವರೆಗೂ ಜ್ಞಾನದ ಬೇರೆ ಬೇರೆ ಭಾಗಗಳಲ್ಲಿ ಭಾರತೀಯರು ಸಾಧಿಸಿದ ಪ್ರಗತಿಯನ್ನು ಗ್ರಂಥಗಳ ಮೂಲಕ ತಮ್ಮ ಕಾಲದವರಿಗೂ, ಮುಂದಿನ ಪೀಳಿಗೆಯವರಿಗೂ ತಿಳಿಯಪಡಿಸಿದರು. ವಿದ್ಯಾರಣ್ಯ – ಸಾಯಣರು ಈ ಜನಬೋಧೆಯ ಕೆಲಸದಲ್ಲಿ ಜನಜೀವನಕ್ಕೆ ಅವಶ್ಯವಾದ ಕಾರ್ಯಗಳನ್ನು ಮರೆಯಲಿಲ್ಲ. ಅವರ ಸಹೋದರಿ ಸಿಂಗಲೆಯ ಮಗ ಲಕ್ಷ್ಮೀಧರ ಮೊದಲನೆಯ ದೇವರಾಯನ ಮುಖ್ಯ ಮಂತ್ರಿಯಾಗಿದ್ದನು. ತನ್ನ ಸೋದರಮಾವಂದಿರಾದ ಮಾಧವ–ಸಾಯಣರು ಜನ ಸೇವೆಗಾಗಿ ಏನೇನು ಮಾಡಿದರೆನ್ನುವುದನ್ನು ತನ್ನ ಒಂದು ಶಾಸನದಲ್ಲಿ ಈ ರೀತಿ ಬಣ್ಣಿಸಿದ್ದಾನೆ :

ತೋಡದ ಭಾವಿಯಿಲ್ಲ ಮರ ಕಟ್ಟದ ಪೇರ್ಗೆರೆಯಿಲ್ಲ ಲೀಲೆಯಿಂ ।
ಮಾಡದ ದೇವತಾಭವನಮಿಲ್ಲೊಲವಿಂ ಬಿಡದಗ್ರಹಾರಮಿ॥
ಲ್ಲಾಡಲದೇನೋ ಭೂಭವನ ಭುಂಭುಕಮಾದುದು ಕೀರ್ತಿ ಭಾಪು ನಾ।
ಡಾಡಿಯ ಸುಯ್ಯು ಮಾದರಸ ಸಾಯಣರೆಂಬ ಮಹಾಪ್ರಧಾನರಾ॥

ವಿದ್ಯಾರಣ್ಯರ ಬಗೆಗೆ ಡಿ.ವಿ.ಜಿ.ಯವರ ಮತ್ತು ಇತರರ ಶೋಧನೆಗಳು

ತಮಗೆ ವಿದ್ಯಾರಣ್ಯರ ಬಗೆಗೆ ಬರೆಯುವುದಕ್ಕೆ ಯಾವ ವಿದ್ವಾಂಸರ ಸಹಾಯ ವಿಶೇಷವಾಯಿತೆನ್ನುವುದನ್ನು ಡಿ.ವಿ.ಜಿ.ಯವರು ಈ ರೀತಿಯಾಗಿ ಹೇಳಿದ್ದಾರೆ "ಕರ್ನಾಟಕ ಇತಿಹಾಸ ಸಾಮಗ್ರಿಯನ್ನು ಸಂಪಾದಿಸಿ ಶೋಧಿಸಿರುವವರಲ್ಲಿ ಇಬ್ಬರಿಗ ಈ ಲೇಖಕ ವಿಶೇಷ ಋಣಿಯಾಗಿದ್ದಾನೆ. ಅವರಲ್ಲಿ ಪ್ರಾಕ್ತನ ವಿಮರ್ಶ ವಿಚಕ್ಷಣ ರಾವ ಬಹದ್ದೂರ್ ಶ್ರೀವಾನ್ ಆರ್. ನರಸಿಂಹಾಚಾರ್ಯರವರು ಮೊದಲನೆಯವರು. ಅವರ ಲೇಖನಗಳು ಇವನಿಗೆ ಅನೇಕ ವಿಷಯಗಳಲ್ಲಿ ಮಾರ್ಗದರ್ಶಕಗಳಾದುವು. ದಿವಂಗತರಾದ ರಾವ್ ಬಹದ್ದೂರ್ ಹೆಚ್ ಕೃಷ್ಣಶಾಸ್ತ್ರಿಗಳವರು ಇನ್ನೊಬ್ಬರು."

ಹಿಂದಿನ ಲೇಖಕರಿಂದ ಸ್ಫೂರ್ತಿಪಡೆದು, ಡಿ.ವಿ.ಜಿ.ಯವರು ಅನೇಕ ಹೊಸ ವಿಷಯಗಳನ್ನು ಕಂಡುಹಿಡಿದಿದ್ದಾರೆ. ವಿದ್ಯಾತೀರ್ಥರು, ಭಾರತೀತೀರ್ಥರು ಮತ್ತು ವಿದ್ಯಾರಣ್ಯರು ಕನ್ನಡಿಗರು, ಆದ್ದರಿಂದಲೇ ಕರ್ನಾಟಕವನ್ನು ತಮ್ಮ ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಂಡರೆನ್ನುವುದು ಇವರ ಶೋಧನೆಗಳಲ್ಲಿ ಮೊದಲನೆಯದು ಎರಡನೆಯದಾಗಿ, ವಿದ್ಯಾತೀರ್ಥರ ಮತ್ತು ವಿದ್ಯಾರಣ್ಯರ ಸ್ವಭಾವವನ್ನು ಇವರು ಸರಿಯಾಗಿ ತಿಳಿದುಕೊಂಡಿದ್ದಾರೆ. ಇವರ ಸ್ವಭಾವದಲ್ಲಿರುವ ವ್ಯತ್ಯಾಸವನ್ನು ತಿಳಿದುಕೊಳ್ಳದೆ ಇರುವ ಕೆಲವು ವಿದ್ವಾಂಸರು ವಿಜಯನಗರ ಸ್ಥಾಪನೆಯು ವಿದ್ಯಾತೀರ್ಥರ ಮುಂದಾಳುತನದಲ್ಲಿ ಆಯಿತು. ಇದರಲ್ಲಿ ವಿದ್ಯಾರಣ್ಯರ ಪಾತ್ರವೇ ಇಲ್ಲ ಎಂದು ಹೇಳಿದ್ದಾರೆ. ಡಿ.ವಿ.ಜಿ.ಯವರು ವಿದ್ಯಾತೀರ್ಥರು ಯೋಗಾಸಕ್ತರು ತಪಸ್ವಿಗಳು, ಲೌಕಿಕದಲ್ಲಿ ಇವರಿಗೆ ಆಸಕ್ತಿ ಇರಲಿಲ್ಲ; ಅದರಲ್ಲಿ ಆಸಕ್ತಿ ಇದ್ದಂತಹ ವಿದ್ಯಾರಣ್ಯರೇ ಈ ರಾಜ್ಯಸ್ಥಾಪನೆಗೆ ಕಾರಣರು ಎನ್ನುವುದನ್ನು ಎಲ್ಲರೂ ಒಪ್ಪುವ ರೀತಿಯಲ್ಲಿ ತೋರಿಸಿಕೊಟ್ಟಿದ್ದಾರೆ. ಕೊನೆಯದಾಗಿ, ಮಾಧವ-ಸಾಯಣರು ಹಂಪೆಯಲ್ಲಿ ಮತ್ತು ಶೃಂಗೇರಿಯಲ್ಲಿ ವಿಶ್ವವಿದ್ಯಾನಿಲಯಗಳಂತಹ ಸಂಸ್ಥೆಗಳನ್ನು ಕಟ್ಟಿ ಅವುಗಳ ಮೂಲಕ ಭಾರತೀಯ ಸಂಸ್ಕೃತಿಯ ವಿವಿಧ ಅಂಶಗಳ ಪುನರುಜ್ಜೀವನ ಮಾಡಿದ ರೀತಿಯನ್ನು ಡಿ.ವಿ.ಜಿ.ಯವರು ಸಮರ್ಪಕವಾಗಿ ತೋರಿಸಿಕೊಟ್ಟಿದ್ದಾರೆ

ಇನ್ನೊಂದೆರಡು ವಿಷಯಗಳಲ್ಲಿ ಡಿ.ವಿ.ಜಿ.ಯವರ ಶೋಧನೆಗಳು ಅ ವಿಷಯಗಳಲ್ಲಿಯ ತಜ್ಞರನ್ನು ಬೆರಗುಗೊಳಿಸುವಂಥವು. ಅರುಳಾಳ ಪೆರುಮಾ

ಶಾಸನದಲ್ಲಿ ಸರಿಯಾಗಿ ಕಾಣದೆ ಇರುವ ಭಾಗಗಳನ್ನು ಓದುವಲ್ಲಿ ಡಿ.ವಿ.ಜಿ.ಯವರು ಓದಿದ ರೀತಿ ಸರ್ವಮಾನ್ಯವಾಗಿದೆ. ಶಾಸನತಜ್ಞರು ಕೂಡ ಈ ಭಾಗಗಳನ್ನು ಸಮರ್ಪಕವಾಗಿ ಓದಿರಲಿಲ್ಲ. ಕೊನೆಯದಾಗಿ, ಪಂಚದಶೀ ಗ್ರಂಥದಲ್ಲಿ ಭಾರತೀತೀರ್ಥರು ಯಾವ ಭಾಗವನ್ನು ಬರೆದರು, ವಿದ್ಯಾರಣ್ಯರು ಯಾವ ಭಾಗವನ್ನು ಬರೆದರು ಎಂದು ನಿರ್ಧರಿಸುವಲ್ಲಿ ಡಿ.ವಿ.ಜಿ.ಯವರ ನಿರ್ಣಯವು ಎಲ್ಲಾ ಸಂಸ್ಕೃತ ವಿದ್ವಾಂಸರುಗಳೂ ಒಪ್ಪುವಂತಹುದು.

ಡಿ.ವಿ.ಜಿ.ಯವರು ಬರೆದನಂತರ ವಿದ್ಯಾರಣ್ಯರ ಬಗೆಗೆ ನಡೆದ ಕೆಲವು ಚರ್ಚೆಗಳನ್ನು ಇಲ್ಲಿ ಸಂಕ್ಷಿಪ್ತವಾಗಿ ಸಮೀಕ್ಷಿಸಬಹುದು. ಇಂತಹ ಸಮೀಕ್ಷೆಯಿಂದ ಡಿ.ವಿ.ಜಿ.ಯವರ ನಿರ್ಣಯಗಳ ಮೌಲ್ಯಮಾಪನ ಮಾಡಲು ಸುಲಭವಾಗುತ್ತದೆ. ಮೂರು ವಿಷಯಗಳಲ್ಲಿ ಇಂತಹ ಚರ್ಚೆಗಳ ಉದಾಹರಣೆಗಳನ್ನು ನಾವು ನೋಡಬಹುದು. ಅವು ಯಾವುವೆಂದರೆ :-

೧. ವಿಜಯನಗರ ರಾಜ್ಯ ಮತ್ತು ಅದರ ರಾಜಧಾನಿಗಳ ಸ್ಥಾಪನೆಯಲ್ಲಿ ವಿದ್ಯಾರಣ್ಯರ ಮತ್ತು ಶೃಂಗೇರಿ ಮಠದ ಪಾತ್ರ.

೨. ಮಾಧವ - ವಿದ್ಯಾರಣ್ಯರು ಒಬ್ಬರೆ ಅಥವಾ ಬೇರೆ ಬೇರೆಯವರೆ?

೩. ಕ್ರಿಯಾಶಕ್ತಿ - ವಿದ್ಯಾರಣ್ಯರು ಒಬ್ಬರೆ ಅಥವಾ ಬೇರೆ ಬೇರೆಯವರೆ?

೧. ಪ್ರಸಿದ್ಧ ಇತಿಹಾಸಕಾರರಾದ ಫಾದರ್ ಹೆರಾಸ್ ಅವರು ವಿಜಯನಗರ ರಾಜ್ಯಸ್ಥಾಪನೆಯಲ್ಲಿ ಮತ್ತು ರಾಜಧಾನಿಯ ಸ್ಥಾಪನೆಯಲ್ಲಿ ಶೃಂಗೇರಿ ಮಠದ ಪಾತ್ರವಿರಲಿಲ್ಲ, ಸಂಬಂಧವಿದೆಯೆಂದು ತೋರಿಸುವ ದಾಖಲೆಗಳು ಕೃತಕವಾದುವು. ಅವನ್ನು ಶೃಂಗೇರಿ ಮಠದವರು ೧೬ನೇ ಶತಮಾನದಲ್ಲಿ ಮಠಕ್ಕೆ ಅವುಗಳಿಂದ ಲಾಭವಾಗಲಿ ಎಂದು ತಯಾರಿಸಿದರೆಂದು ವಾದಿಸಿದ್ದಾರೆ.

ಈ ವಾದವನ್ನು ಖಂಡಿಸಿ ಸಕಲೇಶಪುರದ ಶ್ರೀಕಂಠಯ್ಯನವರು ಶೃಂಗೇರಿ ಮಠದವರೆಗೆ ೧೬ನೇ ಶತಮಾನದಲ್ಲಿ ವಿಜಯನಗರದ ಅರಸರಿಂದ ಯಾವ ಲಾಭವೂ ಬರಲಿಲ್ಲ. ಆದ್ದರಿಂದ ಅವರು ಕೃತಕ ದಾಖಲೆಗಳನ್ನು ನಿರ್ಮಿಸಿದರೆನ್ನುವ ಆಪಾದನೆಯಲ್ಲಿ ಹುರುಳಿಲ್ಲವೆನ್ನುವುದುನ್ನು ತೋರಿಸಿ, ವಿದ್ಯಾರಣ್ಯರ ವಿಜಯನಗರ ರಾಜ್ಯ ಮತ್ತು ರಾಜಧಾನಿಗಳ ಸ್ಥಾಪನೆಯಲ್ಲಿ ಹರಿಹರನಿಗೆ ಮಾರ್ಗದರ್ಶನ ಮಾಡಿದರೆಂದು ವಾದಿಸಿದ್ದಾರೆ.

೨. ವಿದ್ಯಾರಣ್ಯ ಮತ್ತು ಮಾಧವರು ಬೇರೆ ಬೇರೆ ಎಂದು ವಾದಿಸಿರುವವರಲ್ಲಿ ಶಾಸನತಜ್ಞ ಆರ್. ರಾಮರಾಯರು ಪ್ರಮುಖರು. ಎಲ್ಲಿಯೂ ಅವರಿಬ್ಬರೂ

ಒಬ್ಬರೇ ಎಂದು ಹೇಳಿಲ್ಲವೆನ್ನುವುದು ಅವರ ಮುಖ್ಯ ವಾದ. ಅವರಿಬ್ಬರೂ ಒಬ್ಬರೇ ಎಂದು ಅವರ ಗ್ರಂಥಗಳಿಂದ ಸಿದ್ಧಮಾಡಿರುವವರು, ಎಸ್. ಕೃಷ್ಣಸ್ವಾಮಿ ಅಯ್ಯಂಗಾರರು, ಆರ್. ನರಸಿಂಹಾಚಾರ್ಯರು ಮತ್ತು ಕೆ. ಕೃಷ್ಣಮೂರ್ತಿಯವರು.

೩.ಕೊನೆಯದಾಗಿ, ಎ. ವೆಂಕಟಸುಬ್ಬಯ್ಯನವರು ಮತ್ತು ಟಿ.ಎಸ್. ಮಲ್ಲಪ್ಪನವರು ವಿದ್ಯಾರಣ್ಯ ಮತ್ತು ಕ್ರಿಯಾಶಕ್ತಿ ಒಬ್ಬರೇ ಎಂದು ವಾದಿಸಿದ್ದಾರೆ. ಸಕಲೇಶಪುರದ ಶ್ರೀಕಂಠಯ್ಯನವರು ಮತ್ತು ಆರ್. ಚಕ್ರವರ್ತಿಯವರು ಅವರಿಬ್ಬರೂ ಬೇರೆ ಬೇರೆ ಎಂದು ಸಿದ್ಧಮಾಡಿ ತೋರಿಸಿದ್ದಾರೆ.

ಹೀಗೆ ಡಿ.ವಿ.ಜಿ.ಯವರು ಬರೆದನಂತರ ನಡೆದ ವಾದ ವಿವಾದದಿಂದ ಅವರು ಬರವಣಿಗೆ ಬಹುಕಾಲ ನಿಲ್ಲತಕ್ಕದ್ದೆಂದು ಸಿದ್ಧವಾಯಿತೆಂದು ಹೇಳಬಹುದು. ಅವರು ಯಾರ ಬಗೆಗೆ ಬರೆದರೂ ಅವರ ಚರಿತ್ರೆಯು ಇವತ್ತಿಗೂ ನಮಗೆ ದಾರಿ ದೀಪವಾಗಬಲ್ಲದೆಂದು ಈ ಕೆಳಗೆ ಕಂಡಂತೆ ಹೇಳಿ ತಮ್ಮ ಲೇಖನವನ್ನು ಮುಗಿಸಿದ್ದಾರೆ: "ಪ್ರಕೃತ, ಆರುನೂರು ವರ್ಷಗಳ ಹಿಂದೆ ಯಾವ ಮಹಾನುಭಾವರ ಬ್ರಾಹ್ಮಣ್ಯವು ದೀನವೃತ್ತಿಯಾಗಿರದೆ, ಧೀರವೃತ್ತಿಯಾಗಿ ವೇದಾಶಾಸ್ತ್ರಾಭ್ಯುದಯ ಹೇತುವಾಯಿತೋ, ಯಾರ ವೈರಾಗ್ಯವು ತಾಟಸ್ಥ್ಯದಲ್ಲಿ ಪರ್ಯವಸಾನವಾಗದೆ ಪೌರುಷ ಪ್ರಕಾಶದಲ್ಲಿ ಫಲಿಸಿತೋ, ಆ ವಿದ್ಯಾರಣ್ಯರ ಚರಿತ್ರೆಯು ಈ ವಿಷಮ ಕಾಲದಲ್ಲಿ ನಮಗೆ ಕಗ್ಗತ್ತಲೆಯಲ್ಲಿ ಕಾಣಬಂದ ಪಂಜಿನಂತೆಯೂ ಮರುಭೂಮಿಯಲ್ಲಿ ಸಿಕ್ಕಿದ ಸರೋವರದಂತೆಯೂ ಇದೆ. ಆ ಸರಸ್ಸಿನಲ್ಲಿ ನಮ್ಮ ಅಂತಃಕರಣವನ್ನು ತೊಳೆಯೋಣ, ಆ ದೀವಿಗೆಯ ಬೆಳಕಿನಲ್ಲಿ ನಮ್ಮ ಜೀವನಯಾತ್ರೆಯನ್ನು ನಡಸೋಣ."

■

---

೧. ಈ ಶಾಸನದ ಕನ್ನಡ ಅನುವಾದವನ್ನು ಡಿ.ವಿ.ಜಿ.ಯವರು ಹೀಗೆ ಮಾಡಿದ್ದಾರೆ :- "ಎಲೈ ಸಾಯಣಾರ್ಯ, ನಿನ್ನ ತಾಯಿ ಶ್ರೀಮತೀ, ನಿನ್ನ ತಂದೆ ಬೋಧಾಯನ ಸೂತ್ರದ ಮಾಯಣಮುನಿ : ನಿನ್ನ ತಮ್ಮ ಭೋಗನಾಥ ಕವಿ ; ನಿನ್ನ ಸ್ವಾಮಿ ಸಂಗಮರಾಜ ; ನಿನ್ನ ಗುರು ಶ್ರೀಕಂಠನಾಥನು ; ನಿನ್ನ ಕುಲ ಭಾರದ್ವಾಜ ಋಷಿಯರದು, ಹೀಗಿರಲಾಗಿ ನಿನಗಿಂತ ದೊಡ್ಡವರಾರು." ಈ ಶಾಸನದ ಸ್ವಲ್ಪ ಭಾಗ ನಷ್ಟವಾಗಿದೆ. ಡಿ.ವಿ.ಜಿ.ಗಿಂತ ಮುಂಚೆ ಈ ಶಾಸನವನ್ನು ಓದಿದವರು ನಷ್ಟವಾದ ಭಾಗವನ್ನು ಸರಿಯಾಗಿ ಓದಿ ಅರ್ಥಮಾಡಿಕೊಂಡಿರಲಿಲ್ಲ. ಆ ಭಾಗವನ್ನು ಡಿ.ವಿ.ಜಿ.ಯವರು ಮೇಲೆ ಕಂಡಂತೆ ಸರಿಯಾಗಿ ಅರ್ಥವಾಗುವಂತೆ ಓದಿದ್ದಾರೆ 'ವಿದ್ಯಾರಣ್ಯರ ಸಮಕಾಲೀನರು', ಪುಟ (೮೦-೮೧)

೨. 'ವಿದ್ಯಾರಣ್ಯರ ಸಮಕಾಲೀನರು', ಪುಟ ೧೪೩.

೧೦

ಕೃಷ್ಣದೇವರಾಯನ ಇತಿಹಾಸಕ್ಕೆ ಒಂದು ಹೊಸ ಆಕರ

ಟಾಮ್ ಪಿರೇಸ್(Tom Pires) ಎನ್ನುವ ಪೋರ್ಚುಗೀಸ್ ಲೇಖಕನು 'ದಿ ಸುಮಾ ಓರಿಯಂಟಲ್'(The Suma Oriental) ಎನ್ನುವ ಪ್ರವಾಸ ಕಥನವನ್ನು ಕ್ರಿ.ಶ. ೧೫೧೨-೧೫೧೫ರಲ್ಲಿ ಬರೆದನು. ಇದೇ ಸಮಯದಲ್ಲಿ ಬಾರ್ಬೋಸಾನು ತನ್ನ ಕಥನವನ್ನು ಬರೆದನು. ವಿಜಯನಗರದ ಇತಿಹಾಸಕಾರರು ಬಾರ್ಬೋಸಾನ ಕಥನವನ್ನು ಬಳಸಿಕೊಂಡಿದ್ದಾರೆ. ಆದರೆ ಟಾಮ್ ಪಿರೇಸನ ಬರಹವನ್ನು ಭಾರತೀಯ ಇತಿಹಾಸಕಾರರು ಉಪೇಕ್ಷಿಸಿದ್ದಾರೆ. ೧೯೮೨ರಲ್ಲಿ ಪ್ರಕಟವಾದ ತಪನ್ ರಾಯಚೌಧರಿ ಮತ್ತು ಇರ್ಫಾನ್ ಹಬೀಬ್ ಇವರು ಸಂಪಾದಿಸಿರುವ ಕೇಂಬ್ರಿಡ್ಜ್ ಇಕಾನಮಿಕ್ ಹಿಸ್ಟರಿ ಆಫ್ ಇಂಡಿಯಾದ ಮೊದಲ ಸಂಪುಟದ ಕೊನೆಗೆ ಕೊಟ್ಟಿರುವ ಪುಸ್ತಕಗಳ ಪಟ್ಟಿಯಲ್ಲಿ ಈ ಲೇಖಕ ಮತ್ತು ಅವನ ಪುಸ್ತಕದ ಹೆಸರುಗಳಿವೆ. ಆದರೆ ಆ ಗ್ರಂಥದಲ್ಲಿ ಈ ಪುಸ್ತಕದಲ್ಲಿರುವ ಮಾಹಿತಿಯನ್ನು ಅಲಕ್ಷಿಸಿದ್ದಾರೆ. ಟಿ.ವಿ. ಮಹಾಲಿಂಗಂ ಇವರ 'ಅಡ್ಮಿನಿಸ್ಟ್ರೇಶನ್ ಆಂಡ್ ಸೋಶಿಯಲ್ ಲೈಫ್ ಆಫ್ ವಿಜಯನಗರ' ಸಂಪುಟ ೧(೧೯೬೯) ಮತ್ತು ಸಂಪುಟ ೨(೧೯೭೫), ಈ ಗ್ರಂಥಗಳಲ್ಲಿ ಪಿರೇಸನ ಬರಹದ ಉಲ್ಲೇಖವಿಲ್ಲ. ಅವನ ಗ್ರಂಥದ ಇಂಗ್ಲೀಷ್ ಭಾಷಾಂತರವು ಲಂಡನ್ನಿನಿಂದ ೧೯೪೪ರಲ್ಲಿ ಪ್ರಕಟವಾಗಿದ್ದುದರಿಂದ, ಇದಕ್ಕೆ ಮುಂಚೆ ಬರೆದ ಬಿ.ಎ. ಸಾಲೆತೊರೆ, ಎನ್.ವೆಂಕಟರಮಣಯ್ಯ ಮತ್ತು ಎ. ಅಪ್ಪಾದೊರೈ ಇವರುಗಳಿಗೆ ಪಿರೇಸನ ಬರಹ ಗೊತ್ತಿರಲು ಸಾಧ್ಯವಿಲ್ಲ. ಶ್ರೀ ಹೆಚ್.ಎಲ್. ನಾಗೇಗೌಡರ 'ಪ್ರವಾಸಿ ಕಂಡ ಇಂಡಿಯಾ' ದಲ್ಲಿ ಪಿರೇಸನ ಬರಹದ ಭಾಷಾಂತರವಿಲ್ಲ.

ಟಾಮ್ ಪಿರೇಸ್ ಒಬ್ಬ ಸಣ್ಣ ಔಷಧಿ ವ್ಯಾಪಾರಿಯಾಗಿ ತನ್ನ ಜೀವನವನ್ನು ಆರಂಭಿಸಿ ಸ್ವಪ್ರತಿಭೆಯಿಂದ ಚೀನಾಕ್ಕೆ ಪೋರ್ಚುಗೀಸ್ ರಾಯಭಾರಿಯಾಗಿ ನೇಮಕವಾದನು. ಅಲ್ಲಿಯೇ ೧೫೪೦ರಲ್ಲಿ ನಿಧನವಾದ. ೧೬ನೇ ಶತಮಾನದ ಪೂರ್ವಾರ್ಧದಲ್ಲಿ ಏಷ್ಯಾದ ದೇಶಗಳ ಬಗ್ಗೆ ಬರೆದ ಯೂರೋಪಿನ ಪ್ರವಾಸಿಗಳಲ್ಲಿ

ಇವನು ಅಗ್ರಗಣ್ಯ. ಇವನ ಹೊಸ ಹೊಸ ವಿಷಯಗಳನ್ನು ತಿಳಿದುಕೊಳ್ಳುವ ಕುತೂಹಲ, ಕಂಡದ್ದನ್ನು ಕಂಡ ಹಾಗೆ ಬರೆಯುವ ಕೌಶಲ್ಯ – ಇವುಗಳನ್ನು ವಿಮರ್ಶಕರು ಗುರುತಿಸಿದ್ದಾರೆ.

ಇವನ ಬರಹಗಳಲ್ಲಿ ವಿಜಯನಗರ ಸಾಮ್ರಾಜ್ಯದ ಎರಡು ಭಾಗಗಳ ವರ್ಣನೆಯಿದೆ. ಮೊದಲನೆಯ ಭಾಗವನ್ನು ಕೆನರಾ ಎಂದು ಕರೆದಿದ್ದಾನೆ. ಇದರಲ್ಲಿ ಈಗಿನ ಉತ್ತರ ಮತ್ತು ದಕ್ಷಿಣ ಕನ್ನಡಗಳಿವೆ. ಎರಡನೆಯ ಭಾಗವನ್ನು **'ನರಸಿಂಗ'** ಎಂದು ಕರೆದಿದ್ದಾನೆ. ಪೋರ್ಚುಗೀಸರಿಗೆ ಮೊದಲು ವಿಜಯನಗರ ಪರಿಚಯವಾದಾಗ 'ವೀರ ನರಸಿಂಗ ' ಎನ್ನುವ ರಾಜನು ಆಳುತ್ತಿದ್ದನು. ಆದ್ದರಿಂದ ಎಲ್ಲಾ ಪೋರ್ಚುಗೀಸ್ ಪ್ರವಾಸಿಗಳು ಅವನ ರಾಜ್ಯವನ್ನು ನರಸಿಂಗನೆಂದೇ ಕರೆದಿದ್ದಾರೆ. ಪಿರೇಸನು 'ನರಸಿಂಗ' ಎನ್ನುವ ಭಾಗದಲ್ಲಿ ಕೃಷ್ಣದೇವರಾಯ ಮತ್ತು ಅವನ ಆಸ್ಥಾನದ ಬಗ್ಗೆ ಬರೆದಿದ್ದಾನೆ. ಈ ಎರಡು ಭಾಗಗಳಲ್ಲಿಯ ಮುಖ್ಯವಾದ ಮಾಹಿತಿಯನ್ನು ಕೆಳಗೆ ಕಂಡಂತೆ ಸಂಗ್ರಹಿಸಬಹುದು.

ಕೆನರಾ

ಇದರ ಉತ್ತರಕ್ಕೆ ಗೋವಾ ಮತ್ತು ಅಂಜದೀವ್, ದಕ್ಷಿಣಕ್ಕೆ ಮಲಬಾರ್, ಪೂರ್ವಕ್ಕೆ ವಿಜಯನಗರಗಳಿವೆ. ಕೆನರಾ ಕೂಡ ವಿಜಯನಗರ ಸಾಮ್ರಾಜ್ಯದ ಒಂದು ಭಾಗವಾಗಿದ್ದರೂ ಅದರ ಪ್ರಕೃತಿ ಲಕ್ಷಣಗಳು ವಿಶಿಷ್ಟವಾಗಿದ್ದುದರಿಂದ ಎಲ್ಲಾ ಪೋರ್ಚುಗೀಸ್ ಪ್ರವಾಸಿಗಳು ಅದನ್ನು ವರ್ಣನೆ ಸಲುವಾಗಿ ಪ್ರತ್ಯೇಕವೆಂದು ಪರಿಗಣಿಸುತ್ತಾರೆ. ತೀರಪ್ರದೇಶದಲ್ಲಿ ಇಬ್ಬರು ರಾಜರು ಮತ್ತು ಕೆಲವು ತುಂಡರಸರು ಇದ್ದರು. ಅವರೆಲ್ಲಾ ಹಿಂದೂಗಳು ಮತ್ತು ವಿಜಯನಗರ ಅಧೀನರು. ಅಲ್ಲಿಯ ಜನರೆಲ್ಲಾ ಸುಸಂಸ್ಕೃತರು, ಭೂಮಿ ಮತ್ತು ಸಮುದ್ರಗಳ ಮೇಲೆ ಯುದ್ಧಮಾಡಬಲ್ಲವರಾಗಿದ್ದರು.

ಈ ತೀರ ಪ್ರದೇಶದಲ್ಲಿ ಅಂಜದೀವಿನಿಂದ ಮಂಗಳೂರುವರೆಗೆ ಮಿರ್ಜಾನ್, ಹೊನ್ನಾವರ, ಭಟಕಳ್, ಬಸ್ರೂರು, ಬಾರಕೂರು, ಉಡುಪಿ, ಮಂಗಳೂರು ಬಂದರುಗಳಿದ್ದವು. ಹೊನ್ನಾವರದಿಂದ ಅಂಜದೀವ್‌ವರೆಗಿನ ಪ್ರದೇಶ ಗೇರುಸೊಪ್ಪೆ ರಾಜನಿಗೆ ಸೇರಿತ್ತು. ಬಟಕಳ್ ಮತ್ತು ಬಸ್ರೂರು ಮತ್ತು ಅವುಗಳ ಹತ್ತಿರವಿರುವ ಒಳಗಡೆ ಊರುಗಳು – ಇವುಗಳು ಇನ್ನೊಬ್ಬ ರಾಜನಿಗೆ ಸೇರಿದ್ದವು. ಉಳಿದ ಬಂದರುಗಳಲ್ಲಿ ಕಪ್ತಾನರಿದ್ದರು. ಇವರೆಲ್ಲಾ ವಿಜಯನಗರಕ್ಕೆ ಕಪ್ಪ ಕೊಡುತ್ತಿದ್ದರು.

ಗೇರುಸೊಪ್ಪೆ ರಾಜನು ಒಬ್ಬ ಮುಖ್ಯ ರಾಜ. ಅವನ ಹತ್ತಿರ ಸುಮಾರು ೩೦೦೦ ಸವಾರರು ಇದ್ದರು. ಹೊನ್ನಾವರ(ಶರಾವತಿ) ನದಿಯಿಂದ ಐದು ಹರಿದಾರಿ

ಒಳಗಿನ ಪ್ರದೇಶವು ಗೇರುಸೊಪ್ಪೆ ರಾಜನದಾಗಿತ್ತು. ಅಲ್ಲಿ ಒಂದು ತಂಪಾಗಿದ್ದ ಸಣ್ಣ ಊರಿನಲ್ಲಿ ತಿಮ್ಮೋಜನು ವಾಸಿಸುತ್ತಿದ್ದನು. ಅವನು ಈ ರಾಜನ ಸಂಬಂಧಿ. ಮೊದಲು ಅವನು ಹೊನ್ನಾವರದಲ್ಲಿ ವಾಸಿಸುತ್ತಿದ್ದ. ಅವನು ವಿಜಯನಗರದ ಆಸ್ಥಾನಕ್ಕೆ ಹೋಗಿ ಬರುತ್ತಿದ್ದನು. ಅವನು ಒಬ್ಬ ವಿಧೇಯ ಅಧೀನ ರಾಜನಾಗಿದ್ದನು. ಈ ನದಿಯ ಎರಡು ಪಕ್ಕಗಳಲ್ಲಿಯೂ ಜನವಸತಿ ಹೆಚ್ಚಾಗಿತ್ತು. ಈ ನದಿಯ ಮೇಲೆ ಹಡಗುಗಳು ಸಂಚರಿಸುತ್ತಿದ್ದವು. ಈ ಹಡಗು ಪಡೆಯ ಸಹಾಯದಿಂದ ತಿಮ್ಮೋಜನು ಸಮುದ್ರದಲ್ಲಿ ಇತರ ಹಡಗುಗಳನ್ನು ಲೂಟಿ ಮಾಡುತ್ತಿದ್ದನು. ಇವನಿಗೆ ಇತರ ನಾವಿಕರು ಹೆದರುತ್ತಿದ್ದರು. ಅವನು ಗೇರುಸೊಪ್ಪೆ ರಾಜನಿಗೆ ಸಹಾಯ ಮಾಡುತ್ತಿದ್ದನು.

ಭಟಕಳಿನ ರಾಜನು ಕನ್ನಡ ಹಿಂದೂ, ಗೇರುಸೊಪ್ಪೆ ರಾಜನಿಗಿಂತ ಬಲಾಢ್ಯ, ಅವನ ರಾಜ್ಯ ಒಳಪ್ರದೇಶದಲ್ಲಿ ಬಹಳ ಹರಡಿತ್ತು. ಈ ಬಂದರು ಗೋವಾ ಮತ್ತು ಚೌಲ್ ಬಂದರುಗಳಷ್ಟು ಮುಖ್ಯವಲ್ಲದಿದ್ದರೂ, ಇಲ್ಲಿಯೂ ಬೇಕಾದಷ್ಟು ವ್ಯಾಪಾರ ನಡೆಯುತ್ತಿತ್ತು. ಅದು ವಿಜಯನಗರ ಸಾಮ್ರಾಜ್ಯದ ಮುಖ್ಯ ಬಂದರು. ಹೊರಗಿನಿಂದ ಅಲ್ಲಿಗೆ ಕುದುರೆಗಳು ಬರುತ್ತಿದ್ದವು. ಈ ಪಟ್ಟಣದಲ್ಲಿ ಹಿಂದೂ ಮತ್ತು ಮುಸ್ಲಿಂ ವರ್ತಕರು ವಾಸಿಸುತ್ತಿದ್ದರು. ಬಂದರು ದೊಡ್ಡದು. ಅನೇಕ ಪ್ರದೇಶಗಳಿಂದ ವರ್ತಕರು ಇಲ್ಲಿಗೆ ಬಂದು ಹೋಗುತ್ತಿದ್ದರು. ಇಲ್ಲಿಯ ರಾಜನು ಒಳಗಡೆ ಒಂದು ಊರಿನಲ್ಲಿ ವಾಸಿಸುತ್ತಿದ್ದನು. ಅವನ ಪರವಾಗಿ ದಾಮಜೆಟ್ಟಿ ಎನ್ನುವ ರಾಜ್ಯಪಾಲನಿದ್ದನು. ಇವನು ಭಾರೀ ಶ್ರೀಮಂತ ವರ್ತಕ. ಮುಸ್ಲಿಮರ ರಾಜ್ಯಪಾಲ ಕೈಜಾರ್, ಇವನು ಆರ್ಮುಜಿನವನು. ಅಲ್ಲಿ ವಾಸಿಸುತ್ತಿದ್ದ ಮುಸ್ಲಿಮರು ಬೇರೆ ಬೇರೆ ದೇಶದವರು. ಗೋವಾ ಪೋರ್ಚುಗೀಸರ ವಶವಾಗುವ ಮುಂಚೆ ಭಟಕಳ್ ಅದಕ್ಕಿಂತ ದೊಡ್ಡ ವ್ಯಾಪಾರ ಸ್ಥಳವಾಗಿತ್ತು. ನಂತರ ಅದಕ್ಕೆ ಎರಡನೆ ಸ್ಥಾನದಲ್ಲಿತ್ತು.

ಈ ಬಂದರಿಗೆ ವಿಜಯನಗರದ ಅರಸರಿಗೆ ಬೇಕಾಗುವ ಕುದುರೆಗಳು ಹೊರಗಡೆಯಿಂದ ಬರುತ್ತಿದ್ದು. ಕುದುರೆಗಳಲ್ಲದೆ ಇತರ ಸಾಮಾನುಗಳು ಬರುತ್ತಿದ್ದವು. ಇವುಗಳನ್ನು ತರುವ ವರ್ತಕರು ಹೆಚ್ಚು ಪ್ರಮಾಣದಲ್ಲಿ ತೆರಿಗೆ ಕೊಡಬೇಕಾಗಿತ್ತು. ಇಲ್ಲಿಂದ ವಾಪಸ್ಸು ಹೋಗುವಾಗ ಅಕ್ಕಿಯನ್ನು ತೆಗೆದುಕೊಂಡು ಹೋಗುತ್ತಿದ್ದರು. ಅಲ್ಲಿ ಅತ್ಯುತ್ತಮವಾದ ಅಕ್ಕಿ ಸಿಗುತ್ತಿತ್ತು. ಜಿರಸಾಲ್ ಎನ್ನುವ ಅಕ್ಕಿಯು ಅತ್ಯಂತ ಬೆಳ್ಳಗೆ, ತೆಳ್ಳಗೆ ಭಾರೀ ದುಬಾರಿ ಇರುತ್ತಿತ್ತು. ಇದೇ ಶ್ರೇಷ್ಠ ದರ್ಜೆಯ ಅಕ್ಕಿ. ಇದರ ತರುವಾಯ ಚಂಬಸಾಲ್, ಅದರ ತರುವಾಯ ಗೋವಾ ಮತ್ತು ದಖನ್ನಿನಿಂದ ಬರುವ ಪಚರಿ ಅಕ್ಕಿ. ಇವಲ್ಲದೆ, ಕಬ್ಬಿಣ ಮತ್ತು ಸಕ್ಕರೆಗಳನ್ನು ಒಯ್ಯುತ್ತಿದ್ದರು.

ಇಲ್ಲಿ ಬಹಳ ಸಕ್ಕರೆ ಸಿಗುತ್ತಿತ್ತು. ಅದನ್ನು ಬಹಳ ದಿನ ಉಪಯೋಗಿಸಲು ಬರುವ ಹಾಗೆ ಮಾಡುವ ಪದ್ಧತಿಗಳು ಭಟಕಳದಲ್ಲಿ ಜಾರಿಯಲ್ಲಿದ್ದವು. ಮಲಬಾರಿನಿಂದಲೂ ಇಲ್ಲಿಗೆ ಅನೇಕ ವರ್ತಕರು ಬರುತ್ತಿದ್ದರು. ಕೆನರಾದಲ್ಲಿ ವಿಜಯನಗರ ಚಕ್ರವರ್ತಿಯ ಅತ್ಯಮೌಲ್ಯ ಆಸ್ತಿ ಭಟ್‌ಕಳ್ ಆಗಿತ್ತು.

ಇತರ ಬಂದರುಗಳಾದ ಬಾರಕೂರು, ಉಡುಪಿ, ಮಂಗಳೂರುಗಳಿಂದಲೂ ಗುಜರಾತ್, ಗೋವಾ, ದಬಿನ್ ಮತ್ತು ಆರ್ಮುಜ್‌ಗಳ ಜತೆಗೆ ವ್ಯಾಪಾರ ನಡೆಯುತ್ತಿತ್ತು. ಈ ಬಂದರುಗಳ ಕಪ್ತಾನರ ಹತ್ತಿರ ಸೈನ್ಯವಿರುತ್ತಿತ್ತು. ಕೆನರಾ ರಾಜ್ಯ ಸುಭಿಕ್ಷ ದೇಶ. ಇತರ ಬೆಳೆಗಳ ಜೊತೆಗೆ ವೀಳೇದೆಲೆ ಅಡಿಕೆಗಳನ್ನು ಬೆಳೆಯುತ್ತಿದ್ದರು.

ನರಸಿಂಗ ಅಥವಾ ವಿಜಯನಗರ

ಈ ಚಕ್ರಾಧಿಪತ್ಯದ ರಾಜಧಾನಿ ವಿಜಯನಗರ. ಈ ಚಕ್ರವರ್ತಿ (ಕೃಷ್ಣದೇವರಾಯ) ಕೆನರಾದ ಹಿಂದೂ, ಆತನ ಆಸ್ಥಾನದಲ್ಲಿ ಅವನು ತೆಲುಗು. ಆಸ್ಥಾನದಲ್ಲಿ ಅನೇಕ ಭಾಷೆಗಳನ್ನು ಮಾತನಾಡುತ್ತಿದ್ದರು. ಆತನ ಸಹಜವಾದ ಭಾಷೆ ಕನ್ನಡ. ಆತನು ಒಳ್ಳೆಯ ಯೋಧ. ಆತನು ಯುದ್ಧಕ್ಕೆ ಹೋಗುವಾಗ ೪೦,೦೦೦ ರಾವುತರು ಮತ್ತು ಅನೇಕ ಕಾಲ್ದಳಗಳ ಜೊತೆಗೆ ಹೋಗುತ್ತಿದ್ದನು. ಅವನ ಹತ್ತಿರ ೫೦೦ ಆನೆಗಳಿದ್ದವು. ಇವುಗಳಲ್ಲಿ ೨೦೦ ಆನೆಗಳನ್ನು ಯುದ್ಧದಲ್ಲಿ ಉಪಯೋಗಿಸುತ್ತಿದ್ದನು. ಅವನು ಸದಾ ಯುದ್ಧದಲ್ಲಿ ನಿರತನಾಗುತ್ತಿದ್ದನು. ಕೆಲವು ಸಲ ಒರಿಸ್ಸಾಥ ಜೊತೆಗೆ, ಕೆಲವು ಸಲ ದಖನ್ನಿನ ಜೊತೆಗೆ ಮತ್ತು ಕೆಲವು ಸಲ ತನ್ನ ದೇಶದಲ್ಲಿಯೇ ಯುದ್ಧ ಮಾಡುತ್ತಿದ್ದನು. ಅವನು ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದುದು ವಿಜಯನಗರದಲ್ಲಿ. ವಿಜಯನಗರದ ಜನಸಂಖ್ಯೆ ೨೦,೦೦೦. ಅವನ ಸಾಮಂತರ ಮನೆಗಳು ಅಲಂಕಾರಗಳಿಂದ ಶೋಭಿಸುತ್ತಿದ್ದವು. ಚಕ್ರವರ್ತಿಯ ಅರಮನೆಗಳು ವಿಸ್ತಾರವಾಗಿ ಗಟ್ಟಿಮುಟ್ಟಾಗಿದ್ದವು. ಚಕ್ರವರ್ತಿಯನ್ನು ಎಲ್ಲರೂ ಗೌರವದಿಂದ ಕಾಣುತ್ತಿದ್ದರು. ಅವನ ಆಸ್ಥಾನದಲ್ಲಿ ೧೦೦೦ ನರ್ತಕಿಯರು, ಗಾಯಕರಿದ್ದರು. ೪-೫೦೦೦ ಪುರುಷರೂ ಇದೇ ವೃತ್ತಿಯಲ್ಲಿದ್ದರು. ಇವರೆಲ್ಲಾ ತೆಲುಗು ಜನರು. ಇವರು ರಾಜ್ಯದ ಇತರ ಜನಗಳಿಗಿಂತ ಲಲಿತ ಕಲೆಗಳಲ್ಲಿ ಹೆಚು ನಿಷ್ಣಾತರಾಗಿದ್ದರು. ಇವರು ಸಾಮ್ರಾಜ್ಯದ ವಿವಿಧ ಭಾಗಗಳಿಗೆ ವಲಸೆ ಹೋಗಿ ನೆಲೆಸಿದ್ದರು. ವಿಜಯನಗರದ ವರ್ಣನೆಯಾದ ಮೇಲೆ ಪಿರೇಸನು ಮಲಬಾರನ್ನು ವರ್ಣಿಸುತ್ತಾನೆ.

ಕೃಷ್ಣದೇವರಾಯನು ಕೆನರಾ ಅಥವಾ ತುಳುನಾಡಿನವನು. ಅವನ ಸಹಜವಾದ ಭಾಷೆ ಕನ್ನಡ, ಆಸ್ಥಾನದಲ್ಲಿ ಅವನು ತೆಲುಗಿನಲ್ಲಿ ಮಾತನಾಡುತ್ತಿದ್ದುದು. ಅವನ ಅರಮನೆಯಲ್ಲಿ ಕಲಾಕಾರರು ತೆಲುಗು– ಈ ವಿಷಯಗಳನ್ನು ಇಷ್ಟು ಬೇರೆ ಯಾರೂ

ಹೇಳುವುದಿಲ್ಲ. ಅಮುಕ್ತಮಾಲ್ಯದ ಒಂದು ಈ ಹೇಳಿಕೆಗೆ ವ್ಯತಿರಿಕ್ತ. ಅದರಲ್ಲಿ ಕೃಷ್ಣರಾಯನಿಗೆ ಬಿದ್ದ ಕನಸಿನಲ್ಲಿ ಶ್ರೀಕಾಕುಳದ ಮಧುಸೂದನ ದೇವರು ನೀನು ತೆಲುಗಿಲ್ಲಿ ನನಗೆ ಒಂದು ಕಾವ್ಯವನ್ನು ಬರೆದುಕೊಡು; ತೆಲುಗಿನಲ್ಲಿಯೇ ಯಾಕೆ ಬರೆಯಬೇಕೆಂದರೆ ಪಿರೇಸನು ಹೇಳಿದ ಹಾಗೆ ನಿನ್ನ ಆಸ್ಥಾನದಲ್ಲಿ ಅನೇಕ ಭಾಷಿಕರಿದ್ದಾರೆ. ಅವರ ಜೊತೆಗೆ ನೀನು ತೆಲುಗಿನಲ್ಲೆ ಮಾತನಾಡುತ್ತಿಯೆಂದು ಹೇಳಿದರು. ಈರೀತಿ ಪಿರೇಸನ ಬರಹದಿಂದ, ಕೆನರಾ ಮತ್ತು ಕೃಷ್ಣರಾಯನ ಬಗ್ಗೆ ಮೌಲಿಕವಾದ ಮತ್ತು ಖಚಿತವಾದ ಮಾಹಿತಿ ಸಿಗುತ್ತದೆ.

ಆಕರ

ಟಾಮ್ ಪಿರೇಸ್, ೧೯೪೪, ದಿ ಸುಮಾ ಓರಿಯಂಟಲ್, ಲಂಡನ್, ಪು.೬೦–೬೫.

■

೧೧

ವಿಜಯನಗರದ ಕಾಲದಲ್ಲಿ ಸಾಮಾಜಿಕ ಮತ್ತು ಆರ್ಥಿಕ ಜೀವನ

ವಿಜಯನಗರ ಸಾಮ್ರಾಜ್ಯದ ಸಾಮಾಜಿಕ ಹಾಗೂ ಆರ್ಥಿಕ ಜೀವನದ ಯಾವ ಸಂಗತಿಯನ್ನೂ ವಿಚಾರಮಾಡಬೇಕಾದರೆ, ಮೊದಲು ಆ ಸಾಮ್ರಾಜ್ಯದ ಕೇಂದ್ರಬಿಂದುವಾದ ವಿಜಯನಗರ ಪಟ್ಟಣದ ಜೀವನ ಪರಿಶೀಲನೆಯಿಂದ ಆರಂಭಮಾಡುವುದು ಒಳ್ಳೆಯದು. ರಾಜಧಾನಿಯಾದ ವಿಜಯನಗರವು ವಿಜಯನಗರದ ಸಾಮ್ರಾಜ್ಯದ ಶಕ್ತಿ ಮತ್ತು ಮಹತ್ತಿಗೆ ಒಂದು ಸಂಕೇತದಂತಿತ್ತು. ಕ್ರಿ.ಶ. ೧೩೩೬ರಂದು ಸ್ಥಾಪಿತವಾಯಿತೆಂದು ಪರಂಪರೆಯಿಂದ ಹೇಳಲಾದ ಈ ನಗರ ೧೫೬೫ರ ವೇಳೆಗೆ ನಾಶವಾದಾಗ, ಇದು ಆ ಕಾಲದ ಅತಿ ದೊಡ್ಡ ನಗರಗಳಲ್ಲಿ ಒಂದಾಗಿತ್ತೆಂದು ತಿಳಿದುಬಂದಿದೆ. ಹದಿನೈದು ಹದಿನಾರನೆಯ ಶತಮಾನಗಳಲ್ಲಿ, ರಷ್ಯಾ, ಪರ್ಷಿಯಾ, ಇಟಲಿ ಮತ್ತು ಪೋರ್ಚುಗಲಿನಿಂದ ಬಂದು ಇದನ್ನು ನೋಡಿದ ಪ್ರವಾಸಿಗಳು ಈ ನಗರದ ಹರಹು, ಜನಸಂಖ್ಯೆ, ವ್ಯಾಪಾರ ಹಾಗೂ ಸಂಪತ್ತಿನ ಬಗ್ಗೆ ಆಶ್ಚರ್ಯಚಕಿತರಾದರು. ಏಕೆಂದರೆ ಆ ಕಾಲದಲ್ಲಿ ಯುರೋಪಿನಲ್ಲಿನ ಬಹು ದೊಡ್ಡ ಪಟ್ಟಣವೆಂದರೆ ರೋಮ್ ಒಂದೇ. ರೋಮ್ ನಗರದ ಪರಿಚಯವಿದ್ದ ಪಾಯಸ್ (Paes)[೧] ಎಂಬ ಪೋರ್ಚುಗೀಸ್ ಪ್ರವಾಸಿಯು, ವಿಜಯನಗರವು ರೋಮ್ ನಗರಕ್ಕಿಂತ ದೊಡ್ಡದಾಗಿ ಕಂಡಿತೆಂದು ಹೇಳುತ್ತಾನೆ. ಕೊಂಟಿ (Conti) ಎಂಬ ಇಟಲಿಯ ಪ್ರವಾಸಿಯು, ವಿಜಯನಗರವು ಅರುವತ್ತು ಮೈಲಿ ಸುತ್ತಳತೆಯುಳ್ಳ ಪಟ್ಟಣವಾಗಿತ್ತೆಂದು ಹೇಳುತ್ತಾನೆ[೨]. ಪರ್ಷಿಯಾದ ಅಬ್ದುಲ್ ರಜಾಕ್, ಹಿಂದೆಂದೂ ತನ್ನ ಕಣ್ಣುಗಳು ಇಂಥ ನಗರದ ದೃಶ್ಯವನ್ನು ಕಂಡಿರಲಿಲ್ಲವೆಂದು, ಕಿವಿಗಳು ಇಂಥ ನಗರದ ವಿಷಯವನ್ನು ಕೇಳಿರಲಿಲ್ಲವೆಂದು ಉದ್ಗಾರವೆತ್ತುತ್ತಾನೆ[೩].

---

೧. R. Sewell: A Forgotten Empire, Publication Division, New Delhi, 1962, P. 247.

೨. ಅಲ್ಲೇ ಪುಟ. ೮೦

೩. ಅಲ್ಲೇ ಪುಟ. ೮೨

ಈ ನಗರದ ಜನಸಂಖ್ಯೆಯನ್ನು ಕುರಿತು ಪಾಯಸ್[೪] ಹೇಳುತ್ತಾನೆ ವಿಜಯನಗರದಲ್ಲಿ ಜನ ಅಸಂಖ್ಯ. ಈ ಬಗ್ಗೆ ನಾನೇನಾದರೂ ಎಷ್ಟಿತ್ತೆಂದು ಬರೆದರೆ ಅದನ್ನು ಕೇಳಿದವರು ಅದೊಂದು ಉತ್ಪ್ರೇಕ್ಷಿತ ಕಲ್ಪಿತ ಸಂಗತಿ ಎಂದೇ ಭಾವಿಸಬಹುದು ಆದರೆ ಹೇಳುತ್ತೇನೆ ಆ ನಗರದ ಯಾವ ಬೀದಿಗಳಲ್ಲಿ ಅಥವಾ ಸಂದಿಗೊಂದಿಗಳಲ್ಲಿ ಅಶ್ವದಳ ಅಥವಾ ಪದಾತಿದಳವಾವುದೂ ಚದುರಿಸಿ ಹಾದು ಹೋಗಲಾರದಂಥ ದಟ್ಟವಾದ ಜನಸಂದಣಿಯನ್ನು ಕಾಣಬಹುದಾಗಿದೆ[೫]. ವಿಜಯನಗರವು ಹೀಗೆ ಜನರನ್ನು ಆಕರ್ಷಿಸಿದ್ದಕ್ಕೆ ಕಾರಣವನ್ನು ಕುರಿತು[೬], ಈ ನಗರಗಳಲ್ಲಿ ಎಲ್ಲಾ ರಾಷ್ಟ್ರಗಳಿಂದ ಬಂದ ಜನರನ್ನು ಕಾಣಬಹುದು. ಏಕೆಂದರೆ ಇಲ್ಲಿ ಅಮೂಲ್ಯವಾದ ಹರಳುಗಳು ಅದರಲ್ಲಿಯೂ ವಜ್ರಗಳ ವ್ಯಾಪಾರವು ವಿಶೇಷವಾಗಿ ನಡೆಯುತ್ತದೆ- ಎನ್ನುತ್ತಾನೆ ಇನ್ನೊಂದೆಡೆ ಬರೆಯುತ್ತಾ ವಿಜಯನಗರದಲ್ಲಿ ನೂರುಸಾವಿರ ಮನೆಗಳಿದ್ದುವೆಂದೂ ಒಂದೊಂದು ಮನೆಗೆ ಸರಾಸರಿ ಐದು ಮಂದಿ ವಾಸಿಸುತ್ತಿರುವರೆಂದು ಇಟ್ಟುಕೊಂಡು ಲೆಕ್ಕ ಹಾಕಿದರೂ ಹದಿನಾರನೆಯ ಶತಮಾನದ ಆರಂಭದಲ್ಲಿಯೆ ವಿಜಯನಗರದ ಒಟ್ಟು ಜನಸಂಖ್ಯೆ ೫,೦೦,೦೦೦ ಆಗುವುದೆಂದು ಹೇಳುತ್ತಾನೆ.

ಈ ನಗರದ ವೈಭವನ್ನು ಕುರಿತು, ಮಧುರಾ ವಿಜಯ (೧೩೬೦-೭೧ ಕ್ರಿ.ಶ.) ಎಂಬ ಕೃತಿಯಲ್ಲಿ[೭] ಗಂಗಾದೇವಿಯು ವಿಜಯನಗರವನ್ನು ಇಂದ್ರನ ರಾಜಧಾನಿಯಾದ ಅಮರಾವತಿಗೆ ಹೋಲಿಸುತ್ತಾಳೆ. ವಿಜಯನಗರದ ಹೆಬ್ಬಾಗಿಲುಗಳೊಂದೊಂದೂ ಮೇರುಪರ್ವತದ ಹಾಗಿದ್ದವು; ಉದ್ಯಾನಗಳು ನಿತ್ಯ ವಸಂತ ಶೋಭಿಯಾಗಿದ್ದವು; ಅದರ ಗಿರಿಗಳು ಕ್ರೀಡಾಶೀಲರಿಂದ ಕಿಕ್ಕಿರಿದಿದ್ದವು; ಅಲ್ಲಿನ ಸರೋವರಗಳ ನೀರು ನಿರ್ಮಲ. ಅಲ್ಲಿನ ಧವಳಾರಗಳು ಕಣ್ಣಿಗೊಂದು ಹಬ್ಬ; ಅದೊಂದು ಸಮಸ್ತ ಸಂಪತ್ತಿನ ನೆಲೆ; ಸಮಸ್ತ ಸುವಸ್ತುಗಳನ್ನು ಪೋಣಿಸಿದ ಒಂದು ಮಾಲೆ; ಮಹತ್ತಿನ ಸಾಗರಕ್ಕೆ ಒಂದು ಮೇರೆ ಎಂದು ಈ ಕವಯಿತ್ರಿ ವರ್ಣಿಸುತ್ತಾಳೆ.

ಅದರ ಉಚ್ಛ್ರಾಯ ಸ್ಥಿತಿಯಲ್ಲಿ ಈ ಉತ್ತರದ ಆನೆಗೊಂದಿಯಿಂದ ದಕ್ಷಿಣದ ಹೊಸ ಪೇಟೆಯ ತನಕ ಮತ್ತು ಪಶ್ಚಿಮದ ಹಂಪೆಯಿಂದ ಪೂರ್ವದ ಕಾಮಲಾಪುರದ ತನಕ ವ್ಯಾಪಕವಾಗಿತ್ತು. ಈ ಹರಹಿನಲ್ಲಿ ಸಣ್ಣ ಪುಟ್ಟ ಉಪನಗರಗಳಿದ್ದುವು ಒಂದೊಂದು ಉಪನಗರವೂ ದೇವಸ್ಥಾನವೊಂದರ ಸುತ್ತ, ಪೇಟೆಬೀದಿಗಳಿಂದ

---

೪. ಅಲ್ಲೇ ಪುಟ. ೨೪೮

೫. ಅಲ್ಲೇ ಪುಟ. ೨೪೭

೬. ಅಲ್ಲೇ ಪುಟ. ೨೭೭

೭. ಕೆ.ಟಿ.ಪಾಂಡುರಂಗಿ: 'ಸಂಸ್ಕೃತ ಕವಯಿತ್ರಿಯರು, ಪುಟ ೩೭, ೩೮.

ಮತ್ತು ತನ್ನದೇ ಆದೊಂದು ನೀರಿನ ವ್ಯವಸ್ಥೆಯಿಂದ, ಪ್ರತ್ಯೇಕವಾದ ಘಟಕವೆಂಬಂತೆ ತೋರುತ್ತಿತ್ತು. ವಿರೂಪಾಕ್ಷದೇವಾಲಯದ ಸುತ್ತಲೂ ದೇಗುಲದ ಎದುರಿಗೆ ಪೇಟೆ ಬೀದಿಯನ್ನೊಳಗೊಂಡು, ಹಂಪಿ ಅಥವಾ ಪಂಪಾನಗರಿ ಹರಡಿಕೊಂಡಿತ್ತು, (ಈಗಲೂ ಇದೆ). ಅಲ್ಲಿಂದ ತುಂಗಭದ್ರಾ ನದಿಯ ದಕ್ಷಿಣದ ತಡಿಯ ಮೂಲಕ ಪೂರ್ವಕ್ಕೆ ಬಂದರೆ, ಅಚ್ಯುತರಾಯನು ಕಟ್ಟಿಸಿದ ಅಚ್ಯುತರಾಯ ಪುರವಿದೆ. ಇಲ್ಲಿ ಅಚ್ಯುತರಾಯ ದೇವಸ್ಥಾನವೆಂದು ಕರೆಯಲ್ಪಡುವ ದೇವಸ್ಥಾನವೊಂದಿದ್ದರೂ ವಾಸ್ತವವಾಗಿ ತಿರುವೇಂಗಳ ದೇವಸ್ಥಾನವೇ ಇದರ ಕೇಂದ್ರವಾಗಿದೆ. ಈ ದೇವಾಲಯದ ಬಳಿ ಈಗ ಪಾಳುಬಿದ್ದಿರುವ ಪೇಟೆಯ ಭಾಗ ಅಚ್ಯುತರಾಯ ಪೇಟೆಯೆಂದು, ಶಾಸನವೊಂದರಲ್ಲಿ[೮] ಉಲ್ಲೇಖಿತವಾಗಿದೆ. ಅಚ್ಯುತರಾಯಪೇಟೆಯ ಗಡಿಗಳು ಖಚಿತವಾಗಿ ಹೀಗೆ ಆ ಶಾಸನದಲ್ಲಿ ಉಕ್ತವಾಗಿವೆ: ಪಶ್ಚಿಮಕ್ಕೆ ಮತಂಗ ಪರ್ವತ; ಪೂರ್ವಕ್ಕೆ ತಿಪರಾಜ ಉದ್ಯಾನ; ಉತ್ತರಕ್ಕೆ ತುಂಗಾ ಭದ್ರಾ ನದಿಯ ಒಂದು ಭಾಗವಾದ ಸೀತಾಕುಂಡ; ದಕ್ಷಿಣಕ್ಕೆ ಭೂಪತಿ ತಟಾಕ, ಲಾಂಘರ್ಸ್ಟ 'ಹಂಪೆಯ ಅವಶೇಷಗಳು' ಎಂಬ ಗ್ರಂಥದಲ್ಲಿ[೯] ಈ ಪೇಟೆಯನ್ನು ಸೂಳೆಬಜಾರ್ ಎಂದು ಕರೆಯಲಾಗಿದೆ. ವಿಜಯನಗರದಲ್ಲಿ ಇಂಥ ಸೂಳೇಗೇರಿಗಳೇನೋ ಇದ್ದವು. ಆದರೆ ಈ ಬೀದಿ ಮಾತ್ರ ಅವುಗಳಲ್ಲಿ ಒಂದಾಗಿರಲಾರದು. ಅಚ್ಯುತರಾಯಪುರವೆಂಬ ಈ ನಗರೋಪಭಾಗದಿಂದ ಪೂರ್ವಕ್ಕೆ ತುಂಗಭದ್ರಾ ನದಿಯ ದಕ್ಷಿಣದ ತಡಿಯಲ್ಲಿ ಬಂದರೆ, ಕೃಷ್ಣದೇವರಾಯನ ಮಗನಾದ ತಿರುಮಲನ ಹೆಸರಿನ ಮೇಲೆ ಕಟ್ಟಿದ ತಿರುಮಲಪುರಕ್ಕೆ ಬರುತ್ತೇವೆ[೧೦]. ಇಲ್ಲಿನ ಮುಖ್ಯವಾದ ದೇವಸ್ಥಾನ, ಭವ್ಯವಾದ ವಿಠಲನ ಗುಡಿ.

ಹಂಪೆಯ ಸುತ್ತ ಹೇಮಕೂಟದ ದಕ್ಷಿಣಕ್ಕೆ ಕೃಷ್ಣರಾಜಪುರವೆಂಬ ಇನ್ನೊಂದು ನಗರೋಪಭಾಗವಿತ್ತು. ಇದು ಕೃಷ್ಣದೇವರಾಯನಿಂದ ನಿರ್ಮಿತವಾದದ್ದು. ಈ ನಗರದ ಬಜಾರದ ಅವಶೇಷಗಳು ಇಂದಿಗೂ ಉತ್ತ ಹೊಲಗದ್ದೆಗಳ ನಡುವೆ ನೋಡಲು ದೊರೆಯುತ್ತವೆ. ಈ ಬಜಾರದಲ್ಲಿ ಆಹಾರ ಧಾನ್ಯದ ಅಂಗಡಿಗಳಿದ್ದುವೆಂದು ದಾಖಲೆಯೊಂದರಲ್ಲಿ ಉಲ್ಲೇಖವಿದೆ[೧೧]. ಈ ಉಪನಗರದ ಕೇಂದ್ರವಾಗಿ ಕೃಷ್ಣದೇವಸ್ಥಾನವಿತ್ತು ಮತ್ತು ಈ ಭಾಗದ ನೀರಿನ ಪೂರೈಕೆಗೆ ಹಿರಿಯ ನಾಲೆ

---

೮. South Indian Inscription. IX (ii) No. 564.

೯. A.H. Longhurst: Hampi Ruins p. 102.

೧೦. V. Raghavacharta: Inscriptions of the Madras Presidency. I Bellary, No. 327.

೧೧. S.I.I. IV No. 262

ಎಂದು ದಾಖಲೆಯೊಂದರಲ್ಲಿ ಉಲ್ಲಿಖಿತವಾಗಿರುವ ಒಂದು ನಾಲೆ ಇತ್ತು[೧೨] (ಇದು ಈಗಲೂ ಇದೆ.) ಇದು ಎರಡು ಉಪನಗರಗಳನ್ನು ಒಳಗೊಂಡಿತ್ತು. ಈ ಎರಡು ಉಪನಗರಗಳೂ ಕೃಷ್ಣದೇವರಾಯನಿಂದ ಕಟ್ಟಲ್ಪಟ್ಟಿದ್ದವು. ಒಂದು ಅವನ ರಾಣಿಯಾದ ತಿರುಮಲದೇವಿಯ ಗೌರವಾರ್ಥವಾಗಿ ನಿರ್ಮಿತವಾದದ್ದು. ಇದಕ್ಕೆ ತಿರುಮಲದೇವಿಯರ ಪಟ್ಟಣವೆಂದು ಹೆಸರು[೧೩], ಇನ್ನೊಂದು ಅವನ ತಾಯಿಯ ಗೌರವಾರ್ಥವಾಗಿ ನಿರ್ಮಿತವಾದದ್ದು; ಇದಕ್ಕೆ ನಾಗಲಾಪುರವೆಂದು ಹೆಸರು[೧೪] ಪಾಯಸ್ (Paes)ನ ಪ್ರಕಾರ, ನಾಗಲಾಪುರ ಕೃಷ್ಣದೇವರಾಯನಿಗೆ ಅಚ್ಚುಮೆಚ್ಚಿನ ಪ್ರವಾಸಸ್ಥಳವಾಗಿತ್ತು[೧೫]. ಕಾಮಲಾಪುರದ ಭಾಗದಲ್ಲಿ ವರದರಾಜಮ್ಮನ ಪಟ್ಟಣವೆಂಬ ಉಪನಗರವಿತ್ತು; ಬಹುಶಃ ಇದು ಅಚ್ಯುತರಾಯನು ತನ್ನ ಪತ್ನಿಯಾದ ವರದಾದೇವಿಯ ಹೆಸರಿನಲ್ಲಿ ಕಟ್ಟಿಸಿದ್ದಾಗಿರಬಹುದು[೧೬]. ಒಂದು ವಿಚಿತ್ರವೆಂದರೆ ಈ ನಗರದ ಹೃದಯದಂತಿರುವ ಅರಮನೆಯ ವಿಷಯವಾಗಿ ಮತ್ತು ಅದರ ಆಡಳಿತ ಕಛೇರಿಗಳ ಹಾಗೂ ವಿಜಯಭವನ ಇತ್ಯಾದಿಗಳ ಬಗ್ಗೆ, ಶಾಸನಗಳಲ್ಲಿ ಸ್ವಲ್ಪವೂ ಪ್ರಸ್ತಾಪವೇ ಇಲ್ಲ. ಒಂದು ರಾಜಬೀದಿಯ ಹೆಸರು ಮಾತ್ರ ಕ್ರಿ.ಶ.೧೫೫೭ರ ಶಾಸನವೊಂದರಲ್ಲಿ ಉಲ್ಲಿಖಿತವಾಗಿದೆ[೧೭]. ಈ ಬೀದಿಗೆ ಹೊಂದಿಕೊಂಡ ಹಾಗೆ ಜಮೀನಿನ ಭಾಗವೊಂದನ್ನು ಚಿಕ್ಕದೇವರ ಬಸದಿಯ ಶಾಂತಿನಾಥನಿಗೆ ದತ್ತಿಯಾಗಿ ಬಿಡಲಾಗಿತ್ತು. ಇದಲ್ಲದೆ ಅಂಜನಗಿರಿಯೆಂಬ ಪ್ರದೇಶದಲ್ಲಿದ್ದ ತಿರುವೇಂಗಳನಾಥ ದೇವಸ್ಥಾನಕ್ಕೆ ತಿರುಮಲದೇವಿಯವರು ಜಮೀನನ್ನು ದಾನವಾಗಿ ಕೊಟ್ಟಿದ್ದರು. ದಾನವಾಗಿ ಬಿಟ್ಟ ಈ ಜಮೀನಿನ ಗಡಿ ಹೀಗಿದೆ: ಪೂರ್ವಕ್ಕೆ–ಹಿರಿಯ ಕುಂಬಾರ

---

೧೨. ಅಲ್ಲೇ, ನಂ. ೨೬೫

೧೩. ಅಲ್ಲೇ, ನಂ. ೨೬೩.

೧೪. F.E.P.345 'ಈ ರಾಜನು (ಕೃಷ್ಣರಾಯ) ಈಕೆಯ ಮೇಲಿನ ಗೌರವದಿಂದಾಗಿ ನಗರವೊಂದನ್ನು ನಿರ್ಮಿಸಿ, ಅವಳ ಬಗೆಗೆ ಇದ್ದ ಪ್ರೀತಿಯ ದ್ಯೋತಕವಾಗಿ ನಾಗಲಾಪುರವೆಂದು ಅದಕ್ಕೆ ಹೆಸರಿಟ್ಟನು. ಇಲ್ಲಿ ಈ ಎರಡು ಉಪನಗರಗಳ ವಿಷಯದಲ್ಲಿ–ಒಂದು ಕೃಷ್ಣದೇವರಾಯನು ತನ್ನ ರಾಣಿ ತಿರುಮಲದೇವಿಯ ಗೌರವಾರ್ಥವಾಗಿ ಇನ್ನೊಂದು ತನ್ನ ತಾಯಿ ನಾಗದೇವಿಯ ಗೌರವಾರ್ಥವಾಗಿ ಕಟ್ಟಿದ್ದು–ಸ್ವಲ್ಪ ಗೊಂದಲವಿದೆ. ಈ ಎರಡೂ ಈಗಿನ ಹೊಸಪೇಟೆಯ ಹತ್ತಿರ ಒಂದರ ಬದಿಗೊಂದು ಇದ್ದುವು. 'ದಕ್ಷಿಣ ಭಾರತದ ಶಾಸನಗಳು' (S.I.I.) IX (ii)- ಅನ್ನು ನೋಡಿ. ಹೊಸಪೇಟೆಯಲ್ಲಿ ಅಥವಾ ಅದರ ಹತ್ತಿರ ಕೃಷ್ಣದೇವರಾಯನ ಕಾಲದಲ್ಲಿ ಕಟ್ಟಲ್ಪಟ್ಟ ನಾಗಲಾದೇವಿ ಪುರದ ವಿಷಯ ನಂ. ೫೦೪ರಲ್ಲಿ ದೊರೆಯುತ್ತದೆ.

೧೫. ಅಲ್ಲೇ. ಪು. ೨೭೧.

೧೬. S.S.I. XI (ii) No. 595.

೧೭. ಅಲ್ಲೇ. IV No. 247.

ಕೇರಿ; ಉತ್ತರಕ್ಕೆ- ಅಕ್ಕಿಪೇಟೆ; ಪಶ್ಚಿಮಕ್ಕೆ-ಮೀನವನ ಗುಂಡಿ, ಮತ್ತು ದಕ್ಷಿಣಕ್ಕೆ- ಕೋಟೆ[೧೮].

ರಾಮಪುರವೆಂಬ ನಗರಭಾಗವೊಂದಿತ್ತು[೧೯]. ಬಹುಶಃ ಇದು ಹಜಾರ ರಾಮನ ದೇವಸ್ಥಾನದ ಹತ್ತಿರ ಇದ್ದಿರಬೇಕು. ಶ್ರೀರಾಮಾನುಜರ ದೇವಸ್ಥಾನವಿದ್ದಂತೆ ಒಂದೆಡೆ ಉಲ್ಲೇಖ ದೊರೆಯುತ್ತದೆಯಾದರೂ, ಅದನ್ನು ಇದುವರೆಗೂ ಪತ್ತೆ ಹಚ್ಚಲು ಆಗಿಲ್ಲ[೨೦].

ವಿಜಯನಗರದ ಮುಖ್ಯ ಪ್ರವೇಶದ್ವಾರವಿದ್ದುದು ದಕ್ಷಿಣದಲ್ಲಿ, ರಾಯನಕೆರೆಯ ಕಡೆಗೆ. ಈ ಕೆರೆಗೆ ಕೃಷ್ಣರಾಯ ತಟಾಕವೆಂದೂ ಹೆಸರು (ತಿರುಮಲದೇವಿ ಪಟ್ಟಣಕ್ಕೆ ಇಲ್ಲಿಂದಲೇ ನೀರು ಸರಬರಾಜಾಗುತ್ತಿತ್ತು)[೨೧]. ಪೂರ್ವದ ಕಡೆಯ ಪ್ರವೇಶದ್ವಾರವಿದ್ದುದು ಕಂಪಿಲಿಯ ಕಡೆಯಿಂದ. ಕಂಪಿಲಿಯು ರಾಜಧಾನಿಯ ಗಡಿಕಾವಲು ದಳದ ಠಾಣೆಯಂತಿದ್ದು, ವಿಜಯವಿರೂಪಪುರವೆಂಬ ಹೆಸರಿನ ನಗರೋಪಭಾಗವಾಗಿತ್ತು[೨೨].

ರಾಜಧಾನಿಯಾದ ವಿಜಯನಗರದ ವಿವಿಧ ಭಾಗಗಳಿಗೆ ತುಂಗಭದ್ರಾನದಿಯ ನಾಲೆಗಳಿಂದ ನೀರಿನ ಪೂರೈಕೆಯಾಗುತ್ತಿತ್ತು. ಈಗಲೂ ಅಂಥ ಕೆಲವು ನಾಲೆಗಳನ್ನು ನೋಡಬಹುದು. ಇವಲ್ಲದೆ ನೀರಿನ ಪೂರೈಕೆಗೆ ಬಾವಿಗಳೂ ಕೆರೆಗಳೂ ಇದ್ದವು.

ಕನಕದಾಸರ ಮೋಹನತರಂಗಿಣಿಯಲ್ಲಿ ದೇಶಾಧಿಪ ಕೃಷ್ಣರಾಯನ ದ್ವಾರಕಾನಗರದ ವರ್ಣನೆ ಬರುತ್ತದೆ[೨೩]. ಇದನ್ನು ಬರೆದಾಗ ಕನಕದಾಸರು ವಿಜಯನಗರವನ್ನೆ ಕುರಿತಂತೆ ಕಾಣಿಸುತ್ತದೆ. ದೇಶ ವಿದೇಶಗಳೊಂದಿಗೆ ಹಡಗುಗಳಲ್ಲಿ ವ್ಯಾಪಾರ ನಡೆಸುತ್ತಿದ್ದ ಆ ನಗರದ ವರ್ತಕರ ಸಂಪತ್ತು ಕುಬೇರನಿಗೂ ಸಹ ಸಾಲಕೊಡುವಷ್ಟಿತ್ತೆಂದು ಕನಕದಾಸರು ಹೇಳುತ್ತಾರೆ. ಅಂಗಡಿ ಬೀದಿಗಳಲ್ಲಿ ಇಂಥ ವರ್ತಕರು ಧನ ಕನಕರಾಶಿಯ ನಡುವೆ ಕುಳಿತಿರುತ್ತಿದ್ದರಂತೆ.

ನಗರದ ಬೇರೆ ಬೇರೆಯ ಬಡಾವಣೆಗಳ ಆಡಳಿತವು ಸೆಟ್ಟಿ ಪಟ್ಟಣಸ್ವಾಮಿಗಳೆಂಬ

---

೧೮. ಅಲ್ಲೇ. XI(II) No. 510.

೧೯. V. R 1 No. 396.

೨೦. ಅಲ್ಲೇ. No. 347.

೨೧. F.E. p. 351.

೨೨. S.I.I.XI (ii) No. 530.

೨೩. ಕಟ್ಟಿ ಶೇಷಾಚಾರ್: ಕವಿ ಕನಕದಾಸ, ಪು. ೬೨-೬೩.

ನಗರಾಧ್ಯಕ್ಷರುಗಳ ಅಧೀನದಲ್ಲಿತ್ತು[೨೪]. ಇವರಿಗೆ ತಳವಾರರೆಂಬ ರಕ್ಷಣಾದಳದ ನೆರವೂ ಇತ್ತು[೨೫].

ಈ ಸಾಮ್ರಾಜ್ಯದ ಇತರ ಮುಖ್ಯ ಪಟ್ಟಣಗಳು- ಪಶ್ಚಿಮ ಕರಾವಳಿಯಲ್ಲಿ ಅಂಕೋಲಾ, ಮಿರ್ಜನ್, ಹೊನ್ನಾವರ, ಭಟ್ಕಳ, ಬೈಂದೂರು, ಬಾರಕೂರು, ಬಸರೂರು, ಮಂಗಳೂರು ಮತ್ತು ಕುಂಬಳ[೨೬]. ರಾಯಚೂರು, ಆದವಾನಿ, ಪೆನುಗೊಂಡ, ಶ್ರೀರಂಗಪಟ್ಟಣ, ದೋರಸಮುದ್ರ, ಇಕ್ಕೇರಿ ಮತ್ತು ಬಂಕಾಪುರ[೨೭] -ಇವು ಈ ಸಾಮ್ರಾಜ್ಯದ ಮಧ್ಯದಲ್ಲಿದ್ದ ಮುಖ್ಯ ಪಟ್ಟಣಗಳು.

ಜಾತಿಮತಗಳು

ಬಾರ್ಬೋಸಾ(Barbosa) ಎಂಬ ಲೇಖಕನು ಹೇಳುತ್ತಾನೆ- "ಈ ಸಾಮ್ರಾಜ್ಯದ ಎಲ್ಲ ಹಳ್ಳಿ-ಕೊಪ್ಪಲುಗಳೂ ಹೀದೆನ್ಸ್ (ಹಿಂದೂ)ಗಳಿಂದ ನಿವಾಸಿತವಾಗಿವೆ. ಇವರ ನಡುವೆ ಕೆಲವು ಮೂರರೂ (ಮುಸ್ಲಿಮ್)ಇದ್ದಾರೆ. ಮುಸ್ಲಿಮರಲ್ಲಿ ಕೆಲವರು, ವಿದೇಶಗಳೊಂದಿಗೆ ವಾಣಿಜ್ಯಕ್ಕಾಗಿ ಪಶ್ಚಿಮ ಕರಾವಳಿಯಲ್ಲಿ ನೆಲಸಿದ್ದಾರೆ. ಕೆಲವರು ವಿಜಯನಗರದ ಸೈನ್ಯದಲ್ಲಿದ್ದಾರೆ"[೨೮]. ಹಿಂದೂಗಳಲ್ಲಿ ಕೆಲವು ಒಳಪಂಗಡಗಳಿದ್ದುವೆಂದು, ಅವುಗಳ ಲಕ್ಷಣವನ್ನು ಬಾರ್ಬೋಸಾ (Barbosa) ಹೇಳುತ್ತಾನೆ: ಆ ಒಳಪಂಗಡಗಳು-ಕ್ಷತ್ರಿಯರು, ಬ್ರಾಹ್ಮಣರು ಮತ್ತು ವೀರಶೈವರು[೨೯]. ಕ್ಷತ್ರಿಯರು-ಪ್ರಭುಗಳು ಅಥವಾ ಆಡಳಿತಗಾರರು ಮತ್ತು ಯೋಧರೂ ಆಗಿದ್ದರು. ಇವರು ಬಹುಪತ್ನೀಕರಾಗಿದ್ದರು. ಅವರ ಹೆಂಡಿರು 'ಸತಿ' ಪದ್ಧತಿಯನ್ನು ಆಚರಿಸುತ್ತಿದ್ದರು. ಬ್ರಾಹ್ಮಣರು ಪುರೋಹಿತರಾಗಿದ್ದುಕೊಂಡು ದೇವಸ್ಥಾನದ ಮೇಲ್ವಿಚಾರಕರಾಗಿರುತ್ತಿದ್ದರು. ಅವರು ಸಸ್ಯಾಹಾರಿಗಳು. ಏಕಪತ್ನೀವ್ರತಸ್ಥರು ಮತ್ತು ಇತರರಿಂದ ದಾನವನ್ನು ಸ್ವೀಕರಿಸುವವರಾಗಿದ್ದರು. ವೀರಶೈವರು ಕೊರಳಲ್ಲಿ ತಮ್ಮ ಇಷ್ಟದೈವದ ಸಂಕೇತವನ್ನು ಕಟ್ಟಿಕೊಳ್ಳುತ್ತಿದ್ದರು. ಇವರಿಗೆ ವಿಶೇಷವಾದ ಮಾನ್ಯತೆಯಿತ್ತು.

---

೨೫. ಅಲ್ಲೇ, ನಂ. ೫೩೬

೨೬. The Books of Durte Barbosa: I.P/ 182-197.

೨೭. ರಾಯಚೂರ್ ಬಗ್ಗೆ ನೋಡಿ, F.E.,p.319. ಆದವಾನಿ ಬಗ್ಗೆ ನೋಡಿ. V.R., I. No 4. ಶ್ರೀರಂಗಪಟ್ಟಣ ಮತ್ತು ಇಕ್ಕೇರಿಯ ಬಗ್ಗೆ ನೋಡಿ, Sources of Vijayanagar History, Ed. by Dr. S. Krishnaswamy Ayyangar, p, ೧೧೧ ಬಂಕಾಪುರದ ಬಗ್ಗೆ, ನೋಡಿ F.E., P. 119 f.n. ಉಳಿದ ಸ್ಥಳಗಳ ವಿವರಗಳಿಗೆ E.C., V. BI. 7 ನೋಡಿ.

೨೮. Barbosa. IP. 200.

೨೯. ಅಲ್ಲೇ ಪು. ೨೧೩-೨೨೦.

ಅವರಲ್ಲಿ ಅನೇಕರು ವರ್ತಕರೂ ವಾಣಿಜ್ಯೋದ್ಯಮಿಗಳೂ ಆಗಿದ್ದರು. ಇವರೂ ಸಸ್ಯಾಹಾರಿಗಳೂ, ಏಕಪತ್ನೀವ್ರತಸ್ಥರೂ ಆಗಿದ್ದರು[೩೦]. ಇವರಲ್ಲದೆ ವೈಶ್ಯರೂ ಜೈನರೂ ಇದ್ದರೆಂದು ಶಾಸನಗಳ ಆಧಾರದಿಂದ ತಿಳಿದುಬರುತ್ತದೆ. ಜತೆಗೆ ಅಸ್ಪೃಶ್ಯರೂ ಇದ್ದರೆಂದು ಪುರಂದರದಾಸರ ಕೃತಿಗಳಲ್ಲಿ[೩೧] ಉಲ್ಲೇಖವಿದೆ.

ಸ್ತ್ರೀಯರ ಪರಿಸ್ಥಿತಿ

ಮದುವೆ ಮತ್ತು ಕುಟುಂಬಜೀವನ ಸ್ತ್ರೀಯರ ಜೀವನದ ಮುಖ್ಯಭಾಗವಾಗಿತ್ತು. ಆದರೂ ಬೇರೆ ಬೇರೆಯ ಜೀವನ ಕ್ಷೇತ್ರಗಳಲ್ಲಿ ಸ್ತ್ರೀಯರು ಭಾಗವಹಿಸಿದ ನಿದರ್ಶನಗಳೂ ಇವೆ. ಬಾರ್ಬೋಸಾ (Barbosa) ಹೇಳುತ್ತಾನೆ–ಅವರು ಬಾಲ್ಯಕಾಲದಿಂದಲೂ ಸ್ತ್ರೀಯರಿಗೆ ಗೀತ, ವಾದನ, ನರ್ತನಗಳನ್ನು ಕಲಿಸುತ್ತಾರೆ[೩೨]. ರಾಜನ ಪತ್ನಿಯರಾದ ರಾಣಿಯರು ಸಹ, ಸಂಗೀತದಲ್ಲಿ ಪ್ರವೀಣೆಯರಾಗಿದ್ದರು[೩೩].

ಅರಮನೆಯ ಒಳಗೆ ಪುರುಷರು ಮಾಡಬಹುದಾದ ಕಾರ್ಯಗಳನ್ನೆಲ್ಲ ಸ್ತ್ರೀಯರೂ ಮಾಡಬಲ್ಲವರಾಗಿದ್ದರು. ಕತ್ತಿ ಗುರಾಣಿಗಳನ್ನು ಹಿಡಿದು ಕಾದಾಡಬಲ್ಲರು. ಮಲ್ಲಯುದ್ಧವನ್ನೂ ಮಾಡಬಲ್ಲರು. ಅರಮನೆಯ ಒಳಗಿನ ಎಲ್ಲ ವ್ಯವಹಾರಗಳ ಲೆಕ್ಕ ಪತ್ರವನ್ನು ಇಡಬಲ್ಲರು. ಅಷ್ಟೇ ಅಲ್ಲ, ಎಲ್ಲ ಸಂಗತಿಗಳ ವಿವರಗಳನ್ನೂ ಗಮನಿಸಿ, ಅಂಥದೇ ರೀತಿಯ ಹೊರಗಿನ ವ್ಯವಹಾರಗಳೊಂದಿಗೆ ತುಲನೆ ಮಾಡಬಲ್ಲವರಾಗಿದ್ದರು,[೩೪]–ಎಂದು ಪಾಯಸ್ (Paes) ಮತ್ತು ನುನಿಜ್(Nuniz) ಹೇಳುತ್ತಾರೆ. ಅರಮನೆಯ ಒಳಗೆ ಈ ರೀತಿಯ ಕಾರ್ಯದಕ್ಷತೆಯನ್ನು ಪ್ರಕಟಿಸಿದ ಸ್ತ್ರೀಯರ ವಿಷಯ ಶಾಸನಗಳಲ್ಲಿ ದೊರೆಯುತ್ತದೆ. ಪ್ರೌಢದೇವರಾಯನ (ಕ್ರಿ.ಶ.೧೪೫೮) ಅರಮನೆಯಲ್ಲಿ ಹೊನ್ನಮ್ಮನೆಂಬ ವರದಿಗಾರಳು ಇದ್ದಳು. ಅಚ್ಯುತರಾಯನ ಕಾಲದಲ್ಲಿ ಇದೇ ರೀತಿಯ ಕಾರ್ಯ ನಿರ್ವಹಣೆ ಮಾಡಿದವಳು ತಿರುಮಲಮ್ಮ. ಆಕೆ ಸಂಸ್ಕೃತದಲ್ಲಿ ಕವಯಿತ್ರಿಯೂ ಆಗಿದ್ದಳು. ಅಚ್ಯುತರಾಯನು ಮೆಚ್ಚಿ ಅವಳಿಗೆ ಪ್ರಶಸ್ತಿಯನ್ನು ಕೊಟ್ಟಾಗ ಆಕೆ ಸ್ವಯಂರಚಿತವಾದ ಶ್ಲೋಕವೊಂದನ್ನು ಹೇಳಿದಳು[೩೬].

---

೩೦. S.S.I. XI (ii) No. 573.

೩೧. ಪುರಂದರದಾಸರ ಪದಗಳು: ಸಂ. ಪಾವಂಜೆ ಗುರುರಾವ್ ಭಾಗ II ಪು. 99.

೩೨. Nuniz, F.E., P.363.

೩೪. Paes,F.E., Pp. 204-41 and Nuniz F.E., PP. 362-63.

೩೫. SII. IX (ii) No. 458.

೩೬ ಅಲ್ಲೇ. No. 577.

ವಾಣಿಜ್ಯ ಕ್ಷೇತ್ರಗಳಲ್ಲೂ ಸ್ತ್ರೀಯರು ಕೆಲಸ ಮಾಡುತ್ತಿದ್ದರು. ಕನಕದಾಸರು ಹೇಳುತ್ತಾರೆ: ಈ ಸ್ತ್ರೀಯರು ಅಂಗಡಿಗಳಿಗೆ ಭೂಷಣದಂತಿದ್ದರು-ಎಂದು. ಅವರ ಬಿಚ್ಚಿದ ಜಡೆಮುಡಿಯನ್ನೂ ಬೆವರಿನ ಬಿಂದುಗಳಿಂದ ಕೂಡಿದ ಮುಖವನ್ನೂ ಏರಿಳಿಯುವ ವಕ್ಷಸ್ಥಳಗಳನ್ನೂ ಕನಕದಾಸರು ವರ್ಣಿಸುತ್ತಾರೆ[೩೭]. ಸ್ತ್ರೀಯರು ನಾಟಕಗಳಲ್ಲಿ ಪಾತ್ರವಹಿಸುತ್ತಿದ್ದರು. ಪುರಂದರದಾಸರು ಬೂಟಾಟಿಕೆಯ ವ್ಯಕ್ತಿಗಳ ನಡೆವಳಿಕೆಯನ್ನು ನಾಟಕದ ಸ್ತ್ರೀಯರಿಗೆ ಹೋಲಿಸುತ್ತಾರೆ[೩೮]. ಸಾಮಾನ್ಯವಾಗಿ ಸ್ತ್ರೀಯರ ಪಾತ್ರಗಳನ್ನು ಹಿಂದೆ ಪುರುಷರೂ ವಹಿಸುತ್ತಿದ್ದರೆಂದು ಹೇಳಬಹುದು ಆದರೆ ತಿಮ್ಮಯ್ಯನ ಮಗಳಾದ ಪಾತ್ರಿ ಎಂಬ ನಟಿಯು 'ತಾಯಿಕುಂಡ ನಾಟಕ'ದಲ್ಲಿ ಪಾತ್ರವಹಿಸಿದಳೆಂದು ಖಚಿತವಾದ ಒಂದು ಉಲ್ಲೇಖ ದೊರೆಯುತ್ತದೆ[೩೯].

ಇಲ್ಲಿನವರೆಗೆ ಸ್ತ್ರೀಯರನ್ನು ಕುರಿತ ಸಂಗತಿಗಳೇನೋ ಉಜ್ವಲವಾಗಿವೆ. ಆದರೆ ಏನೂ ಹೇಳದೆ ಅವಜ್ಞೆಗೈದರೆ ಅಪ್ರಾಮಾಣಿಕವಾಗುವ. ಹೇಳಿದರೆ ಹಿತವಲ್ಲದ ಬೆಳವಣಿಗೆಯೂ ಅವರ ವಿಷಯದಲ್ಲಿದೆ[೪೦]. ಇವು ವೇಶ್ಯಾವೃತ್ತಿ, ದೇವದಾಸಿ ಮತ್ತು ಸತೀ ಹೋಗುವ ಪದ್ಧತಿ ಇವುಗಳನ್ನು ಅಬ್ದುಲ್ ರಜಾಕ್ (Abdul Razzak)[೪೧] ಮತ್ತು ಬಾರ್ಬೋಸಾ (Barbosa)[೪೨] ಅವರು ವರ್ಣಿಸಿದ್ದಾರೆ.

ಜೀವನದ ಮಟ್ಟ

ಆಹಾರ: ಬ್ರಾಹ್ಮಣರು, ಜೈನರು, ವೈಶ್ಯರು ಮತ್ತು ವೀರಶೈವರು ಸಸ್ಯಾಹಾರಿಗಳಾಗಿದ್ದರು. ಉಳಿದವರು ಮಾಂಸಾಹಾರಿಗಳು. ಕುಮಾರವ್ಯಾಸನು ಮಾಂಸಾಹಾರ ಭಕ್ಷ್ಯಗಳನ್ನು ವರ್ಣಿಸುತ್ತಾನೆ[೪೩]. 'ಆಮುಕ್ತಮಾಲ್ಯದ' ಎಂಬ ಕಾವ್ಯದಲ್ಲಿ[೪೪] ವರ್ಣಿತವಾಗಿರುವ ಸಸ್ಯಾಹಾರ ಭಕ್ಷ್ಯಗಳು ಇವತ್ತಿಗೂ ಬಳಕೆಯಲ್ಲಿವೆ. ಸಾಮಾನ್ಯ ಜನತೆಯ ಆಹಾರ ಇಂದಿನಂತೆ ರೊಟ್ಟಿ, ಸಾರು ಮತ್ತು ಮೆಣಸಿಕಾಯಿ

ಉಡಿಗೆ-ತೊಡಿಗೆ: ಪುರಂದರದಾಸರ ಕೀರ್ತನೆಗಳಲ್ಲಿ ವರ್ತಕನೊಬ್ಬನ ಉಡಿಗೆ-ತೊಡಿಗೆಗಳ ವರ್ಣನೆ ಇದೆ. ಅವನು ಧೋತಿ ಉಟ್ಟು, ಅಂಗಿಯನ್ನು ತೊಟ್ಟು

---

೩೭. ಕನಕದಾಸ II ಪು ೧೯೨.

೩೮. ಪುರಂದರದಾಸ II ಪು ೧೫.

೩೯. S.I.I IX (ii) No. 498.

೪೦. Legacy of Rome. P. 227.

೪೧. Major: India in the 15th Century . Pp 27-30.

೪೨. Barbosa. 1.P. 222. (Devadasi) and P.213 (Sati).

೪೩. ವಿರಾಟಪರ್ವ. VV. 35-36

ತಲೆಗೆ ಪೇಟ ಸುತ್ತಿಕೊಂಡು, ಮೈ ಮೇಲೆ ಒಂದು ಛಾದರವನ್ನು ಹೊದ್ದು, ಕಾಲಿಗೆ ಚಪ್ಪಲಿ ಮೆಟ್ಟಿಕೊಂಡಿದ್ದನೆಂದು ಹೇಳುತ್ತಾರೆ[೪೫]. ಸಾಮಾನ್ಯನ ಉಡುಪು ಸೊಂಟದ ಸುತ್ತ ಒಂದು ತುಂಡು ದಟ್ಟಿ ಮತ್ತು ಸ್ತ್ರೀಯರ ಉಡುಪು ಎಂದಿನಂತೆ ಸೀರೆ. ಬಾರ್ಬೋಸಾ ಈ ಉಡುಪುಗಳನ್ನು ಧರಿಸುತ್ತಿದ್ದ ರೀತಿಯನ್ನು ಸಮರ್ಪಕವಾಗಿ ವರ್ಣಿಸಿದ್ದಾನೆ[೪೬].

ಮನೆಗಳು

ಆ ಕಾಲದ ಮನೆಗಳನ್ನು ಕುರಿತು ಲಾಂಘರ್ಸ್ಟ್ (Lnghurst)ಹೇಳುತ್ತಾನೆ: 'ದೇವಸ್ಥಾನಗಳು, ಅರಮನೆಗಳು ಮತ್ತು ನಾಗರಿಕ ಭವನಗಳೂ ಅದ್ದೂರಿಯಾಗಿ ಕಟ್ಟಲ್ಪಟ್ಟಿದ್ದರೂ ವಾಸಗೃಹಗಳೂ, ಖಾಸಗಿ ಮನೆಗಳೂ ತೀರ ಸರಳ ಸಾಧಾರಣದವುಳ್ಳವಾಗಿರಲೇಬೇಕು. ಆದರೆ ಅವುಗಳ ಬಗ್ಗೆ ದೊರೆತಿರುವುದು ಕೇವಲ ತೇರಿನ ಬೀದಿಯ ಹಾಳುಬೀಳುಗಳು ಮಾತ್ರ. ತೀರಾ ಬಡವರ ಮನೆಗಳಂತೂ ಕೊಳಕಿನ ಮುದ್ದೆಯಾಗಿ ಇವತ್ತಿನ ಯಾವ ದೊಡ್ಡ ನಗರದೊಳಗಿರುವ ಕೊಳಚೆ ಪ್ರದೇಶಗಳನ್ನು ನೆನಪಿಗೆ ತರುವಂತೆ ಇದ್ದುವು[೪೭]. ಈ ಲೇಖಕ ಹೇಳುವಂತೆ, ಈ ಬಗೆಯ ನಿರಾಶಾದಾಯಕವಾದ ಚಿತ್ರಕ್ಕೆ ಯಾವ ಆಧಾರವೂ ಇಲ್ಲವೆಂದು ನಮ್ಮ ಅಭಿಪ್ರಾಯ. ವಿಜಯನಗರ ಕಾಲದಲ್ಲಿ ಅಂದಿನ ಸಾಮಾನ್ಯ ಜನರ ಮನೆಗಳನ್ನು ಕಣ್ಣಾರೆ ಕಂಡ ಅಂದಿನ ಸಮಕಾಲೀನ ಪ್ರವಾಸಿಗಳು ಕೊಡುವ ಚಿತ್ರ ಬೇರೆ ಬೇರೆಯೇ ಆಗಿದೆ. ಬಾರ್ಬೋಸಾ ಪ್ರಕಾರ[೪೮] ಸಾಮಾನ್ಯ ಜನತೆಯ ಮನೆಗಳೂ ಹುಲ್ಲುಹೊದಿಸಿದವುಗಳೇ ಆಗಿದ್ದರೂ, ಅವರವರ ವೃತ್ತಿಗಳಿಗನುಸಾರವಾಗಿ ವಿಂಗಡಿಸಲ್ಪಟ್ಟು, ಉದ್ದವಾದ ಬೀದಿಯ ಅಕ್ಕಪಕ್ಕದಲ್ಲಿ ಅಗಲವಾದ ಅಂಗಳದಿಂದ ಕೂಡಿ ನಿರ್ಮಿತವಾಗಿದ್ದವು[೪೯]. ಪಾಯಸ್ ಕೂಡಾ ಬಾರ್ಬೋಸನ ಈ ಅಭಿಪ್ರಾಯವನ್ನೆ ಸಮರ್ಥಿಸುತ್ತಾನೆ. ಪಾಯಸ್ ಹೇಳುತ್ತಾನೆ: 'ಹಂಪೆಯ ಬಜಾರವು ಅತ್ಯಂತ ಸುಂದರವಾದ ಮಹಡಿಗಳಿಂದ, ಕಮಾನಿನಂಥ ಮೇಲ್ಛಾವಣಿಯಿಂದ ನಿರ್ಮಿತವಾದ ಮನೆಗಳಿಂದ ತುಂಬಿತ್ತು. ನಾಗಲಾಪುರದ ಮನೆಗಳೆಲ್ಲ ಒಂದು ಅಂತಸ್ತಿನ, ತಾರಸಿ ಮನೆಗಳಾಗಿದ್ದವು. ಅತಿಥಿಗಳನ್ನು ಬರಮಾಡಿಕೊಂಡು ಕೂಡ್ರಿಸಲು ತಕ್ಕ ವಿಶಾಲವಾದ

---

೪೪. ಆಮುಕ್ತಮಾಲ್ಯದ : IVV. 80-83.

೪೫. ಅಲ್ಲೇ II ಪು. ೮

೪೬. Barbosa, I, PP. 205-7.

೪೭. Hampi Ruins, PP. 105-7.

೪೮. Paes, F.E., p. 184

೪೯. Paes, F.E., p.251

ಅಂಗಳವಿತ್ತು. ಆ ಒಂದೊಂದೂ ಅರಮನೆಗಳೋ ಎಂಬ ಭ್ರಮೆಯನ್ನು ಉಂಟುಮಾಡುವಂತಿದ್ದುವು,[೫೦].

ವ್ಯವಸಾಯ

ರೈತನು ರಾಷ್ಟ್ರದ ಬೆನ್ನೆಲುಬು ಎಂದು ಪರಿಗಣಿಸಲ್ಪಟ್ಟಿದ್ದನು[೫೧]. ಬಾರ್ಬೋಸಾ, ಪಾಯಸ್ ಮತ್ತು ನುನಿಜ್ ಇವರು ವಿಜಯನಗರ ಸಾಮ್ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ಸಂಚರಿಸಿ ಅವುಗಳ ಫಲವತ್ತಾದ ಭೂಮಿ, ಬೆಳೆಗಳು ಹಾಗೂ ದನಕರುಗಳು–ಇವುಗಳ ವಿವರಗಳನ್ನು ಕೊಟ್ಟಿದ್ದಾರೆ. ಪಶ್ಚಿಮ ಕರಾವಳಿಯು ಫಲವತ್ತಾದ, ಅನೇಕ ವ್ಯವಸಾಯ ಕ್ಷೇತ್ರಗಳಿಂದ ಕೂಡಿತ್ತು[೫೨]. ಅಲ್ಲಿ ವಿಶೇಷವಾಗಿ ಬೆಳೆದ ಅಕ್ಕಿಯನ್ನು ಮಲಬಾರ್ ಮತ್ತು ಆರ್‌ಮಜ್‌ಗೆ ರಫ್ತು ಮಾಡಲಾಗುತ್ತಿತ್ತು[೫೩]. ಗೋವಾದ ಬಳಿಯ ವ್ಯವಸಾಯಕ್ಷೇತ್ರಗಳಲ್ಲಿ ಗೋಧಿ, ದ್ವಿದಳಧಾನ್ಯಗಳು, ಎಣ್ಣೆಯ ಬೀಜಗಳು ಮತ್ತು ಹತ್ತಿ ಇವುಗಳನ್ನು ಬೆಳೆಯಲಾಗುತ್ತಿತ್ತು[೫೪]. ಪಾಯಸನು ಭಟ್ಕಳದಿಂದ ವಿಜಯನಗರದವರೆಗಿನ ಮಾರ್ಗವನ್ನು–ಮಧ್ಯಕರ್ಣಾಟಕವನ್ನು–ವರ್ಣಿಸಿ ಉದ್ದಕ್ಕೂ ಅದು ಉತ್ತಮ ಕೃಷಿಕ್ಷೇತ್ರಗಳಿಂದ ಫಲವತ್ತಾಗಿದ್ದಿತೆಂದು ಹೇಳುತ್ತಾನೆ[೫೫]. ಹತ್ತಿ ಮತ್ತು ಗೋಧಿಯ ಬೆಳೆ ಅಲ್ಲಿ ಸಮೃದ್ಧವಾಗಿತ್ತು. ಈಗಿನ ಧಾರವಾಡ ಜಿಲ್ಲೆಯಲ್ಲಿರುವ ಬಂಕಾಪುರ ಮತ್ತು ಸುತ್ತಮುತ್ತಲಿನ ಪ್ರದೇಶವು ವಿಜಯನಗರ ಕಾಲದಲ್ಲಿ ಬೀಜೋತ್ಪಾದನ ಹಾಗೂ ಪಶುಸಂಗೋಪನ ಕ್ಷೇತ್ರಗಳಿಂದ ಸಮೃದ್ಧವಾಗಿತ್ತೆಂದು ನುನಿಜ್ ಹೇಳುತ್ತಾನೆ[೫೬].

ನೀರಾವರಿ ವ್ಯವಸಾಯ

ರಾಯಲ ಸೀಮೆಯ ಜಿಲ್ಲೆಗಳಾದ ಬಳ್ಳಾರಿ ಅನಂತಪುರಗಳಲ್ಲಿ, ನೀರಾವರಿ ಸಾಧ್ಯತೆಗಳ ಬಗ್ಗೆ ಸರ್ ಥಾಮಸ್ ಮನ್ರೋ ಹೀಗೆ ಹೇಳುತ್ತಾನೆ: "ಈ ಪ್ರದೇಶದಲ್ಲಿ ಹೊಸ ಕೆರೆಗಳನ್ನು ಕಟ್ಟುವ ಪ್ರಯತ್ನ ತೀರಾ ನಿರರ್ಥಕವಾದುದ್ದು, ಅದರ ಬದಲು ಇರುವ ಕೆರೆಗಳನ್ನು ರಿಪೇರಿ ಮಾಡಿಸುವುದೇ ಉತ್ತಮ. ಏಕೆಂದರೆ ಇಲ್ಲಿನ ನಿವಾಸಿಗಳಿಂದ

---

೫೦. ಅಲ್ಲೇ. ಪು. ೨೩೮.

೫೧. ಸರ್ವಜ್ಞ: ಎ. ಆರ್. ಕೃಷ್ಣಶಾಸ್ತ್ರೀ. ಪು.೩೯.

೫೨. Barbosa, I, P. 184.

೫೩. ಅಲ್ಲೇ. ಪು. ೧೮೩ ಮತ್ತು ೧೮೮.

54. Nuniz, F.E., p. 267.

55. Paes, F.E., p. 230.

56. Nuniz, F.E., P. 230.

ನೀರಾವರಿಗೆಂದು ಕಟ್ಟಲ್ಪಟ್ಟಿರುವ ಕೆರೆಗಳೇ ಬೇಕಾದಷ್ಟಿರುವಾಗ ಬೇರೆಯ ಕೆರೆಗಳ ನಿರ್ಮಾಣಕ್ಕೆ ಸ್ಥಳವೇ ಇಲ್ಲದಾಗಿದೆ"[೫೮]. ಇದಕ್ಕೆ ವಿಜಯನಗರ ಕಾಲದ ರಾಜರುಗಳಿಂದ ಅನುಸರಿಸಲ್ಪಟ್ಟ ನೀರಾವರಿ ಯೋಜನೆಗಳೇ ಕಾರಣ. ಶ್ರೀಕೃಷ್ಣದೇವರಾಯನೇ ಈ ಬಗ್ಗೆ ಸ್ಪಷ್ಟವಾಗಿ ಘೋಷಿಸಿದ್ದಾನೆ: "ಈ ಸಾಮ್ರಾಜ್ಯವು ನೀರಾವರಿ ವ್ಯವಸಾಯಕ್ಕೆ ಕೆರೆ, ಕಾಲುವೆಗಳ ಸೌಲಭ್ಯವನ್ನು ಒದಗಿಸಬೇಕು. ಜಮೀನನ್ನು ಅನುಕೂಲವಾದ ಕಂದಾಯದ ದರದ ಮೇಲೆ ಬಡ ರೈತರಿಗೆ ವ್ಯವಸಾಯಕ್ಕೆ ಕೊಡಬೇಕು ಇದರಿಂದ ರಾಜ್ಯದ ಬೊಕ್ಕಸಕ್ಕೆ ಲಾಭವುಂಟು"[೫೯].

ಕೈಗಾರಿಕೆ, ವ್ಯಾಪಾರ ಮತ್ತು ವ್ಯವಹಾರಸಂಪರ್ಕ

ಅಂತರ್ದೇಶೀಯ ಮತ್ತು ವಿದೇಶೀಯ ವ್ಯಾಪಾರವು ವಿಜಯನಗರ ಕಾಲದ ಆರ್ಥಿಕ ಜೀವನದ ಒಂದು ಮುಖ್ಯವಾದ ವೈಶಿಷ್ಟ್ಯವಾಗಿತ್ತು. ಕಲ್ಲಿಕೋಟೆಯು ಅಂದಿನ ಮುಖ್ಯ ಬಂದರಾಗಿತ್ತು. ಅಬ್ದುಲ್ ರಜಾಕ್‌ನ ಪ್ರಕಾರ ಈ ಸಾಮ್ರಾಜ್ಯದಲ್ಲಿ ಮುನ್ನೂರು ಬಂದರುಗಳಿದ್ದವು. ಹಿಂದೂಸಾಗರದ ದ್ವೀಪಗಳೊಂದಿಗೆ ಮಲಯ, ಬರ್ಮಾ, ಚೀನಾ, ಅರೇಬಿಯಾ, ಪರ್ಷಿಯಾ, ದಕ್ಷಿಣ ಆಫ್ರಿಕಾ, ಅಬಿಸೀನಿಯಾ ಮತ್ತು ಪೋರ್ಚುಗಲ್ಲಿನೊಂದಿಗೆ ವಾಣಿಜ್ಯ ಸಂಪರ್ಕಗಳನ್ನು ಈ ರಾಜ್ಯವು ಇರಿಸಿಕೊಂಡಿತ್ತು. ಆನೆ, ಕುದುರೆ, ಮುತ್ತು, ತಾಮ್ರ, ಹವಳ, ಪಾದರಸ, ಚೀನಾಂಬರ, ರೇಷ್ಮೆ ಮತ್ತು ವೆಲ್ವೆಟ್ ಬಟ್ಟೆಗಳನ್ನು ಆಮದು ಮಾಡಿಕೊಳ್ಳುತ್ತಿತ್ತು. ಒಳನಾಡಿನ ಸಾಗಾಣಿಕೆ ಅಗ್ಗವಾಗಿತ್ತು. ಕಾವಡಿ (ಅಡ್ಡೆ)ಗಳು, ತಲೆಹೊರೆಗಳು, ಕುದುರೆಗಳು, ಎತ್ತುಗಳು, ಗಾಡಿಗಳು ಮತ್ತು ಕತ್ತೆಗಳು–ಇವುಗಳ ಮೇಲೆ ಸಾಮಾನುಗಳ ಸಾಗಾಣಿಕೆ ನಡೆದಿತ್ತು. ಕರಾವಳಿ ಪ್ರದೇಶದ ವ್ಯಾಪಾರವು ಹಡಗುಗಳಲ್ಲಿ ನಡೆಯುತ್ತಿತ್ತು. ಬಾರ್ಬೋಸಾನ ಪ್ರಕಾರ ದಕ್ಷಿಣ ಭಾರತವು ಮಾಲ್ಡೀವ್ ದ್ವೀಪಗಳಲ್ಲಿ ತಯಾರಾದ ಹಡಗುಗಳನ್ನು ಪಡೆದಿತ್ತು. ಶಾಸನಗಳ ಪ್ರಕಾರ ವಿಜಯನಗರದ ರಾಜರು, ಹಡಗಿನ ಪಡೆಯೊಡೆಯರಾಗಿದ್ದುದಲ್ಲದೆ, ಆಗಿನ ಜನ ಹಡಗುಗಳನ್ನು ಕಟ್ಟುವ ಕಲೆಯನ್ನು ಪೋರ್ಚುಗೀಸರಿಗಿಂತ ಮೊದಲೇ ಬಲ್ಲವರಾಗಿದ್ದರು. ಜವಳಿ ಉತ್ಪಾದನೆ, ಗಣಿಯಿಂದ ಅದುರು ತೆಗೆಯುವುದು, ಲೋಹ ತೆಗೆಯುವುದು ಮತ್ತು ಸುಗಂಧ ದ್ರವ್ಯಗಳ ನಿರ್ಮಾಣ–ಇವು ರಾಜ್ಯದ ಮುಖ್ಯ ಕೈಗಾರಿಕೆಗಳಾಗಿದ್ದುವು.

ಕಲ್ಲಿಕೋಟೆಯಿಂದ ಸುಮಾರು ೧೬೭ ಮೈಲಿಗಳ ದೂರದಲ್ಲಿ ಕಾನ್–ಪಾ–ಮಾಯ್ (Kan-Pa-Mail)ಎಂಬುದು (ಈಗ ಅದು ಕೊಯಮತ್ತೂರು

---

58. Gibbs' History of Deccan I, p.188 ಅಲ್ಲಿ ಉದಾಹೃತವಾಗಿದೆ.

೫೯. ಆಮುಕ್ತಮಾಲ್ಯದ. IV. V. 26.

ಎಂದು ಗುರುತಿಸಲಾಗಿದೆ) ಹತ್ತಿಯ ರೇಷ್ಮೆಯ ತಯಾರಿಕೆಗೆ ಬಹು ದೊಡ್ಡ ಕೇಂದ್ರವಾಗಿತ್ತು[೫೯]. ಗೋವಾದಲ್ಲಿ ಅತ್ಯಂತ ಸೊಗಸಾದ ಬಟ್ಟೆ ತಯಾರಾಗುತ್ತಿತ್ತು[೬೦] ರಾಜಧಾನಿಯಾದ ವಿಜಯನಗರವೇ ರತ್ನವ್ಯಾಪಾರಕ್ಕೆ ಕೇಂದ್ರವಾಗಿತ್ತು. ಈ ವ್ಯಾಪಾರಕ್ಕೆ ಬೇಕಾದ ವಜ್ರಗಳಲ್ಲಿ ಹೆಚ್ಚಿನವು ಗುತ್ತಿಯ (ಅನಂತಪುರ ಜಿಲ್ಲೆಯಲ್ಲಿರುವ ಗೂತಿ ಎಂಬ ಊರು) ಸಮೀಪದ ವಜ್ರಕೆರೂರ್ ಎಂಬಲ್ಲಿಂದ ಬರುತ್ತಿದ್ದವು. ಈ ಪ್ರದೇಶದ ರಾಜ್ಯಪಾಲನು ಇಲ್ಲಿ ದೊರೆತ ವಜ್ರಗಳನ್ನು ರಾಜರಿಗೆ ಒಪ್ಪಿಸಬೇಕಾಗಿತ್ತು[೬೧]. ವಿಜಯನಗರದ ರಾಜರುಗಳ ಹಾಗೂ ವರ್ತಕರ ಬಹುಮಟ್ಟಿನ ಐಶ್ವರ್ಯವೆಲ್ಲಾ ಈ ವಜ್ರಗಳ ವ್ಯಾಪಾರದಿಂದ ಬರುತ್ತಿತ್ತು. ಹದ ಮಾಡಿದ ಮತ್ತು ಹದಮಾಡದಿರುವ ಲೋಹಗಳು ವಿಜಯನಗರದಲ್ಲಿದ್ದುವು[೬೨] ಭಟ್ಕಳದಿಂದ ಕಬ್ಬಿಣದ ಅದುರು ಹೊರೆಹೊರೆಯಾಗಿ ರಫ್ತಾಗುತ್ತಿತ್ತು[೬೩].

ಹದಿನೈದು ಹದಿನಾರನೆಯ ಶತಮಾನಗಳಲ್ಲಿ ದಕ್ಷಿಣ ಭಾರತದ ವಿದೇಶೀವ್ಯಾಪಾರವು ಬಹುಮಟ್ಟಿಗೆ ಕಲ್ಲಿಕೋಟೆ ಮತ್ತು ಪಶ್ಚಿಮದ ಕನ್ನಡ ಕರಾವಳಿಯ ಬಂದರುಗಳ ಮೂಲಕ ನಡೆದಿತ್ತು. ಪೆಗು ಮತ್ತು ಮಲಕ್ಕಾದಿಂದ ಕೆಂಪು ಸಮುದ್ರಕ್ಕೆ ಹೋಗುತ್ತಿದ್ದ ಹಡಗುಗಳೆಲ್ಲ ದಾರಿಯಲ್ಲಿ ಸಿಗುವ ಈ ಬಂದರುಗಳಲ್ಲಿ ನಿಂತು, ಇಂಡಿಯಾ ದೇಶದ ಸಾಮಾನುಗಳನ್ನು ತುಂಬಿಕೊಂಡು ಹೋಗಿ ಬೇರೆ ಬೇರೆಯ ದಿಕ್ಕುಗಳಿಗೆ ಹಂಚುತ್ತಿದ್ದುವು. ಈ ವ್ಯಾಪಾರವೆಲ್ಲ ಬಹುಮಟ್ಟಿಗೆ ಪಶ್ಚಿಮ ಕರಾವಳಿಯಲ್ಲಿ ನೆಲಸಿದ್ದ ಅರಬರ ಕೈಯಲ್ಲಿತ್ತು. ಆದರೆ ಹದಿನಾರನೆಯ ಶತಮಾನದ ವೇಳೆಗೆ ಇಂಡಿಯಾದ ಸಾಗಾಣಿಕೆ ವ್ಯಾಪಾರವನ್ನೆಲ್ಲ ಪೋರ್ಚುಗೀಸರು ಅರಬರಿಂದ ತೆಗೆದುಕೊಂಡರು[೬೪].

ಹೀಗೆ ಹೊರಕ್ಕೆ ರಫ್ತಾಗುತ್ತಿದ್ದ ಇನ್ನು ಕೆಲವು ಪದಾರ್ಥಗಳೆಂದರೆ–ಬಟ್ಟೆ, ಅಕ್ಕಿ, ಕಬ್ಬಿಣ, ಯವಕ್ಷಾರ, ಸಕ್ಕರೆ ಮತ್ತು ಸಾಂಬಾರ ಪದಾರ್ಥಗಳು[೬೫]

---

೫೯. Majaun., J.R.A.S. 1896. P. 345.

೬೦. Nuniz, F.E., 367

೬೧. ಅಲ್ಲೇ. ಪು.೩೬೮.

೬೨. Barbosa, I.P.203.

೬೩. ಅಲ್ಲೇ ಪು. ೧೮೯.

೬೪. Barbosa, I.p. 203.

೬೫. H. Heras : The Aravidu Dyanasty. P.P. 62-3 and Barbosa. I, **P. 18**[illegible] **198**.

ಪೋರ್ಚುಗೀಸರು ವಿಜಯನಗರದ ವರ್ತಕರಿಂದ ಅಂಕೋಲಾ ಇಲ್ಲವೆ ಹೊನ್ನಾವರದಲ್ಲಿ ಬಟ್ಟೆಯನ್ನು ಕೊಂಡುಕೊಳ್ಳುತ್ತಿದ್ದರು[೬೬]. ಬಸರೂರು, ಬಾರಕೂರು, ಮತ್ತು ಮಂಗಳೂರಿಂದ ಮಲಬಾರ್, ಮಾಲ್ದೀವ್ ದ್ವೀಪಗಳು, ಏಡನ್ ಮತ್ತು ಆರ್‌ಮುಜ್- ಈ ಪ್ರದೇಶಗಳಿಗೆ ಅಕ್ಕಿಯು ರಫ್ತಾಗುತ್ತಿತ್ತು[೬೭]. ಹೊರಗಿನಿಂದ ಆಮದಾಗುತಿದ್ದವುಗಳಲ್ಲಿ ಮುಖ್ಯವಾದವು ಕುದುರೆಗಳು[೬೮].

ವಿಜಯನಗರವು ದಕ್ಷಿಣ ಇಂಡಿಯದ ಸಂಚಾರೀವ್ಯವಸ್ಥೆಯ ಕೇಂದ್ರವಾಗಿತ್ತು. ಒಂದು ಹೆದ್ದಾರಿಯು ವಿಜಯನಗರದಿಂದ ಗೋವಾಕ್ಕೆ ಬಂಕಾಪುರದ ಮೂಲಕ ಹೋಗುತ್ತಿತ್ತು[೬೯]. ಮತ್ತೊಂದು ಬಂಕಾಪುರವನ್ನು ಹೊನ್ನಾವರ ಭಟ್ಕಳಗಳೊಡನೆ ಒಂದುಗೂಡಿಸಿತು[೭೦]. ಬಹುಶಃ ಹರಿಹರದ ಮಾರ್ಗವಾಗಿ ವಿಜಯನಗರದಿಂದ ಭಟ್ಕಳಕ್ಕೆ ಇನ್ನೊಂದು ಹೆದ್ದಾರಿಯಿತ್ತು[೭೧]. ವಿಜಯನಗರದಿಂದ ಮೈಲಾಪುರಕ್ಕೆ (ಮದ್ರಾಸಿಗೆ) ಪೆನುಕೊಂಡೆ, ತಿರುಪತಿ, ಚಂದ್ರಗಿರಿ ಮತ್ತು ಪುಲಿಕಾಟ್‌ಗಳ ಮೂಲಕ ಒಂದು ದಾರಿಯಿತ್ತು. ಈ ಮಾರ್ಗವಾಗಿಯೆ ಕೊಂಟಿ (Conty) ಎಂಬ ಪ್ರವಾಸಿಗ ಪ್ರಯಾಣ ಮಾಡಿದ್ದು[೭೨].

ವಿಜಯನಗರದ ನಾಣ್ಯವ್ಯವಸ್ಥೆ

ವಿಜಯನಗರಸಾಮ್ರಾಜ್ಯವು ದಖನ್ನಿನ ಸಮಸ್ತ ಪ್ರಾಚೀನ ಸಾಮ್ರಾಜ್ಯಗಳ ಪರಂಪರೆಯನ್ನು ಪ್ರತಿನಿಧಿಸುವಂತಿತ್ತು. ವಿಜಯನಗರದ ರಾಜ್ಯಚಿಹ್ನೆಯು ವರಾಹವಾಗಿದ್ದರೂ ನಾಣ್ಯಗಳ ಮೇಲೆ ಹನುಮಾನ್, ಗರುಡ ಮತ್ತು ಆನೆಗಳ ಲಾಂಛನವನ್ನು ಕಾಣುತ್ತೇವೆ. ಒಂದನೆ ಹರಿಹರನ ಕಾಲದ ನಾಣ್ಯಗಳ ಮೇಲೆ ಗರುಡ, ಹನುಮಾನ್ ಅವರ ಚಿತ್ರಗಳಿರುವುವಲ್ಲದೆ, ಕನ್ನಡ ಇಲ್ಲವೆ ದೇವನಾಗರಿ ಲಿಪಿಯಲ್ಲಿ 'ಶ್ರೀವೀರ ಹರಿಹರ' ಎಂಬ ಅಂಕಿತವೂ ಕಂಡುಬರುತ್ತದೆ. ಮೊದಲನೆ ಬುಕ್ಕನ ಕಾಲದ ನಾಣ್ಯಗಳ ಮೇಲೆ 'ಶ್ರೀವೀರಬುಕ್ಕರಾಯ' 'ಶ್ರೀ ವೀರಭೂಪ (ಕಲ್ಪ)ತಿ ರಾಯ' ಎಂಬ ಲಿಖಿತವಿದೆ. ಎರಡನೆ ಹರಿಹರನ ಕಾಲದ ಚಿನ್ನದ

---

೬೬ Heras : Pp. 62-63.

೬೭. Barbosa : I. Pp. 189-198.

೬೮. Heras : P 59.

೬೯. F.E., P.119. F.n.

೭೦. ಅಲ್ಲೇ.ಪು.೧೧೯ F.n.

೭೧. Paes, F.E., pp. 224-30.

೭೨. Major. P. 7. ಮೂಲ ಲೇಖಕರು: ಡಾ॥ ಜಿ.ಎಸ್. ದೀಕ್ಷಿತ್

ಅರ್ಧವರಹಗಳು. ೨೬.೪ ಗ್ರೇನ್ಸ್ ತೂಕದವಾಗಿವೆ. ನಾಣ್ಯದ ಮೇಲ್ಮುಖದಲ್ಲಿ ಶಿವ–ಪಾರ್ವತಿ, ಲಕ್ಷ್ಮೀನಾರಾಯಣ, ಸರಸ್ವತೀ–ಬ್ರಹ್ಮ ಮತ್ತು ಲಕ್ಷ್ಮೀ–ನರಸಿಂಹ ಇವರ ಚಿತ್ರಗಳಿವೆ. ಇದರ ಇನ್ನೊಂದು ಮುಖದ ಮೇಲೆ 'ಶ್ರೀ ಪ್ರತಾಪ ಹರಿಹರ' ಎಂದು ನಾಗರಿಲಿಪಿಯಲ್ಲಿ ಕೆತ್ತಲಾಗಿದೆ. ತಾಮ್ರದ ೧/೮ ವರಹವು ತೂಕದಲ್ಲಿ ೫ ಗ್ರೇನ್ಸ್ ಇದ್ದು, ಅದರ ಮೇಲೆ ನಂದಿಶೂಲಗಳ ಚಿತ್ರವಿದ್ದು, 'ಪ್ರತಾಪಹರಿಹರ'ಎಂಬ ಅಂಕಿತವಿದೆ. ಎರಡನೆಯ ಬುಕ್ಕ ಅಥವಾ ವಿಜಯದೇವರಾಯನ ಕಾಲದ ತಾಮ್ರದ ನಾಣ್ಯಗಳ ಮೇಲೆ ನಂದಿ, ಸೂರ್ಯ, ಚಂದ್ರರ ಚಿತ್ರವಿದ್ದು ನಾಗರಿ ಲಿಪಿಯಲ್ಲಿ 'ಜಯ ಬುಕ್ಕರಾಯ' ಎಂಬ ಅಂಕಿತವಿದೆ. ಒಂದನೆ ದೇವರಾಯನ ಕಾಲದ ಚಿನ್ನದ ವರಹಗಳು ೫೨.೩ ಗ್ರೇನ್ಸ್ ತೂಕದವಾಗಿವೆ. ಅವುಗಳ ಮೇಲೆ ಶಿವ-ಪಾರ್ವತಿ, ವಿಷ್ಣು–ಲಕ್ಷ್ಮಿ, ಇವರ ಚಿತ್ರಗಳು ಮತ್ತು ನಾಗರಿ ಲಿಪಿಯಲ್ಲಿ 'ಶ್ರೀಪ್ರತಾಪದೇವರಾಯ' ಎಂಬ ಅಂಕಿತ ಇದೆ. ಬಹುಶಃ ಅವನ ಕಾಲದವಾದ ತಾಮ್ರದ ನಾಣ್ಯಗಳ ಮೇಲೆ ನಂದಿ, ಶಂಖ, ಸೂರ್ಯ, ಚಂದ್ರ ಇವರ ಚಿತ್ರವು, ಕನ್ನಡದಲ್ಲಿ 'ದೇ' 'ಶ್ರೀದೇವರಾಯ' 'ಶ್ರೀನೀಲಕಂಠ' ಮತ್ತು ನಾಗರಿ ಲಿಪಿಯಲ್ಲಿ 'ಶ್ರೀ ಪ್ರತಾಪದೇವರಾಯ' ಎಂಬ ಅಂಕಿತಗಳೂ ಇವೆ.

ಎರಡನೆ ದೇವರಾಯನ ಕಾಲದಲ್ಲಿ, ಈ ರಾಜ್ಯದಲ್ಲಿ ಪ್ರವಾಸ ಕೈಕೊಂಡ ಅಬ್ದುಲ್ ರಜಾಕ್‌ನು ಈ ಕಾಲದ ವರಹ (ಪಗೋಡಾ, ತಾರ ಮತ್ತು ಜಿತಲ್)ಗಳ ಸಂಗತಿಯನ್ನು ಹೇಳಿದ್ದಾನೆ. ೧ – ೪ ವರಹವು ೧೩.೨ ಗ್ರೇನ್ಸ್ ತೂಗುತ್ತಿತ್ತು. ದೇವರಾಯನು ಗಜಬೇಂಟೆ ಕಾರನಾಗಿದ್ದ ಕಾರಣ, ಅವನ ಕಾಲದ ನಾಣ್ಯಗಳ ಮೇಲೆ ಆನೆಯ ಚಿತ್ರಗಳು ಕಾಣಿಸುತ್ತವೆ. 'ತಾರ' ಎಂಬುದು ಒಂದು ಬೆಳ್ಳಿಯ ನಾಣ್ಯ. ಅದರ ಮೇಲೆ ಒಂದೆಡೆ ಆನೆಯ ಚಿತ್ರವೂ, ಇನ್ನೊಂದೆಡೆ ದೇವನಾಗರಿ ಲಿಪಿಯಲ್ಲಿ 'ಶ್ರೀದೇವರಾಯ' ಎಂಬ ಅಂಕಿತವೂ ಇದೆ. ಅನೇಕ ತಾಮ್ರದ ನಾಣ್ಯಗಳ ಮುಂಭಾಗದಲ್ಲಿ ಆನೆ, ಸೂರ್ಯ ಮತ್ತು ರಾಜನು ಆನೆಯನ್ನು ಬೇಟೆಯಾಡುವ ಚಿತ್ರ ಇವೆ. ಇದರ ಹಿಂಭಾಗದಲ್ಲಿ ಕನ್ನಡ ಮತ್ತು ಸಂಸ್ಕೃತಗಳಲ್ಲಿ 'ಶ್ರೀದೇವರಾಯ' 'ಶ್ರೀಪ್ರತಾಪದೇವರಾಯ' 'ಶ್ರೀದೇವರಾಯ ಗಜಬೇಂಟೆಕಾರ' 'ರಾಯಗಜಗಂಡಭೇರುಂಡ' ಎಂಬ ಉಲ್ಲೇಖಗಳಿವೆ.

ಲಕ್ಕಣ್ಣ ದಂಡೇಶನು ಕೂಡ ತಾನು ಹೊರಡಿಸಿದ ನಾಣ್ಯಗಳ ಮೇಲೆ ಆನೆಯ ಚಿತ್ರವನ್ನೂ ಲ(ಖ)ಮಣ ದಣ್ಣಾಯಕ ಎಂದು ಕನ್ನಡ ಲಿಪಿಯಲ್ಲಿ ಬರೆದು ಅಂಕಿತವನ್ನೂ ಹಾಕಿಸಿದ್ದಾನೆ.

ಸಾಳುವರ ಕಾಲದ ನಾಣ್ಯಗಳ ವಿಷಯ ನಮಗೆ ದೊರೆತಿಲ್ಲ. ಕೃಷ್ಣದೇವರಾಯನ ಕಾಲದ ಸುವರ್ಣವರಹಗಳು ೫೨ ಗ್ರೇನ್ಸ್ ತೂಕವಿದ್ದು ನಂದಿ, ದುರ್ಗಾ, ವರಾಹ

ಶಂಖ ಮತ್ತು ಚಕ್ರಗಳ ಚಿತ್ರದಿಂದ ಕೂಡಿ, ನಾಗರಿಲಿಪಿಯಲ್ಲಿ 'ಶ್ರೀಪ್ರತಾಪಕೃಷ್ಣರಾಯ' ಎಂಬ ಲಿಖಿತವನ್ನು ಹೊಂದಿವೆ. ಆತನ ಅರ್ಧ ಮತ್ತು ಕಾಲುವರಹಗಳ ಮೇಲೆ ಬಾಲಕೃಷ್ಣನ ಚಿತ್ರವಿದೆ. ಅಚ್ಯುತನ ಕಾಲದ ವರಹಗಳ ಮೇಲೆ ಗಂಡಭೇರುಂಡವು ಆನೆಯನ್ನು ಆಕ್ರಮಿಸಿರುವ ಚಿತ್ರವೂ ನಾಗರಿ ಲಿಪಿಯಲ್ಲಿ 'ಶ್ರೀಪ್ರತಾಪ ಅಚ್ಯುತರಾಯ' ಎಂಬ ಅಂಕಿತವೂ ಇವೆ.

ಚಕ್ರವರ್ತಿಯಾದ ಸದಾಶಿವನ ಕಾಲದ ನಾಣ್ಯಗಳ ಮೇಲೆ ಶಿವ ಪಾರ್ವತಿ, ಲಕ್ಷ್ಮೀನಾರಾಯಣ–ಇವರ ಚಿತ್ರಗಳೂ ನಾಗರಿಲಿಪಿಯಲ್ಲಿ 'ಶ್ರೀ ಸದಾಶಿವರಾಯರು' ಎಂಬ ಅಂಕಿತವೂ ಇವೆ. ಅರವೀಡು ದೊರೆಗಳು ತಾವು ಹೊರಡಿಸಿದ ನಾಣ್ಯಗಳ ಮೇಲೆ ಶ್ರೀ ವೆಂಕಟೇಶ್ವರನ ಚಿತ್ರವನ್ನೂ 'ಶ್ರೀವೆಂಕಟಪತಿರಾಯ' ಎಂಬ ಅಂಕಿತವನ್ನೂ ಹಾಕಿಸಿದ್ದಾರೆ.

■

೧೨

ಮಧ್ಯಕಾಲೀನ ಕರ್ನಾಟಕದ ಶಿಕ್ಷಣ

(೧೦ ರಿಂದ ೧೩ನೇ ಶತಮಾನಗಳಲ್ಲಿ)

ಶೈಕ್ಷಣಿಕ ಸಂಸ್ಥೆಗಳು : ಘಟಿಕಾ, ಅಗ್ರಹಾರ, ಬ್ರಹ್ಮಪುರಿ ಮಠ ಮತ್ತು ದೇವಸ್ಥಾನಗಳಂಥ ಶೈಕ್ಷಣಿಕ ಸಂಸ್ಥೆಗಳ ವಿವರಗಳು ಶಿಲಾಶಾಸನಗಳಲ್ಲಿ ದೊರಕುತ್ತವೆ. ಇವೆಲ್ಲವುಗಳು ಬ್ರಾಹ್ಮಣ ವಿದ್ಯಾರ್ಥಿ ಅಥವಾ ಪಂಡಿತರಿಗಾಗಿ ಇದ್ದವು. ಅವರು ಎದುರಿಸಿದ ಕೆಲವು ಸಮಸ್ಯೆಗಳು ಆಧುನಿಕ ಶೈಕ್ಷಣಿಕ ಸಂಸ್ಥೆಗಳಲ್ಲಿ ಸಹ ಕಂಡುಬರುತ್ತವೆ. ಅವರು ಆ ಸಮಸ್ಯೆಗಳನ್ನು ಬಿಡಿಸಿದ ರೀತಿ ಆಧುನಿಕ ಶಿಕ್ಷಣತಜ್ಞರಿಗೂ ಸಹ ಮಾರ್ಗದರ್ಶನವಾಗಬಹುದು.

ವಿದ್ಯಾರ್ಥಿಗಳು : ಅನೇಕ ಸಂಸ್ಥೆಗಳು ವಿದ್ಯಾರ್ಥಿಗಳಿಗೆ, ಗುರುಗಳಿಗೆ ಹಾಗೂ ವ್ಯವಸ್ಥಾಪಕರಿಗೆ ವಾಸಕ್ಕೆ ಅನುವು ಮಾಡಿಕೊಡುತ್ತಿದ್ದವು. ವಿದ್ಯಾರ್ಥಿಗಳಲ್ಲಿ ಸ್ನಾತಕರೆನಿಸಿಕೊಳ್ಳುವ ಸ್ನಾತಕೋತ್ತರ ವಿದ್ಯಾರ್ಥಿಗಳು, ಮಣಿ, ಛಾತ್ರ ಹಾಗೂ ವಿದ್ಯಾರ್ಥಿಗಳೆಂದು ಗುರುತಿಸಲ್ಪಡುವ ಪದವೀಪೂರ್ವದ ವಿದ್ಯಾರ್ಥಿಗಳು ಇರುತ್ತಿದ್ದರು. ವ್ರತಬದ್ಧರಾದ ಯತಿ ವಿದ್ಯಾರ್ಥಿಗಳು ಕೂಡ ವಾಸಿಸುತ್ತಿದ್ದರು. ಅವರು ವಿದ್ಯಾರ್ಥಿ, ತಪೋಧನರು, ಹಂಸರು, ಪರಮಹಂಸರು, ಏಕದಂಡಿ ಮುಂತಾದ ಹೆಸರಿನಿಂದ ಗುರ್ತಿಸಲ್ಪಡುತ್ತಿದ್ದರು. ಅಲ್ಲಿ ನೈಷ್ಠಿಕ ಬ್ರಹ್ಮಚಾರಿಗಳೆಂದು ಗುರ್ತಿಸಲ್ಪಡುವ ವಿದ್ಯಾರ್ಥಿಗಳೂ ಸಹ ಇರುತ್ತಿದ್ದರು. ಈ ವಿದ್ಯಾರ್ಥಿಗಳ ಪ್ರಾಥಮಿಕ ಗುರಿಯು ಆಧ್ಯಾತ್ಮಿಕ ಮುಕ್ತಿ ಹೊಂದುವದಾಗಿರುತ್ತಿತ್ತು. ಅದು ತಪಸ್ಸಿನಿಂದಾಗಲೀ ಧ್ಯಾನದಿಂದಾಗಲೀ ಪಡೆಯುವಂಥದು ಅಲ್ಲ. ಆದರೆ ಪವಿತ್ರ ಜೀವನಕ್ಕೆ ಸಮರ್ಪಿತವಾದ ಮತ್ತು ಪರಿಶುದ್ಧವಾದ ಜ್ಞಾನಸಂಪಾದನೆಗೆ ಮಾರ್ಗದರ್ಶಿಯಾಗಿರುತ್ತಿತ್ತು. ಅವರ ಸಂಸ್ಥೆಗಳು ನೈಷ್ಠಿಕ ಸಂಸ್ಥೆಗಳೆನಿಸಿಕೊಳ್ಳುತ್ತಿದ್ದವು.

ಊರೂರು ತಿರುಗಾಡುವ ವಿದ್ಯಾರ್ಥಿಗಳು ಸಹ ಇದ್ದರು. ಅವರನ್ನು ಚರಕರು ಅಂದರೆ ಅಲೆದಾಡುವವರೆಂದು ಪಾಣಿನಿಯು ಉಲ್ಲೇಖಿಸಿದ್ದಾನೆ. ಧಾರವಾಡ ಜಿಲ್ಲೆಯ ಲಕ್ಕಿಗುಂಡಿಯಲ್ಲಿಯ ಪ್ರಭಾಕರ ಮೀಮಾಂಸಾ ಶಾಲೆಯಲ್ಲಿ ಪ್ರವಾಸಿಗ ಛಾತ್ರರೆಂದು ಕರೆಯಲ್ಪಡುವ ಇಂತಹ ವಿದ್ಯಾರ್ಥಿಗಳಿಗೆ ಅವಕಾಶವಿತ್ತು.

ಶಿಕ್ಷಕರು : ಆಚಾರ್ಯ, ಭಟ್ಟ, ಉಪಾಧ್ಯಾಯರು ಅಥವಾ ಭಟ್ಟೋಪಾಧ್ಯಾಯ ಮತ್ತು ಅಕ್ಕರಿಗ ಎಂತಲೂ ಶಿಕ್ಷಕರು ಗುರುತಿಸಲ್ಪಡುತ್ತಿದ್ದರು. ಬೆಳ್ಳಿಗಾವೆ ಎಂಬಲ್ಲಿ ಬೋಧಿಸುತ್ತಿದ್ದ ವಾಮಶಕ್ತಿಯು ಆ ಕಾಲದ ಸುಪ್ರಸಿದ್ಧ ಶಿಕ್ಷಕರಲ್ಲಿ ಒಬ್ಬನು. ಅವನ ಬೌದ್ಧಿಕ, ಆಧ್ಯಾತ್ಮಿಕ ಹಾಗೂ ಲಲಿತಕಲೆಯ ಜ್ಞಾನದ ಬಗ್ಗೆ ಇದ್ದ ವಿವರಗಳಿಂದ "ಅವನು ವ್ಯಾಕರಣದಲ್ಲಿ ಪಾಣಿನಿಯೂ, ತತ್ವಜ್ಞಾನದಲ್ಲಿ ಭೂಷಣಾಚಾರ್ಯನೂ, ನಾಟ್ಯ ಮತ್ತು ಭರತಶಾಸ್ತ್ರಗಳಲ್ಲಿ ಭರತನೂ, ಕಾವ್ಯರಚನೆಯಲ್ಲಿ ಸುಬಂಧುವು" ಆಗಿದ್ದನೆಂದು ತಿಳಿದುಬರುತ್ತದೆ. ಆ ವಿವರಗಳಲ್ಲಿ ಮತ್ತೂ, ಹೇಳಿದ್ದೇನೆಂದರೆ "ಒಬ್ಬ ಮನುಷ್ಯ ವಿಜ್ಞಾನದ ಸಂಶೋಧನೆ ಮಾಡುತ್ತಾನೆ. ಮತ್ತೊಬ್ಬ ಆ ಸಂಶೋಧನೆಗೆ ಸರಿಯಾದ ಶಬ್ದಗಳಲ್ಲಿ ಮೆರಗು ಕೊಟ್ಟು ಅದಕ್ಕೊಂದು ಆಕಾರ ತಂದುಕೊಡುತ್ತಾನೆ. ಇನ್ನೊಬ್ಬರು ಆ ಸಂಶೋಧನೆಯನ್ನು ವಿಕಸನಗೊಳಿಸಿ ಪಕ್ವಗೊಳಿಸುತ್ತಾನೆ ಇದೊಂದು ಸೂತ್ರ. ಆದರೆ ವಾಮಶಕ್ತಿಯು ಇವೆಲ್ಲವುಗಳನ್ನು ತಾನೊಬ್ಬನೇ ಮಾಡುತ್ತಿದ್ದನೆಂಬುದು ಪರಮಾಶ್ಚರ್ಯಕರವಾದ ಮಾತು. ಅದಲ್ಲದೇ ಆ ಶಾಸ್ತ್ರ ಗೊತ್ತಿಲ್ಲದವರಿಗೆ ಬೋಧಿಸಿ ಅಧ್ಯಾಪಕನ ಸ್ಥಾನವನ್ನೂ ಅಲಂಕರಿಸುತ್ತಿದ್ದನು." ಅವನು ಯಾವಾಗಲೂ ಪರಮಶಕ್ತಿಯಾಗಿ ಅವರೆಲ್ಲರ ವಿಚಾರ ಮತ್ತು ಆಶೋತ್ತರಗಳಿಗೆ ಕೇಂದ್ರಬಿಂದು ಆಗಿದ್ದನು. ಗುರು ವಾಮಶಕ್ತಿಯ ಬಗ್ಗೆ ವಿದ್ಯಾರ್ಥಿವೃಂದದಲ್ಲಿ ಇದ್ದ ಗೌರವ ಹಾಗೂ ಲೋಕಪ್ರಿಯತೆಯು ಇದರಿಂದ ವ್ಯಕ್ತವಾಗುತ್ತದೆ. ಯಾವ ಶಿಕ್ಷಕರು ತಮ್ಮ ಘನ ವಿಚಾರಗಳನ್ನು ಸುಲಲಿತವಾಗಿ ಸರಳ ಭಾಷೆಯಲ್ಲಿ ತಿಳಿಯಪಡಿಸುತ್ತಾರೋ ಅವರನ್ನು ವಿದ್ಯಾರ್ಥಿಗಳು ಆರಾಧಿಸುತ್ತಾರೆನ್ನುವುದು ಜನಜನಿತ.

ಶೈಕ್ಷಣಿಕ ಆಡಳಿತಗಾರರು : ಐದು ಶ್ರೇಣಿಯ ಶೈಕ್ಷಣಿಕ ಆಡಳಿತಗಾರರಿದ್ದರೆಂಬ ಬಗ್ಗೆ ಶಿಲಾಶಾಸನಗಳಿಂದ ವಿದಿತವಾಗುತ್ತದೆ. ಮೊದಲನೇ ಶ್ರೇಣಿಯ ಆಡಳಿತಗಾರರು ಮಹಾವಿದ್ಯಾಲಯದ ಮತ್ತು ದೇವಸ್ಥಾನದ ಭೂಮಿಯ ಮೇಲ್ವಿಚಾರಣೆ ನೋಡಿಕೊಳ್ಳುತ್ತಿದ್ದರು. ಕಾಲಕ್ಕನುಗುಣವಾಗಿ ಎಲ್ಲ ಕೆಲಸಗಳು ಸರಿಯಾಗಿ ನಡೆಯುವ ಬಗ್ಗೆ ಮೇಲ್ವಿಚಾರಣೆ ಮಾಡುವವರು ಎರಡನೇ ಶ್ರೇಣೀಯ ಆಡಳಿತಗಾರರು. ಇವರು ಸಂಸ್ಥೆಯ ಭದ್ರತೆಯ ಬಗ್ಗೆ ಸಹ ನಿಗಾ ವಹಿಸುತ್ತಿದ್ದರು. ಮೂರನೆಯದಾಗಿ ಕೆಲ ಸಂಸ್ಥೆಗಳಲ್ಲಿ ವಾಚನಾಲಯದ ಅಧಿಕಾರಿಗಳಿರುತ್ತಿದ್ದರು. ನಾಲ್ಕನೆಯದಾಗಿ ವಾಸ್ತುಶಿಲ್ಪಿಗಳು ಇಮಾರತ್ತುಗಳ ಜೀರ್ಣೋದ್ಧಾರ ಅಥವಾ ದುರಸ್ತಿ, ಕೆಲಸಗಳನ್ನು ನೋಡಿಕೊಳ್ಳುತ್ತಿದ್ದರು. ಕೊನೆಯದಾಗಿ ಈಗಿನ ವಿದ್ಯಾರ್ಥಿನಿಲಯಗಳಲ್ಲಿ ಕೆಲಸ ಮಾಡುವ ನಿಯಮಪಾಲಕರಂತೆ ಇರುವವರು. ಇವರು ವಿದ್ಯಾರ್ಥಿಗಳು ಸರಿಯಾಗಿ ಅಭ್ಯಾಸ ಮಾಡುವರೋ ಹೇಗೆ, ಒಳ್ಳೆಯ ನಡತೆಯುಳ್ಳವರೋ ಹೇಗೆ ಎಂಬ ಬಗ್ಗೆ ಪರಿಶೀಲಿಸಿ, ಯಾರಾದರೂ ತಪ್ಪು ದಾರಿ ಹಿಡಿದರೆ ಅವರನ್ನು ಶಿಕ್ಷಿಸುತ್ತಿದ್ದರು. ಭಾರತಕ್ಕೆ ಬಂದ ಚೀನಾ ಜನರು ನಮ್ಮ ವಿದ್ಯಾಸಂಸ್ಥೆಗಳಲ್ಲಿನ ಆಡಳಿತದಲ್ಲಿ ಅತೀ

ಆಸಕ್ತಿ ಹೊಂದಿದ್ದರು. ಅದನು ಅನುಕರಣೆ ಮಾಡಿ ತಮ್ಮ ದೇಶದಲ್ಲಿ ಪ್ರಾರಂಭಿಸಿ, ಭಾರತ ದೇಶವು ವಿದ್ವತ್ತಿನಲ್ಲಿ ಮುಂದುವರೆದಂತೆ ತಮ್ಮ ದೇಶವು ಸಹ ಮುಂದುವರಿಯುವಂತೆ ಮಾಡಬೇಕೆಂಬ ಬಯಕೆ ಹೊಂದಿದ್ದರು.

ವಿದ್ವಾಂಸರ ಸೌಕರ್ಯಗಳು : ಭಾರತೀಯ ವಿದ್ವಾಂಸರು ತಮ್ಮ ಎಲ್ಲ ಬಯಕೆಗಳಿಂದ ಮುಕ್ತರಿದ್ದು ತಮ್ಮ ಅಭ್ಯಾಸದಲ್ಲಿ ಕೇಂದ್ರೀಕೃತರಾಗಿರುತ್ತಿದ್ದರು. ಈ ರೀತಿಯ ಜೀವನ ಪದ್ಧತಿಯು ಅವರಿಗೆ ಹೆಚ್ಚಿನ ನೈಪುಣ್ಯತೆ ಪಡೆಯಲು ಅನುವು ಮಾಡಿಕೊಡುತ್ತಿತ್ತೆಂದು ಹುಯೆನ್‌ತ್ಸಾಂಗನು ವಿವರಿಸಿದ್ದಾನೆ. ಕರ್ನಾಟಕದಲ್ಲಿ ಸಹ ಈ ವ್ಯವಸ್ಥೆ ರೂಢಿಯಲ್ಲಿತ್ತು. ವಿದ್ಯಾದಾನ ಸತ್ರಗಳೆನಿಸುವ ಧರ್ಮಶಾಲೆ ಅಥವಾ ಛತ್ರಗಳಲ್ಲಿ ಅನ್ನ, ವಸ್ತ್ರ ಹಾಗೂ ಔಷಧಗಳನ್ನು ಒದಗಿಸುತ್ತಿದ್ದರು. ತಾಳ್ಗುಂದಾ ಅಗ್ರಹಾರದಲ್ಲಿ ಅನ್ನವಸ್ತ್ರಗಳ ಜೊತೆಗೆ ಪ್ರತಿ ಶನಿವಾರ ಎಣ್ಣೆಸ್ನಾನದ ಬಗ್ಗೆ ವ್ಯವಸ್ಥೆ ಮಾಡಲಾಗಿತ್ತು.

ಅಭ್ಯಾಸ ಪದ್ಧತಿ : ಹೆಚ್ಚಾಗಿ ಪಾಠಗಳನ್ನು ಮೌಖಿಕವಾಗಿ ಕಲಿಯಲಾಗುತ್ತಿತ್ತು. ದಾಖಲೆಗಳಲ್ಲಿ ಓದುವ ಮತ್ತು ಕೇಳುವ ವಿದ್ಯಾರ್ಥಿಗಳು ಎಂಬ ಶಬ್ದಪ್ರಯೋಗಗಳು ಸಿಗುತ್ತವೆ. ಪಾಠಗಳನ್ನು ಕೇಳುವದು, ಓದುವಷ್ಟೇ ಮಹತ್ವವುಳ್ಳದಾಗಿದ್ದಿತ್ತು. ವಿದ್ಯಾರ್ಥಿಗಳು ತಮ್ಮ ಅಭ್ಯಾಸದ ಕೆಲ ಭಾಗಗಳನ್ನು ಪ್ರತಿದಿನ ಕೆಲ ಸಮಯ ಕಂಠಪಾಠ, ಮನನ ಮಾಡುವುದರಲ್ಲಿ ಉಪಯೋಗಿಸಬೇಕಾಗುತ್ತಿತ್ತು. ನಾಗಾವಿಯಂಥ ದೊಡ್ಡ ಸಂಸ್ಥೆಗಳಲ್ಲಿ ಕಂಠಪಾಠ ಮಾಡುವುದಕ್ಕಾಗಿಯೇ ವಿಶಿಷ್ಟ ಪಡಸಾಲೆಗಳಿದ್ದು, ಅವುಗಳಿಗೆ 'ಪಠಣ ಮಠ' ಎಂದು ಕರೆಯುತ್ತಿದ್ದರು. ವಾದವಿವಾದಕ್ಕೆ, ಚರ್ಚೆಗಳಿಗೆ ಹಾಗೂ ತಮ್ಮ ಭಿನ್ನ ಭಿನ್ನ ಮತಗಳನ್ನು ಪ್ರತಿಪಾದಿಸುವುದಕ್ಕೆ ಮತ್ತು ಯಾರೊಬ್ಬರೂ ತಮ್ಮ ಸಿದ್ಧಾಂತ ಸ್ಪಷ್ಟವಾಗಿ ನಿರೂಪಿಸುವುದಕ್ಕೆ ಹೆಚ್ಚಿನ ಪ್ರಾಧಾನ್ಯತೆ ಕೊಡಲಾಗುತ್ತಿತ್ತು. ಸತ್ಯವನ್ನರಿಯಲು ಹಾಗೂ ಜ್ಞಾನ ಸಂಪಾದಿಸಿಕೊಳ್ಳಲು ವಾದವಿವಾದಗಳನ್ನು ಅಭ್ಯಾಸಶೈಲಿಯಾಗಿ ಉಪಯೋಗಿಸಿಕೊಳ್ಳಲಾಗುತ್ತಿತ್ತು.

ಪರೀಕ್ಷೆಗಳು : ಹೆಚ್ಚಿನ ವ್ಯಾಸಂಗಕ್ಕಾಗಿ ಬರುವ ವಿದ್ಯಾರ್ಥಿಗಳಿಗಾಗಿ ಮೌಖಿಕ ಪರೀಕ್ಷೆಗಳನ್ನು ನಡೆಸುತ್ತಿದ್ದಂತೆ ತೋರುತ್ತದೆ. ಶಿವಮೊಗ್ಗಾ ಜಿಲ್ಲೆಯ ತಾಳಗುಂದದ ದೇವಾಲಯ ಮಹಾವಿದ್ಯಾಲಯದಲ್ಲಿ ಆರು ವಿಜ್ಞಾನ ಶಾಖೆಗಳಿದ್ದವು. ಅರ್ಹತಾ ಪರೀಕ್ಷೆಯ ನಂತರ ಪ್ರತಿಯೊಂದು ಶಾಖೆಯಲ್ಲಿ ಎಂಟು ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳಲಾಗುತ್ತಿತ್ತು. ಗುಲ್ಬರ್ಗಾದ ಹತ್ತಿರದ ನಾಗಾವಿಯಲ್ಲಿ ಒಂದು ಮಹಾವಿದ್ಯಾಲಯದ ಆವಾರದಲ್ಲಿ ೨೫೨ ವಿದ್ಯಾರ್ಥಿಗಳಿಗೆ ಸ್ಥಳಾವಕಾಶವಿತ್ತು. ಅದೇ ಊರಿನ ಮತ್ತೊಂದು ಮಹಾವಿದ್ಯಾಲಯದಲ್ಲಿ ಒಂದೊಂದು ವಿಭಾಗದಲ್ಲಿ ೧೦೦ ವಿದ್ಯಾರ್ಥಿಗಳಂತೆ ಇದ್ದರು. ಇದರಿಂದ ಈ ವಿದ್ಯಾಲಯಕ್ಕೆ ಸೇರಬಯಸುವ

ವಿದ್ಯಾರ್ಥಿಗಳಿಗಾಗಿ ಒಂದು ಪೂರ್ವ ಪರೀಕ್ಷೆ ನಡೆಸಿ ಯೋಗ್ಯತೆಯ ಆಧಾರದ ಮೇಲೆ ಅವರಿಗೆ ಪ್ರವೇಶ ಕೊಡಲಾಗುತ್ತಿದ್ದುದು ವಿದಿತವಾಗುತ್ತದೆ.

ಅದರಂತೆ ಅಗ್ರಹಾರಕ್ಕೆ ಪ್ರವೇಶ ಪಡೆಯುವವರಿಗೂ ಮೌಖಿಕ ಪರೀಕ್ಷೆಗಳು ಇರುತ್ತಿದ್ದವು. ದೇಗಾಂವೆ ಅಗ್ರಹಾರ ಸ್ಥಾಪಿಸುವಾಗ ರಾಜನೇ ಸ್ವತಃ ಮೌಖಿಕ ಪರೀಕ್ಷೆ ತೆಗೆದುಕೊಂಡದ್ದನ್ನು ಇಲ್ಲಿ ಉದಾಹರಿಸಬಹುದು. ಮಾನಸೋಲ್ಲಾಸದ ಪ್ರಕಾರ ರಾಜನಿಗೆ ನಿಪುಣರ ಸಹಾಯದೊಂದಿಗೆ ರಾಜಕುಮಾರರನ್ನು ಪ್ರತಿಯೊಂದು ವಿಷಯದಲ್ಲಿ ಪರೀಕ್ಷಿಸುವದು ಕಡ್ಡಾಯವಾಗಿತ್ತು.

ನಿರ್ದಿಷ್ಟ ತರಗತಿಗಳಾಗಲಿ ಶ್ರೇಣೀಕರಣ ವ್ಯವಸ್ಥೆಯಾಗಲಿ ಇರಲಿಲ್ಲ. ಯಾವದೇ ಪದವಿಗಳನ್ನು ಕೊಡುತ್ತಿರಲಿಲ್ಲ. ಪೂರ್ವಕಾಲದಲ್ಲಿ ಪಂಡಿತರು ಯಾವದೇ ಬಿರುದು ಬಾವಲಿಗಳನ್ನು ಅವಲಂಬಿಸುತ್ತಿರಲಿಲ್ಲ. ಅವರು ತಮ್ಮ ಪಾಂಡಿತ್ಯವನ್ನು ಬೆಳೆಸಿಕೊಂಡು ತಮ್ಮನ್ನು ಪ್ರಸ್ತುತಗೊಳಿಸಿಕೊಳ್ಳುತ್ತ ಮುನ್ನಡೆಯಬೇಕಾಗುತ್ತಿತ್ತು. ಯಾಕೆಂದರೆ ಅವರು ವಿದ್ವತ್ತು ಯಾವುದೇ ಕ್ಷಣದಲ್ಲಿ ವಿದ್ಯಾವಿಷಯಕ ವಿವಾದದಲ್ಲಿ (ಶಾಸ್ತ್ರಾರ್ಥದಲ್ಲಿ) ಆವ್ಹಾನಿಸಲ್ಪಡುತ್ತಿತ್ತು ಮತ್ತು ಅಂಥ ವಿವಾದಗಳಲ್ಲಿ ಅವರು ತೋರಿಸುವ ಜಾಣ್ಮೆಯ ಮೇಲಿಂದ ಅವರ ಯೋಗ್ಯಾಯೋಗ್ಯತೆಯನ್ನು ನಿರ್ಧರಿಸುತ್ತಿತ್ತು.

ಪ್ರಾಥಮಿಕ ಶಿಕ್ಷಣ : ಮೇಲ್ದರ್ಜೆಯ ಶಿಕ್ಷಣ ಸಂಸ್ಕೃತ ಭಾಷೆಯಲ್ಲಿರುತ್ತಿದ್ದರೆ ಪ್ರಾಥಮಿಕ ಶಿಕ್ಷಣ ಕನ್ನಡದಲ್ಲಿರುತ್ತಿತ್ತು. ಕರ್ನಾಟಕ ಶಿಕ್ಷಣ ಅಥವಾ ಬಾಲ ಶಿಕ್ಷಣ ಎಂದು ಅದಕ್ಕೆ ಹೆಸರಿಸಲಾಗುತ್ತಿತ್ತು. ಕೆಲವು ಸಲ ಪುರಾಣ ವಾಚನಕಾರರು ಸಹ ಪ್ರಾಥಮಿಕ ಶಾಲೆಯ ಶಿಕ್ಷಕರಾಗಬೇಕಾಗುತ್ತಿತ್ತು. ಹುಬ್ಬಳ್ಳಿ ಉಪನಗರವಾದ ಉಣಕಲ್ಲಿನಲ್ಲಿಯ ದೇವಾಲಯದ ಆವರಣದಲ್ಲಿ ಇಂಥದೊಂದು ಪ್ರಾಥಮಿಕ ಶಾಲೆಯಿತ್ತು. ಈ ಶಾಲೆಯನ್ನು ಎಲಿಯಾಪುರಬಳ್ಳಿ (ಹುಬ್ಬಳ್ಳಿ)ಯ ಮಹಾಜನರು ಹಾಗೂ ಧಾರವಾಡದ ಉಪನಗರವಾದ ನವಲೂರಿನ ಕುರುಬ ಸಮಾಜದವರು ಸಂಯುಕ್ತವಾಗಿ ನಡೆಸುತ್ತಿದ್ದರು. ಈಗಿನ ಶಿಕ್ಷಕರಿಗಿಂತ ಆ ಕಾಲದ ಪ್ರಾಥಮಿಕ ಶಿಕ್ಷಕರಿಗೆ ಹೆಚ್ಚಿನ ಸಂಭಾವನೆ ಸಿಗುತ್ತಿತ್ತು.

ಉನ್ನತ ಶಿಕ್ಷಣದ ಕಾಲಾವಧಿ : ಮೇಲ್ದರ್ಜೆಯ ಜನರು ಪಡೆಯಬೇಕಾಗದ ಅಂದಿನ ಶಿಕ್ಷಣವು ಪರಂಪರೆಯ ಸಿದ್ಧಾಂತಗಳನ್ನು, ನಾನಾ ವಿಧದ ವೇದಾಂತಶಾಸ್ತ್ರಗಳನ್ನು, ಕಲೆಗಳನ್ನು ಅಭ್ಯಾಸ ಮಾಡಿ ಅವುಗಳ ಮೇಲೆ ಪ್ರಭುತ್ವ ಪಡೆಯುವದಾಗಿದ್ದರಿಂದ ಅದಕ್ಕೆ ಸಾಕಷ್ಟು ಕಾಲಾವಧಿ ಬೇಕಾಗುತ್ತಿತ್ತು. ಈ ಅಭ್ಯಾಸಕ್ರಮ ಅಥವಾ ಬ್ರಹ್ಮಚರ್ಯ ಸಾಮಾನ್ಯವಾಗಿ ೧೨ ವರ್ಷಗಳ ಕಾಲದವರೆಗೆ ಇರುತ್ತಿತ್ತು. ರಾಜಕುಮಾರರು ತಮ್ಮ ೭ನೇ ಅಥವಾ ೮ನೇ ವರ್ಷದಿಂದ ೮-೧೦ ವರ್ಷಗಳ ಕಾಲ ಕಠಿಣ ಅಭ್ಯಾಸ ಮಾಡಬೇಕಾಗುತ್ತಿತ್ತೆಂದು ಮಾನಸೋಲ್ಲಾಸದಿಂದ

ಕಂಡುಬರುತ್ತದೆ. ಮನೆಯಲ್ಲಿಯ ಶಿಕ್ಷಣ ಪದ್ಧತಿಯಲ್ಲಿ ವ್ಯಕ್ತಿಗತವಾದ ಗಮನ ಕೊಡಲು ಸಾಧ್ಯವಿದ್ದ ಕಾರಣ ಈ ವಿದ್ಯಾರ್ಥಿಗಳಿಗೆ ಶಿಕ್ಷಣ ಸಂಸ್ಥೆಗಳಲ್ಲಿ ಶಿಕ್ಷಕರು ಹೆಚ್ಚಿನ ಸಂಖ್ಯೆಯಲ್ಲಿದ್ದ ವಿದ್ಯಾರ್ಥಿಗಳಿಗೆ ಕಲಿಸುವ ಭಾರ ಹೊರುತ್ತಿದ್ದುದರಿಂದ ಅಲ್ಲಿ ಕಾಲಾವಧಿ ಸ್ವಲ್ಪ ಹೆಚ್ಚು ಬೇಕಾಗುತ್ತಿತ್ತು.

ಅಭ್ಯಾಸದ ವಿಷಯಗಳು : ವೇದಗಳು, ವೇದಾಂಗಗಳು, ವ್ಯಾಕರಣ, ತತ್ವಜ್ಞಾನ, ಪುರಾಣ, ಕಾವ್ಯ, ನಾಟಕ, ಸಂಗೀತ ಅಲ್ಲದೇ ರೂಢಿಯಲ್ಲಿಯ ಮೂಲ ಗ್ರಂಥಗಳಾದ ಪಾಣಿನಿ, ಕೌಮಾರ, ನ್ಯಾಸರ ವ್ಯಾಕರಣಗಳೂ, ಪ್ರಭಾಕರರ ಮೀಮಾಂಸೆ, ತತ್ವಜ್ಞಾನವೂ ಪಠ್ಯಕ್ರಮದಲ್ಲಿದ್ದರೂ ಅಭ್ಯಾಸ ಕ್ರಮದಲ್ಲಿ ಸ್ಥಿತ್ಯಂತರಗಳಿರುತ್ತಿದ್ದವು. ಉದಾಹರಣಾರ್ಥವಾಗಿ ಧಾರವಾಡ ಜಿಲ್ಲೆಯ ಲಕ್ಕುಂಡಿಯಲ್ಲಿ ಪ್ರಭಾಕರ ಮೀಮಾಂಸೆಯ ತತ್ವಜ್ಞಾನದಲ್ಲಿ ಮಾತ್ರ ಪ್ರಾವೀಣ್ಯಕ್ಕೆ ಪ್ರಮುಖ ಅವಕಾಶವಿತ್ತು. ಶಿವಮೊಗ್ಗಾ ಜಿಲ್ಲೆಯ ಬೆಳ್ಳಿಗಾವೆಯ ಕೋಡಿಮಠದಲ್ಲಿ ಭಾರತೀಯ ತತ್ವಜ್ಞಾನದ ಆರು ಪದ್ಧತಿಗಳ ಜೊತೆ ಬೌದ್ಧ ತತ್ವಜ್ಞಾನ ಮತ್ತು ಲಕುಲನ ಯೋಗಸೂತ್ರಗಳನ್ನು ಅಭ್ಯಾಸಿಸಲಾಗುತ್ತಿತ್ತು ಬೆಳ್ಳಿಗಾವೆಯ ಕೇಶವ ಪುರದಲ್ಲು ಸಹ ವಿನೋದಗಾರರಿಗೆ ತರ್ಕಜಿಜ್ಞಾಸುಗಳಿಗೆ ಮತ್ತು ಭಾಷಣಕಾರರಿಗೆ ಪ್ರೋತ್ಸಾಹ ಸಿಗುತ್ತಿತ್ತು. ಮತ್ತು ಪ್ರಾಧ್ಯಾಪಕರಿಗೆ ಅನೇಕ ಭಾಷೆಗಳ ಹಾಗೂ ಶಿಲಾಶಾಸನಗಳ ಜ್ಞಾನವಿತ್ತು. ಶಿವಮೊಗ್ಗಾ ಜಿಲ್ಲೆಯ ಕುಪ್ಪಟೂರಿನ ಮಹಾಜನರು ಅಥವಾ ಶಿಕ್ಷಕರು ಬೇರೆ ಬೇರೆ ವಿಷಯಗಳಲ್ಲದೇ ವಾತ್ಸಾಯನ ಕಾಮಸೂತ್ರದಲ್ಲಿಯೂ ಪರಿಣತಿಯನ್ನು ಹೊಂದಿದವರಾಗಿದ್ದರು. ಅರಸಿಕೆರೆಯ ಬ್ರಾಹ್ಮಣರಿಗೆ ಕರ್ನಾಟಕ, ಲತಾ (ಗುಜರಾತ) ದ್ರವಿಡ ಮತ್ತು ಬೇರೆ ಬೇರೆ ದೇಶಗಳ ಭಾಷೆಗಳ ಮತ್ತು ಅವುಗಳ ಬರವಣಿಗೆಯ ಗುಣಲಕ್ಷಣಗಳ ಪರಿಚಯವಿತ್ತು. ಮೈಸೂರಿನ ಹತ್ತಿರದ ಟಿ.ನರಸೀಪುರದ ಒಂದು ಶಾಲೆಯಲ್ಲಿ ಕನ್ನಡ ಮತ್ತು ತಮಿಳು ಭಾಷೆಗಳ ಜೊತೆಗೆ ಮರಾಠಿಯನ್ನು ಕಲಿಸಲಾಗುತ್ತಿತ್ತು. ಕನ್ನಡ ಮತ್ತು ತೆಲುಗು ಭಾಷೆಗಳ ಲಿಪಿಯಲ್ಲಿ ಸಾಕಷ್ಟು ಏಕರೂಪತೆ ಇದ್ದಕಾರಣ ಇವೆರಡೂ ಭಾಷೆಗಳು ಪರಸ್ಪರ ಹತ್ತಿರವಾಗಿದ್ದವು. ಗುಲಬರ್ಗಾದ ಹತ್ತಿರದ ನಾಗಾವಿಯಲ್ಲಿ ನೂರು ವಿದ್ಯಾರ್ಥಿಗಳು ಸುಕ್ರನ ಬಗ್ಗೆ, ಬೇರೆ ನೂರು ವಿದ್ಯಾರ್ಥಿಗಳು ವ್ಯಾಸನ ಬಗ್ಗೆ, ಮತ್ತೆ ನೂರು ವಿದ್ಯಾರ್ಥಿಗಳು ಮನುವಿನ ಬಗ್ಗೆ ಅಭ್ಯಸಿಸುತ್ತಿದ್ದರು. ಇನ್ನು ಕೆಲವು ದಾಖಲೆಗಳು ಅಪೂರ್ಣವಾಗಿರುವುದರಿಂದ ಉಳಿದ ನೂರು ವಿದ್ಯಾರ್ಥಿಗಳು ಯಾವ ಅಭ್ಯಾಸ ಮಾಡುತ್ತಿದ್ದರೆನ್ನುವುದು ಗೊತ್ತಾಗುವುದಿಲ್ಲ. ಬೆಳಗಾಂವಿ ಜಿಲ್ಲೆಯ ಹೂಲಿಯಲ್ಲಿ, ಸಾಮಾನ್ಯ ವಿಷಯಗಳ ಜೊತೆಗೆ ಅರ್ಥಶಾಸ್ತ್ರ (ವಾರ್ತ)ದ ವಿಷಯಗಳೂ ಇದ್ದ ಬಗ್ಗೆ ಉಲ್ಲೇಖ ಕಂಡುಬರುತ್ತದೆ.

ಮಹಿಳೆಯರ ಶಿಕ್ಷಣ : ದಾಖಲೆಗಳಲ್ಲಿ ಮಹಿಳೆಯರಿಗಾಗಿ ಸ್ವತಂತ್ರವಾದ

ಅಭ್ಯಾಸ ಕ್ರಮವಿದ್ದ ಬಗ್ಗೆ ಉಲ್ಲೇಖವಿಲ್ಲ. ಸಂಗೀತ, ನೃತ್ಯಕಲೆಗಳಲ್ಲಿ ಹೆಚ್ಚಿನ ಪ್ರಾವೀಣ್ಯತೆ ಪಡೆದು ಆಡಳಿತದಲ್ಲಿ ಪರಿಣಿತರಾದ ರಾಜಕುಮಾರರ ಬಗ್ಗೆ ಉದಾಹರಣೆಗಳಿವೆ. ದೇವಾಲಯಗಳ ಸೇವೆಗಳಲ್ಲಿ ನೃತ್ಯ, ಸಂಗೀತ ಮತ್ತು ನಟನೆಗಳ ಬಗ್ಗೆ ಏಕರೂಪದ ಸಂಕೇತಗಳು ಸಿಗುತ್ತವೆ. ಇಂಥ ಕಲಾಕಾರರಲ್ಲಿ ಬಹಳಷ್ಟು ಜನ ಸ್ತ್ರೀಯರಿರುತ್ತಿದ್ದರೆಂದು ನಂಬಿದರೆ ತಪ್ಪಾಗಲಾರದು. ನಿಜವಾದ ದಾಖಲೆಗಳ ಅನುಪಸ್ಥಿತಿಯಲ್ಲಿ ಈ ಬಹುಮುಖಿ ಪ್ರತಿಭೆಯ ಸ್ತ್ರೀಯರಿಗೆ ಮನೆಯಲ್ಲಿಯೇ ಶಿಕ್ಷಣಕೊಡಲಾಗುತ್ತಿತ್ತೆಂದು ನಾವು ತಿಳಿಯಬೇಕಾಗುತ್ತದೆ.

ಔದ್ಯೋಗಿಕ (ಕಸುಬು) ಶಿಕ್ಷಣ : ಈ ಅವಧಿಯಲ್ಲಿ ನೂರಾರು ದೇವಾಲಯಗಳು ಕಟ್ಟಲ್ಪಟ್ಟವು. ಅವುಗಳ ಕಟ್ಟಡದಲ್ಲಿ ಕಾಣಬರುವ ವಾಸ್ತುಶಿಲ್ಪದ ನಿಪುಣತೆ ಈಗ್ಗೆ ಬಹುತರವಾಗಿ ಇಲ್ಲವಾಗಿದೆ. ಆದರೆ ಮೂರ್ತಿ ಕೆತ್ತನೆಯ ಕಲೆ ಈವರೆಗೂ ಜೀವಂತವಾಗಿದೆ. ಶಿವಮೊಗ್ಗಾ ಜಿಲ್ಲೆಯ ಹಾಗೂ ಉತ್ತರ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಚಂದನದ ಮೂರ್ತಿಕಾರರು ಪ್ರಾಚೀನ ದೇವಾಲಯುಗಳನ್ನು ಸುಂದರವಾಗಿಸಿದ ಕಲಾಕಾರರ ವಂಶಜರೇ ಇರುವರೆಂಬುದು ಸ್ಪಷ್ಟ. ವಾಸ್ತವಿಕವಾಗಿ ಈ ಕಲಾಕಾರರನ್ನು ಗುಡಿಕಾರರು ಅಥವಾ ದೇವಾಲಯಗಳ ನಿರ್ಮಾಣಕಾರರು ಎಂದು ತಿಳಿಯಲಾಗುತ್ತದೆ. ಆದ್ದರಿಂದ ಕಟ್ಟಿಗೆಯಲ್ಲಿ ಮೂರ್ತಿಕೆತ್ತನೆಯ ಕಲೆ ತಂದೆಯಿಂದ ಮಗನಿಗೆ ಬಂದುದೆಂದು ನಾವು ತಿಳಿಯಬಹುದು. ಆ ಪದ್ಧತಿ ಈಗ್ಗೆ ಸಹ ನಡೆದು ಬಂದಿದೆ.

ಉದ್ಯೋಗದಲ್ಲಿದ್ದ ಜನ ತಮ್ಮ ಮಕ್ಕಳಿಗೆ ಸರಿಯಾದ ಮಾರ್ಗದರ್ಶನ ಮಾಡುತ್ತಿದ್ದರು. ಕರ್ನಾಟಕದ ಸುಪ್ರಸಿದ್ಧ ಭಕ್ತ (ಶರಣ) ಆದಯ್ಯನಿಗೆ ಅವನ ತಂದೆ ಕಲಿಸಿಕೊಟ್ಟ ಉದ್ಯೋಗದ ಮೂರು ಪಾಠಗಳ ಶಿಕ್ಷಣದ ಬಗ್ಗೆ ಸಾಕಷ್ಟು ವಿವರಿಸಲಾಗಿದೆ. ವ್ಯವಹಾರದ ರೂಪರೇಷೆಗಳನ್ನು, ಪ್ರವಾಸದ ವಿಧಾನಕ್ರಮವನ್ನು, ಲೆಖ್ಖಪತ್ರ ಇಡುವ ರೀತಿಗಳನ್ನು ಮತ್ತು ಲಾಭಗಳಿಸುವ ಕ್ರಮಗಳನ್ನು ಇಂಥ ಅನೇಕ ಪ್ರಕಾರದ ಉದ್ಯೋಗ ಶಿಕ್ಷಣವನ್ನು ಆದಯ್ಯನಿಗೆ ಅವನ ತಂದೆ ಕಲಿಸಿದ ವಿವರಗಳಿವೆ. ಬೇರೆ ಕಡೆಗಳಂತೆ ಕರ್ನಾಟಕದ ಬೌದ್ಧ ಮಠಗಳು ಕಲೆ ಮತ್ತು ಹಸ್ತಕೌಶಲ್ಯದ ಕೇಂದ್ರಗಳಾಗಿದ್ದವು. ಆನಂತರ ವೀರಶೈವ ಮಠಗಳು ಸಹ ಕಲೆ ಮತ್ತು ಹಸ್ತಕೌಶಲ್ಯದ ಕೇಂದ್ರಗಳಾದವು. ಆದ್ದರಿಂದ ಮಠಗಳು ಹಾಗೂ ಕಲಾಕಾರರ ಮನೆಗಳು ತಾಂತ್ರಿಕ ಹಾಗೂ ಔದ್ಯೋಗಿಕ ಶಿಕ್ಷಣ ಕೇಂದ್ರಗಳಾಗಿದ್ದವು.

ಜನಪ್ರಿಯ ಶಿಕ್ಷಣ : ದೇವಾಲಯಗಳು ಸಾಮಾನ್ಯ ಜನತೆಯ ಶಿಕ್ಷಣದ ಕೇಂದ್ರಗಳಾಗಿದ್ದವು. ಪುರಾಣಭಟ್ಟರು ಮಹಾಭಾರತ ರಾಮಾಯಣಗಳಲ್ಲಿಯ ಕಥೆಗಳನ್ನು ಓದುತ್ತಿದ್ದರು. ಪೌರಾಣಿಕ ಕಥೆಗಳಿಂದ ಆಯ್ದ ದೃಶ್ಯಗಳನ್ನು

ದೇವಾಲಯಗಳ ಗೋಡೆಗಳ ಮೇಲೆ ಕೆತ್ತಲಾಗುತ್ತಿತ್ತು. ಪುರಾಣ ಭಟ್ಟರು ಓದುತ್ತಿದ್ದ ಕಥೆಗಳಲ್ಲಿ ಬಂದ ಸನ್ನಿವೇಶಗಳನ್ನು ಗೋಡೆಗಳ ಮೇಲಿನ ಚಿತ್ರಗಳು ನಿರೂಪಿಸುತ್ತಿದ್ದವು. ಹಾವೇರಿ, ಮುಗದ, ನಾಗಾವಿಯಲ್ಲಿರುವಂಥ ದೇವಾಲಯದ ನಾಟ್ಯಗೃಹಗಳಲ್ಲಿ ಪ್ರದರ್ಶಿಸಿದ ನೃತ್ಯ, ಸಂಗೀತ ಮತ್ತು ನಾಟಕಗಳು ಜನರಿಗೆ ಕಲೆಯಲ್ಲಿ ಅಭಿರುಚಿ ಹುಟ್ಟುವಂತೆ ಮಾಡುತ್ತಿದ್ದವು.

ವೀರಶೈವ ಚಳವಳಿ : ೧೨ನೇ ಶತಮಾನದ ವೀರಶೈವ ಚಳವಳಿಯು ಅನೇಕ ವಿಧದಲ್ಲಿ ಕ್ರಾಂತಿಕಾರಿಯಾಗಿತ್ತು. ಶೈಕ್ಷಣಿಕ ವಿಧಾನವು ಸಹ ಕ್ರಾಂತಿಮಯವಾಗಿತ್ತು. ಬಸವಣ್ಣನಂಥ ಧಾರ್ಮಿಕ ಮುಖ್ಯಸ್ಥರು ಪ್ರಾಂತೀಯ ಭಾಷೆಯಲ್ಲಿ ಶಿಕ್ಷಣ ಕೊಡಲಾರಂಭಿಸಿದ ಮೇಲೆ ಆ ಭಾಷೆಯಲ್ಲಿಯ ಶಿಕ್ಷಣಕ್ಕೆ ಹೆಚ್ಚಿನ ಉತ್ತೇಜನ ದೊರಕಿತು. ಅವರ ಬರಹಗಳಲ್ಲಿದ್ದ ಪ್ರಮುಖ ಲಕ್ಷಣವೆಂದರೆ ಕಾಯಕಕ್ಕೆ ಅಂದರೆ ಕೆಲಸದ ಘನತೆಗೆ ಪ್ರಾಧಾನ್ಯತೆ ತಂದುಕೊಡುವದು (Dignity of labour). ಬೇರೆಯವರ ಗಳಿಕೆಯಲ್ಲಿ ಜೀವಿಸುವುದು ಪಾಪವೆಂದು ಭಾವಿಸುತ್ತಿದ್ದರು. ತಮ್ಮ ತತ್ವಗಳನ್ನು ಏಕಕಾಲಕ್ಕೆ ಪ್ರಸಾರ ಮಾಡಲು ಅನುಕೂಲವಾಗುವಂತೆ ವೀರಶೈವ ಪ್ರಮುಖರು ತಮ್ಮ ವಚನಸಾಹಿತ್ಯದ ಜೊತೆಗೆ ಮಠಗಳನ್ನೂ ಪ್ರಚಾರ ಮಾಧ್ಯಮಗಳನ್ನಾಗಿ ಉಪಯೋಗಿಸಿಕೊಂಡರು. ಈ ಮಠಗಳು ಧಾರ್ಮಿಕ, ಸಾಮಾಜಿಕ ಹಾಗೂ ಶೈಕ್ಷಣಿಕ ಕ್ಷೇತ್ರಗಳಲ್ಲಿ ಸೇವೆ ಮಾಡುತ್ತಿದ್ದವು. ವಿರಕ್ತಮಠ, ಓದಿಸುವಮಠ ಮತ್ತು ಸಾಲಿಮಠ ಹೀಗೆ ಮಠಗಳಲ್ಲಿ ಮೂರು ಪ್ರಕಾರಗಳಿದ್ದವು. ಮೊದಲನೆಯವುಗಳಲ್ಲಿ ಓದು ಬರಹ ಕಲಿಸುವದಕ್ಕೆ ಪ್ರಾಧಾನ್ಯತೆ ಕೊಡಲಾಗುತ್ತಿತ್ತು. ಮೂರನೇ ಪ್ರಕಾರದ ಮಠಗಳಲ್ಲಿ ಓದು ಬರಹದ ಜೊತೆಗೆ ಗಣಿತಜ್ಞಾನ, ಲೆಖ್ಖಪತ್ರದ ಮೂಲಪಾಠಗಳು ಮತ್ತು ಹಸ್ತಕೌಶಲ್ಯಗಳು ಕಲಿಸಲ್ಪಡುತ್ತಿದ್ದವು. ಹಸ್ತಕೌಶಲ್ಯದಲ್ಲಿ ನೂಲುವುದು, ನೇಯುವುದು ಮತ್ತು ಕೃಷಿಗೆ ಸಂಬಂಧಿಸಿದ ಜ್ಞಾನ ಕೊಡಲಾಗುತ್ತಿತ್ತು. ಔಷಧೋಪಚಾರದ ಪ್ರಾಥಮಿಕ ಜ್ಞಾನವನ್ನು ಸಹ ಕೊಡಲಾಗುತ್ತಿತ್ತು.

ಹೀಗೆ ೧೨ನೇ ಮತ್ತು ೧೩ನೇ ಶತಮಾನದ ವೀರಶೈವರಲ್ಲಿದ್ದ ಶಿಕ್ಷಣಕ್ಷೇತ್ರಕ್ಕೆ ಸಂಬಂಧಿಸಿದ ಕಲ್ಪನೆಗಳು ಕ್ರಾಂತಿಯನ್ನೇ ಮಾಡಿದವು. ತಾಯಿಭಾಷೆ ಶಿಕ್ಷಣದ ಮಾಧ್ಯಮವಾಗಬೇಕು. ಸ್ತ್ರೀ ಪುರುಷರಲ್ಲಿ ಹಾಗೂ ಜಾತಿಪಂಥಗಳಲ್ಲಿ ಇದ್ದ ಭೇದಭಾವನೆಗಳು ಅಳಿಯಬೇಕು. ಕಾಯಕವನ್ನು ಅಂದರೆ ಕೆಲಸವನ್ನು ಗೌರವಿಸಬೇಕು. ಮತ್ತು ಶಿಕ್ಷಕರನ್ನು ಪೂಜ್ಯಭಾವದಿಂದ ಕಾಣಬೇಕು. ಈ ತತ್ವಗಳ ತಳಹದಿಯ ಮೇಲೆ ಶಿಕ್ಷಣದ ಮುನ್ನಡೆಯಾಯಿತು.

■

೧೩

ಮಧ್ಯಕಾಲದಲ್ಲಿಯ ಶಿಕ್ಷಣ ಮತ್ತು ವಿಜ್ಞಾನ

ರಾಜಕುಮಾರರ ಶಿಕ್ಷಣ

ವಿಜಯನಗರದ ರಾಜರು ವಿದ್ವತ್ತನ್ನು ಮತ್ತು ಶಿಕ್ಷಣದ ಪ್ರಸಾರವನ್ನು ಪ್ರೋತ್ಸಾಹಿಸಿದ್ದಕ್ಕೆ ಕಾರಣ, ಅವರೇ ಸ್ವತಃ ವಿದ್ಯಾವಂತರಾಗಿದ್ದರು ಎನ್ನುವದು. ಮೊದಲನೆಯ ಬುಕ್ಕನು ಆ ಕಾಲದ ವಿದ್ವತ್ ಲೋಕದಲ್ಲಿ ಅದ್ಭುತ ವ್ಯಕ್ತಿದ್ವಯರಾದ ಭಾರತೀತೀರ್ಥ ಮತ್ತು ವಿದ್ಯಾರಣ್ಯರ ಶಿಷ್ಯನಾಗಿದ್ದನು[೧]. ರಾಜಗುರುವಾದ ಕ್ರಿಯಾಶಕ್ತಿಯು ಬುಕ್ಕ, ಹರಿಹರ ಮತ್ತು ಮೊದಲನೆ ದೇವರಾಯನ ಆಚಾರ್ಯನಾಗಿದ್ದನು[೨]. ಎರಡನೆ ಹರಿಹರನು ವಿದ್ಯಾರಣ್ಯರ ಕೃಪೆಯಿಂದ, ರಾಜಾಧಿರಾಜರಿಗೂ ದುರ್ಲಭವಾದ ಜ್ಞಾನ ಸಾಮ್ರಾಜ್ಯವನ್ನು ವಶಪಡಿಸಿಕೊಂಡನು[೩]. ಅವನು 'ಕರ್ನಾಟಕ ವಿದ್ಯಾವಿಲಾಸ' ನೆಂದು ಪ್ರಶಂಸಿಸಲ್ಪಟ್ಟಿದ್ದಾನೆ[೪]. ಮೊದಲನೆ ದೇವರಾಯನು ಸಂಗೀತ–ಸಾಹಿತ್ಯವೆರಡರಲ್ಲಿಯೂ ಪ್ರವೀಣನಾಗಿದ್ದನು[೫]. ಅವನ ಅನಂತರ ಪಟ್ಟಣಕ್ಕೆ ಬಂದ ವಿಜಯರಾಯನು (ಕ್ರಿ.ಶ.೧೪೨೬), 'ಭೋಜರಾಜನ ಮರಣದಿಂದ ದುಃಖಾಕ್ರಾಂತೆಯಾದ ಸರಸ್ವತಿಯ ಕಂಬನಿಗಳನ್ನು ಒರಸಿದ'ನೆಂದು ಹೇಳಲಾಗಿದೆ[೬].

ರಾಜಕುಮಾರರ ವಿದ್ಯಾಭ್ಯಾಸದಿಂದ ಮುಂದುವರಿದ ಈ ಪರಂಪರೆಯು ವಿಜಯನಗರದ ರಾಜರ ಅನಂತರ ಬಂದ ದೊರೆಗಳಿಂದಲೂ ಅನುಸರಿಸಲ್ಪಟ್ಟಿತು. ಎಷ್ಟೋ ವೇಳೆ ರಾಜನೇ ಈ ಬಗ್ಗೆ ತನ್ನ ಉತ್ತರಾಧಿಕಾರಿಯಾಗುವವರಿಗೆ ತಿಳಿವಳಿಕೆ ಕೊಟ್ಟದ್ದೂ ಉಂಟು. ಕೆಳದಿಯ ಅರಸನಾದ ಚಿಕ್ಕ ಸಂಕಣ್ಣನಾಯಕನು ತನ್ನ

೧. M.A.R. 1916. p.p. 56-59.
೨. E.C. VII. SK. 28 : EC., V.Cn. 256 and E.C. XI Dg. 23.
೩. M.A.R. 1916, p. 58
೪. E.C. VI Koppa. 34
೫. S.I.I. IX No. 433.
೬. Mys. Gaz: II. (III) pp. 1559-60

ಉತ್ತರಾಧಿಕಾರಿಯಾದ ವೆಂಕಟಪ್ಪನಾಯಕನಿಗೆ ಸಪ್ತಾಂಗದ ಓನಾಮವನ್ನು (ಬೀ
ರೂಪಗಳನ್ನು) ಹೇಳಿಕೊಟ್ಟದ್ದು ಇದಕ್ಕೆ ಒಂದು ನಿದರ್ಶನ[೭]. ವೆಂಕಟಪ್ಪನಾಯಕನ
ವಿದ್ವಾಂಸರಿಂದ ಕಾವ್ಯ, ನಾಟಕ ಮತ್ತು ಧರ್ಮಶಾಸ್ತ್ರಗಳನ್ನು ಕುರಿತು ಅನೇ
ಗ್ರಂಥಗಳನ್ನು ಬರೆಯಿಸಿದ್ದಲ್ಲದೆ, ತಾನೇ ಕೆಲವನ್ನು ರಚಿಸಿದನು[೮]. ಕೆಳದಿಯ
ರಾಣಿಯಾದ ಚನ್ನಮ್ಮಾಜಿಯು, ಬಸವಪ್ಪನನ್ನು ಉತ್ತರಾಧಿಕಾರಿಯನ್ನಾಗಿ ಆಯ
ಮಾಡಿದಾಗ, ಆತನಿಗೆ ವಿದ್ಯಾಶಾಸ್ತ್ರದ ಹಾಗೂ ದೈಹಿಕ ಶಿಕ್ಷಣವನ್ನು ಕೊಡಿಸಿ
ಅವನು ರಾಜನಾಗಲು ಬೇಕಾಗುವ ಶಿಕ್ಷಣ ಕ್ರಮಗಳಲ್ಲಿ ಆತನನ
ತರಬೇತುಗೊಳಿಸಿದಳು. ಅವನು ಎಷ್ಟರ ಮಟ್ಟಿಗೆ ಶಿಕ್ಷಣ ಪಡೆದನೆನ್ನುವುದಕ್ಕೆ ಅವ
ಆಳ್ವಿಕೆಯ ಉಜ್ವಲವಾದ ಘಟನೆಗಳೂ ಅವನು ವಿದ್ವಜ್ಜನಾಶ್ರಯನಾಗಿ 'ಸೂರಿನಿಕ
ಕಲ್ಪದ್ರುಮ'ನೆಂದು ಪ್ರಶಂಸೆಯನ್ನು ಪಡೆದದ್ದೂ ಸಾಕ್ಷಿಗಳಾಗಿವೆ. 'ಶಿವತತ್ವ ರತ್ನಾಕ
ಎಂಬ ಒಂದು ವಿಶ್ವಕೋಶದ ಸಂಗ್ರಹ ಕಾರ್ಯದಲ್ಲಿ ಆತನು ಪಟ್ಟ ಪ್ರಯತ್ನಗ
ಪ್ರಖ್ಯಾತವಾಗಿವೆ[೯].

'ಚಿಕ್ಕದೇವರಾಯ ವಂಶಾವಳಿ'ಯಲ್ಲಿ, ಮೈಸೂರು ಚಿಕ್ಕದೇವರಾಯರು (ಕ್ರಿ
೧೬೭೨-೧೭೦೪) ಪಡೆದ ಶಿಕ್ಷಣದ ವಿವರಗಳು ನಿರೂಪಿತವಾಗಿವೆ. ಅವರಿ
ಬೇರೆ ಬೇರೆಯ ವಿಷಯಗಳನ್ನು ಕಲಿಸಲು ಬೇರೆ ಬೇರೆಯ ಶಿಕ್ಷಕರಿದ್ದರು. ಕಾ
ಶಿಕ್ಷಾಚಾರ್ಯರು ಅವರಿಗೆ, ಉಚ್ಚಾರಣಾ ಕ್ರಮವನ್ನೂ ಓದುವುದನ್ನೂ ಕಲಿಸಿದರ
ಈ ಶಿಕ್ಷಣಕ್ಕೆ 'ಲಿಪಿಗ್ರಹಣ'ವೆಂದು ಹೆಸರು. ಮತ್ತೊಬ್ಬ ಶಿಕ್ಷಕರು 'ಪದವಾಕ್ಯ ಪ್ರಮಾ
ಅಥವಾ ವ್ಯಾಕರಣವನ್ನು ಹೇಳಿಕೊಟ್ಟರು. ಮೂರನೆಯವರು ಅನೇಕ ವಿಷಯಗ
ಜತೆಗೆ ಚರಿತ್ರೆ ಭೂಗೋಳಗಳನ್ನೂ ಒಳಗೊಂಡ ಪುರಾಣಗಳನ್ನು ಕಲಿಸಿದರ
ಚಿಕ್ಕದೇವರಾಯರು ವಾದ್ಯ ಸಂಗೀತವನ್ನು ಕಲಿತು ವೀಣಾವಾದನದ
ನಿಪುಣರಾದರು. ಕಡೆಗೆ ಹಿಂದಿನಿಂದ ಈ ಆಧುನಿಕ ಕಾಲದವರೆಗೂ ಉಳಿದುಕೊಂ
ಬಂದಿರುವ ಭಾರತೀಯ ಶಾಲೆ (ಗರುಡಿ)ಯ ಶಿಕ್ಷಣವನ್ನು ಹೋಲುತ್ತಿ
ಅಂಗಸಾಧನೆಯನ್ನು ಕಲಿತರು[೧೦]. ಇದು ಅಂದು ರಾಜಕುಮಾರರಿಗೆ ನಿಯತವಾ
ನೀಡುತ್ತಿದ್ದ ಶಿಕ್ಷಣದ ವೈಲಕ್ಷಣ್ಯವೆಂದು, ಕೃಷ್ಣದೇವರಾಯರನ್ನು ಕುರಿತು ಪಾಯಸ
(Paes) ಬರೆದ ವರದಿಗಳಿಂದ ಸ್ಪಷ್ಟವಾಗುತ್ತದೆ[೧೧].

---

೭. ಕೆಳದಿಯ ಬಸವರಾಜನ ಶಿವತತ್ವರತ್ನಾಕರ : ಸಂ. ರಾಮರಾವ್ ಮತ್ತು ಸುಂದರ ಶಾಸ್ತ್ರಿಯ
ಪು. ೩೫.

೮. ಅಲ್ಲೇ. ಪುಟ, ೩೭.

೯. ಲಿಂಗಣ್ಣಕವಿ: ಕೆಳದಿ ನೃಪವಿಜಯಂ. ಸಂ : ಆರ್ ಶಾಮಶಾಸ್ತ್ರಿ ಪು. ೧೭೫. V.

೧೦. ತಿರುಮಲಾರ್ಯ : ಚಿಕ್ಕದೇವರಾಯ ವಂಶಾವಳಿ. ಪು. ೧೩೮. ff.

೧೧. F.E. P. ೨೪೧-೨

ಪ್ರಾಥಮಿಕ ಶಿಕ್ಷಣ

ಪ್ರಾಥಮಿಕ ಶಿಕ್ಷಣಕ್ಕೆ ಬಾಲಬೋಧೆ ಎಂಬ ಹೆಸರಿತ್ತು[೧೨]. ಕನಕದಾಸರ 'ಮೋಹನತರಂಗಿಣಿ'ಯಲ್ಲಿ, ಕಪ್ಪೆ ಅಂಗಿ ತೊಟ್ಟು ಕೈಯಲ್ಲಿ ಬೆತ್ತ ಹಿಡಿದು, ಚೌಪದಿಗಳನ್ನು ರಚಿಸುವುದರಲ್ಲಿ ನಿಪುಣರಾದ, ಪ್ರಾಥಮಿಕಶಾಲೆಯ ಉಪಾಧ್ಯಾಯರ ಚಿತ್ರವೂ ಅಂದಿನ ಮಕ್ಕಳ ಪುಸ್ತಕಗಳು ವರ್ಣಚಿತ್ರಗಳಿಂದ ಕೂಡಿದ್ದವೆಂಬ ಸಂಗತಿಯೂ ದೊರೆಯುತ್ತದೆ[೧೩]. ಮೊದಮೊದಲು ಮಕ್ಕಳು ಮಣ್ಣಿನ ಅಥವಾ ಮರಳಿನ ಮೇಲೆ ಅಕ್ಷರಾಭ್ಯಾಸ ಮಾಡುವುದನ್ನು ಕಲಿತರು; ಜತೆಗೆ ಕಾಗುಣಿತಗಳನ್ನೂ, ನೂರರ ತನಕ ಅಂಕೆಗಳನ್ನೂ, ಮಗ್ಗಿಯನ್ನೂ, ಪೂರ್ಣಾಂಕಗಳಿಂದ ಭಿನ್ನಾಂಕಗಳನ್ನು ಗುಣಿಸುವುದನ್ನೂ, ನಾಣ್ಯ, ಅಳತೆ-ತೂಕಗಳಿಗೆ ಸಂಬಂಧಿಸಿದ ಕೋಷ್ಟಕಗಳನ್ನೂ ಕಲಿತರು. ಇದೆಲ್ಲಕ್ಕೂ 'ಧೂಳಾಕ್ಷರ'ವೆಂದು ಹೆಸರು[೧೪]. (ಕ್ರಿ.ಶ. ೧೬೨೩)ರಲ್ಲಿ ಇಂಡಿಯಾಕೆ ಪ್ರವಾಸಿಯಾಗಿ ಬಂದಿದ್ದ ಪಿಯಟ್ರೋ ಡೆಲ್ಲಾ ವಾಲ್ಲೆ (Pietro Della Valle) ಎಂಬಾತನು. ಕರ್ನಾಟಕದ ಒಂದು ಹಳ್ಳಿಯ ಶಾಲೆಯ ಶಿಕ್ಷಣದ ಈ ಹಂತವನ್ನು ವರ್ಣಿಸಿದ್ದಾನೆ. "ಶಾಲೆಯೊಂದರಲ್ಲಿ ಉಪಾಧ್ಯಾಯರಿಂದ ಕಲಿತ ಪಾಠವನ್ನು ಮರೆಯದೆ ನೆನಪಿನಲ್ಲಿಟ್ಟುಕೊಳ್ಳಲು, ವಿದ್ಯಾರ್ಥಿಗಳು ಬಾಯಿಪಾಠವಲ್ಲಿ ತೊಡಗಿದ್ದನ್ನು ಕಂಡನು. ಅದರಲ್ಲೂ ಒಬ್ಬ ವಿದ್ಯಾರ್ಥಿ ಸೊಗಸಾದ ಕಂಠದಲ್ಲಿ ಪಾಠದ ಒಂದು ಭಾಗವನ್ನು ಅತ್ಯಂತ ಪರಿಣಾಮಕಾರಿಯಾದ ರೀತಿಯಲ್ಲಿ ಪುನರಾವರ್ತನೆಯನ್ನು ಮಾಡುತ್ತಿದ್ದನು. ನಿದರ್ಶನಕ್ಕೆ 'ಒಂದೊಂದ್ಲೆ ಒಂದು'[೧೫] ಎಂಬಂತೆ. ಇಂಥ ಪುನರಾವರ್ತನೆಯನ್ನು ಕೇಳುತ್ತಲೆ ಉಳಿದ ಹುಡುಗರು, ಅದನ್ನೆ ಬಾಯಲ್ಲಿ ಹೇಳುತ್ತ ಎದುರಿಗೆ ಹರಡಿದ ಮರಳಿನ ಮೇಲೆ ಅದೇ ಪ್ರಕಾರ ಬರೆಯುತ್ತಿದ್ದರು. ಹೀಗೆ ಪಾಠ ಸಾಗುತ್ತಿತ್ತು". ಪಿಯಡ್ರೋಡೆಲ್ಲಾ ವಾಲ್ಲೆ ಈ ರೀತಿಯ ಸರಳವಾದ ಶಿಕ್ಷಣ ಕ್ರಮವನ್ನು ಬಹುವಾಗಿ ಮೆಚ್ಚಿಕೊಂಡಿದ್ದಾನೆ. "ವಿದ್ಯಾರ್ಥಿಗಳು ಕಾಗದವನ್ನಾಗಲಿ, ಮಸಿಯನ್ನಾಗಲಿ ವ್ಯರ್ಥಮಾಡದೆ ಓದುಬರಹವನ್ನು ಕಲಿಯುವ

---

೧೨. ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ : ಸಂ. XIV. ೧. ಪು. ೩೧.

೧೩. ಕನಕದಾಸ : ಮೋಹನತರಂಗಿಣಿ. ಸಂ.ಎ. ರಾಮಾನುಜ ಅಯ್ಯಂಗಾರ್. ಅಧ್ಯಾಯ II. ಪು. ೧೩. VV. ೩೭-೪೧.

೧೪. Parulekar R.V. Surrey of Indigenous Education in the province of Bombay.

ಚಿಕ್ಕ ನಂಜೇಶನ ರಾಘವಾಂಕ ಚರಿತೆ (ಸಂ. ಸ.ಸ. ಮಾಳವಾಡ) ಸಂಧಿ II. V. ೫೩ರಲ್ಲಿ ಧೂಳಾಕ್ಷರದ ವಿಷಯ ಬಂದಿದೆ.

೧೫. Travels of Pietro Della Velle. II. p.p. 227-28.

ಈ ಪಧಾನ ನಿಜವಾಗಿಯೂ ಸುಲಭವಾದದ್ದು"[೧೬] ಎಂದು ಹೇಳುತ್ತಾನೆ. ತರಗತಿಯಲ್ಲಿ ಬುದ್ಧಿವಂತನಾದ ವಿದ್ಯಾರ್ಥಿಯೊಬ್ಬ ಅಧ್ಯಾಪನದಲ್ಲಿ ಉಪಾಧ್ಯಾಯರಿಗೆ ನೆರವಾಗುವ ಈ 'ಮಾನಿಟರ್ ಪದ್ಧತಿ'ಯ ಮೊತ್ತಮೊದಲ ಉಲ್ಲೇಖವನ್ನು ನಾವು ಕಾಣುವುದು ಪಾಶ್ಚಾತ್ಯನಾದ ಪಿಯಡ್ರೋ ಡೆಲ್ಲಾ ವಾಲ್ಲೆಯ ವರದಿಯಲ್ಲಿ. ಈ ಒಂದು ಶಿಕ್ಷಣ ಪದ್ಧತಿ, ಪಾಶ್ಚಾತ್ಯ ಶಿಕ್ಷಣ ಶಾಸ್ತ್ರಕ್ಕೆ ಭಾರತೀಯರ ಕೊಡುಗೆಯಾಗಿದೆ[೧೭].

ಧೂಳಿನ ಮೇಲೆ ಅಕ್ಷರ ತಿದ್ದುವ ಅಭ್ಯಾಸವಾದ ಅನಂತರ ವಿದ್ಯಾರ್ಥಿಗಳು ಕಾಗದದ ಮೇಲೆ ಬರೆಯುತ್ತಿದ್ದರು. ಅನಂತರ ಓದುವುದು, ಲೆಕ್ಕ ಮಾಡುವುದು. ಗಣಿತದಲ್ಲಿ ಸಂಕಲನ-ವ್ಯವಕಲನ, ಗುಣಾಕಾರ-ಭಾಗಾಕಾರ-ಸರಳಬಡ್ಡಿ ಮತ್ತು ತ್ರೈರಾಶಿಯನ್ನು ಕಲಿಯುತ್ತಿದ್ದರು[೧೮].

ಇನ್ನೂ ಮುಂದುವರಿದಂತೆ ಅವರು ಅಭ್ಯಾಸ ಮಾಡಬೇಕಾದ ಗ್ರಂಥಗಳು ಜೈಮಿನಿ ಭಾರತ, ವಿದುರನೀತಿ, ಅಮರಕೋಶ, ಪಂಚತಂತ್ರ, ಮತ್ತು ಸೋಮೇಶ್ವರ ಶತಕ. ಕೆಲವು ವಿದ್ಯಾರ್ಥಿಗಳು ಸಂವತ್ಸರಗಳ, ನಕ್ಷತ್ರಗಳ, ದಿಕ್ಸೂಚಿಯ ವಿವರಗಳನ್ನೂ ದೇವರ ಮಹಿಮಾವಿಶೇಷಗಳನ್ನು ಸ್ತುತಿಸುವ ಹಲವು ಬಗೆಯ ಹಾಡುಗಳನ್ನು ಕಲಿಯುತ್ತಿದ್ದರು[೧೯].

ಮಗುವಿಗೆ ಆರಂಭದಲ್ಲಿ ಓದು-ಬರಹ-ಲೆಕ್ಕವನ್ನಷ್ಟೆ ಕಲಿಸುತ್ತಿದ್ದರು ಎಂದಲ್ಲ ಅದಕ್ಕೂ ಮೊದಲು ಮಗುವಿನ ಕಿವಿಗೆ ತಾಯಿ ಎರೆವ ಹಾಲಿನ ಜತೆಗೆ 'ಬಾಲ ಬೋಧೆ'ಯೂ ಸಾಗುತ್ತಿತ್ತು. ಮೊದಲನೆ ದೇವರಾಯನ ಮಂತ್ರಿಯಾದ ಲಕ್ಷ್ಮೀಧರನಿಗೆ ಅವನ ತಾಯಿ ದಿನವೂ ಹಾಲೆರೆಯುವಾಗ 'ಕೆರೆಯನ್ನು ಕಟ್ಟಿಸು, ಬಾವಿಯನ್ನು ತೋಡಿಸು, ದೇವಾಲಯಗಳನ್ನು ಕಟ್ಟಿಸು, ಸೆರೆಯಲ್ಲಿ ಸಿಕ್ಕಿದ ಅನಾಥರನ್ನು ಬಿಡಿಸು ಮಿತ್ರರಿಗೆ ಆಶ್ರಯನಾಗು. ನಂಬಿದವರಿಗೆ ನೆಲೆಯಾಗು' ಎಂದು ಹೇಳುತ್ತಾ ಬೆಳೆಯಿಸಿದಳಂತೆ[೨೦].

ಪ್ರೌಢ ಶಿಕ್ಷಣ ಸಂಸ್ಥೆಗಳು

ಪ್ರಾಚೀನ ಹಾಗೂ ಮಧ್ಯಕಾಲೀನ ಕರ್ನಾಟಕದಲ್ಲಿ ಅಗ್ರಹಾರಗಳು, ಮಠಗಳು ದೇವಸ್ಥಾನಗಳು, ಬ್ರಹ್ಮಪುರಿಗಳು ಮತ್ತು ಘಟಕಾ ಸ್ಥಾನಗಳು ಪ್ರೌಢ ವಿದ್ಯಾಕೇಂದರಗಳಾಗಿದ್ದುವೆಂಬ ಸಂಗತಿಯನ್ನು ಆಗಲೇ ಹಿಂದಿನ ಅಧ್ಯಾಯಗಳಲ್ಲಿ ವಿವರಿಸಲಾಗಿದೆ. ಇವುಗಳಲ್ಲಿ ಘಟಿಕಗಳು ಈ ಕಾಲದಲ್ಲಿದ್ದ ಬಗ್ಗೆ ಉಲ್ಲೇಖಗಳು

---

೧೬. ಅಲ್ಲೇ II. ಪು. ೨೨೭-೨೮.

೧೭. Parulekar, p. 31.

೧೮. ಅಲ್ಲೇ. ಪು. ೩೧.

೧೯. ಅಲ್ಲೇ. ಪು. ೩೧.

೨೦. S.I.I. IV, No. 267. p. 62.

ಅತಿ ವಿರಳವಾಗಿದೆ[೨೧]. ಈ ಕಾಲದಲ್ಲಿ ಬ್ರಹ್ಮಪುರಿ ಮತ್ತು ದೇವಸ್ಥಾನಗಳು ಹಿಂದಿನಂತೆ ವಿದ್ಯಾಪ್ರಸಾರ ಕೇಂದ್ರಗಳಾಗಿ ಮುಂದುವರಿದುವೆಂದು ಹೇಳುವುದರ ಹೊರತು ಇನ್ನೇನನ್ನೂ ಹೇಳುವಂತಿಲ್ಲ.

ಅಗ್ರಹಾರಗಳು: ವಿಜಯನಗರದ ಉಚ್ಛ್ರಾಯ ಕಾಲದಲ್ಲಿ ಅಗ್ರಹಾರಗಳು, ಮಠಗಳು ಎಂದಿನಂತೆ ತಮ್ಮ ಶೈಕ್ಷಣಿಕ ಕಾರ್ಯಕಲಾಪಗಳನ್ನು ಮುಂದುವರಿಸಿದವು. ಆದರೆ ವಿಜಯನಗರದ ಪತನಾನಂತರ, ಈ ವಿದ್ಯಾಕೇಂದ್ರಗಳ ಘನತೆ ಕುಗ್ಗುವಂತೆ ಮಾಡಿದ ಅನೇಕ ಘಟನೆಗಳು ಜರುಗಿದವು. ಕೆಲವು ಅಗ್ರಹಾರಗಳು ಹಾಳಾದವು. ಅವುಗಳನ್ನು ಜೀರ್ಣೋದ್ಧಾರ ಮಾಡಿದಾಗ ಅವು ಬ್ರಾಹ್ಮಣರಿಗೆಊಟ ಹಾಕುವ ಸತ್ರಗಳಾಗಿ ಮಾರ್ಪಟ್ಟವು[೨೨] ಅಥವಾ ಹೊಸ ಅಗ್ರಹಾರಗಳು ಸ್ಥಾಪಿತವಾದಾಗ ಅವುಗಳ ನಿರ್ಮಿತಿಗೆ ಕಾರಣವಾದವರು, ಅವುಗಳ ಉದ್ದೇಶ ವಿದ್ಯಾಪ್ರಸಾರವೆಂಬ ಅಂಶವನ್ನು ಒತ್ತಿ ಹೇಳಲಿಲ್ಲ[೨೩]. ಈ ಕಾಲದಲ್ಲಿ ಸ್ಥಾಪಿತವಾದ ಕೆಲವು ಅಗ್ರಹಾರಗಳಲ್ಲಿ ಕ್ರಿ.ಶ.೧೭೪೮ರಲ್ಲಿ ಕಟ್ಟಲ್ಪಟ್ಟ ದಳವಾಯಿ ಅಥವಾ ರಾಮಚಂದ್ರಪುರ ಅಗ್ರಹಾರವೂ ಒಂದು[೨೪]. ಇದು ಮಧ್ಯಕಾಲೀನ ಅಗ್ರಹಾರದ ಮಾದರಿಯಲ್ಲಿ–ಎಂದರೆ ಮೂಲತಃ ವಿದ್ಯಾಕೇಂದ್ರವಾಗಿರಬೇಕೆಂದು ಆಶಿಸಲಾಗಿತ್ತು. ಇದರ ನಿರ್ಮಿತಿಗೆ ಹೇರಳವಾಗಿಯೇ ಹಣ ಖರ್ಚಾಯಿತು. ದಳವಾಯಿ ದೇವರಾಯನು ಇಲ್ಲಿ ವಿಶಾಲವಾದ ಮನೆಗಳನ್ನು ಕಟ್ಟಿಸಿದನು; ಸೊಗಸಾದ ಹಾಸಿಗೆಗಳಿಂದ ಮಲಗುವ ಮನೆಗಳನ್ನು ಸಜ್ಜುಗೊಳಿಸಿದರು. ಬೆಲೆ ಬಾಳುವ ದಿಂಬು, ಜಮಖಾನೆ, ದುಪ್ಪಟ್ಟಿಗಳನ್ನೂ, ಪೂಜಾಗೃಹದ ಪರಿಕರಾದಿಗಳನ್ನೂ, ಏರ್ಪಡಿಸಿದನು. ವೇದ ವೇದಾಂಗ ಶಾಸ್ತ್ರ ಪರಿಣತರಾದ ನೂರ ಇಪ್ಪತ್ತು ಬ್ರಾಹ್ಮಣರನ್ನು ಆಯ್ಕೆ ಮಾಡಿದನು. ದುರದೃಷ್ಟವಶಾತ್ಈ ಸಂಸ್ಥೆ ಇಂತಹ ಘನೋದ್ದೇಶದಿಂದ ಆರಂಭವಾದರೂ ಕ್ರಿ.ಶ. ೧೮೦೭ರ ಹೊತ್ತಿಗೆ ಈ ಅಗ್ರಹಾರದ ಜಮೀನು ದಿವಾನ ಪೂರ್ಣಮ್ಮನವರಿಗೆ ಕೊಟ್ಟ ಎಳಂದೂರಿನ ಆಗ್ರೆಯಲ್ಲಿ ಸಮಾವೇಶಗೊಂಡಾಗ ಅಂತ್ಯಗೊಂಡಿತು.

ಮಠಗಳು: ಎಂದರೆ ಮಧ್ಯ ಯುಗದ ವಿದ್ಯಾಕೇಂದ್ರಗಳಿಗೆ ಬೇರೊಂದು ಹೆಸರು ಮಾತ್ರ. ಬಳ್ಳಿಗಾವೆಯ ಕೋಡಿಯ ಮಠ ಇಂಥ ವಿದ್ಯಾಕೇಂದ್ರಗಳಲ್ಲಿ ಒಂದು. ಈ ಕಾಲದಲ್ಲಿ ಅಗ್ರಹಾರಗಳಂತೆ ಸಂಪೂರ್ಣ ಮರೆವಿನಲ್ಲಿ ಮರೆಯಾಗದಿದ್ದರು ವಿದ್ಯಾಭ್ಯಾಸದ ಚಟುವಟಿಕೆಗಳಿಗೆ ನೆಲೆಯಾದ ಮಠಗಳು

೨೧. E.C. V., Cn. and S.T.R. Ghatikavidvan. p.5.
೨೨. E.C. VIII. Sb. 475.
೨೩. E.C. XIII, Kunigal 37, p. 39 and I.C. VIII Ti. 7.
೨೪. E.C. III. Tn. 63 (Eng. p. 8)
೨೫. ಅಲ್ಲೇ. ಮತ್ತು Q.J.M.S. VII, pp. 162. ff.

ಅಷ್ಟೇನೂ ಪ್ರಮುಖವೆನ್ನಿಸಿಕೊಳ್ಳುವ ಸ್ಥಿತಿಯಲ್ಲಿರಲಿಲ್ಲ. ಈ ಕಾಲದ ಮಠಗ ಒಂದು ವೈಶಿಷ್ಟ್ಯವೆಂದರೆ, ಅವು ಒಂದು ಮತ ಧರ್ಮದ, ಆಚಾರ್ಯ ಧೋರಣೆಯ ಪೀಠಗಳಾದವು. ಇಂಥ ಒಬ್ಬ ಗುರುವಿನ ಸುತ್ತ ಮಠಗಳು ತಮ್ಮ ಬಹು ಬಗೆಯ ಚಟುವಟಿಕೆಗಳನ್ನು ನಿರ್ವಹಿಸಿದವು. ಮಠಗಳಲ್ಲಿ ಪುಸ್ತಕ ಭಂಡಾರವಿತ್ತು[೨೬] ಬಹುಮಟ್ಟಿಗೆ ಇವೆಲ್ಲವೂ ದಾರಿಗರಿಗೆ ಮತ್ತು ವಿದ್ಯಾರ್ಥಿಗಳಿಗೆ ಸತ್ರಗಳಾಗಿದ್ದುವು[೨೭] ಕೆಲವು ಮಠಗಳಲ್ಲಿ ಷಡ್ದರ್ಶನ ಗಳನ್ನು ಕಲಿಸಲಾಗುತ್ತಿತ್ತು[೨೮]. ಬರುಬರುತ್ತಾ ಇ ಮೂಲತಃ ವಿದ್ಯಾಕೇಂದ್ರಗಳೆಂಬುದಕ್ಕಿಂತ, ಮತ ಧರ್ಮದ ಪ್ರಭಾವಶಾಲಿ ಕೇಂದ್ರಗಳಾದ ಕಾರಣ, ರಾಜರುಗಳು ಆಯಾ ಪೀಠಗಳ ಉತ್ತರಾಧಿಕಾರಿಗಳನ ಗೊತ್ತುಮಾಡುವ ಹಕ್ಕು ತಮಗೆ ಉಂಟೆಂದು ಭಾವಿಸಿದರು. ಕೆಳದಿಯ ಅರಸರೊಬ್ಬರ 'ಇಂಥ ಮಠಗಳ ಮುಖ್ಯಸ್ಥರಾಗತಕ್ಕವರು ರಾಜರೊಂದಿಗೆ ಏಕಾಭಿಪ್ರಾಯ ಉಳ್ಳವರಾಗಿರತಕ್ಕದ್ದು' ಎಂಬ ನಿಯಮವನ್ನು ಹಾಕಿದ್ದುಂಟು. ಇಕ್ಕೇರಿ ಸಂಸ್ಥಾನದ ಬೇರೆಬೇರೆಯ ಮಠಗಳು–ವಶೀಕೃತ ಮಠ,[೨೯]. ಮಹತ್ತು ಮಠ[೩೦] ಮತ್ತು ವಿರ ಮಠ[೩೧]–ಇತ್ಯಾದಿ ಇದ್ದವು. ಇದಕ್ಕೆ ಮುನ್ನ ಸಂಜೆಯ ಮಠವೊಂದಿತ್ತು.

ಶಿಕ್ಷಣ ವ್ಯವಸ್ಥೆ

ಅಧ್ಯಯನದ ವಿಷಯಗಳು: ರಾಜರ ಸಭೆಯು ಕವಿಗಳು, ಗಾಯಕರ ಪೌರಾಣಿಕರು, ಹಾಸ್ಯಗಾರರು, ಚರಿತ್ರಕಾರರು, ಜ್ಯೋತಿಷಿಗಳು, ಚತುರ ವಾಗ್ಮಿಗಳ ಮತ್ತು ಯುದ್ಧಕಲಾನಿಪುಣರು[೩೩]–ಇವರುಗಳಿಂದ ಮಾತ್ರ ಶೋಭಿಸುತ್ತದೆ ಎಂದ ಸೋಮೇಶ್ವರ ಶತಕವು ಹೇಳುತ್ತದೆ. ಈ ಎಲ್ಲಾ ಕಲಿಕೆಗಳಿಗೆ ಅಂದಿನ ಕಾಲದ ಅವಕಾಶವಿತ್ತೆಂದು ನಾವು ಭಾವಿಸಬಹುದು. ಸೋಮೇಶ್ವರ ಶತಕವು ಒಂದೆ ಮಂತ್ರಿಯಾಗುವವನ ಲಕ್ಷಣವನ್ನು ಹೇಳುತ್ತಾ, ಮಂತ್ರಿಯಾದವನು ಬಹು ಭಾಷ ಲಿಪಿ ವಿಶಾರದನಾಗಿರಬೇಕು ಎನ್ನುತ್ತದೆ[೩೪]. ಇಂಥ ಲಕ್ಷಣಗಳನ್ನುಳ್ಳ ಮಂತ್ರಿಯು

---

೨೬ A.S.I. 1936-37. p.108.

೨೭. E.C. VIII, Ti 2-33. S.I.I IX (II) Nos. 523, 655, 659, 673, and 67

೨೮. ಅಲ್ಲೇ. Ti. ೪೨.೧೮೪.

೨೯. ಅಲ್ಲೇ. Ti. ೮೧

೩೦. ಅಲ್ಲೇ. Ti. 55.

೩೧. ಅಲ್ಲೇ. Ti 71, and 51.

೩೨. E.C.V. Cn. 165.p. ೧೯೮ S.I.I. IX, (I) p. ೧೪೦

೩೩. ಸೋಮೇಶ್ವರ ಶತಕ. V. ೫೮.

೩೪. ಅಲ್ಲೇ .V. ೬೧.

ಇಲ್ಲದಿರಲಿಲ್ಲ. ಕೃಷ್ಣದೇವರಾಯನ ಮಂತ್ರಿಯಾದ ಕೊಂಡಮರಸನು ಬಹುಭಾಷಾಲಿಪಿಗಳನ್ನು ಓದುವುದರಲ್ಲಿ ನಿಷ್ಣಾತನಾಗಿದ್ದನು[೩೫]. ಕ್ರಿ.ಶ.೧೪೨೦ರ ಒಂದು ಕೃತಿಯಲ್ಲಿ ಅಧ್ಯಯನದ ವಿಷಯಗಳೆಂದು–ವೇದ, ಮೀಮಾಂಸಾ, ನ್ಯಾಯ, ವ್ಯಾಕರಣ, ಪುರಾಣ, ಧರ್ಮಶಾಸ್ತ್ರ, ಸಂಗೀತ, ವೈದ್ಯ ಮತ್ತು ಯುದ್ಧ ವಿದ್ಯೆಗಳನ್ನು ಹೇಳಿದೆ[೩೬].

ಅಧ್ಯಯನ ವಿಧಾನ

ಸೋಮೇಶ್ವರ ಶತಕದ ಪ್ರಕಾರ ಅಧ್ಯಯನದ ವಿಧಾನಗಳು ಹೀಗಿವೆ: (೧) ಕೆಲವನ್ನು ಬಲ್ಲವರಿಂದ ಕಲಿಯಬೇಕು. (೨) ಕೆಲವನ್ನು ಶಾಸ್ತ್ರಗಳಿಂದ ಕಲಿಯಬೇಕು. (೩) ಕೆಲವನ್ನು ಇತರರ ಕೃತಿಗಳಿಂದ ಅರಿಯಬೇಕು. (೪) ಕೆಲವನ್ನು ತನ್ನ ಬುದ್ಧಿಶಕ್ತಿಯಿಂದ ತಿಳಿಯಬೇಕು. (೫) ಕಡೆಯದಾಗಿ ಕೆಲವನ್ನು ಸಜ್ಜನಸಂಗದಿಂದ ಅರಿಯಬೇಕು. ಹೀಗಾದಾಗ ಮನುಷ್ಯನು, ಹಲವು ಹಳ್ಳ ಕೂಡಿ ಸಮುದ್ರವಾಗುವ ಹಾಗೆ, ಸರ್ವಜ್ಞನಾಗುತ್ತಾನೆ[೩೭].

ಇಂದಿನಂತೆ ಹಿಂದಿನ ಕಾಲದಲ್ಲಿ ಅಧ್ಯಯನದ ತುದಿಗೆ ಪರೀಕ್ಷೆಗಳಿರಲಿಲ್ಲ. ಆದರೆ ವಿದ್ವಾಂಸನಾದವನಿಗೆ ಸರ್ಕಾರದ ಸಹಾಯ ಬೇಕಾಗಿದ್ದರೆ, ಒಮ್ಮೊಮ್ಮೆ ಅವನ ವಿದ್ವತ್ತು ಸಾರ್ವಜನಿಕವಾಗಿ ಪರೀಕ್ಷಿತವಾಗುತ್ತಿತ್ತು. ಕ್ರಿ.ಶ.೧೪೪೭ರಲ್ಲಿ 'ಭಾಷಾಭೂಷಣ'ಎಂಬ ಗ್ರಂಥದ ಲೇಖಕನಾದ ಆದಿತ್ಯಾರ್ಯನು ಇಂಥ ಒಂದು ವಿದ್ವತ್ ಸಭೆಯ ಮುಂದೆ, ಅಧ್ಯಯನದ ಎಲ್ಲಾ ವಿಷಯಗಳ ಬಗೆಗೂ ಪರೀಕ್ಷಿತವಾಗಿ ವಿದ್ವಾಂಸರ ಪ್ರೀತಿಗೆ ಪಾತ್ರನಾದನು. ಆಗ ರಾಜನು ಅವನಿಗೆ ನಲ್ಲಂಗಿ ಎಂಬ ಗ್ರಾಮವನ್ನು ದತ್ತಿಯಾಗಿ ಕೊಟ್ಟನು[೩೮]. ಇದಕ್ಕೂ ಪೂರ್ವದಲ್ಲಿ ಅಗ್ರಹಾರದ ಸದಸ್ಯರನ್ನು ಆಯ್ಕೆ ಮಾಡುವ ಸಂದರ್ಭದಲ್ಲಿ ಕದಂಬ ರಾಜನೊಬ್ಬ ತಾನೇ ಸ್ವತಃ ನಿಂತು, ವಿದ್ವಾಂಸರಾದ ಅಭ್ಯರ್ಥಿಗಳನ್ನು ಪರೀಕ್ಷಿಸಿದನು[೩೯]. ಕೃಷ್ಣದೇವರಾಯನು ತನ್ನಿಂದ ಬಹುಮಾನಾಪೇಕ್ಷಿಗಳಾದ ಅಭ್ಯರ್ಥಿಗಳನ್ನು ಪರೀಕ್ಷಿಸುತ್ತಿದ್ದನು. ಈ ಪರೀಕ್ಷೆಗಳು ಬುದ್ಧಿ ಕೌಶಲವನ್ನು ಪ್ರದರ್ಶಿಸುವ ಸಮಾರಂಭಗಳಾಗಿದ್ದು, ಕೃಷ್ಣದೇವರಾಯನೇ ಮನಃಪೂರ್ವಕವಾಗಿ ಇವುಗಳಲ್ಲಿ ಪ್ರಮುಖ ಪಾತ್ರವನ್ನು

---

೩೫. S.I.I. IX. (II) No. 507. p. 321.

೩೬. ಪದ್ಮರಾಜ ಪುರಾಣ : ಪದ್ಮರಸ, ಸಂ.ಆರ್.ಸಿ. ಹಿರೇಮಠ. ಪು. ೩೪ V. ೭೪.

೩೭. ಸೋಮೇಶ್ವರ ಶತಕ. V. ೩೮.

೩೮. E.C.XIII. Pg. 69. p. 128.

೩೯. J.B.B.R.A.S. IX. XVII. p. 275

ವಹಿಸುತ್ತಿದ್ದನು. ಈ ಸಮಾರಂಭಗಳಲ್ಲಿ ಕೃಷ್ಣದೇವರಾಯನಿಗೆ ಅಚ್ಚು ಮೆಚ್ಚಾಗಿದ್ದ ಒಂದು ವಿಧಾನವೆಂದರೆ, ಅಪೂರ್ಣವಾದ ಪದ್ಯವೊಂದನ್ನು ಕೊಟ್ಟು ಅದನ್ನು ಒಂದು ನಿರ್ದಿಷ್ಟವಾದ ರೀತಿಯಲ್ಲಿ ಪೂರ್ಣಗೊಳಿಸುವಂತೆ ಕೇಳುವುದು[೪೦]

ಗುರು–ಶಿಷ್ಯ ಸಂಬಂಧ

ವಿದ್ಯೆಗಿಂತ ಬೇರೆಯ ಬಂಧುವಿಲ್ಲವೆಂದೂ ಗುರುವಿಗಿಂತ ಪೂಜ್ಯರು ಇಲ್ಲವೆಂದೂ ಸೋಮೇಶ್ವರನ ಅಭಿಪ್ರಾಯ. ವರ್ಣಮಾತ್ರವನ್ನು ಕಲಿಸಿದಾತನೂ ಗುರು–ಎಂದು ಅವನ ಭಾವನೆ[೪೧]. ವಿದ್ಯೆಯನ್ನು ಕಲಿಸುವುದು ವಿದ್ವಾಂಸರ ಕರ್ತವ್ಯವೆಂದೂ ತಾವು ಮಾತ್ರ ಕಲಿತು ಇತರರಿಗೆ ಕಲಿಸದವರು ಅಸ್ಪೃಶ್ಯರೆಂದೂ ಪುರಂದರದಾಸರು ಹೇಳುತ್ತಾರೆ[೪೨]. ಉತ್ತಮವಾದ ಗುರುವಿನ ಅವಶ್ಯಕತೆಯನ್ನು ಸರ್ವಜ್ಞನು ಎತ್ತಿಹೇಳಿ, ಅದಕ್ಕಾಗಿ ಅಂಥ ಗುರುವಿನ ಸೇವೆ ಮಾಡಬೇಕು ಎನ್ನುತ್ತಾನೆ. "ಗುರುವಿನ ಬಳಿ, ಅವನ ಎತ್ತಾಗಿ, ತೊತ್ತಾಗಿ, ಹಿತ್ತಲಿನ ಗಿಡವಾಗಿ, ಅವನ ಕಾಲಿನ ಒತ್ತಾಗಿ (ಚಪ್ಪಲಿಯಾಗಿ)" ಇರಬೇಕು[೪೩]. ಪುರಂದರ ದಾಸರು ಹಾಡಿದರು' ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ' ಎಂದು[೪೪]. ಆದರೆ ಸರ್ವಜ್ಞನ ಪ್ರಕಾರ, ಪೂಜ್ಯತೆಯನ್ನು ಪಡೆಯಬೇಕಾದರೆ ಅಂಥವನು ಮೊದಲು ಉತ್ತಮವಾದ ಗುರುವಾಗಬೇಕು; ತನ್ನ ನೆಲೆಯನ್ನರಿಯದ ಗುರು, ಹೊಲಬನ್ನರಿಯದ ಶಿಷ್ಯ ಮತ್ತು ಗೊತ್ತುಗುರಿಯಿಲ್ಲದ ಶಿಕ್ಷಣ, ಇದು ಕುರುಡನಾದವನು ನೀರಿಗಿಳಿದಂತಾಗುತ್ತದೆ ಎನ್ನುತ್ತಾನೆ[೪೫].

ಜನಸಾಮಾನ್ಯರ ಶಿಕ್ಷಣ

ಇದುವರೆಗೂ ವಿವರಿಸಲಾದ ಶಿಕ್ಷಣ ಪದ್ಧತಿ ಎಲ್ಲರಿಗೂ ಪಡೆಯಲು ಸಾಧ್ಯವಾಗುತ್ತಿರಲಿಲ್ಲ. ಜನಸಾಮಾನ್ಯಕ್ಕೆ ಬೇಕಾದದ್ದು ಒಂದು ರೀತಿಯ ಜನಪ್ರಿಯವಾದ ಶಿಕ್ಷಣ. ಇದನ್ನು ಎಲ್ಲರಿಗೂ ಎಟಕುವಂತೆ ಮಾಡುವುದರಲ್ಲಿ ಈ ಕಾಲ ಸುಪ್ರಸಿದ್ಧವಾಯಿತು. ಹನ್ನೆರಡನೆ ಶತಮಾನದ ಪೂರ್ವಾರ್ಧದಲ್ಲಿ ವೀರಶೈವ ಧಾರ್ಮಿಕ ಚಳವಳಿ ಆರಂಭವಾಗಿ, ಸಾಮಾನ್ಯ ಜನದ ನೈತಿಕ ಸುಧಾರಣೆಯನ್ನು ಅಂದಿನ ಜನತೆಯ ಆಡುಮಾತಿನ ಅಭಿವ್ಯಕ್ತಿಯ ಮೂಲಕ ತಂದಿತು.

---

೪೦. Mys. Gaz. II (III) p.p. 1914-15.

೪೧. ಸೋಮೇಶ್ವರ ಶತಕ : V. ೬–೮.

೪೨. ಮಾಸ್ತಿ ವೆಂಕಟೇಶ ಅಯ್ಯಂಗಾರ್ : Popular culture in Karnataka, p. 59

೪೩. ಅಲ್ಲೇ. ಪು. ೯೫.

೪೪. ಪುರಂದರದಾಸರ ಪದಗಳು : III. ೧೪೯. p. ೮೨.

೪೫. ಚನ್ನಪ್ಪ ಉತ್ತಂಗಿ : (ಸಂ.) : ಸರ್ವಜ್ಞನ ವಚನಗಳು. V. 69, p.10.

ಹದಿಮೂರನೆ ಶತಮಾನದ ವೇಳೆಗೆ ಈ ಚಳವಳಿ ತಗ್ಗಿದಂತೆ ತೋರುತ್ತದೆ. ಆದರೆ ಮತ್ತೆ ಹದಿನಾಲ್ಕನೆ ಶತಮಾನದಲ್ಲಿ ಇದು ಪುನರುಜ್ಜೀವನಗೊಂಡಿತು. ವಿಜಯನಗರ ಮತ್ತು ಎಡೆಯೂರು- ಈ ಪುನರುಜ್ಜೀವನದ ಕೇಂದ್ರಗಳಾದವು. ಹಿಂದಿನಂತೆ ಮತ್ತೆ ಈ ಕಾಲದಲ್ಲಿ ವಚನರಚನೆ ಮುಂದುವರಿಯಿತು. ನಿಜಗುಣ ಶಿವಯೋಗಿ, ಸರ್ವಜ್ಞ ಮತ್ತಿತರರು ಸಾಮಾನ್ಯ ಜನತೆಯ ಶಿಕ್ಷಣಕ್ಕೆ ಗಮನಾರ್ಹವಾದ ಸಹಾಯ ಮಾಡಿದರು.

ಜನಸಾಮಾನ್ಯರ ಭಾಷೆಯಲ್ಲಿ ಬರೆಯಲು ಹಿಂಜರಿಯುತ್ತಿದ್ದ ಬ್ರಾಹ್ಮಣ ಲೇಖಕರು ಈ ವೇಳೆಗೆ "ಮೇಲೆನ್ನದೆ ಕೀಳೆನ್ನದೆ ಸರ್ವರ ಉದ್ಧಾರಕ್ಕಾಗಿ ತಮ್ಮ ಪವಿತ್ರ ಗ್ರಂಥಗಳ ಜ್ಞಾನ ಭಾಂಡಾರವನ್ನು ತೆರೆದಿಡಲು ಧಾವಿಸಿದರು".[೪೬] ಇದೇ ಹರಿದಾಸ ಪಂಥವೆನ್ನಿಸಿಕೊಂಡಿತು. ಇದರ ಪ್ರಮುಖವಾದ ವ್ಯಾಖ್ಯಾನಕಾರರು ಪುರಂದರದಾಸರು, ಇವರಲ್ಲದೆ ಇನ್ನೂ ನೂರಾರು ಮಂದಿ ಈ ಮುಕ್ತಿಯ ಸಂದೇಶವನ್ನು ಹೊತ್ತು ವಿವೇಕಮೂಲವಾದ ಮತ್ತು ಧಾರ್ಮಿಕವಾದ ಅನುಭವಗಳ ಹಾಡುಗಳನ್ನು ಹಾಡುತ್ತಾ ದೇಶಾದ್ಯಂತ ಸಂಚಾರ ಮಾಡಿದರು[೪೭]. ಭಾಷೆಗಿಂತ ಅರ್ಥದ ಕಡೆಗೆ ಹೆಚ್ಚು ಮಹತ್ವವನ್ನು ಕೊಟ್ಟ ಈ ಒಂದು ಪಂಥವು, ಹಳೆಯ ಪದ್ಧತಿಗೆ ಜೋತುಬಿದ್ದ ಸಾಂಪ್ರದಾಯಿಕ ವಿಭಾಗದ ಜೊತೆ ಜೊತೆಗೇ ಉಳಿದು ಬಂದಿತು[೪೮].

ವೀರಶೈವರ ವಚನ ಮತ್ತು ಹರಿದಾಸ ಪದಗಳು-ಇವುಗಳಲ್ಲದೆ ಸಂಗೀತ, ಸಂವಾದ ಹಾಗೂ ಹಾಸ್ಯವನ್ನೊಳಗೊಂಡ ಕೀರ್ತನೆಗಳು ಬಹುಶಃ ವಿಜಯನಗರದ ಕಾಲಕ್ಕೆ ಸಾರ್ವಜನಿಕ ಶಿಕ್ಷಣದ ಅತ್ಯಂತ ಶಕ್ತವಾದ ಸಾಧನಗಳಾದುವು. ಹದಿನೆಂಟನೆಯ ಶತಮಾನವು, ಯಕ್ಷಗಾನವೆಂಬ ಜಾನಪದ ನಾಟಕ ಪ್ರಕಾರದ ಉದಯವನ್ನು ಕಂಡಿತು[೪೯]. ಅವುಗಳಿಗೆ ಸಂಗೀತ-ಕುಣಿತ ಮತ್ತು ಸಂವಾದಗಳನ್ನು ಒಳಗೊಂಡ ಒಂದು ಬಿಗಿಯಾದ ಬಂಧವಿದೆ. ಇದಲ್ಲದೆ ಅಂದು ಮನೆಯಿಂದ ಮನೆಗೆ ಹೋಗಿ, ದೈನಂದಿನ ಜೀವನದ ದೃಶ್ಯಗಳನ್ನು ಅತ್ಯಂತ ಕುಶಲವಾಗಿ ನಾಟ್ಯರೂಪದಲ್ಲಿ ಅಭಿನಯಿಸಿ ತೋರಿಸುತ್ತಿದ್ದ, ಜಾತಿಗಾರ ಅಥವಾ ವೇಷಗಾರರು ಇದ್ದರು[೫೦].

---

೪೬. ಡಿ.ಎಲ್. ನರಸಿಂಹಾಚಾರ್ : Article on Kannada Literature. VSC. p. 361.

೪೭. ಮಾಸ್ತಿ. p. ೮೯-೯೦.

೪೮. op. cit. No. ೩೦.

೪೯. ರಂ. ಶ್ರೀ ಮುಗಳಿ : ಕನ್ನಡ ಸಾಹಿತ್ಯ ಚರಿತ್ರೆ. ಪು. ೧೮೫.

೫೦. ಅಲ್ಲೇ ಪು. ೧೮೫.

ವಿಜಯನಗರದ ಅರಮನೆಯಲ್ಲಿ ಸುಶಿಕ್ಷಿತರಾದ ಸ್ತ್ರೀಯರು ಅನೇಕ ಬಗೆಯ ಕೆಲಸಗಳನ್ನು ನಿರ್ವಹಿಸುತ್ತಿದ್ದರು. ಪವಿತ್ರ ಗ್ರಂಥಗಳ ಪಠನ, ಅರಮನೆಯ ಸ್ತ್ರೀಯರಿಗೆ ಶಿಕ್ಷಣ ನೀಡುವ ಒಂದು ವಿಧಾನವಾಗಿತ್ತಲ್ಲದೆ, ಆ ಕಾಲದ ಕೆಲವು ಸ್ತ್ರೀಯರಿಗೆ ಗೌರವಯುತವಾದ ವೃತ್ತಿಯೂ ಆಗಿತ್ತು. ಇಷ್ಟಲ್ಲದೆ, ಅರಮನೆಯ ಒಳಗಿನ ಭಿತ್ತಿಗಳನ್ನು ಅಲಂಕರಿಸಿದ ವರ್ಣಚಿತ್ರಗಳು ಕೇವಲ ಅಲಂಕಾರಕ್ಕೆ ಮಾತ್ರವಲ್ಲದೆ, ಅರಮನೆಯ ನಿವಾಸಿಗಳಿಗೆ ಶಿಕ್ಷಣ ನೀಡುವ ಸಾಧನಗಳೂ ಆಗಿದ್ದುವು. ಪಾಯಸ್(Paes ಎಂಬಾತನು, ಇಂಥದೊಂದು ಭವನವನ್ನು ಕಂಡು ಹೀಗೆ ಬರೆದಿದ್ದಾನೆ: "ಇಲ್ಲಿನ ವರ್ಣಚಿತ್ರಗಳಲ್ಲಿ ಭಾರತೀಯರಿಂದ ಹಿಡಿದು ಪೋರ್ಚುಗೀಸರ ತನಕ, ಎಲ್ಲಾ ಜನಗಳ ನಡೆವಳಿಕೆಗಳನ್ನು ಕಾಣಬಹುದಾಗಿದೆ. ರಾಜನ ಅಂತಃಪುರದ ಸ್ತ್ರೀಯರು ಕುರುಡ ಭಿಕ್ಷುಕರಿಂದ ಹಿಡಿದು ಪ್ರತಿಯೊಬ್ಬನೂ ತನ್ನ ತನ್ನ ದೇಶದಲ್ಲಿ ಯಾವ ರೀತಿಯಲ್ಲಿ ನಡೆದುಕೊಳ್ಳುತ್ತಾನೆ ಎಂಬುದನ್ನು ತಿಳಿಯಲಿ ಎಂಬ ಉದ್ದೇಶದಿಂದ ಇವು ಚಿತ್ರಿತವಾಗಿವೆ".[೫೧]

ಒಳ್ಳೆಯ ನರ್ತನಕ್ಕೆ ಅಗತ್ಯವಾದದ್ದು ಸುಕುಮಾರವಾದ ಶರೀರ. ಇದಕ್ಕಾಗಿ ಸ್ತ್ರೀಯರು ಅನೇಕ ರೀತಿಯ ವ್ಯಾಯಾಮವನ್ನು ಮಾಡುತ್ತಿದ್ದರು. ವಿಜಯನಗರದಲ್ಲಿ ಅರಮನೆಗೆ ಸಂಬಂಧಿಸಿದಂತೆ ಇಂಥ ಒಂದು ವ್ಯಾಯಾಮಶಾಲೆ ಇತ್ತು. 'ಈ ಗೃಹದ ಒಂದು ತುದಿಯ ಎಡ ಬದಿಗೆ ಚಿತ್ರಾಲಂಕಾರಗಳಿಂದ ಕೂಡಿದ ಒಂದು ಏಕಾಂತ ಸ್ಥಳವಿತ್ತು. ಅಲ್ಲಿ ಸ್ತ್ರೀಯರು ಕೈ ಕಾಲುಗಳನ್ನು ಚಾಚಿ ತಮ್ಮ ಶರೀರವನ್ನು ಸಡಿಲಗೊಳಿಸಲೋಸುಗ ಜೋಲಾಡುವ ಅಂಗಸಾಧನೆಗಳಲ್ಲಿ ತೊಡಗುತ್ತಿದ್ದರು. ನರ್ತನವು ಸೊಗಸಾಗಬೇಕಾದರೆ, ನರ್ತಕಿಯ ಶರೀರವು ಹೇಗೆ ಬಾಗಿ ಬಳುಕಬೇಕೆನ್ನುವ ವಿಚಾರದಲ್ಲಿ ಶಿಕ್ಷಣ ಕೊಡುತ್ತಿದ್ದರು"[೫೨]. ವಿಜಯನಗರದ ಹೊರಗೂ ಇಂಥ ನರ್ತನ ಶಾಲೆಗಳಿದ್ದವು[೫೩].

ಮುಸ್ಲಿಮರ ಶಿಕ್ಷಣ

ಬಹಮನಿ ಅರಸರು ತಮ್ಮ ಪ್ರಜೆಗಳ ವಿದ್ಯಾಭ್ಯಾಸಕ್ಕೆ ಉತ್ತಮವಾದ ಏರ್ಪಾಡುಗಳನ್ನು ಮಾಡಿದರು. ಆ ಬಗ್ಗೆ ಅವರು ಆಳಿದ ಪ್ರದೇಶಗಳಲ್ಲಿ ಇಂದಿಗೂ ಸಾಕ್ಷ್ಯಗಳನ್ನು ಕಾಣಬಹುದು. ಬಹು ಮಟ್ಟಿಗೆ ಮಸೀದಿಗಳಿಗೆ ಲಗತ್ತಾದ ಮುಕ್ತಾಬ

---

೫೧. F.E. p. ೨೭೪.

೫೨. ಅಲ್ಲೇ. ಪು. ೨೭೭.

೫೩. E.C. XII. pg. 29. p. 36.

ಮತ್ತು ಮದರಸಾಗಳು ಶಿಕ್ಷಣದ ಮಾಧ್ಯಮವಾಗಿದ್ದುವು[೫೪]. ಬಹಮನಿ ರಾಜ್ಯದ ಹೊರವಲಯವಾದ ಪಶ್ಚಿಮ ತೀರಗಳಲ್ಲಿ ಇದೇ ವ್ಯವಸ್ಥೆ ನೆಲೆಗೊಂಡಿತ್ತು. ಕ್ರಿ.ಶ.೧೩೪೩ ರಂದು ಈ ಭಾಗದಲ್ಲಿ ಪ್ರವಾಸ ಮಾಡಿದ ಇಬನ್ ಬತೂತನು (Ibn Batuta) ಹೀಲಿ ಎಂಬ ಊರಿನ ಮಸೀದಿಯಲ್ಲಿ, ಮಸೀದಿಯ ನಿಧಿಯಿಂದ ಪೋಷಿತವಾದ ವಿದ್ಯಾರ್ಥಿವೇತನಗಳನ್ನು ಪಡೆದು ಅನೇಕ ಶಾಸ್ತ್ರಗಳನ್ನು ಅಭ್ಯಸಿಸುತ್ತಿದ್ದ ಅನೇಕ ವಿದ್ಯಾರ್ಥಿಗಳನ್ನು ಕಂಡನು. ಇದೇ ಪ್ರವಾಸಿಯು ಹಿನಾವರ್ (ಹೊನ್ನಾವರ)ದಲ್ಲಿ ಹುಡುಗಿಯರಿಗಾಗಿ ನಡೆಸಲಾದ ಇಪ್ಪತ್ತೊಂದು ಶಾಲೆಗಳನ್ನು, ಬೇರಲ್ಲಿಯೂ ಕಾಣದಿದ್ದ ಒಂದು ಮಾದರಿಯಲ್ಲಿದ್ದುದನ್ನು ಕಂಡನು. ಖುರಾನನ್ನು ಬಾಯಿಪಾಠ ಮಾಡುತ್ತಿದ್ದ ಹೊನ್ನಾವರದ ಮುಸ್ಲಿಮ್ ಮಹಿಳೆಯರನ್ನು ಆವನು ವಿಶೇಷವಾಗಿ ಹೊಗಳಿದನು[೫೫].

ಮತ್ತೆ ಬಹಮನಿ ರಾಜ್ಯಗಳ ವಿಷಯಕ್ಕೆ ಬರೋಣ. ವಿದ್ಯಾಪ್ರಸಾರಕ್ಕೆ ತೃಪ್ತಿಕರವಾದ ಏರ್ಪಾಡುಗಳನ್ನು ಮಾಡಿದ ರಾಜರುಗಳಲ್ಲಿ ಎರಡನೆಯ ಮಹಮ್ಮದನು ಮೊದಲಿಗ. ಈತ ಬಹಮನಿ ರಾಜ ಸಂತತಿಯಲ್ಲಿ ಐದನೆಯವನು. ತನ್ನ ತಂದೆಯಾದ ಮೊದಲನೆ ಅಲ್ಲಾ ಉದ್ದೀನನಿಂದ ಉತ್ತಮವಾದ ಶಿಕ್ಷಣವನ್ನು ಪಡೆದಿದ್ದನು. ಅವನು ಕ್ರಿ.ಶ.೧೩೭೮ರಲ್ಲಿ ಅನಾಥರಿಗಾಗಿ ಮದರಸಾವೊಂದನ್ನು ಸ್ಥಾಪಿಸಿದನು; ಅಲ್ಲಿ ಆ ಮಕ್ಕಳಿಗೆ ಆಶನ-ವಸತಿಗೆ ಹಾಗೂ ಉಚಿತ ಶಿಕ್ಷಣಕ್ಕೆ ಅವಕಾಶವಿತ್ತು. ಆ ಸಂಸ್ಥೆಯ ಅಧ್ಯಾಪಕರು ಸುಶಿಕ್ಷಿತರಾಗಿದ್ದರು. ಗುಲ್‌ಬರ್ಗಾ, ಬೀದರ್ ಮತ್ತಿತರ ಕಡೆಗಳಲ್ಲಿ ಶಾಲೆಗಳು ಆತನಿಂದ ಸ್ಥಾಪಿತವಾದವು. ಹಿಂದೆ ಹೇಳಿದ ಅನಾಥಾಲಯದಲ್ಲಿ ಹೇಗೋ, ಹಾಗೆ ಈ ಶಾಲೆಗಳಲ್ಲಿ ಕೂಡ ಶಿಕ್ಷಣದ ಮತ್ತು ಉಚಿತ ವಸತಿಯ ಏರ್ಪಾಟು ಇತ್ತು[೫೬]. ಎರಡನೆಯ ಮಹಮ್ಮದನು ಉತ್ತಮಯೋಧನಾಗಿ ಯುದ್ಧಶಿಕ್ಷಣದಲ್ಲಿ ಆಸಕ್ತಿವಹಿಸಿದ್ದನು. ಅದಕ್ಕಾಗಿ ಅವನೇ ಸೈನಿಕ ಶಿಕ್ಷಣ ಶಾಲೆಗಳನ್ನು ಸ್ಥಾಪಿಸಿದನು. ಅಲ್ಲಿ ಸದ್ವಂಶಕ್ಕೆ ಸೇರಿದ ಮಕ್ಕಳು ಸೈನಿಕ ಶಿಕ್ಷಣ ಪಡೆಯುತ್ತಿದ್ದರು[೫೭].

ಆದರೆ ಬಹಮನಿ ಅರಸರ ಕಾಲದಲ್ಲಿ ವಿದ್ಯಾಭ್ಯಾಸಕ್ಕೆ ಅತ್ಯುತ್ತಮವಾದ ಆಶ್ರಯದಾತನಾಗಿದ್ದವನು ಮಹಮ್ಮದ್ ಗವಾನ್. ಈತನು ಬಹಮನಿಯ ಇತ್ತೀಚಿನ

---

೫೪. Mir Ahmed Ali Khan : "The condition of Education under the Bahamanies" Proceedings of Indian History Congress. 1941. pp. 388 ff.

೫೫. Mahdhi Hussain (Ed) : The Rehla of Ibn Batuta. p. 170.

೫೬. Mer Ahmed Ali Khan : op. cit

೫೭. ಅಲ್ಲೇ.

ಅರಸರಲ್ಲಿ ಮಂತ್ರಿಯಾಗಿದ್ದುದಲ್ಲದೆ, ಕ್ರಿ.ಶ.೧೪೫೮ ರಿಂದ ೧೪೮೧ರ ವರೆಗೆ ಬಹಮನಿ ರಾಜವಂಶದ ಸೂತ್ರಧಾರಿಯಾಗಿದ್ದನು. ಅವನ ನೆನಪಿಗೆ ಸಾಕ್ಷಿಯಾಗಿ ಇಂದಿಗೂ ಬೀದರಿನಲ್ಲಿ ಉಳಿದಿರುವುದು ಅವನು ಕ್ರಿ.ಶ.೧೪೭೨ರಲ್ಲಿ ತನ್ನ ಸ್ವಂತ ಹಣದಿಂದ ಕಟ್ಟಿಸಿದ ಕಾಲೇಜು. ಈ ಮಹಾ ವಿದ್ಯಾಸಂಸ್ಥೆ ಖುರಾಸಾನ್ ಮತ್ತಿತರ ಇಸ್ಲಾಮ್ ದೇಶಗಳಲ್ಲಿದ್ದ ಇಂಥ ವೈಭವಾನ್ವಿತ ಸಂಸ್ಥೆಗಳ ಮಾದರಿಯಲ್ಲಿ ಯೋಜಿತವಾಗಿದೆ. ಅಲ್ಲಿ ಅವನು ದಕ್ಷರಾದ ತತ್ವಶಾಸ್ತ್ರಜ್ಞರನ್ನು ಮಾತ್ರವಲ್ಲದೆ, ವಿಜ್ಞಾನಿಗಳನ್ನೂ ನೇಮಿಸಿದ್ದನು. ಅಷ್ಟೇ ಅಲ್ಲದೆ, ತಾನೇ ಸ್ವತಃ ಪ್ರಾಧ್ಯಾಪಕತನವನ್ನೂ ವಹಿಸಿದನು. ಮೂರು ಸಾವಿರ ಹಸ್ತಪ್ರತಿಗಳನ್ನು ಒಳಗೊಂಡ ಪುಸ್ತಕ ಭಂಡಾರವನ್ನು ಕೊಟ್ಟನು. ಅವನ ಸ್ವಂತ ಪುಸ್ತಕಭಂಡಾರದಲ್ಲಿ ಒಂದು ಸಾವಿರ ಹಸ್ತಲಿಖಿತ ಪ್ರತಿಗಳಿದ್ದುವು[೫೮].

ಮಹಮ್ಮದ್ ಗವಾನ್ ಸ್ಥಾಪಿಸಿದ ಪ್ರೌಢ ವಿದ್ಯಾಸಂಸ್ಥೆ (ಕಾಲೇಜು)ಯಲ್ಲಿ ಎಲ್ಲಾ ಕಾಲಕ್ಕೂ ವಾಸಯೋಗ್ಯವಾದ ಕೊಠಡಿಗಳಿದ್ದುವು. ಈ ಮೂರಂತಸ್ತಿನ ಕಟ್ಟಡದಲ್ಲಿ ಇಂಥ ಮೂವತ್ತಾರು ಕೋಣೆ (suites) ಗಳಿದ್ದು, ಒಂದೊಂದು ಕೊಠಡಿಗೂ ಮೂರು ಮಂದಿ ವಿದ್ಯಾರ್ಥಿಗಳಂತೆ ಒಟ್ಟು ನೂರಎಂಟು ವಿದ್ಯಾರ್ಥಿಗಳ ವಾಸಕ್ಕೆ ಅನುಕೂಲವಾಗಿತ್ತು. ಒಂದೊಂದು ಕೊಠಡಿಯಲ್ಲಿ ಇಬ್ಬರು ಇರುವಂತಹ, ಹನ್ನೆರಡು ಜನ ಪ್ರಾಧ್ಯಾಪಕರ ವಾಸಕ್ಕೂ ಬೇರೆ ಬೇರೆಯ ಆರು ಕೊಠಡಿಯಲ್ಲಿ, ವಿದ್ಯಾರ್ಥಿಗಳಿಗೆ ಉಚಿತವಾದ ಅಶನ-ವಸತಿಯ ಏರ್ಪಾಡಿತ್ತು[೫೯]. ಇಂದಿಗೂ ಬೀದರಿನಲ್ಲಿ ಮಹಮ್ಮದ್ ಗವಾನನಿಂದ ನಿರ್ಮಿತವಾದ ಈ ಮಹಾವಿದ್ಯಾಲಯವು, ಬೀದರಿನ ಗತವೈಭವವನ್ನು ನೆನಪಿಗೆ ತರುವ ಒಂದು ಉಜ್ವಲವಾದ ವಜ್ರದಂತಿದೆ. "ಮಹಾಮಂತ್ರಿಯಾದ ಮಹಮ್ಮದ್‌ಗವಾನನಿಂದ ಪೋಷಿತವಾದ ಜ್ಞಾನದ ಕಾರಂಜಿಯಂತೆ, ಮುಂಭಾಗದಲ್ಲಿ ಬಣ್ಣ ಬಣ್ಣದ ಹೆಂಚುಗಳಿಂದ ಆಕರ್ಷಕವಾದ ಈ ಕಟ್ಟಡವು ಭಾರತೀಯ ಹಾಗೂ ವಿದೇಶೀಯ ವಿದ್ವಾಂಸರನ್ನೊಳಗೊಂಡು, ಬೀದರನ್ನು ಅಂದಿನ ಜ್ಞಾನತೃಷಿತರ ಸಂಗಮಸ್ಥಾನವನ್ನಾಗಿ ಮಾಡಿದ್ದಿರಬೇಕು"[೬೦].

ಬಹಮನಿ ಅರಸರ ಬಳಿಕ ಬಂದ ಆದಿಲ್ ಷಾಹಿಗಳು ಬಿಜಾಪುರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು, ಸುಮಾರು ನೂರೈವತ್ತು ವರ್ಷಗಳ ಕಾಲ ಉತ್ತರ ಕರ್ಣಾಟಕವನ್ನು ಆಳಿದರು. ವಿದ್ಯಾಪ್ರಸಾರಕ್ಕೆ ಅವರು ಆಳುತ್ತಿದ್ದ ಪ್ರದೇಶಗಳಲ್ಲಿ

---

೫೮. ಅಲ್ಲೇ.

೫೯. Yazdani G. : Bidar, Its history and monuments. pp. 24. ff. and 91-99.

೬೦. Sherwani H.K. : The Bahamani Kingdom. p. 39.

ಏನು ಖಚಿತವಾದ ಕ್ರಮಗಳನ್ನು ಕೈಗೊಂಡರೆಂಬುದು ನಮಗೆ ತಿಳಿಯದಾದರೂ ಅವರು ಸಾರ್ವತ್ರಿಕ ಮತ್ತು ತಾಂತ್ರಿಕ ಶಿಕ್ಷಣಕ್ಕೆ ತಕ್ಕಷ್ಟು ಗಮನ ಕೊಟ್ಟಿರಬೇಕೆನ್ನುವುದಕ್ಕೆ ಆಧಾರಗಳಿವೆ. ಈ ರಾಜಮನೆತನದ ಅನೇಕ ರಾಜರು ಸ್ವತಃ ವಿಶೇಷ ಸುಸಂಸ್ಕೃತರೂ ಬಹುಮುಖ ಸಾಮರ್ಥ್ಯವುಳ್ಳವರೂ ಆಗಿ ವಿದ್ವಾಂಸರಿಗೆ ಆಶ್ರಯದಾತರಾಗಿದ್ದರು. ಅವರ ಕಾಲದಲ್ಲಿ ಬಿಜಾಪುರದ ಸುಲ್ತಾನರ ಆಸ್ಥಾನವು ಅರೇಬಿಕ್ ಮತ್ತು ಪರ್ಷಿಯನ್ ಭಾಷೆಗಳಲ್ಲಿ ವಿದ್ವಾಂಸರಾದವರ ಆಶ್ರಯಸ್ಥಾನವಾಗಿತ್ತು. ಜೊತೆಗೆ, ಆದಿಲ್ ಷಾಹಿ ಅರಸರು ಬಿಜಾಪುರವನ್ನು ಕೇವಲ ವಿದ್ವತ್ ಕೇಂದ್ರವನ್ನಾಗಿ ಮಾತ್ರವಲ್ಲದೆ, ಆ ಕಾಲದ ಅತ್ಯಂತ ಸುಂದರವಾದ ನಗರಗಳಲ್ಲಿ ಒಂದನ್ನಾಗಿ ಮಾಡಿದರು. ಅವರ ಆಶ್ರಯದಲ್ಲಿದ್ದ ಶಿಲ್ಪಿಗಳು ವಾಸ್ತುಶಿಲ್ಪದಲ್ಲಿ ಹಾಗೂ ವೈಜ್ಞಾನಿಕ ವಿದ್ಯೆಯಲ್ಲಿ ಸುಪ್ರಸಿದ್ಧರಾಗಿದ್ದರು. ಕಡೆಯದಾಗಿ ಆದಿಲ್‌ಷಾಹಿ ಅರಸರು, ಹೊರಗಿನಿಂದ ಆಗಂತುಕರಂತೆ ಕರ್ನಾಟಕಕ್ಕೆ ಬಂದವರಾದರೂ ಬಹು ಬೇಗನೆ ತಾವು ಆಳುತ್ತಿದ್ದ ಪ್ರದೇಶದ ಜನರೊಂದಿಗೆ ಹೊಂದಿಕೊಂಡು ತಾವು ಅಲ್ಲಿಯವರೇ ಎಂಬಂತೆ ನಡೆದುಕೊಂಡರು. ಈ ಕಾರಣಕ್ಕಾಗಿಯೆ ವಿಜಾಪುರದ ಜನತೆ ಇಂದಿಗೂ ಅವರನ್ನು ಕೃತಜ್ಞತೆಯಿಂದ ನೆನಪಿಸಿಕೊಳ್ಳುತ್ತದೆ[೬೧].

ವಿಜ್ಞಾನ ಮತ್ತು ವೈದ್ಯವಿದ್ಯೆ

ವಿಜಯನಗರದ ಕಾಲದಲ್ಲಿ ದೊರೆಯುವ ತೀರ ಮೊತ್ತಮೊದಲನೆ ವೈದ್ಯ ಗ್ರಂಥ 'ಆಯುರ್ವೇದ ಸುಧಾನಿಧಿ' ಎನ್ನುವುದು. ಇದನ್ನು ಸಾಯಣರ ಅಪ್ಪಣೆಯ ಮೇರೆಗೆ ಏಕಾಂಬರನಾಥನು ಬರೆದನು[೬೨]. ಅವನ ಮೊಮ್ಮಗನಾದ ಶ್ರೀ ಶೈಲನಾಥನು 'ಪ್ರಶ್ನೋತ್ತರ ರತ್ನ ಮಾಲೆ' ಎಂಬ ವೈದ್ಯಕೀಯ ಗ್ರಂಥವನ್ನು ಬರೆದನು[೬೩]. ಕ್ರಿ.ಶ. ೧೧೫೦ ರಲ್ಲಿ ಶ್ರೀಧರ ದೇವನು 'ವೈದ್ಯಾಮೃತ' ಎಂಬ ಕೃತಿಯನ್ನು ರಚಿಸಿದ್ದಾನೆ[೬೪].

---

೬೧. Basu, K.K. : Bijapur Court Culture, in the Proceedings of Indian History Congress, 1941. pp. 598-599 and Cambridge History of India, Vol. IV, pp. ೫೭೦-೫೭೪. ೬೨. V.S.C. p. ೩೦೧.

೬೨. V.S.C. p. 301.

೬೩. Srikanta Shastri S. : Sanskrit Literature under Vijanagar. V.S.C., p.301.

ಡಿ.ಎಲ್. ನರಸಿಂಹಾಚಾರ್ಯರು (V.S.C. p. 364ರಲ್ಲಿ) ಹೇಳುತ್ತಾರೆ: ಹರಿಹರ ರಾಜನ ಆಶ್ರಯದಲ್ಲಿದ್ದ ಮಂಗರಾಜನು (೧೩೬೦) ಬರೆದ ಖಗೇಂದ್ರ ಮಣಿದರ್ಪಣದಲ್ಲಿ, ಅನೇಕ ಬಗೆಯ ವಿಷಗಳ ಮತ್ತು ಅವುಗಳ ಪರಿಣಾಮವನ್ನೂ, ಅದರ ಪ್ರತಿರೋಧನ (antidotes)ವನ್ನೂ ಅತ್ಯಂತ ಸಮರ್ಥವಾದ ರೀತಿಯಲ್ಲಿ ವಿವರಿಸಲಾಗಿದೆ ಎಂದು.

೬೪. ಕವಿಚರಿತೆ. II pp. ೧೬೬-೬೭.

ಇದರಲ್ಲಿ ಚಿಕಿತ್ಸೆಯ ವಿಧಾನಗಳನ್ನೂ ಮಂತ್ರಗಳನ್ನೂ ಹೇಳಲಾಗಿದೆ. ಅನಂತರದ ಲೇಖಕ ಸಾಳ್ವನು (ಕ್ರಿ.ಶ. ೧೫೫೦) ಶಾರೀರದ ಬೇನೆಗಳಿಗೆ ಔಷಧಿಯಾಗಿ ಚೂರ್ಣಗಳನ್ನು ತಯಾರಿಸುವ ಕ್ರಮಗಳನ್ನು ವಿವರಿಸಿದ್ದಾನೆ[೧೫]. ಸುಮಾರು ೧೫೭೦ರಲ್ಲಿ ನರಸಿಂಹಶಾಸ್ತ್ರೀ ಎನ್ನುವವರು 'ವೈಧ್ಯಸಾರ ಸಂಗ್ರಹ'ವೆಂಬ ಗ್ರಂಥವನ್ನು ಬರೆದಿದ್ದಾರೆ. ಚಿಕ್ಕದೇವರಾಯರ ಕಾಲದಲ್ಲಿ ಒಬ್ಬ ಜೈನ ವಿದ್ವಾಂಸನು 'ವೈದ್ಯ ನಿಘಂಟು ಸಾರ.[೧೬] ಎಂಬ ನಿಘಂಟನ್ನು ರಚಿಸಿದ್ದಾನೆ[೧೭]. ಸು. ೧೭೫೦ರಲ್ಲಿ ತಿಮ್ಮರಾಜಗೌಡನು ಸ್ತ್ರೀಯರಿಗೆ ಸಂಬಂಧಿಸಿ ರೋಗಗಳನ್ನು ಮಾತ್ರ ಕುರಿತ 'ಸ್ತ್ರೀ ವೈದ್ಯ. ಎಂಬ ಗ್ರಂಥವನ್ನು ಬರೆದಿದ್ದಾನೆ[೧೮]. ಕೆಳದಿಯ ಅರಸನಾದ ಮೊದಲನೆಯ ಬಸವರಾಜನ (ಕ್ರಿ.ಶ. ೧೬೯೯-೧೭೩೭) ಪ್ರೋತ್ಸಾಹದಿಂದ ರಚಿತವಾದ 'ಶಿವತತ್ವ ರತ್ನಾಕರ'ವೆಂಬ ನಿಘಂಟು, ವಿಸ್ತಾರವಾದ ರೀತಿಯಲ್ಲಿ ಈ ಕೃತಿಯ ಲೇಖಕನಿಗೆ ವೈದ್ಯಕೀಯ ವಿಜ್ಞಾನದಲ್ಲಿ ಬತ್ತದ ಚಿಲುಮೆಯಂತಿರುವ ಧನ್ವಂತರಿ, ಅಶ್ವಿನಿ ಮತ್ತು ಚರಕ ಇವರ ಕೃತಿಗಳನ್ನು ಕೃತಿಗಳನ್ನು ಕುರಿತು ವಿವರಿಸುತ್ತದೆ[೧೯]. ಅದು ಆಯುರ್ವೇದದ ಉಗಮವನ್ನು ಕುರಿತು ಹೇಳುವುದಲ್ಲದೆ ಅದರ ಅಷ್ಟಾಂಗಗಳನ್ನೂ ಚತುರ್ವಿಧ ಚಿಕಿತ್ಸಾಕ್ರಮವನ್ನೂ ತಿಳಿಸುತ್ತದೆ. ಮುಂದೆ ವೈದ್ಯನ ಲಕ್ಷಣಗಳು ವಿವರಿಸಲ್ಪಟ್ಟಿವೆ. ಅನಂತರದ ವಿಷಯ ಪಚನ ಕ್ರಿಯೆಯನ್ನು ಕುರಿತದ್ದು. ಅದಾದ ಮೇಲೆ ಷಡ್ರುಚಿಗಳ ಭೇದವನ್ನೂ ಅವುಗಳ ಸ್ವರೂಪ ಹಾಗೂ ಪರಿಣಾಮವನ್ನೂ ಹೇಳಲಾಗಿದೆ. ಮುಂದೆ ರೋಗಪರೀಕ್ಷೆಯ ವಿಷಯವನ್ನೂ ಅಂಗರಚನಾ ಶಾಸ್ತ್ರವನ್ನೂ ವಿವರಿಸಲಾಗಿದೆ. ಅನಂತರ ವಿವಿಧ ನಾಡೀಸ್ಪಂದನದ ವಿಚಾರವನ್ನೂ ಖಾಯಿಲೆಗಳಿಗೆ ಅನುಗುಣವಾಗಿ ಅದರಲ್ಲಾಗುವ ವ್ಯತ್ಯಾಸಗಳನ್ನೂ ಹೇಳಲಾಗಿದೆ. ಅನಂತರ ಜ್ವರಗಳಲ್ಲಿರುವ ಪ್ರಭೇದಗಳನ್ನೂ ಅವುಗಳ ಪರಿಣಾಮವನ್ನು ಮತ್ತು ಯಾವ ಯಾವ ಋತುಗಳಲ್ಲಿ ಯಾವ ಯಾವ ಔಷಧಿಗಳನ್ನು ಕೊಡುವುದು ಉತ್ತಮವೆನ್ನುವ ವಿಚಾರವನ್ನು ಹೇಳಲಾಗಿದೆ[೨೦].

ನಾವು ಪರಿಶೀಲಿಸುತ್ತಿರುವ ಈ ಕಾಲಮಾನದಲ್ಲಿ ಅನೇಕ ವೈದ್ಯಕೀಯ ಗ್ರಂಥಗಳು ರಚಿತವಾದರೂ ಔಷಧಿಗಳ ಪ್ರಯೋಗ ಪದ್ಧತಿಯನ್ನು ಕುರಿತವು ಕೆಲವೇ ಕೆಲವು.

---

೧೫. ಅಲ್ಲೇ ಪು. ೨೫೧.

೧೬ ಅಲ್ಲೇ ಪು. ३०१.

೧೭. M.A.R. ೧೯೨೧. p. ३३.

೧೮. ಕವಿಚರಿತೆ, III. ಪು. ೧೦೨.

೧೯. S.T.R.P. 28.

೨೦. ಅಲ್ಲೇ. ಪು. ೨೮.

'ವೈದ್ಯರಾಜ ವಲ್ಲಭಂ' ಎಂಬ ಪ್ರಬಂಧವನ್ನು ಬರೆದ ಲಕ್ಷ್ಮಣ ಪಂಡಿತನು (ಇವನ ವಿಚಾರವನ್ನು ಆಗಲೇ ಹೇಳಿದೆ) ಎರಡನೆ ಬುಕ್ಕರಾಯನ ಆಸ್ಥಾನದಲ್ಲಿ ರಾಜ ವೈದ್ಯನಾಗಿದ್ದನು[೭೧]. ಶಿಂಗೇಯಭಟ್ಟನೆಂಬಾತನು ಇನ್ನೊಬ್ಬ ಸುಪ್ರಸಿದ್ಧ ವೈದ್ಯ. ಕ್ರಿ.ಶ. ೧೩೮೮ರಲ್ಲಿ ಒಂದು ದಾಖಲೆಯು ಈತನು ವೈದ್ಯ ಚಿಕಿತ್ಸೆಯಲ್ಲಿ, ಅದರಲ್ಲೂ ರಸ ವೈದ್ಯವಿಧಾನದಲ್ಲಿ ಅದ್ವಿತೀಯನಾಗಿದ್ದ ನೆಂದು ಹೇಳುತ್ತದೆ. ಅವನು ಹೆನ್ನೆನದಿಯನ್ನು ಪೆನುಗೊಂಡೆಗೆ ತಂದ ಜಲಸೂತ್ರನೂ ಆಗಿದ್ದನು (Hydraulic Engineer)[೭೨]. ಹದಿನೈದನೆ ಶತಮಾನದಲ್ಲಿ, ಎರಡನೆ ದೇವರಾಯನ ಕಾಲದಲ್ಲಿ 'ಸಾಲಗ್ರಾಮ' ಎಂದು ಹೆಸರಾದ ಒಂದು ವೈದ್ಯರ ತಂಡವೇ ಇತ್ತು[೭೩].

ಪಶುವೈದ್ಯ ವಿಜ್ಞಾನ

ಪಶುವೈದ್ಯ ವಿಜ್ಞಾನದಲ್ಲಿ ಬಹುಮಟ್ಟಿಗೆ, ಆನೆ ಕುದುರೆಗಳಿಗೆ ಸಂಬಂಧಿಸಿದ ಗ್ರಂಥಗಳಿವೆ. ಕಾರಣ, ಆನೆ ಕುದುರೆಗಳು ಯುದ್ಧಕ್ಕೆ ಉಪಯುಕ್ತವಾದ ಪ್ರಾಣಿಗಳಾಗಿದ್ದವು. ಸುಮಾರು ಕ್ರಿ.ಶ.೧೫೦೦ರಲ್ಲಿ ಬಾಚರಸನು ಅಶ್ವವೈದ್ಯವನ್ನು ಬರೆದನು[೭೪]. ಪಶುವೈದ್ಯದಲ್ಲಿ ಇದರ ಅನಂತರ ಬಂದದ್ದು 'ಅಶ್ವಶಾಸ್ತ್ರ'. ಇದು ಕ್ರಿ.ಶ.೧೬೨೫ರಲ್ಲಿ ರಾಮಚಂದ್ರನೆಂಬಾತನಿಂದ ರಚಿತವಾಯಿತು[೭೫]. ಇದು, ಶಾಲಿಹೋತ್ರನ (ಇದೇ ಹೆಸರಿನ) ಗ್ರಂಥದ ಭಾಷಾಂತರ. ಇದರಲ್ಲಿ ಕುದುರೆಗಳ ಖಾಯಿಲೆಗಳನ್ನು, ಚಿಕಿತ್ಸಾಕ್ರಮಗಳನ್ನು, ಮತ್ತು ಕುದುರೆಗಳನ್ನು ಪಳಗಿಸುವ, ತರಬೇತು ಕೊಡುವ ವಿಧಾನಗಳನ್ನು ಹೇಳಲಾಗಿದೆ[೭೬]. ಸುಮಾರು ೧೬೨೭ರಲ್ಲಿ ಪದ್ಮಣ ಪಂಡಿತನು 'ಹಯಸಾರ ಸಮುಚ್ಚಯ'ವೆಂಬ ಸ್ವತಂತ್ರ ಕೃತಿಯನ್ನು ಬರೆದಿದ್ದಾನೆ[೭೭]. ಕೆಳದಿಯ ಅರಸನಾದ ವೆಂಕಟಪ್ಪ ನಾಯಕನ ಆಶ್ರಯದಲ್ಲಿ, ಒಬ್ಬ ಅಶ್ವ ನಿಪುಣನು 'ಮಾನಪ್ರಿಯ' ವೆಂಬ ವಿಸ್ತಾರವಾದ ಕೃತಿಯನ್ನು ರಚಿಸಿದನು[೭೮]. ಇನ್ನೊಂದು ವಿಸ್ತಾರವಾದ ಪ್ರಕರಣ ಗ್ರಂಥ, ಇದೇ ವಿಷಯದ ಮೇಲೆ, 'ಶಿವತತ್ವರತ್ನಾಕರ'.

---

೭೧. Nilakanta Sastry K.A. and Venkataramanayya N.: Further Sources of Vijayanagar History, I.P.2.

೭೨. E.C., X. Gd. 6.

೭೩. Rice L.: Mysore and Coorg from Inscriptions, P. 188

೭೪. ಕವಿಚರಿತೆ. II P. ೧೭೧.

೭೫. ಅಲ್ಲೇ. ಪು. ೩೬೭-೩೬೮.

೭೬. ಅಲ್ಲೇ . ಪು. ೩೬೮-೩೬೯.

೭೭. ಅಲ್ಲೇ. ಪು. ೩೬೮-೩೬೯.

೭೮. ಕೆಳದಿನೃಪ ವಿಜಯ. p. ೮೮.

ಇದರಲ್ಲಿ ಬೇರೆ ಬೇರೆ ದೇಶದ ಅಶ್ವಲಕ್ಷಣವನ್ನು ಮತ್ತು ಅವುಗಳನ್ನು ಪಳಗಿಸುವ, ತರಬೇತು ಕೊಡುವ, ವಿಧಾನಗಳನ್ನು ಹೇಳಲಾಗಿದೆ[೭೯]. ಈ ಕೃತಿಯಲ್ಲಿ ಆನೆಗಳ ವಿಚಾರಕ್ಕೆ ಹೆಚ್ಚು ಗಮನ ಕೊಡಲಾಗಿದೆ[೮೦].

ಖಗೋಳವಿಜ್ಞಾನ ಮತ್ತು ಗಣಿತಶಾಸ್ತ್ರ

ವಿದ್ಯಾಮಾಧವ ಸೂರಿ ಎಂಬ ಖಗೋಳ ವಿಜ್ಞಾನಿಯು 'ಮುಹೂರ್ತ ದರ್ಶನ' ಅಥವಾ 'ವಿದ್ಯಾಮಾಧವೀಯ' ಎಂಬ ಕೃತಿಯನ್ನು ರಚಿಸಿದನು. ಈ ಕೃತಿಯನ್ನು ಕುರಿತು, ಅವನ ಮಗನಾದ ವಿಷ್ಣು ಸೂರಿಯು 'ಮುಹೂರ್ತ ದೀಪಿಕಾ' ಎಂಬ ವ್ಯಾಖ್ಯಾನವನ್ನು ಬರೆದಿದ್ದಾನೆ. ಈತ ಬುಕ್ಕರಾಯನ ಮಗನಾದ ಮಲ್ಲಪ್ಪ ಒಡೆಯರ ಸಮಕಾಲೀನನಾಗಿದ್ದನು[೮೧]. 'ಶಿವತತ್ವ ರತ್ನಾಕರ'ವು ಖಗೋಳ ವಿಜ್ಞಾನ ಮತ್ತು ಜ್ಯೋತಿಷ ಈ ಎರಡರ ವಿಷಯವನ್ನು ಒಳಗೊಂಡಿದೆ. ಇದೇ ಕೃತಿಯಲ್ಲಿ ಪವನಶಾಸ್ತ್ರ (Meteorology)ದ ಸಂಗತಿಗಳೂ ಇವೆ[೮೨]. ಸುಮಾರು, ಕ್ರಿ.ಶ.೧೬೫೦ರಂದು ಭಾಸ್ಕರನು ಗಣಿತಶಾಸ್ತ್ರಕ್ಕೆ ಸಂಬಂಧಿಸಿದ 'ಬೇಹಾರ ಗಣಿತ' ಎಂಬ ಕೃತಿಯನ್ನು ರಚಿಸಿದ್ದಾನೆ. ತನ್ನ ಕಾವ್ಯಶಕ್ತಿ ಗಣಿತ ಪ್ರೌಢಿಮೆಯನ್ನು ಪ್ರಕಟಿಸುವ ಉದ್ದೇಶದಿಂದ ತಾನು ಇದನ್ನು ಬರೆದೆನೆಂದು ಹೇಳುತ್ತಾನೆ[೮೩]. ಸು. ೧೭೧೫ರಲ್ಲಿ 'ಬಾಲವೈದ್ಯದ ಚೆಲುವ' ಎಂದು ತನ್ನನ್ನು ಕರೆದುಕೊಂಡ ಲೇಖಕನೊಬ್ಬನು, ಕನ್ನಡದಲ್ಲಿ 'ಲೀಲಾವತಿ' ಎಂಬ ಕೃತಿಯನ್ನು ಬರೆದನು. ಇದರಲ್ಲಿ ಕ್ಷೇತ್ರಗಣಿತ ಅಥವಾ ರೇಖಾಗಣಿತದ ವಿಷಯವಿದೆ[೮೪].

ರಸಾಯನಿಕ ಶಾಸ್ತ್ರ ಮತ್ತು ಭೌತಶಾಸ್ತ್ರ

ಈ ದಿನ ನಾವು ಯಾವುದನ್ನು ರಸಾಯನ ಶಾಸ್ತ್ರವೆಂದು ಕರೆಯುತ್ತೇವೋ ಅದಕ್ಕೆ ಸಂಬಂಧಿಸಿದ ವಿಶೇಷ ಸಂಗತಿಗಳು 'ಶಿವತತ್ವರತ್ನಾಕರ'ದಲ್ಲಿ ದೊರೆಯುತ್ತವೆ. ರಸ ವಿದ್ಯೆ ಎಂಬ ಅಧ್ಯಾಯದಲ್ಲಿ , ಪಾದರಸಮೂಲವಾದ ತಯಾರಿಕೆಗಳಿಂದ ಚಿಕಿತ್ಸೆ ಮಾಡುವುದರ ವಿವರಣೆಯಿದೆ[೮೫]. ಅನಂತರ ಕೆಲವು ಲೋಹಗಳ-ಅಭ್ರಕ,

---

೭೯. S.T.R. VII Kallola, Chap. XII pp. 338-345.

೮೦. ಅಲ್ಲೇ. VIII Kallola, Ch. XI pp. 331-338.

೮೧. V.S.C., P. 303.

೮೨. S.T.R. VII Kallola Ch. VIII pp. 312-315.

೮೩. ಕವಿಚರಿತೆ. II ಪು. ೩೬೭-೭೭

೮೪. ಅಲ್ಲೇ. III ಪು. 5-8.

೮೫. S.T.R. VI, Kallola, Chs. FF. - XXIII and XXIV pp. 263.

ಸುವರ್ಣಮುಖಿ, ಮೈಲುತುತ್ತ, ಹರಿದಾಳ, ಸಿಂದೂರ, ಶಂಖಪಾಷಾಣ, ಸುರಮ ಅಥವಾ ಅಂಜನ ಕಲ್ಲು, ಕಂದು ಬಣ್ಣದ ವಸ್ತುಗಳ–ಮೂಲವನ್ನು, ಗುಣ, ಸ್ವಭಾವ, ವರ್ಣಗಳನ್ನು ಮತ್ತು ಅವುಗಳ ಉಪಯೋಗವನ್ನು ಕುರಿತ ವಿವರಣೆಗಳಿವೆ[೮೬]. ರಸ ಅಥವಾ ಪಾದರಸವನ್ನು ಕುರಿತು, ಅದರ ಶುದ್ಧೀಕರಣವನ್ನೂ ಉಪಯೋಗವನ್ನೂ ಪರಿಣಾಮಗಳನ್ನೂ ಬೇರೆ ಬೇರೆಯ ಅವಲೋಕಗಳನ್ನು ಬೆಳ್ಳಿ ಅಥವಾ ಬಂಗಾರವನ್ನಾಗಿ ಪರಿವರ್ತಿಸುವ ರಸವಿದ್ಯೆಯ ವಿವರಗಳನ್ನು ಕುರಿತ ಒಂದು ಪ್ರತ್ಯೇಕವಾದ ಅಧ್ಯಾಯವೆ ಇದೆ. ಕಡೆಯದಾಗಿ, ಪ್ರಯೋಗ ಶಾಲೆ (ರಸಶಾಲೆ)ಯನ್ನು ಇಡಬೇಕಾದ ರೀತಿಯನ್ನೂ ಪ್ರಯೋಗದ ಉಪಕರಣ ಮತ್ತು ಯಂತ್ರಗಳನ್ನು ಸಜ್ಜುಗೊಳಿಸುವ ವಿಧಾನವನ್ನು ತಿಳಿಸುವ ಅಧ್ಯಾಯವೂ ಒಂದಿದೆ[೮೭].

ಭೌತಶಾಸ್ತ್ರಕ್ಕೆ ಸಂಬಂಧಿಸಿದ ವಜ್ರ, ಹವಳ, ಪದ್ಮರಾಗ, ನೀಲಮಣಿ, ಪಚ್ಚೆ, ಸ್ಫಟಿಕ, ಗೋಮೇಧಿಕಾ ಮೊದಲಾದ ಅಮೂಲ್ಯ ಶಿಲೆ(ಹರಳು)ಗಳ ವಿಷಯವನ್ನು ವಿವರಿಸುತ್ತಲೆ ಪ್ರಸ್ತಾಪಿಸಲಾಗಿದೆ[೮೮]. ಗಣಿತದ ವಿಷಯವನ್ನು ಹೇಳುವಾಗ 'ಬಾಲ ವೈದ್ಯರ ಚೆಲುವ'ನೆಂದು ಹೆಸರಿಸಲಾದ ಲೇಖಕನು ಸು.ಕ್ರಿ.ಶ. ೧೭೧೫ರಲ್ಲಿ ವಜ್ರ ಮತ್ತು ನವರತ್ನಗಳ ವಿಷಯವನ್ನು ಕುರಿತು ರತ್ನ ಶಾಸ್ತ್ರವೆಂಬ ಗ್ರಂಥ ಬರೆದಿದ್ದಾನೆ[೮೯].

ತೋಟಗಾರಿಕೆ

ತೋಟಗಾರಿಕೆಯನ್ನು ಕುರಿತು ಶಿವತತ್ವ ರತ್ನಾಕರದಲ್ಲಿ ಈ ಬಗೆಯ ವಿಷಯ ವಿವೇಚನೆ ಇದೆ: (೧) ತೋಟಗಳ ಆವಶ್ಯಕತೆ, (೨) ಅಲ್ಲಿ ನೆಡಬೇಕಾದ ಸಸ್ಯಗಳ ವಿವರ, (೩) ತೋಟದ ನಕ್ಷೆ ಅಥವಾ ಯೋಜನೆ, (೪) ಅದಕ್ಕೆ ಬೇಕಾದ ಮಣ್ಣು, (೫) ಸಸ್ಯಗಳನ್ನು ಬೆಳೆಸುವ ವಿಧಾನ, (೬) ಗೊಬ್ಬರಗಳು, (೭) ಸಸಿ ನೆಡಲು ಮತ್ತು ನೀರು ಹಾಕಲು ತಕ್ಕ ಕಾಲಗಳು, (೮) ಸಸ್ಯಗಳಿಗೆ ತಗಲುವ ರೋಗಗಳು ಮತ್ತು ಅವುಗಳ ಚಿಕಿತ್ಸಾ ವಿಧಾನ, (೯) ತೋಟದ ಅಂದವನ್ನು ಹೆಚ್ಚಿಸುವ ಕ್ರಮಗಳು[೯೦].

ಸಂಕೀರ್ಣ

ಶಿವತತ್ವ ರತ್ನಾಕರವು, ವಿಜ್ಞಾನ ಮತ್ತು ಯಂತ್ರ ವಿಜ್ಞಾನಾದಿಗಳ ಬಗ್ಗೆ ವಿಶೇಷವಾದ

---

೮೬. ಅಲ್ಲೇ. Chsxxxxxxxxxxxxxxx. XXIII and XXIV PP. 263-267.
೮೭. ಅಲ್ಲೇ. Chs. XXV pp. 274-276.
೮೮. ಕವಿಚರಿತೆ III p. 8.
೮೯. S.T.R. VI, Kallola, Chs. pp. 201-205.
೯೦. ಅಲ್ಲೇ. Ch. II pp. 168-172.

ವಿಷಯಗಳನ್ನೂ ಒಳಗೊಂಡು ಸಂಕೀರ್ಣ ಸ್ವರೂಪದ್ದಾಗಿದೆ. ಖಡ್ಗಗಳ ತಯಾರಿಕೆ[೯೧], ಚಿತ್ರಪರಿಕರಗಳಾದ ಬಣ್ಣ, ಹಲಗೆ, ಕಂಚು ಇತ್ಯಾದಿಗಳನ್ನು ಕುರಿತು[೯೨], ಡೋಲು ಮೊದಲಾದ ಸಂಗೀತ ವಾದ್ಯಗಳನ್ನು ಕುರಿತು, ಪಾಕಶಾಸ್ತ್ರದ ವಿವರಗಳನ್ನು ಕುರಿತು[೯೩], ವಿಷವೈದ್ಯ[೯೪] ಹಸ್ತ ಸಾಮುದ್ರಿಕ[೯೫], ಯೋಗಶಾಸ್ತ್ರದ ಪ್ರಾಣಾಯಾಮಾದಿ[೯೬], ಸೂತ್ರಗಳನ್ನು ಕುರಿತು[೯೭], ಕಡೆಯದಾಗಿ ಇಂದ್ರಜಾಲ ಮತ್ತು ಸಮ್ಮೋಹಿನಿ, ವಿದ್ಯೆಯನ್ನು ಕುರಿತು ಇದರಲ್ಲಿ ವಿವರಣೆಗಳಿವೆ.

---

೯೧. ಅಲ್ಲೇ. Ch. II p. 168-172.

೯೨. ಅಲ್ಲೇ. Chs. XVIII and XIX.

೯೩. ಅಲ್ಲೇ. Chs. XXVI and XXVII.

೯೪. ಅಲ್ಲೇ. VII, Kaliola, Chs. IX and X pp. 320-331.

೯೫. ಅಲ್ಲೇ. VII, Kallola, Chs. XVXX pp. 358-364.

೯೬. ಅಲ್ಲೇ. VII, Kallola, Chs, XVXX pp. 358-364.

೯೭. ಅಲ್ಲೇ. Ch. II, 189-295.

೧೪

ಕೆಳದಿ ರಾಜವಂಶ

೧೬ನೇ ಶತಮಾನದಾರಭ್ಯ ೧೮ನೇ ಶತಮಾನದ ಮೂರನೆಯ ಪಾದವರೆಗೆ ಕರ್ನಾಟಕ ಮಲೆನಾಡು ಮತ್ತು ಕರಾವಳಿ ಪ್ರದೇಶದಲ್ಲಿ ಆಳಿದ ಒಂದು ಮನೆತನ. ಈ ವಂಶದವರು ಮೊದಲು ವಿಜಯನಗರದ ಸಾಮಂತರಾಗಿದ್ದು, ಆ ರಾಜ್ಯದ ಪತನಾನಂತರ ಸ್ವತಂತ್ರರಾದರು.

ಕೆಳದಿ ಅರಸರ ರಾಜ್ಯ ಅದರ ಉಚ್ಛ್ರಾಯಸ್ಥಿತಿಯಲ್ಲಿ ಈಗಿನ ಶಿವಮೊಗ್ಗ, ದಕ್ಷಿಣ ಕನ್ನಡ, ಚಿಕ್ಕಮಗಳೂರು ಮತ್ತು ಹಾಸನ ಜಿಲ್ಲೆಗಳ ಬಹುಭಾಗ, ಉತ್ತರ ಕನ್ನಡ, ಧಾರವಾಡ, ಚಿತ್ರದುರ್ಗ ಜಿಲ್ಲೆಗಳ ಕೆಲಭಾಗ ಮತ್ತು ಕೇರಳದ ಸ್ವಲ್ಪ ಭಾಗಗಳನ್ನು ಒಳಗೊಂಡಿತ್ತು. ಈ ರಾಜ್ಯದ ರಾಜಧಾನಿಗಳು ಕ್ರಮವಾಗಿ ಕೆಳದಿ, ಇಕ್ಕೇರಿ ಮತ್ತು ಕೊನೆಗೆ ಬಿದನೂರು (ನಗರ), ಸ್ವಲ್ಪಕಾಲ ಭುವನಗಿರಿ ಅಥವಾ ಕವಲೆದುರ್ಗ ಆಗಿದ್ದವು. ಆದ್ದರಿಂದ ಈ ಅರಸರನ್ನು ಇತಿಹಾಸಕಾರರು ಕೆಳದಿ, ಇಕ್ಕೇರಿ ಅಥವಾ ಬಿದನೂರಿನ ನಾಯಕರೆಂದು ಕರೆದಿದ್ದಾರೆ. ಆದರೆ ಈ ವಂಶ ಕೆಳದಿಯಿಂದ ಬಂದಿದ್ದರಿಂದಲೂ ಮತ್ತು ತಮ್ಮನ್ನು ಯಾವಾಗಲೂ ಕೆಳದಿ ನಾಯಕರೆಂದು ಕರೆದುಕೊಂಡಿರುವುದರಿಂದಲೂ ಈ ಹೆಸರೇ ಉಚಿತ. ಮಲೆನಾಡಿನ ರಾಜ್ಯವಾದ ಇದಕ್ಕೆ ಮಲೆರಾಜ್ಯವೆನ್ನುವ ಹೆಸರೂ ಇತ್ತು. ಗಂಡಭೇರುಂಡ ಈ ರಾಜ್ಯದವರ ರಾಜಲಾಂಛನವಾಗಿತ್ತು. ಈ ವಂಶದ ಇತಿಹಾಸದ ರಚನೆಗೆ, ಹಿರಿಯ ಬಸವಪ್ಪನಾಯಕ ರಚಿಸಿದ 'ಶಿವತತ್ತ್ವರತ್ನಾಕರ'ವೆನ್ನುವ ಸಂಸ್ಕೃತ ವಿಶ್ವಕೋಶ, ಲಿಂಗಣ್ಣ ವಿರಚಿತ 'ಕೆಳದಿ ನೃಪವಿಜಯ'ವೆನ್ನುವ ಕನ್ನಡ ಚಂಪೂಗ್ರಂಥ, ಈ ಕಾಲದ ವಿಪುಲ ಶಾಸನಗಳು ಮತ್ತು ಪೆಟ್ರೋಡೆಲವೆಲ್ಲೆ, ಪೀಟರ್ ಮಂಡಿ, ಅಲೆಕ್ಸಾಂಡರ್ ಹ್ಯಾಮಿಲ್ಟನ್ ಮುಂತಾದ ವಿದೇಶೀ ಪ್ರವಾಸಿಗಳೂ ಅಮೂಲ್ಯ ವಿಷಯಗಳನ್ನು ಒದಗಿಸುತ್ತವೆ.

ಈ ವಂಶದ ಅರಸರು ಶೌರ್ಯ, ದಾನ, ಸ್ವಧರ್ಮನಿಷ್ಠೆ, ಪರಧರ್ಮಸಹಿಷ್ಣುತೆ ಮತ್ತು ವಿದ್ಯಾ ಪ್ರೋತ್ಸಾಹಗಳಲ್ಲಿ ವಿಜಯನಗರದ ಅರಸರು ಹಾಕಿಕೊಟ್ಟ ಮೇಲ್ಪಂಕ್ತಿಯನ್ನು ಯಥಾಶಕ್ತಿಯಾಗಿ ಅನುಸರಿಸಿದರು. ಆದ್ದರಿಂದಲೇ ಕೆಳದಿರಾಜ್ಯ

ವಿಜಯನಗರದ ಹಾಗೆ ಜನಪ್ರಿಯವಾಗಿತ್ತು. ಈ ದೃಷ್ಟಿಯಲ್ಲಿ ಕೆಳದಿರಾಜ್ಯ ವಿಜಯನಗದ ಪರಂಪರೆಯನ್ನು ಮುಂದುವರಿಸಿದ ಅದರ ಸತ್ಸಂತಾನ.

ಚೌಡಪ್ಪನಾಯಕ : ೧೫೦೦ – ೧೫೩೦

ಕೆಳದಿ ರಾಜವಂಶದ ಮೂಲಪುರುಷನ ಆಳ್ವಿಕೆ ಸು. ೧೫೦೦ – ೧೫೩೦. ಇವನ ಮೂಲ ಹೆಸರು ಚೌಡಗೌಡ. ಈತನ ತಂದೆ ಪಳ್ಳಿವಾಯಲಿನ (ಸಾಗರ ತಾಲ್ಲೂಕು ಹಳ್ಳಿಬೈಲು) ಬಸಪ್ಪ. ತಾಯಿ ಬಸವಾಂಬೆ. ಈತನ ತಮ್ಮ ಭದ್ರಪ್ಪ, ಬೇಸಾಯವೇ ಇವರ ಜೀವನೋಪಾಯವಾಗಿತ್ತು. ಸಾಮಾನ್ಯ ಮನೆತನದಲ್ಲಿ ಹುಟ್ಟಿದ ಚೌಡಪ್ಪ ಮುಂದಕ್ಕೆ ಹೇಗೆ ಬಂದನೆನ್ನುವ ವಿಷಯದಲ್ಲಿ ಶಿವತತ್ವರತ್ನಾಕರ ಮತ್ತು ಕೆಳದಿ ನೃಪವಿಜಯ ಗ್ರಂಥಗಳಲ್ಲಿ ದಂತಕಥೆಗಳಿವೆ. ಅವುಗಳ ಪ್ರಕಾರ ಚೌಡಪ್ಪನಿಗೆ ಎಲ್ಲೋ ಹೂತಿಟ್ಟ ಕೊಪ್ಪರಿಗೆ ಹಣ ಮತ್ತು ಒಂದು ಕತ್ತಿ (ನಾಗರಮುರಿ) ಸಿಕ್ಕಿತು. ಇದರ ಸಹಾಯದಿಂದ ಚೌಡಪ್ಪ ಮತ್ತು ಇವನ ಸಹೋದರ ಒಂದು ಸೈನ್ಯವನ್ನು ಕಟ್ಟಿ ಕೆಳದಿಯ ಸುತ್ತಮುತ್ತಲ ಪ್ರದೇಶವನ್ನು ತಮ್ಮ ಹತೋಟಿಗೆ ತೆಗೆದುಕೊಂಡರು. ಆಗ ಆಳುತ್ತಿದ್ದ ವಿಜಯನಗರದ ಚಕ್ರವರ್ತಿ ಇವರ ಚಟುವಟಿಕೆಯನ್ನು ಒಪ್ಪಲಿಲ್ಲ. ಇವರನ್ನು ಕರೆತರಿಸಿ ಸೆರೆಮನೆಯಲ್ಲಿಡಿಸಿದ. ಇದೇ ಸಮಯದಲ್ಲಿ ವಿಜಯನಗರದ ಇನ್ನೊಬ್ಬ ಪಾಳೆಯಗಾರ ವಿಜಯನಗರದ ವಿರುದ್ಧ ದಂಗೆಯೆದ್ದಾಗ, ಆ ದಂಗೆಯನ್ನು ಅಡಗಿಸುತ್ತೇವೆಂದು ಸಹೋದರರು ಚಕ್ರವರ್ತಿಗೆ ಆಶ್ವಾಸನೆ ಒಟ್ಟರು. ಸೆರೆಯಿಂದ ಹೊರಬಂದು ಇವರು ಆಶ್ವಾಸನೆಯನ್ನು ಪೂರೈಸಿದರು. ಚಕ್ರವರ್ತಿ ಸಂತುಷ್ಟನಾಗಿ ಇವರು ಗೆದ್ದ ಹಳ್ಳಿಗಳನ್ನು ಇವರಿಗೇ ಮಾನ್ಯವಾಗಿ ಕೊಟ್ಟ.

ಚೌಡಪ್ಪನ ಒಂದೇ ಒಂದು ಶಾಸನ (೧೫೦೬) ಸಿಕ್ಕಿದೆ. ಇದರಲ್ಲಿ ತಾನು ಯಾರ ಅಧೀನವೆಂದು ಹೇಳಿಕೊಂಡಿಲ್ಲ. ಇದರಲ್ಲಿ ಅವನಿಗೆ 'ಎಡವ ಮುರಾರಿ' ಎನ್ನುವ ಬಿರುದಿದೆ. ಇದು ಮುಂದಿನ ಎಲ್ಲಾ ಕೆಳದಿ ನಾಯಕರ ಬಿರುದಾಗಿತ್ತು.

ಚೌಡಪ್ಪನಿಗೆ ಇಬ್ಬರು ಮಕ್ಕಳು; ಸದಾಶಿವ ಮತ್ತು ಭದ್ರ. ಇವನ ಒಬ್ಬ ಹೆಂಡತಿಯು ತಿರುಮಮ್ಮ. ಇವಳು ಸದಾಶಿವನ ತಾಯಿ. ಕೆಳದಿ ನೃಪವಿಜಯದಲ್ಲಿ ಇವನು ಕೆಳದಿಯಲ್ಲಿ ರಾಮೇಶ್ವರ ದೇವಸ್ಥಾನವನ್ನು ಮರದಲ್ಲಿ ಕಟ್ಟಿಸಿದನೆಂದು ಹೇಳಿದೆ. ಈ ಗ್ರಂಥ ಮತ್ತು ಶಿವತತ್ವರತ್ನಾಕರದಲ್ಲಿ ಚೌಡಪ್ಪನಿಗೆ ನಾಯಕನೆಂಬ ಬಿರುದನ್ನು ವಿಜಯನಗರದ ಚಕ್ರವರ್ತಿ ಕೊಟ್ಟನೆಂದು ಹೇಳಿದೆ. ಆದರೆ ಶಾಸನದಲ್ಲಿ ಈತನ ಹೆಸರು ಚೌಡಗೌಡನೆಂದು ಇರುವುದಲ್ಲದೆ ಇವನ ಮಗ ಸದಾಶಿವನಾಯಕನ ಶಾಸನದಲ್ಲಿಯೂ ಇದೇ ಹೆಸರಿರುವುದರಿಂದ ಈ ಗ್ರಂಥಗಳ ಹೇಳಿಕೆ ಸಂಶಯಾಸ್ಪದ.

ಸದಾಶಿವ ನಾಯಕ : ೧೫೩೦ – ೧೫೬೭

ಚೌಡಗೌಡನ ಮಗ ಸದಾಶಿವ ನಾಯಕ (ಸು.೧೫೩೦–೧೫೬೭) ಬಹು ಪರಾಕ್ರಮಶಾಲಿ. ವಿಜಯನಗರದ ಅರಸರ ಪರವಾಗಿ ಬಿಜಾಪುರದ ಸುಲ್ತಾನನನ್ನು ಪರಾಜಯಗೊಳಿಸಿದ್ದಲ್ಲದೆ ಇತರ ಯುದ್ಧಗಳಲ್ಲಿಯೂ ಅನೇಕ ಯುದ್ಧಗಳಲ್ಲಿಯೂ ನೆರವಾಗಿ, ಅವರಿಂದ ಮಂಗಳೂರು, ಬರಕೂರು, ಚಂದ್ರಗುತ್ತಿ ಪ್ರಾಂತ್ಯಗಳನ್ನು ಪಡೆದು ಕೆಳದಿ ರಾಜ್ಯದ ವಿಸ್ತಾರಕ್ಕೂ ಕೀರ್ತಿಗೂ ಕಾರಣನಾದ. ಅಂತೂ ಹಿಂದಿದ್ದ ಸಣ್ಣ ಪಾಳಯಪಟ್ಟು ಇವನ ಕಾಲದಲ್ಲಿ ರಾಜ್ಯವಾಯಿತು. ಇವನ ಆಳ್ವಿಕೆಯ ಕೊನೆಯ ಭಾಗದಲ್ಲಿ ರಕ್ಕಸತಂಗಡಿ ಕದನದಿಂದಾಗಿ ವಿಜಯನಗರ ಸಾಮ್ರಾಜ್ಯದ ಪತನವಾಯಿತು. ಅನಂತರ ಕೆಳದಿಯ ಅರಸರು ಬಹುತೇಕ ಸ್ವತಂತ್ರರಾಗಿಯೇ ಆಳಿದರು. ಆದರೂ ವಿಜಯನಗರದ ವಂಶಿಕರಾದ ಸದಾಶಿವ, ತಿರುಮಲ, ಶ್ರೀರಂಗ ಇವರನ್ನು ನಿಮಿತ್ತಮಾತ್ರಕ್ಕೆ ಸಾರ್ವಭೌಮರೆಂದು ಗೌರವಿಸುತ್ತಿದ್ದರು.

ಚಿಕ್ಕಸಂಕಣ್ಣ ನಾಯಕ : ೧೫೬೭ – ೧೫೮೨

ಸದಾಶಿವನಾಯಕ (ದೊಡ್ಡ ಸಂಕಣ್ಣನಾಯಕ) ಮೃತನಾದ ಮೇಲೆ ಅವನ ಮಗನಾದ ಚಿಕ್ಕಸಂಕಣ್ಣನಾಯಕ. ಸು. ೧೫೬೭–೧೫೮೨) ರಾಜ್ಯವಾಳಿದ. (ಈ ಕಾಲದ ಆಳ್ವಿಕೆಯ ಬಗ್ಗೆ ಇರುವ ಇನ್ನೊಂದು ಅಭಿಪ್ರಾಯ ಹೀಗಿದೆ. ದೊಡ್ಡ ಸಂಕಣ್ಣನಾಯಕ ಸದಾಶಿವನ ಮಗ. ಇವನು ೧೫೬೭–೮೨ರ ವರೆಗೆ ರಾಜ್ಯವಾಳಿ ಅನಂತರ ತನ್ನ ತಮ್ಮ ಚಿಕ್ಕಸಂಕಣ್ಣನಿಗೆ ಅಧಿಕಾರ ವಹಿಸಿದ.) ಚಿಕ್ಕಸಂಕಣ್ಣನೂ ಇವನ ತಮ್ಮ ರಾಮರಾಜಯ್ಯನೂ ಕೆಲವು ಕಾಲ (ಸು. ೧೫೭೦–೮೨) ಜೊತೆಯಾಗಿ ರಾಜ್ಯಭಾರ ಮಾಡಿದರು.

ವೆಂಕಟಪ್ಪನಾಯಕ : ೧೫೮೨–೧೬೨೯

ವೆಂಕಟಪ್ಪನಾಯಕ ಅನಂತರದ ರಾಜ (೧೫೮೨–೧೬೨೯). ಈತನು ಅತಿ ಸಮರ್ಥನೂ ದೂರದರ್ಶಿಯೂ ಆಗಿದ್ದ. ಇವನ ಕಾಲದಲ್ಲಿ ಈ ಸಂಸ್ಥಾನ ಅಧೀನತೆಯಿಂದ ಪೂರ್ಣವಾಗಿ ಮುಕ್ತವಾಯಿತು. ಇದನ್ನು ಸಹಿಸದ ವಿಜಾಪುರದ ಸುಲ್ತಾನ ಕೆಳದಿಯನ್ನು ವಶಪಡಿಸಿಕೊಳ್ಳಲು ಕಳಿಸಿದ ಸೇನೆಯನ್ನು ವೆಂಕಟಪ್ಪ ಹಿಮ್ಮೆಟ್ಟಿಸಿ, ಅದರ ಸ್ಮಾರಕವಾಗಿ ಹಾನಗಲ್ಲಿನಲ್ಲಿ ವಿಜಯಸ್ತಂಭವನ್ನು ನಿರ್ಮಿಸಿದ. ಅನಂತರ ಸಾತಳಲು, ಬೆಳವಂದೂರು, ಮಂಡಗದ್ದೆ, ಹೊನ್ನೂರು, ಹಾರ್ನಹಳ್ಳಿ ಮೊದಲಾದ ಪಾಳೆಯಗಾರರನ್ನು ಸೋಲಿಸಿ ತನ್ನ ರಾಜ್ಯವನ್ನು ವಿಸ್ತರಿಸಿದ. ಅವನ ರಾಜ್ಯವು ಪಶ್ಚಿಮಕ್ಕೆ ಸಮುದ್ರದವರೆಗೂ ವಿಸ್ತರಿಸಲ್ಪಟ್ಟಿತು. ಗೇರುಸೊಪ್ಪೆಯ ಭೈರಾದೇವಿಯನ್ನು ಸೋಲಿಸಿ ಪೋರ್ಚುಗೀಸರ ಪ್ರಭಾವವನ್ನು ಕುಗ್ಗಿಸಿ

ಲಾಭದಾಯಕವಾದ ಮೆಣಸಿನ ವ್ಯಾಪಾರವನ್ನು ತನ್ನ ಹಿಡಿತಕ್ಕೆ ತಂದು, ದೇಶದ ಸಂಪತ್ತನ್ನು ಹೆಚ್ಚಿಸಿದ.

ವೀರಭದ್ರ ನಾಯಕ : ೧೬೨೯–೧೬೪೫

ಅನಂತರ ಆಳಿದ ಇವನ ಮೊಮ್ಮಗ ವೀರಭದ್ರನಾಯಕನ (೧೬೨೯–೧೬೪೫) ಕಾಲದಲ್ಲಿ ರಾಜ್ಯ ಅನೇಕ ವಿಪತ್ತುಗಳನ್ನು ಎದುರಿಸಬೇಕಾಯಿತು. ಸೋದೆ ಮತ್ತು ಬಿಳಗಿ ಅರಸರು, ತರೀಕೆರೆ, ಬಾಣಾವರದ ಪಾಳೆಯಗಾರರು ಇವನ ಮೇಲೆ ಪಿತೂರಿ ಹೂಡಿ ಸಜ್ಜುಗೊಳಿಸಿದ್ದ ದಾಳಿಯನ್ನು, ವೀರಭದ್ರನಾಯಕ ಸಾಮೋಪಾಯದಿಂದ ನಿಲ್ಲಿಸಿದ. ಆದರೆ ಬಿಜಾಪುರದ ಆದಿಲ್ ಶಾಹೀ ದೊರೆಯ ದಂಡನಾಯಕ ಇವನ ರಾಜ್ಯದಲ್ಲಿ ಹಾವಳಿ ಮಾಡಿದ. ಪೋರ್ಚುಗೀಸರು ಸಮಯ ಸಾಧಿಸಿ ರಾಜ್ಯದ ಕೆಲವು ಭಾಗಗಳನ್ನು ಹಲವು ಅನುಕೂಲತೆಗಳನ್ನೂ ಪಡೆದರು. ರಾಜ್ಯ ಶಿಥಿಲವಾಯಿತು.

ಶಿವಪ್ಪನಾಯಕ : ೧೬೪೫–೧೬೬೦

ಕೆಳದಿ ರಾಜಮನೆತನದ ಪ್ರಸಿದ್ಧ ದೊರೆ ವೀರಭದ್ರನಾಯಕನ ತರುವಾಯ ಅವನಿಗೆ ಮಕ್ಕಳಿರಲಿಲ್ಲವಾಗಿ ಚಿಕ್ಕಸಂಕಣ್ಣನಾಯಕನ ಮೊಮ್ಮಗ, ಸಿದ್ದಪ್ಪನಾಯಕನ ಹಿರಿಯ ಮಗನಾದ ಈತ ಪಟ್ಟಕ್ಕೆ ಬಂದ. ಈತ ವೀರಭದ್ರನಾಯಕನ ಆಳ್ವಿಕೆಯಲ್ಲಿ ಅತನ ಬಲಗೈಯಂತಿದ್ದು ಆಡಳಿತದ ಅಪಾರ ಅನುಭವ ಪಡೆದಿದ್ದ. ಇವನ ಆಳಿಕೆಯಲ್ಲಿ ಕೆಳದಿ ಅರಸುಮನೆತನದ ಪ್ರಭಾವ ಬೆಳೆಯಿತು.

ಬಿಜಾಪುರದ ಸೈನ್ಯದ ಮುತ್ತಿಗೆಯಿಂದ ವೆಲ್ಲೂರಿನಲ್ಲಿ ನೆಲಸಿದ್ದ ವಿಜಯನಗರ ವಂಶದ ಶ್ರೀರಂಗರಾಯ ಅಲ್ಲಿಂದ ಓಡಿಹೋಗಬೇಕಾಯಿತು. ಈ ಸಂದರ್ಭದಲ್ಲಿ ಶಿವಪ್ಪನಾಯಕ ವೆಲ್ಲೂರಿನಿಂದ ಬಿಜಾಪುರದ ಸೈನ್ಯವನ್ನು ಓಡಿಸಿ ಶ್ರೀರಂಗರಾಯ ಪುನಃ ಅಲ್ಲಿ ನೆಲೆಸುವಂತೆ ಮಾಡಿ, ಅವನಿಂದ ಪರಿವಾರಣವಾರಣ, ರಾಮಬಾಣ ಇತ್ಯಾದಿ ಬಿರುದುಗಳನ್ನೂ ಖಿಲ್ಲತ್ತುಗಳನ್ನೂ ಪಡೆದ. ಮತ್ತೆ ಶ್ರೀರಂಗರಾಯ ತನ್ನ ರಾಜ್ಯವನ್ನು ಕಳೆದುಕೊಂಡಾಗ ಶಿವಪ್ಪನಾಯಕ ಅವನಿಗೆ ಸಕ್ಕರೆಪಟ್ಟಣದ ಅಧಿಪತ್ಯವನ್ನು ಕೊಟ್ಟ. ವಿಜಯನಗರ ಸಾಮ್ರಾಜ್ಯವನ್ನು ಪುನರುಜ್ಜೀವಿಸಬೇಕೆಂಬ ಉದಾತ್ತ ಹಂಬಲ ಇವನಿಗಿತ್ತು. ಸೋದೆ, ಬೀಳಗಿ, ತರೀಕೆರೆ ಮುಂತಾದ ಪಾಳೆಯಗಾರರ ಸೈನಿಕ ಸಹಾಯದಿಂದ ಬೇಲೂರನ್ನು ತೆಗೆದುಕೊಂಡು ಶ್ರೀಂಗರಾಯನಿಗೆ ಕೊಟ್ಟು ರಾಯನ ಸಂಸ್ಥಾನವನ್ನು ಶಿವಪ್ಪ ನೆಲೆಗೊಳಿಸಿದ ಎಂದು ಕೆಳದಿ ನೃಪವಿಜಯದಲ್ಲಿ ಹೇಳಿದೆ. ಅದೇ ಗ್ರಂಥದಲ್ಲಿ ಹೇಳಿದಂತೆ ಶಿವಪ್ಪನಾಯಕ ಪಶ್ಚಿಮ ತೀರ ಪ್ರದೇಶದಲ್ಲಿ ಮಂಗಳೂರು, ಮಳವೆ, ಕಟ್ಟಿಕೀಳೂರು, ಬೇಕಲು, ಚಿತ್ತಾರಿ ಕೋಟೆಗಳನ್ನೂ ಗೆದ್ದ,

ಚಂದ್ರಗಿರಿ ಕೋಟೆಯನ್ನು ಬಲಪಡಿಸಿದ. ಪೋರ್ಚುಗೀಸರ ಮೇಲೆ ಯುದ್ಧಸಾರಿ ಅವರನ್ನು ಮಂಗಳೂರಿನಲ್ಲಿ ಸೋಲಿಸಿದ. ಹೊನ್ನಾವರದಿಂದ ಅವರನ್ನು ಓಡಿಸಿದ. ಕಾಂಬೋಲಿಮ್ ಬಳಿ ಶಿವಪ್ಪನಾಯಕನಿಗೂ ಪೋರ್ಚುಗೀಸರಿಗೂ ಘೋರವಾದ ಕದನವಾಗಿ ನಾಯಕ ಗೆದ್ದ. ಪೋರ್ಚುಗೀಸರ ಬಲ ಕುಗ್ಗಿ ಪಶ್ಚಿಮತೀರದಲ್ಲಿ ಮಿರ್ಜಿಯಿಂದ ಕಾಸರಗೋಡಿನವರೆಗೆ ತೀರಪ್ರದೇಶ ಶಿವಪ್ಪನಾಯಕನ ಹತೋಟಿಗೆ ಬಂತು. ಈತ ಮಲಯಾಳ ದೇಶಕ್ಕೂ ನುಗ್ಗಿ ಯಾರಿಗೂ ಬಗ್ಗದ ನಾಯಕರನ್ನು ಜಯಿಸಿ ನೀಲೇಶ್ವರದಲ್ಲಿ ಜಯಸ್ತಂಭವನ್ನು ನಿಲ್ಲಿಸಿದ.

ಬಿಜಾಪುರದ ಮಹಮ್ಮದ್ ಆದಿಲ್ ಶಾನ ಮರಣದ ಅನಂತರ ಇಕ್ಕೇರಿ. ಸೊರಬ, ಉಡುಗಣಿ, ಮಹಾದೇವಪುರ ಕೋಟೆಗಳನ್ನೂ ಶಿರಸಿ. ಬನವಾಸಿ ಹೆರೂರು, ಬೋಳೂರು, ಸೋದೆ ಮುಂತಾದ ಸ್ಥಳಗಳನ್ನೂ ಗೆದ್ದುಕೊಂಡ. ಸೋದೆಯ ದೊರೆ ಮಧುಲಿಂಗನಾಯಕನ ಬಿನ್ನಹವನ್ನು ಮನ್ನಿಸಿ ಅವನ ರಾಜ್ಯವನ್ನು ಹಿಂದಿರುಗಿ ಕೊಟ್ಟ. ಆರಗ, ಗುತ್ತಿ, ಮಂಗಳೂರು ಮತ್ತು ಪಶ್ಚಿಮ ಕರಾವಳಿ ಪ್ರದೇಶವನ್ನು ಶಿವಪ್ಪನಾಯಕ ಆಳುತ್ತಿದ್ದನೆಂಬ ಸಂಗತಿ ಒಂದು ಶಾಸನದಿಂದ ವ್ಯಕ್ತವಾಗುತ್ತದೆ.

ಶ್ರೀರಂಗರಾಯನ ಕೈತಪ್ಪಿಹೋಗಿದ್ದ ಶ್ರೀರಂಗಪಟ್ಟಣವನ್ನು ಮರಳಿ ದೊರಕಿಸಿಕೊಡುವ ಉದ್ದೇಶದಿಂದ ಈತ ದೊಡ್ಡ ಸೈನ್ಯದೊಂದಿಗೆ ಶ್ರೀರಂಗಪಟ್ಟಣದ ಮೇಲೆ ಏರಿಹೋದ (೧೬೫೯.) ಹಾಸನದಲ್ಲಿ ಬೀಡುಬಿಟ್ಟಾಗ ಮೈಸೂರಿನ ದೇವರಾಜ ಒಡೆಯ ದಳವಾಯಿ ಹಂಪರಾಜಯ್ಯನೊಡನೆ ಭಾರಿ ಸೈನ್ಯವನ್ನು ಕಳಿಸಿದ. ಆಗ ಜರುಗಿದ ಯುದ್ಧದಲ್ಲಿ ಶಿವಪ್ಪನಾಯಕನಿಗೆ ಸಂಪೂರ್ಣ ಜಯವಾಯಿತು. ಅನಂತರ ಶ್ರೀರಂಗಪಟ್ಟಣದ ಕೋಟೆಗೆ ಮುತ್ತಿಗೆ ಹಾಕಿದ. ಆ ಕೋಟೆಯ ಅಧಿಕಾರಿಗಳು ಕೆಳದಿಯವರ ಮುತ್ತಿಗೆಯನ್ನು ಎದುರಿಸಲಾಗದೆ ಬಿಜಾಪುರದ ಸೈನ್ಯದ ನೆರವನ್ನು ಪಡೆಯಲು ಹವಣಿಸಿದರು. ಬಹಲೂಖಾನನ ನೇತೃತ್ವದಲ್ಲಿ ಬಿಜಾಪುರದ ಸೈನ್ಯ ಮೈಸೂರಿನವರ ಸಹಾಯಕ್ಕೆ ಬಂದಿತು. ಶಿವಪ್ಪನಾಯಕ ಉಪಾಯದಿಂದ ಅವರನ್ನು ಹಿಂದಿರುಗುವ ಹಾಗೆ ಮಾಡಿದ. ಆದರೆ ಶಿವಪ್ಪನಾಯಕನಿಗೆ ಶ್ರೀರಂಗಪಟ್ಟಣವನ್ನು ವಶಪಡಿಸಿಕೊಳ್ಳಲಾಗಲಿಲ್ಲ.

ಶಿವಪ್ಪನಾಯಕ ಸರ್ಕಾರಕ್ಕೂ ಪ್ರಜೆಗಳಿಗೂ ಅನುಕೂಲವಾಗುವಂತಹ ಕಂದಾಯದ ಶಿಸ್ತನ್ನು ರೂಪಿಸಿ ಅದನ್ನು ಕಟ್ಟುನಿಟ್ಟಾಗಿ ಜಾರಿಗೆ ತಂದ. ಶಿವಪ್ಪನಾಯಕನ ಶಿಸ್ತೆಂದು ಇವತ್ತಿಗೂ ಅದರ ಪ್ರಸಿದ್ಧಿಯನ್ನು ಜನರು ಮರೆತಿಲ್ಲ. ರೈತರಿಗೆ ಬೇಕಾದಷ್ಟು ಸಹಾಯಮಾಡಿ ಒಂದು ಗೋಪಾದದಷ್ಟು ಭೂಮಿ ಸಹ ಪಡಬೀಳದ ಹಾಗೆ ನೋಡಿಕೊಂಡನೆಂದೂ ಬಿದನೂರು ನಗರವನ್ನು ಒಂದು ಯೋಜನೆಗನುಸಾರವಾಗಿ

ವಿಸ್ತರಿಸಿದನೆಂದೂ ಕೆಳದಿ ನೃಪತವಿಜಯ ತಿಳಿಸುತ್ತದೆ. ಇವನ ಶಿಸ್ತಿನಷ್ಟೆ ನ್ಯಾಯದೃಷ್ಟಿಯೂ ಪ್ರಖ್ಯಾತವಾಗಿದೆ.

ಶಿವಪ್ಪನಾಯಕ ತುಂಗಭದ್ರಾ ನದಿಯ ತೀರದ ಮೇಲೆ ಶಿವರಾಜಪುರವೆಂಬ ಅಗ್ರಹಾರವನ್ನು ಸ್ಥಾಪಿಸಿದ. ಕಾಶೀಕ್ಷೇತ್ರದಲ್ಲಿ ಅನೇಕ ದಾನಧರ್ಮ ಪೂಜೆಗಳು ನಡೆಯುವಂತೆ ಇಲ್ಲಿಯೂ ನಿಯಮಿಸಿದ. (ಕಾಶಿಯಲ್ಲಿರುವ ಜಂಗಮವಾಡಿಮಠದಲ್ಲಿ ಇವನ ಭಾವಚಿತ್ರವಿದೆ.) ರಾಮೇಶ್ವರದಿಂದ ಕಾಶಿಯವರೆಗಿನ ಪ್ರದೇಶದಲ್ಲಿದ್ದ ಮುಖ್ಯವಾದ ಶೈವ, ವೈಷ್ಣವ ದೇವಾಲಯಗಳಲ್ಲಿ ಪೂಜೆ ನಡೆಯುವ ಹಾಗೆ ಮಾಡಿದ. ಶೃಂಗೇರಿ ಮತ್ತು ಇತರ ಮಠಗಳಿಗೆ ಪರಂಪರಾಗತ ರಾಜಾಶ್ರಯವನ್ನು ಮುಂದುವರೆಸದ.

ಶಿವಪ್ಪನಾಯಕ ಕ್ರೈಸ್ತರಿಗೆ ತನ್ನ ರಾಜ್ಯದಲ್ಲಿ ಉಪದೇಶ ನೀಡುವ ಮತ್ತು ಮತಾಂತರಗೊಳಿಸುವ ಅವಕಾಶ ನೀಡಿದ್ದ. ಚರ್ಚಿನ ಅಧಿಕಾರಿಗಳು ಮಾತ್ರ ಭಾರತೀಯರೇ ಆಗಿರಬೇಕೆಂಬ ಇವನ ಕಟ್ಟಳೆ ಇವನ ದೇಶಾಭಿಮಾನಕ್ಕೆ ಒಳ್ಳೆಯ ನಿದರ್ಶನ.

ಶಿವಪ್ಪನಾಯಕ ಸು. ೧೬೬೦ ರಲ್ಲಿ ನಿಧನನಾದ. ಇವನಿಗೆ ಲಿಂಗಮ್ಮಾಜಿ ಮತ್ತು ಶಾಂತಮ್ಮಾಜಿ ಎಂಬ ಇಬ್ಬರು ರಾಣಿಯರು; ಭದ್ರಪ್ಪ ಮತ್ತು ಸೋಮಶೇಖರ ಎಂಬ ಇಬ್ಬರು ಗಂಡುಮಕ್ಕಳು ಇದ್ದರು.

ಕೆಳದಿ ಅರಸರಲ್ಲಿ ಶಿವಪ್ಪನಾಯಕ ಶಿಖರವ್ಯಕ್ತಿ. ಇವನ ಪರಾಕ್ರಮ, ಸ್ವಾಮಿನಿಷ್ಠೆ, ಮುತ್ಸದ್ಧಿತನ, ಆಡಳಿತ ಕೌಶಲ್ಯ, ನ್ಯಾಯದೃಷ್ಟಿ, ಪರಧರ್ಮಸಹಿಷ್ಣತೆಗಳಿಂದ ಉತ್ತಮವಾಗಿ ರಾಜ್ಯವಾಳಿ, ವೀರಭದ್ರನಾಯಕನ ಕಾಲದಲ್ಲಿ ಶಿಥಿಲವಾಗಿದ್ದ ಕೆಳದಿ ರಾಜ್ಯದ ದೇಶ ಕೋಶಗಳನ್ನೂ ಕೀರ್ತಿಯನ್ನೂ ವರ್ಧಿಸಿದ.

ಸೋಮಶೇಖರ ನಾಯಕ I : ೧೬೬೪ – ೧೬೭೧

ಶಿವಪ್ಪನಾಯಕನ ಹಿರಿಯಮಗ ಭದ್ರಪ್ಪನಾಯಕನ ಆಳ್ವಿಕೆ ೧೬೬೧ ರಿಂದ ೧೬೬೩ ರವರೆಗೆ ಮಾತ್ರ. ಅವನಿಗೆ ಪುತ್ರಸಂತಾನವಿಲ್ಲದಿದ್ದುದರಿಂದ ಅವನ ತಮ್ಮ ಮತ್ತು ಶಿವಪ್ಪನಾಯಕನ ಕನಿಷ್ಠಪುತ್ರ ಹಿರಿಯ ಸೋಮಶೇಖರನಾಯಕ ಪಟ್ಟಕ್ಕೆ ಬಂದ.

ಭದ್ರಪ್ಪನಾಯಕನ ಕಾಲದಲ್ಲಿ ಕೆಳದಿ ಅರಸರು ಮೈಸೂರು ಒಡೆಯರಿಗೆ ಕಳೆದುಕೊಂಡಿದ್ದ ಚಿಕ್ಕೋಡು, ಬೆಳಗೋಡು, ಕಣತೂರು, ಅಬ್ಬಿಣ ಮತ್ತು ಬೇಲೂರುಗಳನ್ನು ಸೋಮಶೇಖರನಾಯಕ ವಶಪಡಿಸಿಕೊಂಡ. ಇದಕ್ಕೆ ಪ್ರತಿಯಾಗಿ

ಮೈಸೂರಿನ ದಳವಾಯಿ ನಂಜನಾಥಯ್ಯನು ಕಳಸ, ಖಾಂಡ್ಯ, ದಾನಿವಾಸ, ಹೆಬ್ಬೆ, ಜಾಗರ ಬಿದನೂರು, ಹೊಸ್ಸೂರು ಮತ್ತು ಇಕ್ಕೇರಿಗಳಿಗೆ ತುಂಬಾ ಹಾನಿಯುಂಟು ಮಾಡಿದ (೧೬೬೪). ಪರಿಸ್ಥಿತಿ ವಿಕೋಪಕ್ಕೆ ಹೋಗಲು ಸೋಮಶೇಖರ ನಾಯಕ ತನ್ನ ರಾಯಭಾರಿ ಪುರುಷೋತ್ತಮಯ್ಯನನ್ನು ಆನೆ, ಕುದುರೆ, ಆಭರಣ ಮತ್ತು ಬಟ್ಟೆಗಳೊಂದಿಗೆ ಶ್ರೀರಂಗಪಟ್ಟಣಕ್ಕೆ ಕಳಿಸಿ ಶಾಂತಿಸಂಧಾನ ಪ್ರಾಂಭಿಸಿದನೆಂದು ಚಿಕ್ಕದೇವರಾಜ ವಿಜಯ ಹೇಳುತ್ತದೆ. ಈ ವಿಜಯದಿಂದ ಮೈಸೂರಿನವರು ಚಿಕ್ಕನಾಯಕನಹಳ್ಳಿ, ಹಾಸನ, ಸಕ್ಕರೆಪಟ್ಟಣ ಮತ್ತು ವಸ್ತಾರೆವರೆಗೂ ತಮ್ಮ ಪ್ರಭಾವವನ್ನು ಬೀರಿದರು.

ತರೀಕೆರೆಯ ಹನುಮಪ್ಪನಾಯಕ ತನ್ನ ಅವ್ಯವಸ್ಥಿತ ವ್ಯವಹಾರಗಳಿಂದ ರಾಜ್ಯವನ್ನು ಹಾಳುಮಾಡುತ್ತಿದ್ದಾನೆಂದು ಕೇಳಿ ಸೋಮಶೇರನಾಯಕ ತನ್ನ ಸೇನಾನಿ ಸುಬ್ಬುನ್ನೀಸ್ ಕೃಷ್ಣಪ್ಪಯ್ಯನನ್ನು ಕಳಿಸಿ ಹನುಮಪ್ಪನಾಯಕನನ್ನು ಬಿದನೂರಿಗೆ ಕರೆತರಿಸಿ, ಆತನ ಮಗ ಸೀತಾರಾಮಪ್ಪ ನಾಯಕನನ್ನು ಪಟ್ಟಕ್ಕೇರಿಸಿ ಆ ಸಂಸ್ಥಾನವನ್ನು ಉದ್ಧರಿಸಿದನೆಂದು ಕೆಳದಿ ನೃಪವಿಜಯ ಹೇಳುತ್ತದೆ. ಸೋಮಶೇಖರನಾಯಕನ ಕೊನೆಯ ದಿನಗಳು ಯಾತನಾಮಯವಾಗಿದ್ದವು. ಬರಮೆ ಮಾವುತನೆಂಬ ಕುಹಕಿ 'ನೀವು ಆನೆಯ ಮದವನ್ನು ಸೇವಿಸಿದರೆ ದೇಹದಾಢ್ಯ ಹೆಚ್ಚುವುದೆಂದು' ಹೇಳಿ ಅದನ್ನು ಇವನಿಗೆ ಕುಡಿಸಿದ. ಇದರಿಂದ ಸೋಮಶೇಖರನಾಯಕ ಉನ್ಮಾದಾವಸ್ಥೆಗೆ ಬಂದು ಭ್ರಮಿಷ್ಠನಾಗಿ ಕ್ಷುದ್ರ ಜನರೊಡನೆ ಸ್ವೇಚ್ಛೆಯಾಗಿ ವ್ಯವಹರಿಸಲಾರಭಿಸಿದ ಎಂದು ಕೆಳದಿ ನೃಪವಿಜಯ ಹೇಳುತ್ತದೆ. ಇವನ ಪ್ರಜೆಗಳು ಇವನ ದುರ್ವ್ಯಾಪಾರಗಳನ್ನು ಸಹಿಸದೆ ಕೊಂದುಹಾಕಿದರೆಂದು ಬ್ರಿಟಿಷ್ ಪ್ರವಾಸಿ ಜಾನ ಫ್ರೈಯರ್ ಬರೆದಿದ್ದಾರೆ. ಇವನ ಅನಂತರ ಇವನ ಪತ್ನಿ ಚೆನ್ನಮ್ಮಾಜಿ ಆಳಿದಳು.

ಚೆನ್ನಮ್ಮಾಜಿ : ರಾಣಿ ಚೆನ್ನಮ್ಮಾಜಿ ೧೬೭೧ ರಿಂದ ೧೬೯೭ ರವರೆಗೆ ಆಡಳಿತ ನಡೆಸಿದಳು. ರಾಜ್ಯದಲ್ಲಿ ನಡೆಯುತ್ತಿದ್ದ ಒಳಸಂಚಿನಿಂದ ಪ್ರಾಣಕ್ಕೆ ಅಪಾಯವೆಂದು ತಿಳಿದು ಭುವನಗಿರಿಗೆ (ಕುವಲೇದುರ್ಗ) ಹೋದಳು. ಸಾಹಸಿಯೂ ಸಮರ್ಥೆಯೂ ಆದ ಈಕೆಯ ಕಾಲದಲ್ಲಿ ಬಸವಾಪಟ್ಟಣ ಮತ್ತು ಇತರ ಪ್ರದೇಶಗಳು ಕೆಳದಿ ಸಂಸ್ಥಾನಕ್ಕೆ ಬಂದವು. ಹುಲಿಕೆರೆಯಲ್ಲಿ ಕೋಟೆಯನ್ನು ಕಟ್ಟಿ ಚೆನ್ನಗಿರಿ ಎಂದು ನಾಮಕರಣ ಮಾಡಿದಳು. ಮೊಗಲರ ಕೈಗೆ ಸಿಕ್ಕದ ಹಾಗೆ ಅಲೆಯುತ್ತಿದ್ದ ಶಿವಾಜಿಯ ಮಗ ರಾಜಾರಾಮನಿಗೆ ಆಶ್ರಯ ಕೊಟ್ಟು ಔರಂಗಜೇಬನನ್ನೂ ಎದುರಿಸಿದಳು.

ಬಸವಪ್ಪನಾಯಕ : ಚೆನ್ನಮ್ಮಾಜಿಯ ನಂತರ ಆಳಿದ ದತ್ತುಪುತ್ರ ಬಸವಪ್ಪನಾಯಕ

(ಸು. ೧೬೭೭-೧೭೧೪) ರಾಜ್ಯವನ್ನು ಬಿಗಿಪಡಿಸಿದ್ದಲ್ಲದೆ. ಧರ್ಮ. ಸಾಹಿತ್ಯಗಳಿಗೆ ಪ್ರೋತ್ಸಾಹವಿತ್ತ.

ಸೋಮಶೇಖರನಾಯಕ II : ೧೭೧೪ – ೧೭೩೯

ಕೆಳದಿ ರಾಜವಂಶದ ಈ ಅರಸು ಹಿರಿಯ ಬಸವಪ್ಪನಾಯಕನ ಮಗ. ಇವನ ಕಾಲದಲ್ಲಿ ಬಿದನೂರಿಗೂ ಮಲೆಯಾಳದಲ್ಲಿನ ಕೋಲತ್ತಿರಿವಂಶಸ್ಥರಿಗೂ ಬಹುಕಾಲ ಯುದ್ಧ ನಡೆಯಿತು. ಈ ಮಲೆಯಾಳೀ ವಂಶದ ಅರಸುಮನೆತನದಲ್ಲಿ ಒಳಜಗಳಗಳಿದ್ದವು. ಇವರಿಗೂ ಮತ್ತು ಮಲಬಾರಿನ ಇತರ ಚಿಕ್ಕಪುಟ್ಟ ಸಂಸ್ಥಾನಗಳಾದ ಕಣ್ಣಾನೂರು ಮತ್ತು ಕೊಟ್ಟಾಯಂನ ರಾಜನಿಗೂ ಪದೇ ಪದೇ ಜಗಳಗಳಾಗುತ್ತಿದ್ದವು. ಬಿದನೂರಿನವರು ಈ ಜಗಳಗಳನ್ನು ಉಪಯೋಗಿಸಿಕೊಂಡು ತಮ್ಮ ರಾಜ್ಯವಿಸ್ತರಣೆ ಮಾಡಬಯಸಿದರು. ಆದರೆ ಡಚ್ ಮತ್ತು ಇಂಗ್ಲೀಷ್‌ನವರಿಗೆ ನಷ್ಟವಾಗುತ್ತಿದ್ದುದರಿಂದ ಈ ಯುದ್ಧವನ್ನು ಅವರು ನಿಲ್ಲಿಸಬಯಸುತ್ತಿದ್ದರು. ಜಗಳವಾಡುತ್ತಿರುವ ಪಂಗಡಗಳಿಗೆ ತಮಗೆ ಅನುಕೂಲವಾಗುವಂತೆ ಡಚ್ ಮತ್ತು ಇಂಗ್ಲೀಷರು ವ್ಯಾಪಾರಿ ಕರಾರುಗಳನ್ನು ಮಾಡಿಕೊಂಡರು.

ಸವಣೂರು ನವಾಬ ಅಬ್ದುಲ್ ಮಹಮ್ಮದ್ ಖಾನ್ ಆನೆ, ಕುದುರೆ ಮತ್ತು ಉಚಿತ ಉಡುಗೊರೆಗಳನ್ನು ಕಳಿಸಿ ಸೋಮಶೇಖರನೊಡನೆ ಸ್ನೇಹವನ್ನು ಮಾಡಿಕೊಂಡ. ಇದೇ ರೀತಿ ಸೋದೆಯ ಸದಾಶಿವನಾಯಕ ಈತನ ಸ್ನೇಹವನ್ನು ದೊರಕಿಸಿಕೊಂಡ. ಮೊದಲನೆಯ ಬಾಜೀರಾಯ ಇವರೆಲ್ಲರನ್ನೂ ಸೋಲಿಸಿ ಚೌತನ್ನು ವಸೂಲಿ ಮಾಡಿದ (೧೭೨೬-೨೭).

ಚಿತ್ರದುರ್ಗದ ಭರಮಪ್ಪನಾಯಕ ಗುತ್ತಲದ ಹನುಮಂತ ದೇಸಾಯಿಯೊಡನೆ ಸಖ್ಯ ಬೆಳೆಸಿ ಬಿದನೂರಿನ ಕಡೆಯಾಗಿದ್ದ ತರೀಕೆರೆ ಪಾಳ್ಯಕ್ಕೆ ಮುತ್ತಿಗೆ ಹಾಕಿದಾಗ ಸೋಮಶೇಖರ ಭರಮಪ್ಪನನ್ನು ಹಿಮ್ಮೆಟ್ಟಿಸಿದ.

ಎಲ್ಲ ಕೆಳದಿ ಅರಸರಂತೆ ಈತನೂ ಶೃಂಗೇರಿ ಮಠದ ವ್ಯವಹಾರದಲ್ಲಿ ಆಸ್ಥೆ ತೋರಿಸಿದ. ಈ ವ್ಯವಹಾರಗಳಲ್ಲಿ ಕಂಡುಬಂದ ಲೋಪದೋಷಗಳನ್ನು ಗುರುತಿಸಿ. ಅವುಗಳಿಗೆ ಕಾರಣರಾದವರನ್ನು ದಂಡಿಸಬೇಕೆಂದು ಸಚ್ಚಿದಾನಂದ ಭಾರತಿ ಸ್ವಾಮಿಗಳನ್ನು ಕೇಳಿಕೊಂಡ ಈತನ ಬಿನ್ನಹದ ಮೇರೆಗೆ ಸ್ವಾಮಿಗಳು ಬಿದನೂರಿಗೆ ದಯಮಾಡಿಸಿ ಭವ್ಯವಾದ ಸ್ವಾಗತವನ್ನು ಪಡೆದರು. ಕೂಡಲಿ ಮಾಧ್ವಮಠದ ರಘುರಾಜತೀರ್ಥ ಸ್ವಾಮಿಗಳಿಗೆ ಗಾಜನೂರು ಸೀಮೆಯಲ್ಲಿನ ಜಿನ್ನಗೊಂಡನ ಕೊಪ್ಪವನ್ನು ದಾನಮಾಡಿದ. ಕೆಂಚವ್ವ ಮತ್ತು ಮಲ್ಲಶೆಟ್ಟಿಯರು ಕಟ್ಟಿದ ಎರಡು ವಿರಕ್ತ ಮಠಗಳನ್ನು ಪೋಷಿಸಿದ. ಮತ್ತೂರು ಸೀಮೆಯ ಮಲಯಾಳ ಮಠದ

ಗ್ರಾಮದಲ್ಲಿ ವೆಂಕಟಯ್ಯ ಎಂಬುವನು ಸ್ಥಾಪಿಸಿದ ಅವಿಮುಕ್ತೇಶ್ವರ ಮತ್ತು ಬಿಂದುಮಾಧವ ದೇವರ ಆರಾಧನೆಗೂ ಮತ್ತು ತಾನು ಈ ದೇವಸ್ಥಾನದ ಹತ್ತಿರ ಸ್ಥಾಪಿಸಿದ ಚಂದ್ರಶೇಖರಪುರ ಅಗ್ರಹಾರಕ್ಕೂ ಭೂದಾನ ಮಾಡಿದ. ಬಿದನೂರಿನಲ್ಲಿ ತಟಾಕ–ತೋಟಗಳಿಂದ ಶೋಭಿಸುತ್ತಿದ್ದ ಅರಮನೆಯನ್ನು ಕಟ್ಟಿದ. ನೀಲಕಂಠೇಶ್ವರ ದೇವಸ್ಥಾನವನ್ನು ಪುನರುಜ್ಜೀವನಗೊಳಿಸಿ ಸುವರ್ಣ ಶಿಖರದಿಂದ ಅಲಂಕರಿಸಿದ. ಪ್ರಜೆಗಳ ಹಿತಕ್ಕೆ ಬಹುವಾಗಿ ಶ್ರಮಿಸಿದ. ವೃದ್ಧಾಪ್ಯದಲ್ಲಿ ತೀರ್ಥಯಾತ್ರೆ ಹೊರಟು ಶೃಂಗೇರಿ, ಶಂಕರನಾರಾಯಣ, ಕೊಲ್ಲೂರು, ಗೋಕರ್ಣಗಳನ್ನು ಸಂದರ್ಶಿಸಿದ. ೨೫ ವರ್ಷ ಆಳಿದ ಅನಂತರ ಶಿವಮೊಗ್ಗೆಯಲ್ಲಿ ತೀರಿಕೊಂಡ. ಬಿದನೂರಿನಲ್ಲಿ ಇವನ ಸಮಾಧಿ ಮಾಡಲಾಯಿತು.

ಬಸವಪ್ಪನಾಯಕ II : ೧೭೩೯ – ೧೭೫೪

ಕೆಳದಿಯ ರಾಜವಂಶದ ಅರಸು (೧೭೩೯ – ೧೭೫೪) ಎರಡನೆಯ ಸೋಮಶೇಖರನ ಉತ್ತರಾಧಿಕಾರಿ. ಈತನ ತಮ್ಮ ವೀರಭದ್ರನ ಮಗ. ಈತನ ವಿವೇಕ ಮತ್ತು ದೂರದೃಷ್ಟಿಯನ್ನು ನೋಡಿ ಈತನಿಗೆ ಬುದ್ಧಿ ಬಸವಪ್ಪನಾಯಕ ಎಂದೂ ಬಿಳಿಯ ವಿಭೂತಿ ಇವನಿಗೆ ಇಷ್ಟವಾಗಿತ್ತೆಂದು ಬೂದಿ ಬಸವಪ್ಪನಾಯಕ ಎಂದೂ ಹೆಸರುಗಳು ಇದ್ದಂತೆ ತಿಳಿಯುತ್ತದೆ.

ಇವನ ಆಳ್ವಿಕೆಯಲ್ಲಿ ಆರ್ಕಾಟಿನ ನವಾಬಗಿರಿಗೆ ಪೈಪೋಟಿ ನಡೆದಿತ್ತು (೧೭೪೮). ಇಂಗ್ಲಿಷಿನವರು ಮೊಹಮದ್ ಆಲಿಯನ್ನೂ, ಫ್ರೆಂಚರು ಚಂದಾಸಾಹೇಬನನ್ನೂ ತಮ್ಮ ಪಕ್ಷದವರನ್ನಾಗಿ ಆರಿಸಿದರು. ಚಂದಾಸಾಹೇಬ ಸತಾರಾದಿಂದ ಆರ್ಕಾಟಿಗೆ ಹೋಗುತ್ತಿದ್ದಾಗ, ಚಿತ್ರದುರ್ಗದವರೂ, ಬಿದನರಿನವರೂ ಅವನ ಸ್ನೇಹವನ್ನು ಬಯಸಿದರು. ಈ ಇಬ್ಬರಿಗೂ ಈ ಸಂಬಂಧದಲ್ಲಿ ಮಾಯಕೊಂಡದಲ್ಲಿ ಕದನವಾಯಿತು. ಇದರಲ್ಲಿ ಬಿದನೂರಿನವರು ಗೆದ್ದರು. ಬಸವಪ್ಪನಾಯಕ ಚಂದಾಸಾಹೇಬನನ್ನು ಸೆರೆಹಿಡಿದ. ಅವರೆ ರಾಜಧಾನಿಗೆ ಕರೆದೊಯ್ಯು ತರುವಾಗ ಅವನು ತಪ್ಪಿಸಿಕೊಂಡು ಆರ್ಕಾಟಿಗೆ ಹೋದ.

ಅನಂತರ ಬಸವಪ್ಪನಾಯಕ ತರೀಕೆರೆ ಪಾಳೆಯಗಾರನ ದಾಳಿಯನ್ನು ಹಿಮ್ಮೆಟ್ಟಿಸಿದ. ಮರಾಠರು ಮೇಲಿಂದ ಮೇಲೆ ಇವನ ರಾಜ್ಯದ ಮೇಲೆ ದಾಳಿ ಮಾಡುತ್ತಿದ್ದರು. ಅವರನ್ನೂ ಸಮರ್ಥವಾಗಿ ಎದುರಿಸಿದ. ಇವನ ಕಾಲದಲ್ಲಿ ಬಿದನೂರನ್ನು ಸಂದರ್ಶಿಸಿದ ಒಬ್ಬ ವಿದೇಶಿ ಪ್ರವಾಸಿ ಇವನ ಆಡಳಿತದ ಬಗ್ಗೆ ಹೊಗಳಿದ್ದಾನೆ. 'ಬಿದನೂರಿನ ಅರಸು ಮಲಬಾರಿನವರಿಗಿಂತ ಶಕ್ತಿವಂತ. ಅವನ ರಾಜ್ಯದಲ್ಲಿ ಅನ್ನಕ್ಕೆ ಕೊರತೆಯಿಲ್ಲ. ಬಿದನೂರು ದಕ್ಷಿಣ ಭಾರತದ ಕಣಜ. ಇಲ್ಲಿ

ಗಂಧದ ಮರಗಳು ವಿಫುಲವಾಗಿವೆ. ಬಿದನೂರಿನ ತೀರಪ್ರದೇಶದಿಂದ ಸೊಗಸಾದ ರಸ್ತೆಯಿದೆ. ಈ ರಸ್ತೆಯ ಸಾಲುಮರಗಳನ್ನು ಪ್ರಜೆಗಳು ರಕ್ಷಿಸಬೇಕು. ಈ ರಸ್ತೆಯು ಎಷ್ಟು ಭದ್ರವೆಂದರೆ ಯಾರು ಬೇಕಾದರೂ ಹಣವನ್ನಿಟ್ಟುಕೊಂಡು ಮಲಗಿಕೊಳ್ಳಬಹುದು. ಯಾರಾದರೂ ಈ ರಸ್ತೆಯ ಪಕ್ಕದಲ್ಲಿ ಮಲಗಿದವರು ಹಣ ಕಳೆದುಕೊಂಡರೆ, ಸುತ್ತಮುತ್ತಲ ಜನರು ಶಿಕ್ಷೆಗೆ ಗುರಿಯಾಗುತ್ತಾರಲ್ಲದೆ, ಕಳೆದ ಹಣವನ್ನು ಭರ್ತಿ ಮಾಡಬೇಕಾಗುತ್ತದೆ' ಎಂದು ಅವನು ಹೇಳಿದ್ದಾನೆ.

ತನ್ನ ವಂಶಜರಂತೆ ಬಸವಪ್ಪನಾಯಕನೂ ಧರ್ಮಕಾರ್ಯದಲ್ಲಿ ನಿರತನಾಗಿದ್ದ. ಬಿದನೂರಿನ ಹತ್ತಿರ ಸುರುಚಿರ ಮಠವನ್ನು ಕಟ್ಟಿಸಿ ಅದರ ಸುತ್ತಲಿರುವ ಊರಿಗೆ ಭದ್ರರಾಜಪುರವೆಂದು ಹೆಸರಿಟ್ಟ. ಡಂಬಳದ ಸಿದ್ಧೇಶ್ವರ ಗದ್ದುಗೆ ತೋಟದ ಸ್ವಾಮಿಗಳಿಗೆ ಭೂಸ್ವಾಸ್ಥೆಯನ್ನು ಕಲ್ಪಿಸಿದ.

ಉಡುಪಿಯ ಬಳಿ ಮಲ್ಪೆಯ ಹತ್ತಿರ ಒಂದು ಕೋಟೆ. ಅದೇ ತೀರಪ್ರದೇಶದಲ್ಲಿ ತೋನ್ಸೆ ಕೋಟೆ. ಕುಂದಾಪುರದಲ್ಲಿ ಅರಮನೆ, ಮಂಗಳೂರು ಹತ್ತಿರ ಶಿವರಾಜೇಂದ್ರಗಿರಿಯೆಂಬ ಕೋಟೆ, ಸಿದ್ಧಾಪುರದ ಪೇಟೆಯ ಹತ್ತಿರ ಮಂತ್ರರಾಜಪುರ ಇವೆಲ್ಲ ಇವನಿಂದ ನಿರ್ಮಿತವಾದುವು. ಇದಲ್ಲದೆ ಆನಂದಪುರ, ಸುಬ್ರಮಣ್ಯಗಳಲ್ಲಿ ಉತ್ಸವಗಳನ್ನೇರ್ಪಡಿಸಿದ. ಲಕ್ಷಾಂತರ ಜಂಗಮರಿಗೆ ಭಕ್ಷ್ಯ, ಭೋಜ್ಯ, ವಸ್ತ್ರ, ವಿಭೂತಿ, ರುದ್ರಾಕ್ಷಿ, ಆಗಮ ಶಿವಶಾಸ್ತ್ರಲಿಖಿತ ಪುಸ್ತಕ, ಛತ್ರ, ಪಾದುಕೆ, ಹಸ್ತಾಧಾರದಂಡ ಮುಂತಾದ ಇಚ್ಛಾಪದಾರ್ಥಗಳನ್ನು ಕೊಡಿಸಿದ. ವೃದ್ಧಾಪ್ಯದಲ್ಲಿ ಕೊಲ್ಲೂರು, ಕೋಟೇಶ್ವರ, ವಸುಪುರ, ಶಂಕರನಾರಾಯಣ ಮತ್ತು ಮಂತ್ರರಾಜಪುರಗಳಿಗೆ ತೀರ್ಥಯಾತ್ರೆ ಮಾಡಿದ. ಈತನಿಗೆ ಚೆನ್ನಮ್ಮಾಜಿ ಮತ್ತು ವೀರಮ್ಮಾಜಿ ಎಂಬ ಇಬ್ಬರು ಪತ್ನಿಯರು. ಈತನಿಗೆ ಮಕ್ಕಳಿಲ್ಲದ್ದರಿಂದ ಚೆನ್ನಬಸವಪ್ಪನೆನ್ನುವ ಹುಡುಗನನ್ನು ದತ್ತು ತೆಗೆದುಕೊಂಡ. ಬಸವಪ್ಪನಾಯಕ ಸು. ೧೭೫೪ರಲ್ಲಿ ಮೃತನಾದ.

ವೀರಮ್ಮಾಜಿ (೧೭೫೬ – ೧೭೬೩)

ಈಕೆ ಬಸವಪ್ಪನಾಯಕನ ಹೆಂಡತಿ (೧೭೫೬ – ೧೭೬೩). ಮುಮ್ಮಡಿ ಸೋಮಶೇಖರನಾಯಕನನ್ನು ದತ್ತು ತೆಗೆದುಕೊಂಡು ಆಡಳಿತ ಸೂತ್ರವನ್ನು ತಾನೇ ಹಿಡಿದಳು. ಮರಾಠರ ಹಾವಳಿ ದಿನೇದಿನೇ ಜಾಸ್ತಿಯಾಗಲು ಅವರನ್ನು ಹಣಕೊಟ್ಟು ತೃಪ್ತಿಪಡಿಸಲು ಪ್ರಜೆಗಳ ಮೇಲೆ ಶೇಕಡ ಐವತ್ತರ ತೆರಿಗೆ ವಿಧಿಸಿದಳು. ಅವಳ ನಡತೆ ಮತ್ತು ಈ ಕ್ರಮದಿಂದ ಜನರು ಕ್ಷುದ್ರಗೊಂಡರು. ಈ ರೀತಿ ಕುಗ್ಗಿ ಬಲಹೀನವಾಗಿದ್ದ ರಾಜ್ಯಕ್ಕೆ ಹೈದರಾಲಿ ನುಗ್ಗಿ ಬಿದನೂರನ್ನು ೧೭೬೩ರಲ್ಲಿ ವಶಪಡಿಸಿಕೊಂಡ. ವಿಜಯನಗರ ಸಾಮ್ರಾಜ್ಯಕ್ಕೆ ಅನುಪಮ ಸೇವೆ ಸಲ್ಲಿಸಿ ಅದರ

ಸಂಪ್ರದಾಯ ಧ್ಯೇಯಗಳನ್ನು ಸಮರ್ಥವಾಗಿ ಮುಂದುವರೆಸಿ ಚಿಕ್ಕಪುಟ್ಟ ಅರಸರಾದ ಸೋದೆ ಬಿಳಗಿ, ತರೀಕೆರೆ, ಬಸವಾಪಟ್ಟಣ, ಚಿತ್ರದುರ್ಗ – ಇವರ ಕೂಡ ಒಡನಾಟ ಬಡಿದಾಟಗಳೊಡನೆ ರಾಜ್ಯನಿರ್ವಹಣೆ ಮಾಡಿ, ಬಾರಿ ಶತ್ರುಗಳಾದ ಆದಿಲ್ ಶಾಹೀ, ಮುಗಲರು, ಮರಾಠರು ಮತ್ತು ಮೈಸೂರು ಅರಸರೊಡನೆ ಯುದ್ಧ ಹೂಡಿ, ವಿದೇಶೀಯರಾದ ಪೋರ್ಚುಗೀಸ್, ಡಚ್, ಫ್ರೆಂಚ್ ಮತ್ತು ಇಂಗ್ಲಿಷರೊಡನೆ ವ್ಯಾಪಾರಕ್ಕಾಗಿ ಕುಶಲ ವ್ಯವಹಾರ ನಡೆಸಿ ಸುಮಾರು ೨೫೦ ವರ್ಷಗಳ ಕಾಲ ಕರ್ನಾಟಕದ ಪ್ರಬಲ ರಾಜಕೀಯ ಶಕ್ತಿಯಾಗಿದ್ದ ಕೆಳದಿರಾಜ್ಯ ಕೊನೆಗೊಂಡಿತು.

(ಪ್ರೊ. ಎಚ್. ವಿ. ಶ್ರೀನಿವಾಸಮೂರ್ತಿಯವರೊಡನೆ)

■

೧೫

ಬೆಳವಡಿಯ ಅರಸುಮನೆತನ

ಬೆಳವಡಿಯ ಭೂಗೋಳ

ಬೆಳವಡಿ, ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನ ಒಂದು ಹಳ್ಳಿ. ಮಲಪ್ರಭಗೆ ಉತ್ತರದಲ್ಲಿ –೮ ಕಿ.ಮೀ. ದೂರದಲ್ಲಿದೆ. ಪಶ್ಚಿಮಕ್ಕೆ ಒಂದು ಹಳ್ಳ ಹರಿಯುತ್ತದೆ. ಈ ಹಳ್ಳವನ್ನು ಕಟ್ಟಿ ಬೆಳವಡಿಯ ರಾಜರು 'ಸಿದ್ಧಸಮುದ್ರ' ವನ್ನು ನಿರ್ಮಿಸಿದ್ದರು. ಈ ಭಾಗದಲ್ಲಿ ಬೆಳೆಯುವ ಜೋಳ, ಗೋಧಿ, ನಾನಾ ತರಹದ ಕಾಯಿಪಲ್ಯಗಳು ಹೆಸರುವಾಸಿ. 'ಊಟಕ್ಕೆ ಉಡಿಕೇರಿ, ತೋಟಕ್ಕೆ ಬೆಳವಡಿ' ಎನ್ನುವುದು ಗಾದೆ ಮಾತು,.

ಬೆಳವಡಿಗೆ ಸ್ವಲ್ಪ ದೂರದಲ್ಲಿರುವ ಸೊಗಲ ಗುಡ್ಡ, ಎಲ್ಲಮ್ಮನ ಗುಡ್ಡಗಳು ಬೆಳವಡಿ ರಾಜ್ಯಕ್ಕೆ ಸ್ವಾಭಾವಿಕ ರಕ್ಷಣೆಗಳಾಗಿದ್ದವು. ಪಶ್ಚಿಮಕ್ಕಿರುವ ಗುಡ್ಡಗಾಡುಗಳು, ತುಂಬಿ ಹರಿಯುವ ಹೊಳೆಹಳ್ಳಗಳು ರಾಜಧಾನಿಗೆ ಭದ್ರವಾದ ದುರ್ಗಗಳಂತಿದ್ದವು.

ಪೂರ್ವೇತಿಹಾಸ

ರಾಷ್ಟ್ರಕೂಟ ಸಂತತಿಯವರಾದ ರಟ್ಟರು ಬೆಳಗಾವಿ ಜಿಲ್ಲೆಯಲ್ಲಿ ಕಲ್ಯಾಣ ಚಾಲುಕ್ಯರ ಮತ್ತು ದೇವಗಿರಿ ಯಾದವರ ಸಾಮಂತರಾಗಿ ಕ್ರಿ.ಶ. ೯೭೫ ರಿಂದ ೧೨೩೩ರ ವರೆಗೆ ಆಳಿದರು. ಮೊದಲು ಸವದತ್ತಿ, ನಂತರ ಬೆಳಗಾವಿ ಇವರ ರಾಜಧಾನಿಗಳು. ಇವರು ಜೈನರು. ಆಗ ಜೈನಮತದ ಜತೆಗೆ ಶೈವಮತವೂ ಪ್ರಬಲವಾಗಿತ್ತು. ಬೆಳವಡಿಯಲ್ಲಿರುವ ವೀರಭದ್ರದೇವಾಲಯದ ಗರ್ಭಗುಡಿ ೧೦ನೆಯ ಶತಮಾನದ್ದು, ೧೧–೧೨ನೆಯ ಶತಮಾನದ ಎರಡು ಜೈನ ಶಾಸನಗಳು ಬೆಳವಡಿಯಲ್ಲಿವೆ. ಒಂದು ಶಾಸನದಲ್ಲಿ ಇಲ್ಲಿಯೂ ಸಹಸ್ರಕೂಟ ಜಿನಬಸದಿಯ ಸೌಂದರ್ಯ ಲಕ್ಷ್ಮಿಯ ನಿವಾಸದಂತೆ ಇತ್ತೆಂದು ವರ್ಣಿಸಲಾಗಿದೆ. ೧೧–೧೨ನೆಯ ಶತಮಾನಗಳಲ್ಲಿ ಬೆಳವಡಿಯಲ್ಲಿ ಶೈವ–ಜೈನ ಧರ್ಮಗಳೂ ಚಾಲುಕ್ಯಶೈಲಿಯ ದೇವಾಲಯಗಳೂ ಇದ್ದವು.

ಬೆಳವಡಿಯು ೧೭-೧೮ನೆಯ ಶತಮಾನಗಳಲ್ಲಿ ರಾಜಕೀಯ ಪ್ರಸಿದ್ಧಿಯನ್ನು ಪಡೆಯಿತು. ಈ ಶತಮಾನಗಳ ಇತಿಹಾಸಕ್ಕೆ ಮುಖ್ಯ ಆಧಾರಗಳು ಶೇಷೋ ಶ್ರೀನಿವಾಸ ಮುತಾಲಿಕ್ ಬರೆದ 'ಶಿವಾಜಿ – ಮಲ್ಲಮ್ಮಾಜಿ ಸಮರೋತ್ಸವ' ಶ್ರೀ ನೀಲಕಂಠಶಿವಾಚಾರ್ಯ ವಿರಚಿತ 'ತುರಕಾರಿ ಪಂಚಮರ ಇತಿಹಾಸ' ಎರಡು ಶಾಸನಗಳು ಮತ್ತು ಯಾದವಾಡದಲ್ಲಿರುವ ಸಮಕಾಲೀನ ಶಿಲ್ಪ. 'ಸಮರೋತ್ಸವ'ದಲ್ಲಿ ಸಮಕಾಲೀನ ಮಾಹಿತಿಯಿರುವುದರಿಂದಲೂ ಮತ್ತು ಇದನ್ನು ವಿದ್ವಾಂಸರು ವಿಮರ್ಶಿಸಿರುವುದರಿಂದಲೂ ಆ ಗ್ರಂಥವನ್ನು ಆಧರಿಸಿ ಈ ಲೇಖನವನ್ನು ಬರೆಯಲಾಗಿದೆ.

'ಸಮರೋತ್ಸವ' ವನ್ನು ಬರೆದ ಮುತಾಲಿಕ ಮಲ್ಲಮ್ಮನ ಜತೆಗೆ ಕೊಲ್ಲಾಪುರಕ್ಕೆ ಹೋಗಿ, ಅವಳು ರಾಜಾರಾಮನ ಹೆಂಡತಿ ತಾರಾಬಾಯಿಗೆ ಹೇಳಿದ ತನ್ನ ಕಥೆಯನ್ನು ಕೇಳಿ, ಅದನ್ನು ಬರೆದುಕೊಂಡು, ಬಳಿಕ ಅದನ್ನು ತಾರಾಬಾಯಿಗೆ ಓದಿ ಹೇಳಿ, ಅವಳಿಂದ ಮೆಚ್ಚುಗೆಯನ್ನೂ, ಬಹುಮಾನವನ್ನು ಪಡೆದನಂತೆ. ಮಲ್ಲಮ್ಮ ಲಿಂಗೈಕ್ಯಳಾದ ಮೇಲೆ ಈ ಮಾಹಿತಿಯನ್ನು ಈ ಪುಸ್ತಕದಲ್ಲಿ ಹೆಚ್ಚಿನದಾಗಿ ಸೇರಿಸಲಾಗಿದೆ. ಸದ್ಯ ಲಭ್ಯವಿರುವ ಪ್ರತಿಯನ್ನು ಬ್ರಿಟಿಷರ ಆಳ್ವಿಕೆಯಲ್ಲಿ ನಕಲು ಮಾಡಿದಾಗ, ಕೆಲವು ಪ್ರಕ್ಷಿಪ್ತಭಾಗಗಳು ಸೇರಿರುವ ಸಾಧ್ಯತೆ ಇದೆ. ಇದರ ಮರಾಠಿ ಭಾಷೆಯಲ್ಲಿ ತಪ್ಪುಗಳಿವೆ ಮತ್ತು ಯುದ್ಧವಾದ ತಾರೀಖಿನಲ್ಲಿ ಕೆಲವು ತಿಂಗಳ ವ್ಯತ್ಯಾಸವಿರುವುದರಿಂದ ಇದು ಅಷ್ಟು ನಂಬಲರ್ಹವಲ್ಲವೆಂದು ಕೆಲವರು ವಾದಿಸಿದ್ದಾರೆ. ತಪ್ಪುಗಳು, ಪ್ರಕ್ಷಿಪ್ತ ಭಾಗಗಳು ಕಡಿಮೆ. ಭಾಷೆ ಸ್ವಲ್ಪ ಅಶುದ್ಧ. ಹೀಗಿರುವಾಗ ಮಾಹಿತಿ ಖಚಿತವಲ್ಲವೆಂದು ಹೇಳುವುದು ಅಸಾಧು. ಶಿವಾಜಿ ಮತ್ತು ಮಲ್ಲಮ್ಮಾಜಿಯವರ ಮಧ್ಯ ಯುದ್ಧವಾದ ಮೇಲೆ ರಾಜಿಯಾಯಿತೆನ್ನುವುದಕ್ಕೆ ಶಿಲ್ಪದ ಬೆಂಬಲವಿರುವುದರಿಂದಲೂ, ಸಮಕಾಲೀನ ಇಂಗ್ಲೀಷ್ Factory Recordನಲ್ಲಿ ಯುದ್ಧದ ಫಲಶ್ರುತಿ ಹೆಚ್ಚು ಕಡಿಮೆ ಹೀಗೆಯೇ ಇರುವುದರಿಂದಲೂ ಮುತಾಲಿಕನ ಬರೆಹ ಬಹುಮಟ್ಟಿಗೆ ನಂಬಲರ್ಹವೆಂದು ಹೇಳಬಹುದು.

ಬೆಳವಡಿ – ಸ್ವಾದಿ

ಈ ಪುಸ್ತಕದಲ್ಲಿ ಎರಡು ಭಾಗಗಳಿವೆ. ಮೊದಲನೆಯ ಭಾಗದಲ್ಲಿ ಮಲ್ಲಮ್ಮಾಜಿ ಸ್ವಾದಿಮನೆತನದಲ್ಲಿ ಹುಟ್ಟಿದ್ದರಿಂದ, ಈ ಸಂಸ್ಥಾನದ ಮಾಹಿತಿ, ಆಕೆಯ ಜನನ, ಬಾಲ್ಯ, ವಿದ್ಯಾಭ್ಯಾಸ, ಮದುವೆ ಇವುಗಳ ವರ್ಣನೆ ಇವೆ. ಸ್ವಾದಿ ಅರಸು ಮಧುಲಿಂಗನಾಯಕನಿಗೆ ಸದಾಶಿವನಾಯಕನೆನ್ನುವ ಮಗ ಮತ್ತು ಮಲ್ಲಮ್ಮಾಜಿ ಎನ್ನುವ ಮಗಳು ಇದ್ದರು. ಮಲ್ಲಮ್ಮಾಜಿ ತನ್ನ ತಾಯಿ ವೀರಮ್ಮಾಜಿಯಂತೆ

ರೂಪವತಿಯಾಗಿದ್ದಳು; ಚಾಣಾಕ್ಷಳೂ ಬುದ್ಧಿವಂತಳೂ ಆಗಿದ್ದಳು. ಅವಳ ಮಾತುಗಳು ಚಿತ್ತಾಕರ್ಷಕವಾಗಿದ್ದವು.

ಮಲ್ಲಮ್ಮಾಜಿ ಐದು ವರ್ಷದವಳಾದ ಕೂಡಲೇ ತನ್ನ ಅಣ್ಣ ಸದಾಶಿವನಾಯಕನ ಜೊತೆಗೆ ವಿದ್ಯಾಭ್ಯಾಸವನ್ನು ಆರಂಭಿಸಿದಳು. ಅವರಿಬ್ಬರು ಕನ್ನಡ, ಮರಾಠಿ, ಉರ್ದು ಮತ್ತು ಸಂಸ್ಕೃತ ಭಾಷೆಗಳನ್ನು ಓದಿ ಬರೆಯಲು ಕಲಿತರು. ಇವರು ಹತ್ತು ವರ್ಷದವರಾದಾಗ ಈ ಭಾಷೆಗಳಲ್ಲಿ ನಿಷ್ಣಾತರಾದರು. ಇವರ ವಿದ್ಯಾಭ್ಯಾಸದ ಸಲುವಾಗಿ ಮಧುಲಿಂಗನಾಯಕನು ಸ್ವಾದಿಯಲ್ಲಿ ಒಂದು ದೊಡ್ಡ ಶಾಲೆಯನ್ನು ಸ್ಥಾಪಿಸಿದನು. ಅದರಲ್ಲಿ ನೂರಾರು ವಿದ್ಯಾರ್ಥಿಗಳು ಇದ್ದರು. ಅವರು ವೀರಶೈವ, ಗೌಡಸಾರಸ್ವತ, ನಾಡವ, ಒಕ್ಕಲಿಗ, ಲಿಂಗಾಯಿತ, ದೇಶಸ್ಥ ಮತ್ತು ಮಾಧ್ವ ಪಂಗಡಗಳಿಗೆ ಸೇರಿದ್ದರು. ಶಂಕರಭಟ್ಟರೆಂಬ ಪ್ರಖ್ಯಾತ ಸಂಸ್ಕೃತವಿದ್ವಾಂಸರು ಒಬ್ಬ ಅಧ್ಯಾಪಕರಾಗಿದ್ದರು. ಮಧುಲಿಂಗನಾಯಕನು ಎಲ್ಲ ವಿದ್ಯಾರ್ಥಿಗಳಿಗೂ ಯುದ್ಧ ವಿದ್ಯೆಯನ್ನು ಕಲಿಸಲು ಆರಂಭಮಾಡಿದನು. ಇದಕ್ಕಾಗಿ ರಣವೀರಸಿಂಗ್ ಎನ್ನುವ ವೀರಯೋಧನನ್ನು ನೇಮಿಸಿದನು. ಸದಾಶಿನಾಯಕನು ಕತ್ತಿವರಸೆಯನ್ನು ಉತ್ಸಾಹದಿಂದ ಕಲಿತನು. ಅದನ್ನು ನೋಡಿ ಮಲ್ಲಮ್ಮಾಜಿಯೂ ಕತ್ತಿವರಸೆಯನ್ನು ಕಲಿತಳು. ಧನುರ್ವಿದ್ಯೆಯಲ್ಲಿ ಮಲ್ಲಮ್ಮ ಬಹಳ ದಿಟ್ಟೆಯಾದಳು. ಗುರಿಯಿಟ್ಟು ಭಲ್ಲೆಯನ್ನು ಸರಿಯಾಗಿ ಎಸೆಯುತ್ತಿದ್ದಳು. ಶೂರತ್ವವು ಅವಳಿಗೆ ಸ್ವಾಭಾವಿಕವಾಗಿಯೇ ಬಂದಿತ್ತು. ಮಲ್ಲಮ್ಮಾಜಿಯು ಬಾಲ್ಯದಿಂದಲೂ ಯುದ್ಧಕಲೆಯಲ್ಲಿ ಶೂರತನವನ್ನು ತೋರಿಸುತ್ತಿದ್ದಳು. ಅವಳಿಗೆ ಯಾವುದೇ ಭಯವಿರಲಿಲ್ಲ. ಅದರಿಂದ ಎಲ್ಲ ಸ್ತ್ರೀಪುರುಷರಲ್ಲಿಯೂ ಪರಾಕ್ರಮಶಾಲಿಯಾಗಿದ್ದಳು.

ತಂದೆತಾಯಿ ಮತ್ತು ಗುರುಹಿರಿಯರ ವಿಷಯದಲ್ಲಿ ಮಲ್ಲಮ್ಮಾಜಿಗೆ ಅನನ್ಯ ಭಕ್ತಿ ಇತ್ತು. ಬೆಳಿಗ್ಗೆ ಬಹಳ ಬೇಗ ಏಳುತ್ತಿದ್ದಳು. ಪ್ರಾತರ್ವಿಧಿಗಳನ್ನು ಮುಗಿಸಿಕೊಂಡು ಸ್ನಾನಮಾಡುತ್ತಿದ್ದಳು. ತನ್ನ ಅಣ್ಣನ ಜೊತೆಗೆ ಶಿವಪೂಜೆಯನ್ನು ಮಾಡುತ್ತಿದ್ದಳು. ತನ್ನ ಅರಮನೆಯ ಬಿಲ್ವವೃಕ್ಷಕ್ಕೆ ಪೂಜೆಮಾಡಿ, ಐದು ಸಾರಿ ಪ್ರದಕ್ಷಿಣೆ ಹಾಕಿ, ಸಾಷ್ಟಾಂಗ ನಮಸ್ಕಾರ ಮಾಡುವುದು ಅವಳ ದಿನನಿತ್ಯದ ಕಾರ್ಯಕ್ರಮವಾಗಿತ್ತು. ಆಮೇಲೆ ಅಡುಗೆಮನೆಗೆ ಹೋಗಿ ಅಡುಗೆ ಮಾಡಿ, ಮೊದಲು ತಂದೆಗೆ ಊಟಕ್ಕೆ ಬಡಿಸಿ, ಆಮೇಲೆ ತನ್ನ ತಾಯಿ ಜೊತೆಗೆ ಊಟ ಮಾಡುತ್ತಿದ್ದಳು.

ಒಂದು ಸಲ ಹೂಲಿ ಸಿಂಹಾಸನಾಧಿಪತಿ ಶ್ರೀ ಸಿದ್ಧವೀರಯೋಗಿ ಮಹಾರಾಜರು ಗೋಕರ್ಣಕ್ಕೆ ಹೋಗಿ, ಮಹಾಬಲೇಶ್ವರನ ದರ್ಶನ ತೆಗೆದುಕೊಂಡು ಬರುತ್ತ, ಸ್ವಾದಿಯಲ್ಲಿ ತಂಗಿದರು. ಸದಾಶಿವನಾಯಕ ಮತ್ತು ಮಲ್ಲಮ್ಮಾಜಿಯವರು ಅವರ ಸೇವೆ ಮಾಡಿ, ಅವರಿಂದ ಆಶೀರ್ವಾದವನ್ನು ಪಡೆದರು.

ಮಲ್ಲಮ್ಮಾಜಿ ಪ್ರಾಪ್ತ ವಯಸ್ಕಳಾದಾಗ ಅಂದರೆ ಅವಳಿಗೆ ೧೬ ವರ್ಷ ವಯಸ್ಸಾದಾಗ ಅವಳ ಮದುವೆಯನ್ನು ಬೆಳವಡಿ ರಾಜಕುಮಾರ ಈಶಪ್ರಭುವಿನೊಂದಿಗೆ ಬಹಳ ವಿಜೃಂಭಣೆಯಿಂದ ಮಧುಲಿಂಗನಾಯಕ ದಂಪತಿಗಳು ಮಾಡಿದರು. ಈಶಪ್ರಭು, ಮಧುಲಿಂಗನಾಯಕನ ದಾಯಾದಿ ತಂಗಿ ನೀಲಮ್ಮಾಜಿಯ ಮಗ. ಆ ರಾಜ್ಯದ ಎಲ್ಲಾ ದೇವಸ್ಥಾನಗಳಲ್ಲಿಯೂ ದೀಪೋತ್ಸವವನ್ನು ಮಾಡಿಸಿದರು. ಬ್ರಾಹ್ಮಣರು, ಜಂಗಮರು ಮತ್ತು ಬಡಬಗ್ಗರಿಗೆ ಯಥೇಚ್ಚವಾಗಿ ಅನ್ನಸಂತರ್ಪಣೆಯನ್ನು ಏರ್ಪಡಿಸಿದ್ದರು. ಮದುವೆಗೆ ಬೇರೆ ರಾಜ್ಯದ ಮುತ್ಸದ್ದಿಗಳು ಬಂದಿದ್ದರು. ಲಿಂಗಾಯಿತ ಧರ್ಮದ ಪ್ರಕಾರ ಪಂಚಾಚಾರ್ಯ ಸ್ವಾಮಿಗಳಿಗೆ ಭಾರಿ ದಕ್ಷಿಣೆ ಮತ್ತು ಕಾಣಿಕೆಗಳನ್ನು ಕೊಟ್ಟು ಸತ್ಕರಿಸಲಾಯಿತು. ಹೂಲಿ, ಕೆಳದಿ, ಕೂಡ್ಲಿಗಿ ಮತ್ತು ಸಂಕೇಶ್ವರ ಸಿಂಹಾಸನಗಳ ಪ್ರತಿನಿಧಿಗಳು ಬಂದಿದ್ದರು. ಎಲ್ಲಾ ಧರ್ಮಗುರುಗಳೂ ಮಲ್ಲಮ್ಮಾಜಿ ಈಶಪ್ರಭು ದಂಪತಿಗಳನ್ನು ಆಶೀರ್ವದಿಸಿದರು.

ಮಧುಲಿಂಗನಾಯಕನು ರಾಜದಂಪತಿಗಳಿಗೆ ಆನೆ, ಕುದುರೆ, ಒಂಟೆಗಳನ್ನು ಕೊಟ್ಟು, ಅವರನ್ನು ಬೆಳವಡಿ ಸಂಸ್ಥಾನಕ್ಕೆ ಕಳುಹಿಸಿಕೊಟ್ಟನು. ಈಶಪ್ರಭು ಮಲ್ಲಮ್ಮಾಜಿಯವರು ಬಹು ಚತುರರು, ರಾಜ್ಯ ಕಾರಭಾರವನ್ನು ಬಹಳ ದಕ್ಷತೆಯಿಂದ ನೋಡತೊಡಗಿದರು. ಸ್ವಾದಿರಾಜರ ಇಚ್ಛೆಯಂತೆ ತಮ್ಮ ರಾಜ್ಯವಾದ ಬೆಳವಡಿಯಲ್ಲಿ ೧೦ ಸಾವಿರ ಸ್ವಾದಿ ಸೈನಿಕರನ್ನು ಇರಿಸಿಕೊಂಡರು. ದಂಗೆಕಾರರನ್ನು ಮತ್ತು ಸಂಸ್ಥಾನಕ್ಕೆ ತೊಂದರೆ ಕೊಡುತ್ತಿದ್ದವರನ್ನು ಬಂದೀಖಾನೆಯಲ್ಲಿಟ್ಟರು. ಯೋಗ್ಯ ಮುತ್ಸದ್ದಿಗಳನ್ನು ರಾಜ್ಯ ಕಾರಭಾರ ಮಾಡಲು ನೇಮಿಸಿದರು. ರೈತರೊಂದಿಗೆ ಶಾಸ್ತ್ರಪದ್ಧತಿಯಂತೆ ನಡೆದುಕೊಳ್ಳತೊಡಗಿದರು. ಬೆಳವಡಿ ಮತ್ತು ಸ್ವಾದಿ ಎರಡು ರಾಜ್ಯಗಳ ವ್ಯಾಪಾರವು ಸುಗಮವಾಗಿ ನಡೆಯಲೆಂದು ವ್ಯಾಪಾರಿಗಳಿಗೆ ಎಲ್ಲಾ ಅನುಕೂಲಗಳನ್ನು ಮಾಡಿಕೊಟ್ಟರು. ಕಾರವಾರ, ಕುಮಟಾ ಮತ್ತು ಗೋವಾ ಬಂದರುಗಳಿಂದ ಸಾಮಾನು ದೇಶದೊಳಗೆ ಬಂದು ಹೋಗುವ ವ್ಯವಸ್ಥೆಯನ್ನು ಮಾಡಿದರು. ಆಗ ಬೆಳವಡಿ ಸಂಸ್ಥಾನದ ಉತ್ಪನ್ನವು ೫೦ ಲಕ್ಷ ರೂ. ಮೌಲ್ಯವಿತ್ತು. ಸ್ವಾದಿ ರಾಜ್ಯದ ಉತ್ಪನ್ನವು ೨೫೦ ಲಕ್ಷ ರೂ. ಮೌಲ್ಯದಿತ್ತು. ಜೀರಿಗೆ, ಮೆಣಸು, ಏಲಕ್ಕಿ, ಜಾಜಿ ಕಾಯಿ, ಇತ್ಯಾದಿ ಬಹುಬೆಲೆಯ ಸಾಮಾನುಗಳು ಈ ರಾಜ್ಯದಲ್ಲಿ ಉತ್ಪನ್ನವಾಗುತ್ತಿದ್ದವು. ಬೆಳವಡಿ ರಾಜ್ಯದಲ್ಲಿ ಅಕ್ಕಿ, ಗೋಧಿ, ಬೆಲ್ಲ, ಸಕ್ಕರೆ, ಕಡಲೆ, ಜೋಳ, ಕಬ್ಬು ಇತ್ಯಾದಿ ಉತ್ಪನ್ನವಾಗುತ್ತಿದ್ದವು. ಲಿಂಬೆಹಣ್ಣು, ಕಿತ್ತಳೆಹಣ್ಣು, ಸೇಬು, ಹಲಸು, ದಾಳಿಂಬೆ, ಇತ್ಯಾದಿ ಹಣ್ಣುಗಳು ಬೆಳವಡಿ ಸಂಸ್ಥಾನದಲ್ಲಿ ಬಹಳ ಕಡಿಮೆ ದರದಲ್ಲಿ ಮಾರುತ್ತಿದ್ದರು. ಒಂದು ರೂಪಾಯಿಗೆ ೨೦೦ ಲಿಂಬೆಹಣ್ಣುಗಳು, ೧೦೦ ದಾಳಿಂಬೆ ಹಣ್ಣುಗಳು, ೫೦ ಸೇಬು ಮತ್ತು ಕಿತ್ತಳೆ ಹಣ್ಣುಗಳು, ೨೦

ಹಲಸಿನ ಹಣ್ಣುಗಳು ದೊರೆಯುತ್ತಿದ್ದವು. ಒಂದು ರೂಪಾಯಿಗೆ ೩೦ ಸೇರು ಗೋದಿ, ೪೦ ಸೇರು ಜೋಳ, ೧ ಮಣ ಬೆಲ್ಲ, ೧/೨ ಮಣ ಸಕ್ಕರೆ ಸಿಗುತ್ತಿತ್ತು. ಪ್ರತಿಯೊಂದು ಊರಿನಲ್ಲಿಯೂ ಫಲಕೊಡುವ ತೋಟಗಳು ಇದ್ದವು.

ಬೆಳವಡಿ ಸಂಸ್ಥಾನದಲ್ಲಿ ೩೦೦ ಊರುಗಳಿದ್ದವು. ಅದರಲ್ಲಿ ಲಿಂಗದಹಳ್ಳಿ, ಬಸವನಹಳ್ಳಿ, ಹೂಲಿಕಟ್ಟೆ, ಗುಡಿಕಟ್ಟೆ, ನಡುಗೋದಿಕೊಪ್ಪ – ಈ ಐದು ಗ್ರಾಮಗಳನ್ನು ಬೆಳವಡಿ ಮಲ್ಲಮ್ಮನು ವೀರಭದ್ರ ದೇವನಿಗೆ ಇನಾಂ ಎಂದು ಕೊಟ್ಟಿದ್ದಳು. ಸಿದ್ಧ ಸಮುದ್ರ ಎಂಬ ಊರನ್ನು ಹೂಲಿ ಸಂಸ್ಥಾನಾಧಿಪತಿ ಗುರು ಮಹಾರಾಜರ ಲಿಂಗ ಪೂಜೆ ವ್ಯವಸ್ಥೆಗೋಸ್ಕರ ಕೊಟ್ಟಿದ್ದರು. ಯಕ್ಕುಂಡಿಯಿಂದ ದೇವರ ಹುಬ್ಬಳಿಯವರೆಗೂ ಮತ್ತು ಗೋಕಾಕದಿಂದ ಹಳಿಯಾಳವರೆಗೂ ಇರುವ ದೇಶದ ಜನರೆಲ್ಲ ಬೆಳವಡಿ ರಾಜರ ಉಪಕಾರ ಸ್ಮರಣೆ ಮಾಡುತ್ತಿದ್ದರು.

ಈಶಪ್ರಭುವಿಗೆ ಹೂಲಿ ಕ್ಷೇತ್ರ, ಪಂಪಾಕ್ಷೇತ್ರ, ಸೊಂಡೂರು ಕ್ಷೇತ್ರ, ಮಲಾಪಹಾರಿಣಿ, ತುಂಗಾಭದ್ರ ಇತ್ಯಾದಿ ತೀರ್ಥಕ್ಷೇತ್ರಗಳ ಬಗ್ಗೆ ಬಹಳ ಆದರವಿತ್ತು. ಒಂದು ಸಲ ಈಶಪ್ರಭು ಮತ್ತು ಮಲ್ಲಮ್ಮಾಜಿ ತಮ್ಮ ಪರಿವಾರದೊಡನೆ ಈ ಕ್ಷೇತ್ರಗಳ ಯಾತ್ರೆ ಮಾಡಿದರು. ಹಾಗೆಯೇ, ಒಮ್ಮೆ ರಾಜದಂಪತಿಗಳು ಸ್ವಾದಿಗೆ ಹೋದರು. ಅಲ್ಲಿಂದ ಗೋಕರ್ಣಕ್ಕೆ ಮಹಾಬಲೇಶ್ವರನ ದರ್ಶನಕ್ಕೆ ಹೋದರು. ಅಲ್ಲಿ ದೇವರ ದರ್ಶನ, ಪೂಜೆ ಮುಗಿಸಿಕೊಂಡು ಇಬ್ಬರೂ ಕುದುರೆಗಳನ್ನೇರಿ ಸ್ವಾದಿಯ ಕಡೆಗೆ ಹೊರಟರು. ದಾರಿಯಲ್ಲಿ ಒಂದು ಕಡೆ ವಿಶ್ರಾಂತಿಗಾಗಿ ತಂಗಿದಾಗ, ಈಶಪ್ರಭುವಿಗೆ ನಿದ್ರೆ ಬಂತು. ಇಷ್ಟರಲ್ಲಿ ಎರಡು ಹುಲಿಗಳು ಓಡಿಬಂದವು. ಒಂದು ಹುಲಿಯು ಕುದುರೆ ಕಡೆ ಹೋಯಿತು. ಇನ್ನೊಂದು ಹುಲಿಯು ಮಲ್ಲಮ್ಮಾಜಿಯ ಮೈಮೇಲೆ ಬಂದಿತು. ಮಲ್ಲಮ್ಮಾಜಿ ಧೈರ್ಯದಿಂದ ತನ್ನ ಮೈಮೇಲೆ ಬಂದ ಹುಲಿಯನ್ನು ಕತ್ತಿಯಿಂದ ಕೊಂದು ಕುದುರೆಯ ಕಡೆ ಹೋಗಿದ್ದ ಹುಲಿಯನ್ನು ಭರ್ಜಿಯಿಂದ ಇರಿದಳು. ಈ ಗಲಭೆಯಿಂದ ಅವನಿಗೆ ಎಚ್ಚರವಾಯಿತು. ಇದನ್ನು ನೋಡಿ ಈಶಪ್ರಭುವಿಗೆ ಬಹಳ ಆಶ್ಚರ್ಯವಾಯಿತು. ಗಾಯಗೊಂಡ ಕುದುರೆಗೆ ವಿಶ್ರಾಂತಿ ಕೊಟ್ಟು, ತಮ್ಮ ಪ್ರವಾಸವನ್ನು ಮುಂದುವರಿಸಿ, ಸ್ವಾದಿಗೆ ಹೋಗಿ, ಅಲ್ಲಿಂದ ಬೆಳವಡಿಗೆ ಬಂದರು.

ಶಕ ೧೫೯೯ರ ಆಶ್ವಯುಜ ಶುದ್ಧ ದಶಮಿ (ವಿಜಯದಶಮಿ)ಯ ದಿನ (ಕ್ರಿ.ಶ. ೧೬೭೭) ಈಶಪ್ರಭು ಮತ್ತು ಮಲ್ಲಮ್ಮಾಜಿಯವರಿಗೆ ಪುತ್ರೋತ್ಸವವಾಯಿತು. ಮಗುವಿಗೆ ನಾಗಭೂಷಣನೆಂದು ನಾಮಕರಣ ಮಾಡಿದರು.

ಸಮರೋತ್ಸವ

ಕ್ರಿ.ಶ. ೧೬೭೭ – ೭೮ ಈ ಎರಡು ವರ್ಷಗಳಲ್ಲಿ ಶಿವಾಜಿ ಕರ್ನಾಟಕ, ಆಂಧ್ರ ಮತ್ತು ಉತ್ತರ ತಮಿಳುನಾಡುಗಳ ಮೇಲೆ ದಂಡೆತ್ತಿ ಹೋದನು. ಇದಕ್ಕೆ ಶಿವಾಜಿ ಚರಿತ್ರೆಯಲ್ಲಿ 'ಕರ್ನಾಟಕದ ದಂಡಯಾತ್ರೆ' ಎನ್ನುತ್ತಾರೆ. ಈ ದಂಡಯಾತ್ರೆಯಲ್ಲಿ ಶ್ರೀಶೈಲ ಮಲ್ಲಿಕಾರ್ಜುನ, ತಿರುಪತಿಯ ವೆಂಕಟೇಶ್ವರಾದಿಯಾಗಿ ಎಲ್ಲಾ ಕ್ಷೇತ್ರಗಳ ದೇವತೆಗಳನ್ನು ಪೂಜೆ ಮಾಡಿ ಅನುಗ್ರಹ ಪಡೆದನು. ನಂತರ ತಂಜಾವೂರಿನಲ್ಲಿ ರಾಜನಾಗಿದ್ದ ಸಹೋದರ ವೆಂಕೋಜಿಯನ್ನು ಭೇಟಿ ಮಾಡಿ, ಅವನಿಂದ ತನ್ನ ಭಾಗದ ರಾಜ್ಯವನ್ನು ಪಡೆದು ಬೆಂಗಳೂರಿಗೆ ಬಂದನು. ಮೈಸೂರಿನ ಚಿಕ್ಕದೇವರಾಯನ ಸೈನ್ಯಕ್ಕೂ ಶಿವಾಜಿಯ ಸೈನ್ಯಕ್ಕೂ ಒಂದೆರಡು ಕಡೆ ಘರ್ಷಣೆಗಳಾದವು. ತರುವಾಯ ಕೆಳದಿಯ ಚೆನ್ನಮ್ಮಾಜಿಯ ಜೊತೆಗೆ ಯುದ್ಧ ಮಾಡಿ, ಅವಳಿಂದ ಚೌತಾಯಿ ವಸೂಲು ಮಾಡಿದರು. ಮುಂದೆ ಹಂಪೆಗೆ ಹೋದನು. ಅಲ್ಲಿ ಹತ್ತು ದಿನ ಇದ್ದನು. ಅಲ್ಲಿಯ ಕಟ್ಟಡಗಳು ಶಿಥಿಲವಾಗಿರುವುದನ್ನು ನೋಡಿ ವ್ಯಥೆಪಟ್ಟನು. ವಿರೂಪಾಕ್ಷದೇವರಿಗೆ ಅಭಿಷೇಕ ಮಾಡಿಸಿದನು. ಆತನ ಧಾರ್ಮಿಕ ಪ್ರವೃತ್ತಿ ಮತ್ತು ಕೀರ್ತಿ ಕರ್ನಾಟಕದಲ್ಲೆಲ್ಲ ಹರಡಿತ್ತು. ಅನೇಕ ಜನರು ಅವನ ದರ್ಶನಕ್ಕೆ ಬಂದರು. ಅವರೆಲ್ಲ ಶಿವಾಜಿಗೆ "ನಿಮ್ಮ ದೇಶಕ್ಕೆ ಹೋಗ ಬೇಡಿ. ಇಲ್ಲಿಯೇ ಇದ್ದು ನಮ್ಮ ರಾಜರಾಗಿ" ಎಂದು ಬಿನ್ನವಿಸಿದ್ದರು. ಇದಕ್ಕೆ ಶಿವಾಜಿ " "ನಾನು ನನ್ನ ರಾಜಧಾನಿಗೆ ಹೋಗಿ ಅಲ್ಲಿ ಸಂಬಾಜಿಯನ್ನು ರಾಜನನ್ನಾಗಿ ಮಾಡಿ ರಾಜರಾಮನನ್ನು ಕರ್ನಾಟಕದ ರಾಜನನ್ನಾಗಿ ಮಾಡುತ್ತೇನೆ. ನಾನು ಇಲ್ಲಿಯೇ ಇದ್ದು ತುಂಗಾಭದ್ರ ಸ್ನಾನ, ವಿರುಪಾಕ್ಷ ದೇವರ ಪೂಜೆ ಮಾಡಿಕೊಂಡು ನನ್ನ ಕೊನೆಯ ದಿನಗಳನ್ನು ಕಳೆಯುತ್ತೇನೆ. ನೀವು ಕಾಳಜಿ ಮಾಡಬೇಡಿ" ಎಂದು ಸಂತೈಸಿದನು. ಆಗಲೇ ಆನೆಗೊಂದಿ ರಾಜನನ್ನು ಸನ್ಮಾನ ಮಾಡಿದನು. ನಂತರ ಕೊಪ್ಪಳ ಕೋಟೆಯನ್ನು ಗೆದ್ದು, ಧಾರವಾಡ ಹತ್ತಿರವಿರುವ ಬೆಳವಡಿ ಸಂಸ್ಥಾನಕ್ಕೆ ಸೇರಿದ ಯಾದವಾಡದಲ್ಲಿ ಪಾಳೆ ಹೂಡಿದನು.

ಶಿವಾಜಿಯ ಹತ್ತರ ೫೦,೦೦೦ ಸೈನ್ಯವಿತ್ತು. ಅದನ್ನು ಸಾಗಿಸಲಿಕ್ಕೆ ಆನೆ ಒಂಟೆ, ಎತ್ತಿನಗಾಡಿಗಳು ಸಾಕಷ್ಟು ಇದ್ದವು. ಸೈನಿಕರಿಗೆ ಬೇಕಾಗುವ ಹಾಲಿನ ಸಲುವಾಗಿ ೪೦೦ ಹಸು ಮತ್ತು ೨೦೦ ಎಮ್ಮೆಗಳಿದ್ದವು. ಈ ಸೈನ್ಯಕ್ಕೆ ಅಧಿಪತಿ ಧನಾಜಿ. ಯಾದವಾಡದಲ್ಲಿ ಪಾಳೆ ಹೂಡಿದ್ದನ್ನು ಅದರ ಅಧಿಪತಿ ಬೆಳವಡಿ ಈಶಪ್ರಭು ಕೇಳಿದನು. ಆತನಿಗೆ ಶಿವಾಜಿಯ ಸತ್ಕಾರ ಮಾಡಬೇಕೆನ್ನುವ ಆಶೆಯಿತ್ತು. ಆತನ ದರ್ಶನ ಮಾಡಲಿಕ್ಕೆ ಎಲ್ಲಾ ಸಿದ್ಧತೆಯನ್ನು ಮಾಡತೊಡಗಿದನು. ಜತೆಗೆ ತನ್ನ ಸೈನ್ಯದ ಪರಾಕ್ರಮವನ್ನು ತೋರಿಸಬೇಕೆಂಬ ಇಚ್ಛೆಯೂ ಅವನಿಗಿತ್ತು. ಆ

ಬೆಳವಡಿಯಲ್ಲಿ ಯುದ್ಧಕಲೆಯಲ್ಲಿ ನಿಷ್ಣಾತರಾದ ಕಾಲಾಳುಗಳೂ ಕುದುರೆಸವಾರರೂ ಬಂದೂಕುಧಾರಿಗಳು ಆನೆ, ಒಂಟೆ, ಇತ್ಯಾದಿಗಳೂ ಇದ್ದವು. ಒಂದು ವಿಶೇಷವೆಂದರೆ ಸ್ತ್ರೀಯರಿಗೂ ಸೈನಿಕ ಶಿಕ್ಷಣ ಕೊಟ್ಟಿದ್ದರು ಮತ್ತು ಮಲ್ಲಮ್ಮನ ನೇತೃತ್ವದಲ್ಲಿ ಸ್ತ್ರೀಸೈನಿಕರ ಒಂದು ವಿಭಾಗವಿತ್ತು. ಬೆಳವಡಿ ಕೋಟೆಯೊಳಗೆ ಬಾವಿಗಳಿದ್ದು ನೀರಿಗೆ ಕೊರತೆ ಇರಲಿಲ್ಲ.

ದುರ್ದೈವದಿಂದ, ಈಶಪ್ರಭುವಿನ ಮನಸ್ಸಿನಲ್ಲಿದ್ದ ಹಾಗೆ ಆಗಲಿಲ್ಲ. ಶಿವಾಜಿಯ ಸೈನಿಕರು ಬೆಳವಡಿಯ ಸುತ್ತಮುತ್ತಲ ಹಳ್ಳಿಗಳಲ್ಲಿಯ ಹಸು ಮತ್ತು ಎಮ್ಮೆಗಳನ್ನು ಹೊಡೆದುಕೊಂಡು ಹೋದರು ಮತ್ತು ಅಲ್ಲಿಯ ರೈತರಿಗೆ ಅನೇಕ ವಿಧದಲ್ಲಿ ಕಿರುಕೊಳ ಕೊಡಲಾರಂಭಿಸಿದರು. ರೈತರೆಲ್ಲ ಸೇರಿ, ದೇಸಾಯಿ ಇವರಿಗೆ ತಮ್ಮ ಸಂಕಷ್ಟಗಳನ್ನು ನಿವೇದಿಸಿಕೊಂಡರು. ದೇಸಾಯಿ ಅವರನ್ನು ಸಮಾಧಾನ ಮಾಡಿ, ತಮ್ಮ ದಳವಾಯಿ ಸಿದ್ಧನಗೌಡ ಪಾಟೀಲರನ್ನು ಛತ್ರಪತಿ ಶಿವಾಜಿಯ ಕಡೆ ಕಳಿಸಿದನು. ದಳವಾಯಿಯು ಶಿವಾಜಿ ಕಡೆ ಹೋದನು. ಶಿವಾಜಿಯ ಸೈನಿಕರು ಅವನಿಗೆ ಅವಮಾನ ಮಾಡಿದರು. ಶಿವಾಜಿಯು ಅವನನ್ನು ನೋಡಲು ನಿರಾಕರಿಸಿದನು. ಸಿದ್ಧನಗೌಡ ಪಾಟೀಲನು ವಾಪಸ್ಸು ಬಂದು ನಡೆದದ್ದನು ಈಶಪ್ರಭುವಿಗೆ ಹೇಳಿದನು. ದೇಸಾಯಿ ಇದನ್ನು ಕೇಳಿ ಸಿಟ್ಟಿಗೆದ್ದನು. ಮರಾಠೆಯವರು ಮಾಡಿದ ಅನ್ಯಾಯಕ್ಕೆ ತಕ್ಕ ಪ್ರಾಯಶ್ಚಿತ್ತ ಮಾಡಬೇಕೆಂದು ಯುದ್ಧಕ್ಕೆ ಸಿದ್ಧತೆ ನಡೆಸಿರುವುದನ್ನು ಮಲ್ಲಮ್ಮ ಕೇಳಿ, ಅವನಿಗೆ "ನೀವು ಹೋಗಬೇಡಿ, ನಾನು ಸ್ತ್ರೀಯರ ಸೈನ್ಯವನ್ನು ತೆಗೆದುಕೊಂಡು ಹೋಗಿ ಮರಾಠೆಯವರಿಗೆ ಒಂದು ಕೈ ತೋರಿಸುತ್ತೇನೆ" ಎಂದಳು. ೨೦೦೦ ಸ್ತ್ರೀಯರ ಸೈನ್ಯವನ್ನು ಸಿದ್ಧ ಮಾಡಿದಳು. ಸ್ತ್ರೀ ಸೈನಿಕರನ್ನು ನೋಡಿ ಅವರಿಗೆ ಮರಾಠರು ಅಪಹಾಸ್ಯ ಮಾಡಿದರು. ಮಲ್ಲಮ್ಮನಿಗೆ ಸಿಟ್ಟುಬಂದು ಮರಾಠೆ ಸೈನಿಕರನ್ನು ಬೆಳವಡಿಯವರು ಕೊಲ್ಲಲ್ಲಿಕ್ಕೆ ಆರಂಭಿಸಿದರು. ಒಂದು ಗಂಟೆಯೊಳಗೆ ೨೦೦ ಸೈನಿಕರಿಗೆ ಗಾಯವಾಯಿತು. ೧೦-೧೨ ಸೈನಿಕರು ಸತ್ತರು. ಆಗ ಮರಾಠಿ ಸೇನಾಪತಿಯು ಬಂದು ಜಾನುವಾರನ್ನು ವಾಪಸ್ಸು ಕೊಡಲು ಒಪ್ಪಿದನು. ಎಲ್ಲಾ ಜಾನುವಾರುಗಳ ಜತೆಗೆ ಮಲ್ಲಮ್ಮ ತನ್ನ ಸೈನ್ಯದೊಂದಿಗೆ ಹಿಂತಿರುಗಿದಳು. ತಮ್ಮ ಎಲ್ಲಾ ಹಳ್ಳಿಗಳಲ್ಲಿಯೂ ವಿಜಯೋತ್ಸವವನ್ನು ಆಚರಿಸಲಾಯಿತು.

ಈ ವರ್ತಮಾನವನ್ನು ಕೇಳಿ ಶಿವಾಜಿ ರೇಗಿದನು. ಈಗಿಂದೀಗ ಬೆಳವಡಿಯನ್ನು ಆಕ್ರಮಿಸಿ ದೇಸಾಯಿಯನ್ನು ಹಿಡಿದು ತೆಗೆದುಕೊಂಡು ಬನ್ನಿ. ಅವನಿಗೆ ಮತ್ತು ಅವನ ಮನೆಯವರಿಗೆ ತಿಲಮಾತ್ರವೂ ಪೆಟ್ಟು ಬೀಳಬಾರದೆಂದು ಆಜ್ಞಾಪಿಸಿದನು. ಅದೇಪ್ರಕಾರ ಅವನ ಸೈನ್ಯವು ಬೆಳವಡಿ ಕೋಟೆಯನ್ನು ಸುತ್ತುಗಟ್ಟಿತು. ಹೊರಗಡೆ ಮರಾಠೆಯವರಿಗೆ ಎಲ್ಲಾ ಸಾಮಾನು ಸಿಗುತ್ತಿತ್ತು. ಕೋಟೆಯೊಳಗೆ

ಸಿಕ್ಕಿಕೊಂಡಿದ್ದ ದೇಸಾಯಿಯ ಕಡೆಯವರಿಗೆ ಹೊರಗಿನ ಸಾಮಾನು ದೊರಕುವ ಹಾಗಿರಲಿಲ್ಲ. ಸ್ವಾದಿಯ ಸದಾಶಿವನಾಯಕನಿಗೆ ಮತ್ತು ಹೂಲಿಮಠದ ಸ್ವಾಮಿಗಳಿಗೆ ಅನ್ನ ಸಾಮಗ್ರಿಯನ್ನು ಕಳಿಸಲು ಹೇಳಿಕಳಿಸಿದ್ದನು. ಆದರೆ ಆ ಎರಡೂ ಕಡೆಗಳಿಂದ ಸಹಾಯ ಸಕಾಲಕ್ಕೆ ಬರಲಿಲ್ಲ. ಈಶಪ್ರಭು ನಿರಾಶನಾಗಿ ಕೋಟೆಯ ಹೊರಗೆ ಬಂದು ಯುದ್ಧ ಮಾಡಲಾರಂಭಿಸಿದನು. ಅನಿರೀಕ್ಷಿತವಾಗಿ ಮರಾಠರಿಗೆ ದೊಡ್ಡವಾಡದ ಕಡೆಯಿಂದ ೧೦,೦೦೦ ದಷ್ಟು ದೊಡ್ಡ ಸೈನ್ಯವು ಸಹಾಯಕ್ಕೆ ಬಂತು. ದೇಸಾಯಿಯ ಹತ್ತಿರವಿದ್ದ ತೋಪು ಮುಗಿದುಹೋಯಿತು. ತನ್ನ ೨೦೦೦ ಸೈನಿಕರೊಂದಿಗೆ ದೇಸಾಯಿ ಯುದ್ಧ ಮಾಡಿದನು. ಅವನಿಗೆ ಭಾರಿ ಗಾಯವಾಯಿತು. ನೋವನ್ನು ತಡೆಯಲಾರದೆ ಅವನು ಕುದುರೆಯಿಂದ ಕೆಳಗೆ ಬಿದ್ದನು. ಅದನ್ನು ಕೇಳಿ ಮರಾಠಾ ಸೇನಾಪತಿ ಅಲ್ಲಿಗೆ ಬಂದು ದೇಸಾಯಿಯ ಚಿಂತಾಜನಕ ಸ್ಥಿತಿಯಲ್ಲಿರುವುದನ್ನು ನೋಡಿ, ಉಪಚಾರ ಮಾಡಿದನು.

ಅಷ್ಟೊತ್ತಿಗೆ ಹೂಲಿ ಕಡೆಯ ಸೈನ್ಯ ಬಂದಿತ್ತು. ಎರಡೂ ಸೈನ್ಯಗಳು ಸೇರಿ ಮಾರಾಠರಿಗೆ ಬಹಳ ಹಾನಿಯಾಗುವ ಹಾಗೆ ಮಲ್ಲಮ್ಮ ಮಾಡಿದಳು. ಮರಾಠರ ಮದ್ದುಗುಂಡು ಮುಗಿದುಹೋಯಿತು. ಅವರು ಓಡಲಾರಂಭಿಸಿದರು. ಮಲ್ಲಮ್ಮನಿಗೆ ಅವರನ್ನು ಬೆನ್ನಟ್ಟಬೇಕೆಂಬ ಆಸೆಯಿತ್ತು. ಆದರೆ ಜತೆಗಿದ್ದ ಸರದಾರರು ಬೆನ್ನಟ್ಟುವುದು ಬೇಡ, ಬೆಳವಡಿಗೆ ಹೋಗಬೇಕೆಂದು ಒತ್ತಾಯ ಮಾಡಿದರು. ಅದಕ್ಕೆ ಮಲ್ಲಮ್ಮ ಒಪ್ಪಿದಳು. ಇಷ್ಟರೊಳಗೆ ಗಾಯಗೊಂಡ ಈಶಪ್ರಭುವನ್ನು ಕೋಟೆಯೊಳಗೆ ಹೂಲಿಯ ಸ್ವಾಮಿ ಸಿದ್ಧವೀರ ಯೋಗಿರಾಜರು ತೆಗೆದುಕೊಂಡು ಹೋಗಿದ್ದರು. ಯುದ್ಧದ ಸಂತೋಷದ ಸುದ್ದಿಯನ್ನು ಹೇಳಬೇಕೆಂಬ ಉತ್ಸುಕತೆ ಮಲ್ಲಮ್ಮನದು. ಆದರೆ ಅವಳು ನೋಡಿದ ದೃಶ್ಯ ಭಯಾನಕವಾಗಿತ್ತು. ಪತಿ ಮೃತ್ಯುವಿನ ದವಡೆಯಲ್ಲಿದ್ದನು. ದೇಸಾಯಿ ಹೇಳಿದನು "ರಾಣಿ, ನಿನ್ನ ಪರಾಕ್ರಮ ನಮಗೆ ಬಹಳ ದಿನಗಳಿಂದ ಪರಿಚಯವಿದೆ. ನೀನು ಶಿವಾಜಿಯನ್ನು ಗೆಲ್ಲು. ಅಂದರೆ ನನ್ನ ಇಚ್ಛೆ ಪೂರ್ತಿಯಾಗುತ್ತದೆ. ಹಾಗೆ ಗೆಲ್ಲುತ್ತೇನೆಂದು ನನ್ನ ಕೈಮೇಲೆ ಕೈ ಹಾಕಿ ಮಾತು ಕೊಡು." ಇದಕ್ಕೆ ರಾಣಿ ಹೇಳಿದಳು, "ನಿಮ್ಮ ಆಜ್ಞೆ ಪ್ರಕಾರ ಶಿವಾಜಿಯನ್ನು ಗೆದ್ದು ಕೀರ್ತಿಯನ್ನು ಸಂಪಾದಿಸುತ್ತೇನೆ. ನೀವು ಸಮಾಧಾನವಾಗಿರಿ" ಎಂದಳು. ದೇಸಾಯಿ ಕೊನೆಗೆ ಹೇಳಿದನು, "ನಾನೇನು ಉಳಿಯುವುದಿಲ್ಲ, ನನ್ನ ಯೋಚನೆ ಬಿಟ್ಟುಬಿಡು. ಮುಂದಿನ ಯುದ್ಧ ಪ್ರಾರಂಭ ಮಾಡು, ನನ್ನ ಬಾಯಿಯೊಳಗೆ ಗುರುಗಳ ಪಾದೋದಕವನ್ನು ಹಾಕು." ಅದೇ ರೀತಿ ಮಾಡಿದಳು.

ಶಿವಾಜಿಯನ್ನು ಸೋಲಿಸಲಿಕ್ಕೆ ಬೆಳವಡಿಯವರು ಒಂದು ಉಪಾಯ ಹುಡುಕಿದರು. ಶಾಂತಯ್ಯ ಎನ್ನುವ ಬೆಳವಡಿಯ ಒಬ್ಬ ಸರದಾರನು ಸನ್ಯಾಸಿಯ ವೇಷ ಹಾಕಿಕೊಂಡು ಮರಾಠರ ಸೈನ್ಯ ಬೀಡು ಬಿಟ್ಟಲ್ಲಿ ಹೋದನು. ಅಲ್ಲಿ

ಮರಾಠಿ ಸೇನಾಪತಿಯು ಚಿಂತಾಕ್ರಾಂತನಾಗಿದ್ದುದನ್ನು ಕಂಡನು. ಅವನಿಗೆ ಸನ್ಯಾಸಿ ಹೀಗೆ ಹೇಳಿದನು : "ನಿಮಗೆ ಬೆಳವಡಿ ಸ್ವಾಧೀನವಾಗುವುದಕ್ಕೆ ಒಂದು ಪ್ರತಿಬಂಧಕವಿದೆ." ಇದನ್ನು ಕೇಳಿ ಸೇನಾಪತಿಯು ಚಕಿತನಾಗಿ 'ಅದೇನು ಹೇಳಿ ಸ್ವಾಮಿಗಳೇ, ನಿಮಗೆ ಎಷ್ಟು ಬೇಕಾದರೂ ಭಿಕ್ಷೆಯನ್ನು ಕೊಡುತ್ತೇನೆ'ಂದನು. ಅದಕ್ಕೆ ಸ್ವಾಮಿಯು "ಅದನ್ನು ನಿಮಗೆ ಹೇಳಿದರೆ ಉಪಯೋಗವಿಲ್ಲ. ನಾನು ಅದನ್ನು ಶಿವಾಜಿಗೆ ಹೇಳಬೇಕು" ಎಂದು ಹೇಳಿದನು. ಅವನನ್ನು ಶಿವಾಜಿಯ ಹತ್ತಿರ ಕರೆದುಕೊಂಡು ಹೋದರು. ಮತ್ತು ಸ್ವಾಮಿ ಹೇಳಿದ್ದನ್ನು ಶಿವಾಜಿಗೆ ತಿಳಿಸಿದರು. ಪ್ರತಿಬಂಧಕವೇನೆಂದು ಶಿವಾಜಿಯು ಕೇಳಿದನು. ಅದಕ್ಕೆ ಸ್ವಾಮಿಯು ಹೀಗೆ ಉತ್ತರಿಸಿದನು. "ಮಹಾರಾಜರ! ಈ ಊರಿನ ಹತ್ತಿರ ಸಿದ್ಧಸಮುದ್ರದಲ್ಲಿ ದ್ಯಾಮವ್ವ ಎನ್ನುವ ಹೆಸರಿನ ಜಗದಾಂಬಾ ದೇವತೆ ಇದ್ದಾಳೆ. ಆ ಊರು ಪವಿತ್ರ, ಜಾಗ್ರತ ಸ್ಥಾನ. ಅಲ್ಲಿಗೆ ಹೋಗಿ ದೇವತೆಯ ದರ್ಶನ ಮಾಡಿಕೊಂಡು ಬಂದರೆ ನಿಮ್ಮ ಕೆಲಸ ಸುಗಮವಾಗುವುದು. ನಾಳೆ ಶುಕ್ರವಾರ. ನಾಳೆಯೆ ಹೋದರೆ ಬಹಳ ಉತ್ತಮ." ಈ ಸೂಚನೆ ಛತ್ರಪತಿಯ ಮನಸ್ಸಿಗೆ ಬಂತು. ತಕ್ಷಣ ಶಿವಾಜಿ ಧನಾಜಿಗೆ "ಸ್ವಾಮಿ ಹೇಳಿದ್ದು ಸತ್ಯ. ನೀನು ಬೆಳವಡಿಗೆ ಹೋಗಿ ಮುತ್ತಿಗೆ ಹಾಕು. ನಾನು ನಾಳೆ ಬೆಳಿಗ್ಗೆ ಜಗದಾಂಬೆಯ ದರ್ಶನಕ್ಕೆ ಹೋಗುತ್ತೇನೆ. ಸ್ವಾಮೀಜಿಗೆ ದೊಡ್ಡ ಭಿಕ್ಷಾ ಕೊಡು" ಎಂದು ಹೇಳಿದನು.

ಸ್ವಾಮಿ ನಡೆದದ್ದೆಲ್ಲವನ್ನು ರಾಣಿಗೆ ಹೇಳಿದನು. ಅವಳು ತನ್ನ ಸ್ತ್ರೀಸೈನ್ಯವನ್ನು ತೆಗೆದುಕೊಂಡು ರಾತ್ರೋರಾತ್ರಿ ಗುಪ್ತ ದಾರಿಯಿಂದ ಶಿವಾಜಿ ಬರುವ ಕಡೆ ಕಾದು ಕುಳಿತಿದ್ದಳು. ಏಳೆಂಟು ಸರದಾರರ ಜತೆಗೆ ಶಿವಾಜಿ ಜಗದಂಬಾ ದರ್ಶನ ಮಾಡಿ ಹಿಂತಿರುಗುವಾಗ ಮಲ್ಲಮ್ಮಾಜಿಯು ಅವರನ್ನು ತಡೆಗಟ್ಟಿದಳು. ಒಂದಿಬ್ಬರು ಮರಾಠಾ ಸರದಾರರನ್ನು ಕತ್ತಿಯಿಂದ ಇರಿದಳು. ಛತ್ರಪತಿ ಗಾಬರಿಯಾದನು. ಇವಳು ಮನುಷ್ಯಳಲ್ಲ ದೇವತೆಯೆ ಇರಬೇಕೆಂದೆನಿಸಿತು. ಕುದುರೆಯಿಂದ ಇಳಿದು "ಜಗದಂಬಾ, ನನ್ನನ್ನು ರಕ್ಷಿಸು" ಎಂದು ಜಗದಂಬಾ ಸ್ತೋತ್ರವನ್ನು ಹೇಳಲಾರಂಭಿಸಿದನು. ನಂತರ ಹೀಗೆ ಹೇಳಿದನು. "ದೇವಿ, ನನ್ನ ಅಪರಾಧವನ್ನು ಕ್ಷಮಿಸು." ಅದಕ್ಕೆ ರಾಣಿ ಹೇಳಿದಳು. "ನನ್ನ ಪತಿದೇವರ ಪ್ರಾಣ ತೆಗೆದುಕೊಂಡು ಕ್ಷಮೆ ಕೇಳುತ್ತೀಯಾ? ನಿನ್ನ ಶೌರ್ಯವೆಷ್ಟಿದೆ. ನೋಡೋಣ. ಬಾ ನನ್ನ ಜತೆಗೆ ಯುದ್ಧಕ್ಕೆ. ನನ್ನ ಪತಿಗೆ ಕೊಟ್ಟ ಮಾತನ್ನು ನಾನು ಈಗ ಪಾಲಿಸುತ್ತೇನೆ." ಆಗ ಶಿವಾಜಿಗೆ ಇವಳು ಬೆಳವಡಿಯ ರಾಣಿಯೆನ್ನುವುದು ಗೊತ್ತಾಯಿತು. ಇವಳ ಜತೆಗೆ ಈ ಸಂದರ್ಭದಲ್ಲಿ ಹೋರಾಡಿದರೆ ನಾವು ಉಳಿಯುವುದಿಲ್ಲವೆಂದು ಮನಸ್ಸಿನಲ್ಲಿ ಅಂದುಕೊಂಡು ಹೀಗೆ ಹೇಳಿದನು. "ನೀನು ತಪ್ಪು ತಿಳಿದುಕೊಂಡಿದ್ದೀಯಾ. ನಾನು ನಿನ್ನ ಪತಿಯ ಪ್ರಾಣಹಾನಿಗೆ ಕಾರಣನಲ್ಲ. ಅವರ ಜೀವಕ್ಕೆ ಧಕ್ಕೆ ಆಗದ

ಹಾಗೆ ಅವರನ್ನು ಕರೆದುಕೊಂಡು ಬನ್ನಿ ಎಂದು ನಾನು ಆಜ್ಞಾಪಿಸಿದರೆ ನನ್ನ ಆಜ್ಞೆಯ ವಿರುದ್ಧ ನನ್ನ ಸೈನಿಕರು ನಡೆದರು. ಅವರಿಗೆ ನಾನು ಶಿಕ್ಷೆ ಮಾಡಿದ್ದೇನೆ. ಇದರಲ್ಲಿ ನನ್ನ ಅಪರಾದ ಎಳ್ಳಷ್ಟೂ ಇಲ್ಲ. ಇದುವರೆಗೂ ನಾನು ಯಾರಿಗೂ ಹೆದರಲಿಲ್ಲ. ಆದರೆ ನಿಮ್ಮನ್ನು ನೋಡಿ, ಜಗದಾಂಬೆಯ ಮೂರ್ತಿಯೇ ಎದುರಿಗೆ ಬಂದು ನಿಂತಂತೆ ಕಾಣುತ್ತದೆ. ನಿಮ್ಮ ನಿಷ್ಠುರವಾಕ್ಯವು ನನ್ನ ತಾಯಿ ಜೀಜಾಬಾಯಿಯ ನಿಷ್ಠುರವಾಕ್ಯದಂತೆ ನನ್ನ ಮನಸ್ಸಿಗೆ ನೋವನ್ನುಂಟು ಮಾಡುತ್ತದೆ. ತಾಯೇ, ನನ್ನ ತಪ್ಪನ್ನು ಕ್ಷಮಿಸಿರಿ. ಇಲ್ಲಿ ಬಂದು ನಾನು ದೊಡ್ಡ ಅಪರಾಧ ಮಾಡಿದ್ದೇನೆ. ನಾನು ಮಾಡಿದ ಅಪರಾಧಕ್ಕೆ ನನ್ನ ತಲೆಯನ್ನು ಕತ್ತರಿಸಿ ಹಾಕಿದರೂ ಚಿಂತೆ ಇಲ್ಲ. ನಿಮ್ಮ ಇಚ್ಛೆಯಿದ್ದಂತೆ ಮಾಡಿರಿ" ಎಂದನು. ಪರಸ್ಪರ ತಪ್ಪು ಕಲ್ಪನೆಯಿಂದ ಆದ ನಷ್ಟ ನೋಡಿ ಇಬ್ಬರಿಗೂ ಬಹಳ ದುಃಖವಾಯಿತು. ಆಗ ರಾಣಿ ಮಲ್ಲಮ್ಮ "ಮಹಾರಾಜಾ, ನೀನು ಹೇಳಿದ್ದೆಲ್ಲಾ ನನಗೆ ತಿಳಿಯಿತು. ನನ್ನ ಕೋಟೆಗೆ ಮುತ್ತಿಗೆ ಹಾಕಿರುವ ನಿನ್ನ ಸೈನ್ಯವನ್ನು ಹಿಂದಕ್ಕೆ ತೆಗೆದುಕೋ. ಅಲ್ಲಿ ಬಹಳ ನಷ್ಟವಾಗುತ್ತಿದೆ. ಆಮೇಲೆ ನಮ್ಮ ಇಚ್ಛೆಯಿದ್ದಂತೆ ರಾಜಿ ಮಾಡಿಕೊಳ್ಳೋಣ" ಎಂದು ಹೇಳಿದ ತಕ್ಷಣ ಛತ್ರಪತಿಯು ಒಪ್ಪಿದನು. ಅಲ್ಲಿಂದ ಯಾದವಾಡಕ್ಕೆ ಹೊರಟನು. ರಾಣಿಯು ಈ ಎಲ್ಲಾ ವಿಷಯವನ್ನೂ ಹೂಲಿಯ ಗುರು ಮಹಾರಾಜರಿಗೆ ಹೇಳಿ, ಬೆಳವಡಿಗೆ ಹೊರಟಳು. ಗುರು ಮಹಾರಾಜರು ಯಾದವಾಡಕ್ಕೆ ಹೋಗಿ ಶಿವಾಜಿಯನ್ನು ಭೇಟಿಯಾದರು. ಛತ್ರಪತಿಯು ಅವರಿಗೆ ನಮಸ್ಕರಿಸಿ, ಅವರ ಮತ್ತು ಮಲ್ಲಮ್ಮಾಜಿಯ ಉಪಕಾರವನ್ನು ಸ್ಮರಿಸಿದನು. "ರಾಣಿ ಮಲ್ಲಮ್ಮಾಜಿಯನ್ನು ಕರೆತರಲು ಪಲ್ಲಕ್ಕಿಯನ್ನು ಕಳಿಸಿದ್ದೇನೆ. ಮತ್ತು ಯುದ್ಧವನ್ನು ನಿಲ್ಲಿಸುವಂತೆ ಹೇಳಿ ಕಳಿಸಿದ್ದೇನೆ" ಎಂದು ಹೇಳಿದನು.

ಇಷ್ಟರಲ್ಲಿ ರಾಣಿಯು ಬೆಳವಡಿಗೆ ಹೋಗಿ ಅಲ್ಲಿ ನಡೆಯುತ್ತಿದ್ದ ಯುದ್ಧವನ್ನು ನಿಲ್ಲಿಸಲು ಪ್ರಯತ್ನಿಸಿದಳು. ಆದರೆ ಯುದ್ಧ ಬಹಳ ಬಿರುಸಿನಿಂದ ನಡೆಯುತ್ತಿದ್ದುದರಿಂದ ಅದನ್ನು ನಿಲ್ಲಿಸಲು ಸಾಧ್ಯವಾಗಲಿಲ್ಲ. ಯುದ್ಧಭೂಮಿಗೆ ರಾಣಿ ಬರುತ್ತಲೇ ಮರಾಠಾ ಸೈನಿಕರು ನಾಲ್ಕೂ ಕಡೆಯಿಂದಲೂ ಆಕೆಯನ್ನೂ ಆಕೆಯ ಸರದಾರನನ್ನೂ ಸುತ್ತುಗಟ್ಟಿ ಜೋರಾಗಿ ಯುದ್ಧ ಮಾಡಲು ಆರಂಭಿಸಿದರು. ಅವರನ್ನು ತಡೆಯಲು ರಾಣಿ ಕತ್ತಿ ಮತ್ತು ಭಲ್ಲೆಗಳನ್ನು ಉಪಯೋಗಿಸಲೇಬೇಕಾಯಿತು. ಯುದ್ಧದಲ್ಲಿ ಆಕೆಯ ಕೈಚಳಕ, ಮುನ್ನುಗ್ಗುವುದರಲ್ಲಿ ಆಕೆಯ ಯುದ್ಧ ಕುಶಲತೆಯನ್ನು ನೋಡಿ ಮರಾಠಾ ಸರದಾರರು ದಂಗಾದರು. ಅಷ್ಟರಲ್ಲಿಯೇ ಛತ್ರಪತಿಯು ರಾಣಿಗಾಗಿ ಕಳಿಸಿದ ಪಲ್ಲಕ್ಕಿ ಬಂತು. ಅದರ ಹಿಂದೆ ಶಾಂತಿ ನಿಶಾನೆಯನ್ನು ಹಿಡಿದುಕೊಂಡು ಶಿವಾಜಿಯ ಸೇವಕರು ಬಂದರು. ಮರಾಠಾ ಸೇನಾಪತಿಗೆ ಯುದ್ಧವನ್ನು ನಿಲ್ಲಿಸಬೇಕೆಂಬ ಶಿವಾಜಿಯ ಆದೇಶವನ್ನು ಹೇಳಿದರು. ಅದರಂತೆ ಸೇನಾಪತಿಯು ಯುದ್ಧ ಭೂಮಿಯಲ್ಲಿ ಶಾಂತಿ ನಿಶಾನೆಯನ್ನು ಏರಿಸಿದನು.

ಮರಾಠರು ಮಲ್ಲಮ್ಮಾಜಿಯನ್ನು ಕರೆದುಕೊಂಡು ಛತ್ರಪತಿಯ ಭೇಟಿಗೆ ಹೊರಟರು. ಅಲ್ಲಿ ಶಿವಾಜಿ ಮತ್ತು ಹೂಲಿ ಗುರು ಮಹಾರಾಜರ ಭೇಟಿಯಾಯಿತು. ಶಿವಾಜಿ ಮಲ್ಲಮ್ಮಾಜಿಗೆ ಹೇಳಿದ "ತಾಯೀ, ನಿಮ್ಮಷ್ಟು ಶೂರರು ಪುರುಷರಲ್ಲಿಯೇ ಇಲ್ಲ. ಇನ್ನು ಸ್ತ್ರೀಯರಲ್ಲಿ ಯಾರಿದ್ದಾರೆ? ನನ್ನ ಮತ್ತು ನನ್ನ ಸರದಾರರ ಪ್ರಾಣವನ್ನು ಉಳಿಸಿದ್ದೀರಿ. ಆದ್ದರಿಂದ ಇನ್ನು ಮುಂದೆ ನೀನೇ ನಮಗೆ ತಾಯಿ. ನಿಮ್ಮ ಆಶೀರ್ವಾದದಿಂದಲೇ ನಾವು ಬದುಕುವುದು" ಎಂದು ಹೇಳಿದನು. ಆಮೇಲೆ ಮಲ್ಲಮ್ಮಾಜಿಯು ತನ್ನ ಪತಿಯನ್ನು ನೆನೆಸಿಕೊಂಡು ಅಳಲಾರಂಭಿಷಿದಳು. ಆಗ ಗುರುಮಹಾರಾಜರು "ಮಗಳೇ ಸುಮ್ಮನೆ ಅಳುತ್ತಾ ಕುಳಿತರೆ ಏನೂ ಕೆಲಸವಾಗುವುದಿಲ್ಲ. ನೀನೂ ಛತ್ರಪತಿಯೂ ಸ್ನೇಹಿತರಾಗಿರಿ. ಕಷ್ಟಕಾಲದಲ್ಲಿ ಒಬ್ಬರಿಗೊಬ್ಬರು ಸಹಾಯ ಮಾಡಿರಿ. ನಿಮ್ಮಿಬ್ಬರ ಸಮ್ಮತಿಯಿಂದ ಶೀಗೆಹಳ್ಳಿ ವೀರಪ್ಪನಿಗೆ ೪೦ ಹಳ್ಳಿಗಳ ಸುಬೇದಾರಿಕೆಯನ್ನು ವಹಿಸಿ, ಸುಖವಾಗಿ ರಾಜ್ಯಭಾರವನ್ನು ಮಾಡಿರಿ" ಎಂದು ಹೇಳಿದನು. ಇಷ್ಟರಲ್ಲಿ ಸ್ವಾದಿಯಿಂದ ಸದಾಶಿವನಾಯಕನು ಬಂದನು. ಎಲ್ಲಾ ವಿಷಯವನ್ನು ಅವನಿಗೂ ಹೇಳಿ, ಅವನ ಸಮ್ಮತಿಯನ್ನು ತೆಗೆದುಕೊಂಡು ರಾಣಿ ಮಲ್ಲಮ್ಮಾಜಿ ಮತ್ತು ಛತ್ರಪತಿ ಶಿವಾಜಿ ಇಬ್ಬರೂ ಸಂಧಿ ಮಾಡಿಕೊಂಡರು. ನಂತರ ಶಿವಾಜಿಯನ್ನು ತೊರಗಲ್‌ವರೆಗೂ ಕಳುಹಿಸಿಕೊಟ್ಟರು. ಮುಂದೆ ಅವನು ಪನ್ನಾಳ ಮಾರ್ಗವಾಗಿ ತನ್ನ ರಾಜಧಾನಿಯನ್ನು ತಲುಪಿದನು. ೧೬೦೨ ರೌದ್ರನಾಮ ಸಂವತ್ಸರದಲ್ಲಿ (ಇಸ್ವಿ ೧೬೮೦) ಮರಣ ಹೊಂದಿದನು.

ಇನ್ನಷ್ಟು ವಿಷಯಗಳು

ಆನಂತರ ಶಿವಾಜಿಯ ಮಗ ಸಂಭಾಜಿಯು ರಾಜನದನು. ಅವನಿಗೆ ಬೆಳವಡಿ ಸಂಸ್ಥಾನವನ್ನು ತನ್ನ ವಶಕ್ಕೆ ತೆಗೆದುಕೊಳ್ಳಬೇಕೆಂಬ ದುರ್ಬುದ್ಧಿ ಹುಟ್ಟಿತು. ಈ ಸಮಾಚಾರವು ಶಿವಾಜಿಯ ಎರಡನೇ ಸೊಸೆ ತಾರಾಬಾಯಿಗೆ (ರಾಜಾರಾಮನ ಹೆಂಡತಿ) ತಿಳಿಯಿತು. ತಕ್ಷಣ ಆಕೆ ಈ ವಿಷಯವನ್ನು ರಾಣಿ ಮಲ್ಲಮ್ಮನಿಗೆ ತಿಳಿಸಿ, ಆಕೆಯನ್ನು ಎಚ್ಚರಿಸಿದಳು. ಮುಂದೆ ಔರಂಗಜೇಬನು ಸಂಭಾಜಿಯನ್ನು ಕೊಂದನು. ಆಮೇಲೆ ಕೊಲ್ಲಾಪುರದ ರಾಣಿ ತಾರಾಬಾಯಿಯು ಮಲ್ಲಮ್ಮಾಜಿಯನ್ನು ತಮ್ಮಲ್ಲಿಗೆ ಬರಮಾಡಿಕೊಂಡು, ಈ ಹಿಂದಿನ ಎಲ್ಲ ವೃತ್ತಾಂತವನ್ನು ಆಕೆಯಿಂದಲೇ ತಿಳಿದುಕೊಂಡಳು. ಆಗ ಮಲ್ಲಮ್ಮಾಜಿಯ ಜತೆಗೆ ಸಮರೋತ್ಸವದ ಲೇಖಕ ಶೇಷೊ ಶ್ರೀನಿವಾಸ ಮುತಾಲಿಕನೂ ಇದ್ದನು. ಇವರ ಸಂಭಾಷಣೆಯಲ್ಲಿ "ನನ್ನ ಪರಿಸ್ಥಿತಿ ಮತ್ತು ಮಲ್ಲಮ್ಮಾಜಿಯ ಪರಿಸ್ಥಿತಿಯು ಒಂದೇ ಸಮನಾಗಿದೆ" ಎಂದರೆ ನಾವಿಬ್ಬರೂ ಪತಿಯನ್ನು ಕಳೆದುಕೊಂಡವರು ಎಂದು ತಾರಾಬಾಯಿಯು ಮೇಲಿಂದ ಮೇಲೆ ಹೇಳುತ್ತಿದ್ದಳಂತೆ. ರಾಣಿ ಮಲ್ಲಮ್ಮನ ವೀರಕಲೆಯು ದ್ಯೋತಕವಾಗಿ

“ವೀರಗಲ್ಲು” ಸ್ಥಾಪನೆ ಮಾಡಲು ಬಹಳ ಮಹತ್ವ ಕೊಟ್ಟು, ತನ್ನ ಸಂಸ್ಥಾನದ ಹದ್ದಿನಲ್ಲಿ ಅದನ್ನು ಸ್ಥಾಪಿಸಿ, ಮಲ್ಲಮ್ಮಾಜಿಗೆ ತಿಳಿಸಿದಳು.

ಲೇಖಕ ಕೇಷೊ ಶ್ರೀನಿವಾಸ ಮುತಾಲಿಕನು ಈ ಗ್ರಂಥವನ್ನು ಯಾವ ಸಂದರ್ಭದಲ್ಲಿ ಬರೆಯಬೇಕಾಯಿತೆನ್ನುವುದನ್ನು ಈ ರೀತಿ ಹೇಳಿದ್ದಾನೆ. ರಾಣಿ ತಾರಾಬಾಯಿಯು “ಛತ್ರಪತಿ ಶಿವಾಜಿಮಹಾರಾಜರ ನಿಜವಾದ ಚರಿತ್ರೆಯನ್ನು ಬರೆದು ತರಬೇಕು. ಉತ್ತಮ ಕೃತಿಗಳಿಗೆ ಬಹುಮಾನ ಕೊಡುತ್ತೇನೆ”ಎಂದು ಒಂದು ಹುಕುಂ ಮಾಡಿದಳು. ಅದರಂತೆ ಮುತಾಲಿಕನು ಈ ಚರಿತ್ರೆಯನ್ನು ಬರೆದುಕೊಂಡು ಕೊಲ್ಲಾಪುರಕ್ಕೆ ಹೋದನು. ಅಲ್ಲಿ ಅನೇಕ ಚರಿತ್ರಕಾರರು ಬಂದಿದ್ದರು. ಸ್ವಾದಿ ಪಂಡಿತರೂ ಮಲ್ಲಮ್ಮನ ಗುರುಗಳೂ ವಯೋವೃದ್ಧ ಶಂಕರಭಟ್ಟರು “ಶಿವವಂಶ ಸುಧಾರ್ಣವ” ಎಂಬ ಚಂಪೂಗ್ರಂಥವನ್ನು ಸಂಸ್ಕೃತಭಾಷೆಯಲ್ಲಿ ಬರೆದು ತೆಗೆದುಕೊಂಡು ಹೋಗಿದ್ದರು. ಆ ಗ್ರಂಥವು ಯಥಾರ್ಥ ವಿಷಯಗಳಿಂದ ತುಂಬಿತ್ತು ಮತ್ತು ಸರ್ವೋತ್ಕೃಷ್ಟವಾದ ಕಥಾಭಾಗವು ಬರೆಯಲ್ಪಟ್ಟಿತ್ತು. ಅದಕ್ಕೆ ಅಗ್ರಸ್ಥಾನವನ್ನು ಕೊಟ್ಟು ಲೇಖಕರನ್ನು ಸನ್ಮಾನಿಸಲಾಯಿತು. ಶ್ರೀ ಬಾಳಾಸಾಹೇಬ್ ಭಾವೆಯವರು “ಶಿವಾಜಿ ಚರಿತ್ರೆ” ಎಂಬ ಹೆಸರಿನ ಗ್ರಂಥವನ್ನು ಮರಾಠಿಭಾಷೆಯಲ್ಲಿ ಬರೆದು ತಂದಿದ್ದರು. ಅದರಲ್ಲಿಯ ವಿಷಯವು ಶಂಕರಭಟ್ಟರ ಗ್ರಂಥದಲ್ಲಿಯ ವಿಷಯದ ಅನುಸರಣೆಯಾಗಿತ್ತು. ಅದಕ್ಕೆ ಎರಡನೆ ಸನ್ಮಾನ ಸಿಕ್ಕಿತು. ಮುತಾಲಿಕ್ ಬರೆದು ತೆಗೆದುಕೊಂಡು ಹೋಗಿದ್ದ “ಶಿವಾಜಿ–ಮಲ್ಲಮ್ಮಾಜಿ ಸಮರೋತ್ಸವ” ಎಲ್ಲರಿಗೂ ತಿಳಿಯುವಂತೆ ಸಭೆಯಲ್ಲಿ ಓದಿಸಿದರು. ಕಥೆಯನ್ನು ಕೇಳಿ ರಾಣಿ ತಾರಾಬಾಯಿಗೆ ಬಹಳ ಸಂತೋಷವಾಯಿತು. ಈ ಪುಸ್ತಕಕ್ಕೆ ಮೂರನೇ ಸನ್ಮಾನ ಸಿಕ್ಕಿತ್ತು.

ಶಿವಾಜಿ–ಮಲ್ಲಮ್ಮಾಜಿ ಸಮರದಲ್ಲಿ ನಡೆಯಿತೆನ್ನಲಾದ ಒಂದು ಘಟನೆಯು ಮುತಾಲಿಕನ ಬರೆಹದಲ್ಲಿ ಬಂದಿಲ್ಲ. ಈ ಘಟನೆಯು ಜದುನಾಥ ಸರ್ಕಾರರು ಬರೆದ ಶಿವಾಜಿಯ ಜೀವನ ಚರಿತ್ರೆಯಲ್ಲಿ ಬಂದಿರುವುದರಿಂದ ಅದರ ಉಲ್ಲೇಖ ಅತ್ಯವಶ್ಯ. ಬೆಳವಡಿ ವಿಷಯ ಬರುವ ಎಲ್ಲಾ ಮರಾಠಿ ಗ್ರಂಥಗಳಲ್ಲಿ ಮಲ್ಲಮ್ಮನನ್ನು ಸಾವಿತ್ರಿಬಾಯಿ ಎಂದು ಕರೆಯಲಾಗಿದೆ. ಶ್ರೀ ದ.ಕೃ. ಜೋಶಿಯವರು ವೀರರಾಣಿ ಮಲ್ಲಮ್ಮನ ಸ್ಮರಣ ಸಂಚಿಕೆಯ ೪೩ನೇ ಪುಟದಲ್ಲಿ ಸರ್ಕಾರರು ಬರೆದದ್ದನ್ನು ಕನ್ನಡದಲ್ಲಿ ಹೀಗೆ ಅನುವಾದಿಸಿದ್ದಾರೆ. “ಸಾವಿತ್ರಿಬಾಯಿಯು ಇಪ್ಪತ್ತು ದಿನಗಳ ವರೆಗೆ ಒಳ್ಳೆಯ ಶೌರ್ಯದಿಂದ ಕೋಟೆಯನ್ನು ಸಂರಕ್ಷಿಸಿದಳು. ಕೊನೆಗೆ ಅವಳು ಸೋತಳು. ಅವಳನ್ನು ಮರಾಠಿಗರು ಸೆರೆ ಹಿಡಿದರು ಮತ್ತು ಸಖೂಜಿ ಗಾಯಕವಾಡ ಎಂಬವನು ಅವಳಿಗೆ ಅವಮಾನ ಮಾಡಿದನು ಮತ್ತು ಬಹಳ ಕಾಡಿದನು. ಈ

ಸುದ್ದಿಯನ್ನು ಕೇಳಿದೊಡನೆಯೇ ಶಿವಾಜಿಯು ಸಖೋಜಿಯ ಕಣ್ಣುಗಳನ್ನು ಕಿತ್ತಿಸಿ ಸಾಯುವ ವರೆಗೆ ಸೆರೆಯಲ್ಲಿಟ್ಟನು."

ಹೀಗೆ ಈ ಯುದ್ಧದಲ್ಲಿ ಮರಾಠಿಯವರು ಗೆದ್ದರೆಂದು ಎಲ್ಲಾ ಮರಾಠಿ ಆಧಾರಗಳು ಹೇಳುತ್ತವೆ. ಕನ್ನಡಿಗರು ಬರೆದುದರಲ್ಲಿ ಬೆಳವಡಿಯವರು ಗೆದ್ದರು ಎಂದು ಹೇಳುತ್ತಾರೆ.

ಸಮಕಾಲೀನ ಇಂಗ್ಲೀಷ್ ಬರೆಹದಲ್ಲಿ ಕನ್ನಡಿಗರ ಬರೆಹದ ಸಮರ್ಥನೆ ಹೀಗಿದೆ : " He Shivaji / is at present besieging a fort where, ... he has suffered more disgrace than ever he did from all power of the moghul or the Deccan (Bijapuri) and he who hath conqured so many kingdoms is not able to reduce this woman Desai." (Factory Records, Surat, 107, 28 Feb. 1678).

ಯುದ್ಧದಲ್ಲಿ ಯಾರು ಸೋತರೂ, ಯಾರು ಗೆದ್ದರೂ, ಯುದ್ಧದ ನಂತರ ಶಿವಾಜಿ ಮತ್ತು ಮಲ್ಲಮ್ಮಾಜಿ ಇಬ್ಬರೂ ಒಬ್ಬರನ್ನೊಬ್ಬರು ಗೌರವದಿಂದ ಕಂಡರು ಮತ್ತು ಇಬ್ಬರ ಮಧ್ಯ ರಾಜಿಯಾಯಿತೆಂದು ಎಲ್ಲರೂ ಹೇಳುತ್ತಾರೆ. ಈ ಸನ್ನಿವೇಶವನ್ನು ಹೃದಯಂಗಮವಾಗಿ ಯಾದವಾಡದಲ್ಲಿರುವ ಶಿಲ್ಪವು ಚಿತ್ರಿಸಿದೆ. ಈ ಶಿಲ್ಪದ ವರ್ಣನೆಯನ್ನು ಪ್ರಸಿದ್ಧ ಮರಾಠಿ ಇತಿಹಾಸಕಾರ ಗ.ಹ. ಖರೆಯವರು ಮರಾಠಿಯಲ್ಲಿ ಮಾಡಿದ್ದನ್ನು ದ.ಕೃ. ಜೋಶಿಯವರು ಕನ್ನಡದಲ್ಲಿ ಈ ರೀತಿ ಭಾಷಾಂತರಿಸಿದ್ದಾರೆ: "ಶಿಲ್ಪದಲ್ಲಿ ಅಡ್ಡವಾಗಿ ಮಾಡಲಾದ ಎರಡು ಭಾಗಗಳಿದ್ದು, ಮೇಲಿನ ಭಾಗದ ಮಧ್ಯದಲ್ಲಿ, ಎಡೆಗಡೆಗೆ ಮುಖಮಾಡಿದ ಕುದುರೆಯ ಮೇಲೆ ಒಬ್ಬ ಎಡಗಡೆಗೆ ಮುಖಮಾಡಿ ಕುಳಿತ ವೀರನಿದ್ದಾನೆ ಮತ್ತು ಅವನ ಮೇಲೆ ಛತ್ರಿ ಹಿಡಿಯಲಾಗಿದೆ. ಈ ವೀರನ ಬಲಗಡೆ ಕಾಲಿನ ಹತ್ತಿರ ಎಡಗಡೆ ಮುಖಮಾಡಿದ ಒರ್ವ ಸಿಪಾಯಿಯಿದ್ದು, ಅವನ ಮುಂದೆ ಎಡಗಡೆ ಮುಖವಾಡಿ ಓಡುತ್ತಿರುವ ಒಂದು ನಾಯಿಯಿದೆ. ಮುಖ್ಯವೀರನ ಹಿಂದೆ ಸೂರ್ಯಪಾನ ಹಿಡಿದಿರುವ ಎಡಗಡೆ ಮುಖಮಾಡಿರುವ ಒಬ್ಬ ನೌಕರನಿದ್ದಾನೆ. ಕುದುರೆಯ ಮೇಲಿನ ವೀರನ ಎಡಬಲ ಕೈಗಳಲ್ಲಿ ಅನುಕ್ರಮವಾಗಿ ಡಾಲು ಮತ್ತು ಖಡ್ಗ ಈ ಆಯುಧಗಳಿದ್ದು, ವೀರನ ಮೈಮೇಲೆ ದಪ್ಪವಾದ ಅಂಗಿಯಿದೆ. ತಲೆಗೆ ಮುಂಡಾಸು. ಕಾಲಲ್ಲಿ ದಿಪ್ಪ ಚಣ್ಣ ಮತ್ತು ಪಾದತ್ರಾಣಗಳಿವೆ. ಆದರೆ ಗದ್ದದ ಮೇಲೆ ಗಡ್ಡಗಳಿಲ್ಲ. ಮತ್ತು ಮುಂಡಾಸು ಶಿವಾಜಿ ಮಹಾರಾಜರ ಚಿತ್ರದಲ್ಲಿಯಂತೆ ಕಾಣುವುದಿಲ್ಲ. ಕುದುರೆಗೆ ಜೀನು ಹಾಕಿದ್ದಾರೆ. ಅದರ ಹೆಗಲ ಮೇಲೆ ಜೋಲಾಡುವ ಅಲಂಕಾರವಿದೆ. ನೌಕರನ ವೇಷ ಸಾಮಾನ್ಯವಾಗಿ ದಕ್ಷಿಣಾತ್ಯವಾಗಿದೆ.

ಶಿಲ್ಪದ ಕೆಳಗಿನ ಅರ್ಧದಲ್ಲಿ ಉದ್ದವಾಗಿ ಮತ್ತೆ ಮೂರು ಭಾಗಗಳನ್ನು ಮಾಡಿದ್ದಾರೆ. ನಡುವಿನ ಭಾಗದಲ್ಲಿ ಒಂದು ಡೊಳ್ಳಾರಿಗೆಯ ಮೇಲೆ ಒಬ್ಬ ಧೋತರವನ್ನುಟ್ಟ ಪುರುಷನು ಸುಖಾಸೀನನಾಗಿ ಕುಳಿತುಕೊಂಡಿದ್ದು, ಅವನ ಎಡದೊಡೆಯ ಮೇಲೆ ಒಂದು ಚಿಕ್ಕ ಮಗುವಿದೆ. ಆ ಪುರುಷನ ತಲೆಗೆ ರುಮಾಲು ಇದ್ದು ಮೈಮೇಲೆ ಉತ್ತರೀಯ ಮತ್ತು ಬಲಗೈಯಲ್ಲಿ ಬಟ್ಟಲವಿದೆ. ಇವನಿಗೆ ಸ್ವಲ್ಪ ಗಡ್ಡ ಮತ್ತು ಕಿವಿಯ ಹತ್ತಿರ ಕೆಳಗಿಳಿದಿದ್ದ ಕೂದಲುಗಳಿವೆ. ಹುಡುಗನಿಗೆ ಕುಡಿಸಲು ಇವನು ಕೈಯಲ್ಲಿ ಹಾಲು ತೆಗೆದುಕೊಂಡಿರಬೇಕೆಂದು ನನಗನಿಸುತ್ತದೆ. ಈ ಪುರುಷನ ಎಡಬಲಗಳಲ್ಲಿ ಅನುಕ್ರಮವಾಗಿ ಬಲಗಡೆಗೆ ತಿರುಗಿರುವ ಮತ್ತು ಎಡಗಡೆಗೆ ಮುಖ ಮಾಡಿರುವ ಸ್ತ್ರೀಯರಿದ್ದು, ಇಬ್ಬರ ಎಡಬಲ ಕೈಗಳಲ್ಲಿ ಅನುಕ್ರಮವಾಗಿ ಗುರುತಿಸಲಾಗದ ವಸ್ತು ಮತ್ತು ಹೂಜಿಗಳಿವೆ. ಮತ್ತು ಅವರು ತಮ್ಮ ಬಲ-ಎಡಕೈಗಳನ್ನು ಮುಖ್ಯ ಪುರುಷನ ಮುಖದ ಕಡೆಗೆ ಒಯ್ದಿದ್ದಾರೆ. ಮುಖ್ಯ ಪುರುಷನ ಬಲಗಡೆಯ ಭಾಗದಲ್ಲಿ ಧೋತರವುಟ್ಟ, ಕೂದಲಿಗೆ ಗಂಟು ಹಾಕಿದ, ಎಡಗಡೆಗೆ ಮುಖಮಾಡಿರುವ ಬಿಲ್ಲುಗಾರನಿದ್ದಾನೆ. ಎಡಗಡೆಯ ಭಾಗದಲ್ಲಿ ಸೊಂಡೆಯ ಹೂಜಿಯನ್ನು ಹಿಡಿದುಕೊಂಡಿರುವ ನಿಲುವಂಗಿ ಹಾಕಿರುವ ರುಮಾಲು ಸುತ್ತಿರುವ ಬಲಗಡೆಗೆ ಮುಖಮಾಡಿರುವ, ಪುರುಷನಿದ್ದಾನೆ.

ಈ ಶಿಲ್ಪದ ಮೇಲಿನ ಭಾಗದಲ್ಲಿ ವೀರನ ತಲೆಯ ಎರಡೂ ಬದಿಗೆ ೬ - ೭ ಅಕ್ಷರಗಳ ಕನ್ನಡ ಬರಹವಿದೆ. ಆದರೆ ನಾನು ೧೯೫೪ರ ಜನವರಿ - ಫೆಬ್ರವರಿ ಸಂಧಿಕಾಲದಲ್ಲಿ ಈ ಶಿಲ್ಪವನ್ನು ನೋಡಿದೆನು. ಆಗ ಅದರ ಮೇಲೆ ಎಣ್ಣೆಯ ಥ ಕುಳಿತಿದ್ದುದರಿಂದ ಅದನ್ನು ನನಗೆ ಓದಲಾಗಲಿಲ್ಲ."

ಇಷ್ಟೆಲ್ಲಾ ಬರೆದ ಮೇಲೆ ಶ್ರೀ ಖರೆಯವರು, ಈ ಶಿಲ್ಪವು ಶಿವಾಜಿ ಮತ್ತು ಮಲ್ಲಮ್ಮಾಜಿಯವರ ಮಧ್ಯ ರಾಜಿಯಾದ ಪ್ರಸಂಗವನ್ನು ಚಿತ್ರಿಸುತ್ತದೆಂದು ನಾವ ತಿಳಿಯಬಹುದು - ಎಂದಿದ್ದಾರೆ.

ಕನ್ನಡ ಅಕ್ಷರಗಳನ್ನು ಓದಲು ಪ್ರಯತ್ನ ಮಾಡಬೇಕು. ಅವುಗಳನ್ನು ಓದಲಿ ಬಂದರೆ ಶಿಲ್ಪದ ಬಗ್ಗೆ ಈಗಿರುವ ಅನಿಶ್ಚಿತತೆ ದೂರವಾಗುತ್ತದೆ. ಹಾಗೆ ಓದಲಿ ಬರದೆ ಇದ್ದರ, ಮೇಲೆ ಹೇಳಿದ ರಾಜಿಯಾದ ಪ್ರಸಂಗವನ್ನು ಶಿಲ್ಪವು ಚಿತ್ರಿಸುತ್ತದೆಂದ ಖರೆಯವರಿಗಿಂತ ಹೆಚ್ಚು ಧೈರ್ಯದಿಂದ ಹೇಳಬಹುದು. ಈ ಶಿಲ್ಪದಲ್ಲಿ ಒಬ್ಬ ಮರಾ ಸರದಾರನು (ಶಿವಾಜಿ) ಒಂದು ಮಗುವನ್ನು (ಮಲ್ಲಮ್ಮನ ಮಗ ನಾಗಭೂಷಣ ತೊಡೆಯ ಮೇಲೆ ಕೂಡಿಸಿಕೊಂಡು, ಬಟ್ಟಲಿನಲ್ಲಿ ಏನನ್ನೋ (ಹಾಲನ್ನು ಕುಡಿಸುತ್ತಿರುವ ದೃಶ್ಯವಿದೆ. ಈ ದೃಶ್ಯವನ್ನು ಒಬ್ಬ ಸ್ತ್ರೀಯು (ಮಲ್ಲಮ್ಮಾಜಿ ನೋಡುತ್ತಿದ್ದಾಳೆ. ಆ ಮರಾಠಾ ಸರದಾರನು ಶಿವಾಜಿ ಎನ್ನುವುದಕ್ಕೆ ಅವನ ಪೋಷಾ

ಸಾಕ್ಷಿ. ಯಾದವಾಡಕ್ಕೆ ಇನ್ನಾವ ಮರಾಠಾ ಸರದಾರನೂ ಬಂದಿಲ್ಲ. ಯಾದವಾಡ ಆಗ ಬೆಳ್ವಡಿ ರಾಜ್ಯಕ್ಕೆ ಸೇರಿತ್ತು. ಮತ್ತು ಶಿವಾಜಿ ಅಲ್ಲಿ ಬೀಡುಬಿಟ್ಟಿದ್ದ. ರಾಜಿ ಆದದ್ದು ಅಲ್ಲಿಯೇ, ಮತ್ತು ಚಿತ್ರದಲ್ಲಿರುವ ಸರದಾರನು ಶಿವಾಜಿ ಎನ್ನುವುದಕ್ಕೆ ಅವನ ಜತೆಗಿರುವ ನಾಯಿಯೂ ಸಾಕ್ಷಿ. ಶಿವಾಜಿಯ ಚರಿತ್ರೆಯನ್ನು ಬಲ್ಲವರು ಅವನ ನಾಯಿಯು (ಅದರ ಹೆಸರು ಮರಾಠಿಯಲ್ಲಿ "ವಾಘ್ರಾ" ಕನ್ನಡದಲ್ಲಿ "ಹುಲಿ") ಯಾವಾಗಲೂ ಅವನ ಜತೆಗೆ ಇರುತ್ತಿತ್ತು. ಶಿವಾಜಿಯ ರಾಜಧಾನಿ ರಾಯಘಡದಲ್ಲಿ ಅವನ ಸಮಾಧಿಯ ಎದುರಿಗೆ ಈ ನಾಯಿಯ ಶಿಲ್ಪವನ್ನು ಇವತ್ತಿಗೂ ನೋಡಬಹುದು. ಕೊನೆಯದಾಗಿ, "ತಾರಾಬಾಯಿ ಈ ತರಹ ಶಿಲ್ಪವನ್ನು ಮಲ್ಲಮ್ಮಾಜಿಯ ಗೌರವಾರ್ಥ ತನ್ನ ರಾಜ್ಯದಲ್ಲಿ ಬೇರೆ ಬೇರೆ ಕಡೆಗಳಲ್ಲಿ ಹಾಕಿಸಿದಳೆ"ಂದು ಮುತಾಲಿಕ ಹೇಳಿದ್ದಾನೆ. ಅವಳೇ ಯಾದವಾಡದಲ್ಲಿಯೂ ಹಾಕಿಸಿರಬಹುದು. ಮುತಾಲಿಕ್ ಈ ಶಿಲ್ಪವನ್ನು ವೀರಗಲ್ಲು ಎಂದು ಕರೆದಿದ್ದಾನೆ. ಸತ್ತವರ ಗೌರವವಾರ್ಥ ವೀರಗಲ್ಲು ಹಾಕುತ್ತಾರೆ. ಜೀವಂತವಿರುವವರ ಗೌರವಾರ್ಥ ಹೀಗೆ ಮಾಡುವುದಿಲ್ಲವಾದ್ದರಿಂದ ವೀರಗಲ್ಲಿನ ಅರ್ಥ ತಿಳಿಯದೆ ಇರುವವರು ಈ ಪುಸ್ತಕ ಬರೆದ ಮೇಲೆ, ಅದರಲ್ಲಿ ಈ ಮಾತನ್ನು ಸೇರಿಸಿರಬೇಕೆಂದು ಡಾ. ಕೆ.ಎಸ್. ಚಿಟ್ನೀಸ್ ಅವರು ಈ ಪುಸ್ತಕದ ಮುನ್ನುಡಿಯಲ್ಲಿ ಬರೆದಿದ್ದಾರೆ. ಅವರು ಹೇಳಿದ ಹಾಗೆ ಶಿಲ್ಪಕ್ಕೆ ವೀರಗಲ್ಲು ಅಂದಿದ್ದು ತಪ್ಪಿರಬಹುದು. ಹಾಗೆ ಕರೆದಿದ್ದರಿಂದ ಶಿಲ್ಪದ ಮಹತ್ವವಾಗಲಿ, ಪುಸ್ತಕದ ಮಹತ್ವವಾಗಲಿ ಕಡಿಮೆಯಾಗುವುದಿಲ್ಲ. ಪುಸ್ತಕದಲ್ಲಿ ಹೇಳಿರುವ ಮಹತ್ವದ ಸಂಗತಿ ಸರಿಯಾದದ್ದೆಂದು ಈ ಶಿಲ್ಪ ನಮ್ಮ ಕಣ್ಣಿಗೆ ಕಟ್ಟುವ ಹಾಗೆ ತೋರಿಸಿ ಕೊಡುತ್ತದೆ. ಇಂತಹ ಶಿಲ್ಪಗಳು ನಮ್ಮಲ್ಲಿ ಅಪರೂಪ. ಬೆಳ್ವಡಿ ಮಲ್ಲಮ್ಮನ ವಂಶಸ್ಥರು. ಮತ್ತು ಅಭಿಮಾನಿಗಳು ಈ ಶಿಲ್ಪವನ್ನು ಸ್ವಚ್ಛ ಮಾಡಿಸಿ ರಾಷ್ಟ್ರೀಯ ಸ್ಮಾರಕವನ್ನಾಗಿ ಪರಿಗಣಿಸಲು ಪುರಾತತ್ವ ಇಲಾಖೆಯವರನ್ನು ಒತ್ತಾಯಿಸಬೇಕು.

ಈ ಐತಿಹಾಸಿಕ ರಾಜಿಯಾಗುವವರೆಗೆ ಮಲ್ಲಮ್ಮಾಜಿಯ ಜೀವನ ಎಷ್ಟು ವಿವರವಾಗಿ ಗೊತ್ತಿದೆಯೋ, ಅದಾದ ಮೇಲೆ ಅವಳ ಜೀವನದ ವಿವರಗಳು ನಮಗೆ ಗೊತ್ತಿರುವುದನ್ನು ಬೆರಳ ಮೇಲೆ ಎಣಿಸಬಹುದು. ಅವು ಮೂರು : ೧. ಅವಳ ಮಗ ನಾಗಭೂಷಣನ ಚೌಲ (ಜಡೆ ಇಳಿಸುವುದು), ೨. ಸೊಗಲದಲ್ಲಿ ಅವನ ಮದುವೆ ಮತ್ತು ೩. ಬೆಳ್ವಡಿಯ ವೀರಭದ್ರದೇವಸ್ಥಾನದಲ್ಲಿ ಪೂಜೆ ನಡೆಯುವುದಕ್ಕೆ ಮಾಡಿದ ವ್ಯವಸ್ಥೆ. ಮೊದಲನೆಯದರ ಬಗ್ಗೆ ಹೂಲಿಮಠದಲ್ಲಿ ಒಂದು ಶಾಸನವಿದೆ. ಈ ಶಾಸನದಿಂದ ಮಹಾರಾಣಿವಂಶವು ರಾಷ್ಟ್ರಕೂಟರಿಂದ ಬಂದ ರಟ್ಟರಾಜರ ವಂಶ. ಮಲ್ಲಮ್ಮಾಜಿ ಸಮಸ್ತ ತುರಕಾರಿ ಪಂಚಮರಲ್ಲಿ ಮಾನ್ಯತೆ

ಪಡೆದಿದ್ದಳು. ಹೂಲಿ ಮಹಾಸ್ವಾಮಿಗಳ ಅನುಗ್ರಹಕ್ಕೆ ಪಾತ್ರಳು. ಪಾತಿವ್ರತ್ಯದಲ್ಲಿ ಪಾರ್ವತಿ, ಕ್ರೋಧದಲ್ಲಿ ಕಾಲೀ, ಯುದ್ಧದಲ್ಲಿ ದುರ್ಗಾ, ರಾಜತಂತ್ರದಲ್ಲಿ ಪ್ರಮಿಳೆ ಸೌಂದರ್ಯದಲ್ಲಿ ರತಿ, ವಿದ್ಯೆಯಲ್ಲಿ ಸರಸ್ವತಿ, ವೇದಾಂತದಲ್ಲಿ ಬ್ರಹ್ಮಜ್ಞಾನ ಸಂಪನ್ನಳಾದ ಗಾರ್ಗಿ, ದಾನದಲ್ಲಿ ಕಲ್ಪಲತೆ ಎಂದು ವರ್ಣಿಸಲಾಗಿದೆ. ತನ್ನ ಮಗ ನಾಗಭೂಷಣರಾಜನ ಚೌಲಕರ್ಮ ನಿಮಿತ್ತ ಶಾಸನದಲ್ಲಿ ಹೇಳಿರುವ ದಾನಮಾಡುತ್ತಾಳೆ. ದಾನದ ತೇದಿ ಶ್ರೀ ಶಕೆ ೧೬೭೯ ರೌದ್ರನಾಮ ಸಂವತ್ಸರ, ಇಸ್ವಿ ೧೬೮೦. ಆಗ ನಾಗಭೂಷಣನಿ ವಯಸ್ಸು ೩. ಈ ವಂಶಕ್ಕೆ ತುರುಕಾರಿ ಎನ್ನುವ ಹೆಸರು ಬರಲಿಕ್ಕೆ ಕಾರಣ ಈ ವಂಶದವರು ಆದಿಲ್‌ಷಾಹಿ ನವಾಬರನ್ನು ಎದುರಿಸುವಲ್ಲಿ ಮುಖ್ಯ ಪಾತ್ರ ವಹಿಸಿದ್ದರಂತೆ. ದಾನ ಶಾಸನದ ಪೂರ್ತಿಪಾಠವನ್ನು ಮತ್ತು ಅದರ ಛಾಯಾಚಿತ್ರವನ್ನು ಸಮರ ಸಂಚಿಕೆಯ ೭ – ೮ನೇ ಪುಟಗಳಲ್ಲಿ ನೋಡಬಹುದು.

ವೀರರಾಣಿ ಮಲ್ಲಮ್ಮನ ಆರಾಧ್ಯದೇವ ಸೊಗಲದ ಸೋಮೇಶ್ವರ. ಆಕೆಯ ಒಂದು ದಾನಶಾಸನದಲ್ಲಿ ಸೋಮೇಶ್ವರನಿಗೆ ಪ್ರಾರ್ಥನೆ ಇದೆ. ಸೊಗಲ ದೃಶ್ಯ ಸೌಂದರ್ಯದ ಬೀಡು. ಇಲ್ಲಿಯ ವನಸಿರಿ ಮತ್ತು ತಡಸಲು ಈ ಜಾಗ್ರತ ಕ್ಷೇತ್ರವನ್ನು ಆಕರ್ಷಣೀಯವನ್ನಾಗಿ ಮಾಡಿವೆ. ಇಲ್ಲಿ ವಿವಾಹಮಂಟಪವನ್ನು ಕಟ್ಟಿಸಿ, ಅದರಲ್ಲಿ ನಾಗಭೂಷಣನ ವಿವಾಹವನ್ನು ಮಾಡಿ, ಸೋಮೇಶ್ವರನಿಗೆ ದಾನಮಾಡಿದಳೆಂದು ಪ್ರತೀತಿಯಿದೆ. ಇಂತಹ ಪ್ರಶಸ್ತವಾದ ಸ್ಥಳ ಬೆಳವಡಿ ರಾಜ್ಯದಲ್ಲಿ ಇನ್ನೊಂದಿಲ್ಲ. ಇಲ್ಲಿ ಅನೇಕ ವಿವಾಹಗಳು ಈಗಲೂ ನಡೆಯುತ್ತವೆ. ನಾಗಭೂಷಣನದು ಇಲ್ಲಿ ನಡೆಯಿತೆನ್ನುವ ಐತಿಹ್ಯ ನಂಬಲರ್ಹವಾದುದು. (ಸ್ಮರಣ ಸಂಚಿಕೆ ಪುಟ ೭೫-೭೬)

ಮಲ್ಲಮ್ಮಾಜಿ ಮಾಡಿದ ಮೂರನೆ ದಾನವನ್ನು ಪ್ರಕಟಿಸಿದವರು ರಾವ್ ಬಹದ್ದೂರ್ ಪಿ.ಜಿ. ಹಳಕಟ್ಟಿಯವರು (ಶಿವಾನುಭವ, ಆಗಸ್ಟ್ ೧೯೨೬, ಪು. ೪೦ ಇದರಲ್ಲಿ ದಾನಿ ಮಲ್ಲನಾಯಕಿಣಿ, ದಾನವನ್ನು ಸ್ವೀಕರಿಸಿದವರು ಹುಬ್ಬಳ್ಳಿಯ ಕೃಷ್ಣಭಟ್ಟರ ಮಗ ವೇದಮೂರ್ತಿ ರಾಜೇಶ್ರೀ ಶ್ರೀಪಾದಭಟ್ಟ. ದಾನದ ಉದ್ದೇಶ ಬೆಳ್ವಡಿಯ ವೀರಭದ್ರದೇವರು ಪೂಜೆಯ ವ್ಯವಸ್ಥೆ, ದಾನ ಮಾಡಿದ್ದು ಗುಡಿಕಟ್ಟಿಯ ಒಂದು ಜಮೀನು. ದಾನದ ತೇದಿ ಇಸ್ವಿ ೧೭೧೩. ಸಾಕ್ಷಿಗಳು ದೇಶ ಕುಲಕರ್ಣಿ ಮೋನಾಜಿ ವೆಂಕಟಾದ್ರಿ ಮತ್ತು ಮಲ್ಲಮ್ಮನ ಮಗ ನಾಗಪ್ಪನಾಯಕ ದೇಸಾಯಿ ರಾಜೆಯಾದಾಗ ೧ ವರ್ಷದವನಿದ್ದ ನಾಗಭೂಷಣ. ಈ ದಾನದ ಹೊತ್ತಿಗೆ ೩ ವರ್ಷದವನಾಗಿದ್ದ. ಅವನ ತಾಯಿ ಮಲ್ಲಮ್ಮಳಿಗೆ ೫೪ ವರ್ಷಗಳಾಗಿದ್ದವು. ೪ ವರ್ಷದ ನಂತರ ಮಲ್ಲಮ್ಮ ಲಿಂಗೈಕ್ಯಳಾದಳು. "ಸಮರೋತ್ಸವ"ದಲ್ಲಿ ಅವ ವಂಶಜರು ಯಾರೊ ಈ ವಿಷಯವನ್ನು ಹೀಗೆ ಸೇರಿಸಿದ್ದಾರೆ: ಶಕೆ ೧೬೩

(ಇಸ್ವಿ ೧೭೧೭) ರಲ್ಲಿ ಮಲ್ಲಮ್ಮ "ಇಹಲೋಕಯಾತ್ರೆ ಮುಗಿಸಿ ಮುಕ್ತಿಕ್ಷೇತ್ರದಲ್ಲಿ ವಿರಾಜಮಾನಳಾದಳು". ಆಗ ಆವಳಿಗೆ ೫೮ ವರ್ಷಗಳಾಗಿದ್ದವು.

ಕರ್ನಾಟಕ ಇತಿಹಾಸದಲ್ಲಿ ಮೂವರು ರಾಣಿಯರು ಸುಪ್ರಸಿದ್ಧ. ಅವರು ಯಾರೆಂದರೆ ಬೆಳ್ವಡಿ ಮಲ್ಲಮ್ಮ, ಕೆಳದಿ ಚೆನ್ನಮ್ಮ ಮತ್ತು ಕಿತ್ತೂರು ಚೆನ್ನಮ್ಮ. ಮೂವರೂ ತಮ್ಮ ಕಾಲದಲ್ಲಿ ಬಲಾಢ್ಯರೆಂದು ಮತ್ತು ಅಜೇಯರೆಂದು ಹೆಸರುವಾಸಿಯಾದವರನ್ನು ಎದುರಿಸಿದರು. ಬೆಳ್ವಡಿ ಮಲ್ಲಮ್ಮ ಶಿವಾಜಿಯನ್ನು, ಕೆಳದಿ ಚೆನ್ನಮ್ಮ ಔರಂಗಜೇಬನನ್ನು, ಕಿತ್ತೂರು ಚೆನ್ನಮ್ಮ ಬ್ರಿಟಿಷರನ್ನು. ಇವರಲ್ಲಿ ಬೆಳ್ವಡಿ ಮಲ್ಲಮ್ಮನ ಹಿರಿಮೆಯೆಂದರೆ, ಸ್ವತಃ ಶೂರ ಸೈನಿಕಳಾಗಿದ್ದುದಲ್ಲದೆ, ಸ್ತ್ರೀಸೇನಾಪಡೆಯ ಮುಖ್ಯಸ್ಥಳಾಗಿದ್ದಳು. ಪ್ರಪಂಚದ ಇತಿಹಾಸದಲ್ಲಿಯೇ ಇಂತಹ ಇನ್ನೊಂದು ಉದಾಹರಣೆ ಸಿಗಲಿಕ್ಕಿಲ್ಲ.[1]

ಕ್ರಿ.ಶ. ೧೭೧೭ರಲ್ಲಿ ಮಲ್ಲಮ್ಮನ ಜೀವನಯಾತ್ರೆ ಮುಗಿದ ಮೇಲೆ. ಬೆಳ್ವಡಿ ಇತಿಹಾಸ ಮುಗಿದ ಹಾಗೆ. ಅವಳ ಮಗ ನಾಗಭೂಷಣ ಅಥವಾ ನಾಗಪ್ಪನಾಯಕ ಎಷ್ಟು ವರ್ಷ ಆಳಿದನು? ಏನು ಮಾಡಿದ? ಇದರ ಬಗ್ಗೆ ಏನೂ ತಿಳಿದಿಲ್ಲ.[2]

ಬೆಳ್ವಡಿಯ ವಂಶದವರು ಇವತ್ತಿಗೂ ಆ ಭಾಗದಲ್ಲಿ ಜನಪ್ರಿಯರಾಗಿದ್ದಾರೆ. ಮತ್ತು ರಾಜಕೀಯದಲ್ಲಿ, ಸಮಾಜಸೇವೆಯಲ್ಲಿ ಹೆಸರುವಾಸಿಯಾಗಿದ್ದಾರೆ. ಅಂಥವರಲ್ಲಿ ಸ್ಮರಣಸಂಚಿಕೆಯಲ್ಲಿ ಉಲ್ಲೇಖಿತರಾಗಿರುವ ರಾವ್ ಬಹಾದ್ದೂರ ಮಲ್ಲನಾಯ್ಕ ಪಾಟೀಲರನ್ನು ಇತಿಹಾಸಕಾರರು ಸ್ಮರಿಸಬೇಕು. ರಾಜಕಾರಣದಂತೆ ಇತಿಹಾಸದಲ್ಲಿಯೂ ಅವರಿಗೆ ಆಸಕ್ತಿ. ಬೆಳವಡಿಯ ಕಾಗದಪತ್ರಗಳನ್ನು ಕಲೆಹಾಕಿ, ರಾವ್ ಬಾಹದ್ದೂರ ಹಳಕಟ್ಟಿಯವರಿಗೂ ಹೂಲಿಯ ಮಠಕ್ಕೂ ಕೊಟ್ಟು, ಸಂಶೋಧನೆಗೆ ನೆರವಾದರು. ಇವರು ಹೀಗೆ ಮಾಡದಿದ್ದರೆ ಬೆಳವಡಿ ಇತಿಹಾಸ ಅಳಿದು ಹೋಗಬಹುದಿತ್ತು.

ಬೆಳವಡಿ ಇತಿಹಾಸಕ್ಕೆ ಸಂಬಂಧಪಟ್ಟ ಬರೆಹಗಳು

1. ಶಿವಾಜಿ–ಮಲ್ಲಮ್ಮಾಜಿ ಸಮರೋತ್ಸವ (ಮರಾಠಿ ಮೂಲ) ಕನ್ನಡ ಅನುವಾದ, ಡಾ. ಕೆ.ಎಸ್. ಚಿಟ್ನೀಸ್. ವೀರಶೈವ ಅಧ್ಯಯನ ಸಂಸ್ಥೆ. ಶ್ರೀ ಜಗದ್ಗುರು ತೋಂಟದಾರ್ಯ ಮಠ. ಗದಗ. ೧೯೯೩.

---

[1] ಶಿ.ವಿ. ಚಿದಾನಂದಮೂರ್ತಿಯವರು ಮೇಲೆ ಹೇಳಿದ ಸೂಚನೆಯನ್ನು ಮಾಡಿದರು.

[2] ಪಂಚಮರ ಇತಿಹಾಸದಲ್ಲಿ ಹೂಲಿ ಶ್ರೀಗಳು ಮುಂದುವರಿದ ವಂಶಾವಳಿಯನ್ನು ಕೊಟ್ಟಿದ್ದಾರೆ. ಅವಲೋಕಿಸಬಹುದು.

೨. ಶಿವಾಜಿ-ಮಲ್ಲಮ್ಮಾಜಿ ಸಮರೋತ್ಸವ (ಮರಾಠಿ) ಶೇಷೋ ಶ್ರೀನಿವಾಸ, ಸಂಪಾದಕ ಡಾ. ಕೆ. ಎನ್. ಚಿಟ್ನೀಸ್, ಕನ್ನಡ ವಿಭಾಗ, ಮುಂಬಯಿ, ವಿದ್ಯಾಪೀಠ, ೧೯೮೯.
೩. ತುರುಕಾರಿ ಪಂಚಮಠ ಇತಿಹಾಸ, ವೇ. ಶ್ರೀ ನೀಲಕಂಠಶಿವಾಚಾರ್ಯ ಮಹಾ-ಸ್ವಾಮಿಗಳು, ಹೂಲಿ.
೪. ಅಜೇಯ ರಾಣಿ ಬೆಳವಡಿ ಮಲ್ಲಮ್ಮಾಜಿ, ಶಾರದ ಆದ್ಯ ರಂಗಾಚಾರ್ಯ ಮತ್ತು ತಾರಾ ದೀಕ್ಷಿತ, ಎರಡನೆಯ ಆವೃತ್ತಿ ೧೯೯೪. ಕನ್ನಡ ಶಕ್ತಿ ಕೇಂದ್ರ, ಬೆಂಗಳೂರು.
೫. ಪ್ರಾಚೀನ ಕರ್ನಾಟಕದ ರಾಣಿಯರು. ಡಾ. ಚೆನ್ನಕ್ಕ ಎಲಿಗಾರ. ಚೆನ್ನಗಂಗಾ ಪ್ರಕಾಶನ, ಧಾರವಾಡ, ೧೯೮೭
೬ ವೀರರಾಣಿ ಬೆಳವಡಿ ಮಲ್ಲಮ್ಮ , ೩ನೇ ಶತಮಾನೋತ್ಸವ ಸ್ಮರಣ ಸಂಚಿಕೆ, ಸಂ. ಬಿ.ಆರ್. ಜಕಾತಿ, ಬೆಳವಡಿ, ೧೯೭೮.
೭ ವೀರರಾಣಿ ಬೆಳವಡಿ ಮಲ್ಲಮ್ಮ, ಜಿ.ಜಿ. ಕಾಡದೇವರ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೮.
೮. Dr. K.N. Chitnis, "Shivaji-Mallammaji Samarotsava", Quarterly Journal of the Mythic Society, Bangalore, Oct-Dec. 1986.
೯. ಜಿ.ಎಸ್. ದೀಕ್ಷಿತ್ "ಶಿವಾಜಿ-ಮಲ್ಲಮ್ಮಾಜಿ ಸಮರೋತ್ಸವ" ಕೃತಿ ಪರಿಶೀಲನೆ, 'ಸಂಶೋಧನೆ' ಚಿದಾನಂದಮೂರ್ತಿ ಅಭಿನಂದ ಗ್ರಂಥ, ಬೆಂಗಳೂರು, ೧೯೯೧.
೧೦. G.S. Dikshit, "A new portrait of Shivaji and fresh light on an incident in his Karnataka expedition, Studies in Indian History. Dr. A.G. Pawar Felicitation Volume, Kolhapur, 1968.
೧೧. ಡಾ.ಎಂ.ಎಂ. ಕಲಬುರ್ಗಿ "ವೀರಶೈವ ಅರಸುಮನೆತನಗಳು" ಮಾರ್ಗ-೧, ಬೆಂಗಳೂರು, ೧೯೮೮.

■

೧೬

ಶಿವಾಜಿ-ಮಲ್ಲಮ್ಮಾಜಿ ಸಮರೋತ್ಸವ

ಕೃತಿ ಪರಿಶೀಲನೆ

ಶಿವಾಜಿ ಕರ್ನಾಟಕ ದಂಡಯಾತ್ರೆಯಿಂದ ಹಿಂತಿರುಗುತ್ತಿರಬೇಕಾದರೆ, ಬೆಳಗಾಂ ಜಿಲ್ಲೆಯ ಸಂಪಗಾಂ ತಾಲ್ಲೂಕಿನಲ್ಲಿರುವ ಬೆಳವಡಿ ದೇಸಾಯಿಣಿ ಮಲ್ಲಮ್ಮನೊಡನೆ ಯುದ್ಧ ಮಾಡಿದನು. ಇದರಲ್ಲಿ ಆಕೆಯ ಶೌರ್ಯವನ್ನು ಮೆಚ್ಚಿ, ಆಕೆಯ ಗೌರವವನ್ನು ಮಾಡಿದ ಪ್ರಸಂಗವನ್ನು ಹೇಳುವ ಪುಸ್ತಕವಿದು. ಇದರ ಲೇಖಕ ಶೇಷೊ ಶ್ರೀನಿವಾಸ ಮುತಾಲಿಕ್. ಇದನ್ನು ಡಾ॥ ಕೆ.ಎನ್. ಚಿಟ್ನೀಸ್ ಇವರು ಸಂಪಾದಿಸಿದ್ದಾರೆ. ಇದರಲ್ಲಿ ಎರಡು ಭಾಗಗಳಿವೆ. ಮೊದಲನೆಯ ಭಾಗದಲ್ಲಿ ಮಲ್ಲಮ್ಮಾಜಿಯ ವಂಶಪರಂಪರೆ, ಬಾಲ್ಯಜೀವನ, ವಿವಾಹ ಮತ್ತು ಪುತ್ರೋತ್ಸವಗಳ ವರ್ಣನೆ ಇದೆ. ಎರಡನೇ ಭಾಗದಲ್ಲಿ ಶಿವಾಜಿ ಮತ್ತು ಮಲ್ಲಮ್ಮ ಇವರ ನಡುವೆ ನಡೆದ ಯುದ್ಧದ ವಿವರಗಳಿವೆ.

ಈ ಪುಸ್ತಕವನ್ನು ಬರೆಯುವುದಕ್ಕೆ ಕಾರಣಗಳು ಹೀಗಿವೆ. ಶಿವಾಜಿಯ ಸೊಸೆ (ರಾಜಾರಾಮನ ಹೆಂಡತಿ) ತಾರಾಬಾಯಿಯು ಕೊಲ್ಹಾಪುರದಲ್ಲಿ ಕ್ರಿ.ಶ. ೧೭೦೦ ರಿಂದ ೧೭೧೪ ರವರೆಗು ಆಳಿದಳು. ಆಗ ಅವಳಿಗೆ ಶಿವಾಜಿಯು ಮಲ್ಲಮ್ಮನನ್ನು ಗೌರವಿಸಿದ ಪ್ರಸಂಗ ತಿಳಿಸಿರಬೇಕು. ಸಹಜವಾಗಿ ಹೆಚ್ಚು ವಿವರಗಳನ್ನು ತಿಳಿಯಬಯಸಿರಬೇಕು. ಅದಕ್ಕೋಸ್ಕರ ಮಲ್ಲಮ್ಮನನ್ನು ಕೊಲ್ಹಾಪುರಕ್ಕೆ ಕರೆಯಿಸಿಕೊಂಡು ಅವಳಿಂದ ಈ ಪ್ರಸಂಗವನ್ನು ಕೇಳಿದಳು. ಆಗ ಮುತಾಲಿಕ್ ಮಲ್ಲಮ್ಮನ ಜತೆಗೆ ಇದ್ದನು. ಅವನೂ ಈ ಪ್ರಸಂಗವನ್ನು ಕೇಳಿದನು. ಮುಂದೆ ತಾರಾಬಾಯಿ ಶಿವ ಛತ್ರಪತಿಯ ಸತ್ಯಕಥೆಯನ್ನು ಬರೆದುಕೊಂಡು ಬಂದವರಿಗೆ ಸನ್ಮಾನ ಮಾಡುತ್ತೇನೆಂದು ಹೇಳಿದಾಗ ಮುತಾಲಿಕ್ ತಾನು ಕೇಳಿದ್ದನ್ನು ಯಥಾವತ್ತಾಗಿ ಬರೆದು ಸ್ಪರ್ಧೆಗೆ ಈ ಪುಸ್ತಕವನ್ನು ಕೊಟ್ಟೆನೆನ್ನುತ್ತಾನೆ. ಸ್ಪರ್ಧೆಯ ವಿವರಗಳನ್ನು ಲೇಖಕ ಈ ರೀತಿ ಹೇಳುತ್ತಾನೆ:

೧. ಮೊದಲನೆ ಪುರಸ್ಕಾರ ಸಿಕ್ಕಿದ್ದು ವಯೋವೃದ್ಧ ಜ್ಞಾನವೃದ್ಧ ಸ್ವಾದಿಯ ಪಂಡಿತ ಶಂಕರಭಟ್ಟ ಮಹಾರಾಜರ 'ಶಿವವಂಶ ಸುಧಾರ್ಣವ' ಎನ್ನುವ ಸಂಸ್ಕೃತ ಗ್ರಂಥಕ್ಕೆ.

೨. ಬಾಳಾಸಾಹೇಬ್ ಭಾವೆಯವರ (ಪ್ರಾಕೃತ) ಮರಾಠಿಯ ಶಿವಾಜಿ ಚರಿತ್ರೆ ಬಹುಶಃ ಎರಡನೆಯ ಪುರಸ್ಕಾರ ಕೊಟ್ಟಿರಬೇಕು. ಮೇಲಿನ ಎರಡೂ ಪುಸ್ತಕಗಳೂ ಲಭ್ಯವಿರುವ ಹಾಗೆ ಕಾಣುವುದಿಲ್ಲ.

೩. ಮೂರನೆ ಬಹುಮಾನ ಮುತಾಲಿಕ್ ಬರೆದ ಪ್ರಸ್ತುತ ಪುಸ್ತಕ 'ಶಿವಾಜಿ-ಮಲ್ಲಮ್ಮಾಜಿ ಸಮರೋತ್ಸವ'ಕ್ಕೆ.

೪-೫. ಈ ಬಹುಮಾನಗಳನ್ನು ಕೊಟ್ಟರೂ ಇಲ್ಲೊ ಗೊತ್ತಿಲ್ಲ. ಇವೆರಡರಲ್ಲಿ ಒಂದು ಕೃಷ್ಣಾಜಿ ಅನಂತ ಸಭಾಸದರ ಪುಸ್ತಕಕ್ಕೆ ಕೊಟ್ಟಿರಬೇಕು. ಈ ಪುಸ್ತಕ ಲಭ್ಯವಿದೆ. ಸಭಾಸದ್ ಬಖೈರ್ ಎಂದು ಪ್ರಸಿದ್ಧವಿದೆ. ಇನ್ನೊಂದು ಪುಸ್ತಕದ ಹೆಸರು ಗೊತ್ತಿಲ್ಲ. ಇನ್ನು ಮುಂದೆ ಪ್ರಸ್ತುತ ಪುಸ್ತಕದಲ್ಲಿಯ ಮುಖ್ಯ ಅಂಶಗಳನ್ನು ನೋಡೋಣ.

ಭಾಗ ೧ : ಸ್ವಾದಿ ರಾಜ್ಯದ ಅರಸಪ್ಪನಾಯಕನ ಮೊಮ್ಮಗ ಮಧುಲಿಂಗ ನಾಯಕನು ವೀರಶೈವನಾದನು. ಅವನ ಹೆಂಡತಿ ವೀರಮ್ಮಾಜಿ. ಈ ದಂಪತಿಗಳಿಗೆ ಸದಾಶಿವನಾಯಕನೆನ್ನುವ ಮಗ ಮತ್ತು ಮಲ್ಲಮ್ಮನೆನ್ನುವ ಮಗಳು ಹುಟ್ಟಿದರು. ಈ ಇಬ್ಬರ ಮಕ್ಕಳಿಗೂ ಮೇಲೆ ಹೇಳಿದ ಸಂಸ್ಕೃತ ವಿದ್ವಾಂಸರು ಶಂಕರಭಟ್ಟರು ಗುರುಗಳು. ರಣವೀರಸಿಂಗ್‌ನೆನ್ನುವ ಯೋಧರು ಇಬ್ಬರಿಗೂ ಯುದ್ಧಕಲೆಯನ್ನು ಕಲಿಸಿದರು. ಮಲ್ಲಮ್ಮನಿಗೆ ೧೬ ವರ್ಷವಾದ ಕೂಡಲೆ ಬೆಳವಡಿಯ ದೇಸಾಯಿ ಈಶಪ್ರಭುವಿನೊಡನೆ ವಿವಾಹವಾಯಿತು. ಈ ಈಶಪ್ರಭು ಮಲ್ಲಮ್ಮಾಜಿಯ ತಂದೆ ಮಧುಲಿಂಗನಾಯಕನ ದಾಯಾದಿ ತಂಗಿ ನೀಲಮ್ಮಾಜಿಯ ಮಗ. ಈಶಪ್ರಭು ಮತ್ತು ಮಲ್ಲಮ್ಮಾಜಿಯವರಿಗೆ ಒಬ್ಬ ಮಗ ಹುಟ್ಟಿದನು. ಅವನ ಹೆಸರು ನಾಗಭೂಷಣ. ಅವನ ಜನ್ಮದಿನ ಕ್ರಿ.ಶ. ೧೬೭೭ ಸೆಪ್ಟೆಂಬರ್ ೧೬.

ಭಾಗ ೨ : ಕ್ರಿಸ್ತಶಕ ೧೬೭೬-೭೮, ಈ ಎರಡು ವರ್ಷಗಳಲ್ಲಿ ಶಿವಾಜಿಯು ಕರ್ನಾಟಕ, ರಾಯಲಸೀಮಾ ಮತ್ತು ಉತ್ತರ ತಮಿಳುನಾಡುಗಳ ಮೇಲೆ ದಂಡೆತ್ತಿ ಹೋದನು. ಇದಕ್ಕೆ ಶಿವಾಜಿಯು ಚರಿತ್ರೆಯಲ್ಲಿ ಕರ್ನಾಟಕದ ದಂಡಯಾತ್ರೆಯೆನ್ನುತ್ತಾರೆ. ಈ ಜೈತ್ರಯಾತ್ರೆಯಲ್ಲಿ ಶ್ರೀಶೈಲದ ಮಲ್ಲಿಕಾರ್ಜುನ, ತಿರುಪತಿಯ ವೆಂಕಟೇಶ್ವರಾದಿಯಾಗಿ ಎಲ್ಲಾ ಕ್ಷೇತ್ರದ ದೇವತೆಗಳನ್ನು ಪೂಜೆ ಮಾಡಿ ಅನುಗ್ರಹ ಪಡೆದನು. ನಂತರ ತಂಜಾವೂರಿನಲ್ಲಿ ರಾಜನಾಗಿದ್ದ ಸಹೋದರ ವೆಂಕೋಜಿಯನ್ನು

ಭೇಟಿಮಾಡಿ ಅವನಿಂದ ತನ್ನ ಭಾಗದ ರಾಜ್ಯವನ್ನು ಪಡೆದು ಬೆಂಗಳೂರಿಗೆ ಬಂದನು. ಮೈಸೂರಿನ ಚಿಕ್ಕದೇವರಾಯನ ಸೈನ್ಯಕ್ಕೂ ಶಿವಾಜಿಯ ಸೈನ್ಯಕ್ಕೂ ಒಂದೆರಡು ಕಡೆ ಘರ್ಷಣೆಗಳಾದವು. ನಂತರ ಕೆಳದಿಯ ಚೆನ್ನಮ್ಮಾಜಿಯ ಜತೆಗೆ ಯುದ್ಧ ಮಾಡಿ ಅವಳಿಂದ ಚೌಥಾಯಿ ವಸೂಲು ಮಾಡಿದನು. ಮುಂದೆ ಹಂಪೆಗೆ ಹೋದನು. ಅಲ್ಲಿ ೧೦ ದಿನ ಇದ್ದನು. ಅಲ್ಲಿಯ ಕಟ್ಟಡಗಳು ನಷ್ಟ-ಭ್ರಷ್ಟವಾಗಿರುವುದನ್ನು ನೋಡಿ ವ್ಯಥೆಪಟ್ಟನು. ಅಲ್ಲಿಯ ವಿರೂಪಾಕ್ಷ ದೇವರಿಗೆ ಅಭಿಷೇಕ ಮಾಡಿಸಿ ಅನುಗ್ರಹ ಸಂಪಾದಿಸಿದನು. ಅಲ್ಲಿ ಹೇರಳವಾಗಿ ದಾನ ಮಾಡಿದನು. ಆತನ ಧಾರ್ಮಿಕ ಪ್ರವೃತ್ತಿ ಮತ್ತು ಕೀರ್ತಿ ಕರ್ನಾಟಕಾದ್ಯಂತ ಹರಡಿತ್ತು. ಅನೇಕ ಜನರು ಅವನ ದರ್ಶನಕ್ಕೆ ಬಂದರು. ಅವರೆಲ್ಲಾ ಶಿವಾಜಿಗೆ "ನಿಮ್ಮ ದೇಶಕ್ಕೆ ಹೋಗಬೇಡಿ. ಇಲ್ಲಿಯೆ ಇದ್ದು ನಮ್ಮ ರಾಜರಾಗಿ" ಎಂದು ಬಿನ್ನವಿಸಿದರು. ಇದಕ್ಕೆ ಶಿವಾಜಿ "ನಾನು ರಾಜಧಾನಿಗೆ ಹೋಗಿ. ಅಲ್ಲಿ ಸಂಭಾಜಿಯನ್ನು ರಾಜನನ್ನಾಗಿ ಮಾಡಿ. ರಾಜಾರಾಮನನ್ನು ಕರ್ನಾಟಕದಲ್ಲಿಡುತ್ತೇನೆ. ನಾನು ಇಲ್ಲಿಯೆ ಇದ್ದು ತುಂಗಭದ್ರಸ್ನಾನ. ವಿರೂಪಾಕ್ಷದೇವರ ಪೂಜೆ ಮಾಡಿಕೊಂಡು ನನ್ನ ಕೊನೆಯ ದಿನಗಳನ್ನು ಕಳೆಯುತ್ತೇನೆ. ನೀವು ಕಾಳಜಿ ಮಾಡಬೇಡಿ" ಎಂದು ಸಂತೈಸಿದನು. ಆಗಲೆ ಆನೆಗೊಂದಿ ರಾಜನನ್ನು ಸನ್ಮಾನ ಮಾಡಿದನು. ನಂತರ ಕೊಪ್ಪಳ ಕೋಟೆಯನ್ನು ಗೆದ್ದು ಧಾರವಾಡದ ಹತ್ತಿರವಿರುವ ಮತ್ತು ಬೆಳವಡಿ ಸಂಸ್ಥಾನಕ್ಕೆ ಸೇರಿದ ಯಾದವಾಡದಲ್ಲಿ ಪಾಳೆ ಹೂಡಿದನು.

ಶಿವಾಜಿಯ ಹತ್ತಿರ ೫೦,೦೦೦ ಸೈನ್ಯವಿತ್ತು. ಅದನ್ನು ಸಾಗಿಸಲಿಕ್ಕೆ ಆನೆ, ಒಂಟೆ, ಎತ್ತಿನಗಾಡಿಗಳು ಸಾಕಷ್ಟು ಇದ್ದವು. ಸೈನಿಕರಿಗೆ ಬೇಕಾಗುವ ಹಾಲಿನ ಸಲುವಾಗಿ ೪೦೦ ಹಸು ಮತ್ತು ೨೦೦ ಎಮ್ಮೆಗಳಿದ್ದವು. ಈ ಸೈನ್ಯಕ್ಕೆ ಅಧಿಪತಿ ಧನಾಜಿ. ಯಾದವಾಡದಲ್ಲಿ ಪಾಳೆ ಹೂಡಿದ್ದನ್ನು ಅದರ ಅಧಿಪತಿ ಬೆಳವಡಿ ಈಶಪ್ರಭು ಕೇಳಿದನು. ಆತನಿಗೆ ಶಿವಾಜಿಯ ಸತ್ಕಾರ ಮಾಡಬೇಕೆನ್ನುವ ಆಶೆಯಿತ್ತು. ಆತನ ದರ್ಶನ ಮಾಡಲಿಕ್ಕೆ ಎಲ್ಲಾ ಸಿದ್ಧತೆಯನ್ನು ಮಾಡತೊಡಗಿದನು. ಜತೆಗೆ ತನ್ನ ಸೈನ್ಯದ ಪರಾಕ್ರಮವನ್ನು ತೋರಿಸಬೇಕೆಂಬ ಇಚ್ಛೆಯೂ ಅವನಿಗಿತ್ತು. ಆಗ ಬೆಳವಡಿಯಲ್ಲಿ ಯುದ್ಧಕಲೆಯಲ್ಲಿ ನಿಷ್ಣಾತರಾದ ಕಾಲಾಳುಗಳೂ ಕುದುರೆ ಸವಾರರೂ ಬಂದೂಕುಧಾರಿಗಳೂ ಆನೆ, ಒಂಟೆ, ಇತ್ಯಾದಿಗಳೂ ಇದ್ದವು. ಒಂದು ವಿಶೇಷವೆಂದರೆ ಸ್ತ್ರೀಯರಿಗೂ ಸೈನಿಕ ಶಿಕ್ಷಣ ಕೊಟ್ಟಿದ್ದರು ಮತ್ತು ಮಲ್ಲಮ್ಮನ ನೇತೃತ್ವದಲ್ಲಿ ಸ್ತ್ರೀ ಸೈನಿಕರ ಒಂದು ವಿಭಾಗವಿತ್ತು. ಬೆಳವಡಿ ಕೋಟೆಯೊಳಗೆ ಬಾವಿಗಳಿದ್ದು ನೀರಿಗೆ ಕೊರತೆ ಇರಲಿಲ್ಲ.

ದುರ್ದೈವವಶಾತ್, ಈಶಪ್ರಭುವಿನ ಮನಸ್ಸಿನಲ್ಲಿದ್ದ ಹಾಗೆ ಆಗಲಿಲ್ಲ. ಶಿವಾಜಿಯು

ಸೈನಿಕರು ಬೆಳವಡಿಯ ಸುತ್ತಮುತ್ತಲ ಹಳ್ಳಿಗಳಲ್ಲಿಯ ಹಸು ಮತ್ತು ಎಮ್ಮೆಗಳನ್ನು ಹೊಡೆದುಕೊಂಡು ಹೋದರು. ಮತ್ತು ಅಲ್ಲಿಯ ರೈತರಿಗೆ ಅನೇಕ ವಿಧದಲ್ಲಿ ಕಿರುಕೊಳ ಕೊಡಲು ಷುರು ಮಾಡಿದರು. ರೈತರೆಲ್ಲಾ ಸೇರಿ, ದೇಸಾಯಿ ಇವರಿಗೆ ತಮ್ಮ ತೊಂದರೆಗಳನ್ನು ಹೇಳಿಕೊಂಡರು. ಅವರನ್ನು ಸಮಾಧಾನ ಮಾಡಿ, ತಮ ದಳವಾಯಿ ಸಿದ್ಧನಗೌಡ ಪಾಟೀಲರನ್ನು ಛತ್ರಪತಿಯ ಕಡೆ ಕಳಿಸಿದನು ದಳವಾಯಿಯು ಶಿವಾಜಿ ಕಡೆ ಹೋದನು. ಶಿವಾಜಿಯ ಸೈನಿಕರು ಅವನಿ ಅವಮಾನ ಮಾಡಿದರು. ಶಿವಾಜಿಯು ಅವನನ್ನು ನೋಡಲು ನಿರಾಕರಿಸಿದನು ಸಿದ್ಧನಗೌಡ ಪಾಟೀಲನು ವಾಪಸ್ಸು ಬಂದು ನಡೆದದ್ದನ್ನು ಈಶಪ್ರಭುವಿಗೆ ಹೇಳಿದನು ದೇಸಾಯಿ ಇದನ್ನು ಕೇಳಿ ಸಿಟ್ಟಿಗೆದ್ದನು. ಮರಾಠೆಯವರ ಅನ್ಯಾಯಕ್ಕೆ ತಕ ಪ್ರಾಯಶ್ಚಿತ್ತ ಮಾಡುತ್ತೇನೆಂದು ಯುದ್ಧಕ್ಕೆ ಸಿದ್ಧನಾಗತೊಡಗಿದನು. ಅವನು ಯುದ್ಧ ಸಿದ್ಧತೆ ನಡೆಸಿರುವುದನ್ನು ಮಲ್ಲಮ್ಮನು ಕೇಳಿ "ನೀವು ಹೋಗಬೇಡಿ, ನಾನ ಸ್ತ್ರೀಯರ ಸೈನ್ಯವನ್ನು ತೆಗೆದುಕೊಂಡು ಹೋಗಿ ಮರಾಠೆಯವರಿಗೆ ಒಂದು ಕ ತೋರಿಸುತ್ತೇನೆ" ಎಂದಳು. ೨೦೦೦ ಸ್ತ್ರೀಯರ ಸೈನ್ಯವನ್ನು ಸಿದ್ಧ ಮಾಡಿದಳು ಸ್ತ್ರೀ ಸೈನಿಕರನ್ನು ನೋಡಿ ಅವರಿಗೆ ಮರಾಠರು ಅಪಹಾಸ್ಯ ಮಾಡಿದರು. ಮಲ್ಲಮ್ಮನಿ ಸಿಟ್ಟುಬಂದು ಮರಾಠೆ ಸೈನಿಕರನ್ನು ಕೊಲ್ಲಲ್ಲಿಕ್ಕೆ ಆರಂಭಿಸಿದಳು. ಒಂದು ಗಂಟೆಯೊಳಗೆ ೨೦೦ ಸೈನಿಕರಿಗೆ ಗಾಯವಾಯಿತು. ೧೦-೧೨ ಜನ ಸತ್ತರು ಆಗ ಮರಾಠೆ ಸೇನಾಪತಿಯು ಬಂದು ಜಾನುವಾರನ್ನು ವಾಪಸ್ಸು ಕೊಡಲ ಒಪ್ಪಿದನು. ಎಲ್ಲಾ ಜಾನುವಾರುಗಳ ಜತೆಗೆ ಮಲ್ಲಮ್ಮ ತನ್ನ ಸೈನ್ಯದೊಂದಿ ಹಿಂತಿರುಗಿದಳು. ಮತ್ತು ತಮ್ಮ ಎಲ್ಲಾ ಹಳ್ಳಿಗಳಲ್ಲಿಯೂ ವಿಜಯೋತ್ಸವವನ ಆಚರಿಸಲಾಯಿತು.

ಈ ವರ್ತಮಾನವನ್ನು ಛತ್ರಪತಿ ಕೇಳಿ ರೇಗಿದನು. ಈಗಿಂದೀಗೆ ಬೆಳವಡಿಯನ ಆಕ್ರಮಿಸಿ ದೇಸಾಯಿಯನ್ನು ಸೆರೆ ಹಿಡಿದು ತೆಗೆದುಕೊಂಡು ಬನ್ನಿ, ಅವನಿಗೆ ಮತ ಅವನ ಮನೆಯವರಿಗೆ ತಿಲಮಾತ್ರವೂ ಏಟು ಬೀಳಬಾರದೆಂದು ಶಿವಾಜಿಯ ಆಜ್ಞಾಪಿಸಿದನು. ಅದೇ ಪ್ರಕಾರ ಅವನ ಸೈನ್ಯವು ಬೆಳವಡಿ ಕೋಟೆಯನ ಸುತ್ತುಗಟ್ಟಿತು. ಹೊರಗಡೆ ಮರಾಠೆಯವರಿಗೆ ಎಲ್ಲಾ ಸಾಮಾನು ಸಿಗುತ್ತಿತ ಕೋಟೆಯೊಳಗೆ ಸಿಕ್ಕಿಕೊಂಡಿದ್ದ ದೇಸಾಯಿಯ ಕಡೆಯವರಿಗೆ ಹೊರಗಿನ ಸಾಮಾ ದೊರಕುವ ಹಾಗಿರಲಿಲ್ಲ. ಸ್ವಾದಿಯ ಸದಾಶಿವನಾಯಕನಿಗೆ ಮತ್ತು ಹೂಲಿಮಠ ಸ್ವಾಮಿಗಳಿಗೆ ಸೈನ್ಯವನ್ನು ಅನ್ನ ಸಾಮಗ್ರಿಯನ್ನು ಕಳಿಸಲು ದೇಸಾಯಿ ಹೇ ಕಳಿಸಿದ್ದನು. ಆದರೆ ಅಲ್ಲಿಂದ ಸಹಾಯ ಸಕಾಲಕ್ಕೆ ಬರಲಿಲ್ಲ. ಈಶಪ್ರ ನಿರಾಶನಾಗಿ ಕೋಟೆಯ ಹೊರಗೆ ಬಂದು ಯುದ್ಧ ಮಾಡಲಾರಂಭಿಸಿದನ

ಅನಿರೀಕ್ಷಿತವಾಗಿ ಮರಾಠರಿಗೆ ದೊಡ್ಡವಾಡದ ಕಡೆಯಿಂದ ೧೧.೦೦೦ ದಷ್ಟು ದೊಡ್ಡ ಸೈನ್ಯವು ಸಹಾಯಕ್ಕೆ ಬಂತು. ದೇಸಾಯಿಯ ಹತ್ತಿರವಿದ್ದ ತೋಪು ಮುಗಿದುಹೋಯಿತು. ತನ್ನ ೨೦೦೦ ಸೈನಿಕರೊಂದಿಗೆ ದೇಸಾಯಿ ಯುದ್ಧ ಮಾಡಿದನು. ಅವನಿಗೆ ಭಾರಿ ಗಾಯವಾಯಿತು. ನೋವು ತಡೆಯಲಾರದೆ ದೇಸಾಯಿ ಕುದುರೆಯಿಂದ ಕೆಳಗೆ ಬಿದ್ದನು. ಅದನ್ನು ಕೇಳಿ ಮರಾಠ ಸೇನಾಪತಿ ಅಲ್ಲಿಗೆ ಬಂದು ದೇಸಾಯಿಯು ಚಿಂತಾಜನಕ ಸ್ಥಿತಿಯಲ್ಲಿದ್ದುದನ್ನು ನೋಡಿ ಉಪಚಾರ ಮಾಡಿದನು. ಇದನ್ನು ಕೇಳಿ ತನ್ನ ಸೈನ್ಯದೊಂದಿಗೆ ಮಲ್ಲಮ್ಮ ಅಲ್ಲಿಗೆ ಬಂದಳು. ಅಷ್ಟೊತ್ತಿಗೆ ಹೂಲಿ ಕಡೆಯ ಸೈನ್ಯ ಬಂದಿತ್ತು. ಎರಡೂ ಸೈನ್ಯಗಳು ಸೇರಿ ಮರಾಠರಿಗೆ ಬಹಳ ಹಾನಿಯಾಗುವ ಹಾಗೆ ಮಾಡಿದರು. ಮರಾಠರ ಮದ್ದುಗುಂಡು ಮುಗಿದುಹೋಯಿತು. ಅವರು ಓಡಲಾರಂಭಿಸಿದರು. ಮಲ್ಲಮ್ಮನಿಗೆ ಅವರನ್ನು ಬೆನ್ನಟ್ಟಬೇಕೆಂಬ ಆಸೆಯಿತ್ತು. ಆದರೆ ಜತೆಗಿದ್ದ ಸರದಾರರು ಬೆನ್ನಟ್ಟುವುದು ಬೇಡ ಬೆಳವಡಿಗೆ ಹೋಗಬೇಕೆಂದು ಒತ್ತಾಯ ಮಾಡಿದರು. ಅದಕ್ಕೆ ಮಲ್ಲಮ್ಮ ಒಪ್ಪಿದಳು. ಇಷ್ಟರಲ್ಲಿಯೆ ಗಾಯಗೊಂಡ ಈಶಪ್ರಭುವನ್ನು ಕೋಟೆಯೊಳಗೆ ಹೂಲಿಯ ಸ್ವಾಮಿ ಸಿದ್ಧವೀರ ಯೋಗಿರಾಜರು ತೆಗೆದುಕೊಂಡು ಹೋಗಿದ್ದರು. ಯುದ್ಧದ ಸಂತೋಷದ ಸುದ್ದಿಯನ್ನು ಪತಿಗೆ ಹೇಳಬೇಕೆಂಬ ಉತ್ಸುಕತೆ ಮಲ್ಲಮ್ಮನದು. ಆದರೆ ಅವಳು ನೋಡಿದ ದೃಶ್ಯ ಭಯಾನಕವಾಗಿತ್ತು. ಪತಿರಾಜ ಮೃತ್ಯುವಿನ ದವಡೆಯಲ್ಲಿದ್ದನು. ಆತನನ್ನು ಸಮಾಧಾನ ಮಾಡಲಿಕ್ಕೆ ದೇಸಾಯಿಣಿ ಪ್ರಯತ್ನಿಸಿದಳು. ಅದು ಸಾಧ್ಯವಾಗಲಿಲ್ಲ. ಕೊನೆಗೆ ದೇಸಾಯಿ ಹೇಳಿದನು. “ರಾಣಿ, ನಿನ್ನ ಪರಾಕ್ರಮ ನಮಗೆ ಬಹಳ ದಿನಗಳಿಂದ ಪರಿಚಯವಿದೆ. ನೀನು ಶಿವಾಜಿಯನ್ನು ಗೆಲ್ಲು ಅಂದರೆ ನನ್ನ ಇಚ್ಛೆ ಪೂರ್ತಿಯಾಗುತ್ತದೆ. ಹಾಗೆ ಗೆಲ್ಲುತ್ತೇನೆಂದು ನನ್ನ ಕೈಮೇಲೆ ಕೈ ಹಾಕಿ ಮಾತು ಕೊಡು.” ಇದಕ್ಕೆ ರಾಣಿ ಹೇಳಿದಳು. “ನಿಮ್ಮ ಆಜ್ಞೆ ಪ್ರಕಾರ ಶಿವಾಜಿಯನ್ನು ಗೆದ್ದು ಕೀರ್ತಿಯನ್ನು ಸಂಪಾದಿಸುತ್ತೇನೆ. ನೀವು ಸಮಾಧಾನವಾಗಿ. ದೇಸಾಯಿ ಕೊನೆಗೆ ಹೇಳಿದನು. “ನಾನೇನು ಉಳಿಯುವುದಿಲ್ಲ, ನನ್ನ ಯೋಚನೆ ಬಿಟ್ಟುಬಿಡು. ಮುಂದಿನ ಯುದ್ಧ ಶುರು ಮಾಡಿ. ನನ್ನ ಬಾಯಿಯೊಳಗೆ ಗುರುಗಳ ಪಾದೋದಕವನ್ನು ಹಾಕಿ.” ಅದೇ ರೀತಿ ಮಾಡಿದರು.

ಶಾಂತಯ್ಯ ಎನ್ನುವ ಬೆಳವಡಿಯ ಒಬ್ಬ ಸರದಾರನು ಸನ್ಯಾಸಿಯ ವೇಷ ಹಾಕಿಕೊಂಡು ಮರಾಠರ ಸೈನ್ಯವು ಬೀಡುಬಿಟ್ಟಲ್ಲಿ ಹೋದನು. ಅಲ್ಲಿ ಮರಾಠಿ ಸೇನಾಪತಿಯು ಚಿಂತಾಕ್ರಾಂತನಾಗಿದ್ದುದನ್ನು ಕಂಡನು. ಸನ್ಯಾಸಿಯು ಅವನಿಗೆ ಹೇಳಿದ್ದೇನೆಂದು “ನಿಮಗೆ ಬೆಳವಡಿ ಸ್ವಾಧೀನವಾಗುವುದಕ್ಕೆ ಒಂದು ಪ್ರತಿಬಂಧಕವಿದೆ.” ಇದನ್ನು ಕೇಳಿ ಸೇನಾಪತಿಯು ಚಕಿತನಾಗಿ ಅದೇನು ಹೇಳಿ ಸ್ವಾಮಿಗಳೆ, ನಿಮಗೆ

ಎಷ್ಟು ಬೇಕಾದರೂ ಭಿಕ್ಷೆಯನ್ನು ಕೊಡುತ್ತೇನೆಂದನು. ಅದಕ್ಕೆ ಸ್ವಾಮಿಯು "ನಿಮಗ
ಹೇಳಿದರೆ ಉಪಯೋಗವಿಲ್ಲ. ನಾನು ಅದನ್ನು ಶಿವಾಜಿಗೆ ಹೇಳಬೇಕು." ಅವನನ್ನು
ಶಿವಾಜಿಯ ಹತ್ತಿರ ಕರೆದುಕೊಂಡು ಹೋದರು ಮತ್ತು ಸ್ವಾಮಿ ಹೇಳಿದ್ದನ್ನು
ಶಿವಾಜಿಗೆ ತಿಳಿಸಿದರು. ಪ್ರತಿಬಂಧಕವೇನೆಂದು ಶಿವಾಜಿಯು ಕೇಳಿದನು. ಅದಕ
ಸ್ವಾಮಿಯು ಹೀಗೆ ಉತ್ತರಿಸಿದನು "ಮಹಾರಾಜರೆ! ಈ ಊರಿನ ಹತ್ತಿರ
ಸಿದ್ಧಸಮುದ್ರದಲ್ಲಿ ದ್ಯಾಮವ್ವ ಎನ್ನುವ ಹೆಸರಿನ ಜಗದಂಬಾ ದೇವತೆ ಇದ್ದಾಳೆ. ಅ
ಊರು ಪವಿತ್ರ ಜಾಗೃತ ಸ್ಥಾನ. ಅಲ್ಲಿಗೆ ಹೋಗಿ ದೇವತೆಯ ದರ್ಶನ ಮಾಡಿಕೊಂಡ
ಬಂದರೆ ನಿಮ್ಮ ಕೆಲಸ ಸುಗಮವಾಗುವುದು. ನಾಳೆ ಶುಕ್ರವಾರ. ನಾಳೆಯೆ
ಹೋದರೆ ಬಹಳ ಉತ್ತಮ." ಈ ಸೂಚನೆಯು ಛತ್ರಪತಿಯ ಮನಸ್ಸಿಗೆ ಬಂತು
ತಕ್ಷಣ ಶಿವಾಜಿ ಧನಾಜಿಗೆ "ಸ್ವಾಮಿ ಹೇಳಿದ್ದು ನಿಜ. ನೀನು ಬೆಳವಡಿಗೆ ಹೋಗಿ
ಮುತ್ತಿಗೆ ಹಾಕು. ನಾನು ನಾಳೆ ಬೆಳಿಗ್ಗೆ ಜಗದಂಬಾಳ ದರ್ಶನಕ್ಕೆ ಹೋಗುತ್ತೇನೆ
ಸ್ವಾಮೀಜಿಗೆ ದೊಡ್ಡ ಭಿಕ್ಷಾ ಕೊಡು" ಎಂದು ಹೇಳಿದನು. ಸ್ವಾಮಿ ನಡೆದದ್ದೆಲ್ಲವನ್ನು
ರಾಣಿಗೆ ಹೇಳಿದನು. ಅವಳು ತನ್ನ ಸ್ತ್ರೀ ಸೈನ್ಯವನ್ನು ತೆಗೆದುಕೊಂಡು ರಾತ್ರೋರಾ
ಗುಪ್ತ ದಾರಿಯಿಂದ ಶಿವಾಜಿ ಹಿಂತಿರುಗಿ ಬರುವ ಕಡೆ ಕಾದು ಕುಳಿತಿದ್ದಳು
ಏಳೆಂಟು ಸರದಾರರ ಜತೆಗೆ ಶಿವಾಜಿ ಜಗದಂಬಾ ದರ್ಶನ ಮಾಡಿ ಹಿಂತಿರುಗುವಾ
ಮಲ್ಲಮ್ಮಾಜಿಯು ಅವರನ್ನು ತಡೆಗಟ್ಟಿದಳು. ಒಂದಿಬ್ಬರು ಮರಾಠಿ ಸರದಾರರ
ರಾಣಿಯ ಕಡೆ ಹೋದಾಗ ಅವಳು ಕತ್ತಿಯಿಂದ ಅವರನ್ನು ಹೊಡೆದಳು. ಛತ್ರಪ
ಗಾಬರಿಯಾದನು. ಆಗ ಛತ್ರಪತಿಗೆ "ಇವಳು ಮನುಷ್ಯಳಲ್ಲ ದೇವತೆಯ
ಇರಬೇಕೆಂದು" ಎನಿಸಿತು. ಕುದುರೆಯಿಂದ ಇಳಿದು "ಜಗದಂಬಾ, ನನ್ನನ
ರಕ್ಷಿಸು" ಎಂದು ಜಗದಂಬಾ ಸ್ತೋತ್ರವನ್ನು ಹೇಳಲಾರಂಭಿಸಿದನು. ನಂತ
ಹೀಗೆ ಹೇಳಿದನು. "ದೇವಿ ನನ್ನ ಅಪರಾಧವನ್ನು ಕ್ಷಮಿಸು." ಅದಕ್ಕೆ ರಾಣಿ
ಹೇಳಿದಳು. "ದುಷ್ಟಾ, ನನ್ನ ಪತಿದೇವರ ಪ್ರಾಣ ತೆಗೆದುಕೊಂಡು ನಿರ್ಲಜ್ಜನಾ
ಕ್ಷಮೆ ಕೇಳುತ್ತೀಯ. ನಿನ್ನ ಶೌರ್ಯವೆಷ್ಟಿದೆ. ನೋಡೋಣ. ಬಾ ನನ್ನ ಜತೆ
ಯುದ್ಧಕ್ಕೆ. ನನ್ನ ಪತಿಗೆ ಕೊಟ್ಟ ಮಾತನ್ನು ನಾನು ಈಗ ಪಾಲಿಸುತ್ತೇನೆ." ಅವ
ಬೆಳವಡಿಯ ರಾಣಿಯೆಂದು ಆಗ ಶಿವಾಜಿಗೆ ಗೊತ್ತಾಯಿತು. ಇವಳ ಜತೆಗೆ ಈ
ಹೊಡೆದಾಡಿದರೆ ನಾವು ಉಳಿಯುವುದಿಲ್ಲವೆಂದು ಮನಸ್ಸಿನಲ್ಲಿ ಅಂದುಕೊಂಡ
ಹೀಗೆ ಹೇಳಿದನು. "ನೀನು ತಪ್ಪು ತಿಳಿದುಕೊಂಡಿದ್ದೀಯಾ. ನಾನು ನಿ
ಪತಿಯ ಪ್ರಾಣಹಾನಿಗೆ ಕಾರಣನಲ್ಲ. ಅವರ ಜೀವಕ್ಕೆ ಧಕ್ಕೆ ಆಗದ ಹಾ
ಅವರನ್ನು ಕರೆದುಕೊಂಡು ಬನ್ನಿ ಎಂದು ನಾನು ಆಜ್ಞಾಪಿಸಿದೆ. ನನ್ನ ಆಜ್ಞೆ
ವಿರುದ್ಧ ನನ್ನ ಸೈನಿಕರು ನಡೆದರು. ಅವರಿಗೆ ನಾನು ಶಿಕ್ಷೆ ಮಾಡಿದ್ದೇನೆ. ನನ್ನ
ಕ್ಷಮಿಸು." ಹೀಗೆ ತಪ್ಪು ಕಲ್ಪನೆಯು ದೂರವಾದ ಮೇಲೆ ಇಬ್ಬರೂ ರಾಜಿಯಾದರ

ಆದರೆ ಮರಾಠರು ಇನ್ನು ಬೆಳವಡಿ ಕೋಟೆಯ ಮುತ್ತಿಗೆಯನ್ನು ಮುಂದುವರಿಸಿದ್ದರು. ಅಲ್ಲಿಗೆ ಹೋಗಿ ತನ್ನ ಶೌರ್ಯದಿಂದ ಮಲ್ಲಮ್ಮನು ಅವರನ್ನು ಹಿಮ್ಮೆಟ್ಟಿಸಿದಳು. ಅಷ್ಟರಲ್ಲಿ ಮರಾಠಿ ಸೈನ್ಯಕ್ಕೆ ಯುದ್ಧವನ್ನು ನಿಲ್ಲಿಸಬೇಕೆಂದು ಆದೇಶ ಬಂದಿತು. ಇನ್ನೊಮ್ಮೆ ಶಿವಾಜಿ-ಮಲ್ಲಮ್ಮ ಇವರ ಭೇಟಿಯಾಯಿತು. ಈ ಭೇಟಿಯ ವೇಳೆಗೆ ಹಲಿಯ ಸ್ವಾಮಿಗಳು ಉಪಸ್ಥಿತರಿದ್ದರು. ಅವರು ಇಬ್ಬರಿಗೂ ಈ ರೀತಿ ಉಪದೇಶ ಮಾಡಿದರು. "ಇಬ್ಬರೂ ಸ್ನೇಹಿತರಾಗಿರಿ. ಒಬ್ಬರ ಆಪತ್ತಿನಲ್ಲಿ ಇನ್ನೊಬ್ಬರು ಸಹಾಯ ಮಾಡಿ." ಹೀಗೆಂದು ಹೇಳಿದ ಮೇಲೆ ಇಬ್ಬರೂ ತಮ್ಮ ತಮ್ಮ ಸ್ಥಳಗಳಿಗೆ ಹಿಂತಿರುಗಿದರು.

ಇಷ್ಟೆಲ್ಲಾ ಆಗಿದ್ದು ಕ್ರಿ.ಶ. ೧೬೭೮ರಲ್ಲಿ. ೧೬೭೭ರಲ್ಲಿ ಆರಂಭವಾದ ಶಿವಾಜಿಯ ಕರ್ನಾಟಕ ದಂಡಯಾತ್ರೆಯು ಈ ರೀತಿಯಾಗಿ ೧೬೭೮ರಲ್ಲಿ ಮುಗಿಯಿತು. ನಂತರ ನಡೆದ ಘಟನೆಗಳನ್ನು ಸಂಕ್ಷಿಪ್ತವಾಗಿ ಹೀಗೆ ಹೇಳಬಹುದು. ೧೬೮೦ ರಲ್ಲಿ ಶಿವಾಜಿಯು ಮರಣ ಹೊಂದಿದನು. ನಂತರ ಔರಂಗಜೇಬನು ಶಿವಾಜಿಯ ನಂತರ ಆಳಿದ ಸಂಭಾಜಿಯನ್ನು ಕೊಲೆ ಮಾಡಿದನು. ಈ ದುರ್ಘಟನೆಯಾದ ಮೇಲೆ, ಸಂಭಾಜಿಯ ತಮ್ಮ ರಾಜಾರಾಮನು ಔರಂಗಜೇಬನಿಗೆ ಸಿಗಬಾರದೆಂದು ಕರ್ನಾಟಕಕ್ಕೆ ಪಲಾಯನ ಮಾಡಿದನು. ಕ್ರಿ.ಶ. ೧೭೦೦ ರಲ್ಲಿ ರಾಜಾರಾಮನು ಮರಣ ಹೊಂದಿದನು. ಕ್ರಿ.ಶ. ೧೭೦೦ ರಿಂದ ೧೭೧೪ರವರೆಗೂ ರಾಜಾರಾಮನ ರಾಣಿ ತಾರಾಬಾಯಿಯು ಕೊಲ್ಹಾಪುರದಲ್ಲಿ ಆಳಿದಳು. ಆಗ ಈ ಲೇಖನದ ಆದಿ ಭಾಗದಲ್ಲಿ ಹೇಳಿದ ಹಾಗೆ ಮಲ್ಲಮ್ಮನನ್ನು ಕೊಲ್ಹಾಪುರಕ್ಕೆ ಕರೆಯಿಸಿಕೊಂಡು ಅವಳಿಗೂ ಶಿವಾಜಿಗೂ ನಡೆದ ಯುದ್ಧದ ವಿವರಗಳನ್ನು ಕೇಳಿ ತಿಳಿದುಕೊಂಡದ್ದಲ್ಲದೆ, ಅವಳನ್ನು ಗೌರವಿಸಿದಳು. ಹಾಗೂ ಶಿವಾಜಿ ಮತ್ತು ಮಲ್ಲಮ್ಮರ ಮಧ್ಯೆ ರಾಜಿಯಾದ ಪ್ರಸಂಗದ ಶಿಲ್ಪವನ್ನು ಕೊಲ್ಹಾಪುರದಲ್ಲಿ ಇಡಿಸಿದಳು. ಇದಕ್ಕೆ ಈ ಪುಸ್ತಕದ ಲೇಖಕ ಈ ಶಿಲ್ಪವನ್ನು ವೀರಗಲ್ಲು ಎಂದು ಕರೆದಿದ್ದಾನೆ. ಈ ರೀತಿ ಮಲ್ಲಮ್ಮನ ಗೌರವವನ್ನು ಮಾಡಿದ ಮೇಲೆ, ಮೊದಲು ಹೇಳಿದಂತೆ, ಶಿವಾಜಿ ಚರಿತ್ರೆಯನ್ನು ಬರೆದುಕೊಂಡು ಬರುವ ಸ್ಪರ್ಧೆಯನ್ನು ತಾರಾಬಾಯಿಯು ಏರ್ಪಡಿಸಿದಳು.

ಈ ಗ್ರಂಥದ ಸಾರಾಂಶವನ್ನು ಈ ರೀತಿಯಾಗಿ ಹೇಳಿದ ಮೇಲೆ, ಈ ಗ್ರಂಥವು ನಂಬಲರ್ಹವೆ ಎನ್ನುವ ಪ್ರಶ್ನೆಗೆ ಉತ್ತರವನ್ನು ಹೇಳಬಹುದು. ಇದರ ಲೇಖಕ ಮುತಾಲಿಕ್ ತಾನು ಇದ್ದುದ್ದು ಇದ್ದ ಹಾಗೆ (ಯಥಾವತ್) ಬರೆದಿದ್ದೇನೆಂದು ಹೇಳುತ್ತಾನೆ. ಆದರೆ ಈ ಪುಸ್ತಕದ ಸಂಪಾದಕ ಡಾ॥ ಚಿಟ್ನೀಸರು ಇದನ್ನು ಸಂಪೂರ್ಣವಾಗಿ ನಂಬಲು ಅಡ್ಡಿ ಬರುವ ಅಂಶಗಳು ಕೆಲವಿವೆ ಎನ್ನುತ್ತಾರೆ. ಅವು ಯಾವುವೆಂದರೆ,

೧. ಇದರ ಮರಾಠಿ ಭಾಷೆ ಸಮಕಾಲದ್ದಲ್ಲ. ಶಿವಾಜಿ ಕಾಲದ್ದೂ ಅಲ್ಲ
ಪೇಷ್ವೆಯವರ ಕಾಲದ್ದೂ ಅಲ್ಲ. ನಂತರದ್ದು.

೨. ಯುದ್ಧ ನಡೆದದ್ದು ಇಂಗ್ಲೀಷರ ಬರೆಹದ ಪ್ರಕಾರ ಫೆಬ್ರವರಿ ೧೧, ೧೬೭೮
ಈ ಲೇಖಕ ಡಿಸೆಂಬರ್ ೧೬೭೮ ಎಂದು ಹೇಳುತ್ತಾನೆ.

೩. ಲೇಖಕ ಶೇಷೊ ಶ್ರೀನಿವಾಸ ಮುತಾಲಿಕ್ ಬೆಳವಡಿ ಸಂಸ್ಥಾನದಲ್ಲಿ ಕೆಲಸ
ಮಾಡುತ್ತಿರಬೇಕು. ಹೀಗಿರಬೇಕಾದರೆ ಅವನು ನಿಷ್ಪಕ್ಷಪಾತವಾಗಿ ಬರೆಯಲು
ಸಾಧ್ಯವೆ?

೪. ಮಲ್ಲಮ್ಮನಂಥ ಅನುಭವವಿಲ್ಲದ ೧೭ ವರ್ಷದ ಬಾಲಕಿ ಯುದ್ಧ ಕಲೆಯಲ್ಲಿ
ನಿಷ್ಣಾತನಾದ ಶಿವಾಜಿಯನ್ನು ಸೋಲಿಸಿದಳೆಂಬುದನ್ನು ನಂಬಲಿಕ
ಆಗುವುದಿಲ್ಲ.

೫. ಮಲ್ಲಮ್ಮ ಹೇಳುವುದನ್ನು ಕೇಳಿ ತಾರಾಬಾಯಿಯು ಸಂತುಷ್ಟಳಾದಳೆಂದು
ಲೇಖಕ ಹೇಳುತ್ತಾನೆ. (ಡಾ॥ ಚಿಟ್ನೀಸರು ಹೇಳುವಂತೆ, ಸಂತುಷ್ಟಳಾಗುವ
ಬದಲು ತಾರಾಬಾಯಿಗೆ ಸಿಟ್ಟು ಬಂದಿರಬೇಕು.)

೬ ಮಲ್ಲಮ್ಮಾಜಿ ಹೇಳಿದ್ದನ್ನು ಕೇಳಿ ತಾರಾಬಾಯಿ ಸಂತುಷ್ಟಳಾದದ್ದಲ್ಲದೆ ಅವ
ಗೌರವಾರ್ಥ ಅವಳ ವೀರಗಲ್ಲನ್ನು ತನ್ನ ರಾಜ್ಯದಲ್ಲಿ ಸ್ಥಾಪಿಸಿದಳೆಂದು
ಲೇಖಕ ಬರೆದಿದ್ದಾರೆ. ಜೀವಂತವಿರುವವರ ಗೌರವಾರ್ಥ ಯಾರೂ
ವೀರಗಲ್ ಸ್ಥಾಪನೆ ಮಾಡುವುದಿಲ್ಲ. ಆದ್ದರಿಂದ ಯಾರೊ ಪುಸ್ತ
ಬರೆದು ಮುಗಿಸಿದ ಮೇಲೆ ಈ ತಪ್ಪನ್ನು ಸೇರಿಸಿರಬೇಕು ಎನ್ನುತ್ತಾರೆ ಡಾ
ಚಿಟ್ನೀಸ್.

ಈ ಪುಸ್ತಕದ ಬಗ್ಗೆ ಡಾ॥ ಚಿಟ್ನೀಸರ ಅಂತಿಮ ನಿರ್ಣಯ ಹೀಗಿದೆ: ಯುದ್ಧ ನಡೆದ ತಪ್ಪು ತಾರೀಖು ಮತ್ತು ಅತಿಶಯೋಕ್ತಿ ಇವುಗಳನ್ನು ಬಿಟ್ಟರೆ ಸಾಧಾರಣವಾ ಸ್ವಾದಿ ಮತ್ತು ಬೆಳವಡಿ ರಾಜ್ಯದ ಬಗೆಗಿನ ಮಾಹಿತಿ ಮತ್ತು ಅಲ್ಲಿಯ ಘಟನೆಗ ಬಗೆಗೆ ನಂಬಬಹುದು. ಆದರೆ ಶಿವಾಜಿ ಮೇಲೆ ಮಲ್ಲಮ್ಮ ಜಯ ಸಂಪಾದಿಸಿದ ಎಂದು ಹೇಳುವುದು ಸಂಪೂರ್ಣ ಸುಳ್ಳು.

ಇವಕ್ಕೆ ಉತ್ತರ ಹೀಗೆ ಹೇಳಬಹುದು : ೧. ಭಾಷೆಯಲ್ಲಿ ತಪ್ಪುಗಳಿರುವುದಕ್ಕೆ ಡಾ॥ ಚಿಟ್ನೀಸರೇ ತಮ್ಮ ಇಂಗ್ಲೀಷ್ ಮತ್ತು ಮರಾಠಿ ಬರೆಹಗಳಲ್ಲಿ ಹೇಳಿದ ಹಾ ಲೇಖಕ ಮುತಾಲಿಕ್‌ನಿಗೆ ಆಗಲೀ ಅದನ್ನು ಓದಿ ಹೇಳಿದ ಕುಲಕರ್ಣಿಗಾಗಲಿ ಮತ್ತು ಅದನ್ನು ಕನ್ನಡ ಲಿಪಿಯಲ್ಲಿ ಬರೆದ ವೀರಯ್ಯ ರೊಟ್ಟಿಗಾಗಲೀ ಮರಾ

ಭಾಷೆ ಸರಿಯಾಗಿ ಬರುತ್ತಿರಲಿಲ್ಲ. ಆದ್ದರಿಂದ ಭಾಷೆಯಲ್ಲಿ ತಪ್ಪುಗಳಿರುವುದು ಸಹಜ. ಈ ಪುಸ್ತಕದ ಮೌಲ್ಯಮಾಪನವನ್ನು ಭಾಷೆಯಿಂದ ಮಾಡಬಾರದು, ಇತರ ಅಂಶಗಳಿಂದ ಮಾಡಬೇಕು.

೨. ಯುದ್ಧ ನಡೆದದ್ದು ಫೆಬ್ರವರಿ ೧೬೭೮ರಲ್ಲಿ ಎಂದು ಸಮಕಾಲೀನ ವರದಿಗಳು ಹೇಳುತ್ತವೆ. ಲೇಖಕ ಡಿಸೆಂಬರ್ ೧೬೭೮ ಎಂದು ತಪ್ಪು ಹೇಳುತ್ತಿರುವುದನ್ನು ಒಪ್ಪಿಕೊಳ್ಳಬೇಕು. ಬಹಳ ದಿನಗಳಾದ ಮೇಲೆ ಬರೆದಿದ್ದರಿಂದ ಅವನ ಸ್ಮರಣಶಕ್ತಿ ದುರ್ಬಲವಾಗಿರಬೇಕು.

೩. ಲೇಖಕ ಬೆಳವಡಿಯವನಾಗಿರಬೇಕು ಮತ್ತು ಆ ಸಂಸ್ಥಾನದಲ್ಲಿ ಕೆಲಸ ಮಾಡುತ್ತಿರಬೇಕು. ಆದ್ದರಿಂದ ಅವರು ನಿಷ್ಪಕ್ಷಪಾತವಾಗಿ ಬರೆಯುವುದು ಅಸಾಧ್ಯವೆನ್ನುವುದನ್ನು ಬಹುಮಟ್ಟಿಗೆ ಒಪ್ಪತಕ್ಕಂಥಾದ್ದು. ಆದರೆ ಮುಂದೆ ಹೇಳುವ ಹಾಗೆ ಮುಖ್ಯವಾದ ವಿಷಯದಲ್ಲಿ ಅವನು ಪಕ್ಷಪಾತ ಮಾಡಿಲ್ಲ.

೪. ಮುಖ್ಯವಾದ ವಿಷಯವೆಂದರೆ, ಯುದ್ಧದಲ್ಲಿ ಯಾರು ಗೆದ್ದರೆನ್ನುವುದು. ಅವನು ಹೇಳುವುದು ಶಿವಾಜಿ ಗೆಲ್ಲಲಿಲ್ಲವೆಂದು. ಇದರಲ್ಲಿ ಪಕ್ಷಪಾತವಿಲ್ಲವೆನ್ನುವುದಕ್ಕೆ ಸಮಕಾಲೀನ ಇಂಗ್ಲೀಷಿನವರ ವರದಿ ಹೀಗಿದೆ : "He (Shivaji) has suffered more disgrace than ever he did from all power of the Mogull or Deccan; he who hath conquered so many kingdoms is not able to reduce this woman Deasi."

ಈ ಇಂಗ್ಲೀಷ್ ವರದಿ ಎಲ್ಲಾ ಇತಿಹಾಸಕಾರರಿಗೂ ಬಹಳ ದಿನಗಳಿಂದ ಪರಿಚಯವಿದೆ. ಯಾರೂ ಇದು ಶುದ್ಧ ಸುಳ್ಳು ಎಂದು ಹೇಳಿಲ್ಲ. ಅದನ್ನೆ ಈ ಪುಸ್ತಕ ಹೇಳಿದರೆ ಅದೇ ಯಾಕೆ ಸುಳ್ಳಾಗುತ್ತದೆ?

೫ ಮತ್ತು ೬ನೇ ಆಕ್ಷೇಪಗಳನ್ನು ಒಟ್ಟಿಗೆ ತೆಗೆದುಕೊಳ್ಳೋಣ. ಇವೆರಡೂ ಮಲ್ಲಮ್ಮ ಮತ್ತು ತಾರಾಬಾಯಿಯವರ ಮಧ್ಯೆ ಸಂಬಂಧ ಹೇಗಿತ್ತೆನ್ನುವುದಕ್ಕೆ ಸಂಬಂಧಿಸಿದ್ದು. ಅವರ ನಡುವೆ ನಡೆದ ಮಾತುಕತೆಗಳು ಸೌಹಾರ್ದಯುತವಾಗಿದ್ದವೆನ್ನುವುದಕ್ಕೆ ಮಾತುಗಳ ಮಧ್ಯೆ ತಾರಾಬಾಯಿಯು ಈ ರೀತಿ ಹೇಳುತ್ತಿದ್ದಳು. 'ನಮ್ಮ ದೆಶೆ ಮತ್ತು ಮಲ್ಲಮ್ಮಾಜಿಯವರ ದೆಶೆ ಒಂದು' (ಇಬ್ಬರೂ ವಿಧವೆಯರು). ಇದನ್ನು ಮೇಲಿಂದ ಮೇಲೆ ತಾರಾಬಾಯಿ ಹೇಳಿದ್ದನ್ನು ನೋಡಿದರೆ ಅವರಿಬ್ಬರ ನಡುವೆ ಯಾವ ತರಹದ ವಿರಸವಿರಲಿಲ್ಲವೆನ್ನುವುದು ಸ್ಪಷ್ಟವಾಗುತ್ತದೆ. ಇಷ್ಟೆ ಅಲ್ಲ, ಮಲ್ಲಮ್ಮಾಜಿಯ ಶೌರ್ಯದ ಬಗ್ಗೆ ಮತ್ತು ಶಿವಾಜಿ ಅವಳನ್ನು ಗೌರವದಿಂದ ನೋಡಿಕೊಂಡಿದ್ದರಿಂದ ತಾರಾಬಾಯಿಯು ಅವಳನ್ನು

ಗೌರವಪೂರ್ವಕವಾಗಿ ನೋಡಿಕೊಂಡಳು. ಇವಳು ತೋರಿದ ಗೌರವಕ್ಕೆ ದ್ಯೋತಕವೆಂದರೆ ಅವಳಿಗೆ ಮರ್ಯಾದೆ ಮಾಡಲಿಕ್ಕೆ ತನ್ನ ರಾಜ್ಯದ ಬೇರೆ ಬೇರೆ ಕಡೆ ಸ್ಥಾಪಿಸಿದ ವೀರಗಲ್ಲುಗಳು. ಇವಕ್ಕೆ ವೀರಗಲ್ಲು ಎಂದು ಕರೆಯುವುದು ಆಭಾಸವೆಂದು ಡಾ॥ ಚಿಟ್ನೀಸರು ಹೇಳುತ್ತಾರೆ. ಏಕೆಂದರೆ ವೀರಗಲ್ಲನ್ನು ಸ್ಥಾಪಿಸುವುದು ವೀರರ ಮರಣದ ನಂತರ. ವೀರರು ಜೀವಂತವಿರುವಾಗ ಯಾರೂ ಹಾಗೆ ಮಾಡುವುದಿಲ್ಲ. ಈ ಶಿಲ್ಪಗಳಿಗೆ ವೀರಗಲ್ಲು ಎಂದು ಕರೆಯುವುದು ತಪ್ಪು. ಗೌರವಾರ್ಥವಾಗಿ ನಿರ್ಮಿಸಿದ ಶಿಲ್ಪಗಳು ಅಪರೂಪವಾದುದರಿಂದ, ಲೇಖಕನಿಗೆ ಪರಿಚಿತವಾದ ವೀರಗಲ್ಲು ಎನ್ನುವ ಶಬ್ದವನ್ನು ಉಪಯೋಗಿಸಿದ ಹಾಗೆ ಕಾಣುತ್ತದೆ.

ಶಿವಾಜಿ ಮಲ್ಲಮ್ಮನನ್ನು ಗೌರವಿಸುತ್ತಿರುವ ಶಿಲ್ಪ ಕೊಲ್ಹಾಪುರದ ರಾಜ್ಯದಲ್ಲಿ ಮಾತ್ರ ನಿರ್ಮಿತವಾಗಲಿಲ್ಲ. ಬೆಳವಡಿ ರಾಜ್ಯದಲ್ಲಿಯೂ ನಿರ್ಮಿತವಾದ ಹಾಗೆ ಕಾಣುತ್ತದೆ. ಈಗಲೂ ಯಾದವಾಡದಲ್ಲಿ ಈ ತರಹ ಶಿಲ್ಪ ಒಂದಿದೆ. ಅದರಲ್ಲಿ ಒಬ್ಬ ಮರಾಠ ಯೋಧನು, ಒಬ್ಬ ಸ್ತ್ರೀ ಮತ್ತು ಅವಳ ಮಗುವಿನ ಚಿತ್ರವಿದೆ. ಕುದುರೆ ಸವಾರನಾಗಿರುವ ಯೋಧ ಶಿವಾಜಿ, ಸ್ತ್ರೀ ಮಲ್ಲಮ್ಮ, ಮಗು ಅವಳ ಮಗ ನಾಗಭೂಷಣ ಇರಬೇಕೆಂದು ಕೆಲವರು ಊಹಿಸಿದ್ದಾರೆ. ಬಹುಶಃ ತಾರಾಬಾಯಿ ನಿರ್ಮಿಸಿದ ಶಿಲ್ಪದ ಪ್ರತಿಯಾಗಿರಬೇಕು. ಹಾಗಿದ್ದರೆ ತಾರಾಬಾಯಿ ಮತ್ತು ಮಲ್ಲಮ್ಮರ ಸಂಬಂಧ ಎಷ್ಟು ಮಧುರವಾಗಿತ್ತೆಂದು ತಿಳಿದುಕೊಳ್ಳಬಹುದು.

ಈ ಪುಸ್ತಕದಲ್ಲಿ ತಾರಾಬಾಯಿ ಅಸಂತುಷ್ಟಳಾಗಿದ್ದಳೆಂದು ಹೇಳುವುದಕ್ಕೆ ಯಾವ ಆಧಾರವೂ ಇಲ್ಲ. ತಾರಾಬಾಯಿಯ ಮಾತಿರಲಿ, ಶಿವಾಜಿಗೆ ಅವಮಾನವಾಗುವಂತಹ ಯಾವ ಪ್ರಸಂಗವೂ ಇಲ್ಲ. ಮತ್ತು ಅವನ ಬಾಯಿಯಿಂದ ಬಂದ ಮಾತುಗಳು ಕೂಡ ಅವನು ಹೀಗೆ ಹೇಳಿರಲಿಕ್ಕಿಲ್ಲ ಎನ್ನುವ ಹಾಗಿಲ್ಲ. ಹಂಪೆಯ ಜನರು ಅವನಿಗೆ ನಮ್ಮ ರಾಜನಾಗಿ ಎಂದು ಕೇಳಿಕೊಂಡದ್ದರಿಂದ ಅವರಲ್ಲಿ ಇವನ ಬಗೆಗೆ ಎಂತಹ ಗೌರವವಿತ್ತೆನ್ನುವುದು ಸುಸ್ಪಷ್ಟ. ಅಷ್ಟೆ ಸ್ಪಷ್ಟ ಶಿವಾಜಿಗೆ ವಿಜಯನಗರ ಮಾಡಿದ ಕೆಲಸ, ತಾನು ಮಾಡುತ್ತಿರುವ ಕೆಲಸ ಒಂದೇ ಎನ್ನುವುದರ ಅರಿವು ಇದ್ದಿದ್ದು. ಇಲ್ಲದಿದ್ದರೆ ಅವನು ಹಾಳು ಹಂಪೆಗೆ ಯಾಕೆ ಬರುತ್ತಿದ್ದ. ಅಲ್ಲಿಯ ದೃಶ್ಯವನ್ನು ನೋಡಿ ವ್ಯಥೆಪಟ್ಟದ್ದು, ಅಲ್ಲಿಯೆ ತನ್ನ ಕೊನೆಯ ದಿನಗಳನ್ನು ಕಳೆಯುವುದಕ್ಕೆ ಒಪ್ಪಿದ್ದು ಮತ್ತು ಅಲ್ಲಿಯ ಹಿಂದಿನ ರಾಜರಿಗೆ ದಾನ ಮಾಡಿದ್ದು–ಇವೆಲ್ಲವನ್ನೂ ನೋಡಿದರೆ ವಿಜಯನಗರದ ವೈಭವ ಕಾಲದ ಇತಿಹಾಸ ಅವನಿಗೆ ಗೊತ್ತಿತ್ತು ಮತ್ತು ಆದರಿಂದ ಅವನು ಪ್ರಭಾವಿತನಾಗಿದ್ದನೆಂದು ಊಹಿಸಬಹುದು. ಪ್ರಸ್ತುತ ಪುಸ್ತಕದ ಮುಖ್ಯ ವಿಷಯವನ್ನು ಬಿಟ್ಟರೆ, ಅದರಲ್ಲಿಯ ಇನ್ನೊಂದು ಮುಖ್ಯ ವಿಷಯವೆಂದರೆ ಶಿವಾಜಿಯ ಮೇಲೆ ವಿಜಯನಗರ ಇತಿಹಾಸದ

ಪರಿಣಾಮ ಮತ್ತು ಆತನ ಕರ್ನಾಟಕ ದಂಡ ಯಾತ್ರೆಯಲ್ಲಿ ಹಂಪೆಗೂ ಹೋದ ವಿಷಯ. ಇದನ್ನು ಯಾವ ಆಧಾರವೂ ಹೇಳಿಲ್ಲ. ಈ ದೃಷ್ಟಿಯಿಂದ ಪ್ರಸ್ತುತ ಗ್ರಂಥವು ಶಿವಾಜಿಯ ಮತ್ತು ಕರ್ನಾಟಕ ಇತಿಹಾಸದಲ್ಲಿ ಮಹತ್ವದ್ದೆಂದು ಹೇಳಬಹುದು.

ನಿವೇದನೆ : ಕರ್ನಾಟಕ ಗ್ಯಾಸೆಟಿಯರ್‌ನ ಮುಖ್ಯ ಸಂಪಾದಕ ಡಾ॥ ಸೂರ್ಯನಾಥ ಕಾಮತರಿಗೆ ಬೆಳವಡಿಯಲ್ಲಿ ಶಿವಾಜಿ-ಮಲ್ಲಮ್ಮಾಜಿ ಸಮರೋತ್ಸವವೆನ್ನುವ ಮರಾಠಿ ಭಾಷೆಯಲ್ಲಿ ಮತ್ತು ಕನ್ನಡ ಲಿಪಿಯಲ್ಲಿ ಬರೆದ ಹಸ್ತಪ್ರತಿ ದೊರಕಿತು. ಅದನ್ನು ಅವರಿಗೆ ಕೊಟ್ಟವರು ಬೆಳವಡಿಯ ವೀರರಾಣಿ ಮೆಮೋರಿಯಲ್ ಪದವಿ ಪೂರ್ವ ಜ್ಯೂನಿಯರ್ ಕಾಲೇಜಿನ ಪ್ರಿನ್ಸಿಪಾಲ್ ಎಂ.ಎಚ್. ಕಾಡೇಶನವರ. ಅವರ ಹತ್ತಿರ ಮೂಲಗ್ರಂಥವಿದೆ. ಅವರಿಗೆ ಅದು ಹೂಲಿ ಮಠದಿಂದ ದೊರೆಯಿತು. ಬೆಳವಡಿ ದೇಸಾಯಿ ಮನೆತನದವರಾದ ಬೈಲ್‌ಹೊಂಗಲದ ರಾವ್‌ಬಹದ್ದೂರ್ ಮಲ್ಲನಾಯಕ ಪಾಟೀಲರು ಹೂಲಿಮಠಕ್ಕೆ ಈ ಗ್ರಂಥದ ಪ್ರತಿಯನ್ನು ಕೊಟ್ಟಿದ್ದು. ಅವರಿಗೆ ಈ ಮೂಲಪ್ರತಿಯು ಬೈಲಹೊಂಗಲ್ ತಾಲೂಕಿನ ಕಲ್ಲಾಪುರ ದೇಶಪಾಂಡೆಯವರ ಮನೆತನದವರಿಂದ ದೊರಕಿರಬೇಕೆಂದು ಕಾಡೇಶನವರ್ ಊಹಿಸುತ್ತಾರೆ. ಈ ದೇಶಪಾಂಡೆ ಮನೆತನದವರು ಬೆಳವಡಿ ದೇಸಾಯಿಯವರ ಕಾರಭಾರಿಗಳಾಗಿದ್ದರು. ಈ ಮೇಲಿನ ಮಾಹಿತಿಗಳನ್ನು ಡಾ॥ ಕಾಮತರು ದೊರಕಿಸಿದ್ದಾರೆ.

ಈ ಹಸ್ತಪ್ರತಿಯನ್ನು ಡಾ॥ ಕಾಮತರು ಪುಣೆಯ ವಿದ್ಯಾಪೀಠದ ಇತಿಹಾಸ ಪ್ರಾಧ್ಯಾಪಕರಾದ ಡಾ॥ ಕೆ.ಎನ್. ಚಿಟ್ನೀಸರಿಗೆ ಕೊಟ್ಟರು. ಇದು ಆಗಿದ್ದು ೧೯೮೭ರಲ್ಲಿ. ಡಾ॥ ಚಿಟ್ನೀಸರು ಈ ಹಸ್ತಪ್ರತಿಯ ಮುಖ್ಯ ಅಂಶಗಳನ್ನು ಕುರಿತು Quarterly Journal of the Mythic Society, Vol. LXXVIII, October - December ೧೯೮೭ ರ ಸಂಚಿಕೆಯಲ್ಲಿ ಶಿವಾಜಿ-ಮಲ್ಲಮ್ಮಾಜಿ ಸಮರೋತ್ಸವವೆನ್ನುವ ಲೇಖನವನ್ನು ಬರೆದರು. ಮತ್ತು ೧೯೮೯ರಲ್ಲಿ ಈ ಹಸ್ತಪ್ರತಿಯನ್ನು ಮುಂಬಯಿ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಮುಖ್ಯಸ್ಥರಾಗಿದ್ದ ಡಾ॥ ಶ್ರೀನಿವಾಸ ಹಾವನೂರರು Shivaji-Mallammaji Samarotsav An Early 18th Century Manuscript ಎಂದು ಮುದ್ರಿಸಿದರು. ಈ ಗ್ರಂಥದ ಸಂಪಾದಕರಾದ ಡಾ॥ ಚಿಟ್ನೀಸರು ಬಹು ಅಮೂಲ್ಯವಾದ ಟೀಕೆಯನ್ನು ಮರಾಠಿಯಲ್ಲಿ ಬರೆದಿದ್ದಾರೆ.

ನಾನು ಈ ಲೇಖನವನ್ನು ಬರೆಯುವಾಗ ಡಾ॥ ಚಿಟ್ನೀಸರ, ಮೇಲೆ ಹೇಳಿದ ಇಂಗ್ಲೀಷ್ ಮತ್ತು ಮರಾಠಿ ಲೇಖನಗಳನ್ನು ಮತ್ತು ಮೂಲಗ್ರಂಥ ಆಧರಿಸಿ ಬರೆದಿದ್ದೇನೆ. ಇದೇ ವಿಷಯದ ಮೇಲೆ ಕರ್ನಾಟಕ ಇತಿಹಾಸ ಅಕಾಡೆಮಿ ಮತ್ತು

ಬಸವ ಸಮಿತಿಯವರ ಜಂಟಿ ಆಶ್ರಯದಲ್ಲಿ ಬಸವ ಭವನದಲ್ಲಿ ಒಂದು ವ್ಯಾಖ್ಯಾನ ಮಾಡಿದೆ. ಡಾ|| ಎ.ಜಿ. ಪವಾರ ಇವರ ಸಂಭಾವನೆ ಗ್ರಂಥದಲ್ಲಿ ಶಿವಾಜಿ–ಮಲ್ಲಮ್ಮ ಇವರಿಗೆ ಸಂಬಂಧಪಟ್ಟದ್ದೆಂದು ಹೇಳಲಾದ ಯಾದವಾಡದಲ್ಲಿರುವ ಶಿಲ್ಪವನ್ನು ಕುರಿತು ಒಂದು ಲೇಖನವನ್ನು ಬರೆದಿದ್ದೇನೆ. ಇಂಥ ಶಿಲ್ಪಗಳು ಮತ್ತು ಈ ವಿಷಯಕ್ಕೆ ಸಂಬಂಧಿಸಿದ ಹೆಚ್ಚಿನ ಮಾಹಿತಿಯುಳ್ಳ ಹಸ್ತಪ್ರತಿಗಳು ಬೆಳವಡಿ ಸಂಸ್ಥಾನವಾಗಿದ್ದ ಪ್ರದೇಶದಲ್ಲಿ ಮತ್ತು ಹೂಲಿಮಠದಲ್ಲಿ ದೊರೆಯುವ ಸಾಧ್ಯತೆ ಇದೆ.

■

೧೭

ದೊಡ್ಡೇರಿಯ ಕಾಳಗ

ದೊಡ್ಡೇರಿ ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲ್ಲೂಕಿನ ಒಂದು ಹಳ್ಳಿ. ರಂಗಜೇಬನ ಸೈನ್ಯವನ್ನು ಸಂತಾಜಿ ಘೋರ್ಪಡೆ ಎನ್ನುವ ಮರಾಠ ವೀರನು ಳ್ಳಿಯಲ್ಲಿ ಮಣ್ಣುಮುಕ್ಕಿಸಿದನು. ಈ ಅಸಾಧಾರಣ ವಿಜಯದಲ್ಲಿ ಮರಾಠರಿಗೆ ತ್ರದುರ್ಗದ ಭರಮಪ್ಪ ನಾಯಕನು ಸಹಾಯ ಮಾಡಿದನು. ಈ ಘಟನೆ ಡೆದದ್ದು ಕ್ರಿ.ಶ. ೧೬೯೫ರಲ್ಲಿ. ದೊಡ್ಡೇರಿಯವರಿಗೆ ತಮ್ಮೂರಿನಲ್ಲಿ ನಡೆದ ಈ ಹತ್ವದ ಕಾಳಗದ ನೆನಪೇನಾದರೂ ಇದೆಯೆ ಇದನ್ನು ಪತ್ತೆಮಾಡಬೇಕೆಂದು ನಗೆ ಕುತೂಹಲ ಉಂಟಾಯಿತು. ಚಿತ್ರದುರ್ಗದಲ್ಲಿ ಹುಲ್ಲೂರು ಶ್ರೀನಿವಾಸ ೋಯಿಸರು ಇತಿಹಾಸ ಸಂಶೋಧನೆಗೆ ಮತ್ತು ಕಾಂಗ್ರೆಸ್ಸಿನ ರಚನಾತ್ಮಕ ರ್ಯಕ್ರಮಕ್ಕೆ ಬಹುವಾಗಿ ಶ್ರಮಿಸುತ್ತಿದ್ದರು. ೧೯೫೪ರಲ್ಲಿ ಅವರನ್ನು ನಾನು ಂಡು ನನಗಿರುವ ಕುತೂಹಲವನ್ನು ಅವರಿಗೆ ತಿಳಿಸಿದೆ. ಈ ಕಾಳಗವನ್ನು ೊಡ್ಡೇರಿಯವರು ಮರೆತಿಲ್ಲ. ಇದರ ಬಗೆಗೆ ಅವರಲ್ಲಿ ಒಂದು ಲಾವಣಿ ಪ್ರಚಲಿತವಿದೆ. ್ನಿ ಹೋಗೋಣ. ಅದನ್ನು ಅವರಿಂದ ಹೇಳಿಸಿ ಬರೆದುಕೊಂಡು ರೋಣವೆಂದಾಗ ನನಗೆ ಬಹಳ ಸಂತೋಷವಾಯಿತು. ಅದೇ ರೀತಿ ಅಲ್ಲಿಗೆ ೋಗಿ ಬರೆದುಕೊಂಡು ಬಂದೆವು. ಆ ಲಾವಣಿಗೆ ಪ್ರಾಸ್ತಾವಿಕವಾಗಿ ಸಮಕಾಲೀನ ರ್ಷಿಯನ್ ಆಧಾರಗಳಿಂದ ಜದುನಾಥಸರ್ಕಾರರು ಈ ಕಾಳಗದ ಬಗೆಗೆ ಬರೆದ ವರಗಳನ್ನು ಅವರ ಪುಸ್ತಕ (House of Shivaji) ಪು. ೨೪೩-೨೫೦ ಗದಿಂದ ಸಂಗ್ರಹವಾಗಿ ಕೊಡುತ್ತೇನೆ.

ಶಿವಾಜಿಯ ಮಗ ಸಂಭಾಜಿಯನ್ನು ಔರಂಗಜೇಬನ ಸೈನಿಕರು ಕೊಂದಮೇಲೆ ಜಾರಾಮನು ಮರಾಠರ ಮುಖಂಡನಾದನು. ಅವನೂ ಸಿಕ್ಕಿಬಿದ್ದರೆ ಶಿವಾಜಿಯ ಶವೇ ನಶಿಸಿ ಹೋಗುತ್ತದೆಂದು ರಾಜಾರಾಮನನ್ನು ದಕ್ಷಿಣದ ಜಿಂಜಿಕೋಟೆಯಲ್ಲಿ ರಕ್ಷಿತವಾಗಿಟ್ಟು ಮಹಾರಾಷ್ಟ್ರ ಮತ್ತು ಕರ್ನಾಟಕಗಳಲ್ಲಿ ಔರಂಗಜೇಬನನ್ನು ುರಿಸುವ ಜವಾಬ್ದಾರಿಯನ್ನು ಅವನ ಸೇನಾಪತಿ ಸಂತಾಜಿ ಘೋರ್ಪಡೆಗೆ ಸಲಾಗಿತ್ತು. ಸಂತಾಜಿ, ಶಿವಾಜಿಯ ಹಾಗೆ, ಗನಿಮಿ ಯುದ್ಧದಲ್ಲಿ ಎತ್ತಿದ ಕೈ.

ಅವನ ಜಾಗೀರು ಕೊಪ್ಪಳ. ಔರಂಗಜೇಬನು ಭೀಮಾತೀರದ ಬ್ರಹ್ಮಪುರಿಯಲ್ಲಿ ತಂಗಿದ್ದನು. ಒಂದು ಸಲ ಸಂತಾಜಿ ಮೊಗಲರ ರಾಜ್ಯದಿಂದ ಭಾರಿ ಲೂಟಿಯನ್ನು ಕೊಪ್ಪಳಕ್ಕೆ ಸಾಗಿಸುತ್ತಿದ್ದಾನೆನ್ನುವ ಸುದ್ದಿ ಔರಂಗಜೇಬನಿಗೆ ತಿಳಿಯಿತು. ಕೂಡಲೆ ಆತನು ತನ್ನ ಸಿರಾ ಪ್ರಾಂತ್ಯದ ಅಧಿಕಾರಿಯಾದ ಖಾಸೀಂಖಾನನಿಗೆ ಸಂತಾಜಿಯನ್ನು ತಡೆಯುವಂತೆ ಆಜ್ಞಾಪಿಸಿದನು. ಖಾಸೀಂಖಾನನ ಸೈನ್ಯ ಈ ಕೆಲಸಕ್ಕೆ ಸಾಕಾಗಲಿಕ್ಕಿಲ್ಲವೆಂದು ಅದನ್ನು ಬಲಪಡಿಸಲು ತನ್ನ ಹತ್ತಿರವಿದ್ದ ಖಾನಜಾದ್‌ಖಾನ್ ಮುಂತಾದ ಮುಖಂಡರನ್ನು ಸೇನೆಯೊಂದಿಗೆ ಕಳಿಸಿದನು. ಈ ಭಾರಿಸೇನೆಗಳು ತನ್ನನ್ನು ಸೋಲಿಸಲು ಬರುತ್ತಿವೆಯೆಂದು ಸಂತಾಜಿಗೆ ತಿಳಿಯಿತು.

ಖಾನಜಾದ್‌ಖಾನ್ ರಾಜಮನೆತನದವನು. ಅವನ ಜತೆಗೆ ಬಂದಿದ್ದ ಸರದಾರರು ಔರಂಗಜೇಬನ ನಿಕಟವರ್ತಿಗಳು. ಇಂಥ ಅತಿಥಿಗಳನ್ನು ಯೋಗ್ಯ ರೀತಿಯಿಂದ ಸತ್ಕರಿಸುವ ಸಲುವಾಗಿ ಖಾಸೀಂಖಾನನು ಭಾರಿ ಸಿದ್ಧತೆಗಳನ್ನು ಮಾಡಿದನು. ಆದವಾನಿಯಲ್ಲಿದ್ದ ತನ್ನ ಕರ್ನಾಟಕ ಡೇರಾಗಳನ್ನು, ಬಂಗಾರ ಬೆಳ್ಳಿ ಮತ್ತು ಚೈನಾ ಪಾತ್ರೆಗಳನ್ನು ಹೊರತೆಗೆದನು. ಸಂತಾಜಿಯು ಇವರನ್ನು ಎದುರುಗೊಳ್ಳುವುದಕ್ಕೆ ಬೇರೆ ತರಹ ಸಿದ್ಧತೆಗಳನ್ನು ಮಾಡಿದನು. ತನ್ನ ಸೇನೆಯನ್ನು ಮೂರು ಭಾಗವಾಗಿ ವಿಂಗಡಿಸಿದನು. ಮೊದಲನೆಯದು ಮೊಗಲರ ಬಿಡಾರವನ್ನು ಲೂಟಿಮಾಡತಕ್ಕದ್ದು. ಎರಡನೆಯದು ಮೊಗಲರ ಸೇನೆಯ ಮೇಲೆ ಬೀಳತಕ್ಕದ್ದು. ಮೂರನೆಯದನ್ನು ಅವಶ್ಯವಿದ್ದಲ್ಲಿ ಕಳಿಸುವುದಕ್ಕೆ ಕಾದಿಟ್ಟನು. ಚಿತ್ರದುರ್ಗದ ಪಾಳೆಯಗಾರನು ಲೂಟಿಯ ಸಲುವಾಗಿ ಮರಾಠರನ್ನು ಸೇರಿಕೊಂಡನೆಂದು ಪರ್ಷಿಯನ್ ಆಧಾರಗಳು ಹೇಳುತ್ತವೆ.

ಕದನವು ಬೆಳಗ್ಗೆ ಆರಂಭವಾಯಿತು. ಅದು ಷುರುವಾದಾಗ ಖಾನಜಾದ್‌ಖಾನ ಇನ್ನೂ ಎದ್ದಿರಲಿಲ್ಲ. ಎದ್ದಮೇಲೆ ಅವನಿಗೂ ಖಾಸೀಂಖಾನನಿಗೂ ಶತ್ರು ಸೇ ಅಪರಿಮಿತವಾಗಿದೆಯೆಂದೂ ಶಕ್ತಿಯುತವಾಗಿದೆಯೆಂದೂ ಅರಿವಾಯಿತು. ಮರಾಠ ಸೇನೆಯಲ್ಲಿ ಕಾಲಾಪೇದೆಗಳೆಂದು ಹೆಸರಾದ ದಕ್ಷಿಣದ ಬೇಡರು ಸೇರಿದ್ದರು ಮೊಗಲರು ದಿಕ್ಕುತೋಚದೆ ಏನುಮಾಡಬೇಕೆನ್ನುತ್ತಿರುವಾಗ ಸಂತಾಜಿಯ ಕಾದಿ ಸೇನೆಯು ಯುದ್ಧರಂಗಕ್ಕೆ ಬಂದಿತು. ತಮ್ಮ ಬಿಡಾರವೆಲ್ಲಾ ಶತ್ರುವಶವಾಗಿದೆಯೆನ್ನು ಸುದ್ದಿಯು ತಿಳಿದು ಮೊಗಲ ಮುಖಂಡರು ಹೌಹಾರಿದರು. ಹೊಡೆದಾಟದ ಅರ್ಥವಿಲ್ಲೆಂದು ಬಗೆದು ಕೈಗೆ ಸಿಕ್ಕ ಸಾಮಾನನ್ನು ತೆಗೆದುಕೊಂಡು ಎರಡು ಮೈ ದೂರದಲ್ಲಿದ್ದ ದೊಡ್ಡೇರಿ ಕೋಟೆಯ ಕಡೆಗೆ ಓಡಿಹೋಗಿ ಆ ಕೋಟೆಯನ ಹೊಕ್ಕರು.

ಕೋಟೆಯಲ್ಲಿ ಆಹಾರ ಸ್ವಲ್ಪವಿತ್ತು. ಹಸಿವಿನಿಂದ ಮೊಗಲರು ಶರಣಾಗತರಾಗುತ್ತಾರೆನ್ನುವ ಮರಾಠರ ಎಣಿಕೆ ಸುಳ್ಳಾಗಲಿಲ್ಲ. ಮೊದಲನೆಯ ದಿನ ಕೋಟೆಯಲ್ಲಿದ್ದ ಆಹಾರವನ್ನು ಎಲ್ಲರೂ ಹಂಚಿಕೊಂಡರು. ದನಗಳು ಮನೆಗಳ ಚಪ್ಪರದ ಹುಲ್ಲನ್ನು ತಿನ್ನದೇ ಗತಿಯಿರಲಿಲ್ಲ. ಎರಡನೆಯ ದಿನ ಜನರಿಗಾಗಲಿ ದನಗಳಿಗಾಗಲಿ ಆಹಾರವಿರಲಿಲ್ಲ. ದನಗಳು ಇತರ ದನಗಳ ಬಾಲಗಳನ್ನು ಸೊಪ್ಪೆಯೆಂದು ತಿನ್ನಹೋದವೆಂದು ಒಬ್ಬ ಪರ್ಷಿಯನ್ ಲೇಖಕ ಹೇಳಿದ್ದಾನೆ. ಜನರು ದನಗಳನ್ನು ತಿಂದರು. ಖಾಸೀಂಖಾನನಿಗೆ ಅಫೀಮ್, ಇಲ್ಲದಿದ್ದರೆ ಆಗುತ್ತಿದ್ದಿಲ್ಲ. ಮೂರುದಿನ ಅಫೀಮಿಲ್ಲದ್ದಕ್ಕೆ ನಾಲ್ಕನೆಯ ದಿನ ಸತ್ತನೆಂದು ಒಂದು ವರದಿ. ಇನ್ನೊಂದು ವರದಿಯ ಪ್ರಕಾರ ಚಕ್ರವರ್ತಿಗೆ ಮುಖ ತೋರಿಸಬಾರದೆಂದು ಆತ್ಮಹತ್ಯೆ ಮಾಡಿಕೊಂಡನಂತೆ. ಹಸಿವಿನಿಂದ ಸಾಯುವುದಕ್ಕಿಂತ ಶರಣಾಗತನಾಗುವುದು ಲೇಸೆಂದು ಖಾನಜಾದ್‌ಖಾನನು ತನ್ನ ದಕ್ಷಿಣ ದಿವಾನನನ್ನು ಸಂತಾಜಿಯ ಕಡೆಗೆ ಕಳಿಸಿದನು.

ಈ ದಿವಾನನು ಸಂತಾಜಿಯನ್ನು ಭೇಟಿಯಾದಾಗ ಒಂದು ಲಕ್ಷ ಹೊನ್ನು ಮತ್ತು ಆನೆ ಕುದುರೆ ಎಲ್ಲಾ ಕೊಟ್ಟರೆ, ಮೊಗಲರನ್ನು ಬಿಟ್ಟುಬಿಡುತ್ತೇನೆಂದನು. ನೀನು ಕೇಳುವ ಒಂದು ಲಕ್ಷ ಖಾನಜಾದ ಖಾನನು ತನ್ನ ಒಬ್ಬನ ಬಿಡುಗಡೆಗೆ ಕೊಡಬಲ್ಲ. ಅವನ ಸೇನೆಯೆಲ್ಲಾ ಶರಣಾಗತಿಯಾಗುತ್ತಿರಬೇಕಾದರೆ ಇನ್ನೂ ಹೆಚ್ಚು ಹಣವನ್ನು ಕೇಳೆಂದು ದಿವಾನನು ಹೇಳಿಕೊಟ್ಟನು. ಕೊನೆಗೆ ಇಪ್ಪತ್ತು ಲಕ್ಷ ಹೊನ್ನು ಮತ್ತು ಎಲ್ಲಾ ಒಡವೆ ವಸ್ತ್ರ ಮತ್ತು ಇತರ ಸಾಮಾನನ್ನು ಮೊಗಲರು ಬಿಟ್ಟುಕೊಡಬೇಕು. ಪ್ರತಿಯೊಬ್ಬ ಸೈನಿಕನು ತನ್ನ ಮೈಮೇಲಿನ ವಸ್ತ್ರ ಮತ್ತು ತನ್ನ ಕುದುರೆ ಇಷ್ಟನ್ನು ಮಾತ್ರ ತೆಗೆದುಕೊಂಡು ಹೋಗಬೇಕೆಂದು ಕರಾರಾಗಿ ಕಾಳಗ ಕೊನೆಗೊಂಡಿತು.

ಇದುವರೆಗೂ ಹೇಳಿದ ಕಾಳಗದ ವರ್ಣನೆಯಲ್ಲಾ ಪರ್ಷಿಯನ್ ಇತಿಹಾಸಕಾರರ ಬರೆವಣಿಗೆಯನ್ನು ಆಧರಿಸಿದೆ. ಮರಾಠಿ ಆಧಾರಗಳಲ್ಲಿ ಮರಾಠರ ಈ ಭಾರೀ ಯಶಸ್ಸಿನ ಬಗ್ಗೆ ಏನೂ ಹೇಳದಿರುವುದು ಸೋಜಿಗ. ಜೇಧ ಶಕಾವಳಿಯಲ್ಲಿ ಈ ಕದನದ ತಾರೀಖನ್ನು ಒಂದು ವಾಕ್ಯದಲ್ಲಿ ಹೇಳಿದೆ. ಈ ಕಾಳಗದಲ್ಲಿ ಕನ್ನಡಿಗರೂ ಭಾಗವಹಿಸಿದ್ದರು. ಅವರು ವಹಿಸಿದ ಪಾತ್ರವನ್ನು ಕೆಳಗೆ ಕೊಟ್ಟ ಲಾವಣಿಯು ಯಥಾವತ್ತಾಗಿ ವರ್ಣಿಸಿದೆ.

ದೊಡ್ಡೇರಿಯ ಜಗಳ

ಖಾಸೀಂಖಾನ ಶಂಕರನಾರಾಯಣ ಕಂಚಿಯಲ್ಲಿದ್ದರೂ ಭೇಟಿ ಆಗಿ ।
ಹಗೆಯವನ ಮೇಲೆ ಹಗಾವಿಗೆ ಹೋಗುತ್ತೇನೆ । ಪಗದೀಗೆ ಹೋಗುತ್ತೇನೆ

ದುರ್ಗದ ವಜೀರನ ದಾರಿ ಬಿಡೆಂದಾ ॥ ೧ ॥
ದಾರಿ ಬಿಡಲೀಕೆ ನೀ ಯಾವೂರ ಧೋರೆಯೊ ।

ನೀ ಎಂತರೂ ಧೋರೆಯೋ ।
ಮುಂದಕ್ಕೆ ಹೋದರೆ ಆಣೆ । ಇಳಿಸೆಂದ ದಂಡಾ ॥ ೨ ॥

ಹೊತ್ತು ಮುಳುಗಿದಾ ವಂಭತ್ತು ಗಳಿಗ್ಯಾಗೆ ।
ಹನ್ನೊಂದು ಗಳಿಗ್ಯಾಗೆ ।
ತಕ್ಕೋ ಬೇಕಂತೆ ಗಾರೆ ಬಾಗಿಲ ತನಕ ॥ ೩ ॥

ಇಂತಪ್ಪ ಸುದ್ದಿಯನು ಗುಂಟುನೂರು ಮಲ್ಲಪ್ಪ ಕೇಳಿ ।
ಬೆಂಕಿ ಭರಮೇಂದ್ರಗೆ । ಓಲೆಯ ಬರದಾ ॥ ೪

ಬಂದಂಥ ಓಲೆಯನು ಕುಂತೊಮ್ಮೆ ಓದಿಸಿದ ।
ನಿಂತೊಮ್ಮೆ ಓದಿಸಿದ ।
ಐಯ್ಯಯ್ಯೊ ಧಗಡಿ ನೀ ಹೊಕ್ಕಲ್ಲಿ ಬಿಡೆನೋ ॥ ೫

ಹೊಸದುರ್ಗದ ಮಂದಿ । ಹೊಳಲ್ಕೆರೆ ಠಾಣ್ಯವು ।
ಸಂತೆಬೆನ್ನೂರು ಮಂದಿ । ಮುಂಚೆ ಬರಲೆಂದಾ ॥ ೬

ಭಾವ ಬೊಮ್ಮಣ್ಣ । ದಳವಾಯಿ ಚಿಕ್ಕಣ್ಣ ।
ಕಾಲ ಮಂದಿಯ ಕರಕೊಂಡು ।
ಕಣಿವೆಯ ಕಟ್ಟಿಂದಾ ॥ ೭

ಗಡಿಗಳಾ ಭಂಟಾರು । ಗೌಡಾಳಿ ಠಾಣ್ಯವೂ ।
ಹರತಿ ದೊಡ್ಡೇರಿ ಐಮಂಗಲ ಸಹವಾಗಿ ।

ನಿನಗ್ಯಾರು ಎದುರೋ । ಗಾಧುರಿ ಹೆಬ್ಬುಲಿಗೆ
ಗಾಧುರಿ ಮಾನ್ಯನಿಗೇ । ಚಂದ್ರಗಾವಿ
ಬಿರುದು ಮಾನ್ಯನಿಗೆ ॥ ೮

ಹಸುರು ಸತ್ತಿಗೆಯು । ಹಾಕುವ ವುಡಾಸ ।
ಹಾರಿಸುವ್ಹೋ ವುಡಾಸವ್ಹೊ ಪಾವಡ । ಬೀಸೋ ಬೀಸಣಿಗೆ ।
ವಂಕಿನ ಮಲ್ಲಿಗೆ । ಚಿನ್ನದ ಕಾಸಿ ।
ಚಿಗರುವ ಕೊನೆ ಮೀಸೆ । ತಿದ್ದಿ ಎಳೆ ಮೀಸೆ ।
ಕೆನ್ನೆಲೋಲಾಡಾಡುವ್ಹೋ ಮುತ್ತಿನ ತುರಾಯ ।
ವತ್ತಿದ ಮೀಸೆ । ಮೆರಗು ಚನ್ಮುರಿಯು ।

ಕತ್ತರಿ ಬಾಕು ಕೈಲಿ ಕಠಾರಿ । ಇಟ್ಟ ಭಂಡಾರ ವಿಭೂತಿ ಭಸ್ಮಾಂಗ ।
ಕಟ್ಟಿ ಕಸೆ ಸಣ್ಣ ಗಂಬಳಿ ।
ಬುರುಡೆ ಹಡಪದ ಸಂಚಯವು ।
ಕಾಳಂಜಿ ಗಿಂಡಿಯರು ।
ವೈಯಾರದಿಂದ ಓಲಗ
ಹೊಡೆಯುವ ಭೇರಿ । ಹಿಡಿಯುವ ಸಪೂರಿ ।
ನುಡಿಸೋದು ತಂಬೂರಿ ॥ ೯ ॥

ಗಾರೆ ಬಾಗಿಲು ಬಿಟ್ಟು ಓಡೋದು ಐಶ್ವರ್ಯವ ।
ಗಾರೆ ಬಾಗಿಲ ಬಿಟ್ಟು ಹೊರಡುವುದ ಕಂಡಾ
ತಾನಿಲ್ಲಿಂದ ಕಂಡಾ ॥
ಮುರಿದು ಖಾಸೀಂಖಾನನು ದೊಡ್ಡೇರಿ ಬಿದ್ದಾ ॥ ೧೦ ॥

ಮಟ ಮಟ ಮಧ್ಯಾಹ್ನ । ಚಟನೆ ಕಾಯುವ ಬಿಸಿಲಾಗೆ ।
ನೆಗ್ಗಲ ಮುಳ್ಳಾಗೆ । ಕಂಚಿ ಕಟ್ಯಾಗೆ ।
ಹಿಂದಕ್ಕೋತಿತು ಖಾಸಿಂಖಾನನ ದಂಡು ॥ ೧೧ ॥

ಎತ್ತಿನ ಮೇಲಿರುವೋದು । ಅದು ಯಾತರ ಹೇರಣ್ಣ ।
ಮೂಲೆ ಕೋಯಣ್ಣ । ಮೂಗಾವುದ ಚಲ್ಲಣ್ಣ ।
ಹಣಕಾಸಿನ ಮೇಲೆ । ಆಸೆ ಮಾಡುವವನಲ್ಲಾ ।
ಅಯ್ಯಯ್ಯೊ ಧಡಿಗನೇ ಹೊಕ್ಕಲ್ಲಿ ಬಿಡನೊ ॥ ೧೨ ॥

ಹೊದ್ದ ಗುಡಾರವ ಹೊಕ್ಕು ಕಡಿವಾಗ
ಬಣಜಿಗರು ಕಾಣಪ್ಪ । ಬೆಳ್ಳುಳ್ಳಿ ಮಾರುವರು ।
ಕಟ್ಟೆಯ ಮೇಲೆ ।
ಓಡಿಸಿ ಕಡಿವಾಗ ಗದಮಿಕೊಂಡು ಕಡಿವಾಗ ।
ವಕ್ಕಲಿಗರು ಕಾಣಪ್ಪ । ಬಿಟ್ಟೇಯ ಬಂದೀವಿ ।
ಏರಿಯ ಹಿಂದೆ ಹಾರಾಡಿ ಕಡಿವಾಗ ।
ಹೊರಾಡಿ ಕಡಿವಾಗ ಬ್ಯಾಡರು ಕಾಣಪ್ಪ
ನಾವು ಬ್ಯಾಟಿಯಾ ಬಂದೀವಿ ॥ ೧೩ ॥

ಶಿಟ್ಟಿನಾ ಘೋರೆ ಕೈಯಾಗೆ । ಸಿಕ್ಕ ಬಾರದೊಂದೂ ।
ದಕ್ಕಬಾರದೊಂದೂ ।
ಹಕ್ಕಿಕ್ಕೆ ಸಾಮ ಕುಡಿದು । ಡೇರಾದ ವಳಗೆ ಸತ್ತಿದ್ದಾ ॥ ೧೪ ॥

ಕರಡಿಯಾ ಕೈತಾಳ ಮದ್ದಳೆ ಸುವಿಮೇಳಾ ॥
ಸಂಪಿಗೆ ಸಿದ್ದನ ವರಕುಮಾರ ॥ ೧೫

* ಶ್ರೀ ಜೋಯಿಸರು ರಾಣ್ಯವು ಎಂದು ಬರೆದಿದ್ದಾರೆ. ನನಗೆ ಅದ
ರಾಣ್ಯವೆನಿಸುತ್ತದೆ.

ಈ ಲಾವಣಿಯಲ್ಲಿ ಬರುವ ಎಲ್ಲಾ ಶಬ್ದಗಳ ಅರ್ಥ ಹೇಳುವುದು ಸಾಧ್ಯವಿ
ಲಾವಣಿ ಹೇಳಿದವರು ಸರಿಯಾಗಿ ಹೇಳಿರಲಿಕ್ಕಿಲ್ಲ. ಬರೆದುಕೊಳ್ಳುವಾಗಲ
ತಪ್ಪಾಗಿರಬಹುದು. ಆಗಿನ ಕಾಲದ (೧೮೭೫) ಸೈನಿಕರ ವೇಷಭೂಷಣಗ
ಬಗೆಗೆ ಸಾಕಷ್ಟು ಮಾಹಿತಿ ಇದರಲ್ಲಿದೆ. ಆದರೆ ಪ್ರಸ್ತುತ ನಿಬಂಧದ ಉದ್ದೇ
ಪರ್ಷಿಯನ್ ಇತಿಹಾಸಕಾರರು ವರ್ಣಿಸಿದ ದೊಡ್ಡೇರಿ ಕಾಳಗದ ಬಗೆಗೆ ಕನ್ನ
ಆಧಾರಗಳ ಶೋಧನೆ. ಎರಡರಲ್ಲಿಯೂ ಖಾಸೀಂಖಾನನು ಸತ್ತ ವಿಷ
ಬರುವುದರಿಂದ ಪರ್ಷಿಯನ್ ಆಧಾರಗಳು ವರ್ಣಿಸುವ ಕಾಳಗವನ್ನೇ ಲಾವಣಿ
ವರ್ಣಿಸುತ್ತದೆ ಎನ್ನುವುದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಪರ್ಷಿಯನ್ ಆಧಾರಗಳ
ಕೆಲವು ಖಾಸೀಂಖಾನನು ಅಫೀಮ್ ಇಲ್ಲದೆ ಸತ್ತನೆಂದರೆ ಇನ್ನು ಕೆಲವು ಚಕ್ರವರ್ತಿ
ಮುಖ ತೋರಿಸಲಿಕ್ಕೆ ಅಂಜಿ ಆತ್ಮಹತ್ಯೆ ಮಾಡಿಕೊಂಡನೆಂದು ಹೇಳಿವೆ. ಲಾವ
ಎರಡನೆಯ ಕಾರಣವನ್ನು ಮನಮುಟ್ಟುವ ಹಾಗೆ ಸೊಗಸಾಗಿ ಹೀಗೆ ಹೇಳ
"ಶಿಟ್ಟಿನಾ ಧೋರೆ ಕೈಗೆ ಸಿಕ್ಕ ಬಾರದೆಂದೂ ದಕ್ಕ ಬಾರದೆಂದೂ ಹಕ್ಕಜ್ಜಿ ನಾ
ಕುಡಿದು ಡೇರಾದ ಒಳಗೆ ಸತ್ತಿದ್ದಾ." ಪರ್ಷಿಯನ್ ಆಧಾರಗಳಲ್ಲಿ ಚಿತ್ರದುರ್ಗ
ಪಾಳೆಯಗಾರನ ಪಾತ್ರವನ್ನು ಕಡೆಗಣಿಸಲಾಗಿದೆ. ಅದು ಸಹಜವೂ ಆಗ
ಮೊಗಲರ ಮುಖ್ಯ ಶತ್ರು ಮರಾಠರು. ಲಾವಣಿಯಲ್ಲಿ ಮರಾಠರ ಹೆಸರೇ ಇ
ಅದೂ ಸಹಜವಾಗಿದೆ. ಯಾಕೆಂದರೆ ಚಿತ್ರದುರ್ಗದವರ ಜಗಳ ಮೊಗಲರೊಂ
ಈ ಕಾಳಗದ ಕಾರಣವನ್ನು ಪರ್ಷಿಯನ್ ಮತ್ತು ಕನ್ನಡ ಲಾವಣಿ ಬೇರೆ ಬೇರೆಯ
ಹೇಳುತ್ತವೆ. ಪರ್ಷಿಯನ್ ಆಧಾರದ ಪ್ರಕಾರ ಚಿತ್ರದುರ್ಗದವರು ಮರಾಠರ
ಸೇರಿದ್ದು ಮೊಗಲರನ್ನು ಲೂಟಿ ಮಾಡಲಿಕ್ಕೆ. ಅದೂ ಕಾರಣವಾಗಿರಬಹು
ಮುಖ್ಯ ಕಾರಣವನ್ನು ಲಾವಣಿ ಹೇಳುತ್ತದೆ. ಖಾಸೀಂಖಾನನಿಗೂ ಭರಮ
ನಾಯಕನಿಗೂ ಮೊದಲಿನಿಂದಲೂ ದ್ವೇಷ. ಕಾರಣ ಮೊಗಲರಿಗೆ ಚಿತ್ರದುರ್ಗದ
ಕಪ್ಪ ಕೊಡುತ್ತಿದ್ದಿಲ್ಲ. ಮರಾಠರನ್ನು ಸೇರಿಕೊಂಡು ಮೊಗಲರನ್ನು ಸೋಲಿಸಿ
ಶಾಶ್ವತವಾಗಿ ಮೊಗಲರ ಕಾಟವನ್ನು ತಪ್ಪಿಸಿಕೊಳ್ಳಬಹುದೆಂದು ಚಿತ್ರದುರ್ಗದ
ಎಣಿಕೆ.

ಚಿತ್ರದುರ್ಗದ ಪಾಳೆಯಗಾರ, ಅವನ ಅಧಿಕಾರಿಗಳು ಮತ್ತು ಅವನ ಕೈಕೆ

ಪಾಳೆಯಗಾರರ ಬಗ್ಗೆ ಲಾವಣಿ ಹೇಳುವುದನ್ನು ನಾವು ನಂಬಬಹುದು. ಆ ವಿಷಯಗಳೆಲ್ಲಾ ಲಾವಣಿಕಾರನಿಗೆ ಚೆನ್ನಾಗಿ ಪರಿಚಯವಿದ್ದವು. ಚಿತ್ರದುರ್ಗದ ಪಾಳೆಯಗಾರರಲ್ಲೆಲ್ಲಾ ಭರಮಪ್ಪನಾಯಕ ಅತ್ಯಂತ ಪ್ರಭಾವಶಾಲಿ. ಅವನನ್ನು ಲಾವಣಿ ಬೆಂಕಿ ಭರಮೇಂದ್ರನೆಂದು ಕರೆದಿರುವುದು ಯಥಾರ್ಥವಾಗಿದೆ. ಅವನ ಶತ್ರುಗಳಿಗೆ ಅವನು ಬೆಂಕಿ. ಇವನ ಮಂತ್ರಿ ಗುಂಟನೂರು ಮಲ್ಲಪ್ಪ ಇವನ ದಳವಾಯಿ ಭಾವ ಬೊಮ್ಮಣ್ಣ ಇವರ ಹೆಸರು ಎಂ.ಎಸ್. ಪುಟ್ಟಣ್ಣನವರ 'ಚಿತ್ರದುರ್ಗದ ಪಾಳೆಯಗಾರರು' ಎನ್ನುವ ಚರಿತ್ರೆಯಲ್ಲಿಯೂ ಬಂದಿದೆ. ಈ ಲಾವಣಿಕಾರ ಸಂಪಿಗೆ ಸಿದ್ಧನ ವರಕುಮಾರನೆಂದು ಹೇಳಿಕೊಳ್ಳುತ್ತಾನೆ. ಸಂಪಿಗೆ ಸಿದ್ಧೇಶ್ವರನಿಗೆ ಚಿತ್ರದುರ್ಗದ ಕೋಟೆಯೊಳಗೆ ಇವತ್ತಿಗೂ ಒಂದು ದೇವಸ್ಥಾನವಿದೆ. ವಿಜಯನಗರ ಆರಂಭವಾದ ಕಾಲದಲ್ಲಿ ಕಟ್ಟಿದ ದೇವಸ್ಥಾನ. ಪಾಳೆಯಗಾರರ ಇಷ್ಟದೇವರ ದೇವಸ್ಥಾನ. ಭರಮಪ್ಪನಾಯ್ಕನ ಆಸ್ಥಾನದಲ್ಲಿರುವವರು ಯಾರೋ ಈ ಲಾವಣಿ ಬರೆದಿರಬಹುದು. ಇದು ದೊಡ್ಡೇರಿಯವರಿಗೆ ಸಂಬಂಧಿಸಿದುದರಿಂದ ಆ ಊರಿನಲ್ಲಿ ಪ್ರಚಲಿತವಾಗಿ ಉಳಿದಿದೆ.

ದೊಡ್ಡೇರಿ ವಿಜಯಕ್ಕೆ ಲಾವಣಿಯೊಂದೇ ಕನ್ನಡದ ಆಧಾರವಲ್ಲ. ಪುಟ್ಟಣ್ಣನವರ 'ಚಿತ್ರದುರ್ಗದ ಪಾಳೆಯಗಾರರು' ಎನ್ನುವ ಪುಸ್ತಕದಲ್ಲಿ (ಪು. ೪೧) ಹೀಗೆ ಹೇಳಿದೆ :

"ಈ ಧಾತು ಸಂ॥ದಲ್ಲಿ ಸಂತೋಜಿ ಘೋರ್ಪಡೆಯು ೨೦೦೦೦ ಕುದುರೆಯೊಡನೆ ಬಂದನು. ಶಿರ್ಯದ ಸುಬೇದಾರ ಕಾಸಿಂಖಾನನು ತಳಕಿನಿಂದ ದೊಡ್ಡೇರೀ ತನಕ ಲಡಾಯಿ ಮಾಡುತಾ ಹೋಗಿ ದೊಡ್ಡೇರಿ ಕೋಟೆಯೊಳಗೆ ಅವಿತುಕೊಂಡನು. ದುರ್ಗದ ದೊರೆಯುವ ಕುಡುತನಿ ವೆಂಕಣ್ಣ, ಹೊಳಲಕೆರೆ ಬೊಮ್ಮಣ್ಣ. ಇವರಿಗೆ ಫೌಜುದಾರಿಕೊಟ್ಟು ಕುದುರೆಮಂದಿ ಸಹಾ ಕೊಟ್ಟು ಕಳುಹಿಸಿದನು. ಆಗ ಕಾಸಿಂಖಾನನು ಮೃತನಾದನು. ಕೋಟೆ ದುರ್ಗದವರ ವಶವಾಯಿತು. ಇದೇ ಧಾತು ಸಂ॥ದಲ್ಲಿ ದಿಲಾವರ ಬಕಷನ ದಂಡು ಬಂದು ರಾಜ್ಯದ ಮೇಲೆ ಬಿತ್ತು. ಅವನು ಗುಂಟನೂರು ಮಲ್ಲಪ್ಪನ ಮುಖಾಂತರ ಮೂರು ಲಕ್ಷ ವರಹಾ ಕೊಡಬೇಕೆಂದು ಹೇಳಿ ಕಳಿಸಿದನು."

ಪುಟ್ಟಣ್ಣನವರ ಪುಸ್ತಕವು ದೊಡ್ಡೇರಿ ಕಾಳಗವನ್ನು ಸಂಕ್ಷಿಪ್ತವಾಗಿ ವರ್ಣಿಸುವುದಲ್ಲದೆ. ಆ ಕಾಳಗದಲ್ಲಿ ಭರಮಪ್ಪನಾಯಕನು ಮೊಗಲರನ್ನು ಸೋಲಿಸಿದ್ದಕ್ಕೆ ಅವನ ಮೇಲೆ ಸೇಡು ತೀರಿಸಿಕೊಳ್ಳುವುದಕ್ಕೆ ದಿಲಾವರ ಬಕ್ಷನೊಡನೆ ಔರಂಗಜೇಬನು ದಂಡನ್ನು ಕಳಿಸಿದ್ದನ್ನು ಹೇಳಿದೆ. ಈ ಸೇನಾಪತಿಯು ಭರಮಪ್ಪನಾಯಕನನ್ನು [illegible] ಕಪ್ಪವನ್ನು ಕೇಳಿದನು. ಭರಮಪ್ಪ ನಾಯಕನು ಕೊಡಲಿಲ್ಲವೆಂದು ಕಾಣುತ್ತದೆ.

ಇದರ ಪರಿಣಾಮವಾಗಿ ಔರಂಗಜೇಬನ ದಂಡು ಚಿತ್ರದುರ್ಗದ ಕೆಲವ
ದೇವಸ್ಥಾನಗಳನ್ನು ನಾಶಮಾಡಿರಬೇಕು. ಅಂಥ ಒಂದು ದೇವಸ್ಥಾನದ ದುರವಸ್
ಒಂದು ಶಾಸನದಿಂದ ತಿಳಿದುಬರುತ್ತದೆ. ಈ ದೇವಸ್ಥಾನ ದಾವಣಗೆರೆ ತಾಲ್ಲೂಕು
ನೀರತಡಿಯಲ್ಲಿದೆ. ಅಲ್ಲಿಯ ರಂಗನಾಥ ದೇವಾಲಯದ ಉತ್ತರ ಬಾಗಲ ಬಳ
ನೆಟ್ಟ ಶಾಸನದ ಸಾರಾಂಶ ಹೀಗಿದೆ: ಶಕ ವರ್ಷ ೧೬೧೯ (ಕ್ರಿ.ಶ. ೧೬೯೭) ಈಶ್ವರ
ನಾಮ ಸಂ. ಮಾಘ ಶುದ್ಧ ೫ರಲ್ಲು ನೀರತಡಿ ಅಹೋಬಲ ನಾರಸಿಂಹ
ಸವಾಮಿಯನ್ನು ಹೊಸ ಶಿಲಾಮೂರ್ತಿಯನ್ನಾಗಿ ಮಾಡಿದ್ದಕ್ಕೆ ಬರೆದ ಶಾಸನ
ಕ್ರಮವೆಂತೆಂದರೆ....ಡಿಳ್ಳಿ ಪಾತಶಹ ದಂಡು ಬಂದು ದೇವರ ದೇವಸ್ಥಾನ ಮುಂತಾಗಿ
ಭಿನ್ನ ಮಾಡಿ ಹೋದಲ್ಲಿ .... ಕಾಮಗೇತಿ ಮದಕೆರಿನಾಯಕರ ಭರಮಣ್ಣನಾಯಕರು
ಈ ನೀರತಡಿ ಅಹೋಬಲ ನಾರಸಿಂಹ ದೇವರ ಪ್ರತಿಷ್ಠೆ ಮಾಡಿಸಿ ದೇವಸ್ಥಾನವನ್ನು
ಜೀರ್ಣೋದ್ಧಾರ ಮಾಡಿಸಿ ಅದರಲ್ಲಿಯ ಸೇವೆಗೆ ಧರ್ಮ ಮಾಡಿದರು. (ದಾವಣಗೆರೆ
೧೬೪ನೇ ಶಾಸನ)

ನಮ್ಮ ಜನರು ತಮ್ಮ ಮುಖ್ಯ ಜಯಾಪಜಯಗಳನ್ನು ಮರೆತಿಲ್ಲ. ತಮಗೆ
ತಿಳಿದಮಟ್ಟಿಗೆ ತಿಳಿದ ರೀತಿಯಲ್ಲಿ ಗುರುತು ಹಾಕಿದ್ದಾರೆ. ನಾವು ಆ ಗುರುತುಗಳನ್ನು
ಹುಡುಕದೆ ಅವರಿಗೆ ಇತಿಹಾಸ ಪ್ರಜ್ಞೆಯಿಲ್ಲವೆಂದು ಹೇಳುವುದು ಸರಿಯಲ್ಲ.

೧೮

ಭಾರತೀಯ ಹಿನ್ನೆಲೆಯಲ್ಲಿ ಕರ್ನಾಟಕದ ಧಾರ್ಮಿಕ ಸಾಮಾಜಿಕ ಜೀವನ

ಕ್ರಿ.ಶ. ೧೬೦೦ ರಿಂದ ೧೮೫೦ರ ವರೆಗಿನ ಉತ್ತರ ಭಾರತದ ಇತಿಹಾಸವನ್ನು ಮೊಗಲರ ಕಾಲ (೧೬೦೭-೧೭೭೭) ಮರಾಠರ ಕಾಲ(೧೭೦೭-೧೮೦೦) ಮತ್ತು ೧೭೦೦ ರಿಂದ ಬ್ರಿಟಿಷರ ಕಾಲವೆಂದು ಸ್ಥೂಲವಾಗಿ ವಿಂಗಡಿಸಬಹುದು. ೧೭ನೆಯ ಶತಕದಲ್ಲಿ ಉಚ್ಛ್ರಾಯದಲ್ಲಿದ್ದ ಮೊಗಲ್ ಸಾಮ್ರಾಜ್ಯವು ಔರಂಗಜೇಬನ ತರುವಾಯ ಕ್ರಮೇಣ ನಶಿಸಿಹೋಯಿತು. ಅದರ ಸ್ಥಳವನ್ನು ಆಕ್ರಮಿಸಲು ರಜಪೂತರು ಸೀಖರು ಜಾಟರು ಮತ್ತು ಮರಾಠರು ಯತ್ನಿಸಿದರು. ಇವರ ಪೈಕಿ ಮರಾಠರ ಪ್ರಯತ್ನವು ಹೆಚ್ಚು ಸಫಲವಾಯಿತು. ಇನ್ನೇನು ಎಲ್ಲರನ್ನು ಗೆದ್ದರೆನ್ನುವ ಹೊತ್ತಿಗೆ ಅಹಮದ್ ಷಾ ಅಬ್ದಾಲಿಯು ಮೂರನೆಯ ಪಾಣಿಪತ್ ಕದನದಲ್ಲಿ (೧೭೬೧) ಇವರ ಆಸೆಯನ್ನು ಮಣ್ಣುಗೂಡಿಸಿದನು. ಈ ಕದನದಲ್ಲಿ ಮರಾಠರು ಮುಸಲ್ಮಾನರು ಒಬ್ಬರನ್ನೊಬ್ಬರು ಹಣ್ಣು ಮಾಡಿ ಮೂರನೆಯವರಾದ ಬ್ರಿಟಿಷರಿಗೆ ಭಾರತದ ಚಕ್ರಾಧಿಪತ್ಯದ ದಾರಿಯನ್ನು ಸುಗಮವನ್ನಾಗಿ ಮಾಡಿದರು. ಈ ಹೊತ್ತಿಗಾಗಲೆ ಬ್ರಿಟಿಷರು ತಮ್ಮ ಇತರ ಯುರೋಪಿಯನ್ ಸ್ಪರ್ಧಾಳುಗಳನ್ನು ಹಿಂದೆ ಹಾಕಿದ್ದನು.

ದಕ್ಷಿಣ ಭಾರತದ ಇತಿಹಾಸವು ಪರಿಣಾಮದಲ್ಲಿ ಹೀಗೆಯೆ ಆಯಿತು. ತಾಳಿಕೋಟೆ ಅಥವಾ ರಕ್ಕಸ ತಂಗಡಗಿಯಲ್ಲಿ (೧೫೬೫) ವಿಜಯನಗರ ಪತನವಾದ ಮೇಲೆ ಆದಿಲ್‌ಷಾಹಿ ಮತ್ತು ಕುತುಬ್ ಷಾಹಿ ರಾಜ್ಯಗಳು ದಖ್ಖನ್ನಿನಲ್ಲಿ ಪ್ರಬಲವಾದುವು. ಔರಂಗಜೇಬ್ ಅವುಗಳನ್ನು ಗೆದ್ದು ಮರಾಠರ ಮತ್ತು ನಿಜಾಮರ ಅಭ್ಯುದಯಕ್ಕೆ ದಾರಿಮಾಡಿಕೊಟ್ಟನು. ವಿಜಯನಗರದ ಸಾಮಂತರಾಗಿದ್ದ ಕೆಳದಿ ನಾಯಕರು, ಮೈಸೂರಿನ ಒಡೆಯರವರು ಮತ್ತು ಚಿಕ್ಕಪುಟ್ಟ ಪಾಳೆಯಗಾರರು ಕರ್ನಾಟಕದಲ್ಲಿ ತಾಳಿಕೋಟೆಯ ಕಾಳಗದ ನಂತರ ಆಳತೊಡಗಿದರು. ಹೈದರನು ಇವರೆಲ್ಲರನ್ನು ಮೈಸೂರಿನ ಅಂಕಿತದಲ್ಲಿ ತಂದು ಇಲ್ಲವೆ ನಾಶಮಾಡಿ ಒಂದು ಬಲಿಷ್ಠವಾದ

ರಾಜ್ಯವನ್ನು ಕಟ್ಟಿದನು. ಅವನ ಮಗ ಟಿಪ್ಪು ಬ್ರಿಟಿಷರನ್ನು ಕೆಣಕಿ ಸೋತನ
ಮರಾಠರು ನಿಜಾಮರು ತಮ್ಮ ತಮ್ಮಲ್ಲಿಯೆ ಜಗಳವಾಡಿ ಬ್ರಿಟಿಷರಿಗ

ಶರಣು ಹೋಗಬೇಕಾಯಿತು. ಹೀಗೆ ದಕ್ಷಿಣದ ರಾಜ್ಯಗಳೆಲ್ಲಾ ೧೯ನೇ
ಶತಮಾನದ ಆದಿಭಾಗದ ಹೊತ್ತಿಗೆ ಬ್ರಿಟಿಷರ ಹತೋಟಿಯೊಳಕ್ಕೆ ಬಂದವು.

ಇಸ್ಲಾಂ ಮತವು ಭಾರತಕ್ಕೆ ಬಂದ ಮೇಲೆ ಭಾರತದಲ್ಲಿ ಭಾ
ಬದಲಾವಣೆಗಳಾದವು. ಅರಬರು ಎಲ್ಲೆಲ್ಲಿ ತಮ್ಮ ಚಕ್ರಾಧಿಪತ್ಯವನ್ನು ಸ್ಥಾಪಿಸಿದರೋ
ಅಲ್ಲೆಲ್ಲಾ ಇಸ್ಲಾಮ ಮತದ ಜೊತೆಗೆ ತಮ್ಮ ಸಂಸ್ಕೃತಿಯನ್ನು ಹರಡಿದರು. ಭಾರತದ
ಒಂದು ದೊಡ್ಡ ಚಕ್ರಾಧಿಪತ್ಯವನ್ನು ಮೊದಲು ಸ್ಥಾಪಿಸಿದ ಮುಸ್ಲಿಂ ಅರಸ
ತುರುಕರು ಮತ್ತು ಆಫ್‌ಘನ್ನರು. ತುರುಕರ-ಆಫ್‌ಘನ್ನರ ಸಾಂಸ್ಕೃತಿಕ ಬೆಳವಣ
ಅರಬರದಷ್ಟಾಗಿರಲಿಲ್ಲ. ಆದ್ದರಿಂದ ಅವರು ಭಾರತಕ್ಕೆ ಎಷ್ಟು ತಮ್ಮ ಸಂಸ್ಕೃತಿಯನ
ಕೊಟ್ಟರೊ ಅಷ್ಟೆ ತೆಗೆದುಕೊಂಡರು. ಹಿಂದೆ ಭಾರತಕ್ಕೆ ಬಂದ ಪರಕೀಯರು ಸ್ವ
ಕಾಲದಲ್ಲಿಯೆ ಭಾರತೀಯ ಮತಾವಲಂಬಿಯಾದರು. ಮುಸಲ್ಮಾನರು ತಮ್ಮ ಮತವ
ಬಿಡಲಿಲ್ಲ. ಆದರೆ ಅವರಿಗೆ ಭಾರತವನ್ನು ಮುಸ್ಲಿಂ ರಾಷ್ಟ್ರವನ್ನಾಗಿ ಮಾಡಲಾಗಲಿ

ಹಿಂದೂ ಮತ್ತು ಮುಸ್ಲಿಂ ಮತಗಳ ಮಧ್ಯೆ ಸಾಮ್ಯವೇನು ಇರಲಿಲ್ಲ. ಅವುಗ
ಒಂದು ನದಿಯ ಎರಡು ದಂಡೆಗಳ ಹಾಗೆ ಯಾವಾಗಲೂ ಪ್ರತ್ಯೇಕವಾಗಿ
ಆದರೆ ಎರಡೂ ಮತದವರು ಶತಮಾನಗಳ ಪರ್ಯಂತ ಒಂದ
ರಾಷ್ಟ್ರದಲ್ಲಿರಬೇಕಾಗಿದ್ದುದರಿಂದ ಅವರಿಬ್ಬರ ಮಧ್ಯೆ ಒಂದು ಸೇತು
ಅನಿವಾರ್ಯವಾಯಿತು. ಈ ಸೇತುವೆಯನ್ನು ಯಾರು ಕಟ್ಟಬೇಕಾಯಿತು? ಮಡಿವಂ
ಹಿಂದೂಗಳು ಮಡಿವಂತ ಮುಸ್ಲಿಮರು ಈ ಕೆಲಸವನ್ನು ಮಾಡುವು
ಅಸಾಧ್ಯವಾಗಿತ್ತು. ಎರಡೂ ಮತಗಳಲ್ಲಿಯ ಸಹೃದಯರಾದ ಹಿಂದು ಭಕ್ತ
ಮತ್ತು ಮುಸ್ಲಿಂ ಸೂಫಿಗಳು ತಮ್ಮ ಜೀವಮಾನವನ್ನೇ ಈ ಕೆಲಸಕ್ಕೆ ಮುಡುಪಾಗಿಟ್ಟರ
ಕಬೀರ್, ಅಕ್ಬರ್ ಮತ್ತು ದಾರಾಷುಕೊ ಇವರೇ ಅಂಥ ಸಹೃದಯರು. ಕಬೀ
೧೫ನೆಯ ಶತಮಾನದಲ್ಲಿ, ಅಕ್ಬರ್ ೧೬ನೆಯ ಶತಮಾನದಲ್ಲಿ ಯತ್ನಿಸಿದ್ದ
ದಾರಾ ೧೭ನೆಯ ಶತಮಾನದಲ್ಲಿ ಯತ್ನಿಸಿದನು. ಎಲ್ಲರಿಗೋಸ್ಕರ ಈ ಸೇತುವೆಯ
ಕಟ್ಟಲು ದಾರಾ ಯತ್ನಿಸಲಿಲ್ಲ. ಎರಡೂ ಧರ್ಮಗಳಲ್ಲಿಯ ಉತ್ತಮರು ಒಂ
ಕಡೆ ಸೇರುವ ಹಾಗೆ ಮಾಡಬೇಕೆನ್ನುವುದು ಅವನ ಉದ್ದೇಶವಾಗಿತ್ತು. ದಾರ
ಎಣಿಕೆಯಲ್ಲಿ ಎಲ್ಲಾ ಧರ್ಮ ಗ್ರಂಥಗಳಿಗೂ ಒಂದು ಮೂಲಾಧಾರವಿರಬೇ

1. Kshitimohan Sen: The Mediaeval Mystics of North India, [Cultu
History of India IV]1969, Ramakrishna Mission, Calcuttal, p. 3

ಕುರಾನ್ ಈ ಮೂಲಾಧಾರಕ್ಕೆ ಉಮ್ಮ-ಉಲ್ ಕಿತಾಬ್ ಎನ್ನುತ್ತದೆ. ಇದು ಯಾವುದಿರಬಹುದೆಂಬುದನ್ನು ಹುಡುಕಲು ಅವನು ಹೊರಟ. ಅವನ ಶೋಧನೆ ಅವನನ್ನು ಉಪನಿಷತ್ತುಗಳ ಕಡೆ ಒಯ್ಯಿತು. ಈ ಶೋಧನೆ ಮಾಡುವಾಗ ಅವನು ಇತರ ಮತದವರ ಜತೆಗೆ ಸ್ವಚ್ಛಂದವಾಗಿ ಚರ್ಚಿಸುತ್ತಿದ್ದನು. ವೇದಾಂತ, ತಾಲ್ಮುಡ್ (ಯಹೂದ್ಯರ ಧರ್ಮಗ್ರಂಥ), ಬೈಬಲ್ ಮತ್ತು ಸೂಫಿ ಗ್ರಂಥಗಳನ್ನು ಅಭ್ಯಸಿಸಿದ. ಬ್ರಾಹ್ಮಣ ವಿದ್ವಾಂಸರ ಸಹಾಯದಿಂದ ಅಥರ್ವವೇದ ಮತ್ತು ಉಪನಿಷತ್ತುಗಳನ್ನು ಪರ್ಷಿಯನ್ ಭಾಷೆಗೆ ಭಾಷಾಂತರ ಮಾಡಿಸಿದ. ಎರಡೂ ಧರ್ಮಗಳ ನಡುವೆ ಸಂಪರ್ಕವನ್ನು ಹೆಚ್ಚಿಸಲು ಹೆಣಗಾಡುತ್ತಿರುವಾಗ ತನ್ನ ಧರ್ಮದ ಮಡಿವಂತರ ಕೋಪಕ್ಕೆ ಪಾತ್ರನಾದ. ಆದರೆ ಅವನು ತನ್ನ ಧರ್ಮವನ್ನು ಬಿಡಲಿಲ್ಲ. ಅದರ ಕೆಲವು ಆಚರಣೆಗಳು ಮಾತ್ರ ಇವನಿಗೆ ಸೇರಲಿಲ್ಲ, ಅಷ್ಟೆ. ಇಸ್ಲಾಂ ಮತದಲ್ಲಿ ಅವನಿಗೆ ಶ್ರದ್ಧೆ ಇತ್ತು. ಅದರ ಒಂದು ಪಂಗಡವಾದ ಮತ್ತು ಉದಾರವಾದ ಸೂಫಿ ಪಂಥಕ್ಕೆ ಅವನು ಸೇರಿದ್ದನು. ಸಿಂಹಾಸನಕ್ಕಾಗಿ ನಡೆದ ಯುದ್ಧದಲ್ಲಿ ಔರಂಗಜೇಬನು ಅವನನ್ನು ಸೋಲಿಸಿದ್ದರಿಂದ ಅವನ ಪ್ರಯತ್ನ ವಿಫಲವಾಯಿತು. ಇದರಿಂದ ಅವನು ತುಳಿದ ದಾರಿ ತಪ್ಪು ಎಂದು ಯಾರೂ ಹೇಳುವ ಹಾಗಿಲ್ಲ. ಇವತ್ತಿಗೂ ಇವೆರಡೂ ಮತಗಳಲ್ಲಿ ಸೌಹಾರ್ದ ಬೆಳೆಯಬೇಕೆಂದರೆ ಅವನು ತೋರಿದ ಮಾರ್ಗವೇ ಶ್ರೇಷ್ಠ.[1] ಔರಂಗಜೇಬನ ವಿಜಯದಿಂದ ಈ ದಾರಿ ಕಟ್ಟಾಯಿತು. ಅವನು ಆಳ್ವಿಕೆ ಮುಗಿದ ಮೇಲೆ ಅವನ ದುರ್ಬಲ ಸಂತತಿಯವರ ಕಾಲದಲ್ಲಿ (೧೭೦೭-೧೮೫೭) ಹಿಂದೂ ಮುಸ್ಲಿಂ ಸೌಹಾರ್ದ ಬೆಳೆಯುತ್ತಾ ಬಂದಿತ್ತು. ಅಬ್ದುಲ್ಲಾ ಖಾನ್ ಎನ್ನುವ ಮೊಗಲ್ ಮಂತ್ರಿಯು ಬಸಂತ್ ಮತ್ತು ಹೋಳಿ ಹಬ್ಬಗಳನ್ನು ಆಚರಿಸುತ್ತಿದ್ದನು. ಸಿರಾಜುದ್ದೌಲಾ ಮತ್ತು ಮೀರ್‌ಜಾಫರರು ತಮ್ಮ ಆಪ್ತರಿಷ್ಟರೊಡನೆ ಹೋಳಿಯ ಹಬ್ಬದಲ್ಲಿ ಭಾಗವಹಿಸುತ್ತಿದ್ದರು. ತಾನು ಸಾಯುವ ಮುಂಚೆ ಮೀರ್‌ಜಾಫರನು ಕಿರಿಟೇಶ್ವರಿಯ ತೀರ್ಥವನ್ನು ತೆಗೆದುಕೊಂಡನು. ದೌಲತ್‌ರಾವ್ ಶಿಂಧೆ ಮತ್ತು ಅವನ ಅಧಿಕಾರಿಗಳು ಹಸುರಂಗಿಗಳನ್ನು ತೊಟ್ಟು ಮೊಹರಂ ಮೆರವಣಿಗೆಯಲ್ಲಿ ಪಾಲ್ಗೊಳ್ಳುತ್ತಿದ್ದರು.[2] ೧೮೫೭ರ ವರೆಗೂ ಮೊಗಲರ ಅರಮನೆಯಲ್ಲಿ ದುರ್ಗಾಪೂಜೆಯನ್ನು ಸಂಭ್ರಮದಿಂದ ಆಚರಿಸುತ್ತಿದ್ದರು. ಬ್ರಿಟಿಷರು ಮಧ್ಯೆ ಬರದಿದ್ದರೆ ಹಿಂದೂ ಮುಸ್ಲಿಂ ಸಖ್ಯವು ಒಲಿಯುತ್ತಿತ್ತು. ಅವರು ಇದಕ್ಕೆ ಕಲ್ಲು ಹಾಕಿದರು. ಸಿಪಾಯಿ ದಂಗೆಯವರೆಗೂ ಮುಸ್ಲಿಮರನ್ನು ತಮ್ಮ ಮುಖ್ಯ ಶತ್ರುಗಳೆಂದು ತಿಳಿದು

---

1. ಕೆ.ಆರ್. ಕಾನುಂಗೊ: ದಾರಷಕೋ, ಕಲ್ಕತ್ತ, ೧೯೫೨, ಪು. viii
2. R.C. Muzumdar & Others : An Advanced History of India, Macmillan, 1970, p. 562

ಅವರನ್ನು ಪೀಡಿಸುತ್ತಿದರು. ಖಾಯಂಗುತ್ತಾ ಪದ್ಧತಿಯಿಂದ ಅವರ ಭೂ ಆಸ್ತಿಯನ್ನು ಕಿತ್ತುಕೊಂಡರು. ಪರ್ಷಿಯನ್ ಭಾಷೆಯ ಬದಲು ಇಂಗ್ಲಿಷನ್ನು ಆಡಳಿತದ ಭಾಷೆಯನ್ನಾಗಿ ಮಾಡಿದ್ದರಿಂದ ಮುಸ್ಲಿಮರಿಗೆ ಇದ್ದ ನೌಕರಿಗಳು ಹೋದವು. ೧೮೫೭ರ ದಂಗೆಗೆ ಅವರೇ ಕಾರಣರೆಂದು ಅವರ ಮೇಲಿನ ದಬ್ಬಾಳಿಕೆಯನ್ನು ಇನ್ನೂ ಹೆಚ್ಚಿಸಿದರು.[4]

ಕರ್ನಾಟಕದಲ್ಲಿ ಮತ್ತು ಸುತ್ತುಮುತ್ತಲೂ ಮೇಲೆ ಹೇಳಿದ ಅಕ್ಬರ್–ದಾರಾಷುಕೊ ಪಂಥ ಮತ್ತು ಔರಂಗಜೇಬನ ಪಂಥಗಳ ಛಾಯೆಗಳನ್ನು ನಾವು ನೋಡಬಹುದು. ಈ ಅವಧಿಯ ಮೊದಲ ಭಾಗದಲ್ಲಿ (೧೭ನೆಯ ಶತಕದಲ್ಲಿ) ಉತ್ತರ ಕರ್ನಾಟಕದಲ್ಲಿ ಆಳಿದ ಆದಿಲ್‌ಷಾಹಿ ಅರಸರು ಎಲ್ಲಾ ದೃಷ್ಟಿಯಲ್ಲಿಯೂ ಉದಾರರೆಂದು ಹೇಳಬಹುದು. ಹಿಂದಿನ ಹಿಂದೂ ಅರಸರು ಕೊಟ್ಟ ದತ್ತಿಗಳನ್ನು ಅವರು ಮುಂದುವರಿಸಿದರು. ಹಿಂದೂಗಳನ್ನು ತಮ್ಮ ಆಡಳಿತದಲ್ಲಿ ನೇಮಿಸಿಕೊಂಡರು. ಅವರ ಮನೆತನವನ್ನು ನಾಶಮಾಡಿದ ಔರಂಗಜೇಬನು ಕೆಲವು ಕಾಲ ಕರ್ನಾಟಕದ ಭೀಮಾನದಿಯ ದಂಡೆಯ ಮೇಲಿನ ಮಾತುಳಂಗ ಕ್ಷೇತ್ರ ಅಥವಾ ಬ್ರಹ್ಮಪುರಿಯ ತಂಗಿದ್ದನು. ಚಿತ್ರದುರ್ಗದ ಮದಕರಿ ಭರಮಪ್ಪನಾಯಕನು ಅವನ ಸೈನ್ಯವನ್ನು ಎದುರಿಸಿದುದಕ್ಕೆ ಮೊಗಲ್ ಸೈನ್ಯವು ಚಿತ್ರದುರ್ಗದ ಸೀಮೆಯಲ್ಲಿ ಹಾವಳಿ ಮಾ ಒಂದು ದೇವಸ್ಥಾನವನ್ನು ನಾಶಮಾಡಿತು. ಭರಮಪ್ಪ ನಾಯಕನು ಅಲ್ಲಿಯ ದೇವ ಪುನಃಪ್ರತಿಷ್ಠಾಪನೆಯನ್ನು ಮಾಡಿದನು. ಮರಾಠ ಮತ್ತು ಕರ್ನಾಟಕದ ಪಾಳೆಯಗಾರರು ಔರಂಗಜೇಬನ ಸೈನ್ಯವನ್ನು ಬಲವಾಗಿ ವಿರೋಧಿಸಿದ್ದರಿಂದ ಕರ್ನಾಟಕದಲ್ಲಿ ಹಾ ಕಡಿಮೆಯಾಯಿತು. ಮೊಗಲರ ನಂತರ ಕರ್ನಾಟಕದಲ್ಲಿ ಆಳಿದ ಮುಸ್ಲಿಂ ಅರಸ ಹೈದರ್ ಮತ್ತು ಟಿಪ್ಪು. ಹೈದರನಷ್ಟು ಸರ್ವಮತಸಹಿಷ್ಣು ಭಾರತದಲ್ಲಾಳಿದ ಯಾ ಮುಸ್ಲಿಂ ದೊರೆಯು ನಮಗೆ ಸಿಗುವುದಿಲ್ಲ. ರಾಜಕೀಯದಿಂದ ಜಾತೀಯತೆಯನ್ ಪ್ರತ್ಯೇಕಿಸಿದ್ದಲ್ಲದೆ ತನ್ನ ರಾಜ್ಯವನ್ನು ಜಾತ್ಯತೀತವನ್ನಾಗಿ ಮಾಡಿದನು.[5] ಟಿಪ್ಪುವಿ ಮತೀಯ ಧೋರಣೆಯ ಬಗ್ಗೆ ಖಚಿತವಾಗಿ ಹೀಗೆ ಎಂದು ಹೇಳಲಾಗುವುದಿ ಮೊದಲು ಅವನ ಚರಿತೆಯನ್ನು ಬರೆದ ಕಿರ್ಮಾನಿ ಅಂಥ ಮುಸ್ಲಿಂ ಲೇಖಕ ಇಸ್ಲಾಂ ಮತದ ಬಗ್ಗೆ ಅವನ ಮಮತೆಯನ್ನು ತೋರಿಸುವುದಕ್ಕೆ ಅವನ ಅನ್ಯಮ ದ್ವೇಷದ ಉದಾಹರಣೆಗಳನ್ನು ಎತ್ತಿಹಿಡಿಯುತ್ತಾರೆ. ಅವನು ಬ್ರಿಟಿ

---

4. Humayun Kabir: Islam in India, [Cultural History of India IV.] 590-1

5. ಡಿ.ಎಸ್. ಅಚ್ಚುತರಾವ್ : ಹೈದರಾಲಿ [ಕರ್ನಾಟಕದ ಪರಂಪರೆ II] ಮೈಸೂರು ರಾ ಸರ್ಕಾರ, 1970, ಪು. 252

ಕಡುದ್ವೇಷಿಯಾಗಿದ್ದುದರಿಂದ ಮುಸ್ಲಿಂ ಇತಿಹಾಸಕಾರರು ಕೊಟ್ಟ ಇಂಥ ಉದಾಹರಣೆಗಳಿಂದ ಅವನು ಧರ್ಮಾಂಧನೆಂದು ಅವರು ಹೇಳಿದುದರಲ್ಲಿ ಆಶ್ಚರ್ಯವೇನೂ ಇಲ್ಲ. ಆದರೆ ಈ ಶತಮಾನದ ಆದಿಯಲ್ಲಿ ಶೃಂಗೇರಿ, ಮೇಲ್ಕೋಟೆ ಮತ್ತು ಇನ್ನೂ ಕೆಲವು ಹಿಂದೂ ಕ್ಷೇತ್ರಗಳಲ್ಲಿ ಅಲ್ಲಿಯ ದೇವರಿಗೆ ಟಿಪ್ಪು ಕೊಟ್ಟ ದತ್ತಿಗಳ ಬಗ್ಗೆ ದಾಖಲೆಗಳು ದೊರಕಿದ ಮೇಲೆ ಅವನು ಸಂಪೂರ್ಣ ಮತಾಂಧನೆಂದು ಹೇಳುವ ಹಾಗಿಲ್ಲ. ಇಷ್ಟು ಮಾತ್ರ ಹೇಳಬಹುದು. ಅವನು ಅಕ್ಬರನಷ್ಟು ಉದಾರಿಯಲ್ಲ; ಔರಂಗಜೇಬನಷ್ಟು ಮತಾಂಧನೂ ಅಲ್ಲ. ಅವನ ನಡತೆಯಲ್ಲಿ ಅವನು ಈ ಇಬ್ಬರ ಹಾಗೆ ನಡೆದುಕೊಂಡ ಉದಾಹರಣೆಗಳೂ ಸಿಗುತ್ತವೆ. ಅವನು ಯಾವ ಒಂದು ಸ್ಥಿರವಾದ ಮತೀಯ ಧೋರಣೆಯನ್ನು ತಳೆಯಲಿಲ್ಲ. ತನ್ನ ರಾಜಕೀಯಕ್ಕೆ ಅನುಕೂಲವಾಗುವ ಹಾಗೆ ಇತರ ಮತೀಯರೊಡನೆ ವ್ಯವಹರಿಸುತ್ತಿದ್ದನು.

ಬಹುಮನಿಯವರ ಕಾಲದಲ್ಲಿ ಉತ್ತರ ಭಾರತದ ಮುಸಲ್ಮಾನರು, ಹಿಂದೂಗಳು, ಪರದೇಶದಿಂದ ಪರ್ಷಿಯನ್ನರು, ತುರುಕರು, ಆಫ್ರಿಕನ್ನರು, ಕರ್ನಾಟಕದಲ್ಲಿ ನೆಲೆನಿಂತರು. ಕ್ರಮೇಣ ಇವರಲ್ಲಿ ಎರಡು ಪಂಗಡಗಳಾದವು. ಒಂದು ಪರದೇಶಿಯರದು– ಪರ್ಷಿಯನ್ನರು ಮತ್ತು ತುರುಕರದು, ಇನ್ನೊಂದು ಉತ್ತರ ಭಾರತದ ಹಿಂದೂ ಮುಸ್ಲಿಮರು ಮತ್ತು ಆಫ್ರಿಕನ್ನರದು. ಎರಡನೆಯ ಪಂಗಡಕ್ಕೆ ದಖ್ಖನ್ನಿಗಳೆಂದು ಕರೆಯುವ ರೂಢಿಯಾಯಿತು. ಅವರ ಭಾಷೆಯನ್ನೂ ದಖ್ಖನ್ನಿ ಎಂದು ಕರೆದರು. ಅದರ ಮೂಲ ಹಿಂದಿ. ಅದು ಗುಜರಾತಿ, ಮರಾಠಿ, ಕನ್ನಡ, ಪಾರ್ಸಿ ಮತ್ತು ಅರಾಬಿಕ್ ಭಾಷೆಗಳ ಕಲಸುಮೇಲೋಗರವಾಯಿತು. ಆದಿಲ್‌ಷಾಹಿ ಮತ್ತು ಕುತಬ್ ಷಾಹಿ ಅರಸರು ಈ ದಖ್ಖನಿ ಭಾಷೆಯನ್ನು ಪೋಷಿಸಿದರು. ಮಾಲಿಕ್ ಖುಷನುದ್ ರುಸ್ತುಮಿ, ನುಸ್ರಾತಿ, ಶಿವ, ಬಿಜಾಪುರದ ಹಾಷಿಮಿ, ಮಹಮದ್ ಕೂಲಿ ಕುತುಬ್‌ಷಹ, ವಾಝಿ, ಘವ್ವಾಸಿ, ಗೋಲ್ಕೊಂಡದ ಇಬ್ನ್–ಇ–ನಿಶಾತಿ ಇವರಂಥ ದಖ್ಖನಿ ಲೇಖಕರು ಆದಿಲ್‌ಷಾಹಿ ಮತ್ತು ಕುತುಬ್‌ಷಾಹಿ ಅರಸರಿಂದ ಪೋಷಿಸಲ್ಪಟ್ಟರು. ಔರಂಗಜೇಬನು ಈ ಷಾಹಿ ಅರಸನನ್ನು ನಿರ್ನಾಮ ಮಾಡಿದ ಮೇಲೆ ಸ್ವಲ್ಪ ಕಾಲದ ನಂತರ ಉರ್ದು, ಸಾಹಿತ್ಯ ಭಾಷೆಯಾಗಿ ದಖ್ಖನಿ ಭಾಷೆಯ ಸ್ಥಾನವನ್ನು ಪಡೆಯಿತು. ಆದರೆ ದಖ್ಖನಿ ಕರ್ನಾಟಕದ ಆಡುಮಾತಾಗಿ ಇಂದಿನವರೆಗೂ ಉಳಿದು ಬಂದಿದೆ.

ಬಹುಮನಿ–ಆದಿಲ್‌ಷಾಹಿಗಳು ಪರ್ಷಿಯಾದಿಂದ ಬಂದವರನ್ನು ಆದರದಿಂದ ಸ್ವಾಗತಿಸುತ್ತಿದ್ದರು. ಪರ್ಷಿಯನ್ ಕಲೆಯು ದಖ್ಖನಿ ಕಲೆಯ ಮೇಲೆ ತನ್ನ ಪ್ರಭಾವವನ್ನು ಹೇರಳವಾಗಿ ಬೀರಿತು. ಎಷ್ಟು ಬೀರಿತೆಂದರೆ, ಬಹುಮನಿ–ಆದಿಲ್ ಷಾಹಿ ಕಲೆಯು ಇವರ ಒಂದು ಅಂಗ ಅಥವಾ ಶಾಖೆ ಎನ್ನುವಷ್ಟು. ವಿಜಯನಗರದವರೂ ಈ

ಪರ್ಷಿಯನ್ ಕಲೆಯನ್ನು ಸ್ವಾಗತಿಸಿದರು. ಹಂಪೆಯ ಕಮಲಮಹಲ್ ಮತ್ತು ಹದಿನೇಳನೆಯ ಶತಮಾನದ ಚಂದ್ರಗಿರಿಯ ಅರಮನೆ ಈ ಶೈಲಿಯಲ್ಲಿ ಕಟ್ಟಲ್ಪಟ್ಟವೆ. ಪರ್ಷಿಯನ್ ಶೈಲಿಯು ವಿಜಯನಗರಕ್ಕೆ ವಿಜಾಪುರದ ಮುಖಾಂತರ ಬಂತು. ವಿಜಯನಗರದವರು ವಿಜಾಪುರದರಿಂದ ಎಷ್ಟು ಕಲಿತರೂ ಅಷ್ಟೆ ಅವರಿಗೆ ಕಲಿಸಿದರು. ತಾಳಿಕೋಟೆಯ ನಂತರ ವಿಜಯನಗರದ ಶಿಲ್ಪಿಗಳು ಬಿಜಾಪುರಕ್ಕೆ ಹೋಗಿ ನೆಲೆಸಿ ಅಲ್ಲಿಯ ಪರ್ಷಿಯನ್ ಶೈಲಿಯಲ್ಲಿ ಮಹತ್ತರವಾದ ಬದಲಾವಣೆಯನ್ನು ಮಾಡಿ ಅದನ್ನು ಹೆಚ್ಚು ಭಾರತೀಯವನ್ನಾಗಿ ಮಾಡಿದರು.

ಪರ್ಷಿಯನ್ ಪ್ರಭಾವ ಕರ್ನಾಟಕದ ವಾಸ್ತುಶಿಲ್ಪಕ್ಕೆ ಮಾತ್ರ ಸೀಮಿತವಾಗಿಲ್ಲ. ಇಂದಿಗೂ ಉಳಿದಿರುವ ಬಿದ್ರಿಕಲೆ ಮತ್ತು ಶ್ರೀಗಂಧ ಮತ್ತು ರೋಸ್‌ಪುರದೊಳಗ ದಂತವನ್ನು ಕೂಡಿಸಿ ಅಲಂಕರಿಸುವ ವಿಧಾನವನ್ನು ಪರ್ಷಿಯನ್ನರು ಈ ಭಾಗಕ ತಂದರು. ಈ ಎರಡನೆಯ ವಿಧಾನವು ಇಂದಿಗೂ ಮೈಸೂರಿನಲ್ಲಿ ಉಳಿದಿದ ಅದೇ ರೀತಿಯಾಗಿ ಬಣ್ಣದ ಸಾಮಾನು ಮಾಡುವ ಕಲೆ ಬಿಜಾಪುರದಿಂದ ಬಂದ ಚನ್ನಪಟ್ಟಣ ಮತ್ತು ಕರ್ನಾಟಕದ ಇತರ ಊರುಗಳಲ್ಲಿ ಉಳಿದುಕೊಂಡಿ ಕರ್ನಾಟಕದ ಕಾಫಿ ಉದ್ಯಮವು ಅರೇಬಿಯಾದಿಂದ ಮಧ್ಯಯುಗದಲ್ಲಿ ಇಲ್ಲಿ ಬಂತು. ಲೋಬಾನವು ಅಲ್ಲಿಂದಲೇ ಇಲ್ಲಿಗೆ ಬಹುಮನಿಯವರ ಕಾಲದಲ್ಲಿ ಬಂದ ಮೈಸೂರು ಊದುಬತ್ತಿ ಉದ್ಯಮಕ್ಕೆ ತಳಹದಿಯಾಯಿತು. ಮೈಸೂರಿನ ರೇ ಉದ್ಯಮವು ಟಿಪ್ಪುವಿನ ಕಾಲದಲ್ಲಿ ಆರಂಭವಾಯಿತು. ಕನ್ನಡ ಭಾಷೆಯ ಮೇ ಪರ್ಷಿಯನ್ ಭಾಷೆಯ ಪ್ರಭಾವ ಈ ಕಾಲದಲ್ಲಿಯೇ ಆಯಿತು. ನಾವು ಆಡಳಿತದ ಉಪಯೋಗಿಸುವ ಅನೇಕ ಶಬ್ದಗಳು ಪರ್ಷಿಯನ್. ಈ ಶಬ್ದಗಳ ಪಟ್ಟಿಯನ್ನು ಕೊಡಲಿಕ್ಕೆ ಹೋದರೆ ಅದು ಬಹಳ ಉದ್ದವಾಗುವುದರಿಂದಲೂ ಮತ್ತು ಎಲ್ಲರೂ ಇಂಥ ಶಬ್ದಗಳನ್ನು ಸುಲಭವಾಗಿ ಗುರುತಿಸಬಲ್ಲರಾದ್ದರಿಂದಲೂ ಕೊಟ್ಟಿಲ್ಲ. ಅದೇ ರೀತಿಯಾಗಿ ವೇಷ ಭೂಷಣ, ಆಹಾರ ವಸ್ತು–ಈ ವಿಷಯಗಳಲ್ಲಿ ಮುಸಲ್ಮಾನ ಮುಖಾಂತರ ಪರ್ಷಿಯನ್ ಮತ್ತು ಅರಾಬಿಕ್ ಶಬ್ದಗಳು ಕನ್ನಡದಲ್ಲಿ ಸೇ ಮನೆಮಾತಾಗಿವೆ.

ಅನೇಕ ಸಂತರು ಕರ್ನಾಟಕದಲ್ಲಿ ಹಿಂದೂಮುಸ್ಲಿಂ ಐಕ್ಯತೆಯನ್ನು ಸಾಧಿಸಲ ಯತ್ನಿಸಿದರು. ಅವರಲ್ಲಿ ಮೊದಲನೆಯವನು ಗುಲ್ಬರ್ಗಾದ ಬಂದಾನವಾಜ್ ಮ ಹತ್ತೊಂಬತ್ತನೆಯ ಶತಮಾನದ ಆ ವಿಭಾಗದಲ್ಲಿ ಹುಟ್ಟಿದ ಶಿಶುವಿನಾಳಿನ ಷರೀಫ ಷರೀಫ್‌ನನ್ನು 'ಕರ್ನಾಟಕದ ಕಬೀರ್' ಎನ್ನುವುದು ಸಾರ್ಥಕ.

ಈ ಕಾಲದಲ್ಲಿ (೧೬೦೦–೧೮೫೦) ದಕ್ಷಿಣ ಭಾರತಕ್ಕೆ ಮೊದಲು ಬಂ ರೋಮನ್ ಕೆಥೋಲಿಕ್ ಪಾದ್ರಿ ಇಟಾಲಿಯನ್ ರಾಬರ್ಟ್ ಡಿ ನೊಬಿಲಿ. ಇವ

೧೭೦೫ರಲ್ಲಿ ಭಾರತಕ್ಕೆ ಬಂದನು. ತೆಲುಗು, ತಮಿಳು ಮತ್ತು ಸಂಸ್ಕೃತ ಭಾಷೆಯನ್ನು ಕಲಿತು ಹಿಂದು ಧರ್ಮಗ್ರಂಥಗಳನ್ನು ಅಭ್ಯಸಿಸಿದನು. ಭಾರತೀಯರಂತೆ ವೇಷವನ್ನು ಧರಿಸಿ ಸಸ್ಯಾಹಾರವನ್ನು ಮಾತ್ರ ತೆಗೆದುಕೊಳ್ಳುತ್ತಿದ್ದನು. ೧೭೫೦ರಲ್ಲಿ ಧಾರವಾಡ ಜಿಲ್ಲೆಯಲ್ಲಿರುವ ತುಮರಿಕೊಪ್ಪದಲ್ಲಿ ಬಹುಜನರು ಕ್ರೈಸ್ತ ಮತವನ್ನು ಅವಲಂಬಿಸಿದರು. ಈಗಲೂ ಆ ಹಳ್ಳಿಯಲ್ಲಿ ಕೆಲವರ ಮನೆಯಲ್ಲಿ ಸಂತ ಮೇರಿಯ ಜೀವನ ಕಥೆಗಳನ್ನುಳ್ಳ ತಾಳೆಗರಿಗಳ ಕೃತಿಗಳನ್ನು ಕಾಣಬಹುದು. ದಕ್ಷಿಣ ಭಾರತಕ್ಕೆ ಬಂದ ಮೊದಲನೆಯ ಪ್ರಾಟೆಸ್ಟೆಂಟ್ ಪಾದ್ರಿ ಜರ್ಮನ್ ಮಿಷನರಿ ಶ್ವಾರ್ಜ್ (೧೭೨೬–೯೮) ಎನ್ನುವವನು. ಆಗಿನ ಕಾಲದಲ್ಲಿ (೧೭೫೦) ದಕ್ಷಿಣ ಭಾರತದ ರಾಜಕೀಯವು ಆಂಗ್ಲೋಫ್ರೆಂಚ್ ಯುದ್ಧಗಳಿಂದ ಅಲ್ಲೋಲಕಲ್ಲೋಲವಾಗಿತ್ತು. ಮೈಸೂರಿನ ಹೈದರಾಲಿಯು ಆಗ ಊರ್ಜಿತಾವಸ್ಥೆಗೆ ಬರುತ್ತಿದ್ದ ಕಾಲವದು. ಅವನ ಮೇಲೆ ಶ್ವಾರ್ಜನ ಪ್ರಭಾವ ಬಹುವಾಗಿತ್ತು. ಇದನ್ನು ಹೈದರನ ಈ ಪಾದ್ರಿಯ ಬಗೆಗಿನ ಒಂದು ಆಜ್ಞೆಯಿಂದ ನಾವು ಊಹಿಸಬಹುದು. ಈ ಪೂಜ್ಯ ಪಾದ್ರಿಯು ಯಾವ ಅಡ್ಡಿಯೂ ಇಲ್ಲದಂತೆ ಎಲ್ಲೆಡೆಗೂ ಹೋಗಲಿ; ಏಕೆಂದರೆ ಇವನೊಬ್ಬ ದೇವಮಾನವ. ಹೈದರನಿಗೂ ಈಸ್ಟ್ ಇಂಡಿಯಾ ಕಂಪನಿಗೂ ಈತನು ಮಧ್ಯಸ್ಥಿಕೆ ಮಾಡಿ ಒಪ್ಪಂದವನ್ನು ನಿರ್ಮಿಸಿದನು. ತಂಜಾವೂರು ಮಹಾರಾಜನಿಗೆ ಈತನು ಸ್ನೇಹಿತ ಮತ್ತು ನೆಚ್ಚಿನ ಸಲಹೆಗಾರನಾಗಿದ್ದ. ಆಂಗ್ಲೋಫ್ರೆಂಚ್ ಯುದ್ಧಕಾಲದಲ್ಲಿ ಉದ್ಭವಿಸಿದ ಕ್ಷಾಮದ ದವಡೆಯಿಂದ ಈ ಪಾದ್ರಿಯು ಅನೇಕರನ್ನು ಪಾರು ಮಾಡಿದನು.

ಕರ್ನಾಟಕದ ವಿವಿಧ ಭಾಗಗಳಲ್ಲಿ ಕ್ರೈಸ್ತ ಪಾದ್ರಿಗಳು ತಮ್ಮ ಚರ್ಚುಗಳನ್ನು, ಶಿಕ್ಷಣ ಸಂಸ್ಥೆಗಳನ್ನು, ಆಸ್ಪತ್ರೆಗಳನ್ನು ಯಾವಾಗ ಆರಂಭಿಸಿದರೆನ್ನುವುದನ್ನು ಈಗ ನೋಡೋಣ. ಕ್ರಿ.ಶ.೧೮೧೦ರಲ್ಲಿ ಲಂಡನ್ ಮಿಷನ್ನಿನವರು ಬಳ್ಳಾರಿಗೆ ಬಂದರು. ಈ ಸಮಾಜಕ್ಕೆ ಸೇರಿದ ಹ್ಯಾಂಡ್ಸ್‌ನು ಬೈಬಲನ್ನು ಕನ್ನಡಕ್ಕೆ ತರ್ಜುಮೆ ಮಾಡಿದನು ಅಲ್ಲದೆ ಒಂದು ಛಾಪಖಾನೆಯನ್ನು ಅಲ್ಲಿ ಸ್ಥಾಪಿಸಿದನು. ಈ ಮಿಷನ್ನಿನ ರೀವ್ಸ್ ಮೊದಲನೆಯ ಇಂಗ್ಲಿಷ್–ಕನ್ನಡ ನಿಘಂಟುವನ್ನು ತಯಾರಿಸಿದನು. ೧೮೪೬ರಲ್ಲಿ ಒಂದು ಇಂಗ್ಲಿಷ್ ಶಾಲೆಯನ್ನು ಈ ಸಮಾಜದವರು ಬಳ್ಳಾರಿಯಲ್ಲಿ ತೆರೆದರು. ಅದು ಈಗ ವಾರ್ಡ್‌ಲಾ ಶಾಲೆಯೆನ್ನುವ ಹೆಸರಿನಲ್ಲಿ ಮುಂದುವರೆದಿದೆ.

ಬೆಳಗಾಂನಲ್ಲಿ ಇದೇ ಮಿಷನ್ನಿನವರು ೧೮೨೦ರಲ್ಲಿ ಒಂದು ಶಾಲೆಯನ್ನು ಸ್ಥಾಪಿಸಿದರು. ಈಗ ಅದು ಬೆನನ್–ಸ್ಮಿತ್ ಶಾಲೆಯೆಂದು ಪ್ರಸಿದ್ಧವಾಗಿದೆ. ಇದೇ ಕಾಲದಲ್ಲಿ ಇದೇ ಸಂಸ್ಥೆಯವರು ಬೆಂಗಳೂರಿನಲ್ಲಿ ತಮ್ಮ ಶಾಲೆಗಳನ್ನು ಆರಂಭಿಸಿದರು. ಈಗಲೂ ಅವು ಕೆಲಸ ಮಾಡುತ್ತಿವೆ. ಮೈಸೂರಿನಲ್ಲಿ ವೆಸ್ಲಿಯನ್ ಮಿಷನ್ನಿನವರು ೧೮೨೦ರಲ್ಲಿ ತಮ್ಮ ಕೆಲಸವನ್ನು ಮೊದಲು ಮಾಡಿದರು. ಅವರು ಸ್ಥಾಪಿಸಿದ

ಪ್ರೆಸ್ ಇವತ್ತಿಗೂ ಅತ್ಯಂತ ಹೆಸರುವಾಸಿಯಾಗಿದೆ. ಮಂಗಳೂರು, ಧಾರವಾಡಗಳಲ್ಲಿ ಬಾಸೆಲ್ ಮಿಷನ್ನಿನವರು ಶಾಲೆಗಳನ್ನು ತೆರೆದರು. ಮಂಗಳೂರಿನಲ್ಲಿರುವ ಅವರ ಪ್ರೆಸ್ ಇತರ ಪ್ರೆಸ್‌ಗಳಿಗೆ ಮಾದರಿಯಾಯಿತು. ಇದೇ ಮಿಷನ್ನಿನವರು ಮುಂದ ಹುಬ್ಬಳ್ಳಿ, ಬೆಟಗೇರಿ, ಗುಳೇದಗುಡ್ಡ, ಬಿಜಾಪುರ, ಉಣಕಲ್, ಕೊಡಗು, ಕೇರಳಗಳಲ್ಲಿ ತಮ್ಮ ಶಾಖೆಗಳನ್ನು ಸ್ಥಾಪಿಸಿದರು. ಹೀಗೆ ಕ್ರೈಸ್ತಮತದ ಪಾದ್ರಿಗಳು ಕರ್ನಾಟಕದಲ್ಲಿ ಭಾರತದ ಇತರ ಭಾಗದಲ್ಲಿಯಂತೆ ಆಧುನಿಕ ರೀತಿಯ ಶಾಲೆ, ಛಾಪಖಾನೆ ಆಸ್ಪತ್ರೆಗಳನ್ನು ತೆರೆಯುವುದರಲ್ಲಿ ಮೊದಲಿಗರಾದರು. ಕನ್ನಡ ಸಾಹಿತ್ಯಕ್ಕೆ ಇವರ ಸೇವೆ ಅವಿಸ್ಮರಣೀಯ.[೭]

ಸರ್ವಧರ್ಮಸಹಿಷ್ಣುತೆ ಭಾರತೀಯ ಸಂಪ್ರದಾಯಗಳಲ್ಲಿ ಪರಂಪರಾಗತವಾ ಬಂದದ್ದು. ಈ ಕಾಲದಲ್ಲಿ ಕರ್ನಾಟಕದಲ್ಲಿ ಆಳಿದ ಅರಸು ಮನೆತನಗಳು ಈ ಸಂಪ್ರದಾಯವನ್ನು ಮುಂದುವರಿಸಿಕೊಂಡು ಬಂದವು. ವಿಜಯನಗರದ ಅರಸರು ಸರ್ವಧರ್ಮ ಸತಿಪತಿಗೆ ಹೆಸರುವಾಸಿಯಾಗಿದ್ದರು. ಸಾಮಂತರಾಗಿ ಮತ್ತು ಈ ಕಾಲದಲ್ಲಿ ಸ್ವತಂತ್ರರಾಗಿ ಆಳಿದ ಕೆಳದಿ ನಾಯಕರು (೧೫೬೫-೧೭೬೩) ಮತ್ತು ಮೈಸೂರಿನ ಒಡೆಯರವರು ವಿಜಯನಗರದ ಆದರ್ಶವನ್ನು ಅನುಸರಿಸಿದರು.

ಕೆಳದಿಯ ನಾಯಕರು ವೀರಶೈವರು. ತಮ್ಮ ಮತಕ್ಕೆ ಕೊಟ್ಟಷ್ಟೇ ಪ್ರೋತ್ಸಾಹವನ್ನು ಅವರು ಇತರ ಮತಗಳಿಗೂ ಕೊಟ್ಟರು. ಹಿರಿಯ ವೆಂಕಟಪ್ಪನಾಯಕನು(೧೫೮೬-೧೬೨೯) ವೀರಶೈವ ಮಠಗಳಿಗೆ, ಬ್ರಾಹ್ಮಣರ ಅಗ್ರಹಾರಗಳಿಗೆ, ವೈಷ್ಣವ ಮಠಗಳಿಗೆ ಭುವನಗಿರಿ ದುರ್ಗದಲ್ಲಿಯ ಮಸೀದಿಗೆ ಉದಾರವಾಗಿ ದತ್ತಿಗಳನ್ನು ಕೊಟ್ಟನು. ಶೃಂಗೇರಿಯ ಜಗದ್ಗುರು ಅಭಿನವ ನರಸಿಂಹ ಭಾರತಿಗಳ ವಾಸಕ್ಕಾಗಿ ಶೃಂಗೇರಿಯಲ್ಲಿ ಒಂದು ಮಠವನ್ನು ಕಟ್ಟಿಸಿದನು. ಶಿವಪ್ಪನಾಯಕನು ವೆಂಕಟಪ್ಪನಾಯಕನ ಹಾಗೆಯೇ ಎಲ್ಲಾ ಹಿಂದೂ ಪಂಥಗಳಿಗೂ ಪ್ರೋತ್ಸಾಹ ಕೊಟ್ಟಿದ್ದಲ್ಲದೆ ತನ್ನ ರಾಜ್ಯದಲ್ಲಿ ಕ್ರೈಸ್ತರಿಗೆ ಉಪದೇಶ ನೀಡುವ ಮತ್ತು ಮತಾಂತರಗೊಳಿಸುವ ಅವಕಾಶ ನೀಡಿದ್ದನು. ಆದರೆ ಚರ್ಚಿನ ಅಧಿಕಾರಿಗಳು ಭಾರತೀಯರೇ ಇರಬೇಕೆಂಬ ಅವನ ಕಟ್ಟಳೆಯು ಅವನ ಬುದ್ಧಿವಂತಿಕೆ ಮತ್ತು ಅವರ ದೇಶಾಭಿಮಾನವನ್ನು ತೋರಿಸುತ್ತವೆ.[೮] ಹೀಗಿರುವಾಗ ಅವನ ರಾಜ್ಯದಲ್ಲಿ ೩೦,೦೦೦ ಕ್ರೈಸ್ತರಿದ್ದರೆಂದರೆ ಆಶ್ಚರ್ಯವೇನೂ ಇಲ್ಲ. ಇವರ ಮೊದಲಿಗೆ ಗೋವಾ ಮತ್ತು ಸಾಲ್ಸೆಟ್ಟಿನವರಂತೆ, ಶಿವಪ್ಪನಾಯಕನಿಗೆ ಒಬ್ಬ ಮುಸಲ್ಮಾನ

---

6. ಖಿಜರ್ ಅಲಿಖಾನ್: ಕರ್ನಾಟಕದಲ್ಲಿ ಇಸ್ಲಾಂಧರ್ಮದ ಪಾತ್ರ, ಅದೇ ಪುಸ್ತಕ: ಪು.276

7. ಸಿ.ಎಸ್. ದೇವಧರ್: ಕರ್ನಾಟಕದಲ್ಲಿ ಕ್ರೈಸ್ತಧರ್ಮ, ಅದೇ ಪುಸ್ತಕ, ಪು. 280-5

8. K.D.Swaminathan: The Nayakas of Ikkeri, Passim, Madras, 19.

ವ್ಯಾಪಾರಿ ಷಾ ಬಂದರಿ ಐಸಕ್ ಎನ್ನುವವನು ಬಹಳ ಬೇಕಾದವನಿದ್ದನಂತೆ. ಎಲ್ಲಾ ಕೆಳದಿನಾಯಕರು ಶೃಂಗೇರಿಯ ಜಗದ್ಗುರುಗಳಿಗೆ ಪೂಜ್ಯಭಾವವನ್ನಿಟ್ಟುಕೊಂಡು ಅಲ್ಲಿಯ ಮಠಕ್ಕೆ ನಾನಾ ವಿಧದಲ್ಲಿ ಪ್ರೋತ್ಸಾಹವನ್ನು ಕೊಟ್ಟರು.[೯]

ಮೈಸೂರಿನ ಒಡೆಯರವರು ಕೆಳದಿ ನಾಯಕರ ಹಾಗೆಯೆ ಸರ್ವಧರ್ಮಸಹಿಷ್ಣುಗಳಾಗಿದ್ದರು. ಸ್ವತಃ ಶ್ರೀವೈಷ್ಣವನಾದರೂ ಚಿಕ್ಕದೇವರಾಯನು ತನ್ನ ಪೂರ್ವಜರು ಮತ್ತು ನಂತರದವರ ಹಾಗೆ ವೀರಶೈವ ಆಚರಣೆಗಳನ್ನು ಬಿಡಲಿಲ್ಲ. ಶ್ರವಣಬೆಳ್ಗೊಳದಲ್ಲಿ ಅಂದರೆ ಜೈನ ಯಾತ್ರಾರ್ಥಿಗಳ ಉಪಯೋಗಕ್ಕೆ ಒಂದು ಕೆರೆಯನ್ನು ಕಟ್ಟಿದನು.[೧೦]

ಹಿಂದೆ ಹೇಳಿದ ಹಾಗೆ ಎಲ್ಲಾ ಭಾರತೀಯ ಮುಸ್ಲಿಂ ಅರಸರಲ್ಲಿಯೂ ಹೈದರನು ಧಾರ್ಮಿಕ ವಿಷಯಗಳಲ್ಲಿ ಅತ್ಯಂತ ಉದಾರಿ. ಅವನು ಯಾವ ಮುಸ್ಲಿಂ ಧಾರ್ಮಿಕ ಆಚರಣೆಗಳನ್ನೂ ಆಚರಿಸುತ್ತಿರಲಿಲ್ಲ ಅವನು ಬಹಿರಂಗವಾಗಿ ಹೇಳುತ್ತಿದ್ದುದು ಮತ್ತು ನಡೆಯುತ್ತಿದ್ದುದು ಮತಗಳೂ ದೇವರಿಂದ ಬರುತ್ತವೆ ಮತ್ತು ದೇವರ ದೃಷ್ಟಿಯಲ್ಲಿ ಅವೆಲ್ಲಾ ಸರಿ ಸಮಾನವೆಂದು. ಆತನಿಗೆ ಶ್ರೀರಂಗಪಟ್ಟಣದ ಅಧಿದೇವರಾದ ರಂಗನಾಥಸ್ವಾಮಿಯಲ್ಲಿ ಎಲ್ಲಾ ಇಮಾಮರಲ್ಲಿ ಇದ್ದುದಕ್ಕಿಂತ ಇನ್ನೂ ಹೆಚ್ಚು ನಂಬಿಕೆ ಇತ್ತೆಂದು ವಿಲ್ಕ್ಸರು ಹೇಳುತ್ತಾರೆ[೧೧].

ಟಿಪ್ಪು ಬಹು ಉದಾರ ಮಾತುಗಳನ್ನಾಡುತ್ತಿದ್ದ ಉದಾಹರಣೆಯಿದೆ. ಒಂದು ಸಲ ಶೃಂಗೇರಿ ಜಗದ್ಗುರುಗಳಿಗೆ ಈ ರೀತಿ ಬರೆದ. 'ನೀವು ಜಗದ್ಗುರುಗಳು. ಲೋಕೋದ್ಧಾರಕ್ಕೂ ಮಾನವಕಲ್ಯಾಣಕ್ಕೂ ನೀವು ಯಾವಾಗಲೂ ತಪಸ್ಸನ್ನು ಆಚರಿಸುತ್ತಿದ್ದೀರಿ. ನಮ್ಮ ಏಳಿಗೆ ಮತ್ತು ಅಭಿವೃದ್ಧಿಗಾಗಿ ಪ್ರಾರ್ಥಿಸಿ. ನಿಮ್ಮಂಥ ಪವಿತ್ರ ಜೀವಿಗಳು ಯಾವ ನಾಡಿನಲ್ಲಿಯೇ ವಾಸಿಸುತ್ತಿರಲಿ ಆ ನಾಡು ಒಳ್ಳೆಯ ಮಳೆಬೆಳೆಗಳಿಂದ ವರ್ಧಿಸುತ್ತದೆ.[೧೨]'

೧೭ನೆಯ ಶತಮಾನದಲ್ಲಿ ಭಾರತದ ಬಹು ಭಾಗವು ಮೊಗಲರ ಸಾಮ್ರಾಜ್ಯಕ್ಕೆ ಸೇರಿತ್ತು. ಅವರ ಆಡಳಿತವು ಬಿಗಿಯಾಗಿರುವವರೆಗೂ ವ್ಯವಸಾಯ, ವ್ಯಾಪಾರ,

---

9. L. Rice: Mysore II. Westminister, MDCC X C VII, p 434

10. C. Hayavadana Rao : Mysore Gazetteer II. iv, Bangalore, 1930, p. 2458

11. Mark Wilks : History of Mysore II 1932, Mysore, pp.758-9

12. ಎಚ್. ವಿ. ರಂಗಸ್ವಾಮಿ ಅಯ್ಯಂಗಾರ್ : ಟಿಪ್ಪುವಿನ ಸ್ವಭಾವ ಮತ್ತು ಆಡಳಿತ ನೈಪುಣ್ಯ, [ಕರ್ನಾಟಕದ ಪರಂಪರೆ II ಪು.260]

ಉದ್ಯಮಗಳು ಒಳ್ಳೆಯ ಸ್ಥಿತಿಯಲ್ಲಿದ್ದವು. ಈ ಸುಸ್ಥಿತಿಗತಿಗಳೇ ವಿದೇಶೀಯರನ್ನು ಈ ದೇಶಕ್ಕೆ ಆಕರ್ಷಿಸಿದವು. ಸರ್ ಥಾಮಸ್ ರೋ, ಬರ್ನಿಯರ್ ಮತ್ತು ಟ್ಯಾವರ್ನಿಯರ್ ಮೊದಲಾದ ವಿದೇಶೀ ಪ್ರವಾಸಿಗಳು ಮೊಗಲರ ಕಾಲದ ಜನಜೀವನವನ್ನು ವರ್ಣಿಸಿದ್ದಾರೆ. ರಾಜರು ಮತ್ತು ಅವರ ಸರದಾರರು ಕಟ್ಟಿದ ಕಟ್ಟಡಗಳು, ಉದ್ಯಾನಗಳೂ ಮತ್ತು ಅವರ ಪ್ರೋತ್ಸಾಹದಿಂದ ಬೆಳೆದ ಚಿತ್ರಕಲೆ ಭಾರತದ ಅಮೂಲ್ಯ ಆಸ್ತಿ. ಸರದಾರರ ಶ್ರೀಮಂತಿಕೆಗೂ ಮತ್ತು ರೈತರ ಬಡತನಕ್ಕೂ ಭಾರಿ ಅಂತರವಿತ್ತು. ಸರದಾರರು ಒಳ್ಳೆಯ ಆಡಳಿತಗಾರರು ಮತ್ತು ಸೇನಾನಾಯಕರಾಗಿರುವವರೆಗೂ ಸಾಮ್ರಾಜ್ಯ ಭದ್ರವಾಗಿತ್ತು. ಕಾಲಕ್ರಮೇಣ ಅವರ ವಿಲಾಸೀ ಜೀವನ ಅವರ ಶಕ್ತಿಸಾಮರ್ಥ್ಯಗಳನ್ನು ಕುಂದುವ ಹಾಗೆ ಮಾಡಿತು. ೧೮ನೆಯ ಶತಮಾನದಲ್ಲಿ ಉತ್ತರ ಭಾರತದ ಸ್ಥಿತಿ ಹದಗೆಟ್ಟಿತು. ಮೊಗಲ್ ಅರಸರು ಮತ್ತು ಅವರ ಸರದಾರರು ದುರ್ಬಲರಾದರು. ಹಿಂದೆ ಹೇಳಿದ ಹಾಗೆ ಮರಾಠರು, ರಜಪೂತರು, ಜಾಟರು, ಸೀಖರು ಸ್ವತಂತ್ರರಾಗಿ ತಮ್ಮ ರಾಜ್ಯಗಳನ್ನು ಕಟ್ಟುವ ಇಲ್ಲವೆ ವಿಸ್ತರಿಸುವ ಹವಣಿಕೆಯಲ್ಲಿದ್ದರು. ಇದೇ ಸಮಯದಲ್ಲಿ ಮೊದಲು ನಾದಿರ್‌ಷಹ ನಂತರ ಅಹಮದ್‌ಷಹ ಅಬ್ದಾಲಿ ಭಾರತಕ್ಕೆ ದಂಡೆತ್ತಿ ಬಂದರು. ಮೊಗಲ ರಾಜ್ಯಗಳನ್ನು ಕಟ್ಟುವ ಇಲ್ಲವೆ ವಿಸ್ತರಿಸುವ ಹವಣಿಕೆಯಲ್ಲಿದ್ದರು. ಇದೇ ಸಮಯದಲ್ಲಿ ಮೊದಲು ನಾದಿರ್‌ಷಹ ನಂತರ ಅಹಮದ್‌ಷಹ ಅಬ್ದಾಲಿ ಭಾರತಕ್ಕೆ ದಂಡೆತ್ತಿ ಬಂದರು. ಮೊಗಲ ರಾಜ್ಯ ಅತ್ಯಂತ ಕ್ಷೀಣಸ್ಥಿತಿಗೆ ಬಂದಿತು. ಅರಾಜಕತೆ ಪಸರಿಸಿತು. ೧೮ನೆಯ ಶತಮಾನದ ಉತ್ತರಾರ್ಧದಲ್ಲಿ ಮತ್ತು ೧೯ನೆಯ ಶತಮಾನದ ಆದಿಯಲ್ಲಿ ಪಿಂಡಾರೆಯವರು ಮತ್ತು ಠಕ್ಕರು ಸಮಾಜಕ್ಕೆ ಕಂಟಕಪ್ರಾಯರಾದರು. ಇವೆಲ್ಲದರ ಪರಿಣಾಮವಾಗಿ ಧಾರ್ಮಿಕ ಮತ್ತು ಸಾಮಾಜಿಕ ಜೀವನ ಕೆಳಮಟ್ಟಕ್ಕೆ ಇಳಿಯಿತು. ರಾಯ್‌ಛತ್ತರ್‌ಮನ್ ಎನ್ನುವ ಲೇಖಕನು ೧೭೫೯ರಲ್ಲಿ ಹಿಂದೂ ಕ್ಷೇತ್ರಗಳು ಭಿಕ್ಷುಕರ, ಅಜ್ಞಾನಿ ಪುರೋಹಿತರ ಮತ್ತು ವಂಚಕರ ನಿವಾಸಸ್ಥಾನಗಳಾಗಿದ್ದವೆಂದು ಹೇಳುತ್ತಾನೆ. ಸೀಖ್ ಜನರಲ್ಲಿ ಮಾತ್ರ ಈ ದುಃಸ್ಥಿತಿ ಇರಲಿಲ್ಲ. ಅವರ ಸಮಾಜದಲ್ಲಿ ನವ ಚೈತನ್ಯ ಕಂಡುಬರುತ್ತಿತ್ತು.[೧೩]

ದಖ್ಖನಿನಲ್ಲಿ ಅಂದರೆ ಮಹಾರಾಷ್ಟ್ರ ಮತ್ತು ನಿಜಾಮರ ರಾಜ್ಯದಲ್ಲಿ ಪರಿಸ್ಥಿತಿ ಉತ್ತರ ಭಾರತಕ್ಕಿಂತ ತೀರ ಭಿನ್ನವಾಗಿರಲಿಲ್ಲ. ಅರ್ಥರ್ ವೆಲ್ಲೆಸ್ಲಿ ೧೮೦೦ರ

---

13. A.L. Srivastava : Religion in the eighteenth century, [Journal of Indian History, Vol.47] 1969,p.25-26

ಸುಮಾರಕ್ಕೆ ಹೇಳುವಂತೆ ಪ್ರತಿಯೊಂದು ಹಳ್ಳಿಯಲ್ಲಿಯೂ ಪುಂಡರು ತಮ್ಮ ದಬ್ಬಾಳಿಕೆಯನ್ನು ನಡೆಸಿದರು. ಪೇಷ್ವೆಯವರ ಅಥವಾ ನಿಜಾಮರ ಸೈನ್ಯ ರಕ್ಷಣೆ ಕೊಟ್ಟರೆ ಮಾತ್ರ ವ್ಯವಸಾಯ ಸಾಧ್ಯವಾಗಿದ್ದಿತು.[14] ಈ ಮರುಭೂಮಿಯಲ್ಲಿ ಕರ್ನಾಟಕದ ಬಹುಭಾಗ ಈ ಕಾಲಾವಧಿಯಲ್ಲಿ (೧೬೦೦-೧೮೫೦) ಒಂದು ತಂಪು ಜಾಗವಾಗಿತ್ತು. ತಾಳಿಕೋಟೆಯನಂತರ ಆದಿಲ್‌ಷಾಹಿ ಅರಸರು ಉತ್ತರ ಕರ್ನಾಟಕದ ಹೆಚ್ಚು ಭಾಗದಲ್ಲಿ ಆಳಿದರು. ಅವರ ಆಳ್ವಿಕೆ ಚೆನ್ನಾಗಿತ್ತೆಂದು ಇವತ್ತಿಗೂ ಜನರು ಅವರನ್ನು ನೆನೆಸುತ್ತಾರೆ. ಅದೇ ರೀತಿಯಾಗಿ ಕೆಳದಿಯವರ ಕಾಲದಲ್ಲಿ (೧೬೦೦-೧೭೬೩) ನಂತರ ಹೈದರ್ ಮತ್ತು ಟಿಪ್ಪು ಅವರ ಆಳ್ವಿಕೆಯಲ್ಲಿ ಕರ್ನಾಟಕದ ಬಹುಭಾಗಗಳು ಒಳ್ಳೆಯ ಆಡಳಿತಕ್ಕೆ ಒಳಪಟ್ಟಿದ್ದವು. ಪಿತ್ರೋಡಲ್ಲಾವೆಲ್ಲೆಯು ೧೬೨೩ರಲ್ಲಿ ಕೆಳದಿ ವೆಂಕಟಪ್ಪ ನಾಯಕನ ರಾಜ್ಯದಲ್ಲಿ ಒಂಟಿಯಾಗಿ ಅಲೆದಾಡಿದನು. ಈ ರಾಜ್ಯದಲ್ಲಿ ಸಂಪೂರ್ಣ ಸುರಕ್ಷತೆಯಿದ್ದುದರಿಂದ ಅವಸರ ಅವಸರವಾಗಿ ಓಡಾಡುವ ಪ್ರಮೇಯವಿಲ್ಲವೆಂದು ಹೇಳಿದ್ದಾನೆ.[15] ವೆಂಕಟಪ್ಪನಾಯಕನ ರಾಜ್ಯದಲ್ಲಿ ರಾಜಮಾರ್ಗಗಳು ಬಹು ಸುರಕ್ಷಿತವಾಗಿದ್ದವು; ಹೊನ್ನಾವರದ ಮಾರ್ಗಗಳು ಸುಂದರ ಮತ್ತು ವಿಶಾಲವಾಗಿದ್ದವು. ಇಕ್ಕೇರಿಗೆ ಹೋಗುವ ಮಾರ್ಗದಲ್ಲಿ ವಿಶಾಲ ವೃಕ್ಷಗಳ ಸಾಲು ತುಂಬಾ ಮನಮೋಹಕವಾಗಿತ್ತು ಎಂದು ಡೆಲ್ಲಾವಲ್ಲೆ ಬರೆದಿದ್ದಾನೆ.[16]

ಒಂದು ನೂರು ವರ್ಷಗಳನಂತರ, ಇಮ್ಮಡಿ ಬಸವಪ್ಪನಾಯಕನ ಕಾಲದಲ್ಲಿ (೧೭೩೯-೫೪) ಬಂದ ಜಾಕೋಬಸ್ ಕ್ಯಾಂಟರ್ ವಿಶ್ಚರ್ ಎನ್ನುವ ಪ್ರವಾಸಿಯು ಬಿದನೂರನ್ನು ದಕ್ಷಿಣ ಭಾರತದ ಕಣಜವೆಂದೆನ್ನುತ್ತಾನೆ. ಅವನು ಮುಂದೆ ಹೀಗೆ ಹೇಳುತ್ತಾನೆ: 'ಬಿದನೂರಿನಿಂದ ಸಮುದ್ರ ತೀರಕ್ಕೆ ಹೋಗುವ ರಸ್ತೆಯು ಸಾಲುಮರಗಳಿಂದ ಶೋಭಿತವಾಗಿದೆ. ಈ ಮರಗಳನ್ನು ಪಕ್ಕದಲ್ಲಿ ಜೀವಿಸುವ ಜನ ರಕ್ಷಣೆ ಮಾಡಬೇಕು. ಈ ರಸ್ತೆಯಲ್ಲಿ ಕಳ್ಳಕಾಕರ ಭೀತಿಯಿಲ್ಲ. ಯಾವ ಆಗಂತುಕನಾದರೂ ಚೀಲದ ತುಂಬ ಹಣವನ್ನು ಇಟ್ಟುಕೊಂಡು ನಿಶ್ಚಿಂತೆಯಿಂದ ಮಲಗಬಹುದು. ಯಾರೂ ಅವನಿಂದ ಕದಿಯುವುದಿಲ್ಲ. ಹಾಗೇನಾದರೂ ಕದ್ದರೆ ಸುತ್ತಮುತ್ತಲೂ ವಾಸಿಸುವವರು ಶಿಕ್ಷಿಸಲ್ಪಡುವರು ಮತ್ತು ಕಳೆದುಹೋದ ಹಣವನ್ನು ತರಬೇಕಾಗುವುದು,[17]

14. An Advanced History of India, p.711

15. Rice: Mysore II, p. 434

16. Edward Gray : Travels of Pietro Della Valle II, 1892, London, p.244 and further

17. Rice : Mysore II, p. 431

ಹೈದರ್ ಅಧಿಕಾರವನ್ನು ವಹಿಸಿಕೊಳ್ಳುವ ಮಂಚೆ ಒಡೆಯರವರ ಮೈಸೂರು ಚಿಕ್ಕದಾಗಿತ್ತು. ಪದೇ ಪದೇ ಅದಕ್ಕೆ ಅಕ್ಕಪಕ್ಕದವರು ಮುತ್ತಿಗೆ ಹಾಕುತ್ತಿದ್ದರು. ಆದರೆ ಅವನು ಸತ್ತಾಗ ಮೈಸೂರನ್ನು ಮುತ್ತಿ ಹೆದರಿಸುವ ಸೈನ್ಯವಿರಲಿಲ್ಲ; ಮೈಸೂರು ರಾಜ್ಯ ವಿಸ್ತಾರವಾಗಿದ್ದು ಅದರ ಎಲ್ಲೆಕಟ್ಟು ಸುಭದ್ರವಾಗಿತ್ತು. ಈ ಪ್ರದೇಶಕ್ಕೆ ಬಲಯುತವಾದ ಸರ್ಕಾರವನ್ನು ಒಪಗಿಸಿದ್ದೆ ಅಲ್ಲದೆ ಪ್ರಜೆಗಳ ಜೀವನಮಟ್ಟವನ್ನೂ ಉತ್ತಮಗೊಳಿಸಿದನು.[೧೮] ಟಿಪ್ಪುವಿನ ಧಾರ್ಮಿಕ ಧೋರಣೆಗಳ ಬಗ್ಗೆ ಭಿನ್ನಾಭಿಪ್ರಾಯವಿದ್ದರೂ ಅವನ ಆಡಳಿತ ಚೆನ್ನಾಗಿತ್ತೆಂದು ಅವನ ಶತ್ರುಗಳಾದ ಬ್ರಿಟಿಷರು ಕೂಡ ಒಪ್ಪಿಕೊಂಡಿದ್ದಾರೆ. ಸರ್ ಜಾನ್ ಷೋರನ ಪ್ರಕಾರ ಟಿಪ್ಪು ತನ್ನ ರೈತರನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದ. ಅವರು ಕಷ್ಟಪಟ್ಟು ದುಡಿದದ್ದು ಅವರಿಗೆ ದಕ್ಕುತ್ತಿತ್ತು. ಟಿಪ್ಪುವಿನ ನಂತರ ಮೈಸೂರಿನ ದಿವಾನ ಪೂರ್ಣಯ್ಯನವರು ಖ್ಯಾತ ಆಡಳಿತಗಾರರು. ಅವರ 'ಅಸಾಧಾರಣ ಕಾರ್ಯದಕ್ಷತೆ, ಪ್ರಜಾಕ್ಷೇಮ ಚಿಂತನೆ, ಪ್ರಾಮಾಣಿಕತೆ, ಯುಕ್ತಾಯುಕ್ತ ವಿವೇಚನೆ ಮತ್ತು ಚಾಲಕಶಕ್ತಿ'ಗಳನ್ನು ಗವರ್ನರ್ ಜನರಲ್ ವೆಲ್ಲೆಸ್ಲಿಯು ಹೊಗಳಿದ್ದಾನೆ.[೧೯] ಪೂರ್ಣಯ್ಯನನಂತರ ಮುಮ್ಮಡಿ ಕೃಷರಾಜ ಒಡೆಯರವರ ಆಡಳಿತದ ಆರಂಭದಲ್ಲಿ (೧೮೩೧) ಶಿವಮೊಗ್ಗ ಪ್ರಾಂತ್ಯದಲ್ಲಿ ದೊಡ್ಡ ದಂಗೆಯೆದ್ದಿತು. ಈ ಕಾರಣದಿಂದ ಬ್ರಿಟಿಷರು ಮೈಸೂರನ್ನು ೫೦ ವರ್ಷ ತಾವೇ ಆಳಿದರು. ಒಟ್ಟಿನಲ್ಲಿ ಈ ಅವಧಿಯಲ್ಲಿ (೧೬೦೦-೧೮೫೦) ಕರ್ನಾಟಕದ ಬಹುಭಾಗದಲ್ಲಿ ಆಡಳಿತ ಬಿಗುವಾಗಿದ್ದು ಸಾಮಾನ್ಯ ಜನರ ಜೀವನ ಭಾರತದ ಇರತ ಕಡೆಗಳಿಗಿಂತ ಹೆಚ್ಚು ನೆಮ್ಮದಿಯುತವಾಗಿತ್ತೆಂದು ಹೇಳಬಹುದು.

ಈ ನೂರೈವತ್ತು ವರ್ಷಗಳ ಅವಧಿಯಲ್ಲಿ ಕರ್ನಾಟಕದಲ್ಲಿ ಹುಟ್ಟಿದ ವೀರಸ್ತ್ರೀಯರು ಹಿಂದಂತೂ ನಮ್ಮ ಇತಿಹಾಸದಲ್ಲಿ ಹುಟ್ಟಿಲ್ಲ. ಅವರೆಲ್ಲರೂ ಅಪ್ರತಿಮ ಎದುರಾಳಿಗಳ ಜತೆಗೆ ಹೋರಾಡಿದ್ದಾರೆ-ಕಿರಿಯ ಅಬ್ಬಕ್ಕ ಪೋರ್ಚುಗೀಸರೊಂದಿಗೆ, ಬೆಳವಡಿಯ ಮಲ್ಲಮ್ಮ ಶಿವಾಜಿಯ ವಿರುದ್ಧ, ಕೆಳದಿಯ ಚೆನ್ನಮ್ಮ ಔರಂಗಜೇಬನ ಸೈನ್ಯದೊಡನೆ, ಕೆಳದಿಯ ವೀರಮ್ಮಾಜಿ ಹೈದರನ ವಿರುದ್ಧ ಮತ್ತು ಕೊನೆಯದಾಗಿ ಕಿತ್ತೂರು ಚೆನ್ನಮ್ಮ ಬ್ರಿಟಿಷರ ವಿರುದ್ಧ. ಇವರ ಹೋರಾಟದ ಬಗ್ಗೆ ನಮಗೆ ವಿವರಗಳು ಸಾಕಷ್ಟು ಸಿಕ್ಕಿಲ್ಲ. ಸಿಕ್ಕ ಅಲ್ಪ ಸ್ವಲ್ಪ ವಿವರಗಳಿಂದ ಈ ವೀರಮಹಿಳೆಯರ ಕಾರ್ಯ, ಸಾಹಸಗಳು ನಮ್ಮ ಸ್ತ್ರೀಯರಿಗೆ ಯಾವಾಗಲೂ ಆದರ್ಶಪ್ರಾಯವಾಗಿ ಉಳಿಯತಕ್ಕಂಥವೆಂದು ಧಾರಾಳವಾಗಿ ಹೇಳಬಹುದು.

---

18. ಕರ್ನಾಟಕದ ಪರಂಪರೆ II ಪು. 251-32

19. ಎಂ. ವಿ. ಕೃಷ್ಣರಾವ್ ಮತ್ತು ಎಂ. ಕೇಶಭಟ್ಟ : ಕರ್ನಾಟಕದ ಇತಿಹಾಸದರ್ಶನ, 1970, ಬೆಂಗಳೂರು, ಪು 580

ಇದೇ ಧೈರ್ಯವನ್ನು ಆಗಿನ ಕಾಲದ ಸ್ತ್ರೀಯರು ಸಹಗಮನ ಪದ್ಧತಿಯಲ್ಲಿಯೂ ತೋರಿಸುತ್ತಿದ್ದರು. ವಿಜಯನಗರ ಕಾಲದಲ್ಲಿ ಇದ್ದಂತೆ ಈ ಕಾಲದಲ್ಲಿಯೂ ಈ ಪದ್ಧತಿ ಇತ್ತು. ಇದು ಕ್ರೂರ ಮತ್ತು ಅನಾಗರಿಕವೆನ್ನುವುದರಲ್ಲಿ ಸಂಶಯವೇ ಇಲ್ಲ. ಆದರೂ ಈ ಪದ್ಧತಿಯನ್ನು ಅನುಸರಿಸುತ್ತಿದ್ದ ಸ್ತ್ರೀಯರ ಪಾತಿವ್ರತ್ಯವನ್ನೂ, ಮತ್ತು ಧೈರ್ಯವನ್ನೂ, ಮಜ್ಜಲ್ ಶಂಥಾದ್ದು ಪಿತ್ರೋಡೆಲ್ಲಾವಲ್ಲೆ ಈ ಗುಣಗಳನ್ನು ಶ್ಲಾಘಿಸಿದ್ದಾನೆ. ಸಹಗಮನ ಮಾಡಲಿದ್ದ ಒಬ್ಬ ಮಹಿಳೆಯನ್ನು ಭೇಟಿಯಾಗಿ ಆ ಕಾರ್ಯ ಕೈಕೊಳ್ಳದಂತೆ ಅವಳನ್ನು ಮನವೊಲಿಸಲು ಯತ್ನಿಸಿದನು. ಆದರೆ ಅವನ ಉಪದೇಶ ನಿರರ್ಥಕವಾಯಿತು. ಅವಳು ಈ ಪ್ರವಾಸಿ ಕೇಳಿದ ಪ್ರಶ್ನೆಗಳಿಗೆಲ್ಲಾ ಸಮಂಜಸವಾದ ಉತ್ತರಗಳನ್ನು ಶಾಂತಚಿತ್ತದಿಂದ ಕೊಟ್ಟಳು. ತನಗೆ ಸಹಗಮನ ಮಾಡುವಂತೆ ಯಾರೂ ಒತ್ತಾಯಿಸಿಲ್ಲವೆಂದು ಅವನಿಗೆ ಸ್ಪಷ್ಟಪಡಿಸಿದಳು. ಆದರೆ ಎಲ್ಲ ಸತಿಯ ಉದಾಹರಣೆಗಳು ಹೀಗೆ ಇರುತ್ತವೆಂದು ಹೇಳಲಾಗುವುದಿಲ್ಲ.[20] ಒತ್ತಾಯದಿಂದಲೂ ಆದ ಉದಾಹರಣೆಗಳಿವೆ.

ಡೆಲಾವೆಲ್ಲೆ ಇಕ್ಕೇರಿಯ ನರ್ತಕಿಯರ ಬಗ್ಗೆ ಸ್ವಲ್ಪ ಮಾಹಿತಿಯನ್ನು ಕೊಡುತ್ತಾನೆ. ನರ್ತಕಿಯರ ತಂಡವು ಸಾವಧಾನವಾಗಿ ನೃತ್ಯವನ್ನು ಆರಂಭಿಸಿ, ಕ್ರಮೇಣ ಭಾವ ಭಂಗಿಗಳನ್ನು ತೀವ್ರಗೊಳಿಸಿದುದು ಬಹುಸುಂದರ ದೃಶ್ಯವಾಗಿತ್ತೆಂದು ಬರೆದಿದ್ದಾನೆ. ಕೆಳದಿ ರಾಜ್ಯದಲ್ಲಿ ಸ್ತ್ರೀಯರು ಶೃಂಗಾರಪ್ರಿಯರಾಗಿದ್ದರೆಂದು ಹೇಳಿದ್ದಾನೆ. ಧಾರ್ಮಿಕ ಹಬ್ಬಗಳಲ್ಲಿ ನಡೆಯುತ್ತಿದ್ದ ಕೋಲಾಟ ಮತ್ತು ನೃತ್ಯಗಳ ಸುಂದರ ವರ್ಣನೆಯನ್ನು ಕೊಟ್ಟಿದ್ದಾನೆ.[21]

ಡೆಲ್ಲಾವಲ್ಲೆ ಇಕ್ಕೇರಿಯ ಪ್ರಾಥಮಿಕ ಶಾಲೆಯಲ್ಲಿ ನಡೆಯುತ್ತಿದ್ದ ಅಭ್ಯಾಸ ಕ್ರಮವನ್ನು ಹೀಗೆ ವರ್ಣಿಸಿದ್ದಾನೆ "ನಾನು ದೇವಾಲಯದ ಮುಂಭಾಗದಲ್ಲಿದ್ದುಕೊಂಡು ಚಿಕ್ಕ ಬಾಲಕರು ಅಲ್ಲಿ ಅಂಕಗಣಿತವನ್ನು ವಿಚಿತ್ರ ರೀತಿಯಲ್ಲಿ ಕಲಿಯುತ್ತಿದ್ದುದನ್ನು ನೋಡಿ ವಿನೋದಿಸಿದ ಸಂಗತಿಯನ್ನು ಇಲ್ಲಿ ವಿವರಿಸುತ್ತೇನೆ. ಅಲ್ಲಿ ನಾಲ್ವರು ಬಾಲಕರಿದ್ದರು. ಅವರೆಲ್ಲರೂ ತಮ್ಮ ಶಿಕ್ಷಕನಿಂದ ಒಂದೇ ಪಾಠವನ್ನು ಕಂಠಪಾಠ ಮಾಡುವುದಕ್ಕಾಗಿ ತೆಗೆದುಕೊಂಡಿದ್ದರು. ಅವರು ಹಿಂದಿನ ಪಾಠಗಳನ್ನು ಮರೆಯಬಾರದೆಂದು ಕಂಠಪಾಠ ಮಾಡುತ್ತಿದ್ದರು. ಅವರಲ್ಲೊಬ್ಬನು ಹಾಡು ಹೇಳುವ ಹಾಗೆ ಒಂದು ತರಹ ಸ್ವರ ತೆಗೆದು ಪಾಠದ ಒಂದು ಭಾಗವನ್ನು ಉಚ್ಚರಿಸಿದನು. (ಈ ಪದ್ಧತಿಯಿಂದ ಮನಸ್ಸಿನ ಮೇಲೆ ಆಳವಾದ ಪ್ರಭಾವ ಉಂಟಾಗುತ್ತದೆ.)

---

20. K.D. Swaminathan : p.186, ಅಡಿಟಿಪ್ಪಣಿ 12

21. ಪಿತ್ರೊಡೆಲ್ಲಾವೆಲ್ಲೆ II : ಪು. 258 ಮತ್ತು ನಂತರ

ಉದಾಹರಣೆಗಾಗಿ, 'ಒಂದ ಒಂದಲೇ ಒಂದೂ' ಹೀಗೆ ಅನ್ನುತ್ತಾ ಅವನು ಅದೇ ಸಂಖ್ಯೆಯನ್ನು ಬರೆದನು. ಲೆಕ್ಕಣಿಕೆಯಿಂದಲ್ಲ. ಕಾಗದದ ಮೇಲೆ ಬರೆಯಲಿಲ್ಲ. ಆದರೆ ಬರೆಯುವುದಕ್ಕಾಗಿಯೇ ಉತ್ತಮವಾದ ಮರಳನ್ನು ಹರಡಿ ಸಿದ್ಧಪಡಿಸಿದ ನೆಲದ ಮೇಲೆ ತನ್ನ ಕೈಬೆರಳಿನಿಂದ ಬರೆದನು. ನಂತರ ಉಳಿದವರೆಲ್ಲರೂ ಅದರಂತೆಯೆ ಒಟ್ಟಿಗೆ ಅಂದು ಅದನ್ನು ಬರೆದರು. ನಂತರ ಮೊದಲನೆಯವನು ಪಾಠದ ಎರಡನೆಯ ಭಾಗವನ್ನು ಅನ್ನುತ್ತಾ ಅದನ್ನು ಬರೆದನು. 'ಎರಡು ಒಂದಲೆ ಎರಡೊ' ಉಳಿದವರು ಅವನ ಕ್ರಮವನ್ನೆ ಅನುಸರಿಸಿದರು. ವಿದ್ಯಾರ್ಥಿಗಳು ಕಾಗದವನ್ನಾಗಲಿ, ಮಸಿಯನ್ನಾಗಲಿ ವ್ಯರ್ಥಮಾಡದೆ ಓದು ಬರಹವನ್ನು ಕಲಿಯುವ ಈ ವಿಧಾನ ನಿಜವಾಗಿಯೂ ಸುಲಭವಾದದ್ದು" ಎಂದು ಹೇಳುತ್ತಾನೆ. ತರಗತಿಯಲ್ಲಿ ಬುದ್ಧಿವಂತವಾದ ವಿದ್ಯಾರ್ಥಿಯೊಬ್ಬ ಅಧ್ಯಾಪನದಲ್ಲಿ ಉಪಾಧ್ಯಾಯರಿಗೆ ನೆರವಾಗುವ ಈ 'ಮಾನಿಟರ್ ಪದ್ಧತಿ'ಯ ಉಲ್ಲೇಖವನ್ನು ನಾವು ಇಲ್ಲಿ ಕಾಣಬಹುದು.[೨೨] ಈ 'ಮಾನಿಟರ್ ಪದ್ಧತಿ'ಯನ್ನು ಪಾಶ್ಚಾತ್ಯರು ಅಭ್ಯಾಸವಾದ ನಂತರ ವಿದ್ಯಾರ್ಥಿಗಳು ಕಾಗದದ ಮೇಲೆ ಬರೆಯುತ್ತಿದ್ದರು. ಅನಂತರ ಓದುವುದು, ಲೆಕ್ಕ ಮಾಡುವುದನ್ನು ಕಲಿಯುತ್ತಿದ್ದರು.

'ಚಿಕ್ಕದೇವರಾಯ ವಂಶಾವಳಿ'ಯಲ್ಲಿ ಚಿಕ್ಕದೇವರಾಯರು (೧೬೭೨-೧೭೦೪) ಪಡೆದ ಶಿಕ್ಷಣದ ವಿವರಗಳು ದೊರೆಯುತ್ತವೆ. ಅವರಿಗೆ ಬೇರೆ ಬೇರೆ ವಿಷಯಗಳನ್ನು ಕಲಿಸಲು ಬೇರೆ ಬೇರೆ ಶಿಕ್ಷಕರಿದ್ದರು. ಕಾವ್ಯ ಶಿಕ್ಷಾಚಾರ್ಯರು ಅವರಿಗೆ ಉಚ್ಚಾರಣಾ ಕ್ರಮವನ್ನೂ ಓದುವುದನ್ನೂ ಕಲಿಸಿದರು. ಈ ಶಿಕ್ಷಣಕ್ಕೆ ಲಿಪಿ ಗ್ರಹಣವೆಂದು ಕರೆದಿದ್ದಾರೆ. ಮತ್ತೊಬ್ಬ ಶಿಕ್ಷಕರು 'ಪದವಾಕ್ಯ ಪ್ರಮಾಣ' ಅಥವಾ ವ್ಯಾಕರಣವನ್ನು ಹೇಳಿಕೊಟ್ಟರು. ಮೂರನೆಯವರು ಅನೇಕ ವಿಷಯಗಳ ಜತೆಗೆ ಚರಿತ್ರೆ ಭೂಗೋಳಗಳನ್ನೊಳಗೊಂಡ ಪುರಾಣಗಳನ್ನು ಕಲಿಸಿದರು. ಚಿಕ್ಕದೇವರಾಯರು ವಾದ್ಯ ಸಂಗೀತವನ್ನು ಕಲಿತು ವೀಣಾವಾದನದಲ್ಲಿ ನಿಪುಣರಾದರು. ಕಡೆಗೆ ಗರುಡಿಮನೆಯಲ್ಲಿ ಅಂಗಸಾಧನೆಯನ್ನು ಕಲಿತರು.[೨೩].

ಈ ಕಾಲದ ವಾಸ್ತುಶಿಲ್ಪದಲ್ಲಿ ಬಿಜಾಪುರದ ಆದಿಲ್‌ಷಹರನ್ನು ಮೀರಿಸುವವರು ಬಹಳ ಕಡಿಮೆ. ಎರಡನೆಯ ಇಬ್ರಾಹಿಮ್ ಸುಲ್ತಾನನ ಗೋರಿ(ಇಬ್ರಾಹಿಮ್ ರೋಜ) ಮತ್ತು ಅದಕ್ಕೆ ಹೊಂದಿಕೊಂಡಿರುವ ಮಸೀದಿ–ಇವು ಅತ್ಯಂತ ಸೊಗಸಾದ ಯಾವುದೇ ಮೊಗಲ್ ಕಟ್ಟಡವನ್ನು ಮರೆಯಿಸಬಲ್ಲವು. ಇವು ಅಲಂಕರಣದಲ್ಲಿ

---

22. K.D.Swaminathan : p. 219-20

23. ಜಿ.ಎಸ್. ದೀಕ್ಷಿತ : ಶಿಕ್ಷಣ ಮತ್ತು ವಿಜ್ಞಾನ. [ಕರ್ನಾಟಕದ ಪರಂಪರೆ II], ಪು. 113-

ಕೊನೆಯ ಮಾತೆಂದು ಹೇಳಬಹುದು. ಅವನ ಮಗ ಮಹಮದ್ ಆಲಿಷಹನು ತನ್ನ ತಂದೆಯನ್ನು ಹಿಂದೆ ಹಾಕಲು ಹೊರಟು ಬೇರೊಂದು ದಾರಿಯನ್ನು ಹಿಡಿದನು. ಇವನು ಅಗಾಧ ಗಾತ್ರದಿಂದ ಅಲಂಕಾರವನ್ನು ಮೀರಿಸಲು ಪ್ರಯತ್ನಪಟ್ಟನು. ಇವನು ಕಟ್ಟಿದ ಗೋಳಗುಂಬಜ್ ಇಂಜನಿಯರಿಂಗ್ ಕ್ಷೇತ್ರದಲ್ಲಿ ಒಂದು ಆಶ್ಚರ್ಯಕರವಾದ ಅದ್ಭುತ ಕಟ್ಟಡ. ಅದರ ೧೨೦ ಅಡಿ ಎತ್ತರದ ಭಾರಿ ಗುಮ್ಮಟ-ಇವು ವಿಶ್ವದ ವಾಸ್ತು ಕೌತುಕಗಳಾಗಿವೆ.[4]

ಆದಿಲ್‌ಷಹರ ನಂತರ ಕರ್ನಾಟಕದಲ್ಲಿ ಹಿಂದೂ ಮುಸ್ಲಿಂ ವಾಸ್ತುಶಿಲ್ಪ ಶೈಲಿಯನ್ನು ಹೈದರ್ ಮತ್ತು ಟಿಪ್ಪು ಪುನರುಜ್ಜೀವನ ಮಾಡಿದರು. ಶ್ರೀರಂಗಪಟ್ಟಣದ ಜುಮ್ಮಾಮಸೀದಿ, ದರಿಯಾದೌಲತ್ ಮತ್ತು ಹೈದರನ ಗೋರಿಯಾದ 'ಗುಂಬಸ್' ಇವೇ ನಿದರ್ಶನಗಳು.

ಹಿಂದೂ ಕಲಾ ಪ್ರಪಂಚಕ್ಕೆ ಕೆಳದಿ ನಾಯಕರು ಗಮನಾರ್ಹವಾದ ಕಾಣಿಕೆಗಳನ್ನು ಸಲ್ಲಿಸಿದ್ದಾರೆ. ದ್ರಾವಿಡ ಮತ್ತು ಹೊಯ್ಸಳ ವಾಸ್ತುಶಿಲ್ಪ ವೈಶಿಷ್ಟ್ಯಗಳ ಸುಂದರ ಸಮನ್ವಯದಲ್ಲಿ ರಚಿತವಾದ ಇಕ್ಕೇರಿಯ ಅಘೋರೇಶ್ವರ ದೇವಾಲಯವು ಅಮೋಘ ಕಲಾಕೃತಿಯಾಗಿದೆ. ಈ ದೇವಾಲಯದಲ್ಲಿರುವ ಮುಖಮಂಟಪದ ಕಂಬಗಳ ಮೇಲಿನ ಕೆತ್ತನೆಯ ಕೆಲಸ ತುಂಬಾ ಆಕರ್ಷಕವಾಗಿದೆ.[5] ಕೆಳದಿ ನಾಯಕರು ಕಟ್ಟಿಸಿದ ಇತರ ಕಟ್ಟಡಗಳಲ್ಲಿ ಬಿದನೂರಿನಲ್ಲಿ ಶಿವಪ್ಪನಾಯಕನ ಅರಮನೆಯ ಅವಶೇಷಗಳನ್ನು ಈಗಲೂ ನೋಡಬಹುದು. ಈ ನಾಯಕರು ರಾಜ್ಯದ ಆಯಕಟ್ಟಿನ ಸ್ಥಳಗಳಲ್ಲಿ ಬಲವಾದ ಕೋಟೆ ಕೊತ್ತಲಗಳನ್ನು ನಿರ್ಮಿಸಿದ್ದರು. ಅವುಗಳಲ್ಲಿ ಭುವನಗಿರಿ ದುರ್ಗದ ಕೋಟೆಯು ಅತ್ಯಂತ ದುರ್ಗಮವಾಗಿದೆ.

ಆದಿಲ್‌ಷಾಹಿಗಳು ಚಿತ್ರಕಲೆಯನ್ನೂ ಪೋಷಿಸಿದರು. ಅಸಾರ್‌ಮಹಲಿನ ಗೋಡೆಗಳ ಮೇಲೆ ನಾನಾ ರೀತಿಯ ಬಣ್ಣ ಬಣ್ಣದ ಚಿತ್ರಗಳಿದ್ದುವು. ಕೆಲವು ಈಗ ಅಳಿಸಿಹೋಗಿವೆ. ಇತರ ಪರಂಪರಾಗತ ಕಲೆಗಳನ್ನು ಉಳಿಸಿದಂತೆ ಕರ್ನಾಟಕದಲ್ಲಿ ಚಿತ್ರಕಲೆಯನ್ನು ಉಳಿಸಿದವರು ಮುಮ್ಮಡಿ ಕೃಷ್ಣರಾಜ ಒಡೆಯರವರು. ಅವರೇ ಬರೆದ 'ತತ್ವನಿಧಿ' ಎಂಬ ಗ್ರಂಥದಲ್ಲಿ ನೂರಾರು ಚಿತ್ರಗಳಿವೆ. ಈ ಗ್ರಂಥ ಪ್ರಕಟವಾದರೂ ವರ್ಣಚಿತ್ರಗಳು ಪ್ರಕಟವಾಗಿಲ್ಲ. ಇವರು ಅನೇಕ ಕಲಾವಿದರಿಗೆ ಪ್ರೋತ್ಸಾಹಕೊಟ್ಟರು. ಅಂಥ ಕಲಾವಿದರಲ್ಲಿ ಚಿತ್ರಗಾರ ವೈ. ಸುಂದರಯ್ಯ, ಎಲ್ಲಪ್ಪ, ತಂಜಾವೂರು ಕೊಂಡಯ್ಯ ಮುಂತಾದವರು ಹೆಸರುವಾಸಿಯಾದವರು. ಶ್ರೀರಂಗಪಟ್ಟಣದಲ್ಲಿ ದರಿಯಾದೌಲತ್ತಿನ

---

4. K.D.Swaminathan : p. 228

5. ಮೈಸೂರು ರಾಜ್ಯ : ಪು. 19-2 ಮೈಸೂರು ಸರ್ಕಾರ, 1996

ಗೋಡೆಯ ಮೇಲೆ ಬರೆಸಿರುವ ಮೈಸೂರಿನ ಯುದ್ಧ ದೃಶ್ಯಗಳೂ, ಮೈಸೂರಿನ ಜಗನ್ಮೋಹನ ಬಂಗಲೆಯ ಮೇಲಂತಸ್ತಿನಲ್ಲಿರುವ ಭಿತ್ತಿ ಚಿತ್ರಗಳೂ, ಅಲ್ಲಿಯ ಚಿತ್ರಶಾಲೆಯಲ್ಲಿ ಪ್ರದರ್ಶನಗೊಂಡಿರುವ ಅನೇಕ ಚಿತ್ರಪಟಗಳೂ ಇವರ ಕಾಲದಲ್ಲಿ ಚಿತ್ರಿತವಾದುವು.[೨೫]

ವಿಜಯನಗರದ ಪತನಾನಂತರ ಸಂಗೀತ ವಿದ್ವಾಂಸರು ಬೇರೆಬೇರೆ ಕಡೆ ಚದುರಿಹೋದರು. ಗೋವಿಂದ ದೀಕ್ಷಿತರೆಂಬ ಕರ್ನಾಟ ಬ್ರಾಹ್ಮಣರು ತಂಜಾವೂರು ರಘುನಾಥ ನಾಯಕನ ಮಂತ್ರಿಯಾಗಿದ್ದು 'ಸಂಗೀತ ಸುಧಾ' ಎಂಬ ಗ್ರಂಥವನ್ನು ಬರೆದರು. ಇವರ ಪುತ್ರ ವೆಂಕಟೇಶ್ವರ ದೀಕ್ಷಿತ ಅಥವಾ ವೆಂಕಟಮುಖಿಗಳು 'ಚತುರ್ದಂಡಿ' ಎನ್ನುವ ಇಂದಿನ ಪದ್ಧತಿಯ ಆಧಾರ ಗ್ರಂಥವನ್ನು ಬರೆದರು. ಇವರ ವಂಶಜರು ಮುಂದೆಯೂ ಇದೇ ರೀತಿ ಸಂಗೀತ ಸೇವೆಯನ್ನು ಮಾಡಿದರು. ೧೭ನೆಯ ಶತಮಾನದ ಅಂತ್ಯಭಾಗದಲಿ ಕೆಳದಿಯ ಅರಸ ಇಮ್ಮಡಿ ಬಸವಪ್ಪನಾಯಕನು 'ಶಿವತತ್ವ ರತ್ನಾಕರ' ಎನ್ನುವ ವಿಶ್ವಕೋಶದಲ್ಲಿ ರಾಗ ಪರಿವಾರ ಪದ್ಧತಿಯನ್ನು ಅನುಸರಿಸಿದ್ದಾನೆ. ಇದೇ ಕಾಲದಲ್ಲಿ ಮುಮ್ಮಡಿ ಚಿಕ್ಕಭೂಪಾಲನು 'ಅಭಿನವ ಭರತ ಸಾರಸಂಗ್ರಹ'ವೆನ್ನುವ ಲಕ್ಷಣಗ್ರಂಥವನ್ನು ಬರೆದನು. ಮುಮ್ಮಡಿ ಕೃಷ್ಣರಾಜರು ಬರೆದ 'ತತ್ವನಿಧಿ'ಯು ಲಕ್ಷಣ ಗ್ರಂಥ.[೨೬]

---

26. ಅದೇ, ಪು. 170-1

ಭಾಗ-ಎರಡು

ಐತಿಹಾಸಿಕ ಲೇಖನಗಳು-ಸಮ್ಮಿಶ್ರ

೧೯

ಆಗ್ನೇಯ ಏಷ್ಯಾ ಮತ್ತು ಕರ್ನಾಟಕ – ಪುರಾತನ ಸಂಬಂಧಗಳು

ಕರ್ನಾಟಕದವರು ಪುರಾತನ ಆಗ್ನೇಯ ಏಷ್ಯಾದ ಇತಿಹಾಸದಲ್ಲಿ ಯಾವ ಪಾತ್ರವನ್ನು ವಹಿಸಿದ್ದರೆನ್ನುವುದನ್ನು ತಿಳಿಸುವುದು ಈ ಪ್ರಬಂಧದ ಉದ್ದೇಶ. ೧೯೧೨ ರಲ್ಲಿ ಸರ್ ಚಾರ್ಲ್ಸ್ ಎಲಿಯಟ್ ಎನ್ನುವ ಬ್ರಿಟಿಷ್ ವಿದ್ವಾಂಸರು ಕಾಂಬೋಜಾದಲ್ಲಿಯ ದೇವಸ್ಥಾನಗಳಿಗೂ ಬಾದಾಮಿ, ಐಹೊಳೆ ಮತ್ತು ಪಟ್ಟದಕಲ್ಲಿನ ದೇವಸ್ಥಾನಗಳಿಗೂ ಕೆಳಕಂಡ ಹೋಲಿಕೆಗಳಿವೆಯೆಂದು ಹೇಳುತ್ತಾರೆ :

೧. ಎರಡೂ ದೇಶಗಳ ದೇವಸ್ಥಾನಗಳಲ್ಲಿಯ ಮುಖ್ಯ ದೇವತೆಗಳು ಹರಿಹರ, ವಾಮನ ಮತ್ತು ನರಸಿಂಹ, ಪಟ್ಟದಕಲ್ಲು ಮತ್ತು ಅಂಕರ್‌ವಾಟಿನಲ್ಲಿ ಸಮುದ್ರಮಥನ ಮತ್ತು ರಾಮಾಯಣದ ಚಿತ್ರಗಳಿವೆ.

೨. ದೇವಸ್ಥಾನಗಳು ಒಂದು ಜಗತಿಯ ಮೇಲೆ ಇವೆ.

೩. ಎರಡೂ ಕಡೆಗಳಲ್ಲಿಯೂ ಇಳಿಜಾರಾದ ಮಾಳಿಗೆ. ಒಳಗಿನ ಗೋಡೆಗಳ ಮೇಲೆ ಉಬ್ಬುವಿಗ್ರಹಗಳು ಮತ್ತು ಹೊರಗಿನ ಗೋಡೆಗಳ ಮೇಲೆ ಜಾಲಾಂದ್ರಗಳಿವೆ.

೪. ಕಾಂಬೋಜಾದ ಅತಿ ಪುರಾತನ ಶಾಸನ ೭ನೇ ಶತಮಾನದ ಆರಂಭದ ಕಾಲಕ್ಕೆ ಸೇರಿದೆ. ಅದರ ಲಿಪಿ ಪಟ್ಟದಕಲ್ಲಿನಲ್ಲಿರುವ ಪಾಪನಾಥ ದೇವಸ್ಥಾನದಲ್ಲಿಯ ಶಾಸನದ ಲಿಪಿಯನ್ನು ಹೋಲುತ್ತದೆ.

೫. ಕಾಂಬೋಜಾದ ರಾಜರ ಹೆಸರುಗಳ ಕೊನೆಗೆ ಇತಿಹಾಸ ವರ್ಮನ್ ಎಂದಿದೆ. (ಕದಂಬರ ಹೆಸರುಗಳು ಹೀಗೆ ಇವೆ.)

೬. ಚಾಲುಕ್ಯರು ಖ್ಮೇರರನ್ನು ಗದ್ವರೆಂದು ಹೇಳುತ್ತಾರೆ. (ಅವರ ಶಾಸನದಲ್ಲಿ ಇವರನ್ನು ಕಮೇರರೆಂದು ಕರೆದಿದೆ.)

೭. ಕಾಂಬೋಜಾದಲ್ಲಿ ರಾಜನನ್ನು ದೇವತೆಯೆಂದು ಪರಿಗಣಿಸಿ ಪೂಜೆ

ಮಾಡುತ್ತಿದ್ದರು. ಚಂಪಾ ಮತ್ತು ಜಾವಾಗಳಲ್ಲಿ ಒಬ್ಬ ರಾಜನು ಒಂದು ದೇವಸ್ಥಾನವನ್ನು ಕಟ್ಟಿದರೆ ಅದರಲ್ಲಿಯ ದೇವರನ್ನು ರಾಜನ ಹೆಸರಿನಿಂದ ಕರೆಯುವ ರೂಢಿಯಿತ್ತು. ಭದ್ರವರ್ಮನು ಶಿವನಿಗೆ ಒಂದು ದೇವಸ್ಥಾನವನ್ನು ಕಟ್ಟಿ ಆ ದೇವರನ್ನು ಭದ್ರೇಶ್ವರನೆಂದು ಕರೆದನು. ಪಟ್ಟದಕಲ್ಲಿನಲ್ಲಿಯೂ ಅದೇ ಪದ್ಧತಿಯಿತ್ತು. ವಿಜಯಾದಿತ್ಯನು ವಿಜೆಯೇಶ್ವರ ದೇವಸ್ಥಾನವನ್ನು, ಲೋಕ ಮಹಾದೇವಿ ಮತ್ತು ತ್ರೈಲೋಕ್ಯ ಮಹಾದೇವಿಯರು ಲೋಕೇಶ್ವರ ಮತ್ತು ತ್ರೈಲೋಕೇಶ್ವರರಿಗೆ ದೇವಸ್ಥಾನಗಳನ್ನು ಕಟ್ಟಿದರು.

೮. ಕರ್ನಾಟಕದಲ್ಲಿದ್ದ ಹಾಗೆ ಕಾಂಬೋಜಾದಲ್ಲಿಯೂ ಪಾಶುಪತರು ಪ್ರಬಲರಾಗಿದ್ದರು. ಮುಂದೆ ಕರ್ನಾಟಕದ ವೀರಶೈವರಲ್ಲಿ ಪ್ರಚಲಿತವಾದ ತತ್ವಗಳು, ವಿಚಾರಗಳು ಕಾಂಬೋಜಾದಲ್ಲಿಯೂ ಇದ್ದವೆಂದು ಹೇಳುತ್ತಾರೆ. ಎಲಿಯಟ್ಟನ ಅಭಿಪ್ರಾಯದಲ್ಲಿ ಇವೆಲ್ಲದರ ತಾತ್ಪರ್ಯವು ಕಾಂಬೋಜಾದಲ್ಲಿ ಬೇರೂರಿದ ಭಾರತೀಯ ಮತ ಮತ್ತು ಸಂಸ್ಕೃತಿ ದಖನ್ನಿನದು.

೧೯೧೨ ರಲ್ಲಿ ಎಲಿಯಟ್ ಬರೆದಿದ್ದನ್ನು ಕಲ್ಕತ್ತಾ ವಿಶ್ವವಿದ್ಯಾಲಯದ ಡಾ॥ ಕಲ್ಯಾಣಕುಮಾರ ದಾಸಗುಪ್ತರು ಅರ್ಧ ಶತಮಾನದ ನಂತರ ಸಮರ್ಥಿಸಿ ಹೀಗೆ ಬರೆದಿದ್ದಾರೆ : "ಅಂಕರ್‌ವಾಟಿನ ದೇವಸ್ಥಾನಗಳಿಗೂ ನಕ್ಷತ್ರಾಕಾರದ ಕರ್ನಾಟಕದ ದೇವಸ್ಥಾನಗಳಿಗೂ ಇರುವ ಹೋಲಿಕೆಗಳು ಅತ್ಯಾಶ್ಚರ್ಯವನ್ನುಂಟು ಮಾಡುತ್ತವೆ. ಕರ್ನಾಟಕ ಮತ್ತು ಕಾಂಬೋಡಿಯಾಗಳ ಮಧ್ಯ ಇದ್ದ ಸಾಂಸ್ಕೃತಿಕ ಸಂಬಂಧಗಳು ವ್ಯಾಪಾರದಿಂದ ಉಂಟಾಗಿರಬೇಕು, ದೇವಸ್ಥಾನಗಳನ್ನು ಕಟ್ಟಿರುವ ರೀತಿ ಅಲ್ಲದೆ ರಾವಣಾನುಗ್ರಹಮೂರ್ತಿಯಂತಹ ಶಿಲ್ಪಗಳು ಎರಡೂ ಕಡೆಯೂ ದೊರೆಯುತ್ತವೆ. ಭದ್ರವರ್ಮನ ಶಾಸನವು ಪಶ್ಚಿಮ ಕರ್ನಾಟಕದಲ್ಲಿ ಪ್ರಚಲಿತವಾಗಿದ್ದ ಪೆಟ್ಟಿಗೆಯಂತಹ ತಲೆ ಕಟ್ಟು ಇರುವ ಲಿಪಿಯಲ್ಲಿ ಬರೆದಿದೆ. ಆರನೆಯ ಶತಮಾನದಲ್ಲಿ ಚಾಲುಕ್ಯರಲ್ಲಿ ರೂಢಿಯಲ್ಲಿದ್ದ ಶಕ ಸಂವತ್ಸರವು ಇಂಡೋಚೀನಾ ಮತ್ತು ಇಂಡೋನೀಶಿಯಾಗಳಲ್ಲಿ ಜಾರಿಗೆ ಬಂತು. ಇವೆಲ್ಲವುಗಳಿಂದ ಭಾರತೀಯ ಸಂಸ್ಕೃತಿಯನ್ನು ಕಾಂಬೋಜಾ ಮತ್ತು ನೆರೆಹೊರೆಯ ಪ್ರಾಂತಗಳಲ್ಲಿ ಕರ್ನಾಟಕವು ಹರಡಿದ್ದು ಕಂಡು ಬರುತ್ತದೆ. ಇನ್ನು ಈ ದಿಶೆಯಲ್ಲಿ ಹೆಚ್ಚಿಗೆ ಮಾಹಿತಿ ದೊರೆಯಬೇಕಾದರೆ ಕನ್ನಡ ಸಾಹಿತ್ಯದ ಅಭ್ಯಾಸ ಸಹಾಯಕವಾಗಬಹುದು."

ಡಾ॥ ದಾಸಗುಪ್ತರ ಊಹೆ ಸರಿಯಾದುದೆಂದು ಅವರಿಗಿಂತ ಮುಂಚೆ ನಡೆಸಿದ ಡಾ ॥ ಎ. ವೆಂಕಟಸುಬ್ಬಯ್ಯನವರ ಪಂಚತಂತ್ರದ ಮೇಲಿನ ಸಂಶೋಧನೆಯಿಂದ ತಿಳಿದುಬಂದಿದೆ. ದುರ್ಗಸಿಂಹನ ಕನ್ನಡ ಪಂಚತಂತ್ರಕ್ಕೆ ವಸುಭಾಗನ ಪಂಚತಂತ್ರವೂ ಆಧಾರವಾಗಿತ್ತು. ಇದೇ ವಸುಭಾಗನ ಪಂಚತಂತ್ರವು ಇಂಡೋನೀಶಿಯಾದ

ತಂತ್ರಿಯೆನ್ನುವ ಗ್ರಂಥಕ್ಕೂ, ತೀಯಾಸದ ಮುಲ್ಲಾ ತಂತ್ರ್ಯೆಯೆನ್ನುವ ಗ್ರಂಥಕ್ಕೂ ಮತ್ತು ಸಂಸ್ಕೃತದ ತಂತ್ರೋಪಖ್ಯಾನಕ್ಕೂ ಆಧಾರವಾಗಿತ್ತೆಂದು ಡಾ ॥ ವೆಂಕಟಸುಬ್ಬಯ್ಯನವರು ತೋರಿಸಿಕೊಟ್ಟಿದ್ದಾರೆ.

ಕರ್ನಾಟಕದ ಕೆಲವು ಕಡೆ ಪಂಚತಂತ್ರದ ಕಥೆಗಳನ್ನಾಧರಿಸಿದ ಶಿಲ್ಪಗಳು ಕಂಡುಬರುತ್ತವೆ. ಈ ಸ್ಥಳಗಳಲ್ಲಿ ಕೆಲವು ಯಾವೆಂದರೆ ಪಟ್ಟದಕಲ್ಲು, ಬಳ್ಳಿಗಾವೆ ಮತ್ತು ಶಿರಸಿಯ ಹತ್ತಿರವಿರುವ ಎಸಳೆ, ಜಾವಾದಲ್ಲಿ ಮೆಂದುತ್, ಪನತರನ್, ಚಂಡಿಜಾಗೊಗಳಲ್ಲಿ ಪಂಚತಂತ್ರ ಕಥೆಗಳು ಶಿಲ್ಪದಲ್ಲಿ ಕಾಣಿಸಿಕೊಂಡಿವೆ.

ಡಾ॥ ಎಸ್.ನಾಗರಾಜು ಇವರು ಮೇಲೆ ಹೇಳಿದ್ದನ್ನು ಸಮರ್ಥಿಸಿ, ಆಗ್ನೇಯ ಏಷ್ಯಾ ಮತ್ತು ಕರ್ನಾಟಕ ಮತ್ತು ದಕ್ಷಿಣ ಭಾರತದಲ್ಲಿ ಪ್ರಚಲಿತವಿರುವ ರಾಮಾಯಣ ಮತ್ತು ಮಹಾಭಾರತ ಕಥೆಗಳು ಆಗ್ನೇಯ ಏಷ್ಯಾದಲ್ಲಿ ಹರಡಿವೆಯೊ ಹೇಗೊ ಎನ್ನುವುದನ್ನು ನೋಡಬೇಕೆನ್ನುತ್ತಾರೆ. ಕರ್ನಾಟಕದ ವಾಸ್ತುಶಿಲ್ಪದ ಬೆಳವಣಿಗೆ ಮತ್ತು ಆಗ್ನೇಯ ಏಷ್ಯಾದ ವಾಸ್ತುಶಿಲ್ಪದ ಬೆಳವಣಿಗೆಗಳಲ್ಲಿಯ ಸಾಮ್ಯಗಳನ್ನು ಹೆಚ್ಚು ಆಳವಾಗಿ ಅಭ್ಯಾಸ ಮಾಡಬೇಕೆಂದು ಹೇಳುತ್ತಾರೆ. ಈ ರೀತಿಯಾಗಿ ಲಿಪಿ, ಸಾಹಿತ್ಯ ಮತ್ತು ವಾಸ್ತುಶಿಲ್ಪಗಳಲ್ಲಿ ಎರಡೂ ಭಾಗಗಳಲ್ಲಿಯೂ ಸಾಮ್ಯಗಳನ್ನು ಹೆಚ್ಚು ಆಳವಾಗಿ ಅಭ್ಯಸಿಸುವ ಅಗತ್ಯವನ್ನು ಇದುವರೆಗೂ ಹೇಳಿದ್ದರಿಂದ ತಿಳಿದುಕೊಳ್ಳಬಹುದು. ಯಾಕೆಂದರೆ ನಮ್ಮ ಸಂಸ್ಕೃತಿಯ ಅತ್ಯಂತ ಗಾಢವಾದ ಅಭ್ಯಾಸವನ್ನು ಮಾಡಿದ ಡಾ॥ ಆನಂದಕುಮಾರಸ್ವಾಮಿಯವರು ಹೇಳಿದ ಹಾಗೆ, ಕಾಂಬೋಡಿಯಾ, ಚಂಪಾ ಮತ್ತು ಜಾವಾಗಳ ಕಲೆ ಮತ್ತು ಸಂಸ್ಕೃತಿಗಳಲ್ಲಿ ದುಖಿನ್ನಿನ ಮೂಲಗಳಿವೆಯೆ ವಿನಾ ದಕ್ಷಿಣ ಭಾರತದ ಮೂಲಗಳಿಲ್ಲ.

ಇಷ್ಟೆಲ್ಲಾ ಕರ್ನಾಟಕದವರು ಅಗ್ನೇಯ ಏಷ್ಯಾದಲ್ಲಿ ಸಂಸ್ಕೃತಿ ಪ್ರಸಾರ ಮಾಡಿದರು, ಇಲ್ಲವೆ ಮಾಡಿರಬಹುದು ಎಂದು ಹೇಳುತ್ತೀರಿ, ಇಂತಹ ಕರ್ನಾಟಕದ ಹೆಸರು ಒಂದು ಸಲವಾದರೂ ಎಲ್ಲಿಯಾದರೂ ಬರುತ್ತದೆಯೆ ಎಂದು ಯಾರಾದರೂ ಕೇಳಬಹುದು. ಅದಕ್ಕೆ ಉತ್ತರ, ಒಂದು ಸಲ ಬರುತ್ತದೆಂದು ಹೇಳಬಹುದು.

೧೩೬೫ರಲ್ಲಿ, ಒಬ್ಬ ಮಜಪಹಿತ್ ವಂಶದ ಜಾವಾದ ದೊರೆಯ ವೈಭವವನ್ನು ವರ್ಣಿಸುವ ನಗರ ಕೆರ್ತಾಗಮವೆನ್ನುವ ಗ್ರಂಥದಲ್ಲಿ ಜಾವಾಕ್ಕೆ ಎಲ್ಲಿ ಎಲ್ಲಿಂದ ಪ್ರವಾಸಿಗಳು ಬರುತ್ತಿದ್ದರೆಂದು ವರ್ಣಿಸುವಾಗ ಈ ರೀತಿ ಹೇಳಿದೆ : "All kinds of people have continually come from other countries in multitudes. They are China, Yavana, Champa, Karnataka, Goda (Gaur) and Siam. These are places from where they come.

They come by ship with numerous merchants; monks and Brahmins are the principal ones who as they come are regaled and are well pleased during their stay."

ಈ ಉಲ್ಲೇಖದಿಂದ ಜಾವಾಕ್ಕೆ ಭಾರತದಿಂದ ಕರ್ನಾಟಕ ಮತ್ತು ಬಂಗಾಳದಿಂದ ವರ್ತಕರು, ಭಿಕ್ಷುಗಳು ಮತ್ತು ಬ್ರಾಹ್ಮಣರು ಹಡಗಿನಲ್ಲಿ ಬಹು ಸಂಖ್ಯೆಯಲ್ಲಿ ಹೋಗಿ ಅಲ್ಲಿ ಸುಖವಾಗಿದ್ದರೆಂದು ತಿಳಿಯಬರುತ್ತದೆ.

ಇದುವರೆಗೂ ಈ ವಿಷಯದ ಅಭ್ಯಾಸವು ಸಾಕಷ್ಟು ಆಗಿಲ್ಲ. ಎರಡು ಭಾಗಗಳಲ್ಲಿಯು ಸಾಹಿತ್ಯ, ಶಾಸನ ಮತ್ತು ಕಲೆಗಳ ಅಭ್ಯಾಸದ ಅಗತ್ಯವಿದೆಯೆನ್ನುವುದರಲ್ಲಿ ಸಂಶಯವಿಲ್ಲ.

ಆಧಾರಗಳ ಬಗ್ಗೆ ಟಿಪ್ಪಣಿ

ಸರ್ ಚಾರ್ಲ್ಸ್ ಈಲಿಯಟ್‌ನ Hinduism and Buddhism ಎನ್ನು ಮೂರು ಸಂಪುಟಗಳ ಗ್ರಂಥದಲ್ಲಿ ಈ ಮತಗಳು ಭಾರತದಲ್ಲಿ ಹೇ ಬೆಳೆದವೆನ್ನುವುದನ್ನು ಹೇಳುವುದಲ್ಲದೆ, ಆಗ್ನೇಯ ಏಷ್ಯಾ ಮತ್ತು ಚೀನಾಗಳಲ್ಲಿಯು ಅವುಗಳ ಇತಿಹಾಸವನ್ನು ಹೇಳಿದೆ. ಅದರ ೩ನೇ ಸಂಪುಟ ೧೦೬ನೇ ಪುಟದಿಂ ಮುಂದೆ ಕರ್ನಾಟಕ ಮತ್ತು ಆಗ್ನೇಯಾ ಏಷ್ಯಾದಲ್ಲಿಯ ದೇವಸ್ಥಾನಗಳಲ್ಲಿ ಸಾಮ್ಯವನ್ನು ತೋರಿಸಿಕೊಟ್ಟಿದೆ. ಈ ಗ್ರಂಥವು ಹಿಂದೂ ಮತ್ತು ಬೌದ್ಧ ಮತಗ ತತ್ವಗಳನ್ನು ತಿಳಿಸಿಕೊಡುವುದಲ್ಲದೆ ಅವುಗಳು ಪರದೇಶಗಳಲ್ಲಿ ಹರಡಿರುವುದನ ತಿಳಿಸುತ್ತದೆ. ಇದು ೧೯೧೨ರಲ್ಲಿ ಮೊದಲನೆ ಸಲ ಪ್ರಕಟವಾಯಿತು. ಇತ್ತೀಚ ಇದರ ಪುನರ್ಮುದ್ರಣವಾಗಿದೆ. ನಾನು ಮೊದಲನೆಯ ಆವೃತ್ತಿಯನ ಉಪಯೋಗಿಸಿದ್ದೇನೆ.

ಕಲ್ಕತ್ತಾ ವಿಶ್ವವಿದ್ಯಾಲಯದ ಪುರಾತನ ಭಾರತೀಯ ಇತಿಹಾಸ ಮ ಸಂಸ್ಕೃತಿ ವಿಭಾಗದಲ್ಲಿ ಕೆಲಸ ಮಾಡುತ್ತಿರುವ ಡಾ ॥ ಕಲ್ಯಾಣಕುಮಾರ ದಾಸಗುಪ್ತ ದಕ್ಷಿಣ ಭಾರತದ ಅದರಲ್ಲಿಯೂ ಕರ್ನಾಟಕದ ಕಲೆಯ ಇತಿಹಾಸದಲ್ಲಿ ತಜ್ಞ ಡಾ ॥ ಎಸ್.ಪಿ. ಸೆನ್ ಇವರು ಸಂಪಾದಿಸಿರುವ Sources of the History India ಮೊದಲನೆಯ ಸಂಪುಟದಲ್ಲಿ ಕರ್ನಾಟಕ ಇತಿಹಾಸದ ಆಧಾರಗಳು ಎನ ಡಾ॥ ದಾಸಗುಪ್ತರ ಲೇಖನದಲ್ಲಿ ಮೇಲೆ ಹೇಳಿದ ಅವರ ಅಭಿಪ್ರಾಯಗಳಿವೆ.

ಹೈದರಾಬಾದ್ ವಿಶ್ವವಿದ್ಯಾಲಯದ ಇತಿಹಾಸ ವಿಭಾಗದಲ್ಲಿ ಅಧ್ಯಾಪಕರಾಗಿದ ಡಾ॥ ಎಸ್. ನಾಗರಾಜು ಇವರ 'ಆಗ್ನೇಯ ಏಷ್ಯಾದೊಡನೆ ಕರ್ನಾಟಕದ ಸಾಂಸ್ಕ

ಸಂಬಂಧ' ಎಂಬ ಲೇಖನವು 'ಪ್ರಬುದ್ಧ ಕರ್ನಾಟಕ', ಸಂಪುಟ ೫೧, ಸಂಚಿಕೆ ೩ ರಲ್ಲಿ (೧೯೬೯) ಇದೆ. ಈ ಲೇಖನದಿಂದ ಮೇಲೆ ಹೇಳಿದ ಅವರ ಅಭಿಪ್ರಾಯಗಳನ್ನು ನಾನು ಉದಾಹರಿಸಿದ್ದೇನೆ.

Harry J. Bende ಯವರು ಸಂಪಾದಿಸಿದ The World of South-East Asia, Selected Readings ಎನ್ನುವ ಗ್ರಂಥದಲ್ಲಿಯ The Legendary Grandeur of Majapahit ಎನ್ನುವ ಅಧ್ಯಾಯದಲ್ಲಿ ೪೬ನೇ ಪುಟದಲ್ಲಿ ಈ ಲೇಖನದಲ್ಲಿಯ ಕೊನೆಯ ಉದ್ಧರಣವು ಇದೆ.

■

೨೦

ರಾಷ್ಟ್ರಕೂಟರ ಇಂದ್ರ III ಮತ್ತು ಇಂದ್ರ IV (ಟಿಪ್ಪಣಿ)

ಇಂದ್ರ III

ರಾಷ್ಟ್ರಕೂಟ ಅರಸ (೯೧೪-೨೯) ೨ನೇ ಕೃಷ್ಣನ ಮೊಮ್ಮಗ. ಜಗತ್ತುಂಗನ ಮಗ. ಇವನಿಗೆ ನಿತ್ಯವರ್ಷ, ರಟ್ಟಮಾರ್ತಾಂಡ, ರಟ್ಟಕಂದರ್ಪ ಎಂಬ ಬಿರುದುಗಳಿದ್ದುವು. ಜಗತ್ತುಂಗನು ಕೃಷ್ಣನ ಆಳ್ವಿಕೆಯಲ್ಲೇ ಗತಿಸಿದ್ದರಿಂದ, ಈತ ತನ್ನ ಅಜ್ಜನ ಅನಂತರ ರಾಷ್ಟ್ರಕೂಟ ರಾಜ್ಯವನ್ನು ವಹಿಸಿಕೊಂಡ. ಇವನ ವಿಧ್ಯುಕ್ತ ಅಭಿಷೇಕ ೯೧೫ರಲ್ಲಿ ಕುರುಂದಕ (ಕುರಂದ್ವಾಡ) ಕ್ಷೇತ್ರದಲ್ಲಿ ನಡೆಯಿತು.

ಪಟ್ಟಕ್ಕೆ ಬರುತ್ತಿದ್ದಂತೆಯೇ ಯುವ ಇಂದ್ರನಿಗೆ ತನ್ನ ಶೌರ್ಯ ಪ್ರದರ್ಶನವನ್ನು ಮಾಡುವ ಅವಕಾಶ ಒದಗಿ ಬಂದಿತು. ಪರಮಾರ ಕುಲದ ರಾಜಕುಮಾರ ಉಪೇಂದ್ರ ರಾಷ್ಟ್ರಕೂಟ ರಾಜ್ಯದ ಉತ್ತರದ ಭಾಗದ ಮೇಲೆ ಎರಗಿ, ಗೋವರ್ಧನ ಪ್ರಾಂತ್ಯವನ್ನು (ನಾಸಿಕ) ಆಕ್ರಮಿಸಿದ. ಇಂದ್ರ ಅವನನ್ನು ಎದುರಿಸಿ ಓಡಿಸಿದ. ಅನಂತರ ತನ್ನ ದೃಷ್ಟಿಯನ್ನು ಉತ್ತರ ಭಾರತದತ್ತ ಹರಿಸಿದ. ೯೧೦ ರಲ್ಲಿ ಗೂರ್ಜರ ಪ್ರತೀಹಾರ ಮಹೇಂದ್ರಪಾಲ ಮೃತನಾಗಿದ್ದು, ಅವನ ಮಕ್ಕಳು ಇಮ್ಮಡಿ ಭೋಜ ಮತ್ತು ಮಹೀಪಾಲರಲ್ಲಿ ಸಿಂಹಾಸನಕ್ಕಾಗಿ ಕಲಹ ನಡೆಯುತ್ತಿತ್ತು. ಭೋಜ ತಂದೆಯ ಅನಂತರ ಪಟ್ಟವನ್ನೇರಿದರೂ ಮಹೀಪಾಲ ಚಾಂದೇಲರ ಸಹಾಯದಿಂದ ಭೋಜನನ್ನು ಸೋಲಿಸಿ ರಾಜನಾಗಿದ್ದ. ಅಲ್ಲಿನ ರಾಜಕೀಯ ಪರಿಸ್ಥಿತಿಯಲ್ಲಿ ಅಸ್ತವ್ಯಸ್ಥತೆ ಉಂಟಾಗಿದ್ದ ಈ ಸಂದರ್ಭದಲ್ಲಿ ಇಂದ್ರ ಉತ್ತರ ಭಾರತಕ್ಕೆ ನುಗ್ಗಿದ (೯೧೬). ಕಾಲ್ಪಿ ಎಂಬಲ್ಲಿ ಯಮುನೆಯನ್ನು ದಾಟಿ ಕನೂಜಿಗೆ ಮುತ್ತಿಗೆ ಹಾಕಿದ. ಉತ್ತರ ಭಾರತದ ಚಕ್ರಾಧಿಪತ್ಯಗಳ ರಾಜಧಾನಿಯಾಗಿ ೩೦೦ ವರ್ಷಕ್ಕೂ ಮೇಲ್ಪಟ್ಟು ಮೆರೆದಿದ್ದ ಕನೂಜನ್ನು ರಾಷ್ಟ್ರಕೂಟ ಸೈನ್ಯ ವಶಪಡಿಸಿಕೊಂಡಿತು. ಮಹೀಪಾಲ ಕನೂಜಿನಿಂದ ತನ್ನ ಸ್ನೇಹಿತ ಚಾಂದೇಲ ಅರಸ ಹರ್ಷನ ರಾಜಧಾನಿ ಮಹೋಬಕ್ಕೆ ಓಡಿಹೋದ. ಇಂದ್ರನ ಸಾಮಂತ ಚಾಳುಕ್ಯ ನರಸಿಂಹ ಮಹೀಪಾಲನ ಬೆನ್ನಟ್ಟಿದ. ಸಿಡಿಲಿನಿಂದ ಘಾಸಿಯಾದಂತೆ ಮಹೀಪಾಲ ಆಹಾರ – ನಿದ್ರೆಯನ್ನು ತ್ಯಜಿಸಿ ಓಡಿದ. ಬೆನ್ನಟ್ಟುತ್ತಿದ್ದ

ನರಸಿಂಹ ತನ್ನ ಕುದುರೆಗಳನ್ನು ಗಂಗಾ–ಯಮುನಾ ಸಂಗಮದಲ್ಲಿ ಸ್ನಾನಮಾಡಿ
ಕೀರ್ತಿವಂತನಾದ' ಎಂದು ಪಂಪ ಈ ಸನ್ನಿವೇಶವನ್ನು ವರ್ಣಿಸಿದ್ದಾನೆ. ಇಂದ್ರ
ಉತ್ತರ ದೇಶದ ದಂಡಯಾತ್ರೆ ಯಶಸ್ವಿಯಾಗಿತ್ತು. ಆದರೆ ಅಲ್ಲಿ ಬಹುಕಾ
ನಿಲ್ಲದೆ ತನ್ನ ದೇಶಕ್ಕೆ ಮರಳಿದ. ಇತ್ತ ವೆಂಗಿ ಸಿಂಹಾಸನಕ್ಕಾಗಿ ಪೂರ್ವ ಚಾಳು
ವಂಶದ ಹಲವರು ಸೆಣಸುತ್ತಿದ್ದರು. ಇಂದ್ರ ಈ ಮಧ್ಯೆ ಪ್ರವೇಶಿಸಿ ಕೊನೆಗೆ ತ
ಕಡೆಯುವನಾದ ಯುದ್ಧಮಲ್ಲನನ್ನು ಅರಸನನ್ನಾಗಿ ಮಾಡಿದ (ಸು. ೯೨೮
ಯುದ್ಧಮಲ್ಲನಿಗೆ ರಾಷ್ಟ್ರಕೂಟ ಸೇನಾನಿ ಶ್ರೀವಿಜಯ ಬಹು ಸಹಾಯ ಮಾಡಿದ್ದ
ಅನೇಕ ಶಾಸನಗಳಿಂದ ತಿಳಿಯುತ್ತದೆ.

ಇಂದ್ರ ೧೪ ವರ್ಷ ಆಳಿ ೯೨೯ರಲ್ಲಿ ಮೃತನಾದ. ಕಳಚುರಿ ಅಣ್ಣಮದೇವ
ಮಗಳನ್ನು ಇಂದ್ರ ಮದುವೆಯಾಗಿದ್ದ. ಇವನಿಗೆ ಅಮೋಘವರ್ಷ II ಮ
ಗೋವಿಂದ ಎಂಬ ಇಬ್ಬರು ಮಕ್ಕಳಿದ್ದರು. ಅಮೋಘವರ್ಷ ಇಂದ್ರ
ಉತ್ತರಾಧಿಕಾರಿಯಾದ.

ಇಂದ್ರ IV

ರಾಷ್ಟ್ರಕೂಟ ವಂಶದ ರಾಜಕುಮಾರ, ೩ನೇ ಕೃಷ್ಣನ ಮೊಮ್ಮಗ. ಇವ
ರಟ್ಟಕಂದರ್ಪ, ರಾಜಮಾರ್ತಾಂಡ, ಕೀರ್ತಿನಾರಾಯಣ, ಕಲಿಗಳೊಳ್ಗ
ಬೀರರಬೀರ, ಇಜೆವಬೆಡಂಗ, ಗೆಡೆಗಳಾಭರಣ, ಚಲದಗ್ಗಳಿ, ಚಲದಂಕಕಾರ
ಈ ಬಿರುದುಗಳಿರುವುದನ್ನು ನೋಡಿದರೆ ಯುದ್ಧದಲ್ಲಿಯೂ ಆಟದಲ್ಲಿಯ
ಸಮರ್ಥನೆಂದು ತಿಳಿಯುತ್ತದೆ. ೯೭೩ರ ಕೊನೆಗೆ ಚಾಳುಕ್ಯ ವಂಶದ ಎರಡನೆ
ತೈಲಪ ರಾಷ್ಟ್ರಕೂಟರ ಎರಡನೆಯ ಕರ್ಕನನ್ನು ಪದಚ್ಯುತಗೊಳಿಸಿ ಕಲ್ಯಾ
ಚಾಲುಕ್ಯರ ಆಳ್ವಿಕೆಯನ್ನು ಆರಂಭಿಸಿದ್ದರಿಂದ ಇವನು ರಾಜ್ಯವಾಳಲಿಲ್ಲ. ೯
ರಲ್ಲಿ ಸಲ್ಲೇಖನ ವ್ರತದಿಂದ ಶ್ರವಣಬೆಳಗೊಳದಲ್ಲಿ ಅಸುನೀಗಿದ.

೨೧

ಹಳೇಬೀಡು ಪುರಾತನ ಚರಿತ್ರೆ : ಪರಿಶೀಲನೆ

'ಹಳೇಬೀಡು ಪುರಾತನ ಚರಿತ್ರೆ' ಎನ್ನುವ ಈ ಗ್ರಂಥವು ಗತಿಸಿದ ಹಳೇಬೀಡು ಪಟೇಲ್ ಶಿವನಂಜೇಗೌಡರಿಂದ ರಚಿಸಲ್ಪಟ್ಟು ಬೆಂಗಳೂರು ಗೌರ್ನಮೆಂಟ್ ಮುದ್ರಾಲಯದಲ್ಲಿ ೧೯೦೯ರಲ್ಲಿ ಮುದ್ರಿಸಲ್ಪಟ್ಟಿತು. ಈ ಪುಸ್ತಕದ ಒಂದು ಪ್ರತಿಯನ್ನು ದಿವಂಗತ ಶ್ರೀ ಸಕಲೇಶಪುರದ ಶ್ರೀಕಂಠಯ್ಯನವರ ಮಕ್ಕಳು ಶ್ರೀ ಎಸ್. ರಾಮಚಂದ್ರ ಅವರು ನನಗೆ ಓದಲಿಕ್ಕೆ ಕೊಟ್ಟಿದ್ದಕ್ಕೆ ಅವರಿಗೆ ನನ್ನ ವಂದನೆಗಳು. ಈ ಲೇಖನದ ಉದ್ದೇಶ ಈ ಪುಸ್ತಕದ ಕಿರುಪರಿಚಯ. ಈ ಪುಸ್ತಕದ ಕೊನೆಯ ಭಾಗದಲ್ಲಿ ಶ್ರವಣಬೆಳ್ಗೊಳದಲ್ಲಿ ಗಲಾಟೆಯಾಯಿತು, ಆಗ (೧೮೯೬-೯೭) ಗುಜರಾತಿ ದೇಶಸ್ಥರು ಅಲ್ಲಿಯ ಜೈನಧರ್ಮಗ್ರಂಥಗಳನ್ನು ಮೂಡಬಿದಿರೆಗೆ ರವಾನಿಸಿದರು ಎಂದಿದೆ.[೧] ೧೯೦೯ ರಲ್ಲಿ ಇದರ ಮುದ್ರಣವಾಗಿರುವುದರಿಂದಲೂ ಅಷ್ಟೊತ್ತಿಗೆ ಲೇಖಕರು ಗತಿಸಿದ್ದರೆಂದು ಹೇಳಿರುವುದರಿಂದಲೂ ಈ ಗ್ರಂಥದ ಬರವಣಿಗೆ, ಲೇಖಕರು ಗತಿಸಿದ್ದು ಮತ್ತು ಪುಸ್ತಕದ ಮುದ್ರಣಗಳು ಕ್ರಮವಾಗಿ ೧೮೯೭ ರಿಂದ ೧೯೦೯ ರೊಳಗೆ ಆದವು. ಗ್ರಂಥವನ್ನು ಸು. ೧೯೦೦ ರಲ್ಲಿ ಬರೆದರೆಂದು ಇಟ್ಟುಕೊಳ್ಳಬಹುದು.

ಹಿಂದಿನ ಕಾಲದ ಪಟೇಲರಿಗೆ ತಮ್ಮ ಊರಿನ ಬಗ್ಗೆ ಇದ್ದ ಅಭಿಮಾನಕ್ಕೆ ಈ ಪುಸ್ತಕ ಒಂದು ನಿದರ್ಶನ. ಈ ಪಟೇರಲ್ಲಿ ಅಭಿಮಾನದ ಜತೆಗೆ ವಿದ್ವತ್ತು ಮತ್ತು ವಿನಯಗಳು ಕೂಡಿದ್ದವು. ಪೀಠಿಕೆಯಲ್ಲಿನ ಈ ವಾಕ್ಯ ಇದನ್ನು ಸ್ಪಷ್ಟಪಡಿಸುತ್ತದೆ: "ಅಲ್ಪಜ್ಞನಾದ ನಾನು ಹಳೇಬೀಡು ಪುರಾತನ ಚರಿತ್ರೆಯನ್ನು ಸಂಗ್ರಹಿಸಿಕೊಂಡು ಸಿಕ್ಕಿದ ಶಿಲಾಶಾಸನದ ಸಹಾಯದಿಂದಲೂ ಪುರಾತನ ಕವಿಗಳಿಂದ ರಚಿತವಾದ ಕಾವ್ಯಗಳ ಆಧಾರದಿಂದಲೂ ಪ್ರತ್ಯಕ್ಷ ತೋರುವ ಸಾಕ್ಷಿಯಿಂದಲೂ ತೋಚಿದಮಟ್ಟಿಗೆ ವಿವರಿಸುತ್ತೇನೆ." ಈ ವಾಕ್ಯದಲ್ಲಿ ಹೇಳಿರುವ ಹಾಗೆ ರಾಘವಾಂಕ ಮತ್ತು ಪಿಡಿಯುಪದ್ಮರಸರ ಕಾವ್ಯಗಳನ್ನೂ, ಚೆನ್ನಬಸವಪುರಾಣವನ್ನೂ ಲೇಖಕರು ಉಪಯೋಗಿಸಿಕೊಂಡಿದ್ದಾರೆ.

ಈ ಪುಸ್ತಕದಲ್ಲಿ ಎರಡು ಭಾಗಗಳಿವೆ. ಮೊದಲಿನ ಭಾಗದಲ್ಲಿ ೩೦ ಪುಟಗಳಲ್ಲಿ

ಹೊಯ್ಸಳರ ಇತಿಹಾಸವಿದೆ. ಎರಡನೇ ಭಾಗದಲ್ಲಿ ೩೧ ರಿಂದ ೧೨೩ ಪುಟಗಳವರೆಗೆ ಹೊಯ್ಸಳೇಶ್ವರ ದೇವಸ್ಥಾನದ ವಿವರವಾದ ವರ್ಣನೆಯಿದೆ. ಮೊದಲಿನ ಭಾಗದಲ್ಲಿ 'ಹೊಯ್ಸಳ' ಹೆಸರು ಹೇಗೆ ಬಂತು, ಮೂಲಪುರುಷನು ಆದಮೇಲೆ ರಾಜರು ಯಾರು ಯಾರು ಆಳಿದರು, ಅವರ ಆಳ್ವಿಕೆಯಲ್ಲಿ ಮುಖ್ಯವಾದ ಘಟನೆಗಳು ಯಾವು– ಈ ವಿಷಯಗಳಿವೆ. ಹೊಸದಾಗಿ ತಿಳಿದುಕೊಳ್ಳುವಂಥ ಒಂದೆರಡು ವಿಷಯಗಳಿವೆ. ಹೊಯ್ಸಳ ಇತಿಹಾಸವಲ್ಲದೆ, ವಿಜಯನಗರ ಕಾಲದಲ್ಲಿ ಹಳೇಬೀಡಿನಲ್ಲಿ ಆದ ಕೆಲವು ಬದಲಾವಣೆಗಳನ್ನು ಲೇಖಕರು ಹೇಳುತ್ತಾರೆ. ಇವೂ ಹೊಸವು. ಈಗ ಇವೆಲ್ಲಾ ಯಾವು ಅನ್ನುವುದನ್ನು ನೋಡೋಣ.

ಎರಡನೇ ನರಸಿಂಹಬಲ್ಲಾಳನು ಸಂಸ್ಕೃತ, ಕನ್ನಡ, ಅರವು, ತೆಲುಗು, ಮರಾಠಿ, ಮೊದಲಾದ ವಿದ್ಯಾಶಾಲೆಗಳನ್ನು ಇಡಿಸಿದನೆಂದು ಚರಿತ್ರೆಯಿಂದಲೂ ಶಾಸನದಿಂದಲೂ ತಿಳಿಯಬರುತ್ತೆಂದು ಈ ಪುಸ್ತಕದಲ್ಲಿದೆ.[2] ಮೂರನೇ ನರಸಿಂಹಬಲ್ಲಾಳನ ತಿರುಮಕೂಡಲ ತಾಲ್ಲೂಕಿನ ತಡಿ ಮಾಲಿಂಗಿ ಶಾಸನದಿಂದ ಈ ತರಹ ಶಾಲೆಗಳಿದ್ದವೆನ್ನುವುದಕ್ಕೆ ಒಂದು ಉದಾಹರಣೆಯಿದೆ. ೧೨೯೦ನೇ ಇಸ್ವಿಯ ಈ ಶಾಸನದಲ್ಲಿ "ನಾಗರಕಂನಡ ತಿಗುಳಾರ್ಯ್ಯವನೋದಿಸುವ ಬಾಲಶೀಕ್ಷೆ ಉಪಾಧ್ಯರ ಜೀವಿತಕ್ಕೆ ವರ್ಷ ೧ಕ್ಕೆ ಗದ್ಯಾಣ ಆರು" ಎಂತಿದೆ.[3] ತಿಗುಳಾರ್ಯ್ಯ ಎಂದು ಈ ಶಾಸನದಲ್ಲಿ ಬರುವ ಶಬ್ದಕ್ಕೆ ಇದುವರೆಗೂ ತಮಿಳು ಮರಾಠಿ ಎಂದು ಅರ್ಥಮಾಡಿ, ಸಂಸ್ಕೃತ, ಕನ್ನಡ, ತಮಿಳು, ಮರಾಠಿಗಳನ್ನು ಮಾಲಂಗಿಯಲ್ಲಿ ಕಲಿಸುವ ವ್ಯವಸ್ಥೆಯಿತ್ತೆಂದು ಹೇಳಲಾಗಿದೆ. ಆದರೆ ತಿಗುಳಾರಿ ಎನ್ನುವ ಹಳೆಯ ಲಿಪಿ ನಮ್ಮಲ್ಲಿತ್ತು. ಈ ಲಿಪಿಯಲ್ಲಿರುವ ಅನೇಕ ಹಸ್ತಪ್ರತಿಗಳು ಪಶ್ಚಿಮ ತೀರದ ಪ್ರದೇಶದಲ್ಲಿ ಸಿಗುತ್ತವೆ. ಆದ್ದರಿಂದ ಈ ಶಾಸನದಲ್ಲಿ ಬರುವ ತಿಗುಳಾರ್ಯ್ಯ ಶಬ್ದಕ್ಕೆ ಈ ಲಿಪಿಯನ್ನು ಕಲಿಸಿತ್ತಿದ್ದರೆಂದು ಅರ್ಥ ಮಾಡಬೇಕೆನ್ನುವ ಅಭಿಪ್ರಾಯ ಈಚೆಗೆ ಬಂದಿದೆ. ಆದರೆ ಪ್ರಸ್ತುತ ಪುಸ್ತಕದಲ್ಲಿ ಮೇಲೆ ಹೇಳಿದ ಹಾಗೆ ಅರ ಮರಾಠಿಗಳನ್ನು ಶಾಲೆಗಳಲ್ಲಿ ಕಲಿಸುವ ಏರ್ಪಾಡು ಇತ್ತೆನ್ನುವುದನ್ನು ನೋಡಿದ ತಿಗುಳಾರ್ಯ್ಯ ಶಬ್ದಕ್ಕೆ ಮೊದಲಿನ ಅರ್ಥವನ್ನು ಮಾಡಬಹುದೆಂದು ತೋರುತ್ತದ

ವಿಜಯನಗರ ಸ್ಥಾಪನೆಯ ಬಗ್ಗೆ ತೆಲುಗು ಮತ್ತು ಕನ್ನಡ ಜನಗಳ ವಾದವಿರುವುದು ಸರ್ವವಿದಿತ. ಈ ಪುಸ್ತಕದಲ್ಲಿ ಕನ್ನಡ ವಾದಕ್ಕೆ ಬೆಂಬಲ ಸಿಗು ಕೆಲವು ವಿವರಗಳಿವೆ. ಈಗ ಅವುಗಳನ್ನು ನೋಡೋಣ. ಈ ಗ್ರಂಥದ

---

೧. ಶಿವನಂಜೇಗೌಡ : ಹಳೇಬೀಡು ಪುರಾತನ ಚರಿತ್ರೆ, ಪು. ೪

೨. ಪು. ೧೧

೩. ಎ.ಕ., V (ಹೊಸತು), ತಿನ ೨೩೮

ರಸಿಂಹಬಲ್ಲಾಳ II ನ ಆಳ್ವಿಕೆಯನ್ನು ವರ್ಣಿಸುತ್ತಾ ಹೀಗೆ ಹೇಳಿದೆ : ಇದೇ
ಾಜನು "ದೆಹಲಿ ಚಕ್ರವರ್ತಿಗಳು ಆಶೆಯಿಂದ ತಲೆಹಾಕುವುದನ್ನು ತಿಳಿದು ತನ್ನ
ೇಶಕ್ಕೆ ಕಡೆಯ ಗಡಿಯಾಗಿಯೂ ಶತ್ರುಗಳು ಬರುವ ಮಾರ್ಗವಾಗಿಯೂ ಇರುವ
ಂಪೆಯ ಕ್ಷೇತ್ರದ ಬಳಿ ಹೊಸಮಲೆದುರ್ಗವೆಂಬ ಪಟ್ಟಣವಂ ಕಟ್ಟಿ ದ್ವಾರಸಮುದ್ರದ
ರಿಯ ತಳವಾರನನ್ನು ಅಲ್ಲಿ ಇಟ್ಟನು. ಅವನ ಮಗ ಕಂಪಿಲನು, ಆತನ ಸುತ
ೂಮಾರ ರಾಮನು."[೪] ಈ ಘಟನೆಗಳೆಲ್ಲಾ ಎರಡನೇ ನರಸಿಂಹ ಬಲ್ಲಾಳನ
ಲದಲ್ಲಿ ಆಗಿರಲಿಕ್ಕಿಲ್ಲ. ಆಗ ದೆಹಲಿ ಸುಲ್ತಾನರು ದಕ್ಷಿಣಕ್ಕೆ ಬರುವ ಭೀತಿ
ರಲಿಲ್ಲ. ಈ ಭೀತಿ ಹುಟ್ಟಿದ್ದು ಮೂರನೇ ಬಲ್ಲಾಳನ ಕಾಲದಲ್ಲಿ. ಆದ್ದರಿಂದ
ವನೇ ಹೊಸಮಲೆದುರ್ಗವನ್ನು ಹಂಪೆಯ ಪರಿಸರದಲ್ಲಿ ಕಟ್ಟಿರಬೇಕು. ಅವನೇ
ವಾರಸಮುದ್ರದ ಹಿರಿಯ ತಳವಾರನನ್ನು ಅಲ್ಲಿ ಇಟ್ಟಿರಬೇಕು. ಈತನು ಮುಮ್ಮಡಿ
ಂಗೆಯನಾಯಕ. ಎನ್. ವೆಂಕಟರಮಣಯ್ಯನವರು ಮುಮ್ಮಡಿಸಿಂಗೆಯನಾಯಕನು
ಾದವ ಸೇವೆಯಲ್ಲಿ ಮುಂದಕ್ಕೆ ಬಂದನೆಂದು ಬರೆಯುತ್ತಾರೆ. ಅದಕ್ಕೆ ವಿರುದ್ಧವಾಗಿ
ವನು ಹೊಯ್ಸಳರ ಸೇವೆಯಲ್ಲಿದ್ದವನು, ಅವನ ಮಗ ಕಂಪಿಲರಾಯ, ತಂದೆ-
ಗ ಇಬ್ಬರೂ ಮೂರನೇ ಬಲ್ಲಾಳನ ಜತೆಗೆ ಹೊಡೆದಾಡಿದರು. ಆಗಿನ ಕಾಲದಲ್ಲಿ
ದು ಏನೂ ಆಶ್ಚರ್ಯವನ್ನುಂಟು ಮಾಡುವ ವಿಷಯವಾಗಿರಲಿಲ್ಲ. ಹೊಯ್ಸಳರು
ಲ್ಯಾಣದ ಚಾಲುಕ್ಯರ ಸೇವಕರು. ಆದರೆ ಅವರ ಜತೆಗೆ ಹೊಡೆದಾಡಿದರು.
ದೇ ರೀತಿ ಅವರ ಸೇವಕರಾದ ಕಂಪ್ಲಿಯ ರಾಜರು ಅವರ ಜತೆಗೆ ಹೊಡೆದಾಡಿದರು.
ಗ್ರಂಥದಿಂದ ಮೂರನೇ ವೀರಬಲ್ಲಾಳ ಹಂಪೆಯ ಹತ್ತಿರ ಒಂದು ಹೊರಕೋಟೆ
ಟ್ಟಿದನೆನ್ನುವ ಕನ್ನಡಿಗರ ವಾದಕ್ಕೆ ಪುಷ್ಟಿ ದೊರಕುತ್ತದೆ. ಅಲ್ಲದೆ ಕಂಪಿಲರಾಯನ
ಂಶಸ್ಥರು ಮೊದಲಿಗೆ ಹೊಯ್ಸಳರ ಸೇವಕರಾಗಿದ್ದರೆನ್ನುವ ಹೊಸ ವಿಷಯವನ್ನು
ಪುಸ್ತಕದಿಂದ ತಿಳಿದುಕೊಳ್ಳುತ್ತೇವೆ.

ಈ ಇತಿಹಾಸ ವಿಭಾಗದಲ್ಲಿ ವಿಜಯನಗರದ ಕಾಲದ ಕೆಲವು ಹೊಸ
ಷಯಗಳು ತಿಳಿಯುತ್ತವೆ. ವಿಜಯನಗರ ಕಾಲದಲ್ಲಿ ಹಳೇಬೀಡು ಸಂಪೂರ್ಣವಾಗಿ
ಥಿಲವಾಗಿ ಜನಸಂಚಾರಕ್ಕೆ ಅಸಹ್ಯವಾಗಿತ್ತು. ಅಲ್ಲಿಯ ಅರಸರು ಈ ಊರಿನ
ಂದಿನ ವೈಭವಯುತ ಇತಿಹಾಸವನ್ನು ತಿಳಿದುಕೊಂಡು, ಅದಕ್ಕೆ ಹೊಸಕೋಟೆ
ಟ್ಟಿಸಿ ಆ ಊರಿಗೆ ಜೀರ್ಣಬೀಡೆಂದು ಹೆಸರು ಇಟ್ಟರು. ಅಲ್ಲಿಯ ದೇವಸ್ಥಾನಗಳಲ್ಲಿ
ದ್ದುಹೋಗುವ ಭಾಗಗಳಲ್ಲಿ ಕಂಭಗಳನ್ನು ನಿಲ್ಲಿಸಿ ದೇವಸ್ಥಾನಗಳನ್ನು ಬೀಳದಹಾಗೆ
ಳಿಸಿದರು. ಈ ಕಂಭಗಳನ್ನು ಪ್ರೌಢರಾಯನ ಕಂಭಗಳೆಂದು ಕರೆಯಲಾಗಿದೆ.
ಹೆಸರಿನಿಂದ ಈ ಪುನರುಜ್ಜೀವನ ಕಾರ್ಯವು ಪ್ರೌಢರಾಯ ಅಂದರೆ ಎರಡನೇ

ಹಳೇಬೀಡು ಪುರಾತನ ಚರಿತ್ರೆ, ಪು. ೧೧

ದೇವರಾಯನ ಕಾಲದಲ್ಲಿ ಆಯಿತೆನ್ನಬಹುದು. ಇದರ ಜತೆಗೆ ಜೀರ್ಣಬೀಡನ್ನು ವಿಜಯನಗರದ ಅರಸರು ಒಂದು ಆಡಳಿತ ಕೇಂದ್ರವನ್ನಾಗಿ ಮಾಡಿದರು. ಇಂತಹ ಕೇಂದ್ರಗಳಿಗೆ ಅವರು ಕಟ್ಟೆಮನೆ ಎನ್ನುತ್ತಿದ್ದರು. ಗ್ರಾಮಗಳಲ್ಲಿ ಇತ್ಯರ್ಥವಾಗದ ವ್ಯಾಜ್ಯಗಳನ್ನು ಕಟ್ಟೆಮನೆಗಳಿಗೆ ಕಕ್ಷಿಗಾರರು ತೆಗೆದುಕೊಂಡು ಹೋಗುತ್ತಿದ್ದರು. ಜೀರ್ಣಬೀಡನ್ನು ಒಂದು ಕಟ್ಟೆಮನೆ ಮಾಡಿದ್ದರಿಂದ ಅದಕ್ಕೆ ಸ್ವಲ್ಪ ಪ್ರಾಶಸ್ತ್ಯ ಬಂತು. ಮುಂದೆ ಜೀರ್ಣಬೀಡು ಹಳೇಬೀಡು ಆಯಿತು.

ಈ ಇತಿಹಾಸ ವಿಭಾಗದಲ್ಲಿಯೆ, ಹಳೇಬೀಡಿನ ಹಳೆಯಕೋಟೆ, ಹೊಸಪೇಟೆಗಳು, ಅರಮನೆಯಿದ್ದ ಭಾಗ, ರಾಣೀವಾಸ, ಗೋವಿನಪುರವೆಂಬ ದನಗಳನ್ನು ಕಟ್ಟುವ ಭಾಗ, ಹುವ್ವೇನಹಳ್ಳಿ (ಹೂವಾಡಿಗರ ಕೇರಿ), ಒಂಟೆಗಳು ನಿಲ್ಲುವ ಸ್ಥಳ, ಇತ್ಯಾದಿ ಬೇರೆ ಬೇರೆ ಭಾಗಗಳನ್ನು ಲೇಖಕರು ಗುರುತಿಸಿದ್ದಾರೆ. ಇಂತಹ ವಿವರವಾದ ಹಳೇಬೀಡಿನ ವರ್ಣನೆ ಇದೇ ಮೊದಲನೆಯದು. ಇದರ ಸಹಾಯದಿಂದ ಆ ಕ್ಷೇತ್ರದಲ್ಲಿ ಉತ್ಖನನ ಮಾಡುವ ಹಾಗೆ ಇದೆ. ಕರ್ನಾಟಕದ ಹಂಪೆಯಂತೆ ವಿಶಾಲವಾದ ರಾಜಧಾನಿ ಇದಾಗಿತ್ತು.[೬]

ಎರಡನೇ ಭಾಗದಲ್ಲಿ ಹೊಯ್ಸಳೇಶ್ವರ ದೇವಸ್ಥಾನದ ವಿವರವಾದ ವರ್ಣನೆ ಇದೆ. ಈ ವರ್ಣನೆ ಇವತ್ತೂ ಓದುವ ಹಾಗೆ ಇದೆ. ಇಷ್ಟು ವಿಸ್ತೃತವಾದ ವರ್ಣನೆ ಎಲ್ಲಿಯೂ ಸಿಗುವುದಿಲ್ಲ. ಈ ಭಾಗವನ್ನೇ ಪುನಃ ಮುದ್ರಿಸಿದರೆ ಆ ದೇವಸ್ಥಾನದ ಒಳ್ಳೆಯ ಕೈಪಿಡಿಯಾಗಬಲ್ಲದು. ಅಲ್ಲದೆ, ಅವತ್ತಿಗೂ ಇವತ್ತಿಗೂ ಎಷ್ಟೋ ವಿಗ್ರಹಗಳು ಹಾಳಾಗಿರಬಹುದು. ಇಲ್ಲವೆ ಕಳವಾಗಿರಬಹುದು. ಅಂತಹ ವಿಗ್ರಹಗಳ ಅಪೂರ್ವ ವರ್ಣನೆ ಇಲ್ಲಿ ಸಿಗುತ್ತದೆ. ಈಗಿನ ಕಲೆಯ ವಿದ್ವಾಂಸರು ಕನ್ನಡದಲ್ಲಿ ಬರೆದರೆ ಇಂಗ್ಲೀಷ್ ವರ್ಣನೆಯ ಭಾಷಾಂತರವಿದ್ದ ಹಾಗೆ ಇರುತ್ತದೆ. ಪಟೇಲರಿಗೆ ಇಂಗ್ಲೀಷ್ ಬರುತ್ತಿತ್ತೊ ಇಲ್ಲವೊ ಗೊತ್ತಿಲ್ಲ. ಅವರ ವರ್ಣನೆಯಲ್ಲಿ ಇಂಗ್ಲೀಷ್‌ನ ಛಾಯೆ ಇಲ್ಲ. ಎಷ್ಟೋ ಸಲ ಸುಂದರವಾದುದನ್ನು ವರ್ಣಿಸಲಿಕ್ಕೆ ನಮ್ಮಲ್ಲಿ ಶಬ್ದಗಳಿರುವುದಿಲ್ಲ. ಈ ಗ್ರಂಥದಲ್ಲಿ ಶಿಲ್ಪ ಸೌಂದರ್ಯವನ್ನು ಸರಿಯಾಗಿ ವರ್ಣಿಸುವ ಶಬ್ದಸಂಪತ್ತು ಇದೆ. ವರ್ಣನೆ ಹೇಗೆ ಮಾಡಬೇಕೆಂಬುದನ್ನು ಕಲಿಯುವ ಹಾಗೆ ಇದೆ. ದೇವಸ್ಥಾನದ ಸೌಂದರ್ಯವನ್ನು ಕುರಿತು ಲೇಖಕರು ಹೀಗೆ ಹೇಳುತ್ತಾರೆ: "ಈ ದೇವಸ್ಥಾನವು ನೋಟಕರನ್ನು ತಮ್ಮ ತಮ್ಮ ಕೆಲಸ ಕಾರ್ಯಗಳ ತೊರೆಯಿಸಿ ನಿರ್ವಿಣ್ಣ ಹೃದಯವನ್ನಾಗಿ ಮಾಡಿ ಬಲೆಯೊಳ್ ಸಿಕ್ಕಿದ ಮೃಗದಂತೆ ಹೊರ ಬಿಡದೆ ಅಲ್ಲಿಯೆ ನಿಲ್ಲಿಸುವುದು

---

೫. ಅದೇ, ಪು. ೨೫–೬

೬. ಅದೇ, ಪು. ೨೦–೩

೭. ಅದೇ, ಪು. ೧೨೩

ಗರ್ಭಗುಡಿಯ ಬಾಗಿಲಲ್ಲಿ ಎರಡು ದ್ವಾರಪಾಲಕರ ವಿಗ್ರಹಗಳಿವೆ. ಅವುಗಳ ವರ್ಣನೆ ನೋಡಿ: "ಇವುಗಳು ಕಿರೀಟದೊಳು ವಿರಳವಾಗಿ ಬಿಡಿಸಿದ ರುಂಡಮಾಲೆಗಳಿಂದಲೂ ನೇರವಾಗಿ ಸುತ್ತಿದ ಕಿರುಜಡೆಗಳಿಂದಲೂ ಇವುಗಳೊಳು ತೋರ್ಪ ವಿಚಿತ್ರವಾದ ಕೆಲಸದಿಂದಲೂ ಹಣೆಯ ಮೇಲೊಪ್ಪುವ ಸುರುಳಿರೋಮಗಳಿಂದಲೂ ಕಿರುನೋಟದ ಗಾಂಭೀರ್ಯದ ಅಂಗಾಂಗದೊಳು ಆಭರಣ ವಾಂತು ಓರೆಯಾಗಿ ನಿಂತು ಗದೆ, ತ್ರಿಶೂಲ, ಡಮರುಗಳು ಪಿಡಿದು ಹಾರ ಹೀಲಾವಳಿಗಳಿಂದ ಸಿಂಹನೋಪಾದಿ ಗಂಡು ಫಣದೊಡನೆ ವ್ಯತ್ಯಾಸ ಪಾದವಿಟ್ಟು ನಡುವಿನೊಳು ಒಳ ಉಡಿಗೆ, ವೀರಗಾಸೆ, ಮಲ್ಲಗಂಟು, ಕೀರ್ತಿಮುಖ ಯುಕ್ತವಾಗಿವೆ. ಪಾರ್ಶ್ವಗಳಲ್ಲಿ ಚಾಮರವಾಂತ ಸ್ತ್ರೀ ವಿಗ್ರಹಗಳ ಮೇಲ್ಗಡೆ ದ್ರಾಕ್ಷೀಲತೆಯ ಜಾಲರಿಯಂತೆ ಬಿಡಿಸಿದ್ದಾನೆ. ಶಿರದೊಳು ಧರಿಸಿದ ಕಿರೀಟದ ವಿಚಿತ್ರವಾದ ಕೆಲಸವ ವರ್ಣಿಸಲಸಾಧ್ಯ."[೮]

ಬೇಲೂರು – ಹಳೇಬೀಡುಗಳ ದೇವಸ್ಥಾನಗಳಲ್ಲಿಯ ಸ್ತ್ರೀ ವಿಗ್ರಹಗಳ ಸೌಂದರ್ಯ ಜಗತ್ಪ್ರಸಿದ್ಧ. ಹೂಗುಚ್ಛ ಕೈಯೆತ್ತಿ ತುದಿ ಬೆರಳ ತೋರುವ ಸ್ತ್ರೀ ಪ್ರತಿಮೆಯ ಈ ವರ್ಣನೆಯನ್ನು ನೋಡಿ : "ಅಮೃತ ಕಲವಶವಾಯಿತು ಚಾಮರವ ಪಿಡಿದು ತೋಳೆತ್ತಿ ಕೈಯಾಡಿಸುವ ಅಂದವು, ಕರವೆತ್ತಿ ಕುಸುಮಗಳ ಕೊಯ್ಯುವ ಚಂದದಿ ಅಂಗವ ತೋರುವ ಸ್ತ್ರೀಯಳು ಓರೆಯಾದ ಸೆರಗ ಕರದೊಳು ಪಿಡಿದು ಬಗ್ಗಿದಂಗದೊಡನೆ ಹಾರ ಹೀರಾವಳಿಗಳಿಂದ ಮುಖಚಂದ್ರಿಕೆಯೊಳು ನರ್ತಿಸುವ ಮುಂಗುರುಳಿನೊಳು ಅರೆನೋಟದ ಬಿರುದುಟಿಯಿಂದ ಚಕ್ರಾಕಾರದ ಮುಡಿಯೊಳುಪ್ಪುವುದು ಮನೋಹರವಾಗಿದೆ."[೯]

ಭಾರತೀಯ ವಾಸ್ತುಶಿಲ್ಪದ ಇತಿಹಾಸವನ್ನು ಮೊಟ್ಟಮೊದಲಿಗೆ ಅಧಿಕಾರಯುತವಾಗಿ ಬರೆದಿರುವ ಯುರೋಪಿಯನ್ ವಿದ್ವಾಂಸ ಫರ್ಗೂಸನ್ ಭಾರತವನ್ನೆಲ್ಲಾ ಸುತ್ತಾಡಿ ನಮ್ಮ ಎಲ್ಲಾ ಪುರಾತನ ಕಟ್ಟಡಗಳನ್ನು ಪರೀಕ್ಷಿಸಿ ಅವುಗಳನ್ನು ವರ್ಗೀಕರಿಸಿ ಅವುಗಳ ಮೌಲ್ಯಮಾಪನ ಮಾಡಿದ್ದಾನೆ. ಆತನಿಗೆ ಯುರೋಪಿಯನ್ ವಾಸ್ತುಶಿಲ್ಪದ ಇತಿಹಾಸದ ಅಧ್ಯಯನದಲ್ಲಿಯೂ ಅಷ್ಟೆ ಪರಿಣತೆ ಇತ್ತು. ಅವನ ಪ್ರಕಾರ ಗ್ರೀಕರ ಕಟ್ಟಡಗಳಲ್ಲಿ ಪಾರ್ಥೆನಾವ್ ಹೇಗೆ ಅತಿ ಸುಂದರವೊ ಹಾಗೆ ಭಾರತೀಯ ದೇವಸ್ಥಾನಗಳಲ್ಲಿ ಹೊಯ್ಸಳೇಶ್ವರ ದೇವಸ್ಥಾನವು ಅಷ್ಟೆ ಸುಂದರವೆಂದಿದ್ದಾನೆ.[೧೦] ಪಟೇಲ್ ಶಿವಸಂಜೇಗೌಡರಿಗೆ ಫರ್ಗೂಸನ್ನನ ಬರಹ

ಆದೇ. ಪು. ೧೨೧

ಆದೇ, ಪು. ೯೬

ಡಾ॥ ಎಂ. ಶೇಷಾದ್ರಿ ಅವರು ತಮ್ಮ ಲೇಖನದಲ್ಲಿ ಉಲ್ಲೇಖಿಸಿರುವುದು – Dr. B. Sheik Ali (Ed.) : The Hoysala Dynasty, p. 183

ಗೊತ್ತಿತ್ತೊ ಇಲ್ಲವೊ ತಿಳಿಯದು. ಆದರೆ ಅವರು ಇಲ್ಲಿಯ ಶಿಲ್ಪಗಳಲ್ಲಿ ದೂರದರ್ಶಕ ಯಂತ್ರವನ್ನು ಉಲ್ಲೇಖಿಸಿರುವುದರಿಂದಲೂ ಮತ್ತು ಅದನ್ನು ಟೆಲಿಸ್ಕೋಪ್ ಎಂದು ಕರೆಯವುದರಿಂದಲೂ ಯುರೋಪಿಯನ್ನರು ಪತ್ತೆ ಮಾಡಿದ ಈ ವಿಷಯ ಗೊತ್ತಿತೆಂದು ಹೇಳಬಹುದು. ಪಟೇಲರಿಗೆ ಪಾಶ್ಚಿಮಾತ್ಯರ ಬರವಣಿಗೆ ಗೊತ್ತಿರಲಿ ಗೊತ್ತಿಲ್ಲದೆ ಇರಲಿ, ಸಂಸ್ಕೃತ ಮತ್ತು ಕನ್ನಡ ಸಾಹಿತ್ಯಗಳು ಚೆನ್ನಾಗಿ ಗೊತ್ತಿದ್ದವು ಹೊಯ್ಸಳೇಶ್ವರ ದೇವಸ್ಥಾನವು ಶ್ರೀಚಕ್ರದಿಂದ ಕಟ್ಟಿದೆ; ಶ್ರೀಚಕ್ರಕ್ಕೆ ಪ್ರತಿ ಮೂಲೆಯೂ ಪ್ರತಿ ಕಂಭವೂ ಮೂಲೆ ಮೂಲೆಗಳಿಂದಲೇ ಶಿಲ್ಪಶಾಸ್ತ್ರ ಮರ್ಯಾದಾನುಸಾರವಾಗಿ ನಿರ್ಮಿಸಿವೆಯೆಂದು ಹೇಳಿದ್ದಾರೆ.[೧೧] ಅವರು ಈ ವಿಗ್ರಹಗಳನ್ನು ಮತ್ತು ವಿಗ್ರಹಗಳು ಹೇಳುವ ಕಥೆಗಳನ್ನು ವರ್ಣಿಸಲು ಅನೇಕ ಪುರಾಣಗಳನ್ನು ಉದಾಹರಿಸುತ್ತಾರೆ ಅವುಗಳಲ್ಲಿ ಕೆಲವು ಇವು: ಭವಿಷತ್‌ಪುರಾಣ, ದೇವೀಭಾಗವತ, ಭಾಗವತ, ಅದರಲ್ಲೂ ದಶಮಸ್ಕಂಧ, ಶಂಕರಸಂಹಿತೆ, ಸೂತಸಂಹಿತೆ, ಲೈಂಗಪುರಾಣ, ಶೈವಪುರಾಣದ ಧರ್ಮಸಂಹಿತೆ, ಮಹಾಭಾರತ ಮತ್ತು ರಾಮಾಯಣ. ನರ್ತಕ ನರ್ತಕಿಯರು ಭರತಶಾಸ್ತ್ರಾ ರೀತ್ಯಾ ನರ್ತಿಸುತ್ತಾರೆಂದು ಮತ್ತು ಪ್ರತಿಮೆಗಳು ಕಳಾಶಾಸ್ತ್ರ ರೀತ್ಯಾನುಸಾರವಾಗಿ ದ್ವಾರಕ ಚುಂಬನ ಮತ್ತು ಷೋಡಶ ಬಂಧನಯುಕ್ತವಾಗಿವೆಯೆಂದು ಬರೆದಿದ್ದಾರೆ.[೧೨]

ಲೇಖಕರು ಈ ಗ್ರಂಥದ ಬೇರೆ ಬೇರೆ ಕಡೆ ಹಳೇಬಿಡೀನ ದೇವಸ್ಥಾನಗಳ ಹಾಳಾಗುವುದಕ್ಕೆ ಕಾರಣಗಳನ್ನು ತಿಳಿಸಿದ್ದಾರೆ : "ಕೆಲವು ನೆಲಸಮನಾಗಿ ಬಿದ ಕಲ್ಲುಗಳನ್ನು ಕೋಟೆ ಕೊತ್ತಲು, ಹಳ್ಳ, ಭಾವಿ, ಕಟ್ಟೆ, ಇವುಗಳಿಗೆ ಸೇರಿಸಿದ್ದಾರ ನಿಂತ ಕೆಲವು ದೇವಸ್ಥಾನದ ವಿಗ್ರಹಗಳ ಕಲ್ಲುಗಳು ಅಲ್ಲಿಯೇ ಭೂಗತವಾಗಿವೆ... ಸ್ವದೇಶ ಪರದೇಶದವರು ನೋಟಕ್ಕಾಗಿ ಬಂದವರು ಸಲಕ್ಷಣ ವಿಗ್ರಹಗಳನ ಅಪಹರಿಸಿಕೊಂಡು ಹೋಗಿದ್ದಾರೆ."[೧೩] ಪರದೇಶದವರು ಅಪಹರಿಸಿದ್ದಕ್ಕೆ ಲೇಖಕರ ಒಂದು ಉದಾಹರಣೆಯನ್ನು ಕೊಡುತ್ತಾರೆ. ೧೭೯೯ರಲ್ಲಿ ಶ್ರೀರಂಗಪಟ್ಟಣ ಪತನವಾದ ಮೇಲೆ ಲಾಲಿ ಮತ್ತು ಬೇಲಿ ಎನ್ನುವ ಇಂಗ್ಲೀಷ್ ಸರದಾರರ ಹೊಯ್ಸಳೇಶ್ವರ ದೇವಸ್ಥಾನವನ್ನು ನೋಡಿ ಆಶ್ಚರ್ಯದ ಕೆಲಸಕ್ಕೆ ಮರುಳಾ ಒಂದು ಬಸವಣ್ಣ ವಿಗ್ರಹದ ಕೊರಳ ಘಂಟೆ ಮತ್ತು ಒಂದು ಸಣ್ಣ ವಿನಾಯ ವಿಗ್ರಹವನ್ನು ಅಪಹರಿಸಿಕೊಂಡು ಹೋದರು.[೧೪] ಇಂತಹ ಅಪಹರಣಗಳನ

---

೧೧. ಹಳೇಬೀಡು ಪುರಾತನ ಚರಿತ್ರೆ, ಪು. ೩೧

೧೨. ಅದೇ, ಪು. ೩೪

೧೩. ಅದೇ, ಪು. ೩೧

೧೪. ಅದೇ, ಪು. ೩೮

ಅನೇಕ ಯೂರೋಪಿನ ದೇಶಿಯರು ಮಾಡಿದ್ದಾರೆ. ಸಣ್ಣ ರಾಷ್ಟ್ರವಾದ ಡೆನ್ಮಾರ್ಕ್‌ನವರು ಹೊಯ್ಸಳ ವಿಗ್ರಹಗಳನ್ನು ಎಷ್ಟು ತೆಗೆದುಕೊಂಡು ಹೋಗಿದ್ದಾರೆಂದರೆ, ಈಚೆಗೆ ಕೆಲವು ವರ್ಷಗಳ ಕೆಳಗೆ, ಅವರು ಒಬ್ಬ ಭಾರತೀಯ ತಜ್ಞನನ್ನು ನೇಮಿಸಿ ಕೋಪನ್ ಹೇಗನ್ ವಸ್ತುಸಂಗ್ರಹಾಲಯದಲ್ಲಿರುವ ಹೊಯ್ಸಳ ವಿಗ್ರಹಗಳ ವಿವರವಾದ ಪಟ್ಟಿಯನ್ನು ತಯಾರು ಮಾಡಿಸಿದರು. ಸಣ್ಣರಾಷ್ಟ್ರವಾದ ಡೆನ್ಮಾರ್ಕಿನಲ್ಲೆ ಇಷ್ಟು ಹೊಯ್ಸಳ ವಿಗ್ರಹಗಳಿದ್ದರೆ, ಸಂಪದ್ಭರಿತ ವಿಶಾಲವಾದ ಅಮೇರಿಕೆಯಲ್ಲಿ ಎಷ್ಟು ಇರಬೇಡ! ಇನ್ನೂ ಇಷ್ಟು ವಿಗ್ರಹಗಳ ಅಪಹರಣಗಳು ಆಗದೆ ಇದ್ದ ಕಾಲದಲ್ಲಿ ನಮ್ಮ ಅತ್ಯಂತ ಸುಂದರವಾದ ಹೊಯ್ಸಳೇಶ್ವರ ದೇವಸ್ಥಾನದ ವರ್ಣನೆಯನ್ನು ಮಾಡಿ ಪಟೇಲ್ ಶಿವನಂಜೇಗೌಡರು ತಮ್ಮ ಊರು ಹಳೇಬೀಡಿಗೂ ಕರ್ನಾಟಕಕ್ಕೂ ಅನುಪಮ ಸೇವೆಯನ್ನು ಈ ಗ್ರಂಥದ ಮೂಲಕ ಸಲ್ಲಿಸಿದ್ದಾರೆ.

ಭಾರತ ಸರ್ಕಾರದ ಪುರಾತತ್ವ ಶಾಖೆಯವರು ನಮ್ಮ ದೇಶದ ಪುರಾತನ ಕಾಲದ ರಾಜಧಾನಿಗಳನ್ನೂ, ದೊಡ್ಡ ಪಟ್ಟಣಗಳನ್ನೂ ಸಂರಕ್ಷಿಸುತ್ತಿದ್ದಾರೆ ಮತ್ತು ಅವಶ್ಯವೆನಿಸಿದರೆ ಅವುಗಳ ಕ್ಷೇತ್ರದಲ್ಲಿ ಉತ್ಖನನ ಮಾಡುತ್ತಿದ್ದಾರೆ. ಉದಾಹರಣೆಗೆ, ಅಕ್ಬರನ ರಾಜಧಾನಿಯಾಗಿದ್ದ ಫತೇಪುರ್ ಸಿಕ್ರಿಯಲ್ಲಿಯ ಕಟ್ಟಡಗಳನ್ನು ಸಂರಕ್ಷಿಸುತ್ತಿದ್ದಾರೆ ಮತ್ತು ಹಂಪಿಯಲ್ಲಿರುವ ದೇವಸ್ಥಾನಗಳನ್ನು ಸಂರಕ್ಷಿಸುತ್ತಿದ್ದಾರೆ. ಈ ಕೆಲವರ ಜತೆಗೆ ಉತ್ಖನನ ನಡೆಯಿಸಿ ಹಂಪೆಯ ಪುರಾತನ ಅವಶೇಷಗಳನ್ನು ಹೊರಗೆ ತೆಗೆಯುತ್ತಿದ್ದಾರೆ. ಹಳೇಬೀಡಿನಲ್ಲಿಯೂ ಹಂಪೆಯಲ್ಲಿ ಮಾಡಿದ ಹಾಗೆ ಮೇಲಿರುವ ಕಟ್ಟಡಗಳನ್ನು ಸಂರಕ್ಷಿಸಬೇಕು. ಭೂಗತವಾಗಿರುವದನ್ನು ಭೂಶೋಧನೆಯಿಂದ ಹೊರಗಡೆ ತೆಗೆಯಬೇಕು. ಇಂತಹ ಕೆಲಸಕ್ಕೆ ಶಿವನಂಜೇಗೌಡ, ಸಕಲೇಶಪುರದ ಶ್ರೀಕಂಠಯ್ಯ, ಆರ್. ನರಸಿಂಹಾಚಾರ್ಯ ಮತ್ತು ಎಂ.ಹೆಚ್. ಕೃಷ್ಣ ಅವರುಗಳ ಬರವಣಿಗೆಗಳು ಅತ್ಯಂತ ಉಪಯುಕ್ತ.

■

೨೨

ಪ್ರವಾಸಿ ಸಾಹಿತ್ಯದ ಅಧ್ಯಯನದಲ್ಲಿ ಮುಂದಿನ ಹೆಜ್ಜೆಗಳು

ಕೆ.ಎ. ನೀಲಕಂಠಶಾಸ್ತ್ರಿಗಳು ೪೦ ವರ್ಷದ ಕೆಳಗೆ ದಕ್ಷಿಣ ಭಾರತದ ಬಗ್ಗೆ ಬರೆದ ವಿದೇಶಿ ಪ್ರವಾಸಿಗಳ ಲೇಖನಗಳನ್ನು Foreign Notices of South India ಎನ್ನುವ ಗ್ರಂಥದಲ್ಲಿ ಕಲೆಹಾಕಿದ್ದಾರೆ. ಕನ್ನಡದಲ್ಲಿ ಹೆಚ್.ಎಲ್. ನಾಗೇಗೌಡರು ಪ್ರಾಚೀನ ಮತ್ತು ಮಧ್ಯಯುಗಗಳಲ್ಲಿ ಭಾರತಕ್ಕೆ ಬಂದ ಅನೇಕ ವಿದೇಶಿಯರ ಬರೆಹಗಳನ್ನು ಆ ಸಂಪುಟಗಳಲ್ಲಿ ಸಂಗ್ರಹಿಸಿದ್ದಾರೆ. ಹೀಗಿರುವಾಗ ಇನ್ನು ಈ ವಿಷಯದಲ್ಲಿ ಹೊಸದೇನು ಹೇಳಲು ಸಾಧ್ಯವಿದೆ ಎಂಬ ಪ್ರಶ್ನೆಗೆ ಉತ್ತರ ಸಾಧ್ಯವಿದೆ.

೧. ಭಾರತಕ್ಕೆ ಪ್ರವಾಸಿಗಳು ಯುರೋಪು, ಪಶ್ಚಿಮ ಏಷಿಯಾ ಮತ್ತು ಪೂರ್ವ ಏಷಿಯಾಗಳಿಂದ ಬಂದರು. ಅನೇಕ ಪ್ರವಾಸಿಗಳು ಭಾರತದ ಬಗ್ಗೆ ಏನು ಬರೆದಿದ್ದಾರೊ ಅಷ್ಟನ್ನು ಮಾತ್ರ ನಮ್ಮ ಭಾಷಾಂತರಕಾರರು ಭಾಷಾಂತರಿಸಿದ್ದಾರೆ. ಉದಾಹರಣೆಗೆ, ಟ್ಯಾವರ್ನಿಯರ್ ಎನ್ನುವ ವಜ್ರ ವ್ಯಾಪಾರಿಯು ಫ್ರಾನ್ಸಿನಿಂದ ಭಾರತಕ್ಕೆ ಏಳು ಸಲ ಬಂದು ವ್ಯಾಪಾರ ಮಾಡಿಕೊಂಡು ಹೋದನು. ವಜ್ರ ವ್ಯಾಪಾರಿಯು ಇವನು ಬಹಳ ಚತುರನಾಗಿದ್ದನು. ಇವನ ಪ್ರವಾಸದ ವರದಿಯನ್ನು ಇಂಗ್ಲೀಷಿಗೆ ಭಾಷಾಂತರಿಸಿದವರು ಬಾಲ್ ಎನ್ನುವ ಭೂಗರ್ಭ ಶಾಸ್ತ್ರಜ್ಞ. ಇವರ ಇಂಗ್ಲೀಷ್ ಭಾಷಾಂತರದ ಹೆಸರು Tavernier's Travels in India. ಅವನು ತನ್ನ ಪ್ರವಾಸದಲ್ಲಿ ಭಾರತವಲ್ಲದೆ ಇನ್ನು ಅನೇಕ ದೇಶಗಳಲ್ಲಿಯ ತನ್ನ ಅನುಭವಗಳನ್ನು ಬರೆದಿದ್ದಾನೆ. ಬಾಲ್ ಅವರು ಭಾರತದ ಬಗ್ಗೆ ಹೇಳಿದ್ದನ್ನು ಮಾತ್ರ ಭಾಷಾಂತರಿಸಿದ್ದಾರೆ. ಯಾಕೆಂದರೆ ಅವನ ಆಸೆ ಭಾರತೀಯ ಇತಿಹಾಸಕ್ಕೆ ಸೀಮಿತವಾಗಿತ್ತು. ಈಗ ನಮಗೆ ತಿಳಿದ ಹಾಗೆ ಟ್ಯಾವರ್ನಿಯರ್ ಪರ್ಷಿಯಾದ ಮಾರ್ಗವಾಗಿ ಭಾರತಕ್ಕೆ ಬಂದ. ಪರ್ಷಿಯಾದಲ್ಲಿ ಮತ್ತು ರಷ್ಯಾದಲ್ಲಿ ಭಾರತೀಯ ವ್ಯಾಪಾರಿಗಳು ಬಹುಸಂಖ್ಯೆಯಲ್ಲಿದ್ದು ಒಳ್ಳೆಯ ಹೆಸರನ್ನು ಗಳಿಸಿದ್ದರು. ಕ್ಯಾಸ್ಪಿಯನ್ ಸಮುದ್ರದಲ್ಲಿ ಈ ವ್ಯಾಪಾರಿಗಳು ತಮ್ಮ ಸ್ವಂತ ಹಡಗುಗಳಲ್ಲಿ ಸಾಮಾನುಗಳನ್ನು ಸಾಗಿಸುತ್ತಿದ್ದರು. ಪರ್ಷಿಯಾ ಮತ್ತು ರಷ್ಯಾದ ರಾಜರು ಅವರ ಸ್ನೇಹವನ್ನು ಬಯಸುತ್ತಿದ್ದರು.[1]

---

[1] P.M. Kemp : Bharat – Rus, Delhi, 1958, p. 80

ಇಂಥ ವರ್ತಕರನ್ನು ಟ್ಯಾವರ್ನಿಯರ್ ಸಹಜವಾಗಿ ಭೇಟಿಯಾಗಿದ್ದನು.[೨] ಅವರ ಬಗೆಗಿನ ಟ್ಯಾವರ್ನಿಯರಿನ ಬರೆಹವನ್ನು ನಾವು ತಿಳಿದುಕೊಳ್ಳುವುದು ಅವಶ್ಯ.

ಅದೇ ರೀತಿ ಬರ್ನಿಯರ್ ಎನ್ನುವ ಇನ್ನೊಬ್ಬ ಫ್ರೆಂಚ್ ಪ್ರವಾಸಿಯ ಬರೆಹವನ್ನು ವಿ.ಎ. ಸ್ಮಿತ್ ಮತ್ತು ಕಾನ್‌ಸ್ಟೆಬಲ್ ಎನ್ನುವವರು ಇಂಗ್ಲೀಷಿಗೆ ಭಾಷಾಂತರಿಸಿದ್ದಾರೆ. ಅವರ ಭಾಷಾಂತರದ ಹೆಸರು Bernier's Travels in the Moghul Empire. ಬರ್ನಿಯರನು ಪಶ್ಚಿಮ ಏಷ್ಯಾದಲ್ಲಿಯ ಭಾರತೀಯರ ಬಗೆಗೆ ಏನಾದರೂ ಬರೆದಿದ್ದರೆ, ನಾವು ತಿಳಿದುಕೊಳ್ಳುವುದು ಅವಶ್ಯ. ಇದೇ ರೀತಿ ಪಿತ್ರೊಡೆಲ್ಲಾವಲ್ಲೆ ಎನ್ನುವ ಇಟಾಲಿಯನ್ ಪ್ರವಾಸಿಯು ಪಶ್ಚಿಮ ಏಷಿಯಾ ಮಾರ್ಗದಿಂದ ಭಾರತಕ್ಕೆ ಬಂದನು. ಅವನ ಪುಸ್ತಕದ ಭಾಷಾಂತರದ ಹೆಸರು Pietro Della Valle's Travels in India. ಇವನು ಪಶ್ಚಿಮ ಏಷ್ಯಾದಲ್ಲಿಯ ಭಾರತೀಯರ ಬಗೆಗೆ ಬರೆದಿದ್ದನ್ನು ನಾವು ನೋಡಲೇಬೇಕು. ಯಾಕೆಂದರೆ ೧೭ನೇ ಶತಮಾನದಲ್ಲಿ ಬಂದ ಈ ಪ್ರವಾಸಿಯು ಬಹು ಮೇಧಾವಿ ಮತ್ತು ಅವನ ಬರೆಹ ತಪ್ಪಿಲ್ಲದ್ದೆಂದ ಹೆಸರುವಾಸಿಯಾಗಿದೆ.[೩]

೨. ಪ್ರವಾಸಿಗಳ ಸಂಪೂರ್ಣ ವರದಿ ಇಂಗ್ಲೀಷಿನಲ್ಲಿರಬಹುದು. ಆದರೆ ನಮ್ಮ ಲಕ್ಷ್ಯ ಆ ವರದಿಯಲ್ಲಿ ಭಾರತಕ್ಕೆ ಮಾತ್ರ ಕೇಂದ್ರೀಕೃತವಾಗಿರಬಹುದು. ಗ್ರೀಕ್ ಭಾಷೆಯಲ್ಲಿ Periplus of the Erythraen Sea ಎನ್ನುವ ಗ್ರಂಥವಿದೆ. Erythraen Sea ಎಂದರೆ ಅರಬ್ಬೀ ಸಮುದ್ರ. ಇದರ ತೀರ ಪ್ರದೇಶದಲ್ಲಿ ಸಂಚರಿಸಿದ ಪ್ರವಾಸಿಯ ಕಥನವಿದು. ಪ್ರವಾಸಿಯ ಹೆಸರು ಕೊಟ್ಟಿಲ್ಲ. ಈ ವರದಿಯನ್ನು ಬರೆದದ್ದು ಕ್ರಿ.ಶ. ೭೫ರಲ್ಲಿ. ಲೇಖಕನು ಸ್ವತಃ ಎಲ್ಲಾ ಅರಬ್ಬಿ ತೀರದ ಮೇಲಿರುವ ದೇಶಗಳಿಗೆ ಹೋಗಿ, ಅಲ್ಲಿಯ ವ್ಯಾಪಾರಿಗಳು, ವ್ಯಾಪಾರದ ಸರಕುಗಳ ಬಗೆಗೆ ಬರೆದಿದ್ದಾನೆ. ದಕ್ಷಿಣ ಭಾರತದ ಬಂದರುಗಳನ್ನು, ವ್ಯಾಪಾರಿ ಕೇಂದ್ರಗಳನ್ನು ವರ್ಣಿಸಿದ್ದಾನೆ. ಇವುಗಳನ್ನು ನಮ್ಮ ಇತಿಹಾಸಕಾರರು ತಿಳಿದುಕೊಂಡಿದ್ದಾರೆ. ಆದರೆ ಅದೇ ಲೇಖಕನು ಪ್ರಸ್ತುತ ಗ್ರಂಥದಲ್ಲಿ ಪೂರ್ವ ಆಫ್ರಿಕಾ ತೀರದ ಬಗೆಗೂ ಬರೆದಿದ್ದಾನೆ. ಅದನ್ನು ನಾವು ನಿರ್ಲಕ್ಷಿಸಿದ್ದೇವೆ. ನಮಗೂ ಅದಕ್ಕೂ ಏನು ಸಂಬಂಧವೆಂದು ತಾತ್ಸಾರ ಮಾಡಿದ್ದೇವೆ. ಈಚೆ ಒಬ್ಬ ಡಚ್ ವಿದ್ವಾಂಸರು ಆ ಭಾಗವನ್ನು ಓದಿ ಪೂರ್ವ ಆಫ್ರಿಕಾದ ಪ್ರತಿಯೊಂದು ಬಂದರಿನಲ್ಲಿಯೂ ಭಾರತೀಯ ವ್ಯಾಪಾರಿಗಳು ಇದ್ದುದನ್ನೂ ಮತ್ತು ಅಲ್ಲಿಂ

---

2. Ibid., p. 72, ಭಾರತೀಯ ವರ್ತಕರು ಪರ್ಶಿಯನ್ ಶ್ರೀಮಂತರ ಹಣವನ್ನು ತ ಹತೋಟಿಯಲ್ಲಿ ಇಟ್ಟುಕೊಂಡಿದ್ದರು.

3. K.A. Nilakanta Shastry : A History of South India, p. 33

ವ್ಯಾಪಾರದಲ್ಲಿ ಗಣನೀಯ ಪಾತ್ರವನ್ನು ವಹಿಸಿದ್ದಲ್ಲದೆ ಅವರು ಅಲ್ಲಿಂದ ಆಗ್ನೇಯ ಏಷ್ಯಾಕ್ಕೆ ವ್ಯಾಪಾರಕ್ಕೆ ಹೋಗುತ್ತಿದ್ದರೆಂದೂ ಹೇಳಿದ್ದಾರೆ. ಹೀಗೆ ಪ್ರವಾಸಿಗಳ ಸಂಪೂರ್ಣ ವರದಿಯನ್ನು ಓದುವುದು ಅವಶ್ಯ.

೩. ಇನ್ನು ಚೀನಿ ಪ್ರವಾಸಿಗಳ ಬರೆಹಗಳನ್ನು ನೋಡೋಣ. ಹ್ಯೂಯನತ್ಸಾಂಗನ ವಿಷಯ ನಾವು ಎಲ್ಲಾ ತಿಳಿದುಕೊಂಡಿದ್ದೇವೆಯೆ? ನಾವು ತಿಳಿದುಕೊಂಡಿರುವುದು ಅವನ ಭಾರತದಲ್ಲಿಯ ಅನುಭವಗಳನ್ನು ಮಾತ್ರ. ಹ್ವಿಲಿ ಎನ್ನುವವನು ಬರೆದಿರುವ ಹ್ಯೂಯನತ್ಸಾಂಗನ ಜೀವನ ಚರಿತ್ರೆಯನ್ನು ನಾವು ಉಪೇಕ್ಷೆ ಮಾಡಿದ್ದೇವೆ.[೪] ಅದರಲ್ಲಿ ಹ್ಯೂಯನತ್ಸಾಂಗನ ವ್ಯಕ್ತಿತ್ವ ಹೆಚ್ಚು ಸ್ಪಷ್ಟವಾಗಿ ಎದ್ದು ಕಾಣುತ್ತದೆ. ಅವನು ಸಂಸ್ಕೃತದಲ್ಲಿ ಒಳ್ಳೆಯ ಪಂಡಿತ. ಬೌದ್ಧಮತದ ತತ್ವಗಳನ್ನು ಚೆನ್ನಾಗಿ ತಿಳಿದುಕೊಂಡಿದ್ದ. ಅವನ ಭಾರತೀಯ ಗುರುಗಳ ಬಗ್ಗೆ ಅಸಾಧಾರಣ ಭಕ್ತಿ ಗೌರವಗಳನ್ನು ಇಟ್ಟುಕೊಂಡಿದ್ದ. ಅವನಿಗೆ ತನ್ನ ಮಾತೃಭೂಮಿ ಚೀನಾ ದೇಶದ ಬಗ್ಗೆ ಅಪಾರ ಪ್ರೀತಿ, ಹಿಡಿದ ಕೆಲಸ ಬಿಡದಿರುವ ಛಲ ಅವನದು. ಭಾರತಕ್ಕೆ ಹೋಗಿ ಸಂಸ್ಕೃತ ಮತ್ತು ಬೌದ್ಧ ಮತಗಳ ಹೆಚ್ಚಿನ ಅಧ್ಯಯನ ಮಾಡಿ ಚೀನೀಯರಿಗೆ ಬುದ್ಧನ ತತ್ವಗಳನ್ನು ಚೆನ್ನಾಗಿ ತಿಳಿಸಿಕೊಡಬೇಕೆಂಬ ಹಂಬಲ ಅವನದಾಗಿತ್ತು. ಇವೆಲ್ಲಾ ಮೇಲೆ ಹೇಳಿದ ಅವನ ಜೀವನ ಚರಿತ್ರೆಯಿಂದ ನಾವು ತಿಳಿದುಕೊಳ್ಳಬಹುದು.

ಇತ್ಸಿಂಗನ ಭಾರತದ ಬಗೆಗಿನ ಬರೆಹವನ್ನು ತಕಾಕಸು ಎನ್ನುವ ಜಪಾನೀ ವಿದ್ವಾಂಸರು ಭಾಷಾಂತರಿಸಿದ್ದಾರೆ.[೫] ಇತ್ಸಿಂಗನ ಇನ್ನೊಂದು ಬರೆಹವನ್ನು ಇತ್ತೀಚೆಗೆ ಬೇರೆಯವರು ಭಾಷಾಂತರಿಸಿದ್ದಾರೆ.[೬] ಅದರಲ್ಲಿ ಇತ್ಸಿಂಗನು ತನ್ನ ಕಾಲದಲ್ಲಿ ಮತ್ತು ಅದಕ್ಕೆ ಮುಂಚೆ ಬಂದ ಚೀನ ಮತ್ತು ಕೊರಿಯಾದ ಪ್ರವಾಸಿಗಳ ಭಾರತದ ಪ್ರವಾಸದ ಬಗ್ಗೆ ಬರೆದಿದ್ದಾನೆ. ಇವನ ಬರೆಹಗಳಲ್ಲಿ ಕರ್ನಾಟಕಕ್ಕೆ ಸಂಬಂಧಿಸಿದ ಹಲವು ವಿಷಯಗಳಿವೆ. ಚೀನಿ ಭಾಷೆಯಲ್ಲಿ ಭಾರತದ ವಿದ್ವಾಂಸರ ಬಗ್ಗೆ ಇರುವ ಮಾಹಿತಿ ಅಪಾರ. ನಮ್ಮ ವಿದ್ವಾಂಸರು ಈ ಭಾಷೆಯನ್ನು ಕಲಿಯದ ವಿನಾ ಪ್ರಾಚೀನ ಭಾರತದ ಬಗ್ಗೆ ಆ ಭಾಷೆಯಲ್ಲಿರುವ ಮಾಹಿತಿ ನಮಗೆ ದೊರಕುವುದಿಲ್ಲ.

---

೪. Samuel Beal (Ed.) : The Life of Hieun – Tsang by Hwili, New Delhi, 1973. ಇದರ ಟೀಕೆಯಲ್ಲಿ ಇತ್ಸಿಂಗನ ಬಗೆಗೂ ಮಾಹಿತಿ ಇದೆ.

೫. J. Takakasu (Ed.) : Record of the Buddhist Religion as Practised in India and Malaya, Itsing, New Delhi, 1966

೬. S. Dutt : Buddhist Monks and Monasteries of India. ಈ ಪುಸ್ತಕದ ಅನುಬಂಧದಲ್ಲಿ ಇತ್ಸಿಂಗನ ಎರಡನೇ ಪುಟದ ಭಾಷಾಂತರವಿದೆ.

೪.ಕೆಲವು ಪ್ರವಾಸಿಗಳ ಬರೆಹವನ್ನು ಮೊದಲು ಒಂದು ತರಹ ಅರ್ಥಮಾಡಿದರು. ಈಗ ಬೇರೆ ಅರ್ಥ ಮಾಡಿದ್ದಾರೆ. ಇದಕ್ಕೆ ಒಳ್ಳೆಯ ನಿದರ್ಶನ ರಷಿಯಾದ ನಿಕೆಟಿನ್. ಇವನ ವರದಿಯ ಮೊದಲನೆಯ ಇಂಗ್ಲೀಷ್ ಭಾಷಾಂತರವು ಅಷ್ಟು ಸಮರ್ಪಕವಾಗಿರಲಿಲ್ಲ. ಈಗ ನಾವು ಭಾರತದಲ್ಲಿ ಉಪಯೋಗಿಸುತ್ತಿರುವುದು ಇದೇ ಭಾಷಾಂತರವನ್ನೇ. ಇದು ಅಸಮರ್ಪಕವಾಗಿರುವುದಕ್ಕೆ ಕಾರಣ, ರಷ್ಯನ್ ಮೂಲವೇ ಅಸಮರ್ಪಕವಾಗಿತ್ತು. ಈಚೆಗೆ ನಿಕೆಟಿನ್ ಬಗ್ಗೆ ರಷ್ಯಾದಲ್ಲಿ ಉತ್ಸುಕತೆ ಹೆಚ್ಚಾಗಿದೆ. ಅವನ ಬಗ್ಗೆ ಅಧ್ಯಯನ ಹೆಚ್ಚಾಗಿದೆ. ಅವನಿಗೆ ರಷ್ಯನ್ ಸಾಹಿತ್ಯದಲ್ಲಿ ಮೇಲ್ಮಟ್ಟದ ಸ್ಥಾನ ದೊರಕಿದೆ. ಈ ಹೊಸ ಟೀಕಾಕಾರರ ಪ್ರಕಾರ ನಿಕೆಟಿನ್ ಅತ್ಯಂತ ಸಾಮಾನ್ಯ ಮನುಷ್ಯನ ಹಾಗೆ ಭಾರತಕ್ಕೆ ಭೇಟಿಕೊಟ್ಟನು. ಯೂರೋಪಿನಿಂದ ಹೋದ ಇತರ ಪ್ರವಾಸಿಗಳು ರಾಜಮಹಾರಾಜರ ಹಾಗೆ ತಿರುಗಾಡಿದರು. ನಿಕೆಟಿನ್ನನು ಇವರಿಗೆ ವಿರುದ್ಧ ಸಾಮಾನ್ಯ ಪ್ರಜೆಯ ಹಾಗೆ ಹೋಗಿ ಸಾಮಾನ್ಯ ಪ್ರಜೆಗಳ ಜತೆಗೆ ಸೇರಿ ಅವರ ನೋವು ನಲಿವುಗಳನ್ನು ಅರ್ಥಮಾಡಿಕೊಂಡು ಮನಮುಟ್ಟುವ ಹಾಗೆ ಬರೆದಿದ್ದಾನಂತೆ.[೭]

೫. ಯಾವುದೊ ಕಾರಣದಿಂದ ನಮ್ಮ ಲಕ್ಷ್ಯ ಕೆಲವು ಪ್ರವಾಸಿಗಳ ಕಡೆ ಹರಿದೆ ಇಲ್ಲ, ಹರಿಯುವುದು ಅವಶ್ಯ. ಇದಕ್ಕೆ ಒಂದು ಉದಾಹರಣೆ, ಟಾಮ್ ಪರೇಸನ 'ಸುಮಾ ಓರಿಯಂಟಲ್.' ಪರೇಸನು ವಿಜಯನಗರದ ಬಗ್ಗೆ ಸಂಕ್ಷಿಪ್ತವಾಗಿ ಆದರೆ ಹೊಸ ವಿಷಯಗಳನ್ನು ಒಳಗೊಂಡು ಬರೆದಿದ್ದಾನೆ. ಅದರ ಬಂದರುಗಳಾದ ಹೊನ್ನಾವರ, ಭಟಕಳ್, ಮಂಗಳೂರುಗಳ ಬಗೆಗೆ ಬರೆದಿದ್ದಾನೆ. ಕೃಷ್ಣದೇವರಾಯನು ಕನ್ನಡದವನೆಂದು ಬರೆದಿದ್ದಾನೆ.[೮] ವಿಜಯನಗರದ ಬಗ್ಗೆ ಬರೆಯುವವರು ಅದರಲ್ಲಿಯೂ ಕೃಷ್ಣದೇವರಾಯನ ಬಗ್ಗೆ ಬರೆಯುವವರು ಇವನ ವರದಿಯನ್ನು ಓದಲೇಬೇಕು.

ಕೊನೆಯದಾಗಿ, ಪ್ರವಾಸಿ ಸಾಹಿತ್ಯದ ಅಧ್ಯಯನದಲ್ಲಿ ಈ ಹೊಸ ಹೆಜ್ಜೆಗಳು ಏಕೆ ಅನಿವಾರ್ಯವೆಂದು ಈಗ ನೋಡೋಣ. ಹತ್ತೊಂಬತ್ತನೆಯ ಶತಮಾನದಲ್ಲಿ ಮತ್ತು ಇಪ್ಪತ್ತನೆಯ ಶತಮಾನದ ಪೂರ್ವಾರ್ಧದಲ್ಲಿ ಭಾರತೀಯ ಇತಿಹಾಸಕ್ಕೆ ಸಾಮಗ್ರಿಗಳನ್ನು ಹುಡುಕುವುದರಲ್ಲಿ ಇತಿಹಾಸಕಾರರು ನಿರತರಾಗಿದ್ದರು. ವಿದೇಶದಲ್ಲಿದ್ದ ಭಾರತೀಯರ ಚಟುವಟಿಕೆಗಳ ಕಡೆ ಅವರ ದೃಷ್ಟಿ ಹಾಯಲಿಲ್ಲ. ಈಗ ಆ ಭಾರತೀಯರ ಬಗೆಗೆ ತಿಳಿದುಕೊಳ್ಳುವ ಉತ್ಸುಕತೆ ಹೆಚ್ಚಾಗಿದೆ. ಪ್ರಾಚೀನ ಯುಗದಲ್ಲಿ ಕ್ರಿಸ್ತಶಕದ ಮೊದಲ ಸಾವಿರ ವರ್ಷಗಳಲ್ಲಿ ಚೀನಕ್ಕೂ ಭಾರತಕ್ಕೂ

7. Bharat – Rus : The Chapter on A. Nikitin

8. The Suma Oriental of Tome Pires, London, 1944

ನಿಕಟ ಸಂಪರ್ಕವಿತ್ತು. ನೂರಾರು ಭಾರತೀಯ ವಿದ್ವಾಂಸರು, ವ್ಯಾಪಾರಿಗಳು, ಕಲೆಗಾರರು ಅಲ್ಲಿಗೆ ಹೋಗಿ ನೆಲಸಿ ನಮ್ಮ ಸಂಸ್ಕೃತಿಯನ್ನೂ ಬೌದ್ಧಮತವನ್ನೂ ಹರಡಿದರು. ಆದರೆ ಅವರು ತಾವು ಮಾಡಿದ ಕೆಲಸದ ಬಗ್ಗೆ ಒಂದು ಚಕಾರವನ್ನೂ ಬರೆದಿಡಲಿಲ್ಲ. ಚೀನಿ ಪ್ರವಾಸಿಗಳು ತಮ್ಮ ಭಾರತದ ಪ್ರವಾಸದ ಬಗ್ಗೆ ಬರೆಯುವುದನ್ನು ನಮ್ಮ ಇತಿಹಾಸಕಾರರು ತಿಳಿದುಕೊಂಡಿದ್ದಾರೆ. ಚೀನಾದಲ್ಲಿಯ ಭಾರತೀಯರ ಚಟುವಟಿಕೆಗಳನ್ನು ನಾವು ಸಂಪೂರ್ಣವಾಗಿ ಅಲಕ್ಷಿಸಿದ್ದೇವೆ. ಈ ಚಟುವಟಿಕೆಗಳು ಚೀನಿಯ ಇತಿಹಾಸದಲ್ಲಿ ಹಾಸುಹೊಕ್ಕಾಗಿವೆ. ಇದುವರೆಗೂ ಯೂರೋಪಿಯನ್ನರು ಚೀನಿ ಇತಿಹಾಸದ ಬಗೆಗೆ ತಮ್ಮ ಭಾಷೆಯಲ್ಲಿ ಬರೆದಿದ್ದಾರೆ. ಈ ಗ್ರಂಥಗಳು ಭಾರತೀಯ ಇತಿಹಾಸಕಾರರಿಗೆ ಪರಿಚಯವಾಗಿವೆ. ಈಚೆಗೆ ಜಪಾನಿಯರು ಈ ಅಧ್ಯಯನದಲ್ಲಿ ಯೂರೋಪಿನವರನ್ನು ಮತ್ತು ಚೀನಿಯರನ್ನು ಹಿಂದೆ ಹಾಕಿದ್ದಾರೆ. ನಮ್ಮವರು ಜಪಾನಿ ಮತ್ತು ಚೀನಿ ಭಾಷೆಗಳನ್ನು ಅಭ್ಯಾಸ ಮಾಡಿದರೆ ಪ್ರಾಚೀನ ಭಾರತೀಯ ಇತಿಹಾಸಕ್ಕೆ ವಿಪುಲಸಾಮಗ್ರಿಯನ್ನೂ ಅದರ ಅಧ್ಯಯನಕ್ಕೆ ಒಂದು ಹೊಸ ಆಯಾಮವನ್ನೂ ತಂದುಕೊಡಬಹುದು.

ಮಧ್ಯಯುಗದಲ್ಲಿ ಭಾರತೀಯರು ಪರ್ಷಿಯಾವನ್ನು ತಮ್ಮ ಕೇಂದ್ರವನ್ನಾಗಿ ಮಾಡಿಕೊಂಡು ಪಶ್ಚಿಮ ಏಷ್ಯಾ ಮತ್ತು ರಷ್ಯಾಗಳೊಡನೆ ತಮ್ಮ ವ್ಯಾಪಾರವನ್ನು ಬೆಳೆಸಿಕೊಂಡಿದ್ದರು. ಇವರ ಚಟುವಟಿಕೆಗಳು ಯೂರೋಪಿನಿಂದ ಭಾರತಕ್ಕೆ ಬಂದ ಪ್ರವಾಸಿಗಳ ಬರೆಹಗಳಲ್ಲಿ ನಾವು ನೋಡಬಹುದು. ಇದುವರೆಗೂ ಈ ಯೂರೋಪಿಯನ್ ಭಾಷೆಗಳಲ್ಲಿರುವ ಪ್ರವಾಸಿಗಳ ವರದಿಗಳ ಇಂಗ್ಲೀಷ್ ಭಾಷಾಂತರಗಳನ್ನು ನಾವು ಓದುತ್ತಿದ್ದೆವು. ಈಚೆಗೆ ಭಾರತೀಯರು ಫ್ರಾನ್ಸ್, ಜರ್ಮನಿ ಮತ್ತು ರಷ್ಯಾಗಳಿಗೆ ಹೋಗಿ ಆ ಭಾಷೆಗಳಲ್ಲಿ ನಮ್ಮಲ್ಲಿಗೆ ಬಂದ ಆದರೆ ಇದುವರೆಗೂ ನಮಗೆ ತಿಳಿಯದ ಪ್ರವಾಸಿಗಳ ಲೇಖನಗಳನ್ನು ಪತ್ತೆ ಹಚ್ಚಿದ್ದಾರೆ. ಹೀಗೆ ಪ್ರವಾಸಿ ಸಾಹಿತ್ಯ ವಿಪುಲವಾಗಿರುವುದನ್ನು ಮತ್ತು ಅವುಗಳ ಅಧ್ಯಯನದಿಂದ ನಮ್ಮ ಇತಿಹಾಸಕ್ಕೆ ಹೊಸ ಸಾಮಗ್ರಿ ದೊರಕುವುದನ್ನು ಕಂಡುಹಿಡಿದಿದ್ದಾರೆ.

■

೨೩

ಸ್ಥಳೀಯ ಸಂಸ್ಥೆಗಳ ಅಥವಾ ಪಂಚಾಯಿತಿಗಳ ಇತಿಹಾಸದಲ್ಲಿ ಮೈಲಿಗಲ್ಲುಗಳು

ಆಧುನಿಕ ಯುಗದಲ್ಲಿ ಪಂಚಾಯಿತಿಗಳು ಅವಶ್ಯವೆ

ನಮ್ಮಲ್ಲಿಯ ಪುರಾತನ ರಾಜ್ಯಗಳ ಕೇಂದ್ರ ಮತ್ತು ಪ್ರಾಂತೀಯ ಸರ್ಕಾರಗಳಲ್ಲಿ ಪ್ರಜಾಸತ್ತೆಯ ಅಂಶಗಳು ಇರಲಿಲ್ಲ. ಸ್ಥಳೀಯ ಸಂಸ್ಥೆಗಳಲ್ಲಿ ಈ ಅಂಶಗಳನ್ನು ಬಹಳ ಹಿಂದಿನಿಂದಲೂ ನಾವು ಗುರುತಿಸಬಹುದು. ಪ್ರಜಾಸತ್ತಾತ್ಮಕವಾದ ಈ ಸ್ಥಳೀಯ ಸಂಸ್ಥೆಗಳನ್ನು ಪಂಚಾಯತಿಗಳೆಂದು ಕರೆಯಬಹುದು.[1] ಸ್ವಾತಂತ್ರ್ಯದ ತರುವಾಯ ನಾವು ಬ್ರಿಟಿಷ್ ಪಾರ್ಲಿಮೆಂಟಿನ ಪದ್ಧತಿಯನ್ನು ಅನುಸರಿಸುತ್ತಿದ್ದೇವೆ. ಈ ಹೊಸ ಪದ್ಧತಿಯ ಜತೆಗೆ ಹಳೆಯ ಪಂಚಾಯತಿ ಪದ್ಧತಿ ಹೇಗೆ ಸರಿಹೋಗುತ್ತದೆಯೆಂದು ಕೆಲವರು ಶಂಕಿಸುತ್ತಾರೆ. ಕಾನ್‌ಸ್ಟಿಟುಯೆಂಟ್ ಅಸೆಂಬ್ಲಿಯಲ್ಲಿ ಈ ವಿಷಯದ ಚರ್ಚೆ ನಡೆದಾಗ ಆಧುನಿಕ ಸಂಸ್ಥೆಗಳ ಪುರಸ್ಕರ್ತರೊಬ್ಬರು ಈ ಎರಡು ಪದ್ಧತಿಗಳು ಜತೆ ಜತೆಗೆ ಹೇಗೆ ಇರುತ್ತವೆಯೆಂದರೆ ವಿಮಾನ ಯುಗದಲ್ಲಿ ಎತ್ತಿನ ಗಾಡಿಯನ್ನು ಅವಲಂಬಿಸಿದ ಹಾಗೆ ಎಂದು ಪಂಚಾಯತಿಗಳನ್ನು ಹಳಿದರು. ಎಪ್ಪತ್ತು ವರ್ಷಗಳ ನಂತರ ಪಾರ್ಲಿಮೆಂಟರಿ ಪದ್ಧತಿಯಲ್ಲಿಯೇ ದೋಷಗಳು ಎದ್ದು ಕಾಣಲಾರಂಭಿಸಿವೆ. ಲೋಕಸಭೆ ಮತ್ತು ವಿಧಾನ ಸಭೆಗಳಲ್ಲಿ ಗೊಂದಲಗಳು ದಿನದ ಮಾತಾಗಿವೆ. ಆ ಗೊಂದಲಗಳನ್ನು ನಿವಾರಿಸಲು, ಕೆಲವರು ಅಮೆರಿಕೆಯ ಅಧ್ಯಕ್ಷೀಯ ಪದ್ಧತಿಯನ್ನು ಅನುಸರಿಸಬೇಕೆನ್ನುತ್ತಾರೆ. ಅಮೆರಿಕೆಯಲ್ಲಿಯೇ ಅಧ್ಯಕ್ಷೀಯ ಪದ್ಧತಿಯ ಬಗ್ಗೆ ಅಸಂತೋಷವಿದ್ದು ಅಲ್ಲಿಯ ಸುಧಾರಕರು ಪಾರ್ಲಿಮೆಂಟರಿ ಪದ್ಧತಿಯನ್ನು ಅನುಸರಿಸಬೇಕೆನ್ನುತ್ತಾರೆನ್ನುವುದು ಇಲ್ಲಿಯ ಸುಧಾರಕರಿಗೆ ತಿಳಿಯದು.

[1] ಪ್ರಜಾಸತ್ತಾತ್ಮಕ ಸ್ಥಳೀಯ ಸಂಸ್ಥೆ ಎನ್ನುವುದಕ್ಕಿಂತ ಅದೇ ಅರ್ಥದ ಪಂಚಾಯಿತಿ ಎನ್ನುವ ಶಬ್ದ ಎಲ್ಲರಿಗೂ ತಕ್ಷಣ ತಿಳಿಯುವುದರಿಂದ ಆ ಶಬ್ದವನ್ನು ಇಲ್ಲಿ ಉಪಯೋಗಿಸಿದ್ದೇವೆ. ಪಂಚಾಯತಿ ಎನ್ನುವ ಶಬ್ದ ೧೯ನೇ ಶತಮಾನದ ಬ್ರಿಟಿಷ್ ಬರವಣಿಗೆಯಲ್ಲಿ ವಿರಳವಾಗಿ ಬಳಸಲ್ಪಟ್ಟಿದೆ. ಅವರು ಅದನ್ನು ಸೃಷ್ಟಿಸಲಿಲ್ಲ. ಹಿಂದಿನಿಂದಲೂ ಅದು ಬಳಕೆಯಲ್ಲಿರಬೇಕು. ಎಷ್ಟು ಹಿಂದೆ ಎನ್ನುವುದನ್ನು ಪತ್ತೆ ಹಚ್ಚಬೇಕಾಗಿದೆ.

ಬೇರೆ ದೇಶದಲ್ಲಿ ಹುಟ್ಟಿ ಬೆಳೆದ ಪದ್ಧತಿಗಳು ನಮ್ಮ ವಾತಾವರಣಕ್ಕೆ ಸರಿ ಹೋಗದಿರಬಹುದು. ನಮ್ಮ ದೇಶದಲ್ಲಿಯೇ ಹುಟ್ಟಿ ಬೆಳೆದು ಪ್ರೋತ್ಸಾಹವಿಲ್ಲದ ಪಂಚಾಯತಿ ಪದ್ಧತಿಯ ಅನುಸರಣೆಯು ನಮ್ಮ ಸ್ಥಳೀಯ ಸಂಸ್ಥೆಗಳ ಯಶಸ್ಸಿಗೆ ಕಾರಣವಾಗಬಹುದು. ಇಷ್ಟೇ ಅಲ್ಲ, ಅದರ ತಿರುಳನ್ನು ವಿಧಾನಸಭೆ ಮತ್ತು ಲೋಕಸಭೆಗಳಲ್ಲಿಯೂ ಅನುಸರಿಸಬಹುದು. ಈ ದೃಷ್ಟಿಯಿಂದ ನಮ್ಮ ಪಂಚಾಯತಿಗಳು, ಹಿಂದೆ ಹೇಗೆ ಕೆಲಸ ಮಾಡಿದವು. ಬ್ರಿಟಿಷರ ಕಾಲದಲ್ಲಿ ಹೇಗೆ ನಶಿಸಿದವು ಈಗ ಅವುಗಳ ಪುನಃ ಪ್ರತಿಷ್ಠಾಪನ ಅವಶ್ಯವೇ, ಸಾಧ್ಯವೇ, ಎನ್ನುವ ಸಮಸ್ಯೆಗಳನ್ನು ನೋಡೋಣ. ಅದಕ್ಕೆ ಪೀಠಿಕೆಯಾಗಿ ಅದರ ಇತಿಹಾಸದಲ್ಲಿಯ ಮೈಲುಗಲ್ಲುಗಳನ್ನು ನೋಡೋಣ.

ಪಂಚಾಯತಿಗಳ ಉದಯ :

ಕರ್ನಾಟಕ ಇತಿಹಾಸದಲ್ಲಿ, ಸ್ಥಳೀಯ ಸಂಸ್ಥೆಗಳ ಆಡಳಿತವು ಪ್ರಜೆಗಳ ಕೈಯಲ್ಲಿರುವುದನ್ನು ಮೊಟ್ಟಮೊದಲು ನಾವು ನೋಡುವುದು ಇತಿಹಾಸಪ್ರಸಿದ್ಧವಾದ ಬಳ್ಳಿಗಾವೆಯಲ್ಲಿ. ಅಲ್ಲಿಯ ಕ್ರಿ.ಶ. ೬೮೫ರ ಶಾಸನದ ಪ್ರಕಾರ ಆ ಊರಿನ ಆಡಳಿತವು ಪಾರ್ವರ (ಮಹಾಜನಗಳ ಮತ್ತು ಪ್ರಜೆಗಳ ಕೈಯಲ್ಲಿತ್ತು.[೨] ಎರಡನೆಯ ಉದಾಹರಣೆಯು ಬಹಳ ಪ್ರಸಿದ್ಧವಾದದು. ಅದರ ಉಲ್ಲೇಖವು ಚಾಲುಕ್ಯ ಯುವರಾಜ ವಿಕ್ರಮಾದಿತ್ಯನ ಲಕ್ಷ್ಮೇಶ್ವರದ ಶಾಸನದಲ್ಲಿರುವುದು.[೩] ಇದರ ತೇದಿ ಸು. ಕ್ರಿ.ಶ. ೭೨೫. ಇದರ ಪ್ರಕಾರ ಯುವರಾಜ ವಿಕ್ರಮಾದಿತ್ಯನು ಪುಲಿಗೆರೆಯ (ಈಗಿನ ಲಕ್ಷ್ಮೇಶ್ವರ) ಮಹಾಜನರಿಗೆ, ನಗರಗಳಿಗೆ (ವರ್ತಕರ ಶ್ರೇಣಿಗೆ) ಮತ್ತು ೧೮ ಪ್ರಕೃತಿಗಳಿಗೆ (ಪ್ರಜೆಗಳಿಗೆ) ಆ ಊರಿನ ಆಡಳಿತವನ್ನು ಹೇಗೆ ನಡೆಯಿಸಬೇಕೆನ್ನುವ ಆದೇಶವನ್ನು ಕೊಡುತ್ತಾನೆ. ಇದರಿಂದ ರಾಜರು ಅಥವಾ ಅವರ ಪರವಾಗಿ ಯುವರಾಜರು ಬಾದಾಮಿ ಚಾಲುಕ್ಯರ ಕಾಲದಲ್ಲಿ ಸ್ಥಳೀಯ ಸಂಸ್ಥೆಗಳಿಗೆ ಸ್ವಾಯತ್ತತೆಯ ಅಧಿಕಾರವನ್ನು ಕೊಡುತ್ತಿದ್ದುದು ಸ್ಪಷ್ಟವಾಗುತ್ತದೆ. ಕರ್ನಾಟಕದಲ್ಲಿ ಸ್ವಾಯತ್ತ ಸ್ಥಳೀಯ ಸಂಸ್ಥೆಗಳ ಅಥವಾ ಪಂಚಾಯತಿಗಳ ಇತಿಹಾಸದಲ್ಲಿ ಇದು ಮೊದಲ ಮೈಲುಗಲ್ಲು.

ಪಂಚಾಯತಿಗಳ ಉಚ್ಛ್ರಾಯ ಕಾಲ :

ಕ್ರಿ.ಶ. ೭ನೇ ಶತಮಾನದ ಕೊನೆಗೆ ಮತ್ತು ೮ನೇ ಶತಮಾನದ ಆದಿ ಭಾಗದಲ್ಲಿ ಉದಯಿಸಿದ ಪಂಚಾಯಿತಿಗಳು ರಾಷ್ಟ್ರಕೂಟರ ಕಾಲದಿಂದ ವಿಜಯನಗರ ಸಾಮ್ರಾಜ್ಯ

---

೨. ಎ.ಕ. VII ಶಿಕಾರಿಪುರ ೧೫೪, ಕನ್ನಡ ಪಾಠ, ಪುಟ ೨೬೧.

೩. ಎ.ಎಂ. XIV, ಪುಟಗಳು ೧೯೦ ಮತ್ತು ಮುಂದೆ

ಸ್ಥಾಪನೆಯಾಗುವವರೆಗು ಉಚ್ಛ್ರಾಯ ಸ್ಥಿತಿಯಲ್ಲಿದ್ದವೆಂದು ಹೇಳಬಹುದು. ಹಳ್ಳಿ, ನಗರ, ನಾಡು ಮತ್ತು ಮಹಾನಾಡುಗಳಲ್ಲಿ ಜನರು ತಮ್ಮ ಪ್ರತಿನಿಧಿಗಳ ಮುಖಾಂತರ ಆಡಳಿತವನ್ನು ನಡೆಯಿಸುತ್ತಿದ್ದರು. ಪ್ರಜಾಸತ್ತೆಯಲ್ಲಿ ಅನೇಕ ಪ್ರಯೋಗಗಳನ್ನು ಮಾಡಿದರು. ತಮ್ಮ ಊರುಗಳಲ್ಲಿ ಸಮರ್ಪಕವಾದ ಆಡಳಿತ ಪದ್ಧತಿಗಳನ್ನು ನಿರ್ಮಿಸುವುದರಲ್ಲಿ ವಿಶೇಷ ಪ್ರಯತ್ನಗಳನ್ನು ಮಾಡಿದರು. ಹೊನ್ನಾಳಿಯ ಹತ್ತಿರವಿರುವ ಕೊಳ್ಳಿಗನಗಟ್ಟವೆನ್ನುವ ಊರಿನ ಪ್ರಜೆಗಳು ತಮ್ಮ ಊರಿನ ಹೊಸ ಘಟನೆಯು ಹಿಮಾಚಲದವರೆಗು ಪ್ರಸಿದ್ಧವಾಗಬೇಕೆಂದು ಆಶಿಸಿದರು.[೭] ಊರಿನ ಪ್ರಜಾ ಮುಖಂಡರನ್ನು ತಿಂಗಳಿಗೊಂದು ಸಲ ಬದಲಾಯಿಸುವ ಪ್ರಯೋಗವನ್ನು ಕೆಲವು ಊರುಗಳೇ ಮಾಡಿದವು.[೮] ಹೀಗೆ ಅನೇಕ ಪ್ರಜಾಸತ್ತೆಯಲ್ಲಿ ಪ್ರಯೋಗಗಳನ್ನು ಮಾಡುತ್ತಿದ್ದ ಕಾಲವದು. ಪ್ರಜಾಸತ್ತಾತ್ಮಕ ಪ್ರಯೋಗಗಳು ವೈವಿಧ್ಯಮಯವಾಗಿದ್ದವಲ್ಲದೆ ದೀರ್ಘಕಾಲ ಅಸ್ತಿತ್ವದಲ್ಲಿದ್ದವು. ಬಾಗಲಿ (ಬಳ್ಳಾರಿ ಜಿಲ್ಲೆ) ಅಗ್ರಹಾರದ ಉದಾಹರಣೆಯನ್ನು ತೆಗೆದುಕೊಂಡರೆ ಈಗ ಲಭ್ಯವಿರುವ ಅಲ್ಲಿಯ ಅನೇಕ ಶಾಸನಗಳಿಂದ ಹತ್ತನೆ ಶತಮಾನದ ಆದಿಯಿಂದ ಹದಿನಾಲ್ಕನೆಯ ಶತಮಾನದ ಆದಿಯವರೆಗು ಈ ಅಗ್ರಹಾರವು ಅಲ್ಲಿಯ ಮಹಾಜನಗಳ ಹತೋಟಿಯಲ್ಲಿದ್ದುದು ಕಂಡುಬರುತ್ತವೆ. ಅವರ ಜತೆಗೆ ಅಲ್ಲಿಯ ಸಂಸ್ಥೆಗಳಾದ ಅಯ್ಯಾ ಪೊಳೆ ಐನೂರ್ವರೆಂಬ ವ್ಯಾಪಾರಿಗಳ ಶ್ರೇಣಿಯು, ತಂಬುಲಿಗ ಸಾಸಿರ್ವರು, ಮಲೆಯಾಳಿ ವರ್ತಕರು ಸಹಕರಿಸಿ ಆ ಊರಿನಲ್ಲಿ ಅನೇಕ ದೇವಸ್ಥಾನಗಳನ್ನು, ಕೆರೆಗಳನ್ನು ಛತ್ರಗಳನ್ನು ಕಟ್ಟಿಸಿ ಬಾಗಲಿಯ ಪ್ರಸಿದ್ಧಿಯನ್ನು ಎಷ್ಟರ ಮಟ್ಟಿಗೆ ಹೆಚ್ಚಿಸಿದರೆಂದರೆ ಹೊಯ್ಸಳ ಎರಡನೆಯ ವೀರ ಬಲ್ಲಾಳನು ಅದನ್ನು ಭೇಟಿ ಮಾಡಿದನು.[೯]

ವಿಜಯನಗರದ ಕಾಲ :

ಸ್ಥಳೀಯ ಸಂಸ್ಥೆಗಳ ಪ್ರಜಾಸತ್ತಾತ್ಮಕ ಆಡಳಿತಕ್ಕೆ ಹಿಂದಿನ ರಾಜರುಗಳು ಕೊಟ್ಟ ಹಾಗೆ ವಿಜಯನಗರದ ರಾಜರು ಪ್ರೋತ್ಸಾಹ ಕೊಡಲಿಲ್ಲ. ಇದಕ್ಕೆ ಕಾರಣ ಆ ರಾಜರ ಲಕ್ಷ್ಯವೆಲ್ಲಾ ಯುದ್ಧದ ಮೇಲೆ ಕೇಂದ್ರೀಕೃತವಾಗಿತ್ತು: ಬಹುಮನಿಯವ ರೊಡನೆ ಯುದ್ಧವು ಎಡೆಬಿಡದೆ ನಡೆದಿತ್ತು. ಆದರೆ ಈ ಕಾಲದಲ್ಲಿ ಸ್ಥಳೀಯ

ಎ.ಕ. VII, ಹೊನ್ನಾಳಿ ೬೧, ಶಾಸನದ ಸಾಲುಗಳು ೩೬–೪೦

ಈ ಊರುಗಳು ಯಾವೆಂದರೆ ಸೆಟ್ಟಿಕೆರೆ ಮತ್ತು ತುರವೇಕೆರೆ (ತುಮಕೂರು ಜಿಲ್ಲೆ) ಎ.ಕ. XII. ಚಿಕ್ಕನಾಯಕನಹಳ್ಳಿ ೨ ಮತ್ತು ತಿಪಟೂರು ೨ ಮತ್ತು ೪. ಈ ತಿಂಗಳಿಗೊಬ್ಬ ಮಾಸ ವೆಗ್ಗಡೆಯೆನ್ನುತ್ತಿದ್ದರು.

ಪ್ರೊ॥ ಜಿ.ಎಸ್. ದೀಕ್ಷಿತ್ : ಲೋಕಲ್ ಸೆಲ್ಫ್ ಗವರ್ನ್‌ಮೆಂಟ್ ಇನ್ ಮೇಡಿವಲ್ ಕರ್ನಾಟಕದ ಪು. ೧೩೧–೮

ಸಂಸ್ಥೆಗಳು ನಶಿಸಿ ಹೋಗಲಿಲ್ಲ. ಡಾ ॥ ಮಹಾಲಿಂಗಂ ಟಿ.ವಿ.[೭] ಮತ್ತು ಡಾ ॥ ಎನ್. ವೆಂಕಟರಮಣಯ್ಯನವರು[೮] ಇವು ಸಂಪೂರ್ಣವಾಗಿ ನಶಿಸಿ ಹೋದವೆಂದು ಹೇಳುತ್ತಾರೆ. ಹಾಗೆ ಆಗಲಿಲ್ಲವೆಂದು ಡಾ ॥ ಎ.ವಿ. ವೆಂಕಟರತ್ನಂ[೯] ಅವರು ತೋರಿಸಿಕೊಟ್ಟಿದ್ದಾರೆ.

ಪಾಳೆಯಗಾರರ ಕಾಲ :

ವಿಜಯನಗರ ಕಾಲದ ನಂತರ ಕರ್ನಾಟಕದಲ್ಲಿ ಮೈಸೂರಿನ ಒಡೆಯರು, ಅವರ ನಂತರ, ಹೈದರ್, ಟಿಪ್ಪು, ಮತ್ತು ಅವರ ಜತೆಗೆ ಕೆಳದಿ ನಾಯಕರು ಮತ್ತು ಅನೇಕ ಪಾಳೆಯಗಾರರು ಆಳಿದರು. ಇದನ್ನು ಪಾಳೆಯಗಾರರ ಕಾಲವೆಂದು ಕರೆಯಬಹುದು. ಈ ಎರಡು ಶತಮಾನಗಳಲ್ಲಿ (೧೭-೧೮) ಸ್ಥಳೀಯ ಸಂಸ್ಥೆಗಳ ಆಗು-ಹೋಗುಗಳ ಬಗ್ಗೆ ಸಾಕಷ್ಟು ಸಂಶೋಧನೆಯಾಗಿಲ್ಲ. ಆದರೂ ಅವು ಇದ್ದೇ ಇದ್ದವು. ಯಾಕೆಂದರೆ ಆ ಕಾಲದ ಕೊನೆಗೆ ಬಂದ ಬ್ರಿಟಿಷ್ ಬರೆಹಗಾರರು ಅವು ಉತ್ತಮ ಕೆಲಸವನ್ನು ಮಾಡುತ್ತಿದ್ದವೆಂದು ಮುಕ್ತ ಕಂಠದಿಂದ ಹೊಗಳಿದ್ದಾರೆ ಮತ್ತು ಇದೇ ಕಾಲದಲ್ಲಿ ಅವು ಮಹಾರಾಷ್ಟ್ರದಲ್ಲಿ ಊರ್ಜಿತ ಸ್ಥಿತಿಯಲ್ಲಿದ್ದುದು ನಮ್ಮಲ್ಲಿ ಆಯಗಾರರ ಪದ್ಧತಿಯೆನ್ನುವುದಕ್ಕೆ ಅಲ್ಲಿ ಬಾರಾ ಬಲೂತಿ ಪದ್ಧತಿಯೆನ್ನುತ್ತಾರೆ. ಎರಡೂ ಪದ್ಧತಿಗಳು ಪ್ರಜಾಸತ್ತೆಯ ಅಂಶಗಳನ್ನು ಒಳಗೊಂಡಿದ್ದವು.

ಬ್ರಿಟಿಷರ ಕಾಲದಲ್ಲಿ ಅವನತಿ :

ಬ್ರಿಟಿಷ್ ಅಧಿಕಾರಿಗಳು ಮೊಟ್ಟ ಮೊದಲು ನಮ್ಮಲ್ಲಿಗೆ ಬಂದಾಗ ಇಲ್ಲಿಯ ಪಂಚಾಯತಿಗಳು ಕೆಲಸ ಮಾಡುವುದನ್ನು ನೋಡಿ ಚಕಿತರಾದರು. ಮನ್ರೋ, ಮೆಟಕಾಫ್, ಎಲ್‌ಫಿನ್‌ಸ್ಟನ್ ಮುಂತಾದವರು ಭಾರತದಾದ್ಯಂತ ಇದ್ದ ಈ ಸಂಸ್ಥೆಗಳನ್ನು ಸಣ್ಣ ರಾಜ್ಯಗಳೆಂದು ಬರೆದಿದ್ದಾರೆ. ೧೯ನೇ ಶತಮಾನದ ಆದಿ ಭಾಗದಲ್ಲಿ, ಬ್ರಿಟಿಷ್ ಅಧಿಕಾರಿಗಳು ಬರೆದ Report ಎನ್ನುವ ವರದಿಯು ಪಂಚಾಯತಿಗಳ ಆಳ್ವಿಕೆಯನ್ನು ಈ ರೀತಿ ಶ್ಲಾಘಿಸುತ್ತದೆ. "ಅನಾದಿ ಕಾಲದಿಂದಲೂ ಹಸದಳವಾದ ಪಂಚಾಯತಿಗಳ ಆಡಳಿತದಲ್ಲಿ ಈ ದೇಶದ ಜನರು ವಾಸಿಸಿದ್ದಾರೆ. ಹಳ್ಳಿಗಳ ಮೇರೆಗಳು ಬದಲಾಯಿಸಿರುವುದು ಅಪರೂಪ. ಅನೇಕ ಸಂದರ್ಭಗಳಲ್ಲಿ

---

೭. ಟಿ.ವಿ. ಮಹಾಲಿಂಗಂ : ಸೌತ್ ಇಂಡಿಯನ್ ಪಾಲಿಟಿ, ಪುಟ ೩೭೧-೨

೮. ಎನ್. ವೆಂಕಟರಮಣಯ್ಯ : ಸ್ಟಡೀಸ್ ಇನ್ ದಿ ಹಿಸ್ಟರಿ ಆಫ್ ದಿ ಫರ್ಸ್ಟ್ ಡೈನಾಸ್ಟಿ ಆಫ್ ವಿಜಯನಗರ, ಪುಟ ೧೫೫

೯. ಎ.ವಿ. ವೆಂಕಟರತ್ನಂ : ಲೋಕಲ್ ಗವರ್ನಮೆಂಟ್ ಇನ್ ದಿ ವಿಜಯನಗರ್ ಎಂಪೈರ್

ಯುದ್ಧ, ಬರಗಾಲ, ಬೇನೆ ಮುಂತಾದವುಗಳಿಂದ ಹಳ್ಳಿಗಳು ಹಾಳಾಗಿದ್ದರೂ, ಅವು ಪುನರುದ್ಧಾರವಾದಾಗ, ಅದೇ ಮನೆತನಗಳು ಅದೇ ಮೇರೆಗಳು, ಅವೇ ಆಸ್ಥೆಗಳು (interest) ಶತಮಾನಗಳವರೆಗೆ ಮುಂದುವರೆದಿವೆ. ಆಳರಸರು ಬದಲಾದರೂ ಹಳ್ಳಿಗಳಲ್ಲಿ ಬದಲಾವಣೆ ಇಲ್ಲ."[೧೦]

ಈ ವರದಿಯ ಮೇಲೆ ಆರ್.ಸಿ. ದತ್ತರು ಈ ರೀತಿ ಟೀಕೆಯನ್ನು ಮಾಡಿದ್ದಾರೆ. "ಈ ಬರೆವಣಿಗೆಯು ಬಹಳ ಮಹತ್ವದ್ದು. ಯಾಕೆಂದರೆ ಈ ಪಂಚಾಯತಿಗಳ ಬಗೆಗೆ ಬರೆದವರು ಪುರಾತನ ಹಿಂದೂ ಕಾಲದವರಲ್ಲ. ೧೮ನೇ ಶತಮಾನದ ಈಸ್ಟ್ ಇಂಡಿಯಾ ಕಂಪನಿಯ ನೌಕರರು ತಾವು ನೋಡಿದ್ದನ್ನು ಮತ್ತು ಕೇಳಿದ್ದನ್ನು ತಮ್ಮ ಅಧಿಕೃತ ಬರೆಹಗಳಲ್ಲಿ ಹೀಗೆ ಬರೆದಿದ್ದಾರೆ." ಆರ್.ಸಿ. ದತ್ತರು ಹೀಗೆ ಹೇಳುತ್ತಾರೆ. "ಬ್ರಿಟಿಷ್ ಆಳರಸರು ಈ ಪಂಚಾಯತಿಗಳನ್ನು ಪೋಷಿಸಿ ಮುಂದುವರಿಸಿ ಕೊಂಡು ದೇಶಕ್ಕೆ ಒಳಿತಾಗುತ್ತಿತ್ತು."[೧೧] ಆದರೆ ಎರಡು ಕಾರಣಗಳು ಬ್ರಿಟಿಷರ ಆಳ್ವಿಕೆಯ ಪ್ರಾರಂಭದಿಂದ ಈ ಪಂಚಾಯತಿಗಳನ್ನು ಕ್ಷೀಣಗೊಳಿಸಿದವು. ಅವು ಯಾವುವೆಂದರೆ:

೧. ಜನರಿಂದ ಆದಷ್ಟು ಹೆಚ್ಚು ಕಂದಾಯವನ್ನು ಪಡೆಯಬೇಕೆಂಬ ಅವರ ದುರಾಸೆಯಿಂದ, ಪ್ರತಿಯೊಬ್ಬ ರೈತನೊಂದಿಗೆ ನೇರವಾಗಿ ಕರಾರು ಮಾಡಿಕೊಂಡು. ಮೊದಲು ಪಟೇಲನ ಮುಖಾಂತರ ಹಳ್ಳಿಯ ಒಟ್ಟು ಕಂದಾಯವನ್ನು ವಸೂಲು ಮಾಡುತ್ತಿದ್ದರು ಇದರಿಂದ ಹಳ್ಳಿಯ ಒಗ್ಗಟ್ಟು, ಪಟೇಲನ ಮುಖಂಡತ್ವ ಅಬಾಧಿತವಾಗಿತ್ತು.

೨. ಎಲ್ಲಾ ರಾಜಕೀಯ ಮತ್ತು ನ್ಯಾಯದಾನ ಪದ್ಧತಿಗೆ ಸಂಬಂಧಪಟ್ಟ ಅಧಿಕಾರವನ್ನು ತಮ್ಮಲ್ಲಿ ಕೇಂದ್ರೀಕೃತ ಮಾಡಿಕೊಂಡರು. ಮೊದಲು ಪಟೇಲ ಮತ್ತು ಪಂಚಾಯತಿಗಳಲ್ಲಿ ಈ ಅಧಿಕಾರವಿರುತ್ತಿತ್ತು.

ಇವೆರಡು ಕಾರಣಗಳಿಂದ ಪಂಚಾಯತಿಗಳ ಸ್ವಾಯತ್ತತೆಗೆ, ಕೊಡಲಿ ಪೆಟ್ಟು ಬಿದ್ದು ಅವು ನಿರ್ವಿಣ್ಣವಾದವು.

ಕೆರೆಗಳ ಇತಿಹಾಸದಿಂದ ಈ ಹೊಸ ಪರಿಸ್ಥಿತಿಯನ್ನು ನಾವು ಅರ್ಥ ಮಾಡಿಕೊಳ್ಳಬಹುದು. ಪಟೇಲನ ಮುಂದಾಳತ್ವದಲ್ಲಿ ಪಂಚಾಯತಿಗಳು ಊರ್ಜಿತ ಸ್ಥಿತಿಯಲ್ಲಿರಬೇಕಾದರೆ, ಪ್ರತಿಯೊಂದು ಹಳ್ಳಿಗಳಲ್ಲಿರುವ ಕೆರೆಗಳನ್ನು ಬೇಸಗೆಯಲ್ಲಿ ಹೂಳು ತೆಗೆದು ಅವುಗಳನ್ನು ಸುಸ್ಥಿತಿಯಲ್ಲಿಟ್ಟುಕೊಂಡದ್ದರಿಂದ ಬೇಸಾಯಕ್ಕೆ,

---

೧೧. ಆರ್.ಸಿ.ದತ್ : ದಿ ಎಕನಾಮಿಕ್ ಹಿಸ್ಟರಿ ಆಫ್ ಇಂಡಿಯಾ. ಪುಟ ೪೦

ಜನರಿಗೆ ಜಾನುವಾರುಗಳಿಗೆ, ನೀರಿನ ಪೂರೈಕೆ ಆಗುತ್ತಿತ್ತು. ಹೂಳು ತೆಗೆಯುವ ಖರ್ಚನ್ನು ಜನರು ವಹಿಸಿಕೊಳ್ಳುತ್ತಿದ್ದರು. ಪ್ರತಿಯೊಂದು ಹಳ್ಳಿಯಲ್ಲಿಯೂ ಇದ್ದ ಒಡ್ಡರಿಂದ ಈ ಕೆಲಸವನ್ನು ಮಾಡಿಸುತ್ತಿದ್ದರು. ಬ್ರಿಟಿಷ್ ಸರ್ಕಾರವು ಕಂದಾಯವನ್ನು ವಿಪರೀತ ಹೆಚ್ಚು ಮಾಡಿದ್ದರಿಂದ, ಜನರಲ್ಲಿ ಕೆರೆಗಳ ದುರಸ್ತಿಗೆ ಕೊಡುವ ಹಣ ಉಳಿಯಲಿಲ್ಲ. ಮತ್ತು ಅದೇ ಸರ್ಕಾರವು ಪ್ರತಿಯೊಬ್ಬ ರೈತನೊಡನೆ ಕಂದಾಯದ ಬಗ್ಗೆ ಕರಾರು ಮಾಡಿಕೊಂಡಿದ್ದರಿಂದ, ಊರಿನ ಒಗ್ಗಟ್ಟು ಮಾಯವಾಯಿತು. ಪಟೇಲನ ಅಧಿಕಾರ ಕಡಿಮೆಯಾಯಿತು. ಕೆರೆಗಳು ಹಾಳಾದವು. ಹಳ್ಳಿಗಳಲ್ಲಿ ಬಡತನ ಹೆಚ್ಚಾಯಿತು.

ಸ್ವಾತಂತ್ರ್ಯದ ನಂತರ

ಸ್ವಾತಂತ್ರ್ಯ ಬಂದ ನಂತರವೂ ಪಂಚಾಯತಿಗಳ ಬಗೆಗೆ ಸರ್ಕಾರದ ಧೋರಣೆ ಬದಲಗಲಿಲ್ಲ. ತೀರ ಇತ್ತೀಚೆಗೆ ಆಡಳಿತದಲ್ಲಿ ವಿಕೇಂದ್ರೀಕರಣ ಅವಶ್ಯವೆಂದು ಎಲ್ಲರೂ ಮನಗಂಡಿದ್ದಾರೆ. ಆದರೆ ಜಿಲ್ಲಾ ಪರಿಷತ್ತು ಮತ್ತು ಮಂಡಳಿ ಪರಿಷತ್ತುಗಳಲ್ಲಿ ಲೋಕಸಭೆ ಮತ್ತು ವಿಧಾನ ಸಭೆಗಳಲ್ಲಿರುವ ಹಾಗೆ ಪಾರ್ಟಿ ಪದ್ಧತಿ, ಬಹು ಮತ ಪದ್ಧತಿಗಳು ಜಾರಿಯಲ್ಲಿ ಇವು ಇದ್ದರೆ ಪಂಚಾಯತಿಗಳಿಗೆ ಎಷ್ಟು ಅಧಿಕಾರ ಕೊಟ್ಟರೂ, ಎಷ್ಟು! ಹಣ ಕೊಟ್ಟರೂ, ಅವು ಹಿಂದಿನ ಪಚಾಯತಿಗಳ ಹಾಗೆ ಸರಾಗವಾಗಿ ಕೆಲಸ ಮಾಡುವುದಿಲ್ಲ. ಹಾಗೆ ಆಗಬೇಕಾದರೆ ಹಳ್ಳಿಯ ಜೀವನದಲ್ಲಿ ಮೂಲಭೂತ ಮಾರ್ಪಾಡುಗಳು ಅವಶ್ಯ. ಹಿಂದೆ ಇದ್ದ ಹಾಗೆ, ಕೆರೆಗಳನ್ನು ದುರಸ್ತಿ ಮಾಡಬೇಕು. ಹಳ್ಳಿಯ ಜನರಿಗೆ ದನ ಗೋಮಾಳಗಳನ್ನು ಅವರ ಹತೋಟಿಗೆ ಬಿಡಬೇಕು. ಎಲ್ಲಕ್ಕಿಂತ ಹೆಚ್ಚಾಗಿ ಹಿಂದೆ ಇದ್ದ ಹಾಗೆ ಬಹುಮತ ಪದ್ಧತಿ ಪಾರ್ಟಿ ಬದಲು ಒಮ್ಮತ ಪದ್ಧತಿ, ಪಂಚಾಯತಿಗಳಲ್ಲಿ ಊರ ಹಿರಿಯರ ನೇತೃತ್ವದಲ್ಲಿ ಒಗ್ಗಟ್ಟು, ಇವು ಅತ್ಯಗತ್ಯ.

೨೪

ಕೆರೆಗಳ ಬಗ್ಗೆ ಐತಿಹಾಸಿಕ ಸಂಶೋಧನೆಯ ಆವಶ್ಯಕತೆ

(ಕ್ರಿ.ಶ. ೧೯೯೨ ರಲ್ಲಿ ಚಿತ್ರದುರ್ಗದಲ್ಲಿ ಜರುಗಿದ ಕರ್ನಾಟಕ ಇತಹಾಸ ಅಕಾಡೆಮಿಯ ಸಮ್ಮೇಳನದಲ್ಲಿ ಮಂಡಿಸಿದ ಪ್ರಬಂಧ.)

ಐತಿಹಾಸಿಕ ಸಂಶೋಧನೆಯಿಂದ ದೊರಕುವ ಫಲ ಅನೇಕ ವೇಳೆ ನಮ್ಮ ದೈನಂದಿನ ಜೀವನಕ್ಕೆ ನೇರವಾಗಿ ಸಂಬಂಧಿಸಿರುವುದಿಲ್ಲ. ಆದ್ದರಿಂದ ಸಾರ್ವಜನಿಕರಿಗೆ ಅಂತಹ ಸಂಶೋಧನೆ ವಿದ್ವಾಂಸರಿಗೆ ಸಂಬಂಧಿಸಿದ್ದು, ತಮಗೂ ಅದಕ್ಕೂ ಸಂಬಂಧವಿಲ್ಲವೆಂದೆನಿಸಿದರೆ ಆಶ್ಚರ್ಯವಿಲ್ಲ. ಆದರೆ, ಕೆರೆಗಳ ಬಗೆಗಿನ ಸಂಶೋಧನೆ ಸಾರ್ವಜನಿಕರಿಗೆ ನೇರವಾಗಿ ಸಂಬಂಧಿಸಿದ್ದನ್ನು ಒತ್ತಿಹೇಳಬೇಕಾದ್ದಿಲ್ಲ. ಮಹಾಪೂರಗಳ ಮತ್ತು ನೀರಿನ ಬರಗಳ ನಿಯಂತ್ರಣದಲ್ಲಿ ಕೆರೆಗಳ ಪಾತ್ರ ಮಹತ್ವವಾದದ್ದು.

ಈ ಸಂಶೋಧನೆ ಅವಶ್ಯಕವೆನ್ನುವ ಚರ್ಚೆ ಚಿತ್ರದುರ್ಗದಲ್ಲಿ ನಡೆಯುವುದರಲ್ಲಿ ಔಚಿತ್ಯವಿದೆ.* ಚಿತ್ರದುರ್ಗದ ಹತ್ತಿರವಿರುವ ಚಂದ್ರವಳ್ಳಿಯಲ್ಲಿ ಕರ್ನಾಟಕ ಇತಿಹಾಸದಲ್ಲಿ ಮೊಟ್ಟಮೊದಲನೆ ಕೆರೆಯಿತ್ತು. ಇದಕ್ಕೂ ಹಿಂದಿನದೆನ್ನಬಹುದಾದ ಕೆರೆಗಳು ಬನವಾಸಿ ಮತ್ತು ಆದವಾನಿಗಳ ಹತ್ತಿರವಿದ್ದವೆನ್ನುವುದಕ್ಕೆ ದಾಖಲೆಗಳಿದ್ದರೂ, ಆ ಕೆರೆಗಳು ಎಲ್ಲಿದ್ದವೆನ್ನುವುದಕ್ಕೆ ಕುರುಹುಗಳಿಲ್ಲ. ಚಂದ್ರವಳ್ಳಿ ಕೆರೆಯ ದಂಡೆಯ ಮೇಲೆ ಆ ಕೆರೆಯನ್ನು ಕದಂಬರ ಮಯೂರ ಶರ್ಮನು (ಸು. ೩೫೦ರಲ್ಲಿ) ಕಟ್ಟಿಸಿದನೆನ್ನುವ ಶಾಸನವಿರುವುದರಿಂದ, ಇದು ಕರ್ನಾಟಕದಲ್ಲಿ ಅತ್ಯಂತ ಪುರಾತನ ಕೆರೆ ಎನ್ನುವುದರಲ್ಲಿ ಯಾವ ಸಂಶಯವೂ ಇಲ್ಲ. ಇನ್ನೊಂದು ಔಚಿತ್ಯವೆಂದರೆ, ಹಾಳಾದ ಕೆರೆಗಳನ್ನು ಹೇಗೆ ಉಪಯೋಗಿಸಬಹುದೆಂಬುದನ್ನು ನಮ್ಮ ತಂತ್ರಜ್ಞಾನಿಗಳು ಚಂದ್ರವಳ್ಳಿ ಕೆರೆಯ ಪುನರುತ್ಥಾನ ಮಾಡಿ ಇತ್ತೀಚೆಗೆ ತೋರಿಸಿ ಕೊಟ್ಟಿದ್ದಾರೆ. ಕೊನೆಯ ಔಚಿತ್ಯವೆಂದರೆ ಬೆಟ್ಟಗಳ ಮೇಲೆ ಬಿದ್ದನೀರನ್ನು ಕೆರೆಗಳಲ್ಲಿ ಸಂಗ್ರಹಿಸಿ ಅದನ್ನು ಕೃಷಿಗೂ ಮತ್ತು ಕುಡಿಯುವದಕ್ಕೂ ಉಪಯೋಗಿಸಬಹುದೆನ್ನುವುದನ್ನು ಇವತ್ತಿಗೂ ಸ್ವಲ್ಪಮಟ್ಟಿಗೆ ಚಿತ್ರದುರ್ಗದಲ್ಲಿ ನೋಡಬಹುದು. ಈ ಔಚಿತ್ಯವನ್ನು ಕುರಿತು ಕೊನೆಯಲ್ಲಿ ಹೇಳಿದ್ದೇನೆ.

ನಾವು ಸಂಶೋಧನೆಯನ್ನು ಆರಂಭಿಸುವ ಮೊದಲು ಯಾರಾದರೂ ಕೇಳಬಹುದು. ನಾವಿರುವುದು ಇಪ್ಪತ್ತನೆಯ ಶತಮಾನದ ಕೊನೆಯ ದಶಕದಲ್ಲಿ. ಈಗ ವಿಜ್ಞಾನ – ತಂತ್ರಜ್ಞಾನ ಅಪಾರವಾಗಿ ಬೆಳೆದಿದೆ. ಅತ್ಯಾಧುನಿಕ ರೀತಿಯಲ್ಲಿ ನದಿಗಳಿಗೆ ಅಣೆಕಟ್ಟುಗಳನ್ನು ಕಟ್ಟಿ ಲಕ್ಷಾಂತರ ಎಕ್ರೆ ಭೂಮಿಗೆ ನೀರಾವರಿಯನ್ನು ಒದಗಿಸಬಹುದು. ಬಹಳ ದೊಡ್ಡಕೆರೆಗಳು ನೂರಾರು ಎಕ್ರೆ ಭೂಮಿಗೆ ಮಾತ್ರ ಉಪಯೋಗವಾಗುವುವು. ಆದ್ದರಿಂದ ಇಂದಿಗೆ ಅವು ಸರಿಯಲ್ಲವೆಂದು ವಾದಿಸಬಹುದು. ಇದಕ್ಕೆ ಉತ್ತರ, ಭಾರೀಜಲಾಶಯಗಳನ್ನು ಎಲ್ಲಾ ಕಡೆಯಲ್ಲಿಯೂ ಕಟ್ಟಲು ಸಾಧ್ಯವಿಲ್ಲ. ಅಂತಹ ಸ್ಥಳಗಳಲ್ಲಿ ಕೆರೆಗಳು ಅನಿವಾರ್ಯ; ಕೆರೆಗಳ ಪರ ಇರುವವರು ಭಾರೀ ಅಣೆಕಟ್ಟುಗಳ ಶತ್ರುಗಳಲ್ಲ. ಎರಡಕ್ಕೂ ಬೇರೆಬೇರೆ ಸ್ಥಾನವಿದೆ. ಕೆರೆಗಳ ಅವಶ್ಯಕತೆಯನ್ನು ಒಪ್ಪಿಕೊಂಡರೂ ಹಳೆಕೆರೆಗಳನ್ನು ಕಟ್ಟಿಕೊಂಡು ಏನು ಮಾಡಬೇಕು, ಹೊಸಕೆರೆಗಳನ್ನು ಹೊಸರೀತಿಯಲ್ಲಿ ಕಟ್ಟಿದರೆ ಒಳ್ಳೆಯದಲ್ಲವೆ ಎನ್ನಬಹುದು. ಹಳೆಯ ಮೈಸೂರಿನಲ್ಲಿ ಮುಖ್ಯ ಎಂಜನಿಯರ್ ಆಗಿದ್ದು ಹಳೆಯ ಕೆರೆಗಳನ್ನು ಶಾಸ್ತ್ರೀಯವಾಗಿ ಅಧ್ಯಯನ ಮಾಡಿದ ತಜ್ಞ ಸ್ಯಾಂಕಿ (Sankey) ಈತನ ಹೆಸರಿನಲ್ಲಿ ಇವತ್ತಿಗೂ ಒಂದು ಕೆರೆ ಬೆಂಗಳೂರಿನಲ್ಲಿದೆ. ಈ ತಜ್ಞ ಪ್ರಕಾರ ನಮ್ಮ ಪೂರ್ವಜರು ಎಲ್ಲೆಲ್ಲಿ ಕೆರೆಯನ್ನು ಕಟ್ಟಲೂ ಸಾಧ್ಯವೋ ಅಲ್ಲೆಲ್ಲಾ ಕೆರೆಗಳನ್ನು ಕಟ್ಟಿಬಿಟ್ಟಿದ್ದಾರೆ. ಹೊಸ ಕೆರೆಗಳಿಗೆ ಸ್ಥಳವನ್ನು ಹುಡುಕುವುದು ದುಸ್ತರ. ಒಂದು ವೇಳೆ ಸ್ಥಳವಿದೆಯೆಂದು ಹೊಸಕೆರೆಯನ್ನು ಕಟ್ಟಲಾರಂಭಿಸಿದರೆ ಅದರಿಂದ ಈಗಿರುವ ಹಳೆಯ ಕೆರೆಗಳಲ್ಲಿ ನೀರು ಸೇರುವುದಕ್ಕೆ ತಡೆಯುಂಟಾಗಬಹುದೆಂದು ಸ್ಯಾಂಕಿಯು ಅಭಿಪ್ರಾಯಪಟ್ಟಿದ್ದಾನೆ.

ಹಳೆಯ ಕೆರೆಗಳ ಪುನರುತ್ಥಾನ ಮಾಡುವ ಮೊದಲು ಅವುಗಳನ್ನು ಕಟ್ಟಿದ ರೀತಿಯನ್ನು ನಾವು ಅಭ್ಯಾಸ ಮಾಡಬೇಕು, ಎಷ್ಟೋ ಸಲ ಆ ತಂತ್ರಜ್ಞಾನ ಇಂದಿಗೂ ಉಪಯೋಗವಾಗುವ ಸಂಭವವಿದೆ. ಪಾಂಡ್ಯರು ಕಟ್ಟಿದ ಕಾಲುವೆಯನ್ನು ದುರಸ್ತಿ ಮಾಡಲು ಹೊರಟ ಹಾರ್ಸ್ಲಿ (Horsly) ಎನ್ನುವ ಎಂಜನಿಯರನು, ಹಿಂದಿನವರು ಕಟ್ಟಿದ ರೀತಿಯನ್ನೇ ಅನುಸರಿಸುವುದರಲ್ಲಿ ತನಗೆ ಬಹಳ ಸಂತೋಷವಾಯಿತೆಂದು ಒಪ್ಪಿಕೊಂಡಿದ್ದಾನೆ. "I have no hesitation in saying that it has been a unmixed pleasure to me, from a professional point of view, to merely follow the original constructors of the Pandyan Canal"

ತಂತ್ರಜ್ಞಾನ ಒಂದೇ ಅಲ್ಲದೆ ನಮ್ಮ ಹಿಂದಿನವರು ಕೆರೆಗಳನ್ನು ನಿರ್ವಹಿಸುತ್ತಿದ್ದ ವಿಧಾನವು ನಮಗೆ ಅವಶ್ಯವಾಗಬಹುದು. ಈ ನಿರ್ವಹಣೆಯನ್ನು ಪಂಚಾಯಿತಿಗಳು ಮಾಡುತ್ತಿದ್ದವು. ಈಚೆಗೆ ಸರ್ಕಾರದವರು ಈ ನಿರ್ವಹಣೆಯನ್ನು ವಹಿಸಿಕೊಂಡ

ಶಮ್ಮಿಂದ ಸಣ್ಣಕೆರೆಗಳ ನಿರ್ವಹಣೆ ಸಾಧ್ಯವಿಲ್ಲ, ಅದನ್ನು ಸ್ಥಳೀಯರು ಮಾಡಿದರೆ ಒಳ್ಳೆಯದೆನ್ನುವ ಅಭಿಪ್ರಾಯಕ್ಕೆ ಬಂದಿದ್ದಾರೆ. ೧೮೮೪ರಲ್ಲಿ ಮೈಸೂರಿನ ದಿವಾನ ಸರ್.ಎಸ್. ಶೇಷಾದ್ರಿ ಅಯ್ಯರ್ ಇವರು ಇದನ್ನು ಹೀಗೆ ಹೇಳಿದ್ದಾರೆ: "Any reform in our tank system must start with a clear recognition of the fact that it is beyond the ability of Government to undertake the repairs and maintenance of all tanks in the province,, ಆದರೆ ಈ ಕೆಲಸವನ್ನು ನಮ್ಮ ಪಂಚಾಯತಿಗಳು ಸಮರ್ಥವಾಗಿ ನಿರ್ವಹಿಸುತ್ತಿದ್ದವೆನ್ನುವುದಕ್ಕೆ ಈ ಕೆರೆಗಳು ನೂರಾರು ವರ್ಷ ಸುಸ್ಥಿತಿಯಲ್ಲಿ ಇದ್ದುದೇ ಸಾಕ್ಷಿ.

ಮೇಲೆ ಹೇಳಿದ್ದನ್ನೆಲ್ಲಾ ಒಪ್ಪಿಕೊಂಡರೂ, ಈ ಸಂಶೋಧನೆ ಈಗಲೆ ಯಾಕೆ ಮಾಡಬೇಕು, ಸ್ವಲ್ಪ ನಿಧಾನವಾಗಿ ಮಾಡಿದರೆ ಆಗದೆ ಎಂದು ಕೇಳಿದರೆ, ಅದಕ್ಕೆ ಉತ್ತರ, ಈ ಸಂಶೋಧನೆ ಎಷ್ಟು ಶೀಘ್ರವಾಗಿ ನಡೆದರೆ ಅಷ್ಟು ಒಳ್ಳೆಯದು. ಯಾಕೆಂದರೆ, ಕುಡಿಯುವ ನೀರಿನ ಅಭಾವ, ಬೆಳೆಯುತ್ತಿರುವ ಜನಸಂಖ್ಯೆಗೆ ಆಹಾರಧಾನ್ಯ ಬಟ್ಟೆಯನ್ನು ಒದಗಿಸುವುದು ಇದಕ್ಕೆಲ್ಲಾ ನೀರಾವರಿಯನ್ನು ಹೆಚ್ಚಿಸುವುದು ಒಂದೇ ಮಾರ್ಗ. ಇದನ್ನು ಕಂಡುಕೊಂಡು ಸರ್ಕಾರದವರು ಸಾವಿರಾರು ಕೊಳವೆಬಾವಿಗಳನ್ನು ತೋಡುತ್ತೇವೆ ಎನ್ನುತ್ತಾರೆ. ಆದರೆ ಈ ಕೊಳವೆಬಾವಿಗಳಿಗೆ ಮತ್ತು ಮಾಮೂಲು ಬಾವಿಗಳಿಗೆ ನೀರು ಎಲ್ಲಿಂದ ಬರುತ್ತದೆನ್ನುವುದನ್ನು ಆಲೋಚಿಸಿದರೆ, ಅದಕ್ಕೆ ಕೆರೆಗಳಿಂದಲೇ, ನೀರು ಬರುತ್ತದೆ. 'No tanks, no wells' ಎನ್ನುವ ೧೯೦೨ ರ Irrigation Commission ವರದಿಯಲ್ಲಿರುವ ವಾಕ್ಯ ಅಕ್ಷರಶಃ ನಿಜ. ಇದನ್ನೆಲ್ಲಾ ಮನಗಂಡು, ಕೆಲವು ವಿದೇಶಿ ಸೇವಾಸಂಸ್ಥೆಗಳು ಕೆರೆಗಳ ಬಗೆಗಿನ ಸಂಶೋಧನೆಗೆ ಆದ್ಯತೆಯನ್ನು ಕೊಟ್ಟಿವೆ. ಹೊರಗಿನ ಸಂಸ್ಥೆಗಳು ಇಷ್ಟು ಆಸಕ್ತಿಯನ್ನು ತೋರಿಸುತ್ತಿರುವ ವಿಷಯದಲ್ಲಿ ನಾವು ಸುಮ್ಮನಿರುವುದು ಸರಿಯಲ್ಲ.

ಚಿತ್ರದುರ್ಗದಲ್ಲಿ ಅತ್ಯಂತ ಪುರಾತನ ಕೆರೆ ಇದ್ದುದಲ್ಲದೆ, ನಮ್ಮ ಪೂರ್ವ ಸಂಪ್ರದಾಯದ ರೀತಿಯಲ್ಲಿ ಕಟ್ಟಕಡೆಗೆ ಕಟ್ಟಿದ ಕೆರೆಗಳ ಜಾಲವು ಇತ್ತು. ಇದಕ್ಕೆ ಕಾರಣರಾದವರು ಬಹುಮಟ್ಟಿಗೆ ಚಿತ್ರದುರ್ಗದ ಪಾಳೆಯಗಾರರು. ಇದರಿಂದಾಗಿ ಚಿತ್ರದುರ್ಗದಲ್ಲಿ ಮೊನ್ನೆ ಮೊನ್ನೆಯವರೆಗು ಕುಡಿಯುವ ನೀರಿನ ಒಳ್ಳೆಯ ವ್ಯವಸ್ಥೆ ಇತ್ತು. ಎರಡು ಗುಡ್ಡಗಳ ಮೇಲೆ ಬಿದ್ದನೀರನ್ನು ಹಂತ ಹಂತವಾಗಿ ಕೆಳಗೆ ತಂದುಕೊಂಡು ಬರಲಾಗಿತ್ತು. ಮೊದಲಿನ ಗುಡ್ಡ ಜೋಗಿಮಟ್ಟಿ. ಈ ಗುಡ್ಡದ ಮೇಲೆ ಬಿದ್ದನೀರನ್ನು ದೊಡ್ಡಣ್ಣನ ಕೆರೆ. ಅದು ತುಂಬಿದ ಮೇಲೆ ತಿಮ್ಮಣ್ಣನ ಕೆರೆ ಮತ್ತು ಸಣ್ಣಕೆರೆ ಮತ್ತು ಅವು ತುಂಬಿದ ಮೇಲೆ ದಬದಬ ಮತ್ತು ವಡ್ಡು ಎನ್ನುವ

ಕೆರೆಗಳಿಗೆ ತರಲಾಗುತ್ತಿತ್ತು. ಈ ನೀರನ್ನು ವ್ಯವಸಾಯಕ್ಕೂ ಮತ್ತು ಕುಡಿಯುವುದಕ್ಕೂ ಉಪಯೋಗಿಸಲಾಗುತ್ತಿತ್ತು. ಈ ಎಲ್ಲಾ ಕೆರೆಗಳು ತುಂಬಿದ ಮೇಲೆ ನೀರು ಕೋಟೆಯ ಸುತ್ತಲ ಕಂದಕಕ್ಕೆ ಬಂದು ಅದನ್ನು ತುಂಬುತ್ತಿತ್ತು. ಹೀಗೆ ಗುಡ್ಡದ ಮೇಲೆ ಬಿದ್ದ ಮಳೆಯ ನೀರಿನ ಒಂದು ಹನಿಯೂ ಪೋಲಾಗುತ್ತಿರಲಿಲ್ಲ. ಇನ್ನೊಂದು ಗುಡ್ಡವಾದ ಮೇಲದುರ್ಗ ಅಥವಾ ಕೋಟೆಯ ಮೇಲುಭಾಗದ ಮೇಲೆ ಬಿದ್ದ ನೀರು ಕ್ರಮವಾಗಿ ಗೋಪಾಲಕೃಷ್ಣದೇವರ ಹೊಂಡ, ಅಕ್ಕತಂಗಿಯರ ಹೊಂಡ, ಸಿಹಿನೀರಿನ ಹೊಂಡಗಳನ್ನು ತುಂಬಿ ಕೊನೆಯದಾಗಿ ಭೂಮಿಯೊಳಗ ಮಾಡಿದ ಕಾಲುವೆ ಮುಖಾಂತರ ಸಂತೆ ಹೊಂಡವನ್ನು ಸೇರಿ ಊರಿನವರಿಗ ನೀರನ್ನು ಒದಗಿಸುತ್ತಿತ್ತು. ಹೀಗೆ ಹಿಂದಿನ ಕೆರೆಗಳ ಬಗೆಗಿನ ಸಂಶೋಧನೆಯು ಇತರ ಸಂಶೋಧನೆಯಂತೆ ನಮ್ಮ ಪೂರ್ವಜರ ಜನಜೀವನದ ಕೆಲವು ಅಂಶಗಳನ್ನು ತೋರಿಸುವ ಜತೆಗೆ, ಇಂದಿನ ಕಾಲದ ಜನರಿಗೆ ಪ್ರವಾಹವನ್ನು ಮತ್ತು ನೀರಿನ ಬರವನ್ನು ನಿಯಂತ್ರಿಸುವಲ್ಲಿ ಸಹಾಯಕವಾಗುವುದು.

ಆಧಾರಗಳ ಬಗ್ಗೆ ಟಿಪ್ಪಣಿ

ಕೆರೆಗಳ ಅಧ್ಯಯನಕ್ಕೆ ಮುಖ್ಯ ಆಧಾರವೆಂದರೆ ಶಾಸನಗಳು. ಭಾರತದಲ್ಲಿಯ ಪ್ರಮುಖ ಕೆರೆಗಳ ಉಲ್ಲೇಖವಿರುವ ಎಲ್ಲಾ ಶಾಸನಗಳ ಪಟ್ಟಿ ಮತ್ತು ಅವ ಪ್ರಕಟವಾಗಿರುವ ಸ್ಥಳ – ಈ ಮಾಹಿತಿಯನ್ನೊಳಗೊಂಡ ಏಕೈಕ ಪುಸ್ತಕ "Irrigation through the Ages", CPWD ಯವರ ಪ್ರಕಟಣೆ. ಕೆರೆಗಳನ್ನು ಏಕೆ ಮತ್ತ ಹೇಗೆ ಕಟ್ಟಬೇಕೆಂಬುದರ ಬಗೆಗೆ ನಮ್ಮ ಪೂರ್ವಜರು ಗ್ರಂಥಗಳನ್ನು ಬರೆದಿದ್ದಾರ ಇಂತಹ ಗ್ರಂಥಗಳಲ್ಲಿ ಮುಖ್ಯವಾದದ್ದು ಪರಾಶರರ ಕೃಷಿಸೂಕ್ತ (೧೦ನೇ ಶತಮಾನ ಇಂತಹ ಗ್ರಂಥಗಳ ಪಟ್ಟಿ ಮತ್ತು ಪರಾಮರ್ಶೆ ಎಸ್.ಜಿ.ರಾಯ ಚೌಧರಿಯವರಿಂದ ಸಂಪಾದಿತವಾದ Agriculture in Ancient India ಈ ಪುಸ್ತಕದಲ್ಲಿದೆ. ಈ ಪುಸ್ತಕವನ್ನು Indian Council of Agricultural Research, New Delhi ಇವರು ಪ್ರಕಟಿಸಿದ್ದಾರೆ.

ಕರ್ನಾಟಕದ ಕೆರೆಗಳ ಬಗೆಗೆ ವಿಸ್ತೃತವಾಗಿ ಬರೆದಿರುವವರು ಡಾ. ಜಿ.ಆರ ಕುಪ್ಪಸ್ವಾಮಿ. ಇವರ ಲೇಖನಗಳು Quarterly Journal of the Myth Society ಯಲ್ಲಿ ಸುಮಾರು ೧೦ ವರ್ಷಗಳಿಂದೀಚೆಗೆ ಪ್ರಕಟವಾಗುತ್ತಿದೆ. ಇದ ಅವಧಿಯಲ್ಲಿ ಅವರ ಒಂದೆರಡು ಲೇಖನಗಳು ಕರ್ನಾಟಕ ಯೂನಿವರ್ಸಿ ಜರ್ನಲ್‌ನಲ್ಲಿಯೂ ಬಂದಿದೆ. ಕನ್ನಡದಲ್ಲಿ ಕೆರೆಗಳ ಬಗೆಗೆ ಡಾ. ಚಿದಾನಂ ಮೂರ್ತಿಯವರ ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನದಲ್ಲಿ ಉತ್ಕೃಷ್ಟವಾ ಮಾಹಿತಿ ಇದೆ. ಸ್ಯಾಂಕಿಯವರ ಅಭಿಪ್ರಾಯ ಹಯವದನರಾಯರ ಮೈಸೂ

ಗೆಜೆಟಿಯರ್ ಮೂರನೇಯ ಸಂಪುಟದ ೧೫೭ನೇ ಪುಟದಲ್ಲಿದೆ. ಹಾರ್ಸ್ಲಿಯವರ ಅಭಿಪ್ರಾಯ ಎ. ಅಪ್ಪಾದೊರೈಯವರ 'ಎಕನಾಮಿಲ್ ಕಂಡಿಷನ್ಸ್ ಇನ್ ಸೌತ್ ಇಂಡಿಯಾ' ಸಂಪುಟ ೧, ಪುಟ ೨೧೧ ರಲ್ಲಿದೆ. ಶೇಷಾದ್ರಿ ಅಯ್ಯರ್ ಅವರ ಅಭಿಪ್ರಾಯ ಅವರನ್ನು ಕುರಿತು ಶ್ರೀ ಎನ್.ಎಸ್. ಚಂದ್ರಶೇಖರ್ ಅವರು ಬರೆದ ಪುಸ್ತಕದಲ್ಲಿದೆ. ಚಿತ್ರದುರ್ಗದ ಕೆರೆಗಳ ವಿಷಯ ಶ್ರೀ ಲಕ್ಷ್ಮಣ ತೆಲಗಾವಿ ಮತ್ತು ಕೆ. ವೆಂಕಣ್ಣಾಚಾರ್ ಸಂಪಾದಿಸಿದ 'ಐತಿಹಾಸಿಕ ಚಿತ್ರದುರ್ಗ'ದಲ್ಲಿ ಶ್ರೀ ಟಿ.ಎನ್. ಗಂಡುಗಲಿಯವರ "ಚಿತ್ರದುರ್ಗದ ಜಲಾಶಯಗಳು" ಎನ್ನುವ ಲೇಖನದಲ್ಲಿವೆ.

■

೨೫

ಕೆರೆಗಳು : ಚಾರಿತ್ರಿಕ ಅಂಶಗಳು

ಈಗಿರುವ ನಮ್ಮ ಕೆರೆಗಳ ಸಂಖ್ಯೆ ಸುಮಾರು ೩೦,೦೦೦. ಕರ್ನಾಟಕದ ಊರುಗಳ ಹೆಸರಿನಿಂದ, ಈ ಸಂಖ್ಯೆಯಲ್ಲಿ ಉತ್ಪ್ರೇಕ್ಷೆ ಇಲ್ಲವೆನ್ನುವುದು ಸಿದ್ಧವಾಗುತ್ತದೆ. ಕೆರೆ, ಸಮುದ್ರ, ಸಂದ್ರ, ಸಾಗರ ಮತ್ತು ಅವುಗಳಿಗೆ ಸಮಾನವಾದ ಹೆಸರುಳ್ಳ ಊರುಗಳು ಸಾವಿರಾರು.

ಕೆರೆಗಳ ಇತಿಹಾಸ ಕರ್ನಾಟಕದಲ್ಲಿ ಆದಿ ಕದಂಬರ ಕಾಲದಿಂದ ಆರಂಭವಾಗುತ್ತದೆ. ಈ ಕದಂಬರ ಮೂಲಪುರುಷ ಮಯೂರವರ್ಮ. ಇವನು ಚಿತ್ರದುರ್ಗದ ಹತ್ತಿರ ಇರುವ ಚಂದ್ರವಳ್ಳಿಯಲ್ಲಿ ಎರಡು ಗುಡ್ಡಗಳ ನಡುವೆ ಒಂದು ಕೆರೆಯನ್ನು ದೃಢವಾಗಿ ಕಟ್ಟಿದನು. ಈ ಕೆರೆಯನ್ನು ದೃಢಪಡಿಸಿದ್ದು ಸುಮಾರು ಕ್ರಿ.ಶ. ೩೫೦ರಲ್ಲಿ. ಮುಂದೆ ಈ ಕೆರೆ ಹಾಳಾಯಿತು. ಇತ್ತೀಚೆಗೆ ಅಂದರೆ ೨೫–೩೦ ವರ್ಷಗಳ ಕೆಳಗೆ ಕರ್ನಾಟಕ ಸರ್ಕಾರದವರು ಈ ಕೆರೆಯ ಒಡ್ಡನ್ನು ವಿಸ್ತರಿಸಿ ಅದರ ಪುನರುದ್ಧಾರ ಮಾಡಿದರು. ಈಗ ಅದು ಉಪಯುಕ್ತವಾಗಿರುವುದಲ್ಲದೆ, ಒಂದು ಸುಂದರ ತಾಣವೂ ಆಗಿದೆ. ಇದೇ ರೀತಿಯ ಪುನರುದ್ಧಾರಕ್ಕೆ ಅನೇಕ ಹಾಳು ಬಿದ್ದ ಕೆರೆಗಳು ಕಾದಿವೆ. ಹೊಸ ಕೆರೆಗಳನ್ನು ಕಟ್ಟುವುದಕ್ಕೆ ಮೊದಲು ಹಳೆಯ ಕೆರೆಗಳನ್ನು ದುರಸ್ತಿ ಮಾಡುವುದು ಯೋಗ್ಯ. ನಮ್ಮ ಪೂರ್ವಜರು ಈ ಕ್ರಮವನ್ನೇ ಅನುಸರಿಸುತ್ತಿದ್ದರು. ಹಾಗೆ ಮಾಡಿದ್ದರಿಂದಲೇ ನಮ್ಮಲ್ಲಿ ಸಾವಿರಾರು ಕೆರೆಗಳು ಇನ್ನೂ ಜೀವಂತವಾಗಿವೆ. ಇದಕ್ಕೆ ಒಂದು ನಿದರ್ಶನ ಬನವಾಸಿ ಹತ್ತಿರವಿರುವ ಗುಡ್ನಾಪುರದ ಕೆರೆ. ಇದನ್ನು ಸುಮಾರು ಕ್ರಿ.ಶ. ೫೦೦ ರಲ್ಲಿ ಕದಂಬ ರವಿವರ್ಮ ಕಟ್ಟಿಸಿದ. ಈ ಕೆರೆ ಉತ್ತರ ಕನ್ನಡ ಜಿಲ್ಲೆಯಲ್ಲೇ ಅತಿ ದೊಡ್ಡ ಕೆರೆ. ಕಟ್ಟಿ ೧೫೦೦ ವರ್ಷಗಳಾದವು. ಈ ಕೆರೆ ಇನ್ನೂ ಜನರಿಗೆ ನೀರನ್ನು ಒದಗಿಸುತ್ತದೆ. ಕದಂಬರ ನಂತರ ಬಾದಾಮಿ ಚಾಲುಕ್ಯರು ಧಾರವಾಡ ಜಿಲ್ಲೆಯ ಗುಡಗೇರಿಯಲ್ಲಿ ಸು. ಕ್ರಿ.ಶ. ೭೦೦ ರಲ್ಲಿ ೭–೮ ಕೆರೆಗಳನ್ನು ಕಟ್ಟಿದ್ದರು. ಅವರ ನಂತರ ಬಂದ ರಾಷ್ಟ್ರಕೂಟರು ಈಗಲೂ ಉಪಯುಕ್ತವಿರುವ ಅನೇಕ ಕೆರೆಗಳನ್ನು ಕಟ್ಟಿದ್ದರು. ಒಂದೇ ಒಂದು ಉದಾಹರಣೆಯನ್ನು ಕೋಲಾರ ಜಿಲ್ಲೆಯ ಕೆ.ಜಿ.ಎಫ್.

ನಲ್ಲಿ ನೋಡಬಹುದು. ಅವರ ಕಾಲದಲ್ಲಿ (ಸು. ಕ್ರಿಶ. ೯೫೦ ರಲ್ಲಿ) ವಿಜಯಾದಿತ್ಯ ಮಂಗಲ (ಈಗಿನ ಬೇತಮಂಗಳ) ಕೆರೆಯನ್ನು ಕಟ್ಟಿದರು. ಈ ಕೆರೆಯು ಇವತ್ತಿಗೂ ಕೋಲಾರ ಗೋಲ್ಡ್‌ಫಿಲ್ಡ್‌ಗೆ ಕುಡಿಯುವ ನೀರನ್ನು ಕೊಡುತ್ತದೆ. ನಂತರ ಬಂದ ಕಲ್ಯಾಣದ ಚಾಳುಕ್ಯರು ಮತ್ತು ಹೊಯ್ಸಳರು ಕರ್ನಾಟಕದ ತುಂಬಾ ಅನೇಕ ಕೆರೆಗಳನ್ನು ಕಟ್ಟಿದರು. ಈ ಕಾಲದಲ್ಲಿ ಕೆರೆ ಕಟ್ಟುವ ವಿಧಾನದಲ್ಲಿ ಒಂದು ವಿಶೇಷ ಬದಲಾವಣೆಯಾಯಿತು. ಇದರ ಪ್ರಕಾರ ಒಂದರ ಕೆಳಗೆ ಇನ್ನೊಂದು ಕೆರೆಯನ್ನು ಕಟ್ಟುವುದು. ಇದರ ಅತಿ ಶ್ರೇಷ್ಠ ಉದಾಹರಣೆ ಕೋಲಾರ ಜಿಲ್ಲೆಯಲ್ಲಿದೆ. ಅಲ್ಲಿಯ ಪಾಲಾರ್ ನದಿಗೆ, ಒಂದರ ಕೆಳಗೆ, ಇನ್ನೊಂದು ಒಟ್ಟು ೧೦೦೦ ಕೆರೆಗಳನ್ನು ಕಟ್ಟಿದ್ದಾರೆ. ಈ ಜಾಲದ ಕೊನೆಯ ಕೆರೆ ರಾಮಸಾಗರ. ಇದು ಚೋಳರ ಕಾಲದ್ದು (ಸು. ಕ್ರಿ.ಶ. ೧೦೦೦). ಈ ಜಾಲವು ಇನ್ನೂ ಸುಸ್ಥಿತಿಯಲ್ಲಿದೆ. ಕಲ್ಯಾಣ ಚಾಲುಕ್ಯರ ಕಾಲದ ಅತಿ ಪ್ರಸಿದ್ಧ ಕೆರೆ ಸೂಳೆಕೆರೆ. ಈಗ ಅದನ್ನು 'ಶಾಂತಿಸಾಗರ'ವೆಂದು ಕರೆಯುತ್ತಾರೆ. ಈ ಕೆರೆಯ ನೀರು ಹತ್ತು ಚದುರ ಮೈಲು ಹಬ್ಬಿದೆ.

ಕೆರೆ ಕಟ್ಟುವ ಕಲೆಯಲ್ಲಿ ಹೊಯ್ಸಳರು ಚಾಳುಕ್ಯರನ್ನು ಮೀರಿಸಿದ್ದರು. ಇವರ ಕಾಲದಲ್ಲಿ, ಕಡೂರಿನ ಹತ್ತಿರವಿರುವ ಅಯ್ಯನ ಕೆರೆ ಮತ್ತು ಮದಗದ ಕೆರೆಗಳ ಸೌಂದರ್ಯ ವರ್ಣನಾತೀತ. ಇವುಗಳಲ್ಲಿ ಒಂದರ ಮಧ್ಯೆ ದ್ವೀಪಗಳಿವೆ. ಅವುಗಳನ್ನು ನೋಡಲು ಪ್ರವಾಸಿಗರಿಗೆ ರಸ್ತೆ ಮತ್ತು ಇತರ ಸೌಕರ್ಯಗಳನ್ನು ಮಾಡಿದರೆ ಕರ್ನಾಟಕದಲ್ಲೇ ಅವು ಅತ್ಯಂತ ಸುಂದರ ತಾಣಗಳಾಗಬಲ್ಲವು.

ಹೊಯ್ಸಳರ ನಂತರ ಬಂದ ವಿಜಯನಗರದ ಅರಸರು ಭಾರೀ ಕೆರೆಗಳನ್ನು ಮತ್ತು ಅದ್ಭುತವಾದ ಅಣೆಕಟ್ಟುಗಳನ್ನು ಕಟ್ಟಿ ಈ ಶಾಸ್ತ್ರದಲ್ಲಿ ತಮ್ಮ ಪರಿಣತೆಯನ್ನು ಶಿಖರಕ್ಕೆ ಒಯ್ದಿದ್ದಾರೆ. ಹಂಪಿಗೆ ನೀರನ್ನು ಒದಗಿಸುವ ತುರ್ತು ಅಣೇಕಟ್ಟು ಇಂದಿಗೂ ಉಪಯುಕ್ತ. ಇಂತಹ ಅನೇಕ ಅಣೆಕಟ್ಟುಗಳನ್ನು ವಿಜಯನಗರದ ರಾಜರು ತುಂಗಭದ್ರೆಗೂ ಮತ್ತು ಕಾವೇರಿ ನದಿಗೂ ಕಟ್ಟಿದರು. ಇವತ್ತಿಗೂ ಅವು ಜನಗಳಿಗೆ ನೀರನ್ನು ಕೊಡುತ್ತವೆ. ಕೃಷ್ಣದೇವರಾಯನಕಾಲ (ಕ್ರಿ.ಶ. ೧೫೦೯-೩೦) ಕೆರೆ ಕಟ್ಟುವ ಕಾಲದ ಉಚ್ಛ್ರಾಯ ಕಾಲ. ಅವನು ಹೊಸಪೇಟೆಯಲ್ಲಿ ಕಟ್ಟಿದ ರಾಯರ ಕೆರೆ ಈಗ ಹಾಳು ಬಿದ್ದಿದೆ. ಈ ಹಾಳಾದ ಕೆರೆಯ ಎತ್ತರದ ಕಟ್ಟೆ ಇವತ್ತಿಗೂ ವಿಸ್ಮಯಕಾರಿಯಾಗಿದೆ. ಕೃಷ್ಣದೇವರಾಯನ ಕಾಲದ ಅತ್ಯಂತ ಅದ್ಭುತವಾದ ಕೆರೆ ಹಾವೇರಿ ಜಿಲ್ಲೆಯ ಹಿರೇಕೆರೂರು ತಾಲೂಕಿನ ಮಾಸೂರಿನ ಹತ್ತಿರವಿರುವ ಮಗದದ ಕೆರೆ. ಕೃಷ್ಣದೇವರಾಯನ ಸಾಮಂತ, ಕೆಳದಿ ಸದಾಶಿವ ನಾಯಕನ ಆದೇಶದ ಮೇಲೆ ಬಂಕಾಪುರದ ಮಾದಣ್ಣ ಒಡೆಯರು ಈ ಕೆರೆಯನ್ನು ಕಟ್ಟಿಸಿದರು.

ಇದರ ಒಡ್ಡಿನ ತಳಹದಿಯು ೮೦೦ ಅಡಿ ಅಗಲ ಮತ್ತು ಮೇಲ್ಭಾಗದಲ್ಲಿ ೪೦೦ ರಿಂದ ೬೦೦ ಅಡಿ ಅಗಲವಾಗಿದೆ. ಇದರ ಎತ್ತರ ಕುಮುದ್ವತಿ ನದಿಯಿಂದ ೧೦೦ ಅಡಿ ಎತ್ತರದಲ್ಲಿದೆ. ಇದನ್ನು ಬ್ರಿಟಿಷರು ನೋಡಿದಾಗ, ಇಷ್ಟು ದೊಡ್ಡ ಮಣ್ಣಿನ ಒಡ್ಡನ್ನು ಕಟ್ಟುವ ಕಲೆ ಆಗಿನ ಕಾಲದಲ್ಲಿ (ಹತ್ತೊಂಬತ್ತನೆಯ ಶತಮಾನದ ಮಧ್ಯೆ) ಯುರೋಪಿಯನರಿಗೆ ಗೊತ್ತಿರಲಿಲ್ಲ ಎಂದಿದ್ದಾರೆ. ಇವತ್ತಿಗೂ ಈ ಕೆರೆಯ ಲಾಭವನ್ನು ಪಡೆಯಲಾಗುತ್ತಿದೆ.

ವಿಜಯನಗರ ಕಾಲದ ನಂತರ ಪಾಳೇಗಾರರು ಕೆರೆಗಳನ್ನು ಕಟ್ಟುತ್ತಿದ್ದುದಕ್ಕೆ ಚಿತ್ರದುರ್ಗದ ಮದಕರಿ ನಾಯಕರು ಒಳ್ಳೆಯ ಉದಹಾರಣೆ. ಅವರು ಚಿತ್ರದುರ್ಗದ ಊರಿಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಅಚ್ಚುಕಟ್ಟಾಗಿ ಮಾಡಿದ್ದರು. ಕೋಟೆಯ ಮೇಲ್ಭಾಗದಲ್ಲಿ ಬಿದ್ದ ನೀರನ್ನು ಒಂದರ ಕೆಳಗೆ ಒಂದು ಹೊಂಡಕ್ಕೆ ಒಯ್ದು ಕೊನೆಗೆ ಊರಿನಲ್ಲಿ ಕೊಳವೆಗಳ ಮೂಲಕ ನೀರನ್ನು ಸಾಗಿಸಿ ಸಂತೆಹೊಂಡಕ್ಕೆ ತಲುಪಿಸುತ್ತಿದ್ದರು. ಇತ್ತೀಚಿನವರೆಗೆ ಸಂತೆಹೊಂಡದಲ್ಲಿ ನೀರು ಬರುತ್ತಿತ್ತು. ಆದರೆ ಈ ವ್ಯವಸ್ಥೆಯ ಇತರ ಭಾಗಗಳು ಹಾಳಾಗಿ ಹೋಗಿ, ಚಿತ್ರದುರ್ಗಕ್ಕೆ ನೀರನ್ನು ಸರಬರಾಜು ಮಾಡಲು ಬೇರೆ ವ್ಯವಸ್ಥೆ ಮಾಡಬೇಕಾಗಿದೆ. ೧೭ನೇ ಶತಮಾನದಲ್ಲಿ ಆಳಿದ ಬಿಜಾಪುರದ ಆದಿಲ್‌ಶಾಹಿಗಳು ತಮ್ಮ ರಾಜಧಾನಿಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಜಾಣ್ಮೆಯಿಂದ ಮಾಡಿದರು. ಎತ್ತರದ ಮೇಲೆ ಕೆರೆಗಳನ್ನು ಕಟ್ಟಿ ಇಳಿಜಾರಿನ ಲಾಭವನ್ನು ಪಡೆದು ಕೊಳವೆಗಳ ಮುಖಾಂತರ ಬಿಜಾಪುರಕ್ಕೆ ಕುಡಿಯುವ ನೀರನ್ನು ಒದಗಿಸುತ್ತಿದ್ದರು. ಕಾಲಕ್ರಮೇಣ ನಿರ್ಲಕ್ಷ್ಯತೆಯಿಂದ ಈ ವ್ಯವಸ್ಥೆ ಕುಸಿದು ಹೋಯಿತು. ಅವರು ಕಟ್ಟಿದ ತಾಜ್ ಬಾವಡಿಯಲ್ಲಿ ಇಂದಿಗೂ ನೀರು ಇರುತ್ತದೆ. ಅವರು ಅನುಸರಿಸಿದ ಮಾರ್ಗವನ್ನು ಇಂದಿಗೂ ಅನುಸರಿಸುವ ಹಾಗೆ ಇದೆ.

ಬೆಂಗಳೂರಿಗೆ ಕುಡಿಯುವ ನೀರನ್ನು ಒದಗಿಸಲು ಕೆಂಪೇಗೌಡ ೧೬ನೇ ಶತಮಾನದಲ್ಲಿ ಕೆಂಪಾಂಬುಧಿ, ಧರ್ಮಾಂಬುಧಿ ಮತ್ತು ಇನ್ನು ಅನೇಕ ಕೆರೆಗಳನ್ನು ಕಟ್ಟಿದನು. ಬೆಂಗಳೂರು ನಗರ ಬೆಳೆಯುತ್ತಿರುವದರಿಂದ ಈ ಕೆರೆಗಳು ಒಂದಾದಮೇಲೆ ಇನ್ನೊಂದು ನಾಶವಾಗುತ್ತಿವೆ. ಇರುವವನ್ನಾದರೂ ಪುನರುದ್ಧಾರ ಮಾಡಿದರೆ ನೀರಿನ ಸಮಸ್ಯೆಗೆ ಸ್ವಲ್ಪ ಮಟ್ಟಿಗಾದರೂ ಪರಿಹಾರವಾಗುತ್ತದೆ.

೧೮ನೇ ಶತಮಾನದ ಉತ್ತರಾರ್ಧದಲ್ಲಿ ಬ್ರಿಟಿಷರಿಗೂ, ಹೈದರ್, ಟಿಪ್ಪು, ಮತ್ತು ಮರಾಠರಿಗೂ ಸತತವಾಗಿ ಯುದ್ಧ ನಡೆಯುತ್ತಿತ್ತು. ಈ ಯುದ್ಧಗಳ ಕಾಲದಲ್ಲಿ ಕೆರೆಗಳು ಶತ್ರುಗಳಿಗೆ ನೀರು ಕೊಡಬಾರದೆಂದು ಅವುಗಳನ್ನು ಹಾಳು ಮಾಡಲಾಯಿತು. ದಿವಾನ್ ಪೂರ್ಣಯ್ಯ ಹಳೆಯ ಮೈಸೂರಿನ ಎಲ್ಲಾ ಕೆರೆಗಳನ್ನು ದುರಸ್ತಿ ಮಾಡಿಸಿದನು.

ಅವನ ಕಾಲದ ನಂತರ ಬ್ರಿಟಿಷರು ಸಣ್ಣ ಕೆರೆಗಳನ್ನು ಅಲಕ್ಷಿಸಿದರು. ದೊಡ್ಡ ಕೆರೆಗಳಿಂದ ಆದಾಯ ಬರುತ್ತಿದ್ದುದರಿಂದ ಅವುಗಳನ್ನು ಕಾಪಾಡಿದರು. ಬ್ರಿಟಿಷರು ಬರುವ ಮುಂಚೆ ಗ್ರಾಮಸ್ಥರು ತಮ್ಮ ಊರಿನ ಎಲ್ಲಾ ಕೆರೆಗಳನ್ನು ಕಾಪಾಡುತ್ತಿದ್ದರು. ಅವರಿಗೆ ಬ್ರಿಟಿಷರು ಯಾವ ಉತ್ತೇಜನವನ್ನೂ ಕೊಡಲಿಲ್ಲವಾದ್ದರಿಂದ ಸಾವಿರಾರು ಕೆರೆಗಳು ದಾಖಲೆಯಲ್ಲಿ ಮಾತ್ರ ಉಳಿದಿವೆ. ಇತ್ತೀಚೆಗೆ ಭಾರೀ ಅಣೆಕಟ್ಟುಗಳ ಬಗ್ಗೆ ವ್ಯಾಮೋಹ ಹೆಚ್ಚಾಗಿದೆ. ಸಣ್ಣ ಕೆರೆಗಳ ನಾಶ ನಮ್ಮ ಕಣ್ಣೆದುರಿಗೆ ನಡೆಯುತ್ತಿದೆ. ನಾಗರೀಕರಣ ಹೆಚ್ಚಾಗಿ, ನಗರಗಳು ಬೆಳೆದ ಹಾಗೆ ಕೆರೆಗಳ ಅವನತಿ ಯಥೇಚ್ಛವಾಗಿ ನಡೆದಿದೆ. ಅವುಗಳಿಗೆ ಚರಂಡಿ ನೀರನ್ನು ಬಿಟ್ಟು, ನಾಶಮಾಡಲಾಗಿದೆ. ಬ್ರಿಟಿಷರು ಹೋದಮೇಲೆ ಸ್ವಾತಂತ್ರ್ಯ ಬಂದ ಮೇಲೂ ಭಾರೀ ಅಣೆಕಟ್ಟುಗಳ ಆಕರ್ಷಣೆ ಇನ್ನೂ ಹಾಗೆ ಇದೆ. ಅವುಗಳ ಜತೆಗೆ ಕೊಳವೆ ಬಾವಿಗಳನ್ನು ತೆಗೆಯುವುದು ಹೆಚ್ಚಾಗಿದೆ. ಕೆರೆಗಳ ಜತೆಗೆ ಸೇದೋ ಬಾವಿಗಳು ಬರಿದಾಗಿವೆ.

ಇದುವರೆಗೂ ಸರ್ಕಾರಕ್ಕೆ ನೀರಿನ ಸಮಸ್ಯೆಗೆ ತಕ್ಷಣ ಹೊಳೆಯುತ್ತಿದ್ದ ಪರಿಹಾರಗಳು ಭಾರೀ ಅಣೆಕಟ್ಟುಗಳು ಮತ್ತು ಕೊಳವೆ ಬಾವಿಗಳು; ಈ ಎರಡು ಪರಿಹಾರಗಳಿಂದ ಲಾಭ ನಷ್ಟ ಸರಿಸಮವಾಗಿವೆ. ಲಾಭದಲ್ಲಿ ಮುಖ್ಯವಾಗಿರುವುದು – ಭಾರತದಲ್ಲಿ 'ಹಸಿರುಕ್ರಾಂತಿ' ಸಾಧ್ಯವಾಯಿತು ಮತ್ತು ಧಾನ್ಯಗಳನ್ನು ವಿಪುಲವಾಗಿ ಬೆಳೆಯಲು ಸಾಧ್ಯವಾಯಿತು. ಆದರೆ ಭಾರೀ ಅಣೆಕಟ್ಟುಗಳನ್ನು ಕಟ್ಟುವಲ್ಲಿ ಅದರ ನಷ್ಟವೂ ಗಣನೀಯವಾಗಿದೆ. ಆಲಮಟ್ಟಿ ಅಂತಹ ಅಣೆಕಟ್ಟನ್ನು ಕಟ್ಟುವುದಕ್ಕೆ ಅನೇಕ ವರ್ಷಗಳು ಬೇಕಾಗುತ್ತವೆ. ಕಟ್ಟುವಾಗ ಬಹಳ ಹಣ ಪೋಲಾಗುತ್ತದೆ. ಕಟ್ಟುವ ಸ್ಥಳದಲ್ಲಿರುವವರ ಸ್ಥಳಾಂತರದಿಂದ ಮನೆಮಠಗಳನ್ನು ಕಳೆದುಕೊಂಡವರ ಪುನರ್ ವಸತಿಯನ್ನು ಏರ್ಪಡಿಸುವುದು ಸುಲಭ ಸಾಧ್ಯವಿಲ್ಲ. ಅವರ ಗತಿಯನ್ನು ಊಹಿಸಲಾಗುವುದಿಲ್ಲ. ಆದ್ದರಿಂದ ಇಂಥವರು ಮತ್ತು ಪರಿಸರವಾದಿಗಳು ಭಾರೀ ಅಣೆಕಟ್ಟುಗಳನ್ನು ವಿರೋಧಿಸುತ್ತಾರೆ. ಪರಿಸರವಾದಿಗಳ ಪ್ರಕಾರ ಭಾರೀ ಅಣೆಕಟ್ಟುಗಳಿಂದ ಅರಣ್ಯಗಳು ಹಾಳಾಗುತ್ತವೆ. ಅವುಗಳು ಹಾಳಾಗುವುದರಿಂದ ಮಳೆ ಕಡಿಮೆಯಾಗುತ್ತ ಹೋಗುತ್ತದೆ. ಆದ್ದರಿಂದ ಈ ಅಣೆಕಟ್ಟುಗಳನ್ನು ಕಟ್ಟುವುದಕ್ಕಿಂತ ಅರಣ್ಯಗಳನ್ನು ಬೆಳೆಸುವುದರಿಂದ ನೀರಿನ ಸಮಸ್ಯೆಯನ್ನು ಅತಿ ಸುಲಭವಾಗಿ ಮತ್ತು ಕಡಿಮೆ ಖರ್ಚಿನಲ್ಲಿ ಬಿಡಿಸಬಹುದೆನ್ನುತ್ತಾರೆ.

ಕೊಳವೆ ಬಾವಿಗಳಿಂದ ಲಾಭವೆಂದರೆ ಅವುಗಳನ್ನು ಒಂದು ದಿನದಲ್ಲಿ ನಿರ್ಮಿಸಬಹುದು. ವಿದ್ಯುಚ್ಛಕ್ತಿಯ ಪಂಪಿನಿಂದ ನೀರನ್ನು ಸುಲಭವಾಗಿ ಮೇಲೆತ್ತಬಹುದು. ಇವು ನಿಜವಾದರೂ ಈಚೆಗೆ ಅವುಗಳಿಂದ ಆಗುವ ಅನಾಹುತಗಳನ್ನು ನಾವು ನೋಡುತ್ತಿದ್ದೇವೆ. ಮೊದಲನೆಯ ನಷ್ಟ ಅವುಗಳಿಂದ

ಸೇದೋ ಬಾವಿಗಳೆಲ್ಲಾ ಖಾಲಿಯಾಗಿವೆ. ಈಚೆಗೆ ಕೊಳವೆ ಬಾವಿಗಳ ಉಪಯೋಗ ಹೆಚ್ಚಾಗಿ ಅವುಗಳ ಆಳವನ್ನು ಹೆಚ್ಚಿಗೆ ಮಾಡುತ್ತ ಹೋಗುವುದು ಅನಿವಾರ್ಯವಾಗಿದೆ. ಕೆಳಕ್ಕೆ ಹೋದ ಹಾಗೆ ಕಲುಷಿತ ನೀರು ಅವುಗಳಿಂದ ಬರಹತ್ತಿದೆ. ಈ ನೀರಿನಿಂದ ರೋಗರುಜಿನಗಳು ಬೆಳೆಯತೊಡಗಿವೆ.

ಹೀಗಿದ್ದರೂ, ಭಾರೀ ಅಣೆಕಟ್ಟುಗಳನ್ನಾಗಲಿ, ಕೊಳವೆ ಬಾವಿಗಳನ್ನಾಗಲಿ ಕೈಬಿಡುವ ಹಾಗಿಲ್ಲ. ಎಲ್ಲಿ ಸಾಧ್ಯವೊ ಅಲ್ಲಿ ಅಣೆಕಟ್ಟುಗಳನ್ನು ಕಟ್ಟಲೇಬೇಕು. ಆದರೆ ಅವುಗಳಿಂದಾಗುವ ಖರ್ಚನ್ನು ಕಡಿಮೆ ಆಗುವ ಹಾಗೆ ಎಚ್ಚರಿಕೆ ವಹಿಸಬೇಕು. ಕೊಳವೆ ಬಾವಿಗಳನ್ನು ನಿರ್ಮಿಸಲೇಬೇಕು. ಅವುಗಳ ಜೊತೆಗೆ ಕೆರೆಗಳ ಪುನರುದ್ಧಾರವನ್ನು ಮಾಡಿದರೆ ಇಂತಹ ಬಾವಿಗಳಲ್ಲಿ ನೀರು ಸಮೃದ್ಧವಾಗಿ ದೊರೆಯುವುದು. ಕೆರೆಗಳ ಪುನರುದ್ಧಾರ ಮಾಡುವಾಗ, ಕೆಲವು ಮುನ್ನೆಚ್ಚರಿಕೆಗಳನ್ನು ಮರೆಯಬಾರದು.

೧. ಮಾನ್ಯ ಶ್ರೀ ಕುಮಾರ ಬಂಗಾರಪ್ಪನವರು ಸಣ್ಣ ನೀರಾವರಿ ಸಚಿವರಾದ ಮೇಲೆ ರಾಜ್ಯದ ಕೆರೆಗಳಿಗೆ ಹೆಚ್ಚು ಮಹತ್ವ ನೀಡಿದ್ದಾರೆ. ವಿಶ್ವಬ್ಯಾಂಕ್‌ನಿಂದ ನೆರವನ್ನು ದೊರಕಿಸಿದ್ದಾರೆ. ಸದ್ಯದ ಪರಿಸ್ಥಿತಿಯಲ್ಲಿ ಇದು ಅನಿವಾರ್ಯ. ಆದರೆ ಪುನರುದ್ಧಾರದ ಕೆಲಸ ನಡೆದಾಗ ಗ್ರಾಮ ಪಂಚಾಯಿತಿಗಳನ್ನು ಈ ಕೆಲಸದಲ್ಲಿ ತೊಡಗಿಸಬೇಕು. ಜೀರ್ಣೋದ್ಧಾರವಾದ ಮೇಲೆ ಆ ಕೆರೆಗೆ ಸಂಬಂಧಪಟ್ಟ ಎಲ್ಲಾ ಜವಾಬ್ದಾರಿಯನ್ನು ಆ ಸಂಸ್ಥೆಗಳಿಗೆ ವಹಿಸಬೇಕು. ಈ ಜವಾಬ್ದಾರಿಯನ್ನು ಸರ್ಕಾರವು ಹೊರಬಾರದು. ಈ ಪಾಠವನ್ನು ನಮ್ಮ ಕೆರೆಗಳ ಪೂರ್ವೇತಿಹಾಸದಿಂದ ಕಲಿಯಬೇಕು.

೨. ಕೆರೆಗಳಲ್ಲಿ ಹೂಳು ತೆಗೆಯಿಸುವುದು ಮತ್ತು ಹೂಳು ತೆಗೆದ ಮಣ್ಣನ್ನು ಹೊಲಗಳಿಗೆ ಸಾಗಿಸುವುದು ನಿರಂತರ ಕ್ರಿಯೆಯಾಗಿ ನಡೆಯಬೇಕು. ಗ್ರಾಮೀಣ ಜನಗಳ ಸಹಾಯವು ಈ ಕೆಲಸದಲ್ಲಿ ಅತ್ಯಗತ್ಯ. ಕೆರೆಮಣ್ಣಿನ ಫಲವತ್ತತೆ ಬಗ್ಗೆ ನೀರಾವರಿ, ಕೃಷಿ ಮತ್ತು ಕಂದಾಯ ಖಾತೆಯವರು ಸಂಯುಕ್ತವಾಗಿ ಪ್ರಸಾರ ಮಾಧ್ಯಮಗಳ ಮತ್ತು ಗ್ರಾಮಸಭೆಗಳ ಮುಖಾಂತರ ಜನರಿಗೆ ತಿಳಿಸಬೇಕು. ಪ್ರಾತ್ಯಕ್ಷಿತ ಕಾರ್ಯಗಾರಗಳು ನಡೆಯಬೇಕು. ಹೀಗೆ ಮಾಡಿದರೆ ಗ್ರಾಮಸ್ಥರು ಬೇಸಿಗೆಯಲ್ಲಿ ಟ್ರಾಕ್ಟರ್ ಮತ್ತು ಚಕ್ಕಡಿಗಳಲ್ಲಿ ಮಳೆಗಾಲ ಪ್ರಾರಂಭವಾಗುವವರೆಗೂ ತಮ್ಮ ಜಮೀನಿಗೆ ಹೂಳು ಮಣ್ಣನ್ನು ಹಾಕಿ ಅದನ್ನು ಫಲವತ್ತಾಗಿ ಮಾಡಿಕೊಳ್ಳಬಹುದು. ಕೆಲವು ಗ್ರಾಮದ ರೈತರು ಹೀಗೆ ಮಾಡಿ ರಾಜ್ಯಮಟ್ಟದಲ್ಲಿ ಕೃಷಿ ಪ್ರಶಸ್ತಿ ಸಂಪಾದಿಸುತ್ತಿದ್ದಾರೆ. ಇದು ಇತರರಿಗೆ ಅನುಕರಣೀಯವಾಗಬೇಕು.

೩. ನಮ್ಮ ಕೆರೆಗಳ ಈಗಿನ ದುಸ್ಥಿತಿಗೆ ಕೆಳಗಿನ ಕಾರಣಗಳನ್ನು ಹೇಳಬಹುದು.

ಒಂದನೆಯದು ಪಟ್ಟಣಗಳು ಬೆಳೆಯುತ್ತಿರುವುದರಿಂದ, ಅದರ ಸುತ್ತಮುತ್ತಲ ಪ್ರದೇಶದಲ್ಲಿರುವ ಕೆರೆಗಳು ಕಸದ ಗುಂಡಿಗಳಾಗಿ, ಅವುಗಳ ವಿನಾಶವು ಆರಂಭವಾಗುತ್ತದೆ. ಮನೆ ಕಟ್ಟಲಿಕ್ಕೆ ಸ್ಥಳ ಬೇಕಾಗುವುದರಿಂದ ಹಳೆಯ ಕೆರೆ ಬಯಲುಗಳು ಹೊಸ .ನಿವೇಶನಗಳಾಗುತ್ತವೆ.

ಎರಡನೆಯದಾಗಿ, ಪಟ್ಟಣಗಳಲ್ಲಿ ಕೆರೆಗಳು ಹೀಗೆ ನಾಶವಾದರೆ, ಹಳ್ಳಿಗಳಲ್ಲಿ ಅವುಗಳ ಜಲಾನಯನ ಪ್ರದೇಶ ಅಥವಾ ಕೆರೆಗೆ ನೀರು ಹರಿದು ಬರುವ ಪ್ರದೇಶವನ್ನು ಸರ್ಕಾರದವರು ತಮಗೆ ಸೇರಿದ್ದೆನ್ನುವ ತಪ್ಪು ಕಲ್ಪನೆಯಿಂದ ಭೂರಹಿತ ಬಡವರಿಗೆ ದಾನ ಮಾಡುತ್ತಿದ್ದಾರೆ ಅಥವಾ ಹಳ್ಳಿಗಳಲ್ಲಿ ಗಟ್ಟುಳ್ಳವರು ಈ ಜಲಾನಯನ ಪ್ರದೇಶವನ್ನು ಆಕ್ರಮಿಸಿಕೊಂಡಿದ್ದಾರೆ. ಹೀಗೆ ಎರಡು ಕಾರಣಗಳಿಂದ ಕೆರೆಯಲ್ಲಿ ನೀರಿನ ಸಂಗ್ರಹ ಕಡಿಮೆಯಾಗಿದೆ.

ಮೂರನೆಯದಾಗಿ, ಹಿಂದೆ ಎಲ್ಲಾ ಕೆರೆಗಳ ಸುತ್ತಮುತ್ತ ಗಿಡಗಳನ್ನು ನೆಟ್ಟಿರುತ್ತಿದ್ದರು. ಆ ಗಿಡಗಳು ಮಳೆಯ ರಭಸವನ್ನು ತಡೆದು ಕರೆಯಲ್ಲಿ ನಿಧಾನವಾಗಿ ನೀರು ಸಂಗ್ರಹವಾಗುವ ಹಾಗೆ ಮಾಡುತ್ತಿದ್ದವು. ಮತ್ತು ಕೆರೆಯಲ್ಲಿ ಹೂಳು ಸೇರುವುದನ್ನು ಕಡಿಮೆ ಮಾಡುತ್ತಿದ್ದವು ಈಗ ಅವುಗಳಿಲ್ಲ.

ಫೆಬ್ರವರಿ ೨೦೦೧ರಲ್ಲಿ ಶ್ರೀ. ಎ.ಎನ್. ಯಲ್ಲಪ್ಪರೆಡ್ಡಿ ಸಮಿತಿಯವರು ನೀರಾವರಿ ಯೋಜನೆಗಳ ಕಾಲುವೆ ಜಾಲದುದ್ದಕ್ಕೂ ಮರಗಳನ್ನು ಬೆಳೆಸಬೇಕೆಂದು ಸಲಹೆ ಮಾಡಿದ್ದಾರೆ. ಇದೇ ಪದ್ಧತಿಯನ್ನು ಕೆರೆಗಳ ಮತ್ತು ಅವುಗಳ ಕಾಲುವೆಗಳ ಉದ್ದಕ್ಕೂ ಅನುಸರಿಸಿ ಗಿಡಮರಗಳನ್ನು ಬೆಳೆಸಿದರೆ ಅವುಗಳಲ್ಲಿ ಹೂಳು ಶೇಖರವಾಗುವುದು ಕಡಿಮೆಯಾಗುವುದು. ಅರಣ್ಯಗಳಿಗೂ ಮತ್ತು ನೀರಿಗೂ ನಿಕಟ ಸಂಬಂಧವಿದೆ. ಅಣೆಕಟ್ಟುಗಳ ಕೆಲಸವನ್ನು ಗಿಡಗಳು ಕಡಿಮೆ ಖರ್ಚಿನಲ್ಲಿ ಮಾಡಬಲ್ಲವೆನ್ನುವುದನ್ನು ನಾವು ಹಿಂದೆ ನೋಡಿದ್ದೇವೆ. ಜತೆಗೆ ಜಲಜಂತು ಮತ್ತು ಪಕ್ಷಿಗಳ ಸಂರಕ್ಷಣೆ, ಮೀನುಗಾರಿಕೆಯ ಬೆಳವಣಿಗೆ ಇವನ್ನೆಲ್ಲಾ ಕೆರೆಗಳು ಮಾಡುತ್ತವೆ ಇವೆಲ್ಲದರ ಜತೆಗೆ ಅಂತರ್ಜಲವು ಹೆಚ್ಚಾಗುವುದು. ಅವುಗಳಿಂದ ನಮಗಾಗುವ ಅತಿ ಮಹತ್ವದ ಲಾಭ. ಈಗ ಅಂಜರ್ತಲವೇ ಭಾರತದಲ್ಲಿ ನೀರು ಸರಬರಾಜುವಿನ ಮೊದಲನೆಯ ಸ್ಥಾನದಲ್ಲಿರುವುದರಿಂದ ಅದರ ಅಭಿವೃದ್ಧಿಗೆ ನಾವು ಹೆಚ್ಚು ಗಮನ ಕೊಡಬೇಕು.

ಕೊಳವೆ ಬಾವಿಗಳ ಆಳವನ್ನು ಕಡಿಮೆ ಮಾಡುವುದಕ್ಕೆ ಕೆರೆಗಳ ಜತೆ ಸರ್ಕಾರದವರು ಚಿಕ್ಕ ಡ್ಯಾಂಗಳ ಕಟ್ಟಡಕ್ಕೆ ಹೆಚ್ಚು ಮಹತ್ವವನ್ನು ಕೊಡುತ್ತಿದ್ದಾ ಇವುಗಳನ್ನು ಕಟ್ಟುವುದಕ್ಕೆ ಕೋಟ್ಯಂತರ ರೂಪಾಯಿಗಳನ್ನು ವ್ಯ

ಮಾಡಬೇಕಾಗುತ್ತದೆ. ಶ್ರೀ ಜಯಚಂದ್ ಜೈನ ಎನ್ನುವವರ ಪ್ರಕಾರ ಕೊಳವೆ ಬಾವಿಗಳನ್ನು ನದಿಯ, ಕಾಲುವೆಗಳ, ಹಳ್ಳಿಗಳ ಪಕ್ಕದಲ್ಲಿ ನಿರ್ಮಿಸಿದರೆ, ಪ್ರವಾಹ ಬಂದಾಗ, ಈ ಬಾವಿಗಳು ಅಂತರ್ಜಲವನ್ನು ಹೆಚ್ಚಿಸುತ್ತಾ ಹೋಗುತ್ತವೆ. ವಿಶೇಷ ಖರ್ಚಿಲ್ಲದೆ ಕೊಳವೆ ಬಾವಿಗಳಲ್ಲಿ ನೀರು ವಿಫುಲವಾಗಿ ಸಂಗ್ರಹವಾಗುತ್ತದೆಂದು ಅವರು ಅನ್ನುತ್ತಾರೆ.

ಮನೆಗಳನ್ನು ಕಟ್ಟುವಾಗ ಮೇಲ್ಛಾವಣಿಯಿಂದ ನೀರು ಸಂಗ್ರಹವಾಗುವ ಹಾಗೆ ಕಟ್ಟಿದರೆ, ಸಂಗ್ರಹವಾದ ನೀರಿನಿಂದ ಸ್ವಲ್ಪಮಟ್ಟಿಗೆ ಆದರೂ ಸಹಾಯ ವಾಗುವುದು: ಬಹುಮಹಡಿ ಕಟ್ಟಡಗಳ ಮೇಲ್ಛಾವಣಿಯಿಂದ ಹೆಚ್ಚು ನೀರನ್ನು ಸಂಗ್ರಹಿಸಬಹುದು, ಈ ವ್ಯವಸ್ಥೆ ಅಷ್ಟು ದುಬಾರಿಯಲ್ಲ ಒಂದು ಅಥವಾ ಒಂದೂವರೆ ಲಕ್ಷದಲ್ಲಿ ಈ ವ್ಯವಸ್ಥೆ ಮಾಡಬಹುದು. ಹಾಗೆ ಮಾಡಿದವರಿಗೇ ಕಾರ್ಪೋರೇಷನ್ನಿನವರು ನೀರು ಒದಗಿಸುವರೆಂದು ಕಾನೂನಿನಲ್ಲಿ ಹೇಳಬಹುದು. ತಮಿಳುನಾಡಿನಲ್ಲಿ ಹೀಗೆ ಮಾಡಿದೆ.

ಕೊನೆಯದಾಗಿ, ಜನರು ನೀರಿನ ಸಮಸ್ಯೆಗೆ ಪರಿಹಾರ ಹುಡುಕುವುದರಲ್ಲಿ ತಮ್ಮ ಪಾತ್ರವನ್ನು ಕಂಡುಕೊಳ್ಳಬೇಕು. ಸರ್ಕಾರದವರು ಭಾರೀ ಅಣೆಕಟ್ಟುಗಳ ಮೇಲಿನ ವ್ಯಾಮೋಹ ಕಡಿಮೆ ಮಾಡಿ, ಕೆರೆಗಳ ಪುನರುದ್ಧಾರಕ್ಕೆ ಮತ್ತು ಇತರ ಮಾರ್ಗಗಳಿಂದ ಅಂತರ್ಜಲ ವೃದ್ಧಿಯಾಗುವ ಹಾಗೆ ನೋಡಿಕೊಳ್ಳಬೇಕು.

■

೨೬

ಅಧ್ಯಕ್ಷ ಭಾಷಣ:

ಕರ್ನಾಟಕ ಇತಿಹಾಸ ಅಕಾಡೆಮಿ. ೧೦ನೆಯ ಸಮ್ಮೇಳನ, ಧಾರವಾಡ, ೧೯೯೬

ಕರ್ನಾಟಕ ಇತಿಹಾಸ ಅಕಾಡೆಮಿಯ ದಶವಾರ್ಷಿಕ ಸಮ್ಮೇಳನಕ್ಕೆ ನನ್ನನ್ನು ಅಧ್ಯಕ್ಷನನ್ನಾಗಿ ಆರಿಸಿದ್ದಕ್ಕೆ ಅಕಾಡೆಮಿಯ ಕಾರ್ಯಕಾರೀ ಸಮಿತಿಯವರಿಗೆ ನನ್ನ ವಂದನೆಗಳು. ನನ್ನ ಜೀವನದ ಬಹುಮುಖ್ಯ ಭಾಗವನ್ನು ಕಳೆದಂತಹ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ನಡೆಯುತ್ತಿರುವ ಈ ಸಮ್ಮೇಳನದ ಅಧ್ಯಕ್ಷಸ್ಥಾನ ಲಭಿಸಿರುವುದು ನನಗೆ ಹೆಮ್ಮೆಯ ವಿಷಯ. ಕರ್ನಾಟಕ ವಿಶ್ವವಿದ್ಯಾಲಯವೂ ಮತ್ತು ಇಲ್ಲಿಯ ಸುಪ್ರಸಿದ್ಧ ಮುರುಘಾಮಠವೂ ಸೇರಿ ನಡೆಸುತ್ತಿರುವುದು ಈ ಸಮ್ಮೇಳನದ ಒಂದು ವೈಶಿಷ್ಟ್ಯ. ಈ ಊರಿಗೆ ಇರುವ ಪ್ರಾಮುಖ್ಯತೆಗೆ ಈ ಎರಡೂ ಸಂಸ್ಥೆಗಳೂ ಕಾರಣ. ತಮ್ಮ ತಮ್ಮ ಕ್ಷೇತ್ರಗಳಲ್ಲಿ ಅಂದರೆ ಶಿಕ್ಷಣ ಮತ್ತು ಧಾರ್ಮಿಕ ಕ್ಷೇತ್ರಗಳಲ್ಲಿ ಇವು ಮೇರುಶಿಖರದಂತಿವೆ. ಕರ್ನಾಟಕ ಇತಿಹಾಸ ಅಕಾಡೆಮಿಯು ಇಂತಹ ಸಂಸ್ಥೆಗಳ ಕೃಪೆಗೆ ಪಾತ್ರವಾಗಿರುವುದು ಅದರ ಸೌಭಾಗ್ಯ. ಈ ಸಂಸ್ಥೆಗಳ ಮುಖ್ಯಸ್ಥರಾದ ಮುರುಘಾಮಠದ ಶ್ರೀ ಶ್ರೀ ಶಿವಯೋಗಿ ಮಹಾಸ್ವಾಮಿಗಳಿಗೂ ಮತ್ತು ಕುಲಪತಿ ಡಾ॥ ಎಸ್. ರಾಮೇಗೌಡರಿಗೂ ನನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ವಿಶ್ವವಿದ್ಯಾಲಯದ ಪರವಾಗಿ ಈ ಸಮ್ಮೇಳನವನ್ನು ನಡೆಸುತ್ತಿರುವ ಪ್ರಾಚೀನ ಭಾರತೀಯ ಇತಿಹಾಸ ಮತ್ತು ಶಾಸನ ವಿಜ್ಞಾನ ವಿಭಾಗ ಮತ್ತು ಕನ್ನಡ ಸಂಶೋಧನ ಸಂಸ್ಥೆ ಇವುಗಳ ಮುಖ್ಯಸ್ಥರಿಗೂ ನನ್ನ ವಂದನೆಗಳು.

ಈ ನನ್ನ ಭಾಷಣದಲ್ಲಿ ಇತಿಹಾಸ ಸಂಶೋಧನೆಯಿಂದ ಸದ್ಯದ ನೀರಿನ ಸಮಸ್ಯೆಗೆ ಪರಿಹಾರವನ್ನು ಸೂಚಿಸುತ್ತೇನೆ. ಬೇಸಿಗೆಯಲ್ಲಿ ನಮ್ಮ ರಾಷ್ಟ್ರದ ಮುಂದಿರುವ ದಾರುಣ ಸಮಸ್ಯೆ ನೀರಿನ ಸರಬರಾಜಿನದು. ಹಿಂದಿನವರು ಕಂಡುಕೊಂಡ ಪರಿಹಾರ ಇಂದಿನವರಿಗೆ ತಕ್ಷಣ ಉಪಯೋಗವಾಗಬಲ್ಲದು. ಇತಿಹಾಸ ಸಂಶೋಧನೆಯಲ್ಲಿ ಇದು ಒಂದು ಹೊಸಕ್ಷೇತ್ರ. ಈ ಕ್ಷೇತ್ರದಲ್ಲಿ ಸಂಶೋಧನೆ ಅತ್ಯಂತ ಉಪಯುಕ್ತ. ನಮ್ಮ ಪೂರ್ವಜರು ನೀರಿನ ಸಮಸ್ಯೆಯ ಪರಿಹಾರಕ್ಕೆ ಹೆಚ್ಚಾಗಿ ಕೆರೆಗಳನ್ನು-

ಬಾವಿಗಳನ್ನು ಅವಲಂಬಿಸಿದ್ದರು. ಮಳೆ ಚೆನ್ನಾಗಿ ಬಂದರೆ ಕೆರೆ-ಬಾವಿಗಳು ತುಂಬಿರುತ್ತವೆ. ಬರಗಾಲ ಬಂದರೂ ಕೆರೆಗಳ ಅಂಗಳದಲ್ಲಿ ಬೆಳೆಗಳನ್ನು ಬೆಳೆದು ಸ್ವಲ್ಪಮಟ್ಟಿಗಾದರೂ ಬರಗಾಲದ ಬವಣೆಯನ್ನು ಕಡಿಮೆಮಾಡಿಕೊಳ್ಳಬಹುದು. ಮಹಾಪೂರ ಬಂದರೂ ಅದರಿಂದ ಆಗುವ ಹಾನಿಯನ್ನು ಕೆರೆಗಳು ಕಡಿಮೆ ಮಾಡಬಲ್ಲವು. ಕೆರೆಗಳಿಂದ ಬಾವಿಯ ನೀರು ಒಣಗುವುದು ಕಡಿಮೆಯಾಗುತ್ತದೆ. ಹೀಗೆ ಎಲ್ಲಾ ಕಾಲಗಳಲ್ಲಿಯೂ ಸ್ಥಿತಿಗಳಲ್ಲಿಯೂ ಕೆರೆಗಳು ಉಪಯುಕ್ತ.

ನೀರಿನ ಸಮಸ್ಯೆಗೆ ಈಗ ನಮಗೆ ಹೊಳೆಯುವ ಪರಿಹಾರಗಳು – ಭಾರೀ ಅಣೆಕಟ್ಟುಗಳು ಮತ್ತು ಕೊಳವೆ ಬಾವಿಗಳು. ಭಾರೀ ಅಣೆಕಟ್ಟುಗಳನ್ನು ಎಲ್ಲಾ ಕಡೆಗಳಲ್ಲಿಯೂ ಕಟ್ಟುವುದು ಸಾಧ್ಯವಿಲ್ಲ. ಎಲ್ಲಿ ಸಾಧ್ಯವೋ ಅಲ್ಲಿ ಕಟ್ಟಬೇಕು. ಆದರೆ ಈಚೆಗೆ ಅವುಗಳ ಬಗೆಗೆ ಜನರಲ್ಲಿ ಮೊದಲಿದ್ದ ಆಕರ್ಷಣೆ ಕಡಿಮೆಯಾದ ಹಾಗೆ ಕಾಣುತ್ತದೆ. ಕೆಲವುಕಡೆ ವಿರೋಧವೂ ಕಂಡುಬರುತ್ತದೆ. ಇದಕ್ಕೆ ಕಾರಣ, ಅವುಗಳ ನಿರ್ಮಾಣಕ್ಕೆ ಹಣದ ಹೊಳೆಯನ್ನು ಹರಿಸಬೇಕು. ಕಟ್ಟಲಿಕ್ಕೆ ಅನೇಕ ವರ್ಷಗಳು ಬೇಕು. ಅವುಗಳನ್ನು ಕಟ್ಟುವಾಗ ಎಷ್ಟೋ ಸಲ ಬಹು ಉಪಯುಕ್ತವಾದ ದಟ್ಟವಾದ ಕಾಡುಗಳು ನಾಶವಾಗುತ್ತವೆ. ಇವುಗಳ ಜತೆಗೆ ಅನೇಕ ಜನರು ತಮ್ಮ ಹೊಸ ಮನೆಗಳನ್ನು ಕಳೆದುಕೊಳ್ಳುತ್ತಾರೆ, ಮತ್ತು ಅವರ ಪುನರ್ವಸತಿ ಸುಲಭ ಸಾಧ್ಯವಲ್ಲ. ಆದ್ದರಿಂದ ಅಂಥವರು ಇವು ಬೇಡವೇ ಬೇಡವೆನ್ನುತ್ತಾರೆ. ಇಷ್ಟೆಲ್ಲಾ ಅಡಚಣೆಗಳಿದ್ದರೂ ಅವನ್ನು ಸರಿಪಡಿಸಿ ಅಣೆಕಟ್ಟುಗಳನ್ನು ಕಟ್ಟುವುದು ಅವಶ್ಯ.

ನೀರಿನ ಸಮಸ್ಯೆಗೆ ಹೊಚ್ಚ ಹೊಸದಾದ ಪರಿಹಾರ ಕೊಳವೆಬಾವಿಗಳು. ಇದಕ್ಕೆ ಅಷ್ಟು ಖರ್ಚಾಗುವುದಿಲ್ಲ ಮತ್ತು ಅನೇಕ ಕಡೆಗಳಲ್ಲಿ ಅತಿ ಶೀಘ್ರವಾಗಿ ಅವನ್ನು ನಿರ್ಮಿಸಬಹುದು. ಆದರೂ ಇತ್ತೀಚಿನ ದಿನಗಳಲ್ಲಿ ಅವುಗಳ ಆಳ ದಿನದಿನಕ್ಕೆ ಹೆಚ್ಚಾಗುತ್ತಾ ಹೋಗುತ್ತಿದೆ ಮತ್ತು ಅವುಗಳನ್ನು ನಿರ್ಮಿಸುವಲ್ಲಿ ಲಾಭ ನಷ್ಟಗಳನ್ನು ಮೊದಲೇ ಊಹಿಸುವ ಹಾಗಿಲ್ಲ. ಅದೊಂದು ಲಾಟರಿಯಾಗಿದೆ. ಆದರೂ ಕೊಳವೆ ಬಾವಿಗಳ ಆಳ ಕಡಿಮೆ ಮಾಡುವ ಉಪಕ್ರಮಗಳನ್ನು ಹುಡುಕಬೇಕೇ ಹೊರತು ಅವುಗಳನ್ನು ಕೈಬಿಡುವ ಹಾಗಿಲ್ಲ. ಇಂಥ ಉಪಕ್ರಮಗಳಲ್ಲಿ ಮುಖ್ಯವಾದದ್ದು ಹಳೆಯ ಕೆರೆಗಳ ಜೀರ್ಣೋದ್ಧಾರ. ಯಾಕೆಂದರೆ ಕೆರೆಗಳಿಂದಲೆ ಬಾವಿಗಳಲ್ಲಿ ನೀರು ಹೆಚ್ಚಾಗುವುದು. ಈ ಸಂಬಂಧವನ್ನು ನಮ್ಮ ಹಿರಿಯರು ಚೆನ್ನಾಗಿ ಅರಿತಿದ್ದರು. ಅದನ್ನು ಮರೆತು ನಾವು ಕೊಳವೆ ಬಾವಿಗಳ ಆಳವನ್ನು ಹೆಚ್ಚಿಸುತ್ತಾ ಹೋಗುತ್ತಿದ್ದೇವೆ. ಕೆರೆಗಳ ಜೀರ್ಣೋದ್ಧಾರ ಈ ಆಳವನ್ನು ಕಡಿಮೆ ಮಾಡಬಹುದು.

ಕೆರೆಗಳ ಜೀರ್ಣೋದ್ಧಾರ ಮಾಡುವ ಮುಂಚೆ ಅವು ಹೇಗೆ ಬೆಳೆದು ಬಂದವೆನ್ನುವುದನ್ನು ನೋಡುವುದು ಅವಶ್ಯ. ಈ ಸಮ್ಮೇಳನದಲ್ಲಿ ಹುಬ್ಬ

ಧಾರವಾಡ ಈ ಆವಳೀ ನಗರಗಳ ಇತಿಹಾಸಕ್ಕೆ ಹೆಚ್ಚು ಪ್ರಾಶಸ್ತ್ಯ ಕೊಡುತ್ತಿರುವುದರಿಂದ ಧಾರವಾಡ ಜಿಲ್ಲೆಯಲ್ಲಿ ಕೆರೆಗಳ ಬೆಳವಣಿಗೆಯನ್ನು ಈಗ ಗುರುತಿಸೋಣ. ಹೀಗೆ ಗುರುತಿಸುವುದಕ್ಕೆ ಶಾಸನಗಳು ನಮಗೆ ಸಹಾಯಕ. ಬಾದಾಮಿ ಚಾಲುಕ್ಯ ವಿಜಯಾದಿತ್ಯನ ಕ್ರಿ.ಶ. ೭೦೭ರ ಶಿಗ್ಗಾವಿ ಶಾಸನದಲ್ಲಿ ಗುಡ್ಡಗೆರೆಯಲ್ಲಿ ಅಂದರೆ ಈಗಿನ ಗುಡಿಗೇರಿಯಲ್ಲಿ ಒಂದರ ಹತ್ತಿರ ಇನ್ನೊಂದು ಒಟ್ಟು ೧೪ ಕೆರೆಗಳಿದ್ದವೆಂದು ಹೇಳಿದೆ. ಧಾರವಾಡ ಜಿಲ್ಲೆಯ ದಕ್ಷಿಣ ಭಾಗದಲ್ಲಿ ೮ನೇ ಶತಮಾನದ ಆರಂಭದಲ್ಲಿ ಕೆರೆಕಟ್ಟುವ ಪದ್ಧತಿ ಜನರಿಗೆ ಚೆನ್ನಾಗಿ ಗೊತ್ತಿತ್ತೆಂದು ಈ ಉದಾಹರಣೆಯಿಂದ ಹೇಳಬಹುದು. ರಾಷ್ಟ್ರಕೂಟರ ಕಾಲದಲ್ಲಿ ಕ್ರಿ.ಶ. ೮೭೨ರ ಗದಗ ತಾಲ್ಲೂಕಿನ ಚಿಂಚ್ಲಿ ಶಾಸನದಿಂದ ಕೆರೆಗಳ ದುರಸ್ತಿಗೆ ನೀರುಣಿ ಸುಂಕವನ್ನು ವಸೂಲ್ಮಾಡುತ್ತಿದ್ದುದು ವ್ಯಕ್ತವಾಗುತ್ತದೆ. ಮುಂದಿನ ಶತಮಾನದಲ್ಲಿ ಅಂದರೆ ೯೨೭-೩೦ ರಲ್ಲಿ ಬಂಕಾಪುರದ ನಾಲ್ಕನೆಯ ಗೋವಿಂದನ ಶಾಸನದಲ್ಲಿ, ತಪ್ಪು ಮಾಡಿದವರು ಕೊಡುತ್ತಿದ್ದ ದಂಡದ ಹಣವನ್ನು ಕೊಂಡಲಿ ಕೆರೆಯ ದುರಸ್ತಿಗೆ ಉಪಯೋಗಿಸುತ್ತಿದ್ದರೆಂದಿದೆ. ಅದೇ ಕಾಲದಲ್ಲಿ ನರಗುಂದದ ಹತ್ತಿರವಿರುವ ಆಲೂರಿನಲ್ಲಿ ಅದೇ ಉದ್ದೇಶಕ್ಕೆ ಶುಭ ಕಾರ್ಯಗಳ ಸಮಯದಲ್ಲಿ ನಿಧಿಯನ್ನು ಕೂಡಿಸಿ ವ್ಯಯಮಾಡುತ್ತಿದ್ದರೆಂದಿದೆ. ಹನ್ನೊಂದನೆಯ ಶತಮಾನದ ಆದಿಭಾಗದಲ್ಲಿ ಗದುಗಿನ ಹತ್ತಿರವಿರುವ ಕೋಟ ಉಮಚಗಿಯಲ್ಲಿ ಅಪರಾಧಿಗಳು ಕೊಡುವ ದಂಡವನ್ನು ಕೆರೆಯ ಖರ್ಚಿಗೆ ತೆಗೆದಿಡುತ್ತಿದ್ದರು. ಇದುವರೆಗೂ ಹೇಳಿದುದರ ಸಾರಾಂಶ, ಕೆರೆಗಳನ್ನು ಜನರು ತಮ್ಮ ಆಸ್ತಿಯೆಂದು ತಿಳಿದು ಅವನ್ನು ಕಾಪಾಡುವುದಕ್ಕೆ ಕರಗಳನ್ನು ಮತ್ತು ದಂಡದ ಹಣವನ್ನು ಮೀಸಲಾಗಿಡುತ್ತಿದ್ದರು.

ಕಲ್ಯಾಣ ಚಾಳುಕ್ಯರ ಕಾಲದಲ್ಲಿ ಕೆರೆಗಳ ಕಟ್ಟುವಿಕೆಗೆ ಮಹಾಪೂರ ಬಂತೆಂದು ಹೇಳಬಹುದು. ಈ ಜಿಲ್ಲೆಯ ಅನೇಕ ಹಳ್ಳಿಗಳಲ್ಲಿ ಅವರ ಕಾಲದ ಶಾಸನಗಳು ದೊರಕುತ್ತಿವೆ. ಅವುಗಳಲ್ಲಿ ದೇವಸ್ಥಾನ – ಕೆರೆಗಳ ಉಲ್ಲೇಖಗಳನ್ನು ವಿಪುಲವಾಗಿ ಕಾಣಬಹುದು. ಕೆಲವೇ ಕೆಲವು ಉದಾಹರಣೆಗಳು ಹೀಗಿವೆ : ೧೦೪೫ರಲ್ಲಿ ಮುಗದದಲ್ಲಿ ಸಮಣ ಮತ್ತು ಪೆರ್ಗ್ಗೆರೆಗಳೆನ್ನುವ ಕೆರೆಗಳಿದ್ದವು. ೧೧೨೫ರಲ್ಲಿ ಅವುಗಳಲ್ಲಿ ಒಂದನ್ನು ಪಡಿಸಲಿಸುವುದಕ್ಕೆ ಅಂದರೆ ದುರಸ್ತಿ ಮಾಡುವುದಕ್ಕೆ ಒಂದು ಗದ್ದೆಯನ್ನು ಊರಿನವರು ದಾನಮಾಡಿದರು. ಇಂತಹ ಗದ್ದೆಗಳಿಗೆ ಇತರ ಶಾಸನಗಳಲ್ಲಿ ಬಿತ್ತುವಟ್ಟ ಅಥವಾ ಬಿತ್ತುವಾಟವೆಂದು ಕರೆದಿದ್ದಾರೆ. ಮುಗದದಲ್ಲಿ ಈ ಬಿತ್ತುವಟ್ಟವನ್ನು ಅರಸರು ಅರವತ್ತೊಕ್ಕಲು ಅಂದರೆ ರೈತರು ರಕ್ಷಿಸುವರೆಂದು ಹೇಳಿದೆ. ಈಗ ಈ ಊರಿನ ಹೊರಗಿರುವ ದೊಡ್ಡದಾದ ಹೊನ್ನವ್ವನ ಕೆರೆ, ಈ ಶಾಸನೋಕ್ತವಾದ ಕೆರೆ. ಅದು ಕನಿಷ್ಠ ಒಂದು ಸಾವಿರ ವರ್ಷ ಉಪಯುಕ್ತವಾಗಿದೆ. ೧೧೮೭ರಲ್ಲಿ ಧರ್ಮಾಪುರದಲ್ಲಿ (ಈಗಿನ ಡಂಬಳದಲ್ಲಿ) "ಏಸೆವ ಗೋಣ ಸಮುದ್ರದ

ಅಗತ್ಯ ತುಂಬು ಕಲ್ಲಿನ ಮರಗೆಲಸ ಮೊದಲಾಗಿನ ಕೆಲ ಕೆಲಸಗಳ ಮಾಡುವಂತಾಗಿ" ಊರಿನ ಮುಖ್ಯಸ್ಥರು ತೋಟಗಳ ಮೇಲಿನ ಸುಂಕವನ್ನು ಬಿಟ್ಟರು. ಅಂದರೆ ಆ ಕೆರೆಯ ಹೂಳು ತೆಗೆಯುವುದಕ್ಕೆ ಮತ್ತು ದುರಸ್ತಿಗೆ ಬೇಕಾದ ಕಲ್ಲು ಮತ್ತು ಮರ ಗೆಲಸವನ್ನು ಮಾಡುವುದಕ್ಕೆ ತೋಟಗಳ ಮೇಲಿನ ಸುಂಕವನ್ನು ಉಪಯೋಗಿಸಬಹುದಾಗಿತ್ತು. ತೋಟಗಳ ಮೇಲಿನ ಸುಂಕ ಎಷ್ಟು ನ್ಯಾಯ ಸಮ್ಮತವಾದುದೆಂದರೆ ಆ ತೋಟಗಳಿದ್ದುದು ಆ ಕೆರೆಗಳಿಂದ. ಆದ್ದರಿಂದ ಆ ಕೆರೆಯ ದುರಸ್ತಿಗೆ ಆ ತೋಟಗಳ ಉತ್ಪನ್ನದ ಸ್ವಲ್ಪ ಭಾಗವನ್ನು ಉಪಯೋಗಿಸುತ್ತಿದ್ದುದು ಯೋಗ್ಯವಾದದ್ದು. ತೋಟಗಾರರು ಈ ಕರವನ್ನು ಕೊಡಲಿಕ್ಕೆ ಹಿಂಜರಿಯುವ ಹಾಗಿರಲಿಲ್ಲ. ಇಂತಹ ಒಳ್ಳೆಯ ವ್ಯವಸ್ಥೆ ಮಾಡಿದ್ದರಿಂದ ಮತ್ತು ಗ್ರಾಮಸ್ಥರು ಅದನ್ನು ನಡೆಸಿಕೊಂಡು ಬಂದದ್ದರಿಂದ ಇವತ್ತಿಗೂ ಆ ಕೆರೆ ಉಳಿದುಕೊಂಡು ಬಂದಿದೆ. ಧಾರವಾಡ ಜಿಲ್ಲೆಯಲ್ಲಿ ಇದು ಒಂದು ಅತಿದೊಡ್ಡ ಕೆರೆ. ಇದು ೪೦೦೦ ಅಡಿ ಉದ್ದ, ೨೫ ಅಡಿ ಎತ್ತರವಿದೆ.

ಮಣಗಂಡಿಯಲ್ಲಿ (ಹಿಂದಿನ ಮಣಿಗಂದಗೆ) ಸು. ೧೨೦೩–೧೧ರಲ್ಲಿ ಪವಿತ್ರದ ಪರ್ವವೆನ್ನುವ ಒಂದು ಭಾರೀ ಉತ್ಸವವಾಯಿತು. ಅದನ್ನು ನೋಡಲಿಕ್ಕೆ ಭಕ್ತರು ದೂರದೂರದ ಊರುಗಳಿಂದ ಬಂದಿದ್ದರು. ನೀರಸಾಗರದಿಂದಲೂ ಬಂದಿದ್ದರು. ಈ ನೀರಸಾಗರ ಈಗಲೂ ಅದೇ ಹೆಸರಿನ ದುಮ್ಮವಾಡದ ಹತ್ತಿರವಿರುವ ಊರಾಗಿರಬೇಕು. ಕೆಲವರು ಈ ನೀರಸಾಗರ ಮಣಗಂಡಿಯ ಉತ್ತರಕ್ಕಿರುವ ನೀರಲ ಕಟ್ಟೆ ಎಂದು ಹೇಳುತ್ತಾರೆ. ಒಂದುವೇಳೆ ಈ ಶಾಸನದಲ್ಲಿ ಹೇಳಿರುವ ನೀರಸಾಗರ ಬೇರೆಯಾದರೂ, ದುಮ್ಮವಾಡದ ನೀರಸಾಗರ ಬಹಳ ಹಳೆಯದು ಮತ್ತು ಆ ಊರಿಗೆ ಆ ಹೆಸರು ಇರಬೇಕಾದರೆ ಅಲ್ಲಿ ನೀರಿನ ಸಾಗರವಿದ್ದೇ ಇರಬೇಕು. ಆ ಊರಿನಲ್ಲಿ ಹರಿಯುವ ಬೇಡ್ತಿನದಿಗೆ ಅಲ್ಲಿ ಒಡ್ಡು ಕಟ್ಟಲು ಯೋಗ್ಯವಾದ ನಿವೇಶನವಿದೆ. ಅಲ್ಲಿ ಒಡ್ಡುಕಟ್ಟಿ ಕೆರೆಯನ್ನು ನಿರ್ಮಿಸಿದ್ದರಿಂದ ಆ ಊರಿಗೆ ಆ ಹೆಸರಿಟ್ಟರೆಂದು ತಿಳಿಯಬಹುದು. ಮುಂದೆ ಯಾವಾಗಲೋ ನಾದುರಸ್ತಾಗಿ ಕೆರೆ ನಾಶವಾಗಿರಬೇಕು. ಊರಿನ ಹೆಸರು ಮಾತ್ರ ಉಳಿದಿರಬೇಕು. ಮುಂಬಯಿ ಸರ್ಕಾರದವರು ಸ್ವಾತಂತ್ರ್ಯದ ಹೊತ್ತಿಗೆ ಅದನ್ನು ದುರಸ್ತಿಮಾಡಿ ಹುಬ್ಬಳ್ಳಿ – ಧಾರವಾಡಗಳಿಗೆ ನೀರು ಸರಬರಾಜಿನ ವ್ಯವಸ್ಥೆ ಮಾಡಿದ್ದಾರೆ. ಕೆರೆಯ ಜೀರ್ಣೋದ್ಧಾರದಿಂದ ಆಗುವ ಲಾಭಕ್ಕೆ ಈ ಯೋಜನೆ ಉತ್ತಮ ನಿದರ್ಶನ.

ಕಲ್ಯಾಣ ಚಾಲುಕ್ಯ – ಯಾದವರ ರಾಜಮನೆತನಗಳ ನಂತರ ವಿಜಯನಗರದ ಅರಸರು ನೀರಾವರಿಗೆ ವಿಶೇಷ ಲಕ್ಷ್ಯಕೊಟ್ಟರು. ಅವರ ಕಾಲದಲ್ಲಿ ಹಳೇಹುಬ್ಬಳ್ಳಿಗೆ ರಾಯರ ಹುಬ್ಬಳ್ಳಿಯೆನ್ನುತ್ತಿದ್ದರು. ರಾಯಾಪುರದ ಕೆರೆ, ಕೃಷ್ಣರಾಯ ಸಮುದ್ರ

ಸದಾಶಿವ ಸಮುದ್ರ – ಇವು ಅವುಗಳ ಹೆಸರಿನ ಮೇಲಿನಿಂದ ಅವರ ಕಾಲದ್ದೆಂದು ಹೇಳಬಹುದು. ಹಾನಗಲ್ಲಿಗೆ ೬ ಮೈಲಿ ದೂರದಲ್ಲಿ ಶೃಂಗೇರಿಯ ಬಳಿಯಲ್ಲಿ ಧರ್ಮಾನದಿಗೆ ಕಟ್ಟಿರುವ ಒಡ್ಡು ಬಹು ಭದ್ರವಾಗಿದೆ. ತಲೆಯ ಮೇಲೆ ೧೭ ಅಡಿ ಅಗಲ, ತಳದಲ್ಲಿ ೪೦ ಅಡಿ ಅಗಲ ಮತ್ತು ೧೦ ಅಡಿ ಉದ್ದವಿದೆ. ಈ ಒಡ್ಡನ್ನು ವಿಜಯನಗರದ ಅರಸರು ಕಟ್ಟಿರಬೇಕೆಂದು ಹೇಳುತ್ತಾರೆ. ಇತ್ತೀಚೆಗೆ ಇನ್ನೊಂದು ಒಡ್ಡನ್ನು ನಮ್ಮ ಸರ್ಕಾರದವರು ಕಟ್ಟಿ ಅದರಿಂದ ಬರುವ ಹೆಚ್ಚು ನೀರನ್ನು ಹಳೆಯ ಕಾಲುವೆಗಳಿಗೆ ಒದಗಿಸುತ್ತಿದ್ದಾರೆ. ಹಳೆಯ ಕೆರೆಯಿಂದ ಹೆಚ್ಚು ಉಪಯೋಗ ಪಡೆಯುವ ಈ ಯೋಜನೆ ಸದ್ಯದ ಪರಿಸ್ಥಿತಿಯಲ್ಲಿ ಅನುಕರಣೀಯ.

ವಿಜಯನಗರದ ರಾಜರ ಕಾಲದಲ್ಲಿ ಕಟ್ಟಿದ ಅಣೆಕಟ್ಟನ್ನು ಇದಕ್ಕಿಂತ ಇನ್ನೂ ಚೆನ್ನಾಗಿ ಉಪಯೋಗಿಸಿಕೊಂಡ ಉದಾಹರಣೆಯನ್ನು ಹಿರೇಕೇರೂರು ತಾಲೂಕಿನ ಮದಗ-ಮಾಸೂರಿನಲ್ಲಿ ನೋಡಬಹುದು. ಈ ಕೆರೆಗೆ ಸಂಬಂಧಿಸಿದ ಬಲಿದಾನದ ಕುರಿತ ಕೆಲವು ಜನಪದ ಗೀತೆಗಳಿವೆ. ಒಂದು ಕಥೆಯ ಪ್ರಕಾರ ಕೆರೆಯ ಒಡ್ಡು ನಿಲ್ಲದಿದ್ದಾಗ ಒಡ್ಡರ ಪ್ರಮುಖನ ಮಗಳು ಲಕ್ಷ್ಮಿ ತನ್ನನ್ನು ಕೆರೆಗೆ ಆಹುತಿಯನ್ನಾಗಿ ಅರ್ಪಿಸಿಕೊಂಡಳೆಂದೂ ಅವಳ ತ್ಯಾಗದಿಂದ ಕೆರೆಯ ಒಡ್ಡು ನಿಂತು ನೀರು ತುಂಬಿತೆಂದು ಹೇಳುತ್ತಾರೆ. ಕೆರೆಯ ತೂಬಿನ ಬಳಿ ಆಕೆಯ ಹೆಸರಿನ ಒಂದು ದೇವಾಲಯವಿದೆ.

ಈ ಬಲಿದಾನದಿಂದ ಮಾತ್ರವಲ್ಲದೆ, ಕಟ್ಟಡದ ಗಾತ್ರದಿಂದಲೂ ಆ ಕೆರೆ ಅದ್ಭುತವಾಗಿದೆ. ತುಂಗಭದ್ರೆಯ ಉಪನದಿ ಕುಮುದ್ವತಿಗೆ ಮಾಸೂರಿಗೆ ೪ ಮೈಲಿ ದೂರದಲ್ಲಿ ಎರಡು ಗುಡ್ಡಗಳ ನಡುವೆ ಈ ಒಡ್ಡನ್ನು ಕಟ್ಟಿದ್ದಾರೆ. ತಳದಲ್ಲಿ ಈ ಒಡ್ಡು ಸು. ೮೦೦ ಅಡಿ ಅಗಲ, ತಲೆಯಲ್ಲಿ ಸು. ೫೦೦ ಅಡಿ ಅಗಲವಿದೆ. ಒಡ್ಡಿನ ಎತ್ತರ ೧೦೦ ಅಡಿ ಮತ್ತು ಉದ್ದ ೧೮೫೦ ಅಡಿ. ವಿಜಯನಗರದ ರಾಜರು ಕಟ್ಟಿದ ಮಣ್ಣಿನ ಒಡ್ಡಿನಲ್ಲಿ ಇದರಷ್ಟು ಎತ್ತರವಾದ ಒಡ್ಡು ಇನ್ನೊಂದಿಲ್ಲ. ಕೆರೆ ತುಂಬಿದಾಗ ೧೦ – ೧೫ ಮೈಲಿ ಉದ್ದವಿರುತ್ತದೆ.

ಬ್ರಿಟಿಷರು ಈ ಭಾಗವನ್ನು ಗೆದ್ದಾಗ ಈ ಕೆರೆಯಿಂದ ಯಾವ ಉಪಯೋಗವೂ ಸಿಗುತ್ತಿರಲಿಲ್ಲ. ಕಾರಣ ಕೆರೆಯ ನೀರು, ತೂಬು ಮತ್ತು ಕಾಲುವೆಗಳಿಗಿಂತ ಕೆಳಮಟ್ಟದಲ್ಲಿತ್ತು. ಕರ್ನಲ್ ಪ್ಲೇಫೇರ್ ಎನ್ನುವ ಬ್ರಿಟಿಷ್ ಎಂಜನಿಯರನು ಬಹಳ ಪ್ರಯಾಸಪಟ್ಟು ನೀರಿನ ಮಟ್ಟಕ್ಕೆ ತೂಬು ಕಾಲುವೆಗಳನ್ನು ನಿರ್ಮಿಸಿ, ಈ ಕೆರೆಯ ಜೀರ್ಣೋದ್ಧಾರ ಮಾಡಿ ಮಾಸೂರಿನವರಿಗೆ ಮಹದುಪಕಾರ ಮಾಡಿದನು.

ಇಷ್ಟು ಎತ್ತರದ ಮಣ್ಣಿನ ಒಡ್ಡನ್ನು ಹೇಗೆ ಕಟ್ಟಿದರು ಮತ್ತು ಅದರಲ್ಲಿ ನೀರು ಸೋರದಂತೆ ಹೇಗೆ ನೋಡಿಕೊಂಡರು ಇವು ನಮಗೆ ಆಶ್ಚರ್ಯವನ್ನುಂಟುಮಾಡುತ್ತವೆ. ಅದನ್ನು ಜೀರ್ಣೋದ್ಧಾರ ಮಾಡಿದ ಫ್ಲೇಫೆರನಿಗೂ ಆಶ್ಚರ್ಯವನ್ನುಂಟು ಮಾಡಿರಬೇಕು. ಆಗ ಅವನು ಏನು ಹೇಳಿದನೆಂದರೆ ೧೮೬೬ ರಲ್ಲಿ ಯುರೋಪಿನ ಕೆರೆಗಳಿಗೆ ಮದಗದ ಕೆರೆಯನ್ನು ಹೋಲಿಸಿದರೆ ಯುರೋಪಿನ ಕೆರೆಗಳು ಅತಿ ಚಿಕ್ಕವಾಗಿದ್ದವೆನ್ನುತ್ತಾನೆ. ಅಂದರೆ ಅಂದು ಯುರೋಪಿನವರಿಗೆ ಮದಗದ ಕೆರೆಯಷ್ಟು ದೊಡ್ಡ ಕೆರೆಯನ್ನು ಕಟ್ಟಲು ಬರುತ್ತಿರಲಿಲ್ಲವೆಂದರ್ಥ. ಇದು ವಿಜಯನಗರದವರಿಗೆ ೩೦೦ ವರ್ಷಗಳ ಹಿಂದೆ ಸಾಧ್ಯವಾಗಿತ್ತು. ವಿಜಯನಗರ ಅರಸರ ಸಾಧನೆ ಬಗ್ಗೆ, ವಿದ್ಯಾ ವಿಜಯನಗರ ಹಂಪಿ Heritage Trust ಮತ್ತು ಅಕಾಡೆಮಿ ಕಳೆದ ಫೆಬ್ರವರಿಯಲ್ಲಿ ಒಂದು ವಿಚಾರ ಸಂಕಿರಣ ನಡೆಸಿದವು. ಅದರ ವರದಿ ಪ್ರಕಟಣೆಯ ಸಿದ್ಧತೆಯಲ್ಲಿದೆ.

ನಮ್ಮ ಕೆರೆಗಳ ಬಗೆಗೆ ಬ್ರಿಟಿಷರ ಧೋರಣೆಯನ್ನು ನಾವು ತಿಳಿದುಕೊಳ್ಳಬೇಕು. ಅವರು ಮದಗದಂತಹ ಭಾರೀ ಕೆರೆಗಳನ್ನು ಸಂರಕ್ಷಿಸಿದರು. ಕಾರಣವೇನೆಂದರೆ, ಅವುಗಳಿಂದ ಕಂದಾಯ ಬರುತ್ತಿತ್ತು; ಸಾವಿರಾರು ಸಣ್ಣ ಕೆರೆಗಳನ್ನು ಅಲಕ್ಷಿಸಿದರು. ಕಾರಣ ಇವುಗಳಿಂದ ವರಮಾನವಿರಲಿಲ್ಲ. ಈ ಕೆರೆಗಳನ್ನು ಹಿಂದೆ ಜನರೇ ದುರಸ್ತು ಮಾಡಿಕೊಳ್ಳುತ್ತಿದ್ದರು. ಆದರೆ ಬ್ರಿಟಿಷ್ ಸರ್ಕಾರವು ಹಿಂದಿನ ಸರ್ಕಾರಗಳಿಗಿಂತ ಕಂದಾಯ ಹೆಚ್ಚು ವಸೂಲ್ಮಾಡಿ ಜನರಲ್ಲಿ ಕೆರೆಗಳ ಮೇಲೆ ಖರ್ಚುಮಾಡಲು ಹಣವಿಲ್ಲದ ಹಾಗೆ ಮಾಡಿತು. ಈ ಕೆರೆಗಳನ್ನು ಸರಿಯಾದ ಸ್ಥಿತಿಯಲ್ಲಿಡಲು ಜನರಿಗೆ ಮುಖಂಡತ್ವಬೇಕು. ಈ ಮುಖಂಡತ್ವವನ್ನು ಊರಿನ ಗೌಡರು ಒದಗಿಸುತ್ತಿದ್ದರು. ಬ್ರಿಟಿಷರ ಆಳ್ವಿಕೆಯಲ್ಲಿ ಗೌಡರ ಮಹತ್ವ ಕಡಿಮೆಯಾಯಿತು. ಇದರಿಂದ ಊರಿನಲ್ಲಿಯ ಒಗ್ಗಟ್ಟು ಹೋಯಿತು. ಜೊತೆಗೆ ಹಳ್ಳಿಯವರಲ್ಲಿ ತಮ್ಮ ಎಲ್ಲಾ ಆವಶ್ಯಕತೆಗಳಿಗೂ ಸರ್ಕಾರವನ್ನು ಅವಲಂಬಿಸುವ ಪ್ರವೃತ್ತಿ ಬೆಳೆಯಿತು. ಪ್ರಜಾತಂತ್ರವು ಈ ಪ್ರವೃತ್ತಿಯನ್ನು ಇನ್ನೂ ಹೆಚ್ಚು ಮಾಡಿತು.

ನಮ್ಮ ಕೆರೆಗಳ ಈಗಿನ ದುರಸ್ತಿಗೆ ಇನ್ನೂ ಎರಡು ಕಾರಣಗಳನ್ನು ಹೇಳಬಹುದು. ಒಂದು ಅವುಗಳ ಜಲಾನಯನ ಪ್ರದೇಶ ಕಡಿಮೆಯಾಗಿರುವುದು ಮತ್ತು ಎರಡನೆಯದು ಅವುಗಳ ಸುತ್ತಲೂ ಗಿಡಮರಗಳು ಇಲ್ಲದಿರುವುದು. ಜಲಾನಯನ ಪ್ರದೇಶವೆಂದರೆ ಕೆರೆಗೆ ನೀರು ಬರುವ ಪ್ರದೇಶ. ಈ ಪ್ರದೇಶವು ಸರ್ಕಾರಕ್ಕೆ ಸೇರಿದ್ದೆಂದು ಅದನ್ನು ಜಮೀನು ಇಲ್ಲದ ಬಡವರಿಗೆ ದಾನವಾಗಿ ಕೊಡಲಾಗಿದೆ. ಇನ್ನು ಕೆಲವು ಕಡೆ ಗಟ್ಟುಳ್ಳವರು ಈ ಪ್ರದೇಶವನ್ನು ಅಪಹರಿಸಿ ಉಪಯೋಗಿಸುತ್ತಿದ್ದಾರೆ. ಈ ಕ್ರಮಗಳಿಂದ ಕೆರೆಯಲ್ಲಿ ಜಲಸಂಗ್ರಹ ಕಡಿಮೆಯಾಗಿದೆ. ಹಿಂದೆ ಎಲ್ಲಾ ಕೆರೆಗಳ ಸುತ್ತ ಮುತ್ತ

ಗಿಡಗಳನ್ನು ನೆಟ್ಟಿರುವರು. ಈ ಗಿಡಗಳು ಮಳೆಯ ರಭಸವನ್ನು ತಡೆದು ಕೆರೆಗೆ ನಿಧಾನವಾಗಿ ನೀರು ಸಂಗ್ರಹವಾಗುವ ಹಾಗೆ ಮಾಡುತ್ತಿದ್ದವು ಮತ್ತು ಕೆರೆಯೊಳಗೆ ಹೂಳು ಸೇರುವುದನ್ನು ಕಡಿಮೆ ಮಾಡುತ್ತಿದ್ದವು. ಈಗ ಅವುಗಳಿಲ್ಲ.

ಗಿಡಗಳಿಗೂ ಅಥವಾ ಅರಣ್ಯಗಳಿಗೂ ನೀರಿಗೂ ನಿಕಟ ಸಂಬಂಧವಿದೆ. ಒಬ್ಬ ಪರಿಸರವಾದಿಯ ಪ್ರಕಾರ ಭಾರೀ ಅಣೆ ಕಟ್ಟುಗಳನ್ನು ಕಟ್ಟುವುದಕ್ಕಿಂತ ವಿಪುಲವಾಗಿ ಕಾಡುಗಳನ್ನು ಬೆಳಸುವುದು ಸೂಕ್ತ. ಆಣೆಕಟ್ಟುಗಳ ಕೆಲಸವನ್ನು ಕಾಡುಗಳು ಕಡಿಮೆ ಖರ್ಚಿನಲ್ಲಿ ಮಾಡುತ್ತವೆ. ಜತೆಗೆ ಜಲಜಂತು ಮತ್ತು ಪಕ್ಷಿಗಳ ಸಂರಕ್ಷಣೆ, ಮೀನುಗಾರಿಕೆ ಬೆಳವಣಿಗೆ ಇವೆಲ್ಲಾ ಸಾಧ್ಯವಾಗುತ್ತದೆಂದು ಪರಿಸರವಾದಿಗಳು ಹೇಳುತ್ತಾರೆ. ಇದಲ್ಲದೆ ಅಂತರ್ಜಲವು ಹೆಚ್ಚಾಗುತ್ತದೆ ಎನ್ನುತ್ತಾರೆ.

ನಮ್ಮ ದೃಷ್ಟಿಕೋನ ಅಣೆಕಟ್ಟುಗಳಿಂದ ಅರಣ್ಯಗಳ ಬೆಳವಣಿಗೆ ಕಡೆ ಹೋಗಬೇಕೆಂದು ಇವರು ವಾದಿಸುತ್ತಾರೆ. ಕೆರೆಗಳ ಜೀರ್ಣೋದ್ಧಾರ ವಿಷಯದಲ್ಲಿ ನನ್ನ ಒಂದೆರಡು ಸೂಚನೆಗಳು ಹೀಗಿವೆ :

(೧) ದೊಡ್ಡ ದೊಡ್ಡ ಕೆರೆಗಳನ್ನು ಜೀರ್ಣೋದ್ಧಾರ ಮಾಡಲು ವಿಶ್ವಬ್ಯಾಂಕ್‌ನಿಂದ ನಮ್ಮ ಸರ್ಕಾರದವರು ಸಾಲವನ್ನು ತೆಗೆದುಕೊಂಡಿದ್ದಾರೆ. ಸದ್ಯದ ಪರಿಸ್ಥಿತಿಯಲ್ಲಿ ಇದು ಅನಿವಾರ್ಯ. ಆದರೆ ಈ ಕೆಲಸ ನಡೆದಾಗ ಮೊದಲಿನಿಂದಲೂ ಜಿಲ್ಲಾ ಪಂಚಾಯ್ತಿಗಳಂತಹ ಸ್ಥಳೀಯ ಸಂಸ್ಥೆಗಳ ಸಹಕಾರವನ್ನು ಪಡೆಯಬೇಕು. ಕೆರೆಯ ಜೀರ್ಣೋದ್ಧಾರವಾದ ಮೇಲೆ ಸ್ಥಳೀಯ ಸಂಸ್ಥೆಗಳಿಗೆ ಆ ಕೆರೆಗೆ ಸಂಬಂಧಪಟ್ಟ ಎಲ್ಲಾ ಜವಾಬ್ದಾರಿಯನ್ನು ವಹಿಸಬೇಕು. ಈ ಜವಾಬ್ದಾರಿಯನ್ನು ಸರ್ಕಾರವು ಹೊರಬಾರದು. ಇದನ್ನು ನಮ್ಮ ಕೆರೆಗಳ ಪೂರ್ವೇತಿಹಾಸದಿಂದ ಕಲಿಯಬೇಕು.

(೨) ಸಣ್ಣ ಪುಟ್ಟ ಕೆರೆಗಳನ್ನು ಮತ್ತು ಬಾವಿಗಳನ್ನು ಸ್ಥಳೀಯ ಅಧಿಕಾರಿಗಳು ಪುರ ಪ್ರಮುಖರ ಸಹಕಾರದಿಂದ ದುರಸ್ತು ಮಾಡಿಸಿ ಅವುಗಳ ನಿರ್ವಹಣೆಯನ್ನು ಸ್ಥಳೀಯರಿಗೇ ಬಿಡಬೇಕು. ಈ ದಿಶೆಯಲ್ಲಿ ಏನು ಸಾಧ್ಯ ಎನ್ನುವುದನ್ನು ಒಂದೆರಡು ಉದಾಹರಣೆಗಳಿಂದ ತಿಳಿದುಕೊಳ್ಳಬಹುದು.

(೩) ಹೋದವರ್ಷ ಮಧುಗಿರಿಯಲ್ಲಿ ಸ್ಥಳೀಯ ತಹಶೀಲ್ದಾರರು ಮತ್ತು ಉಪವಿಭಾಗಾಧಿಕಾರಿಗಳು ನಗರ ಪ್ರಮುಖರ ಸಹಕಾರದಿಂದ ಆ ಊರಿನಲ್ಲಿಯ ಒಂದು ಕಲ್ಯಾಣಿಯನ್ನು ಜೀರ್ಣೋದ್ಧಾರಮಾಡಿದರು. ಕಲ್ಯಾಣಿಯ ಸುತ್ತಲೂ ಬಡವರು ಗುಡಿಸಲುಗಳನ್ನು ಹಾಕಿಕೊಂಡಿದ್ದರು. ಅವರನ್ನು ಸ್ಥಳಾಂತರಿಸಿ, ಕಲ್ಯಾಣಿ ಸ್ವಚ್ಛ ಮಾಡಿದ್ದರಿಂದ ಜನರ ಉಪಯೋಗಕ್ಕೆ ಅದು ಯೋಗ್ಯವಾಯಿತು. ಈ ಕಲ್ಯಾಣಿಯು ೫೦ ಅಡಿ ಅಗಲ, ೫೦ ಅಡಿ ಉದ್ದ ಮತ್ತು ೫೦ ಅಡಿ ಆಳವಿದೆ.

ಊರ ಮಧ್ಯ ಇರುವ ಈ ಕಲ್ಯಾಣಿಯು ಮೇಲೆ ಗಿಡಗಂಟಿಗಳು ಬೆಳೆದು ಅದು ನಿರುಪಯೋಗವಾಗಿತ್ತು. ಗುಡಿಸಲುಗಳಿದ್ದುದರಿಂದ ಕೊಳಚೆ ಪ್ರದೇಶವಾಗಿತ್ತು. ಈಗ ಪ್ರವಾಸಿ ತಾಣವಾಗಿದೆ. ಮಧುಗಿರಿಯಲ್ಲಿ ಸಾಧ್ಯವಾದದ್ದು ಅದೇ ತರಹದ ಅಧಿಕಾರಿಗಳ ಮತ್ತು ಜನರ ಸಹಕಾರದಿಂದ ಇತರ ಕಡೆಗಳಲ್ಲಿಯೂ ಸಾಧ್ಯ.

(೪) ಒಬ್ಬ ವ್ಯಕ್ತಿಯಿಂದ ಎಷ್ಟು ಕೆಲಸವಾಗಬಹುದೆಂಬುದನ್ನು ಉಡುಪಿಯಲ್ಲಿ ಶ್ರೀ ಧನ್ಯವಂತ ಪೈ ಎನ್ನುವ ವ್ಯಾಪಾರೀ ಹವ್ಯಾಸಿ ಸಮಾಜಸೇವಕ ತೋರಿಸಿಕೊಟ್ಟಿದ್ದಾರೆ.

ತಮ್ಮೂರಿನ ಜನರು ನೀರಿಗಾಗಿ ಪರದಾಡುವುದನ್ನು ಕಡಿಮೆ ಮಾಡಲಿಕ್ಕೆ ನಿರುಪಯೋಗಿ ಬಾವಿಗಳನ್ನು ಉಪಯೋಗಿಸಲು ಬರುವಹಾಗೆ ಮಾಡುತ್ತಿದ್ದಾರೆ. ಇಂಥ ಬಾವಿಗಳನ್ನು ದುರಸ್ತು ಮಾಡಿದರೆ ದಿನಾ ೫೦೦ ಮನೆಗಳಿಗೆ ನೀರು ಒದಗಿಸಬಹುದೆಂದು ಅಂದಾಜು ಮಾಡಲಾಗಿದೆ. ಈ ಮಹಾಶಯರು ಪ್ರತೀ ಭಾನುವಾರ ಕೆಲವು ಸ್ವಯಂ ಸೇವಕರ ಜತೆಗೆ ಬಾವಿಗಳನ್ನು ಸ್ವಚ್ಛಮಾಡಿ ಅವುಗಳಿಗೆ ಗಡೆಗಳನ್ನು ಕೂಡಿಸಿ ಹಗ್ಗವನ್ನು ಒದಗಿಸುತ್ತಿದ್ದಾರೆ. ಇವರ ಪ್ರಯತ್ನ ಸ್ತುತ್ಯ ಮತ್ತು ಅನುಕರಣೀಯ.

ನೀರಿನ ಸಮಸ್ಯೆ ಭೀಕರವಾಗಿದೆ. ಮೇಲೆ ಹೇಳಿದ ಪರಿಹಾರಕ್ರಮಗಳು ತೀರ ಚಿಕ್ಕವು. ಆದರೂ ಎಲ್ಲಿಂದಲಾದರೂ ಪರಿಹಾರಕ್ರಮವನ್ನು ಶುರುಮಾಡಬೇಕೆಂದು ಈ ನಾಲ್ಕು ಮಾತುಗಳನ್ನು ಹೇಳಿದ್ದೇನೆ.

ಇನ್ನು ಒಂದು ಮಾತು ಉಳಿದಿದೆ. ಹತ್ತು ವರ್ಷ ಕರ್ನಾಟಕ ಇತಿಹಾಸ ಅಕಾಡೆಮಿಯ ಅಧ್ಯಕ್ಷನಾಗಿರುವ ಸುಯೋಗ ನನ್ನದಾಗಿತ್ತು. ಈ ಸಲದಿಂದ ಬೇರೆಯವನ್ನು ಆರಿಸಿ ಎಂದು ಕೇಳಿಕೊಂಡಿದ್ದೇನೆ. ನಾನು ಅಧ್ಯಕ್ಷನೆಂದು ಉತ್ಸವ ಮೂರ್ತಿಯಾಗಿದ್ದೆ. ಕೆಲಸ ಮಾಡುತ್ತಿದ್ದವರು ಉಳಿದ ಪದಾಧಿಕಾರಿಗಳು. ಅವರ ಜತೆಗೆ ಕೆಲಸ ಮಾಡುವುದು ಎಷ್ಟು ಹಿತಕರವಾಗಿತ್ತೆಂದು ಹೇಳುವುದು ಸುಲಭವಲ್ಲ. ಇವರ ಸಂಖ್ಯೆ ಕೈಬೆರಳಿನಲ್ಲಿ ಎಣಿಸುವಷ್ಟು. ಇವರು ಇತಿಹಾಸದ ಉಜ್ವಲ ಪ್ರೇಮಿಗಳು. ಸೇವಾ ಮನೋಭಾವ ಉಳ್ಳವರು. ಈ ಸಂಸ್ಥೆಯನ್ನು ಹುಟ್ಟಿಹಾಕಿ ಬೆಳೆಸುವ ಸಂಕಲ್ಪಮಾಡಿದವರು. ಇವರ ಕೆಲಸ ರಾಜ್ಯದ ಇತರ ಇತಿಹಾಸ ಪ್ರೇಮಿಗಳ ಮತ್ತು ಸಂಶೋಧಕರ ಮೆಚ್ಚಿಗೆಯನ್ನು ಪಡೆದು ಅವರಿಂದ ಇವರಿಗೆ ಪ್ರೋತ್ಸಾಹ ಸಿಕ್ಕಿದೆ. ಇದರಿಂದ ಹತ್ತೇ ಹತ್ತು ವರ್ಷಗಳಲ್ಲಿ ಒಂದು ಅಪರೂಪದ ಸಂಸ್ಥೆ ಸ್ಥಾಪಿತವಾಗಿದೆ. ನನಗೆ ಗೊತ್ತಿರುವ ಮಟ್ಟಿಗೆ ರಾಜ್ಯದಲ್ಲಿ ಇಷ್ಟು ಬೇಗನೆ ಇಷ್ಟು ಭದ್ರವಾದ ತಳಹದಿಯ ಮೇಲೆ ನಿಂತಿರುವ ಸಂಸ್ಥೆ ಇನ್ನೊಂದಿಲ್ಲ. ಇದರಲ್ಲಿಯ ಸ್ವಯಂಸೇವಕರ ನಿಸ್ವಾರ್ಥ ಸೇವೆಗೆ ಒಂದೇ ಒಂದು ಉದಾಹರಣೆಯನ್ನು ಕೊಡುತ್ತೇನೆ.

ಒಬ್ಬರಿಗೆ ನೀವು ಇಂಥ ಊರಿಗೆ ಹೋಗಿ ಬನ್ನಿ. ಹೋಗಿ ಬರುವ ಖರ್ಚನ್ನು ತೆಗೆದುಕೊಳ್ಳಿ ಎಂದರೆ, ಅವರ ಉತ್ತರ ಮರೆಯುವ ಹಾಗಿಲ್ಲ. ಅಲ್ಲಿಗೆ ಹೋಗಿಬರಲು ಆಗುವ ಖರ್ಚನ್ನು ಅಕಾಡೆಮಿಯಿಂದ ಕೇಳುವಷ್ಟು ಬಡವ ನಾನಲ್ಲ. ಇಂಥವರು ಈ ಸಂಸ್ಥೆಯಲ್ಲಿ ಇರುವವರೆಗೂ ಈ ಸಂಸ್ಥೆಯ ಬೆಳವಣಿಗೆಯನ್ನು ಯಾರೂ ತಡೆಯಲಾಗುವುದಿಲ್ಲ.

ಕೆರೆಗಳ ರಕ್ಷಣೆಗೆ ಕರೆ ಕೊಟ್ಟಂತೆ ಐತಿಹಾಸಿಕ ಪರಂಪರೆಯ ರಕ್ಷಣೆಗೂ ಕರೆ ಕೊಡುತ್ತಿದ್ದೇನೆ. ನಮ್ಮ ಪ್ರಾಚೀನ ದೇಗುಲ, ಶಾಸನ, ಕೋಟೆ, ಮಸೀದಿ, ತಾಡೋಲೆ, ಕಾಗದ ಪತ್ರಗಳ ರಕ್ಷಣೆಗೆ ಚಳವಳಿಯನ್ನು ಅಕಾಡೆಮಿ ನಡೆಸಿದೆ. 'ಐತಿಹಾಸಿಕ ಪರಂಪರೆ ಉಳಿಸಿ' ಸಪ್ತಾಹ ಪ್ರತೀವರ್ಷ ಸಾಗುತ್ತಿದೆ. ಅಕಾಡೆಮಿಯ ಸದಸ್ಯರು ಕರ್ನಾಟಕದ ಇತಿಹಾಸದ ಬಗ್ಗೆ ಅಭಿಮಾನ ತಳೆದು ರಾಜ್ಯದ ಎಲ್ಲ ತಾಲೂಕುಗಳಲ್ಲೂ ಜಾಗೃತಿ ನಡೆಸಿದ್ದಾರೆ. ಪಿ.ಯು.ಸಿ. ಇತಿಹಾಸ ವಿದ್ಯಾರ್ಥಿಗಳಿಗೆ ಕರ್ನಾಟಕ ಇತಿಹಾಸ ಪ್ರಶಸ್ತಿ ಪರೀಕ್ಷೆ ನಡೆಸಿ, ರಾಜ್ಯದ ಮೂಲೆ ಮೂಲೆಗಳ ವಿದ್ಯಾರ್ಥಿಗಳಲ್ಲೂ ಅಧ್ಯಾಪಕರಲ್ಲೂ ನಾಡ ಇತಿಹಾಸ, ಪರಂಪರೆಗಳ ಬಗ್ಗೆ ಅಕಾಡೆಮಿಯು ಲವಲವಿಕೆ ಮೂಡಿಸಿದೆ. ಇಂಥ ಹಿನ್ನೆಲೆಯಲ್ಲಿ ಪಿ.ಯು.ಸಿ. ಮಂಡಳಿ ಕರ್ನಾಟಕ ಇತಿಹಾಸವನ್ನು ಪಠ್ಯಕ್ರಮದಿಂದ ತೆಗೆದುಹಾಕಿ ನಾಡಿನ ಇತಿಹಾಸದ ಬಗ್ಗೆ ತರುಣ ಪೀಳಿಗೆಯಲ್ಲಿ ಮೂಡುತ್ತಿರುವ ಅಭಿಮಾನಕ್ಕೆ ಉತ್ಸಾಹಕ್ಕೆ ತಣ್ಣೀರೆರಚಿದೆ ಎಂದು ನಾನು ಇಲ್ಲಿ ಒತ್ತಿ ಹೇಳಬಯಸುತ್ತೇನೆ.* ಕರ್ನಾಟಕ ಇತಿಹಾಸವನ್ನು ಸಮಗ್ರವಾಗಿ ಕಲಿಸದೆ ಅಲ್ಲಿಷ್ಟು ಇಲ್ಲಿಷ್ಟು ಹೇಳಿದರೆ ಉದ್ದೇಶ ಸಾಧನೆಯಾಗದು.

ಮತ್ತೊಮ್ಮೆ ಆತಿಥೇಯರಾದ ಕುಲಪತಿ ಡಾ॥ ಎಸ್. ರಾಮೇಗೌಡರಿಗೂ ಮತ್ತು ಮುರುಘಾಮಠದ ಶ್ರೀ ಶ್ರೀ ಶಿವಯೋಗಿ ಸ್ವಾಮಿಗಳೂ, ಸಮಾರಂಭವಲ್ಲಿ ಭಾಗವಹಿಸಿದ ಮತ್ತು ವಹಿಸುತ್ತಿರುವ ಗಣ್ಯರಿಗೂ ಮತ್ತು ಶ್ರೋತೃಗಳಿಗೂ ನನ್ನ ವಂದನೆಗಳನ್ನು ಸಲ್ಲಿಸಿ ವಿರಮಿಸುತ್ತೇನೆ.

■

* ಅಕಾಡೆಮಿ ಮತ್ತು ಸಾರ್ವಜನಿಕರ ಕೋರಿಕೆಯ ಮೇರೆಗೆ ಪಿ.ಯು.ಸಿ. ಪಠ್ಯಕ್ರಮದಲ್ಲಿ 'ಕರ್ನಾಟಕ ಇತಿಹಾಸ'ವನ್ನು ಈಗ ಸರ್ಕಾರ ಮುಂದುವರಿಸಿದೆ.

೨೭

ಕರ್ನಾಟಕ ಇತಿಹಾಸ ಅಕಾಡೆಮಿ ನಡೆದು ಬಂದ ದಾರಿ

ಕರ್ನಾಟಕ ಇತಿಹಾಸ ಅಕಾಡೆಮಿಯು ೧೪.೧೨.೧೯೮೬ರಲ್ಲಿ ಬೆಂಗಳೂರಿನಲ್ಲಿ ವಿಧ್ಯುಕ್ತವಾಗಿ ಜನ್ಮ ತಾಳಿತು. ಇದಕ್ಕೂ ಮುಂಚೆ, ೨೮.೬.೧೯೮೬ ರಿಂದ ತನ್ನ ಕಾರ್ಯಕ್ರಮಗಳನ್ನು ಆರಂಭಿಸಿತ್ತು. ಡಿಸೆಂಬರ್ ೮, ೯ ಮತ್ತು ೧೦, ೧೯೯೫ ಈ ದಿನಗಳಲ್ಲಿ ಅಕಾಡೆಮಿಯು ದಶಮಾನೋತ್ಸವವನ್ನು ಆಚರಿಸಿತು. ಈ ಹತ್ತು ವರ್ಷಗಳಲ್ಲಿ ಅನೇಕ ಕಾರ್ಯಕ್ರಮಗಳಿಂದ ಅಕಾಡೆಮಿಯು ಕರ್ನಾಟಕ ರಾಜ್ಯಾದ್ಯಂತ ಹೆಸರುವಾಸಿಯಾಗಿದೆ. ಈ ಕಾರ್ಯಕ್ರಮಗಳಲ್ಲಿ ಮುಖ್ಯವಾದುದು ವಾರ್ಷಿಕ ಸಮ್ಮೇಳನ. ಈ ಸಮ್ಮೇಳನಗಳು ಬೆಂಗಳೂರು (೧೯೮೭), ತುಮಕೂರು (೧೯೮೮), ಗದಗ (೧೯೮೯), ದಾವಣಗೆರೆ (೧೯೯೦), ಚಿತ್ರದುರ್ಗ(೧೯೯೧), ರಾಯಚೂರು (೧೯೯೨), ಮೈಸೂರು (೧೯೯೩), ಸೊಂಡೂರು (೧೯೯೪) ಮತ್ತು ಬೆಳಗಾವಿ (೧೯೯೫) ಈ ಊರುಗಳಲ್ಲಿ ನಡೆದವು. ೧೦ನೇ ಸಮ್ಮೇಳನ ಇದೇ ಜೂನ್ ೭, ೮, ೯ ರಂದು ಕರ್ನಾಟಕ ವಿಶ್ವವಿದ್ಯಾಲಯ ಮತ್ತು ಮುರಘಾಮಠಗಳ ಸಂಯುಕ್ತ ಆಶ್ರಯದಲ್ಲಿ ಧಾರವಾಡದಲ್ಲಿ ನಡೆಯಲಿದೆ. ಮೇಲೆ ಹೇಳಿದ ಸಮ್ಮೇಳನಗಳಿಗೆ ಅನುಕ್ರಮವಾಗಿ ಅಧ್ಯಕ್ಷರಾದವರು ಡಾಕ್ಟರುಗಳಾದ ಎಂ. ಚಿದಾನಂದಮೂರ್ತಿ, ಜಿ.ಎಸ್. ಗಾಯಿ, ಎಸ್.ಎಚ್. ರಿತ್ತಿ, ಎಸ್.ಆರ್. ರಾವ್, ಬಾ.ರಾ. ಗೋಪಾಲ್, ಕೆ.ವಿ. ರಮೇಶ್, ಅ. ಸುಂದರ, ಎಂ.ಎಂ. ಕಲ್ಬುರ್ಗಿ ಮತ್ತು ಎ.ವಿ. ನರಸಿಂಹಮೂರ್ತಿ. ಈ ಅಧ್ಯಕ್ಷರ ಭಾಷಣಗಳನ್ನು 'ಐತಿಹಾಸಿಕ ಭಾಷಣಗಳು' ಎನ್ನುವ ಶೀರ್ಷಿಕೆಯಲ್ಲಿ ಬೆಳಗಾವಿಯ ಶ್ರೀ ವ್ಹಿ.ಸಿ. ಮಾಲಗತ್ತಿಯವರು ಪ್ರಕಟಿಸಿದ್ದಾರೆ. ಈ ಪ್ರಕಟಣೆ ನಮ್ಮ ದಶಮಾನೋತ್ಸವದಲ್ಲಿ ಬಿಡುಗಡೆಯಾಯಿತು. ಈ ಪತ್ರಿಕೆಯು ಕರ್ನಾಟಕ ಇತಿಹಾಸ ಸಂಶೋಧಕರಿಗೆ ಕೈಪಿಡಿಯಂತಿದೆ.

ಹಿರಿಯ ವಿದ್ವಾಂಸರ ಜತೆಗೆ, ಕಿರಿಯ ಸಂಶೋಧಕರಿಗೂ ಪ್ರಬಂಧಗಳನ್ನು ಮಂಡಿಸಲು ಅವಕಾಸವನ್ನು ಕೊಡುವುದು ನಮ್ಮ ವಾರ್ಷಿಕ ಸಮ್ಮೇಳನಗಳ ವೈಶಿಷ್ಟ್ಯ. ಸಮ್ಮೇಳನಗಳಲ್ಲಿ ಮಂಡಿಸಿದ ಪ್ರಬಂಧಗಳನ್ನು 'ಇತಿಹಾಸದರ್ಶನ' ವೆಂಬ

ವಾರ್ಷಿಕದಲ್ಲಿ ಪ್ರಕಟಿಸುತ್ತಾ ಬಂದಿದ್ದೇವೆ. ಕನ್ನಡ ಬಾರದಿರುವವರಿಗೂ ತಿಳಿಯಲೆಂದು ಪ್ರಬಂಧಗಳ ಇಂಗ್ಲೀಷ್ ಸಾರಾಂಶಗಳನ್ನು ಪ್ರಕಟಿಸುತ್ತಿದ್ದೇವೆ. ಅಕಾಡೆಮಿಯ ಸಾಧನೆಗಳಲ್ಲಿ 'ಇತಿಹಾಸದರ್ಶನ' ಶಾಶ್ವತವಾಗಿ ಉಳಿಯತಕ್ಕದು. ಕರ್ನಾಟಕ ಇತಿಹಾಸ ಸಂಶೋಧಕರಿಗೆ ಅತ್ಯಾಧುನಿಕ ಆಕರ. ನಮ್ಮ ಲೇಖಕರಲ್ಲಿ ವಿಶ್ವವಿದ್ಯಾಲಯ ಮತ್ತು ಕಾಲೇಜುಗಳಲ್ಲಿಯ ಇತಿಹಾಸ ಪ್ರಾಧ್ಯಾಪಕರು ಮತ್ತು ಸಂಶೋಧನ ವಿದ್ಯಾರ್ಥಿಗಳ ಜತೆಗೆ ಹವ್ಯಾಸಿ ಸಂಶೋಧಕರ ಸಂಖ್ಯೆ ಗಣನೀಯವಾಗಿದೆ.

ವಾರ್ಷಿಕ ಸಮ್ಮೇಳನಗಳಲ್ಲದೆ, ಅಕಾಡೆಮಿಯು ರಾಷ್ಟ್ರೀಯ ಮಟ್ಟದಲ್ಲಿ ಎರಡು ವಿಚಾರ ಸಂಕಿರಣಗಳನ್ನು ನಿಯೋಜಿಸಿದೆ. ಮೊದಲನೆಯದು, ಆದಿಲ್‌ಷಾಹಿಗಳನ್ನು ಕುರಿತದ್ದು. ೧೯೮೮ ಫೆಬ್ರುವರಿ ೧೨-೧೪ರಂದು ಬೆಂಗಳೂರಿನಲ್ಲಿ ನಡೆಯಿತು. ಆದಿಲ್‌ಷಾಹಿಗಳನ್ನು ಕುರಿತು ಸಂಶೋಧನೆ ಮಾಡಿದ ಅಹಮದಾಬಾದಿನ ಡಾ. ಜಿಯಾಉದ್ದೀನ್ ದೇಸಾಯಿ ಮತ್ತು ಪುಣೆಯ ಡಾ. ಗಳಾದ ವಿ.ಆರ್. ಕುಲಕರ್ಣಿ, ಜಿ.ಟಿ. ಕುಲಕರ್ಣಿ ಮತ್ತು ಕರ್ನಾಟಕ ವಿಶ್ವವಿದ್ಯಾಲಯ ಭಾಗವಹಿಸಿದ ಈ ವಿಚಾರ ಸಂಕಿರಣ ಸ್ಮರಣೀಯವಾಗಿತ್ತು.

ಎರಡನೆಯ ರಾಷ್ಟ್ರಮಟ್ಟದ ವಿಚಾರ ಸಂಕಿರಣ ಇದೇ ಫೆಬ್ರವರಿ ೮, ೯, ೧೦ ವಿಜಯನಗರ ಸಾಮ್ರಾಜ್ಯವನ್ನು ಕುರಿತು ಹಂಪಿಯಲ್ಲಿ ಜರುಗಿತು. ಅಕಾಡೆಮಿಯ ಜತೆಗೆ ಆನೆಗೊಂದಿಯ ವಿದ್ಯಾ ವಿಜಯನಗರ ಹಂ. ಮೆ ರೆಕಿತೇಜ್ ಮತ್ತು ಇತರ ಹಂಪಿ ಹೊಸಪೇಟೆಯ ಸಂಸ್ಥೆಗಳು ಸೇರಿದ್ದವು. ಈ ವಿಚಾರ ಸಂಕಿರಣದಲ್ಲಿ ೮೦ ಪ್ರಬಂಧಗಳನ್ನು ಮಂಡಿಸಲಾಯಿತು. ಪುಣೆ, ಅನಂತಪುರ, ನೆಲ್ಲೂರು, ಮದ್ರಾಸು ಮತ್ತು ತಿರುಚಿಲ್ ಪಟ್ಟಣಗಳಿಂದ ಬಂದ ವಿದ್ವಾಂಸರು ಮತ್ತು ಕರ್ನಾಟಕದ ವಿದ್ವಾಂಸರು ಭಾಗವಹಿಸಿದರು. ೧೯೭೦ರಲ್ಲಿ ನಡೆದ ವಿಜಯನಗರ ವಿಚಾರ ಸಂಕಿರಣವಾದ ಮೇಲೆ ಇದೇ ಹೆಸರಿನ ಬಹುದೊಡ್ಡ ಸಮ್ಮೇಳನವಿದು. ಪ್ರಬಂಧಗಳನ್ನು ಪ್ರಕಟಣೆಗೆ ಸಿದ್ಧಗೊಳಿಸುವ ಕಾರ್ಯಕ್ರಮ ನಡೆದಿದೆ. ಹೊಸಪೇಟೆಯ ಶ್ರೀ ಅಚ್ಯುತ ದೇವರಾಯ ಮತ್ತು ಅವರು ಸ್ಥಾಪಿಸಿದ ಹೆರಿಟೇಜ್ ಸಂಸ್ಥೆ ಮತ್ತು ಹೊಸಪೇಟೆ ಹಂಪಿಯ ಸಂಸ್ಥೆಗಳು, ನಾಗರಿಕರು ಮತ್ತು ಸರ್ಕಾರಿ ಅಧಿಕಾರಿಗಳು ಈ ವಿಚಾರ ಸಂಕಿರಣವನ್ನು ಯಶಸ್ವಿಯಾಗಿ ನಡೆಸಿದ್ದು ಇತರರಿಗೆ ಮೇಲ್ಪಂಕ್ತಿಯಾಗಿದೆ.

ದಶಮಾನೋತ್ಸವ ಸಂದರ್ಭದಲ್ಲಿ, (ಫೆಬ್ರುವರಿ ೮.೧೦.೧೯೯೫) ಯುವ ಸಂಶೋಧಕರಿಗೆ ಸಹಾಯವಾಗಲೆಂದು, ಪ್ರಾಗ್ ಇತಿಹಾಸ, ಶಾಸನ ಶಾಸ್ತ್ರ, ನಾಣ್ಯಶಾಸ್ತ್ರ, ಕಲೆ, ಸಾಹಿತ್ಯ, ಹಸ್ತಪ್ರತಿಗಳು, ಪತ್ರಾಗಾರ ಇತಿಹಾಸ ರಚನೆಯಲ್ಲಿ ಇವುಗಳ ಪಾತ್ರವನ್ನು ಕುರಿತು ಒಂದು ವಿಚಾರ ಸಂಕಿರಣವನ್ನು ಅಕಾಡೆಮಿಯು ವ್ಯವಸ್ಥೆ ಮಾಡಿತ್ತು. ಇದರಲ್ಲಿ ಭಾಗವಹಿಸಿದ ವಿದ್ವಾಂಸರ ಭಾಷಣಗಳು ಹೊಸ

ಸಂಶೋಧಕರಿಗೆ ಅತ್ಯಂತ ಉಪಯುಕ್ತ. ಅವುಗಳನ್ನು ಸಂಶೋಧಕರಿಗೆ ಲಭ್ಯವಾಗುವ ಏರ್ಪಾಡು ಇಷ್ಟರಲ್ಲಿಯೇ ಆಗುವದಿದೆ.

ಇದುವರೆಗೂ ಸಂಶೋಧಕ ಪ್ರಾಧ್ಯಾಪಕರ ಸಲುವಾಗಿ ಅಕಾಡೆಮಿ ಕೈಕೊಂಡ ಕಾರ್ಯದ ವಿವರಗಳನ್ನು ಹೇಳಿದ್ದೇನೆ. ಇನ್ನು – ಕಾಲೇಜು ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರ ಸಲುವಾಗಿ ನೆರವೇರಿಸುವ ಕಾರ್ಯಕ್ರಮಗಳ ಬಗ್ಗೆ ಒಂದೆರಡು ಮಾತು ಅವಶ್ಯ. ಎರಡನೆಯ ಪಿ.ಯು.ಸಿ. ಇತಿಹಾಸ ವಿದ್ಯಾರ್ಥಿಗಳ ಸಲುವಾಗಿ ಪ್ರತಿವರ್ಷವೂ ಅವರ ವಾರ್ಷಿಕ ಪರೀಕ್ಷೆಗೆ ಮುನ್ನ ಕರ್ನಾಟಕ ಇತಿಹಾಸವನ್ನು ಕುರಿತು ಒಂದು ಪರೀಕ್ಷೆಯನ್ನು ನಡೆಸುತ್ತಾ ಬಂದಿದ್ದೇವೆ. ರಾಜ್ಯದ ವಿವಿಧ ಭಾಗಗಳ ವಿದ್ಯಾರ್ಥಿಗಳಿಗೆ ಅನುಕೂಲವಾಗಲೆಂದು ಬೆಂಗಳೂರು, ಮೈಸೂರು, ಧಾರವಾಡ, ಗುಲ್ಬರ್ಗಾ ಮತ್ತು ಮಂಗಳೂರುಗಳನ್ನು ಪರೀಕ್ಷಾ ಕೇಂದ್ರಗಳನ್ನಾಗಿ ಮಾಡಿದ್ದೇವೆ. ಈ ಪರೀಕ್ಷೆಗಳಲ್ಲಿ ಭಾಗವಹಿಸುವ ವಿದ್ಯಾರ್ಥಿಗಳ ಸಂಖ್ಯೆ ೪೦೦೦ ರಿಂದ ೫೦೦೦ ಇದೆ. ಮೇಲಿನ ಶ್ರೇಯಾಂಕಗಳನ್ನು ಗಳಿಸಿದ ವಿದ್ಯಾರ್ಥಿಗಳಿಗೆ ಬಹುಮಾನಗಳನ್ನು ಕೊಡುತ್ತಿದ್ದೇವೆ.

ಸಾರ್ವಜನಿಕರಲ್ಲಿ ಐತಿಹಾಸಿಕ ಪ್ರಜ್ಞೆಯನ್ನು ಮೂಡಿಸಿ ಬೆಳೆಸುವ ಸಲುವಾಗಿ ಪ್ರತಿವರ್ಷವೂ 'ಐತಿಹಾಸಿಕ ಪರಂಪರೆ ಉಳಿಸಿ' ಸಪ್ತಾಹವನ್ನು ಆಚರಿಸುತ್ತಿದ್ದೇವೆ. ಸಾರ್ವಜನಿಕರು ತಮ್ಮಲ್ಲಿರುವ ಹಸ್ತಪ್ರತಿಗಳು, ನಾಣ್ಯ, ಶಿಲ್ಪ ಇತ್ಯಾದಿ ಆಕರ ಸಾಮಗ್ರಿಗಳನ್ನು ತಜ್ಞರ ಅವಗಾಹನೆಗೆ ತರಬೇಕೆನ್ನುವುದರ ಜತೆಗೆ, ತಮ್ಮ ಊರಿನಲ್ಲಿರುವ ದೇವಾಲಯ ಮತ್ತು ಇತರ ಪುರಾತನ ಧಾರ್ಮಿಕ ಕಟ್ಟಡಗಳು, ಕೆರೆ, ಮನೆ, ಅರಮನೆ, ಕೋಟೆ ಇತ್ಯಾದಿ ಸ್ಮಾರಕಗಳ ರಕ್ಷಣೆಯಲ್ಲಿ ಭಾಗವಹಿಸಬೇಕೆನ್ನುವುದು ಈ ಸಪ್ತಾಹದ ಉದ್ದೇಶ. ಈ ಕಾರ್ಯಕ್ರಮಗಳನ್ನು ನೆರವೇರಿಸಲು ಸಹಾಯವಾಗುವ ಹಾಗೆ ಭಿತ್ತಿಪತ್ರಗಳನ್ನು ಸಿದ್ಧಗೊಳಿಸುತ್ತೇವೆ. ಈ ಪತ್ರಗಳನ್ನು ಒಂದು ದೊಡ್ಡಕಾರ್ಯಕ್ರಮದಲ್ಲಿ ಮೊದಲು ಬೆಂಗಳೂರಿನಲ್ಲಿ ಬಿಡುಗಡೆ ಮಾಡಿ, ನಂತರ ನಮ್ಮ ಸದಸ್ಯರಿಗೆ ಕಳಿಸಿಕೊಡುತ್ತೇವೆ. ಪುರಾತನ ಸ್ಮಾರಕಗಳ ರಕ್ಷಣೆ ಮುಖ್ಯವಾಗಿ ರಾಜ್ಯದ ಪುರಾತತ್ವ ಇಲಾಖೆಯ ಜವಾಬ್ದಾರಿ. ಅವರ ಕೆಲಸದಲ್ಲಿ ಅಕಾಡೆಮಿಯು ನೆರವಾಗುತ್ತಿದೆ. ಇದನ್ನು ಮನಗಂಡು ಪುರಾತತ್ವ ಇಲಾಖೆಯು ಅಕಾಡೆಮಿಗೆ ಪ್ರತಿವರ್ಷ ಧನಸಹಾಯ ಮಾಡುತ್ತದೆ. ಎಲ್ಲೆಲ್ಲಿ ನಮ್ಮ ಸದಸ್ಯರು ಈ ಕೆಲಸದಲ್ಲಿ ನೆರವಾಗುತ್ತಾರೊ ಅವರಿಗೆ ನಾವು ಧನಸಹಾಯ ಮಾಡುತ್ತೇವೆ. ನಮ್ಮ ಸದಸ್ಯರು ರಾಜ್ಯದ ಮೂಲೆ ಮೂಲೆಗಳಲ್ಲಿ ಅತ್ಯಂತ ಉತ್ಸಾಹದಿಂದ ಈ ಕಾರ್ಯಕ್ರಮ ನೆರವೇರಿಸುತ್ತಿರುವುದು ಒಂದು ಶುಭಸಂಕೇತ.

ಬೇರೆ ಬೇರೆ ಜಿಲ್ಲೆಗಳಲ್ಲಿ ನಮ್ಮ ಅಕಾಡೆಮಿಯ ಶಾಖೆಗಳನ್ನು ಸ್ಥಾಪಿಸುವುದು

ನಮ್ಮ ಮುಂದಿನ ಕಾರ್ಯಕ್ರಮ. ಈಗಾಗಲೆ, ಬೆಂಗಳೂರು ನಗರ, ಮೈಸೂರು, ಧಾರವಾಡ, ಶಿವಮೊಗ್ಗ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಈ ಶಾಖೆಗಳು ಕೆಲಸ ಮಾಡುತ್ತಿವೆ. ಇತರ ಜಿಲ್ಲೆಯವರು ಮುಂದೆ ಬಂದರೆ ಅಲ್ಲಿ ಶಾಖೆಗಳನ್ನು ಸ್ಥಾಪಿಸುವ ಆಲೋಚನೆ ಇದೆ. ಇಂಥಾ ಕಲ್ಪನೆಗಳೆಲ್ಲಾ ಡಾ. ಸೂರ್ಯನಾಥ ಕಾಮತರದು. ಈ ಅಕಾಡೆಮಿಯ ಸ್ಥಾಪನೆ ಮತ್ತು ಅದು ಹಮ್ಮಿಕೊಂಡಿರುವ ಕಾರ್ಯಕ್ರಮಗಳು ಇವೆಲ್ಲವೂ ಅವರ ಆಲೋಚನೆಗಳು. ಇವುಗಳನ್ನು ಆಲೋಚಿಸುವುದಲ್ಲದೆ ಅವುಗಳನ್ನು ಕಾರ್ಯಗತಮಾಡುವುದಕ್ಕೆ ತಮ್ಮ ಸ್ನೇಹಿತರ ಸ್ವಯಂ ಸೇವಾ ಗುಂಪನ್ನು ಸಿದ್ಧಪಡಿಸಿದ್ದಾರೆ. ಈ ಗುಂಪಿನವರ ನಿಸ್ವಾರ್ಥಸೇವೆ ಮತ್ತು ಉದಾತ್ತ ಧ್ಯೇಯಗಳನ್ನು ಗುರುತಿಸಿ ರಾಜ್ಯದ ಬೇರೆ ಬೇರೆ ಭಾಗದ ವಿದ್ವಾಂಸರು ಮತ್ತು ಸೇವಾ ಸಂಸ್ಥೆಗಳು ಅಕಾಡೆಮಿಗೆ ನೆರವಾಗುತ್ತಿದ್ದಾರೆ. ಅಂಥ ಸಂಸ್ಥೆಗಳಲ್ಲಿ ವೀರಶೈವ ಮಠಗಳ ಸ್ವಾಮಿಗಳ ನೆರವನ್ನು ಸ್ಮರಿಸಲೇಬೇಕು. ಅವರು ಉದಾರ ಹಸ್ತದಿಂದ ಮತ್ತು ಉದಾರ ಮನಸ್ಸಿನಿಂದ ಅಕಾಡೆಮಿಗಳಿಗೆ ಸಹಾಯ-ಸ್ಫೂರ್ತಿಗಳನ್ನು ಕೊಟ್ಟಿದ್ದಾರೆ. ಇಂತಹ ಮಹಾಸ್ವಾಮಿಗಳ ಪಟ್ಟಿಯಲ್ಲಿ ಬರುವ ಸಮ್ಮೇಳನದ ಆತಿಥೇಯವಾದ ಧಾರವಾಡದ ಮುರುಘಾಮಠದ ಮಹಾಸ್ವಾಮಿಗಳು ಸೇರಿದ್ದಾರೆ. ಇನ್ನೊಬ್ಬ ಅತಿಥೇಯರಾದ ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಎಸ್. ರಾಮೇಗೌಡರ ಔದಾರ್ಯವನ್ನು ಅಕಾಡೆಮಿ ನೆನಸುತ್ತದೆ. ಹತ್ತು ವರ್ಷಗಳಲ್ಲಿ ನಮ್ಮ ಸಮ್ಮೇಳನವನ್ನು ಆಹ್ವಾನಿಸಿದ ಮೊದಲನೆಯ ವಿಶ್ವವಿದ್ಯಾಲಯ ಕರ್ನಾಟಕ ವಿಶ್ವವಿದ್ಯಾಲಯ.

■

೨೮

ಕರ್ನಲ್ ಮಾರ್ಕ್ ವಿಲ್ಕ್ಸ್- ಆಧುನಿಕ ಕರ್ನಾಟಕದ ಪ್ರಥಮ ಇತಿಹಾಸಕಾರ

ಕರ್ನಲ್ ಮಾರ್ಕ್ ವಿಲ್ಕ್ಸ್ ಬರೆದ History of Mysore ಪುಸ್ತಕವನ್ನು ಸರ್ ಜೇಮ್ಸ್ ಮ್ಯಾಕಿಂಟಾಷ್ ಎನ್ನುವ ವಿಮರ್ಶಕನು ಭಾರತೀಯ ಇತಿಹಾಸದ ಮೇಲೆ ಆಧಾರಗಳನ್ನು ಅನುಮಾನಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಬರೆದ ಮೊದಲ ಗ್ರಂಥವೆಂದು ಹೇಳಿದ್ದಾನೆ. ಈ ಪುಸ್ತಕವನ್ನು ಬರೆಯುವುದಕ್ಕೆ ಅವನಿಗೆ ಎರಡು ತರಹ ಅನುಕೂಲಗಳಿದ್ದವು. ಒಂದನೆಯದು ಅವನು ವರ್ಣಿಸಿದಂಥ ಮೈಸೂರು ಮತ್ತು ನಾಲ್ಕನೆಯ ಆಂಗ್ಲೋ-ಮೈಸೂರು ಯುದ್ಧಗಳಲ್ಲಿ ಭಾಗವಹಿಸಿದವರ ನಿಕಟ ಪರಿಚಯ ಮತ್ತು ಶ್ರೀರಂಗಪಟ್ಟಣದ ಕೊನೆಯ ಮುತ್ತಿಗೆಯಲ್ಲಿ ಅವನೇ ಭಾಗವಹಿಸಿದ್ದು.

ವಿಲ್ಕ್ಸ್‌ನಿಗೆ ಇದ್ದ ಎರಡನೆಯ ಅನುಕೂಲ-ಅಮೂಲ್ಯ ಆಧಾರಗಳು ಅವನಿಗೆ ಲಭ್ಯವಿದ್ದವು. ಇವು ಯಾವವೆಂದರೆ (೧) ಅವನ ಸ್ನೇಹಿತ ಪೂರ್ಣಯ್ಯನು ತನ್ನ ಕೆಳಗಿನ ಅಧಿಕಾರಿ ಬಚ್ಚೆರಾಯನಿಗೆ ಹೇಳಿ ಅವನ ಸಹಾಯದಿಂದ ಯಾರ ಯಾರ ಹತ್ತಿರ ತಮ್ಮ ಮನೆತನದ ದಾಖಲೆಗಳಿರುತ್ತವೆಯೊ ಅಂಥವರಿಗೆ ವರದಿಗಳನ್ನು ಬರೆದುಕೊಡಲು ಹೇಳಿದನು. ಆ ವರದಿಗಳನ್ನು ಆಧರಿಸಿ ಒಂದು ಚಾರಿತ್ರಿಕ ದಾಖಲೆಯನ್ನು ನಿರ್ಮಿಸಲಾಯಿತು. (೨) ಚಿಕ್ಕದೇವರಾಯನ ಕಾಲದಲ್ಲಿ ಸಂಗ್ರಹಿಸಿದ ಶಾಸನಗಳನ್ನು ಮತ್ತು ಹಸ್ತಪ್ರತಿಗಳನ್ನು ಆಧರಿಸಿ ಬರೆದ ಕನ್ನಡ ಕಡತದ ಪರ್ಷಿಯನ್ ಭಾಷಾಂತರದ ಹಸ್ತಪ್ರತಿ. (೩) ಮೆಕಿಂಜಿಯು ಸಂಗ್ರಹಿಸಿದ ೧೭೦೦ ಶಾಸನಗಳ ಪ್ರತಿಗಳು ಮತ್ತು ೬೦೦ ಹಸ್ತಪ್ರತಿಗಳು. (೪) ಮದ್ರಾಸಿನಲ್ಲಿ ಫೋರ್ಟ್ ಸೇಂಟ್‌ಜಾರ್ಜಿನಲ್ಲಿದ್ದ ಸರ್ಕಾರೀ ಕಾಗದ ಪತ್ರಗಳು, ಅವನು ಉಪಯೋಗಿಸಿದ ಆಧಾರಗಳಲ್ಲಿ ಪ್ರಮುಖವಾದವು. ಇನ್ನು ಈ ಗ್ರಂಥದಿಂದ ನಮಗೆ ಆಗುವ ಉಪಯೋಗಗಳನ್ನು ನೋಡೋಣ.

ಸುಮಾರು ೧೮೦೦ ರಲ್ಲಿ ಕನ್ನಡ ಮಾತನಾಡುವ ಪ್ರದೇಶಗಳ ಅಥವಾ

ಕರ್ನಾಟಕದ ಮೇರೆಗಳನ್ನು ಗುರುತಿಸಿರುವುದು ಈ ಗ್ರಂಥದಿಂದ ಕನ್ನಡಿಗರಿಗೆ ಆಗುವ ಮಹದುಪಕಾರ ಬೀದರ್ ಊರಿನಿಂದ ಆರಂಭಿಸಿ ನೈರುತ್ಯ ದಿಕ್ಕಿನಲ್ಲಿ ನಡೆದು ಆದವಾನಿಗೆ ಬಂದು ಅಲ್ಲಿಂದ ಗುತ್ತಿಯ ಪಶ್ಚಿಮಕ್ಕೆ ಮತ್ತು ಅನಂತಪುರದ ಹತ್ತಿರ ಬಂದು ನಂದೀದುರ್ಗದ ಮಾರ್ಗವಾಗಿ ಪೂರ್ವಘಟ್ಟವನ್ನು ತಲುಪಬೇಕು. ಅಲ್ಲಿಂದ ದಕ್ಷಿಣಕ್ಕೆ ತಿರುಗಿ ಕೊಯಮತ್ತೂರು ಜಿಲ್ಲೆಯಲ್ಲಿರುವ ಗಜ್ಜಲಹಟ್ಟಿಯ ಮಾರ್ಗವಾಗಿ ಪಶ್ಚಿಮಘಟ್ಟಗಳ ಒಂದು ಕಣಿವೆಯಲ್ಲಿರುವ ಇರುವ ಕೊಯಮತ್ತೂರು, ಪೊಲ್ಲಾಚಿ ಮತ್ತು ಪಾಲ್ಘಾಟ್‌ಗಳ ಮಾರ್ಗವಾಗಿ ಬಂದು ವಾಯವ್ಯ ದಿಕ್ಕಿನಲ್ಲಿ ಪಶ್ಚಿಮ ಘಟ್ಟಗಳಗುಂಟಾ ಉತ್ತರದಲ್ಲಿರುವ ಕೃಷ್ಣಾನದಿಯ ಉಗಮದವರೆಗೂ ಬರಬೇಕು. ಅಲ್ಲಿಂದ ಮೊದಲು ಪೂರ್ವಕ್ಕೂ ನಂತರ ನೈರುತ್ಯದ ದಿಕ್ಕಿನಲ್ಲೂ ಬಂದು ಬೀದರನ್ನು ಸೇರಬೇಕು– ಇವು ಕರ್ನಾಟಕ ಗಡಿಗಳು. ಕೇರಳದ ನೀಲೇಶ್ವರದಿಂದ ಉತ್ತರದ ಸದಾಶಿವಗಡದವರೆಗೂ ಇರುವ ತೀರ ಪ್ರದೇಶವನ್ನು ವಿಲ್ಕ್ಸ್ ತುಳುವ ದೇಶವೆನ್ನುತ್ತಾನೆ. ಅಲ್ಲಿಂದ ಉತ್ತರ ಪ್ರದೇಶ ಮಹಾರಾಷ್ಟ್ರವೆಂದು ಅವನ ಹೇಳಿಕೆ.

ಮೈಸೂರು ರೈತರ ಬಗೆಗೆ ವಿಲ್ಕ್ಸ್‌ನಿಗೆ ಬಹಳ ಕಳಕಳಿ ಇತ್ತು. ಭೂಮಿಯ ಒಡೆಯ ಯಾರು ಭೂಮಾಲೀಕನೊ ಅಥವಾ ಆ ದೇಶದ ರಾಜನೊ – ಈ ವಾದವನ್ನು ವಿಲ್ಕ್ಸ್‌ನು ಆಧುನಿಕ ಯುಗದಲ್ಲಿ ಮೊದಲ ಅಭ್ಯಸಿಸಿದನು. ಎರಡೂ ಪಕ್ಷಗಳ ವಾದಗಳನ್ನು ಚೆನ್ನಾಗಿ ಮಂಡಿಸಿರುವುದು ಈ ಗ್ರಂಥದ ವೈಶಿಷ್ಟ್ಯ. ಅವನು ಆರಂಭಿಸಿದ ಈ ಚರ್ಚೆಯು ಇಂದಿಗೂ ನಡೆದಿದೆ.

ಭಾರತೀಯ ರೈತನ ಬಗೆಗೆ ವಿಲ್ಕ್ಸ್‌ನ ಅಭಿಪ್ರಾಯವು ಖಚಿತವಾಗಿತ್ತು. ಕೆಲವರು ರೈತರು ದಡ್ಡರು, ಸೋಮಾರಿಗಳೆಂದು ಹೇಳುತ್ತಿದ್ದರು. ವಿಲ್ಕ್ಸ್‌ನ ಮತದಲ್ಲಿ ಇಂಥ ಅಭಿಪ್ರಾಯಗಳು ಸರಿಯಾದದ್ದಲ್ಲ. ಅವರು ಬುದ್ಧಿವಂತರು.. "ಅವರ ಜತೆಗೆ ನಾನು ಅನೇಕ ಸಲ ಅವರು ಕೈಕೊಳ್ಳತ್ತಿದ್ದ ಕಾರ್ಯಕ್ರಮಗಳ ಉದ್ದೇಶವೇನೆಂದು ವಿಚಾರಿಸಿದಾಗ ಅವರ ಉತ್ತರಗಳು ಅತ್ಯಂತ ಸಮಂಜಸವಾಗಿರುತ್ತವೆ" ಎಂದು ಹೇಳಿದ್ದಾನೆ.

ಬಾರಾ ಬಲೂತಿ ಪದ್ಧತಿಯ ಅವನ ವರ್ಣನೆಯನ್ನು ಮುಂದೆ ಬರೆದ ವಿದ್ವಾಂಸರೆಲ್ಲಾ ಪುನರುಚ್ಚರಿಸಿದ್ದಾರೆ. ನೀರಗಂಟ ಇತ್ಯಾದಿ ಇವರ ಕೆಲಸಗಳ ಬಗ್ಗೆ ಇವನ ವರ್ಣನೆ ನಮಗೆ ಅವರ ಅಂದರೆ ಬಾರಬಲೂತಿ ಅಥವಾ ಆಯಗಾರರ ಕೆಲಸಗಳ ಕೈಪಿಡಿ ಎಂದು ಹೇಳಬಹುದು.

ಅದೇ ರೀತಿಯಾಗಿ ಬ್ರಿಟಿಷರು ಬರುವ ಮುಂಚೆ ನಮ್ಮ ಗ್ರಾಮಗಳ

ಸ್ವಾಯತ್ತವಾಗಿದ್ದವೆನ್ನುವ ಅವನ ಹೇಳಿಕೆಯು ಪ್ರಸಿದ್ಧ. ಅವನ ಪ್ರಕಾರ, ಯುದ್ಧ, ಜಯ, ಅಪಜಯ, ಕ್ರಾಂತಿ, ಇವು ಯಾವುವೂ ಗ್ರಾಮಗಳ ಆಂತರಿಕ ವ್ಯವಸ್ಥೆಯನ್ನು ಬದಲಾಯಿಸುತ್ತಿರಲಿಲ್ಲ ಹೊಸದಾಗಿ ಬಂದ ರಾಜ ಅಥವಾ ಅವನ ಪ್ರತಿನಿಧಿ ಗ್ರಾಮಗಳಲ್ಲಿ ಹಿಂದೆ ಇದ್ದ ಅಧಿಕಾರಿಗಳನ್ನು ಆ ಗ್ರಾಮದ ಮೇರೆಗಳನ್ನು ಅದರ ಒಳಾಡಳಿತವನ್ನು ಸ್ವಲ್ಪವೂ ಬದಲಾಯಿಸುತ್ತಿರಲಿಲ್ಲ. ಅವನ ಅಭಿಪ್ರಾಯದಲ್ಲಿ ಆಗ ಭಾರತವು ಇಂಥ ಅನೇಕ ಗಣ್ಯರಾಜ್ಯಗಳನ್ನೊಳಗೊಂಡ ರಾಜ್ಯವಾಗಿತ್ತು.

ವಿಲ್ಕ್ಸ್ ಮತ್ತು ಪೂರ್ಣಯ್ಯ ಬಹಳ ಅನ್ಯೋನ್ಯವಾಗಿದ್ದರು. ಪೂರ್ಣಯ್ಯನ ಸಹಾಯದಿಂದ ವಿಲ್ಕ್ಸ್‌ನು ಈ ಗ್ರಂಥವನ್ನು ಬರೆಯುವುದು ಸುಗಮವಾಯಿತು. ಇದಕ್ಕೆ ಒಂದು ಉದಾಹರಣೆಯನ್ನು ಕೊಡಬಹುದು. ಹೈದರನು ತನ್ನ ಅಂತರಂಗದಲ್ಲಿರುವುದನ್ನು ಯಾರಿಗೂ ತಿಳಿಸುತ್ತಿರಲಿಲ್ಲ. ಮೊದಲನೆ ಆಂಗ್ಲೆ ಮೈಸೂರು ಯುದ್ಧ ಮುಗಿದ ಮೇಲೆ ಅವನಿಗೆ ಅದರಲ್ಲಿ ಜಯವಾಗಿದ್ದರೂ ಇಂಗ್ಲೀಷಿನವರ ಮೇಲೆ ಯುದ್ಧ ಮಾಡಿದ್ದು ತಪ್ಪೆಂದು ಅವನ ಅಂತರಂಗ ಅವನಿಗೆ ಹೇಳಿತು. ಅದನ್ನು ಅವನು ಪೂರ್ಣಯ್ಯನಿಗೆ ಮಾತ್ರ ಹೇಳಿದನು. "ನನಗೂ ಇಂಗ್ಲಿಷಿನವರಿಗೂ ಅಷ್ಟು ವ್ಯತ್ಯಾಸಗಳಿಲ್ಲ, ವಿನಾಕಾರಣ ಅವರ ಮೇಲೆ ಯುದ್ಧ ಮಾಡಿದೆ. ಹೀಗೆ ಮಾಡಿದ್ದು ಶುದ್ಧತಪ್ಪು ಎಂಥ ದೊಡ್ಡ ತಪ್ಪು ಎಂದರೆ ೧ ಕಾಸಿನ ಲೇಂದಿಗೆ ೧ ಲಕ್ಷ ರೂಪಾಯಿ ಕೊಟ್ಟು ಕೊಂಡುಕೊಂಡ ಹಾಗೆ ಹೀಗೆ ಮಾಡಿದ್ದಕ್ಕೆ ನಾನು ಮುಂದೆ ಕೆಟ್ಟದ್ದನ್ನು ಅನುಭವಿಸಬೇಕು. ಯಾಕೆಂದರೆ ನಾನು ಅವರ ಕೇಲಗಳನ್ನು ಬ್ರತ್‌ವೇಟರುಗಳನ್ನು ಸೋಲಿಸಬಹುದು. ಆದರೆ ಸಮುದ್ರವನ್ನು ಬಣಗಿಸಲಿಕ್ಕೆ ಆಗುವುದಿಲ್ಲ." ಅವನ ಅಭಿಪ್ರಾಯವೇನಾಗಿತ್ತೆಂದರೆ ಇಂಗ್ಲಿಷಿನವರ ಸಾಮರ್ಥ್ಯವೆಲ್ಲಾ ಅವರು ಸಮುದ್ರದ ಅಧಿಪತಿಗಳಾಗಿದ್ದುದರಿಂದ ಬಂದಿತ್ತು. ಎಷ್ಟೇ ಹೊಸೈನ್ಯಗಳನ್ನು ಸೋಲಿಸಿದರೂ ಸಮುದ್ರದ ಮೇಲಿನಿಂದ ಹೊಸಸೈನ್ಯಗಳನ್ನು ಅವರು ತರಿಸಿಕೊಳ್ಳಬಲ್ಲವರಾಗಿದ್ದರು. ಇಂಥ ತನ್ನ ಆಲೋಚನೆಗಳನ್ನು ಹೈದರ್ ಯಾರಿಗೂ ಹೇಳುತ್ತಿರಲಿಲ್ಲ. ಪೂರ್ಣಯ್ಯನಿಗೆ ಮಾತ್ರ ಹೇಳಿದ ಅವನು ತನ್ನ ಸ್ನೇಹಿತ ವಿಲ್ಕ್ಸ್‌ಗೆ ಹೇಳಿದ.

ಇಷ್ಟೆಲ್ಲ ಆದರೂ ಹೈದರ್ ಪೂರ್ಣಯ್ಯನನ್ನು ಸಂಪೂರ್ಣವಾಗಿ ನಂಬಲಿಲ್ಲ. ಹೈದರನ ಇನ್ನೊಬ್ಬ ಮಂತ್ರಿ ಕೃಷ್ಣರಾವ್ ಇಬ್ಬರೂ ಚಾಣಾಕ್ಷರು. ಹೈದರ್ ಒಬ್ಬರ ಮೇಲೆ ಇನ್ನೊಬ್ಬನು ನಿಗಾ ಇಡುವ ಹಾಗೆ ಮಾಡಿ ಇಬ್ಬರನ್ನು ಹತೋಟಿಯಲ್ಲಿ ಇಟ್ಟುಕೊಂಡ.

ಟೀಪ್ಪುಗೆ ಇಷ್ಟು ಬುದ್ಧಿವಂತಿಕೆ ಇರಲಿಲ್ಲ. ಪೂರ್ಣಯ್ಯನಷ್ಟು ನಿಷ್ಠಾವಂತ ಸೇವಕರು ಅವನಿಗಿರಲಿಲ್ಲ. ಆದರೂ ಅವನನ್ನು ತನ್ನ ಮತಕ್ಕೆ ಸೇರಿಸಿಕೊಳ್ಳಬೇಕೆಂದು

ಇಚ್ಛಿಸಿದನು, ಬೇಡವೆನ್ನುವ ಧೈರ್ಯ ಪೂರ್ಣಯ್ಯನಿಗಿರಲಿಲ್ಲ ಟಿಪ್ಪುವಿನ ತಾಯಿ ಮಧ್ಯೆ ಬರೆದಿದ್ದರೆ ಇತಿಹಾಸವೇ ಬದಲಾಗುತ್ತಿತ್ತು.

ವಿಲ್ಕ್‌ಸ್‌ನ ಬರವಣಿಗೆಯಲ್ಲಿ ಹೈದರನ ಮತ್ತು ಟಿಪ್ಪುವಿನ ಗುಣದೋಷಗಳ ಹೋಲಿಕೆಗೆ ಅತ್ಯದ್ಭುತವಾಗಿದೆ. ನಮ್ಮ ಇತಿಹಾಸದಲ್ಲಿ ಅದಕ್ಕೆ ಬಹಳ ಮೇಲಿನ ಸ್ಥಾನ ಸಿಗುತ್ತದೆ. ಈ ಹೋಲಿಕೆಯ ಕೊನೆಗೆ ವಿಲ್ಕ್‌ಸ್‌ನ ತೀರ್ಮಾನ ಎಲ್ಲರೂ ಮೆಚ್ಚುವಂಥದ್ದು: Hyder was an improving monarch and exhibited few innovations. Tippu was innovating monarch and made no improvements. ಹೈದರ್ ಸುಧಾರಣೆಗಳನ್ನು ಮಾಡಿದ ; ಬದಲಾವಣೆಗಳನ್ನು ಮಾಡಲಿಲ್ಲ. ಟಿಪ್ಪು ಬದಲಾವಣೆಗಳನ್ನು ಮಾಡಿದ, ಸುಧಾರಣೆಗಳನ್ನು ಮಾಡಲಿಲ್ಲ. Hyder was seldom wrong and Tippu seldom right in his estimate of character,- ಇತರರ ಯೋಗ್ಯತೆಯನ್ನು ತಿಳಿದುಕೊಳ್ಳುವುದರಲ್ಲಿ ಹೈದರ್ ಯಾವಾಗಲೂ ತಪ್ಪಲಿಲ್ಲ, ಟಿಪ್ಪು ಎಲ್ಲಾ ಸಂದರ್ಭಗಳಲ್ಲಿಯೂ ತಪ್ಪುತ್ತಿದ್ದ.

ಇವರಿಬ್ಬರ ಬಗೆಗೂ ವಿಲ್ಕ್‌ಸ್‌ನ ಕೊನೆಯ ತೀರ್ಮಾನ ಆಗಿನ ಕಾಲದ ಜನಾಭಿಪ್ರಾಯವೇ ಆಗಿತ್ತು. "ಹೈದರನು ಒಂದು ಸಾಮ್ರಾಜ್ಯವನ್ನು ಕಟ್ಟಲಿಕ್ಕೆ ಹುಟ್ಟಿದ; ಟಿಪ್ಪು ಅದನ್ನು ಕಳೆಯಲಿಕ್ಕೆ ಹುಟ್ಟಿದ."

ಟಿಪ್ಪಣಿ

ವಿಲ್ಕ್‌ಸ್ ಬರೆದ 'History of Mysore' ಇದರ ಪೂರ್ಣ ಹೆಸರು, Historical Sketches of the South of India" in on attempt to trace the "History of Mysore" from the origion of the Hindoo Government of that State, to the extinction of the Mohammedan dynasty in 1799 Founded chiefly on Indian authorities collected by the author while officiating for several years of Political Resident at the Court of Mysore. ಮೂರು ಸಂಪುಟಗಳಲ್ಲಿ ೧೮೧೦ ರಿಂದ ೧೮೧೭ ರೊಳಗೆ ಪ್ರಕಟವಾದ ಈ ಗ್ರಂಥವನ್ನು ಮತ್ತೆ ಹ್ಯಾಮಿಕ್ ಎನ್ನುವವನು ೧೯೩೦ರಲ್ಲಿ ೨ ಸಂಪುಟಗಳಲ್ಲಿ ವಿಸ್ತೃತವಾದ ಟಿಪ್ಪಣಿಗಳೊಂದಿಗೆ ಸಂಪಾದಿಸಿದ ಪುನರ್ ಮುದ್ರಣವನ್ನು ಮೈಸೂರು ಸರ್ಕಾರದವರು ಪ್ರಕಟಿಸಿದ್ದಾರೆ. ಸಂಪಾದಕನು ಪ್ರಸ್ತಾವನೆಯಲ್ಲಿ ವಿಲ್ಕ್‌ಸ್‌ನ ಜೀವನ ಚರಿತ್ರೆಯನ್ನೂ ಮತ್ತು ಗ್ರಂಥದ ಉದ್ದಕ್ಕೂ ಅದರಲ್ಲಿ ಬರುವ ಊರುಗಳ, ಸಂಸ್ಥೆಗಳ, ವ್ಯಕ್ತಿಗಳ ಬಗ್ಗೆ ಉಪಲಬ್ಧವಿರುವ ಮಾಹಿತಿಯನ್ನು ಹಿನ್ನೆಲೆಯಾಗಿ ಟಿಪ್ಪಣಿಗಳಲ್ಲಿ ಕೊಟ್ಟಿರುವುದರಿಂದ, ಇದೊಂದು

ದಕ್ಷಿಣ ಭಾರತದ ಇತಿಹಾಸ ವಿದ್ಯಾರ್ಥಿಗಳಿಗೆ ಅತ್ಯಂತ ಉಪಯುಕ್ತವಾದ ಕೈಪಿಡಿಯಾಗಿದೆ. ನಾನು ಈ ಎರಡನೆಯ ಆವೃತ್ತಿಯನ್ನು ಉಪಯೋಗಿಸಿದ್ದೇನೆ.

ವಿಲ್ಕ್ಸ್‌ನ ಇನ್ನೊಂದು ಬರವಣಿಗೆಯು ಆಗಿನ ಕಾಲದ ಮೈಸೂರಿನ ಸ್ಥಿತಿಗಳನ್ನು ಅಂಕಿ ಸಂಖ್ಯೆಗಳ ಸಹಾಯದಿಂದ ವಿವರಿಸುತ್ತದೆ. ಈ ವರದಿಯ ಹೆಸರು A Report on the interior administration, resources and expenditure of the Government of Mysore, under the system Prescribed by the orders of the Governor General in Council, dated 4th September 1799. ಇದನ್ನು ೧೮೦೫ ರಲ್ಲಿ ಬ್ರಿಟಿಷ್ ಸರ್ಕಾರದವರು ಪ್ರಕಟಿಸಿದ್ದಾರೆ. ಭಾರತವನ್ನು ಗೆದ್ದ ಹೊಸದರಲ್ಲಿ ಬ್ರಿಟಿಷ್ ಆಡಳಿತಗಾರನ ಮೊದಮೊದಲ ವರದಿಗಳು ಭಾರತೀಯರ ಬಗೆಗೆ ಸಹಾನುಭೂತಿ ಪರವಾಗಿ ಮತ್ತು ವಿವರವಾಗಿ ಇರುತ್ತಿದ್ದವು. ನಂತರದ ವರದಿಗಳಲ್ಲಿ ಇವೆರಡೂ ಗುಣಗಳು ಕಡಿಮೆಯಾದವು. ವಿಲ್ಕ್ಸ್‌ನ ಬರವಣಿಗೆಯಲ್ಲಿ ಈ ಎರಡೂ ಗುಣಗಳೂ ಇವೆ. ಅವನು ಇಂಗ್ಲೆಂಡಿನ ದಕ್ಷಿಣಕ್ಕಿರುವ ಮ್ಯಾನದ್ವೀಪದವನು. ಅವನ ದಾಖಲೆಗಳು ಆ ದ್ವೀಪದಲ್ಲಿ ಅಥವಾ ಬ್ರಿಟಿಷ್ ಮ್ಯೂಜಿಯಂನಲ್ಲಿ ಅಥವಾ ಇಂಡಿಯಾ ಆಫೀಸ್ ಲೈಬ್ರೆರಿಯಲ್ಲಿ ಇನ್ನೂ ಲಭ್ಯವಿರುವ ಸಾಧ್ಯತೆ ಇದೆ.

■

೨೯

ಇತಿಹಾಸಕಾರ ಡಾಕ್ಟರ್ ಜದುನಾಥ್ ಸರ್ಕಾರ್

ಆಧುನಿಕ ಭಾರತೀಯ ಇತಿಹಾಸಕಾರರಲ್ಲಿ ಅದ್ವಿತೀಯರೆಂದು ಪ್ರಸಿದ್ಧರಾದ ಡಾ. ಜದುನಾಥ್ ಸರ್ಕಾರರು ೧೮೭೦ ಡಿಸೆಂಬರ್ ೧೦ನೇ ತಾರೀಖು ಜನ್ಮ ತಾಳಿದರು. ಜದುನಾಥರು ಉತ್ತರ ಬಂಗಾಲದ ರಾಜಷಾಹೀ ಜಮೀನ್ದಾರ್ ರಾಜಕುಮಾರ ಸರ್ಕಾರರ ಮೂರನೆಯ ಮಕ್ಕಳು. ತಂದೆಗೂ ಇತಿಹಾಸದಲ್ಲಿ ಆಸ್ಥೆ. ಜದುನಾಥರಿಗೆ ಈ ವಿಷಯದಲ್ಲಿ ಆಸ್ಥೆ ಅವರ ತಂದೆಯಿಂದ ಬಂತು. ಜದುನಾಥರ ಶಿಕ್ಷಣ ಇಂಟರ್‌ಮಿಡಿಯಟ್‌ವರೆಗೆ ರಾಜಷಾಹಿಯಲ್ಲಾಯಿತು. ಮುಂದೆ ಬಿ.ಎ. ಅಭ್ಯಾಸಕ್ಕೆ ಕಲ್ಕತ್ತಾದ ಪ್ರೆಸಿಡೆನ್ಸಿ ಕಾಲೇಜನ್ನು ಸೇರಿದರು. ೧೮೯೧ರಲ್ಲಿ ಬಿ.ಎ. ಪರೀಕ್ಷೆಯಲ್ಲಿ ಇತಿಹಾಸ ಮತ್ತು ಇಂಗ್ಲಿಷ್ ವಿಷಯಗಳಲ್ಲಿ ಆನರ್ಸ್ ಪಡೆದರು. ಎಂ.ಎ. ಪರೀಕ್ಷೆಗೆ ಇಂಗ್ಲಿಷ್ ತೆಗೆದುಕೊಂಡು ಅದರಲ್ಲಿ ಮೂರು ವಿಷಯ (ಪೇಪರ್)ಗಳಲ್ಲಿ ಶೇಖಡ ೯೦, ೯೨ ಮತ್ತು ೯೫ ಗುಣಗಳನ್ನು ದೊರಕಿಸಿ ದಾಖಲೆಯನ್ನು ನಿರ್ಮಿಸಿದರು. ಸರ್ಕಾರದವರು ಇವರಿಗೆ ಇಂಗ್ಲೆಂಡಿನಲ್ಲಿ ಮುಂದಿನ ಅಭ್ಯಾಸ ಮಾಡಲಿಕ್ಕೆ ಶಿಷ್ಯವೃತ್ತಿಯನ್ನು ಕೊಟ್ಟರು. ಆದರೆ ವೈಯಕ್ತಿಕ ಕಾರಣಗಳಿಂದ ಅದನ್ನು ನಿರಾಕರಿಸಿ ಪ್ರೇಮ್‌ಚಂದ್ ರಾಯಚಂದ್ ಶಿಷ್ಯವೃತ್ತಿಯ ಸಲುವಾಗಿ ಅಭ್ಯಾಸವನ್ನು ಆರಂಭಿಸಿದರು.

ಆಗಿನ ದಿನಗಳಲ್ಲಿ ಈ ಶಿಷ್ಯವೃತ್ತಿಯು ಬಹಳ ಆಕರ್ಷಕವಾಗಿತ್ತು. ಅದನ್ನು ದೊರಕಿಸಿದವರು ಮುಂದೆ ಸಮಾಜದಲ್ಲಿ ಉನ್ನತ ಪದವಿಯನ್ನು ಸುಲಭವಾಗಿ ಪಡೆಯುತ್ತಿದ್ದರು. ಈ ಶಿಷ್ಯವೃತ್ತಿಯ ಅಭ್ಯರ್ಥಿಯು ಯಾವುದಾದರೂ ಹೊಸ ವಿಷಯಕ್ಕೆ ಸಂಬಂಧಿಸಿದ ಗ್ರಂಥವನ್ನು ಸಾದರಪಡಿಸಬೇಕಾಗಿತ್ತು. ಜದುನಾಥರು ಔರಂಗಜೇಬನ ಜೀವನ ಚರಿತ್ರೆಯ ವಿಷಯವನ್ನು ಆರಿಸಿದರು. ಈ ವಿಷಯದ ಅಭ್ಯಾಸಕ್ಕೆ ಬೇಕಾದ ಅಜ್ಞಾಗದಿರುವ ಆಧಾರಗಳನ್ನು ದೊರಕಿಸಲಿಕ್ಕೆ ಇಂಗ್ಲೆಂಡ್, ಫ್ರಾನ್ಸ್, ಲಿಸ್ಬನ್ ಮತ್ತು ಬರ್ಲಿನ್‌ಗಳಲ್ಲಿಯ ಪುಸ್ತಕಭಂಡಾರಗಳ ಕೆಟಲಾಗ್ (Catalogue)ಗಳನ್ನು ಶೋಧಿಸಿದರು. ಇದೇ ರೀತಿ ಭಾರತದಲ್ಲಿ ದೆಹಲಿ, ರಾಮಪುರ, ಲಾಹೋರ್ ಮತ್ತು ಹೈದರಾಬಾದಗಳಲ್ಲಿಯೂ ತಮ್ಮ ಶೋಧನೆಯನ್ನು ಮುಂದುವರೆಸಿ

ದಾಖಲೆಗಳನ್ನು ದೊರಕಿಸಿದರು. ೧೯೦೧ರಲ್ಲಿ ತಮ್ಮ ಅಚ್ಚಾದ ಪುಸ್ತಕ 'ಔರಂಗಜೇಬನ ಕಾಲದ ಭಾರತ' ವನ್ನು ಸಾದರಪಡಿಸಿದರು. ಅಂತೂ ಈ ಕೆಲಸಕ್ಕೆ ೧೮೯೨ ರಿಂದ ೧೯೦೧ ರವರೆಗೆ ೯ ವರ್ಷಗಳನ್ನು ಕಳೆದರು.

೧೮೯೨ ರಲ್ಲಿ ಎಂ.ಎ. ಪಾಸಾದ ನಂತರ ಪ್ರೇಮಚಂದ್ ರಾಯಚಂದ್ ಶಿಷ್ಯವೃತ್ತಿಗೆ ಅಭ್ಯಾಸ ಮಾಡುತ್ತಿರುವಾಗ ಕಲ್ಕತ್ತಾದ ಒಂದು ಖಾಸಗಿ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ ಕೆಲಸ ಮಾಡುತ್ತಿದ್ದರು. ೧೮೯೭ರಲ್ಲಿ ಇವರಿಗೆ ಶಿಷ್ಯವೃತ್ತಿ ಬಂದ ಮೇಲೆ ಬೆಂಗಾಲ್ ಎಜ್ಯುಕೇಶನಲ್ ಸರ್ವಿಸ್‌ನಲ್ಲಿ (Bengal Educational Service) ಇವರ ನೇಮಕವಾಯಿತು. ಮೊದಲು ಕಲ್ಕತ್ತಾದ ಪ್ರೆಸಿಡೆನ್ಸಿ ಕಾಲೇಜಿನಲ್ಲಿ, ನಂತರ ಬಹಳ ವರ್ಷ ಪಾಟ್ನಾ ಕಾಲೇಜಿನಲ್ಲಿ ಇವರು ಇಂಗ್ಲಿಷ್ ಮತ್ತು ಇತಿಹಾಸದ ಪ್ರಾಧ್ಯಾಪಕರಾಗಿ ದುಡಿದರು. ೧೯೧೭ ರಿಂದ ೧೯೧೯ ರವರೆಗೆ ಎರಡು ವರ್ಷಗಳ ಕಾಲ ಇವರ ಸೇವೆಯನ್ನು ಬನಾರಸ್ ಹಿಂದೂ ವಿಶ್ವವಿದ್ಯಾಲಯಕ್ಕೆ ಎರವಲಾಗಿ ಕೊಡಲಾಗಿತ್ತು. ಬನಾರಸ್ ಬಿಟ್ಟ ಕೂಡಲೇ ಅವರನ್ನು ಇಂಪಿರಿಯಲ್ ಎಜ್ಯುಕೇಶನ್ ಸರ್ವೀಸ್‌ಗೆ ತೆಗೆದುಕೊಂಡು ಕಟಕಿನ ರೇವನ್‌ಷಾ ಕಾಲೇಜಿಗೆ ವರ್ಗಮಾಡಿದರು. ಅಲ್ಲಿ ನಾಲ್ಕು ವರ್ಷ ಕಾಲ ಇದ್ದ ನಂತರ ಪುನಃ ಪಾಟ್ನಾಕ್ಕೆ ಬಂದು, ೧೯೨೬ ರಲ್ಲಿ ಸೇವೆಯಿಂದ ನಿವೃತ್ತರಾದರು. ೧೯೨೬ ರಿಂದ ೧೯೨೮ ರವರೆಗೂ ಕಲ್ಕತ್ತಾ ವಿಶ್ವವಿದ್ಯಾಲಯದ ಗೌರವ ಉಪಕುಲಪತಿಗಳಾಗಿ ಕೆಲಸ ಮಾಡಿದರು. ೧೯೨೮ ರಿಂದ ಅವರ ನಿಧನದವರೆಗೆ ತಮ್ಮ ಎಲ್ಲಾ ವೇಳೆಯನ್ನು ಇತಿಹಾಸಕ್ಕೆ ಮೀಸಲಾಗಿಟ್ಟರು.

ಅವರ ಗ್ರಂಥಗಳು

ಪ್ರೇಮಚಂದ್ರ ರಾಯಚಂದ್ ಶಿಷ್ಯವೃತ್ತಿಯ ಸಲುವಾಗಿ ಔರಂಗಜೇಬನ ಜೀವನದ ಅಭ್ಯಾಸವನ್ನು ಪ್ರಾರಂಭಿಸಿದ ಜದುನಾಥರು ಅವನ ವಿಷಯಕ್ಕೆ ಅನೇಕ ಹೊಸ ಆಧಾರಗಳನ್ನು ಸಂಗ್ರಹಿಸಿದ್ದರು. ಆದ್ದರಿಂದ ಅವನ ಜೀವನದ ಬಗೆಗೆ ವಿಸ್ತೃತವಾಗಿ ಬರೆಯಲು ನಿರ್ಧರಿಸಿದ್ದರಲ್ಲಿ ಆಶ್ಚರ್ಯವೇನು ಇಲ್ಲ. ಮೊದಲನೆಯ ಎರಡು ಸಂಪುಟಗಳು ೧೯೧೨ ರಲ್ಲಿ ಹೊರಬಿದ್ದು ತಕ್ಷಣ ಅತ್ಯುತ್ತಮ ಗ್ರಂಥಗಳೆಂದು ಪರಿಗಣಿಸಲ್ಪಟ್ಟವು. ಮುಂದಿನ ನಾಲ್ಕು ವರ್ಷಗಳಲ್ಲಿ ಮೂರನೆಯ ಸಂಪುಟ, ಮುಂದಿನ ಮೂರು ವರ್ಷಗಳಲ್ಲಿ ನಾಲ್ಕನೆಯ ಸಂಪುಟ, ಐದು ವರ್ಷಗಳ ನಂತರ ಕೊನೆಯ ಸಂಪುಟ ಹೀಗೆ ಪ್ರಾರಂಭಮಾಡಿದಾಗಿನಿಂದ ೨೫ ವರ್ಷಗಳಲ್ಲಿ ಔರಂಗಜೇಬನ ಜೀವನಚರಿತ್ರೆಯನ್ನು ಬರೆದು ಮುಗಿಸಿದರು. ಅಂದರೆ ಈ ಅವಧಿಯಲ್ಲಿ ಇನ್ನೇನು ಬರೆಯಲಿಲ್ಲವೆಂದಲ್ಲ.

ಅದೇ ಅವಧಿಯಲ್ಲಿ 'ಶಿವಾಜಿ ಮತ್ತು ಅವನ ಕಾಲ' ಎನ್ನುವ ಪುಸ್ತಕವನ್ನು

ಬರೆದರು. ಇದು ಎಷ್ಟು ಜನಪ್ರಿಯವಾಯಿತೆಂದರೆ ಈಗ ಅದು ೫ನೇ ಆವೃತ್ತಿಯನ್ನು ಕಂಡಿದೆ. ಔರಂಗಜೇಬನ ಮತ್ತು ಶಿವಾಜಿಯ ಮೌಲ್ಯಮಾಪನ ಮಾಡುವಾಗ ಯಾರಿಗೂ ಹೆದರದೆ, ನಿರ್ದಾಕ್ಷಿಣ್ಯವಾಗಿ, ನ್ಯಾಯಾಧೀಶರು ತೀರ್ಪು ಕೊಡುವ ಹಾಗೆ, ಯಾರ ಆಕ್ಷೇಪಣೆಯೂ ಬರದ ಹಾಗೆ ಜದುನಾಥರು ಮಾಡಿರುವುದು ಅತ್ಯಂತ ಸೋಜಿಗದ ಸಂಗತಿ.

ಇವರ 'ಚೈತನ್ಯಾಸ್ ಪಿಲ್‌ಗ್ರಿಮೇಜ್ ಅಂಡ್ ಟೀಚಿಂಗ್ಸ್' ಎನ್ನುವ ಪುಸ್ತಕವು ಆ ಸಂತನ ಬಗ್ಗೆ ಕೃಷ್ಣದಾಸ ಕವಿರಾಜನು ಬರೆದ 'ಚೈತನ್ಯ ಚರಿತಾಮೃತ'ವೆನ್ನುವ ಬಂಗಾಲಿ ಜೀವನಚರಿತ್ರೆಯ ಭಾಷಾಂತರ. 'India through the Ages' ಎನ್ನುವ ೧೦೦ ಪುಟದ ಪುಸ್ತಕ ಭಾರತ ಇತಿಹಾಸದ ವಿಹಂಗಮ ನೋಟ. ಬಹಳ ಮನನೀಯವಾಗಿದೆ. ಸರ್ಕಾರರ ಇತರ ಪುಸ್ತಕಗಳು ಅನೇಕ ಸಂಪುಟಗಳಲ್ಲಿವೆ. ಜದುನಾಥರನ್ನು ಸ್ವಲ್ಪದರಲ್ಲಿಯೇ ತಿಳಿದುಕೊಳ್ಳುವ ಕುತೂಹಲಿಗಳಿಗೆ 'ಇಂಡಿಯಾ ಥ್ರೂ ದಿ ಏಜಸ್' ಒಳ್ಳೆಯ ಪುಟ್ಟ ಹೊತ್ತಿಗೆ.

೧೯೨೪ ರಲ್ಲಿ ಜದುನಾಥರು ೨೫ ವರ್ಷ ಶ್ರಮಪಟ್ಟು ಔರಂಗಜೇಬನ ಜೀವನ ಚರಿತ್ರೆಯನ್ನು ಮುಗಿಸಿದರೆಂದು ಹೇಳಿದೆ. ಮುಂದಿನ ೨೫ ವರ್ಷಗಳಲ್ಲಿ 'ಫಾಲ್ ಆಫ್ ದಿ ಮುಘಲ್ ಅಂಪಯರ' ಎನ್ನುವ ಪುಸ್ತಕವನ್ನು ಬರೆದರು. ಇದು ನಾಲ್ಕು ಸಂಪುಟದಲ್ಲಿದೆ. ಈ ಪುಸ್ತಕ ಅವರು ಬರೆದ ಎಲ್ಲ ಪುಸ್ತಕಗಳಲ್ಲಿ ಉಚ್ಚ ಮಟ್ಟದ್ದೆಂದು ಪರಿಗಣಿಸಲ್ಪಟ್ಟಿದೆ. ಇದರಲ್ಲಿ ಮೊಗಲ್ ಸಾಮ್ರಾಜ್ಯದ ಪತನವಲ್ಲದೆ ಮರಾಠಾ ಸಾಮ್ರಾಜ್ಯದ ಪತನದ ಇತಿಹಾಸವೂ ಇದೆ.

ಅವರ ೮೫ನೇ ವಯಸ್ಸಿನಲ್ಲಿ ಅವರು 'ಮಿಲಿಟರಿ ಹಿಸ್ಟರಿ ಆಫ್ ಇಂಡಿಯಾ' ಎನ್ನುವ ಪುಸ್ತಕದಲ್ಲಿ ಅಲೆಗ್ಝಾಂಡರನ ದಂಡಯಾತ್ರೆಯಿಂದ ಬ್ರಿಟಿಷರ ಕಾಲದವರೆಗೂ ಆದ ಕಾಳಗಗ ವಿವೇಚನೆ ಮಾಡಿದ್ದಾರೆ. ಇದು ಇವರ ಕೊನೆಯ ಪುಸ್ತಕ.

ಇಷ್ಟು ದೊಡ್ಡ ಇತಿಹಾಸಕಾರನಾಗಲು ಇವರು ಮಾಡಿದ ಸಿದ್ಧತೆಗಳನ್ನು ನೋಡೋಣ. ಇವರಿಗೆ ಯಾವ ಇತಿಹಾಸ ಪ್ರಾಧ್ಯಾಪಕರೂ ಮಾರ್ಗದರ್ಶನ ಮಾಡಿದ ಹಾಗೆ ಕಾಣುವದಿಲ್ಲ. ತಮ್ಮ ಮಾರ್ಗವನ್ನು ತಾವೇ ಕಲ್ಪಿಸಿಕೊಂಡರು. ಇದು ಇವರು ಮಾಡಿದ ಮೊದಲನೆಯ ಸಿದ್ಧತೆ. ಆಧಾರಗಳ ಭಾಷೆಯನ್ನು ಕಲಿಯುವುದು, ಇವರು ಔರಂಗಜೇಬನ ಜೀವನ ಚರಿತ್ರೆಯನ್ನು ಬರೆಯುವುದಕ್ಕೆ ಮಾಡಿದ ಎರಡನೆಯ ಸಿದ್ಧತೆ. ಮರಾಠಿಯನ್ನು ಕಲಿತರು, ಪರ್ಷಿಯನ್ ಅಭ್ಯಾಸ ಮಾಡಿದರು, ಶಿವಾಜಿಯನ್ನು ಕುರಿತು ಬರೆಯಲು. ಎರಡು ಭಾಷೆಗಳಲ್ಲಿಯೂ ಸಾಕಷ್ಟು ತಜ್ಞರಾದರು. ಇವಲ್ಲದೆ ಫ್ರೆಂಚ್, ಜರ್ಮನ್ ಭಾಷೆಗಳನ್ನು ತಾವೇ ಕಲಿತರು. ಸಂಸ್ಕೃತವನ್ನು ಚೆನ್ನಾಗಿ ಬಲ್ಲವರಾಗಿದ್ದರು.

ಭಾಷೆಗಳನ್ನು ಕಲಿತ ಮೇಲೆ ಜದುನಾಥರು ಕೈಬರಹ ಪುಸ್ತಕಗಳನ್ನು ಕಲೆ ಹಾಕುವುದಕ್ಕೆ ಪ್ರಾಶಸ್ತ್ಯವನ್ನು ಕೊಟ್ಟಿದ್ದರು. ಅವು ಎಲ್ಲಿದ್ದರೂ ಅವುಗಳ ನಕಲುಗಳನ್ನು ಸ್ವಂತ ಖರ್ಚಿನಿಂದ ತರಿಸುತ್ತಿದ್ದರು. ತರಿಸಿದ ಮೇಲೆ ಓದಿ ಅರ್ಥಮಾಡಿಕೊಂಡು ಅದನ್ನು ಇಂಗ್ಲಿಷಿಗೆ ಭಾಷಾಂತರಿಸುತ್ತಿದ್ದರು. ಅವರು ಮಾಡಿದ ಕೆಲವು ಭಾಷಾಂತರಗಳು ಅಚ್ಚು ಹಾಕಲ್ಪಟ್ಟಿವೆ. ಅಚ್ಚುಹಾಕಬೇಕಾಗಿದ್ದವು ಇನ್ನೂ ಇವೆ. ಇಂಥ ಆಧಾರಗಳ ಸಂಗ್ರಹ ಮಾಡುವುದಲ್ಲದೆ ತಮ್ಮ ವಿದ್ಯಾರ್ಥಿಗಳಿಗೂ ಅದೇ ರೀತಿ ಮಾಡಬೇಕೆಂದು ಸಲಹೆ ಮಾಡುತ್ತಿದ್ದರು. ಅಂಥ ವಿದ್ಯಾರ್ಥಿಗಳಲ್ಲಿ ಸೀತಾಮೌ ಎಂಬ ಊರಿನಲ್ಲಿರುವ ರಘು ಬೀರಸಿಂಹರು ತಮ್ಮ ಊರಿನಲ್ಲಿ ಮಾದರಿಯ ಪುಸ್ತಕ ಮತ್ತು ಕೈ ಬರಹಗಳನ್ನು ಸಂಗ್ರಹವನ್ನು ಮಾಡಿದ್ದಾರೆ.

ಜದುನಾಥರು ಪುಸ್ತಕಕೀಟರಲ್ಲ. ತಮ್ಮ ಬರವಣಿಗೆಯಲ್ಲಿ ಬರುವ ಕಾಳಗಗಳ ಸ್ಥಳಗಳು, ರಾಜಧಾನಿ ಅಥವಾ ಇತರ ಮುಖ್ಯ ಪಟ್ಟಣಗಳನ್ನು ಅವರು ಸಂದರ್ಶಿಸಿದ್ದಾರೆ. ಇದೇ ರೀತಿ ಪುಸ್ತಕ ಸಂಗ್ರಹಾಲಯಗಳಿದ್ದ ಸ್ಥಳಗಳಿಗೂ ಭೇಟಿ ಕೊಟ್ಟಿದ್ದಾರೆ. ಅವರು ಆದರ್ಶ ಪ್ರವಾಸಿ. ಯಾವಾಗಲೂ ಮೂರನೆಯ ವರ್ಗದಲ್ಲಿ, ಸಾಧ್ಯವಾಗದಿದ್ದರೆ ಎರಡನೆಯ ವರ್ಗದಲ್ಲಿ ಆದಷ್ಟು ಕಡಿಮೆ ಸಾಮಾನು ತೆಗೆದುಕೊಂಡು ಪ್ರವಾಸ ಮಾಡುತ್ತಿದ್ದರು. ಜೊತೆಗೆ ಇರಲೇಬೇಕಾದ ವಸ್ತು ಎಂದರೆ 'ಸರ್ವೇ ಆಫ್ ಇಂಡಿಯಾ'ದ ನಕಾಶಗಳು. ಇವುಗಳ ಸಹಾಯದಿಂದ ಅವರು ನಮ್ಮ ದೇಶವನ್ನೆಲ್ಲಾ ಸುತ್ತಿದ್ದಾರೆ. ಆಯಾಸಕ್ಕೆ ಅವರು ಲೆಕ್ಕಿಸುತ್ತಿರಲಿಲ್ಲ. ಶ್ರೀಮಂತರ ಆತಿಥ್ಯವನ್ನು ಅಪೇಕ್ಷಿಸುತ್ತಿರಲಿಲ್ಲ. ತಮ್ಮ ಕೆಲಸಕ್ಕೆ ಉಪಯುಕ್ತವಾಗುವವರ ನೆರವನ್ನು ಬಿಡುತ್ತಿರಲಿಲ್ಲ. ಶಿವಾಜಿ ಮತ್ತು ಮರಾಠರ ಸಲುವಾಗಿ ಬರೆಯಲು ಮಹಾರಾಷ್ಟ್ರ ಮತ್ತು ಕರ್ನಾಟಕಗಳ ಮೂಲೆ ಮೂಲೆಗಳಲ್ಲಿ ಅಲೆದಾಡಿದ್ದಾರೆ. ಇಂಥ ಒಂದು ಸಂದರ್ಭದಲ್ಲಿ ಅವರಿಗೆ ಜೇಧೆ ಎನ್ನುವವರ ಮನೆಯಲ್ಲಿ ಮರಾಠಾ ಇತಿಹಾಸಕ್ಕೆ ಅತ್ಯುಪಯುಕ್ತವಾದಂಥ 'ಜೇಧೆ ಶಕಾವಳಿ' ಸಿಕ್ಕಿತು. ಅದರ ಸಹಾಯದಿಂದ ಎಷ್ಟೋ ಮುಖ್ಯ ಘಟನೆಗಳ ಕಾಲ ನಿರ್ಣಯ ಸುಗಮವಾಗಿದೆ. ಇಂಥದೇ ಒಂದು ಪ್ರವಾಸದಲ್ಲಿ ಅವರು ಹಂಪಿಗೆ ಬಂದರು. ಅವರ ಜೊತೆಗೆ ಅವರ ಅತ್ಯಂತ ನಿಕಟ ಸ್ನೇಹಿ ಗೋವಿಂದ ಸಖಾರಾಮ್ ಸರದೇಸಾಯಿ ಅವರಿದ್ದರು. ಹಂಪಿಯಲ್ಲಿ ಹಜಾರ ರಾಮಸ್ವಾಮಿಯ ದೇವಸ್ಥಾನವನ್ನು ಇಬ್ಬರೂ ನೋಡುತ್ತಿದ್ದರು. ಆ ದೇವಸ್ಥಾನದ ಗೋಡೆಯು ಮೇಲೆ ರಾಮಾಯಣದ ಚಿತ್ರಗಳಿವೆ. ಸರದೇಸಾಯಿಯವರಿಗೆ ಈ ಚಿತ್ರಗಳು ಏನನ್ನು ಚಿತ್ರಿಸಿವೆಯೆನ್ನುವುದು ಗೊತ್ತಾಗಲಿಲ್ಲ. ಅವರು ಜದುನಾಥರನ್ನು ಕೇಳಿದರು. ಅವರು ರಘುವಂಶದಲ್ಲಿ ರಾಮನು ಮಿಥಿಲೆಗೆ ಹೋಗುವಾಗ ಪರಶುರಾಮನನ್ನು ಎದುರಿಸಿ ಸೋಲಿಸಿದ ಭಾಗಗಳನ್ನು ಹೇಳಿ

ತೋರಿಸಿದರು. ಶಿಲ್ಪಿಯು ಈ ಚಿತ್ರಗಳನ್ನು ಕೆತ್ತುವಾಗ ಕಾಳಿದಾಸನ ಶ್ಲೋಕಗಳನ್ನು ಲಕ್ಷ್ಯದಲ್ಲಿಟ್ಟಿರಬೇಕೆಂದರು.

ಒಳ್ಳೆಯ ಇತಿಹಾಸಕಾರನಾಗಲು ಜದುನಾಥರು ಮಾಡಿದ ಇನ್ನೊಂದು ಸಿದ್ಧತೆ– ಇತರ ಇತಿಹಾಸಕಾರರ ಸ್ನೇಹವನ್ನು ದೊರಕಿಸುವುದು. ಜದುನಾಥ್ ಮತ್ತು ಸರದೇಸಾಯಿಯರ ಪತ್ರ ವ್ಯವಹಾರ ಅರ್ಧ ಶತಮಾನ ನಡೆಯಿತು. ಜದುನಾಥರು ಔರಂಗಜೇಬನ ಅಭ್ಯಾಸ ಮಾಡುತ್ತಿರುವಾಗ ಅವರಿಗೆ ಮರಾಠಿ ಬರುತ್ತಿರಲಿಲ್ಲ. ಮರಾಠಿ ಇತಿಹಾಸಕಾರರ ಸಹಾಯ ಅತ್ಯಗತ್ಯವಾಗಿತ್ತು. ಅದಕ್ಕಾಗಿ ಅವರು ಸರ ದೇಸಾಯಿಯವರೊಡನೆ ಪತ್ರವ್ಯವಹಾರವನ್ನು ಆರಂಭಿಸಿದರು. ಅವರು ಸರದೇಸಾಯಿಯವರನ್ನು ಮೊದಲು ಭೇಟಿಯಾದದ್ದು ೧೯೦೪ ರಲ್ಲಿ. ಅಲ್ಲಿಂದ ಇಬ್ಬರೂ ಪ್ರತಿ ವರ್ಷವೂ ಸೇರಿ ವಿಚಾರ ವಿನಿಮಯ ಮಾಡುತ್ತಿದ್ದರು. ಅವರ ಪತ್ರ ವ್ಯವಹಾರದಲ್ಲಿ ಕೆಲವು ಭಾಗಗಳು ಅಚ್ಚಾಗಿವೆ. ಅದರಿಂದ ಮತ್ತು ಜದುನಾಥರ ವಿದ್ಯಾರ್ಥಿಗಳು ಅವರ ಬಗ್ಗೆ ಬರೆದ ಲೇಖನಗಳಿಂದ ಅವರ ಗುಣಗಳನ್ನು ನಾವು ತಿಳಿದುಕೊಳ್ಳಬಹುದು. ಇವರೆಲ್ಲರೂ ಜದುನಾಥರನ್ನು ತೆಂಗಿನಕಾಯಿಗೆ ಹೋಲಿಸುತ್ತಾರೆ. ಹೊರಗೆ ನೋಡಲಿಕ್ಕೆ ಕಲ್ಲು, ಆದರೆ ಅದರ ಒಳಹೊಕ್ಕರೆ (ಒಳ ಹೋಗುವುದು ಬಹಳ ಕಷ್ಟ) ಒಳಗಿನ ಸಾಮಗ್ರಿ ಮೃದು ಮತ್ತು ಅಮೃತಪ್ರಾಯವಾದದ್ದು. ಹೊರಗೆ ನೋಡಲಿಕ್ಕೆ ಎಷ್ಟು ಕಠಿಣರಾಗಿದ್ದರು ಎಂದರೆ ಜದುನಾಥರೇ ಹೇಳುತ್ತಾರೆ, ನಮ್ಮ ಮನೆಗೆ ಒಂದು ಸಲ ಬಂದವರಲ್ಲಿ ಮತ್ತೊಂದು ಸಲ ಬಂದವರು ಬಹಳ ಕಡಿಮೆ. ಕಾಡುಹರಟೆ ಅವರಿಗೆ ಎಳ್ಳಷ್ಟೂ ಸೇರುತ್ತಿದ್ದಿಲ್ಲ. ಕ್ಲಬ್ಬು, ಸಮಾಜ, ಇತ್ಯಾದಿ ಎಲ್ಲಾ ಜದುನಾಥರಿಗೆ ವರ್ಜ್ಯ. ಅವರಿಗೆ ಇದ್ದ ವೇಳೆಯೆಲ್ಲ ಪಾಠ ಹೇಳಿ ಕೊಡುವುದಕ್ಕೆ ಮತ್ತು ಸಂಶೋಧನೆಗೆ ಮೀಸಲು.

ವಿದ್ಯಾರ್ಥಿಗಳಲ್ಲಿ ಮುಂದೆ ಬರುವವರಿಗೆ ಎಲ್ಲಾ ಸಹಾಯವನ್ನು ಮಾಡುತ್ತಿದ್ದರು. ಸೋಮಾರಿಗಳಿಗೆ ಅವರು ಮಾರಿ. ಇವರ ಹತ್ತಿರ ಒಂದು Ph.D. ಪ್ರಬಂಧ ಪರೀಕ್ಷೆಗೆ ಬಂದಿತ್ತು. ಬಹಳ ಕಡಿಮೆ ದರ್ಜೆಯದು. ಜದುನಾಥರು ವಿದ್ಯಾರ್ಥಿಯನ್ನು ನಪಾಸು ಮಾಡುವುದಲ್ಲದೆ ಅವನ ಉಪಾಧ್ಯಾಯರು ಈ ಕೆಲಸಕ್ಕೆ ಅಯೋಗ್ಯರೆಂದು ಬರೆದು Ph.D. ಮಾರ್ಗದರ್ಶಕರಾಗಿರಲು ಅವರನ್ನು ಅನರ್ಹರನ್ನಾಗಿ ಮಾಡಿಸಿದರು. ಅವರಿಗೆ ಬಂದ ಇನ್ನೊಂದು Ph.D. ಪ್ರಬಂಧ ಬಹಳ ಚೆನ್ನಾಗಿತ್ತು. ಅದಕ್ಕೆ ತಾವು ಪದವಿ ಕೊಟ್ಟಿದ್ದಲ್ಲದೆ ತಮ್ಮ ಸ್ವಂತ ಖರ್ಚಿನಲ್ಲಿ ಅದನ್ನು ಅಚ್ಚು ಹಾಕಿಸಿ, ಕರಡನ್ನು ತಿದ್ದಿ, ಅಚ್ಚಾದ ಪ್ರತಿಗಳನ್ನು ಆ ವಿದ್ಯಾರ್ಥಿಗೆ ಬಹುಮಾನವಾಗಿ ಕೊಟ್ಟರು.

ಅವರು ಬರೆದ ಪುಸ್ತಕಗಳಲ್ಲಿ ಬರುವ ಔರಂಗಜೇಬ, ಶಿವಾಜಿ, ನಾದಿರಷಹ, ಅಹಮದಷಹ ಮೊದಲಾದವರ ಸರಿಯಾದ ಸ್ಥಾನವನ್ನು ಕಂಡುಹಿಡಿಯುವುದರಲ್ಲಿ ಜದುನಾಥರು ಬಹಳ ಶ್ರಮವಹಿಸಿದ್ದಾರೆ. ಆದರೆ ಭಾರತೀಯ ಇತಿಹಾಸಕಾರರಲ್ಲಿ ಅವರ ಸ್ಥಾನವನ್ನು ಕಂಡುಹಿಡಿಯುವುದು ಅತಿ ಸುಲಭ. ಅವರ ಸರಿಸಮಾನ ಬರುವವರು ಯಾರೂ ಇಲ್ಲ. ಒಬ್ಬ ಇಂಗ್ಲಿಷ್ ಇತಿಹಾಸಕಾರ ಇವರನ್ನು 'ಬಂಗಾಲಿ ಗಿಬ್ಬನ್' ಎಂದು ಕರೆದಿದ್ದಾರೆ. ಯಾವಾಗಲೂ ಭಾರತೀಯ ದೃಷ್ಟಿಕೋನವನ್ನಿಟ್ಟಿದ್ದ ಜದುನಾಥರನ್ನು ಬಂಗಾಲಿ ಎಂದು ಕರೆಯುವುದು ತಪ್ಪು. ಗಿಬ್ಬನ್‌ಗೆ ಹೋಲಿಸುವುದು ಇನ್ನೂ ದೊಡ್ಡ ತಪ್ಪು. ಅವರನ್ನು ಯಾರಿಗೂ ಹೋಲಿಸಲಾಗುವುದಿಲ್ಲ. ಭಾರತೀಯ ಇತಿಹಾಸಕಾರರಲ್ಲಿ ಮಾತ್ರವಲ್ಲ, ಪ್ರಪಂಚ ಇತಿಹಾಸಕಾರರಲ್ಲಿಯೂ ಅವರ ಸ್ಥಾನ ಬಹಳ ಮೇಲಿನದು.'

■

ವಿಮರ್ಶೆ : ೩೦

SOURCES OF KARNATAKA HISTORY, VOL. I

Sources of Karnataka History, Vol. I, (ಕರ್ನಾಟಕ ಇತಿಹಾಸದ ಮೂಲಗಳು):- ಬರೆದವರು ಎಸ್. ಶ್ರೀಕಂಠಶಾಸ್ತ್ರಿ, ಎಂ.ಎ., ಪ್ರಕಾಶಕರು ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೪೦. ಬೆಲೆ ರೂ. ೩.

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಅಧ್ಯಾಪಕರಾದ ಶ್ರೀ. ಎಸ್. ಶ್ರೀಕಂಠಶಾಸ್ತ್ರಿಗಳು ಕರ್ನಾಟಕ ಇತಿಹಾಸದ ಮೂಲಗಳನ್ನು ಈ ಪುಸ್ತಕದಲ್ಲಿ ಶೇಖರಿಸಿ ಅದಕ್ಕೆ ಇರುವ ಇಂಗ್ಲಿಷ್ ಪೀಠಿಕೆಯಲ್ಲಿ ಕರ್ನಾಟಕದ ರಾಜಕೀಯ ಮತ್ತು ಸಾಂಸ್ಕೃತಿಕ ಚರಿತ್ರೆಯನ್ನು ಸಂಕ್ಷಿಪ್ತವಾಗಿಯೂ ಸ್ವಾರಸ್ಯವಾಗಿಯೂ ಬರೆದಿದ್ದಾರೆ. ಇದರಲ್ಲಿರುವ ೧೩೩ ಉದ್ಧರಣಗಳಲ್ಲಿ ಕನ್ನಡ ಮತ್ತು ಸಂಸ್ಕೃತ ಗ್ರಂಥಗಳಿಂದಲೂ ಮತ್ತು ಶಾಸನಗಳಿಂದಲೂ ಉದ್ಧೃತವಾಗಿರುವವೆ ಹೆಚ್ಚು.ಇದಲ್ಲದೆ ಇತಿಹಾಸಕಾರರ ಉಪಯೋಗಕ್ಕಾಗಿ ವಿಶೇಷ ಶ್ರಮಪಟ್ಟು, ಶ್ರೀ ಶಾಸ್ತ್ರಿಗಳು ತೆಲುಗು, ತಮಿಳು, ಮರಾಠಿ, ಪಾರ್ಶಿ, ಗ್ರೀಕ್ ಮತ್ತು ಚೈನಾ ಗ್ರಂಥಗಳಲ್ಲಿಯ ಮೂಲಗಳನ್ನು ಹುಡುಕಿ ತೆಗೆದಿದ್ದಾರೆ. ಈ ಉದ್ಧರಣಗಳನ್ನೆಲ್ಲಾ ಕಾಲಾನುಕ್ರಮದಿಂದ ಆಣಿ ಮಾಡಿ, ಅವುಗಳಲ್ಲಿರುವ ಮುಖ್ಯ ಅಂಶಗಳನ್ನು ಇಂಗ್ಲಿಷಿನಲ್ಲಿ ಹೇಳಿ, ಹೆಚ್ಚು ತಿಳಿದುಕೊಳ್ಳಲಪೇಕ್ಷಿಸುವವರಿಗೆ ಮೂಲಸಂದರ್ಭಗಳನ್ನು ಕೊಟ್ಟಿದ್ದಾರೆ. ಇದರಲ್ಲಿರುವ ಉದ್ಧರಣೆಗಳು ಪೆರಿಪ್ಲೂಸ್ ಎನ್ನುವ ಗ್ರೀಕ್ ಗ್ರಂಥದಿಂದ ಅಂದರೆ ಕ್ರಿ.ಶ. ೭೦ ರಿಂದ ಪ್ರಾರಂಭವಾಗಿ ದೇವಗಿರಿಯಾದವ ರಾಜರ ಚರಿತ್ರೆಯ ಕೊನೆಯವರೆಗು ವ್ಯಾಪಿಸಿವೆ. ೨ನೇ ಸಂಪುಟದಲ್ಲಿ ಹೊಯ್ಸಳ ಮತ್ತು ವಿಜಯನಗರ ಚರಿತ್ರೆಯ ಮೂಲಗಳನ್ನು ಶೇಖರಿಸುತ್ತಾರಂತೆ.

ಪ್ರಾಚೀನಕಾಲದಲ್ಲಿ ಕರ್ನಾಟಕವು ಉತ್ತರದಲ್ಲಿ ಗೋದಾವರಿಯಿಂದ, ದಕ್ಷಿಣದಲ್ಲಿ ಕಾವೇರಿಯವರೆಗೂ, ಪಶ್ಚಿಮದಲ್ಲಿ ಅರಬ್ಬೀಸಮುದ್ರದಿಂದ, ಪೂರ್ವದಲ್ಲಿ ೭೮ನೇ ರೇಖಾಂಶದವರೆಗೂ ಹಬ್ಬಿತ್ತೆಂದು ಈ ಗ್ರಂಥಕರ್ತರ ಅಭಿಪ್ರಾಯ. ಇವರು ಕರ್ನಾಟಕದ ಚರಿತ್ರೆಯನ್ನು ಮೌರ್ಯರ ಕಾಲದಿಂದ ಪ್ರಾರಂಭ ಮಾಡುತ್ತಾರೆ. ರಾಮಾಯಣ ಮತ್ತು ಮಹಾಭಾರತದಲ್ಲಿ ಕರ್ನಾಟಕದ ವಿಷಯವೇನಿದೆ ಎನ್ನುವುದನ್ನು ಇವರು ಚರ್ಚಿಸದೆ ಇರುವದು ಆಶ್ಚರ್ಯವಾಗಿದೆ.

ಮೌರ್ಯ ಚಕ್ರಾಧಿಪತ್ಯದಲ್ಲಿ ಕರ್ನಾಟಕವು ಒಂದು ಭಾಗವಾಗಿತ್ತೆಂಬುದು ಮಧ್ಯ ಕರ್ನಾಟಕದಲ್ಲಿ ದೊರೆತಿರುವ ಬ್ರಹ್ಮಗಿರಿ, ಜಟ್ಟಿಂಗ ರಾಮೇಶ್ವರ, ಮಸ್ಕಿ, ಎರ್ರಗುಡಿ ಮುಂತಾದ ಅಶೋಕನ ಶಾಸನಗಳಿಂದ ತಿಳಿಯಬರುತ್ತದೆ. ಈ ರಾಜನ ಕಾಲದಲ್ಲಿ ಹೈದರಾಬಾದ್ ಕರ್ನಾಟಕದಲ್ಲಿರುವ ಸುವರ್ಣಗಿರಿಯು (ಈಗಿನ ಮಸ್ಕಿ) ಮೌರ್ಯ ಚಕ್ರಾಧಿಪತ್ಯದ ದಕ್ಷಿಣ ಪ್ರಾಂತ್ಯದ ಮುಖ್ಯ ಪಟ್ಟಣವಾಗಿತ್ತು. ಈ ಮಸ್ಕಿಯಲ್ಲಿ ನೈಜಾಮ ಸರ್ಕಾರದ ಪ್ರಾಚ್ಯವಸ್ತುಶೋಧನೆಯ ಇಲಾಖೆಯವರು ಭೂಶೋಧನೆ ಮಾಡಿ ಮೌರ್ಯರ ಕಾಲದ, ಮತ್ತು ಅದರ ಹಿಂದಿನ ಕಾಲದ ಚರಿತ್ರೆಗೆ ಉಪಯುಕ್ತವಾಗುವಂಥ ಅನೇಕ ಅಂಶಗಳನ್ನು ಹೊರಪಡಿಸಿದ್ದಾರೆ. ಮೈಸೂರು ಪ್ರಾಚ್ಯವಸ್ತು ಶೋಧನೆಯ ಇಲಾಖೆಯವರು ಅಶೋಕನ ಬ್ರಹ್ಮಗಿರಿ ಶಾಸನದ ಅಕ್ಕಪಕ್ಕದಲ್ಲಿ (ಬಳ್ಳಾರಿ ೧೮ ಮೈಲು ದಕ್ಷಿಣದಲ್ಲಿ) ಚೈತ್ಯ ವಿಹಾರಗಳಿಂದ ಕೂಡಿದ ಮೌರ್ಯರಕಾಲದ ಇಶಿಲಾ ಎನ್ನುವ ಪಟ್ಟಣವಿತ್ತೆಂದೂ, ಆ ಕಾಲದಿಂದ ಹಿಂದೆ, ಶಿಲಾಯುಗದವರೆಗೂ, ಆ ಪ್ರದೇಶದಲ್ಲಿ ಬೇರೆ ಬೇರೆ ಊರುಗಳಿದ್ದವೆನ್ನುವುದನ್ನೂ ಕಂಡು ಹಿಡಿದಿದ್ದಾರೆ.

ಕರ್ನಾಟಕವು ಮೌರ್ಯ ಚಕ್ರಾಧಿಪತ್ಯಕ್ಕೆ ಹೇಗೆ ಸೇರಿತೆನ್ನುವುದು ಚರ್ಚಾಸ್ಪದವಾದ ವಿಷಯ. ಅಶೋಕನು ಗೆಲ್ಲಲಿಲ್ಲವೆನ್ನುವುದು ಎಲ್ಲರಿಗೂ ಗೊತ್ತಿದೆ. ಇವನ ತಂದೆ ಬಿಂದುಸಾರನ ವಿಷಯವೇನೂ ಗೊತ್ತಿಲ್ಲ. ಬಿಂದುಸಾರನ ತಂದೆ ಚಂದ್ರಗುಪ್ತನು ಕರ್ನಾಟಕವನ್ನು ಗೆದ್ದಿದ್ದರೂ ಗೆದ್ದಿರಬಹುದು. ಯಾತಕ್ಕೆಂದರೆ ಶ್ರವಣಬೆಳ್ಗೊಳದಲ್ಲಿರುವ ಕೆಲವು ಶಾಸನಗಳಲ್ಲಿ (ಕ್ರಿ.ಶ. ೭ನೇ ಶತಮಾನದೀಚಿನವು) ಚಂದ್ರಗುಪ್ತನು ಶ್ರುತಕೇವಲಿಯಾದ ಭದ್ರಬಾಹುವಿನೊಂದಿಗೆ ಶ್ರವಣಬೆಳ್ಗೊಳಕ್ಕೆ ಬಂದು ನೆಲಸಿದನೆಂದು ಹೇಳಿದೆ. ಚಂದ್ರಗುಪ್ತನ ಹಿಂದೆ ಆಳಿದ ನಂದರು ನಾಗರಖಂಡ ಎನ್ನುವ ಕರ್ನಾಟಕದ ಒಂದು ಭಾಗವನ್ನು ವಶಪಡಿಸಿಕೊಂಡಿದ್ದರೆಂಬ ಪ್ರತೀತಿಯು ಶಿವಮೊಗ್ಗಾ ಜಿಲ್ಲೆಯ ಕೆಲವು ಈಚಿನ ಶಾಸನಗಳಲ್ಲಿ ಕಂಡುಬರುತ್ತದೆ. ಈ ಮೌರ್ಯರೇ ಕರ್ನಾಟಕವನ್ನು ಗೆದ್ದರೆನ್ನುವುದು ಎಲ್ಲೂ ಸ್ಪಷ್ಟವಾಗಿ ಹೇಳದಿರುವುದರಿಂದ, ನಂದರಿಂದ ಅವರು ಕರ್ನಾಟಕವನ್ನು ಪಡೆದಿರಬಹುದೆಂದು ಈ ಗ್ರಂಥಕರ್ತರು ಹೇಳುತ್ತಾರೆ. ಆದರೆ ಅಹನಾನೂರು ಎನ್ನುವ ತಮಿಳು ಗ್ರಂಥದ ಉದ್ಧರಣ (ಪು. ದಿಂದ ೧೪) ಮೌರ್ಯರು ದಕ್ಷಿಣದೇಶದ ಆಕ್ರಮಣಕ್ಕೆ ದಂಡೆತ್ತಿ ಬಂದ ಹಾಗೆ ಕಾಣುತ್ತದೆ.

ಮೌರ್ಯರನಂತರ ಶಾತವಾಹನರು ಕರ್ನಾಟಕದಲ್ಲಿ ಆಳಿದರು. ಗ್ರಂಥಕರ್ತರು ಶಾತವಾಹನರು ಕರ್ನಾಟಕದವರೆಂದು ಅಭಿಪ್ರಾಯಪಡುತ್ತಾರೆ. ಶಾತವಾಹನ ರಾಜ್ಯವು ನರ್ಮದಾ, ಗೋದಾವರಿಗಳಿಂದ ತುಂಗಭದ್ರಾ ನದಿಯವರೆಗು ವ್ಯಾಪಿಸಿತ್ತು. ಅನಂತರ ಕದಂಬರು, ಗಂಗರು ಮುಂತಾದವರು ಆಳಿದರು. ಕರ್ನಾಟಕದ

ಅರಸರು ಎಂಥಾ ಸತ್ವಯುತವಾದ ಪರರಾಷ್ಟ್ರ ನೀತಿಯನ್ನು ಅನುಸರಿಸಿದರೆನ್ನುವುದು ಶ್ರೀ ಶಾಸ್ತ್ರಿಗಳವರ ಪೀಠಿಕೆಯನ್ನು ಓದಿದರೆ ತಿಳಿಯುತ್ತದೆ. ಕದಂಬರ ಕಾಕುಸ್ಥರಾಜನು ತನ್ನ ಮಗಳನ್ನು ಒಬ್ಬ ಗುಪ್ತ ರಾಜನಿಗೆ ಕೊಟ್ಟಿದ್ದನು. ಚಾಲುಕ್ಯರ ಎರಡನೆಯ ಪುಲಕೇಶಿಯು ಹರ್ಷವರ್ಧನನನ್ನು ಸೋಲಿಸಿ, ಪರ್ಷಿಯಾದೇಶದ ರಾಜನಾದ ಎರಡನೆಯ ಖುಸ್ರುವಿನೊಂದಿಗೆ ಸ್ನೇಹವನ್ನು ಬೆಳೆಸಿದ್ದನು. ರಾಷ್ಟ್ರಕೂಟರ ಕಾಲದಲ್ಲಂತೂ ಕರ್ನಾಟಕದ ಸೈನಿಕರ ಕುದುರೆಗಳು ಎಷ್ಟೋಸಲ ಗಂಗಾಸ್ನಾನವನ್ನು ಮಾಡಿದವು.

ಇಷ್ಟೇ ಅಲ್ಲ. ಕರ್ನಾಟಕದವರು ಹಿಂದೆ ಬೇರೆ ಬೇರೆ ದೇಶಗಳಲ್ಲಿ ಎಷ್ಟು ರಾಜ್ಯಗಳನ್ನು ಸ್ಥಾಪನೆ ಮಾಡಿದರೆನ್ನುವುದು ಬಹಳ ಜನಗಳಿಗೆ ಗೊತ್ತಿಲ್ಲ. ನೇಪಾಳದಲ್ಲಿ ಆಳಿದಂಥ ನಾನ್ಯದೇವನ ವಂಶದವರು, ಬಂಗಾಳದ ಸೇನರು, ಜೋಧಪುರ ಮತ್ತು ಬಿಕನೀರಿನ ರಾಠೋಡರು, ಕರ್ನಾಟಕದವರು, ಕಳಿಂಗ ದೇಶದ ಗಂಗರು ಮತ್ತು ಕದಂಬರು ಕರ್ನಾಟಕದಿಂದ ಅಲ್ಲಿಗೆ ಹೋದವರು. ಎರಡನೆಯ ಪುಲಕೇಶಿಯ ತಮ್ಮ ಕುಬ್ಜ ವಿಷ್ಣುವರ್ಧನನು ಸ್ಥಾಪನೆ ಮಾಡಿದ ಪೂರ್ವ ಚಾಲುಕ್ಯ ರಾಜ್ಯವು ವೆಂಗಿಯಲ್ಲಿ ಹಲವು ಶತಮಾನಗಳವರೆಗೆ ಸ್ಥಿರವಾಗಿತ್ತು. ತೆಲುಗು ಸಾಹಿತ್ಯವು ಪೂರ್ವ ಚಾಲುಕ್ಯರ ಪ್ರೋತ್ಸಾಹದಿಂದ ಹುಟ್ಟಿತೆಂದು ನನ್ನೆಚೋಡ ಕವಿಯು ತನ್ನ ಕುಮಾರಸಂಭವಮು ಎನ್ನುವ ಕಾವ್ಯದಲ್ಲಿ ಹೇಳುತ್ತಾನೆ. ಪಂಪ, ಪೊನ್ನ ಮತ್ತು ನಾಗವರ್ಮರು, ವೆಂಗಿ ದೇಶದವರಾದಾಗ್ಯೂ ಪುರಿಗೆರೆಯ ಸ್ವಚ್ಛವಾದ ಕನ್ನಡದಲ್ಲಿ ಬರೆಯುವುದಕ್ಕೆ ಈ ರಾಜರೇ ಕಾರಣರಾಗಿರಬಹುದು.

ಪ್ರಪಂಚವೇ ಕೊಂಡಾಡುವಂಥ ಅಜಂತಾ ಮತ್ತು ಎಲ್ಲೋರಾ ಕಲೆಗೆ ಕಾರಣರಾದಂಥ ಕರ್ನಾಟಕದವರು ಭಾರತೀಯ ಸಂಸ್ಕೃತಿಗೆ ಬಹು ಮುಖ್ಯವಾದಂಥ ಕಾಣಿಕೆಗಳನ್ನು ಸಲ್ಲಿಸಿದ್ದಾರೆನ್ನುವ ಶ್ರೀ. ಶಾಸ್ತ್ರಿಗಳ ಮತವು ಎಲ್ಲರೂ ಒಪ್ಪತಕ್ಕದ್ದು.

ಡಾ. ಫ್ಲೀಟ್ ಸಾಹೇಬರ Dynasties of the Kanarese Districts (ಕನ್ನಡ ಜಿಲ್ಲೆಗಳ ರಾಜವಂಶಗಳು) ಎನ್ನುವ ಪುಸ್ತಕವನ್ನು ಇದುವರೆಗೆ ಎಲ್ಲರೂ ಹೇಗೆ ಓದುತ್ತಿದ್ದರೊ ಹಾಗೆ ಇನ್ನು ಮುಂದೆ ಶ್ರೀ ಶಾಸ್ತ್ರಿಗಳ ಪುಸ್ತಕವನ್ನು ಓದುತ್ತಾರೆನ್ನುವುದರಲ್ಲಿ ಸಂದೇಹವಿಲ್ಲ.

ಗ್ರಂಥಕರ್ತರು ತಯಾರು ಮಾಡಿರುವ ಕರ್ನಾಟಕದ ಅರಸರ ವಂಶಾವಳಿ ಪಟಗಳಿಂದ ಪುಸ್ತಕದ ಉಪಯುಕ್ತತೆಯು ಹೆಚ್ಚು ಮಾಡಲ್ಪಟ್ಟಿದೆ. ಹಾಗೆಯೆ ಕರ್ನಾಟಕದ ನಕಾಶವು, ಮತ್ತು ಕ್ರಮಸೂಚಿ (Index) ಇದ್ದಿದ್ದರೆ ಚೆನ್ನಾಗಿತ್ತು. ಎರಡನೆಯ ಸಂಪುಟವನ್ನು ಶೀಘ್ರವಾಗಿ ಹೊರಪಡಿಸಲೆಂದು ಆಶಿಸುತ್ತೇವೆ.

■

ವಿಮರ್ಶೆ : ೩೧

'ದುರ್ಗಸಿಂಹನ ಪಂಚತಂತ್ರ ಸಮೀಕ್ಷೆ'

ಕ್ರಿ.ಶ. ೧೦೩೧ರಲ್ಲಿ ದುರ್ಗಸಿಂಹನು ಕನ್ನಡಿಸಿದ 'ಪಂಚತಂತ್ರ'ವು ಭಾರತೀಯ ಭಾಷೆಗಳ ಭಾಷಾಂತರಗೊಂಡ ಪಂಚತಂತ್ರಗಳಲ್ಲಿ ಮೊಟ್ಟಮೊದಲನೆಯದು.

ದುರ್ಗಸಿಂಹನ ಪಂಚತಂತ್ರಕ್ಕೆ ಈ ಅಮೂಲ್ಯ ಸ್ವರೂಪ ಏಕೆ ಬಂತೆಂಬುದನ್ನು ವಿವರಿಸುವುದು ಅವರ ಪುಸ್ತಕದ ಮಹತ್ವದ ಭಾಗ. ವಿಷ್ಣುಶರ್ಮನ ಪಂಚತಂತ್ರ ಲಭ್ಯವಿದೆ. ಆದ್ದರಿಂದ ಅವನು ಯಾವ ಯಾವ ಕಥೆಗಳನ್ನು ಬರೆದಿದ್ದಾನೆಂಬುದು ಎಲ್ಲರಿಗೂ ತಿಳಿದಿದೆ. ವಸುಭಾಗನೂ ಒಂದು ಪಂಚತಂತ್ರವನ್ನು ಬರೆದಿದ್ದಾನೆಂಬುದು ಗೊತ್ತಿದೆ. ಆದರೆ ಅವನ ಪುಸ್ತಕ ಎಲ್ಲಿಯೂ ದೊರಕಿಲ್ಲ. ದುರ್ಗಸಿಂಹನು ವಸುಭಾಗನನ್ನು ಭಾಷಾಂತರಿಸಿದ್ದೇನೆಂದು ಹೇಳಿದ್ದಾನೆ. ಮತ್ತು ಅದನ್ನು,

ಪೊಸತಾಗಿದೆ ವಿರಜಿಸುವೆಂ
ವಸುಮತಿಯೊಳ್ ಪಂಚತಂತ್ರಮಂ ಕನ್ನಡದಿ ॥

ಎಂದೂ ಹೇಳಿದ್ದಾನೆ. ಪೊಸತಾಗಿ ಅಂದರೆ ತನಗೆ ಬೇಕಾದ ಹಾಗೆ ಬದಲಾವಣೆ ಮಾಡಿಕೊಂಡಿದ್ದಾನೆಂದು ತಿಳಿದುಕೊಳ್ಳಬೇಕಾಗುತ್ತದೆ. ಯಾಕೆಂದರೆ ಇವನ ಪಂಚತಂತ್ರದಲ್ಲಿ ವಸುಭಾಗ ಭಟ್ಟನ ಪಂಚತಂತ್ರ ಕಥೆಗಳಲ್ಲದೆ ವಿಷ್ಣುಶರ್ಮನ ಕಥೆಗಳು ಮತ್ತು ಅವರಿಬ್ಬರಲ್ಲಿಯೂ ಇಲ್ಲದೆ ಇರುವ ಕಥೆಗಳು ಇವೆ. ಕೆಲವು ಸಲ ದುರ್ಗಸಿಂಹನು ಎರಡೂ ಸಂಪ್ರದಾಯದ ಕಥೆಗಳ ಸಮನ್ವಯವನ್ನು ಮಾಡಿದ್ದಾನೆ. "ದುರ್ಗಸಿಂಹ ಒಳ್ಳೆಯ ಕಥೆಗಾರ. ಕಥೆ ವೈಚಿತ್ರ್ಯಪೂರ್ಣವಾಗಿರಬೇಕೆಂಬ ಉದ್ದೇಶದಿಂದ ಅವನು ತನ್ನದೇ ಆದ ಕೆಲವು ತಿದ್ದುಪಡಿಮಾಡಿಕೊಂಡಿರಬೇಕು." "ಪೊಸತಾಗಿ ವಿರಜಿಸುವೆಂ" ಅನ್ನುವುದರಲ್ಲಿ ಈ ತಿದ್ದುಪಡಿಗಳಿರಬೇಕೆಂದು ಮುಯಿಲಗೋಳರು ಹೇಳುತ್ತಾರೆ.

ದುರ್ಗಸಿಂಹನ ಪಂಚತಂತ್ರ ಕಥೆಗಳ ಮತ್ತು ಇತರ ಪಂಚತಂತ್ರ ಕಥೆಗಳ ತುಲನಾತ್ಮಕವಾದ ಅಭ್ಯಾಸ ಮುಯಿಲಗೋಳರ ಪುಸ್ತಕದ ಇನ್ನೊಂದು ಮಹತ್ವದಭಾಗ. ಉದಾಹರಣಾರ್ಥವಾಗಿ 'ಬ್ರಾಹ್ಮಣನೂ ಮುಂಗಲಿಯೂ' ಎನ್ನುವ ಪ್ರಸಿದ್ಧ ಕಥೆ.

ವಿಷ್ಣುಶರ್ಮ, ತಂತ್ರೋಪಖ್ಯಾನ (ವಸುಭಾಗ ಭಟ್ಟನ ಕಥೆಗಳ ಸಂಸ್ಕೃತ ಭಾಷಾಂತರ), ಪಾಪೋಸದ ತಂತ್ಯ, ಇವುಗಳಲ್ಲಿ ಯಾವ ಯಾವ ರೀತಿ ಹೇಳಲ್ಪಟ್ಟಿದೆಯೆಂದು ವಿಮರ್ಶಿಸಿ, ದುರ್ಗಸಿಂಹನ ಮೇಲ್ಮೆಯ ಬಗ್ಗೆ ಈ ರೀತಿ ಬರೆದಿರುವರು. "ದುರ್ಗಸಿಂಹ ತನ್ನ ಕಥನ ಕಲೆಯ ರೀತಿಯಲ್ಲಿ ಜಾಣ್ಮೆಯನ್ನು ತೋರಿರುವನೆಂದು ಸ್ಪಷ್ಟವಾಗಿ ಕಂಡುಬರುತ್ತದೆ. ಅವನು ಬರೆದ ರೀತಿಯಲ್ಲಿ ಅನೌಚಿತ್ಯವಾದ ಸನ್ನಿವೇಶಗಳು ತೀರ ಕಡಿಮೆ. ತನ್ನದು ಸ್ವತಂತ್ರ ಕೃತಿಯೇ ಎನ್ನುವಂತೆ ಅವನ ಕಥಾಸರಣಿಯಿದ್ದು ಪ್ರಾದೇಶಿಕ ವಾತಾವರಣವನ್ನು ನಿರ್ಮಿಸಿರುವನು. ಸಹಜವಾದ ಸಂಭಾಷಣೆ ಕೊಟ್ಟಿರುವನು."

ವಸುಭಾಗ ಭಟ್ಟನ ಗ್ರಂಥದಲ್ಲಿ ಯಾವ ಯಾವ ಕಥೆಗಳಿದ್ದವೆನ್ನುವುದನ್ನು ಊಹಿಸಿರುವ ಜತೆಗೆ, ಅವನ ಪ್ರಾಂತ ಯಾವದಿರಬಹುದೆಂದು ಹುಯಿಲಗೋಳರು ಊಹಿಸಿದ್ದಾರೆ. ವಸುಭಾಗಭಟ್ಟನು ಗುಣಾಢ್ಯನ ಬೃಹತ್ಕಥೆಯಿಂದ ಪಂಚತಂತ್ರವನ್ನು ತೆಗೆದುಕೊಂಡಿರುವನೆಂದು ದುರ್ಗಸಿಂಹನು ಸ್ಪಷ್ಟವಾಗಿ ಹೇಳಿದ್ದಾನೆ. ವಸುಭಾಗ ಭಟ್ಟನ ಪಂಚತಂತ್ರ ಹೇಗೆ ದೊರಕಿಲ್ಲವೊ, ಅದರ ಮಾತೃವಾದ ಗುಣಾಢ್ಯನ ಪೈಶಾಚಿ ಭಾಷೆಯಲ್ಲಿದೆಯೆಂದು ಹೇಳುವ ಬೃಹತ್ಕಥೆಯು ದೊರಕಿಲ್ಲ. ಅವರಿಬ್ಬರೂ ದಕ್ಷಿಣ ಭಾರತದವರು. ಗುಣಾಢ್ಯ ಗೋದಾವರೀತೀರದ ಪೈಠಣವಾಸಿ. ವಸುಭಾಗನ ಪಂಚತಂತ್ರ ದಕ್ಷಿಣ ಭಾರತದಲ್ಲಿ ಮಾತ್ರ ಪ್ರಚಾರದಲ್ಲಿದ್ದುದರಿಂದ ಅವನೂ ದಕ್ಷಿಣದವನೆ. ಪಂಚತಂತ್ರದ ಕಥೆಗಳು ಒಂದೊಂದು ಭಾಗದಲ್ಲಿ ಒಂದೊಂದು ಸ್ವರೂಪವನ್ನು ತಾಳಿವೆ. ವಸುಭಾಗನ ಪಂಚತಂತ್ರದಲ್ಲಿ ಇಂತಹ ಬದಲಾವಣೆಗಳು ದಕ್ಷಿಣ ಭಾರತದಲ್ಲಿ ಅದರಲ್ಲಿಯೂ ಕರ್ನಾಟಕದಲ್ಲಿ ಆಗಿರಬೇಕು. ದುರ್ಗಸಿಂಹನಿಗೆ ಇಂತಹ ಪಂಚತಂತ್ರವೇ ದೊರಕಿರಬೇಕು.

ಈ ಊಹೆ ಅಷ್ಟು ಅಸಮಂಜಸವಲ್ಲವೆಂಬುದನ್ನು ಶಿಲ್ಪಕಲೆಯಿಂದ ತಿಳಿದುಕೊಳ್ಳಬಹುದು. ರಾಮಾಯಣ ಮಹಾಭಾರತಗಳಂತೆಯೆ ಪಂಚತಂತ್ರ ಕಥೆಗಳು ದೇವಸ್ಥಾನದ ಗೋಡೆಗಳ ಚಿತ್ರಿತವಾಗಿದೆ. ಕರ್ನಾಟಕದಲ್ಲಿ ಪಟ್ಟದಕಲ್ಲು, ಬಳ್ಳಿಗಾಮೆ, ನರಸಮಂಗಲ ಇತ್ಯಾದಿ ಸ್ಥಳಗಳ ದೇವಸ್ಥಾನದಲ್ಲಿ ಈ ಪಂಚತಂತ್ರ ಶಿಲ್ಪಗಳು ದೊರೆಯುತ್ತವೆ. ಭಾರತದಲ್ಲಿ ಇನ್ಯಾವ ಪ್ರಾಂತದಲ್ಲೂ ಈ ತರಹ ಶಿಲ್ಪಗಳು ಇದುವರೆಗೂ ದೊರೆತಿಲ್ಲ. ಜಾವಾದ್ವೀಪದ ಹಲವು ದೇವಾಲಯಗಳಲ್ಲಿ ಪಂಚತಂತ್ರ ಕಥೆಗಳು ಚಿತ್ರಿತವಾಗಿವೆ. ಇದರಿಂದ ಕರ್ನಾಟಕದಲ್ಲಿ ೪ನೆಯ ಶತಮಾನದ ಹೊತ್ತಿಗೆ ಪಂಚತಂತ್ರ ಕಥೆಗಳು ಪ್ರಸಿದ್ಧವಾಗಿದ್ದವೆಂದೂ, ಈ ಕಥೆಗಳ ಶಿಲ್ಪಗಳನ್ನು ದೇವಸ್ಥಾನದ ಗೋಡೆಗಳ ಮೇಲೆ ಚಿತ್ರಿಸುವ ಅಭ್ಯಾಸವು ಕರ್ನಾಟಕದಿಂದ ಜಾವಾಕ್ಕೆ ಹೋಗಿರಬಹುದೆಂದೂ ಊಹಿಸಬಹುದು.

ವಸುಭಾಗನ ಪಂಚತಂತ್ರವು ದಕ್ಷಿಣ ಭಾರತದಲ್ಲಿ ಹೇಗೆ ಪ್ರಚಲಿತವಿತ್ತೋ ಹಾಗೆಯೆ ಆಗ್ನೇಯ ಏಶಿಯಾದ ದೇಶಗಳಲ್ಲಿಯೂ ಪ್ರಚಲಿತವಿತ್ತು. ತಂತ್ರಿ ಕಾಯಂದಕ, ತಂತ್ರಿಕೇದಿರಿ, ತಂತ್ರಿಡೇಯಂಗ, ಮುಲ್ಲಾ ತಂತೈ ಮುಂತಾದವು ಜಾವಾ, ಲಾವೋಸ್, ಥಾಯಿಲೆಂಡ, ಮಲಯಾ ಮುಂತಾದ ದೇಶಗಳಲ್ಲಿ ದೊರೆಯುವ ಪಂಚತಂತ್ರಗಳು, ಭಾರತದಲ್ಲಿ ತಂತ್ರೋಪಖ್ಯಾನ ಮತ್ತು ದುರ್ಗಸಿಂಹನ ಪಂಚತಂತ್ರ – ಇವೆಲ್ಲಾ ವಸುಭಾಗನ ಸಂಪ್ರದಾಯದವು.

ಹೀಗೆ ವಸುಭಾಗನ ಪಂಚತಂತ್ರದ ಕಥೆಗಳನ್ನು ಮತ್ತು ಅವುಗಳನ್ನು ದೇವಸ್ಥಾನದ ಗೋಡೆಗಳ ಮೇಲೆ ಚಿತ್ರಿಸುವ ಅಭ್ಯಾಸವನ್ನು ಕರ್ನಾಟಕದವರು ಆಗ್ನೇಯ ಏಶಿಯಾದ ದೇಶಗಳಲ್ಲಿ ಪ್ರಸಾರ ಮಾಡಿದರೆಂದು ಹೇಳಬಹುದು. ಈವರೆಗೂ ವಸುಭಾಗನನ್ನು ಕುರಿತು ಇಷ್ಟು ವಿವರವಾಗಿ ಎಲ್ಲಿಯೂ ಬಂದಿಲ್ಲವೆಂದು ಈ ಪ್ರಬಂಧದ ಪರೀಕ್ಷಕರ ಅಭಿಪ್ರಾಯಪಟ್ಟುದು ಹುಯಿಲಗೋಳರು ಪಟ್ಟ ಶ್ರಮಕ್ಕೆ ತಕ್ಕ ಪ್ರತಿಫಲ.

ಒಟ್ಟಿನಲ್ಲಿ ಹುಯಿಲಗೋಳರ ಸಂಶೋಧನೆಯ ಫಲಿತಾಂಶವನ್ನು ಹೀಗೆ ಹೇಳಬಹುದು. ಗುಣಾಢ್ಯನ ಬೃಹತ್ಕಥೆಯಿಂದ ವಸುಭಾಗ ಭಟ್ಟನು ಪಂಚತಂತ್ರ ಕಥೆಗಳನ್ನು ಆರಿಸಿದನು. ಅವನ ಕಥೆಗಳನ್ನಾಧರಿಸಿದ ಗ್ರಂಥಗಳೆಲ್ಲಾ ದಕ್ಷಿಣ ಭಾರತದಲ್ಲಿ ಮಾತ್ರ ದೊರಕುವುದರಿಂದ ಅವನು ದಕ್ಷಿಣ ಭಾರತದವನು. ಈ ಕಥೆಗಳು ಬಾದಾಮಿ ಚಾಳುಕ್ಯರ ಕಾಲದಲ್ಲಿ ಮತ್ತು ನಂತರ ಆಗ್ನೇಯ ಏಶಿಯಾ ದೇಶಗಳಿಗೂ ಪ್ರವಾಸಮಾಡಿ ಅಲ್ಲಿ ಬೇರೆ ಬೇರೆ ರೂಪಾಂತರವಾದವು. ಅಲ್ಲಿ ಅವು ಎಷ್ಟು ಜನಪ್ರಿಯವಾದವೆಂದರೆ ಅವು ದೇವಸ್ಥಾನದ ಗೋಡೆಗಳ ಮೇಲೂ ಮೂಡಿಬಂದವು. ಕರ್ನಾಟಕದಲ್ಲಿಯೂ ಅವು ಅದೇ ರೀತಿ ಜನಪ್ರಿಯವಾಗಿದ್ದವು. ದುರ್ಗಸಿಂಹನು ಇವುಗಳನ್ನು ಮತ್ತು ವಿಷ್ಣುಶರ್ಮನ ಪಂಚತಂತ್ರ ಕಥೆಗಳನ್ನು ಸಮನ್ವಯಿಸಿ ತನ್ನದೇ ಆದ ಕಥೆಗಳನ್ನು ಸೇರಿಸಿ ಪಂಚತಂತ್ರವನ್ನು ಬರೆದನು. ಅವನು ಒಳ್ಳೆಯ ಕಥೆಗಾರನಾಗಿದ್ದುದರಿಂದ ಯಾವ ಪಂಚತಂತ್ರಕ್ಕೆ ಹೋಲಿಸಿದರೂ ಅವನ ಕಥೆಗಳ ಸ್ವಾರಸ್ಯ ಕಡಿಮೆಯೆಂದು ತೋರುವುದಿಲ್ಲ. ಈ ರೀತಿಯಾಗಿ ಕನ್ನಡ ಮತ್ತು ಭಾರತೀಯ ಸಾಹಿತ್ಯಗಳಲ್ಲಿ ದುರ್ಗಸಿಂಹನ ಸ್ಥಾನಮಾನವನ್ನು ಯೋಗ್ಯ ರೀತಿಯಲ್ಲಿ ಗುರುತುಮಾಡಿದ್ದಾರೆ.

■

ವಿಮರ್ಶೆ : ೩೨

ನೀತಿವಾಕ್ಯಾಮೃತದ ಟೀಕಾಕಾರ ನೇಮಿನಾಥನ ಕಾಲ ಮತ್ತು ದೇಶ

ಸೋಮದೇವಸೂರಿಯ ನೀತಿವಾಕ್ಯಾಮೃತವು ಸಂಸ್ಕೃತ ರಾಜನೀತಿ ಗ್ರಂಥ. ಕೌಟಿಲ್ಯನ ಅರ್ಥಶಾಸ್ತ್ರವು ರಾಜನೀತಿ ಶಾಸ್ತ್ರದಲ್ಲಿ ಮೊದಲನೆ ಗ್ರಂಥವಾದರೆ, ನೀತಿವಾಕ್ಯಾಮೃತವು ಕೊನೆಯ ಗ್ರಂಥ. ಇದರ ಲೇಖಕ ಸೋಮದೇವನು, ಕ್ರಿ.ಶ. ೯೮೩ರಲ್ಲಿ[೧] ಕೊಪ್ಪಳದಲ್ಲಿ ನಿಧನ ಹೊಂದಿದನು. ಅದಕ್ಕೆ ಮುಂಚೆ ನೀತಿವಾಕ್ಯಾಮೃತವನ್ನು ಅವನು ಬರೆದಿರಬೇಕು. ಈ ಗ್ರಂಥಕ್ಕೆ ನೇಮಿನಾಥನೆಂಬ ಜೈನ ಕವಿ ಕನ್ನಡದಲ್ಲಿ ಟೀಕೆಯನ್ನು ಬರೆದಿರುವನು. ಈ ಟೀಕೆಯ ಹಸ್ತಪ್ರತಿಗಳು ಮೂಡಬಿದಿರೆ ಮತ್ತು ಕಾರ್ಕಳಗಳಲ್ಲಿರುವ ಜೈನಗ್ರಂಥ ಭಂಡಾರಗಳಲ್ಲಿವೆ. ಇದುವರೆಗು ಈ ಟೀಕೆ ಪ್ರಕಟವಾಗಿಲ್ಲ.

ಟೀಕಾಕಾರ ನೇಮಿನಾಥನ ಕಾಲ ಮತ್ತು ದೇಶಗಳನ್ನು ಪತ್ತೆ ಹಚ್ಚುವುದು ಈ ಪ್ರಬಂಧದ ಉದ್ದೇಶ. ಈ ಟೀಕೆಯ ಕೊನೆಯ ಭಾಗದಲ್ಲಿರುವ ಪದ್ಯ ಮತ್ತು ಗದ್ಯಗಳಿಂದ ಈ ದಿಶೆಯಲ್ಲಿ ಕೆಲವು ಸೂಚನೆಗಳು ದೊರೆಯುತ್ತವೆ. ಆದ್ದರಿಂದ ಆ ಭಾಗಗಳನ್ನು ಈಗ ನೋಡೋಣ. ತನ್ನ ಗುರುಗಳ ಬಗ್ಗೆ ಹೀಗೆ ಹೇಳಿದ್ದಾನೆ: **"ಮೇಘ ಚಂದ್ರ ತ್ರೈವಿದ್ಯ ದೇವ ದಿವ್ಯ ಪ್ರಸಾದಾಸಾದಿತಾತ್ಮ ಪ್ರಭಾವ ಶ್ರೀಮದ್ ವೀರಣಂದಿ ಸೈದ್ಧಾಂತಿಕ ದೇವ ಪ್ರಸಾದ ಪ್ರಾಪ್ತ ಪ್ರಸನ್ನ ಕವಿತಾ ರಾಮ ಸಮಾರಾಧಿತ ವಿವಿಧ ಪ್ರೇಮ ನಿಜಕುಲ ಕುವಲಯಾನಂದ ಸೋಮ ಪೂರ್ವದಲ್ಲಿ ಸಂದೀ ವಿಗ್ರಹೀ ಪದವೀಸನಾಥ ಶ್ರೀ ನೇಮಿನಾಥ ವಿರಚಿತ ನೀತಿವಾಕ್ಯಾಮೃತ ವೃತ್ತಿ."** ಇದರಿಂದ ತಾನು ತನ್ನ ಗುರು ವೀರಣಂದಿಯಿಂದ ಕವಿತೆಯನ್ನು ಕಲಿತೆನೆಂದು, ಮತ್ತು ಈ ವೀರಣಂದಿಯ ಗುರು ಮೇಘಚಂದ್ರ ತ್ರೈವಿದ್ಯನೆಂದೂ ಹೇಳಿರುವುದಲ್ಲದೆ, ತಾನು ಸಂಧಿವಿಗ್ರಹಿಯಾಗಿದ್ದೆನೆಂದೂ ಮತ್ತು ವೃತ್ತಿಯಿಂದ ನಿವೃತ್ತನಾದ ಮೇಲೆ ಈ ಟೀಕೆಯನ್ನು ಬರೆದೆನೆಂದೂ ಹೇಳಿದ್ದಾನೆ.

---

೧. ಕೊಪ್ಪಳಶಾಸನಗಳು : (ಸಂ.) ಹಂಪ ನಾಗರಾಜಯ್ಯ, ಶಾಸನ ಸಂಖ್ಯೆ ೩೯

ನೇಮಿನಾಥನ ಗುರು ವೀರಣಂದಿಯು ಆಚಾರಸಾರವೆಂಬ ಗ್ರಂಥವನ್ನು ಸಂಸ್ಕೃತದಲ್ಲಿ ಮೊದಲು ಬರೆದು ನಂತರ ಅದಕ್ಕೆ ತಾನೇ ಕನ್ನಡದಲ್ಲಿ ಟೀಕೆಯನ್ನು ಶಕವರ್ಷ ೧೦೭೬ ಅಥವಾ ಕ್ರಿ.ಶ. ೧೧೫೩ರಲ್ಲಿ ಬರೆದನೆಂದು ಆ ಟೀಕೆಯ ಕೊನೆಯಲ್ಲಿ ಹೀಗೆ ಹೇಳುತ್ತಾನೆ: "ಶ್ರೀಮದ್ವೀರಣಂದಿ ಸಿದ್ಧಾಂತ ಚಕ್ರವರ್ತಿಗಳ ಶಕವರ್ಷ ೧೦೭೬ ಶ್ರೀಮುಖಸಂವತ್ಸರ ಜ್ಯೇಷ್ಠ ಶುಕ್ಲ ಸೋಮವಾರದಂದು ತಾವು ಮಾಡಿದಾಚಾರಸಾರಕ್ಕೆ ಕರ್ನಾಟಕ ವೃತ್ತಿಯ ಮಾಡಿದವರ್." ವೀರಣಂದಿಯ ಗುರು ಮೇಷಚಂದ್ರ ತ್ರೈವಿದ್ಯನು ಕ್ರಿ.ಶ. ೧೧೪೮ರಲ್ಲಿ ಪೂಜ್ಯಪಾದಕೃತ 'ಸಮಾಧಿಶತಕ'ಕ್ಕೆ ಕನ್ನಡ ವ್ಯಾಖ್ಯಾನವನ್ನು ಬರೆದರು.[೨] ಇವರಿಬ್ಬರ ಪರಂಪರೆಗೆ ಸೇರಿದ ನೇಮಿನಾಥನು ಅವರ ಪದ್ಧತಿಯನ್ನು ಅನುಸರಿಸಿ ತನ್ನ ಕನ್ನಡ ಟೀಕೆಯನ್ನು ೧೨ನೇ ಶತಮಾನದ ಕೊನೆಯ ಭಾಗದಲ್ಲಿ ಅಥವಾ ೧೩ನೇ ಶತಮಾನದ ಆದಿಭಾಗದಲ್ಲಿ ಬರೆದಿರಬೇಕು. ಹೀಗೆ ಹೇಳುವುದಕ್ಕೆ ಇನ್ನೊಂದು ಕಾರಣ, ನೇಮಿನಾಥನು ತನ್ನ ಟೀಕೆಯ ಕೊನೆಯ ಭಾಗದಲ್ಲಿ, ಮೇಘಚಂದ್ರ ಮತ್ತು ವೀರಣಂದಿಗಳನ್ನಲ್ಲದೆ, ಶ್ರೀರಾಮ ಚಂದ್ರಮುನಿಯನ್ನು ಹೀಗೆ ಸ್ತುತಿಸಿದ್ದಾನೆ. ಶ್ರೀ ರಾಮಚಂದ್ರಮುನಿಚಂದ್ರ ಮಹಂ ನಮಾಮಿ ಎಂದು ಮತ್ತು ಗ್ರಂಥದ ಕೊನೆಯ ವಾಕ್ಯದಲ್ಲಿ ಅದೇ ಮುನಿಯನ್ನು ತಪೋಜ್ವಲಾಗಿಹೃತ ದರ್ಪಕ ದರ್ಪವಿಶೇಷ ರಾಮಚಂದ್ರ ವೃತ್ತಿಗಳ್ ಎಂದಿರುವುದರಿಂದ, ಈ ಮುನಿಗಳ ಬಗ್ಗೆ ಅವನಿಗೆ ವಿಶೇಷ ಗೌರವವಿತ್ತೆಂದು ಊಹಿಸಬಹುದು. ಈ ರಾಮಚಂದ್ರಮುನಿಯು ಬೇಲೂರು ೧೯೯ನೇ[೩] ಶಾಸನದ ಪ್ರಕಾರ, ಹಳೇಬೀಡಿನ ಸುತ್ತಮುತ್ತಲ ಬಸದಿಗಳಿಗೆ ಕ್ರಿ.ಶ. ೧೧೯೬ರಲ್ಲಿ ಆಚಾರ್ಯನಾಗಿದ್ದನು. ಇವನೇ ಜನ್ನ ಮಹಾಕವಿಯ ಗುರು. ಜನ್ನನು ತನ್ನ ಅನಂತನಾಥಪುರಾಣದಲ್ಲಿ (೧೨೩೦) ಆಗಾಧವಾಗಿ ಇವನನ್ನು ಸ್ತುತಿಸಿದ್ದಾನೆ. ಆದ್ದರಿಂದ ರಾಮಚಂದ್ರಮುನಿಯು ಹನ್ನೆರಡನೆಯ ಶತಮಾನದ ಕಟ್ಟ ಕಡೆಗೆ ಮತ್ತು ಹದಿಮೂರನೆಯ ಶತಮಾನದ ಆದಿಭಾಗದಲ್ಲಿ ಹಳೇಬೀಡಿನಲ್ಲಿ ಪ್ರಭಾವಶಾಲಿಯಾಗಿದ್ದಿರಬೇಕು. ವೀರಣಂದಿಯ ಶಿಷ್ಯ ಮತ್ತು ರಾಮಚಂದ್ರಮುನಿಯ ಅಭಿಮಾನಿಯಾದ ನೇಮಿನಾಥನು ಹನ್ನೆರಡನೆಯ ಶತಮಾನದ ಉತ್ತರಾರ್ಧದಲ್ಲಿಯೂ ಮತ್ತು ಹದಿಮೂರನೆಯ ಶತಮಾನದ ಮೊದಲ ಭಾಗದಲ್ಲಿಯೂ ಜೀವಿಸಿರಬೇಕು ಮತ್ತು ತನ್ನ ಟೀಕೆಯನ್ನು ಸುಮಾರು ೧೨೦೦ ರಲ್ಲಿ ಬರೆದನೆಂದು ಹೇಳಬಹುದು.

ನೇಮಿನಾಥನ ಕಾಲವನ್ನು ನಿರ್ಧರಿಸಿದ ನಂತರ, ಅವನ ದೇಶ ಮತ್ತು ವೃತ್ತಿಯ ಬಗ್ಗೆ ಈಗ ತಿಳಿದುಕೊಳ್ಳೋಣ. ನೇಮಿನಾಥನು ಗ್ರಂಥಾಂತ್ಯ ಗದ್ಯದಲ್ಲಿ

---

೨. ಆರ್ ನರಸಿಂಹಾಚಾರ್ : ಕರ್ನಾಟಕ ಕವಿ ಚರಿತ್ರೆ, ಸು. ೧ ಪು ೧೭೭

೩. ಎಲ್. ರೈಸ್ ಸಂಪಾದಿತ ಎ.ಕಾ. V ಬೇಲೂರು ೧೯೫.

"ಪೂರ್ವದಲ್ಲಿ ಸಂಧಿವಿಗ್ರಹೀ ಪದವೀಸನಾಥನು ಶ್ರೀ ನೇಮಿನಾಥ ವಿರಜಿತ ನೀತಿವಾಕ್ಯಾಮೃತವೃತ್ತಿ" ಎಂದಿರುವುದರಿಂದ ಅವನ ವೃತ್ತಿ ಸಂಧಿವಿಗ್ರಹಿ ಎಂದೂ ಮತ್ತು ಅದರಿಂದ ನಿವೃತ್ತನಾದ ಮೇಲೆ ಈ ವೃತ್ತಿಯನ್ನು ಬರೆದೆನೆಂದು ಹೇಳಿದ್ದಾನೆ. ಗ್ರಂಥಾಂತ್ಯದ ಎರಡನೆಯ ಪದ್ಯದಲ್ಲಿ "ಕೋಡನ ಪೂರ್ವದವಳ್ಳಿಯ ರೂಢಿಗೆ ನಿಲೆಯಾದ ಸಂಧಿವಿಗ್ರಹಿ ನಾಮಂಕೂಡೆ ಜನಂ ಪೊಗಳ್ವಂತಿರೆ ಮಾಡಿದನೀವೃತ್ತಿ" ಎಂದಿರುವುದರಿಂದ ಅವನ ಊರು ಕೋಡನ ಪೂರ್ವದವಳ್ಳಿಯೆಂದೂ, ಮತ್ತು ಇವನಿಗೆ "ಸಂಧಿವಿಗ್ರಹಿ" ಎನ್ನುವ ಹೆಸರು ಜನಗಳಲ್ಲಿ ರೂಢಿಯಾಗಿ ನೆಲೆಯಾಗಿ ನಿಂತಿತೆಂದೂ, ಜನರು ಹೊಗಳುವಂತೆ ಈ ವೃತ್ತಿಯನ್ನು ರಚಿಸಿದನೆಂದು, ಬರೆ ಸಾಮಾನ್ಯಜನರಲ್ಲಿ ಮಾತ್ರವಲ್ಲ, ಪಂಡಿತರಲ್ಲಿಯೂ ಈ ವೃತ್ತಿ ಪ್ರಶಂಸಿಸಲ್ಪಟ್ಟಿತ್ತೆನ್ನುವುದು 'ಬುಧಜನವಿನುತ' ಎನ್ನುವ ಮಾತಿನಿಂದ ಸ್ಪಷ್ಟವಾಗುತ್ತದೆ.

ಇಷ್ಟೆಲ್ಲಾ ಪ್ರಸಿದ್ಧವಾದ ಟೀಕಾಕಾರನ ಊರು ಕೋಡನ ಪೂರ್ವದವಳ್ಳಿ ಎಲ್ಲಿದೆ, ಇವನು ಯಾರ ಆಸ್ಥಾನದಲ್ಲಿ ಸಂಧಿವಿಗ್ರಹಿಯಾಗಿದ್ದ ಮತ್ತು ಯಾವಾಗ – ಇವೆಲ್ಲಾ ಕುತೂಹಲಕಾರಿ ಪ್ರಶ್ನೆಗಳಾಗಿವೆ. ಮೊದಲು ಕೋಡನಪೂರ್ವದವಳ್ಳಿಯನ್ನು ತೆಗೆದುಕೊಳ್ಳೋಣ. ಕೋಡ+ಪಳ್ಳಿ–ಪಕಾರಕ್ಕೆ ವಕಾರ ಆದೇಶವಾಗಿ ಕೋಡವಳ್ಳಿ ಆಯಿತು. ಸಂಸ್ಕೃತದಲ್ಲಿ ಮತ್ತು ಕನ್ನಡದಲ್ಲಿ ಪದ್ಯವನ್ನು ಬರೆಯುವಾಗ ಕೆಲವು ಸಲ ಛಂದಸ್ಸಿನ ಸಲುವಾಗಿ ಒಂದು ಹೆಸರಿನ ಎರಡು ಭಾಗಗಳ ಮಧ್ಯ 'ಪೂರ್ವದ' ಎಂಬ ಮಾತು ಸೇರುತ್ತದೆ. ಶ್ರೀರಂಗಪಟ್ಟಣವನ್ನು ಶ್ರೀರಂಗಪೂರ್ವಪಟ್ಟಣವೆಂದು ಬರೆಯಲಾಗಿದೆ. ನಪುಂಸಕಲಿಂಗದ ಅಕಾರಾಂತ ನಾಮಪದಗಳಿಗೆ ವಿಭಕ್ತಿಪ್ರತ್ಯಯವು ಸೇರುವಾಗ "ದ" ಮತ್ತು "ನ" ಆಗಮವಾಗುತ್ತದೆ. ಹಳೆಗನ್ನಡದಲ್ಲಿ ಉಂಟು ಕೋಡ+ಅ=ಕೋಡನ (ಕೋಡದ) ಆದ್ದರಿಂದ ಕೋಡನ ಪೂರ್ವದವಳ್ಳಿ ಎಂಬ ಪ್ರಯೋಗ ವ್ಯಾಕರಣ ನಿಯಮಾನುಸಾರವಾಗಿದೆ. ಇದರ ಅರ್ಥ ಕೋಡ ಎಂಬ ಪದವು ಪೂರ್ವಪದವಾಗಿ ಉಳ್ಳಕೋಡವಳ್ಳಿ ಆದ್ದರಿಂದ ನಾವು ಹುಡುಕಬೇಕಾದ್ದು ಈ ಕೋಡವಳ್ಳಿಯನ್ನು. ವಿ.ವಿ. ಮಿರಾಶಿಯವರು ಸಂಪಾದಿಸಿರುವ 'Inscriptions of the Silaharas' ಎನ್ನುವ ಗ್ರಂಥದಲ್ಲಿ ೪೬ನೇ ಸಂಖ್ಯೆಯ ಶಾಸನ ಶಕ ೧೦೪೮ರ ಗಂಡರಾದಿತ್ಯನ ಕೊಲ್ಲಾಪುರದ ತಾಮ್ರ ಪಟಗಳು – ಈ ಶಾಸನ ಕ್ರಿ.ಶ. ೧೧೨೬. ಈ ಶಾಸನದಲ್ಲಿ ದಾನವಾದ ಗ್ರಾಮ ಕೋಡಿ ನಿಜವಾಡವು, ಕೋಡವಳ್ಳಿ ಕಂಪಣ ಮತ್ತು ಮಿರಿಂಜಿ (ಮಿರಜ್) ದೇಶದಲ್ಲಿತ್ತು. ಈ ಕೋಡವಳ್ಳಿ ಕಂಪಣದ ಈಗಿನ ಹೆಸರು ಕೋಡ್ಡೋಲಿ. ಇದು ಕೊಲ್ಲಾಪುರಕ್ಕೆ ಏಳು ಮೈಲಿ ಪೂರ್ವದಲ್ಲಿದೆ. ಈ ಕೋಡವಳ್ಳಿಯು ನಮ್ಮ ನೇಮಿನಾಥನ ಊರಾಗಿರಬೇಕು. ಕೊಲ್ಲಾಪುರದಲ್ಲಿ ಹನ್ನೆರಡನೆಯ ಶತಮಾನದ ಆದಿಭಾಗದಲ್ಲಿ ಶಿಲಾಹಾರ ಅರಸು ಗಂಡರಾದಿತ್ಯನು

ಆಳುತ್ತಿದ್ದನು. ಇವನು ಮತ್ತು ಇವನ ಸಾಮಂತ ನಿಂಬರಸನು[೪] ಜೈನಯತಿ ಮಾಘಣಂದಿಯ ಶಿಷ್ಯರು. ಈ ಮೂವರು ಕೊಲ್ಲಾಪುರದಲ್ಲಿ ರೂಪನಾರಾಯಣ ಬಸದಿ ಮತ್ತು ಪಾರ್ಶ್ವನಾಥ ಬಸದಿಗಳನ್ನು ಕಟ್ಟಿಸಿ ಅದನ್ನು ಒಂದು ಜೈನತೀರ್ಥವನ್ನಾಗಿ ಮಾಡಿದ್ದರು.[೫] ಮಾಘಣಂದಿಯ ಶಿಷ್ಯ ಮೇಘಚಂದ್ರತ್ರೈವಿದ್ಯ. ಅವನ ಶಿಷ್ಯ ವೀರಣಂದಿ ಸೈದ್ಧಾಂತಿಕ. ಇವರಿಬ್ಬರೂ ಹನ್ನೆರಡನೆಯ ಶತಮಾನದ ಮಧ್ಯಭಾಗದಲ್ಲಿ ಸಂಸ್ಕೃತ ಗ್ರಂಥಗಳಿಗೆ ಕನ್ನಡ ಟೀಕೆಗಳನ್ನು ಬರೆದಿರುವುದನ್ನು ಮತ್ತು ವೀರಣಂದಿಯ ಶಿಷ್ಯ ನೇಮಿನಾಥನು ಆ ಶತಮಾನದ ಅಂತ್ಯದಲ್ಲಿ ಅವರುಗಳನ್ನು ಅನುಸರಿಸಿ ಕನ್ನಡ ಟೀಕೆಯನ್ನು ಬರೆದಿರುವುದನ್ನು ಮೇಲೆ ನೋಡಿದ್ದೇವೆ. ಆ ಶತಮಾನದಲ್ಲಿ ಕೊಲ್ಲಾಪುರದ ಶಿಲಾಹಾರರು ಜೈನ ಮತಕ್ಕೂ ಮತ್ತು ಕನ್ನಡ ಸಾಹಿತ್ಯಕ್ಕೂ ಉದಾರವಾಗಿ ಪ್ರೋತ್ಸಾಹವನ್ನು ನೀಡಿದರು. ಅವರು ಕನ್ನಡ ಸಾಹಿತ್ಯಕ್ಕೆ ಪ್ರೋತ್ಸಾಹ ನೀಡಿದ ಕಾರಣ, ಅವರು ಕನ್ನಡಿಗರು, ಅವರ ಮಾತೃಭಾಷೆ ಕನ್ನಡ, ಅವರ ಬಿರುದುಗಳು ಕನ್ನಡದಲ್ಲಿವೆ. ಅವರ ಶಾಸನಗಳೆಲ್ಲಾ ಮೊದಲಿನಿಂದ ಕೊನೆಯವರೆಗು ಕನ್ನಡದಲ್ಲಿವೆ.[೬] ನಮ್ಮ ಟೀಕಾಕಾರ ನೇಮಿನಾಥನು ಕೊಲ್ಲಾಪುರದವನಾದ್ದರಿಂದ ಅಲ್ಲಿಯ ಶಿಲಾಹಾರ ಅವರಿಂದ ಪ್ರೋತ್ಸಾಹಿಸಲ್ಪಟ್ಟಿದ್ದನೆಂದು ನಾವು ಊಹಿಸಬಹುದು.

ನೇಮಿನಾಥನ ಕಾಲ ಮತ್ತು ದೇಶಗಳು ನಿರ್ಧಾರವಾದ ಮೇಲೆ, ಅವನ ವೃತ್ತಿಯ ಬಗ್ಗೆ ಈಗ ತಿಳಿದುಕೊಳ್ಳೋಣ. ಪ್ರೊ॥ ಮಾಧವ ಎನ್. ಕಟ್ಟಿಯವರು Journal of the Epigraphical Society of India ಇದರ ೧೯೮೭ರ ನಾಲ್ಕನೆಯ ಸಂಪುಟದಲ್ಲಿ ಪ್ರಕಟಿಸಿರುವ ಶಿಲಾಹಾರ ವಿಜಯಾದಿತ್ಯನ ಕಾಲದ ತಾಮ್ರ ಶಾಸನದಲ್ಲಿರುವ ಕೆಲವು ವಿವರಗಳು ನಮಗೆ ಪ್ರಸ್ತುತ. ಪಂಪನ ಅಂದರೆ ಅಭಿನವ ಪಂಪನ ಮೊಮ್ಮಗ ಕೂಜಿರಾಜ(ಯ್ಯ)ನು ಶಿಲಾಹಾರ ಗಂಡರಾದಿತ್ಯನ ಸಂಧಿವಿಗ್ರಹಿಯಾಗಿದ್ದನು. ಈ ಶಾಸನದ ಕಾಲ ೨೧-೧೨-೧೧೫೪. ಈ ತೇದಿಯಾದ ಮೇಲೆ ಯಾರು ಶಿಲಾಹಾರರ ಸಂಧಿವಿಗ್ರಹಿಯಾಗಿದ್ದರೆಂದು ತಿಳಿಯ ಬರುವುದಿಲ್ಲ. "ಪೂರ್ವದಲ್ಲಿ ಸಂಧಿವಿಗ್ರಹಿ ಪದವೀಸನಾಥನಾಗಿದ್ದ" ನೇಮಿನಾಥನು ಕೊಲ್ಲಾಪುರದ ಶಿಲಾಹಾರ ಆಸ್ಥಾನದಲ್ಲಿ ಸಂಧಿವಿಗ್ರಹಿಯಾಗಿದ್ದನೆನ್ನುವುದಕ್ಕೆ

---

೪. ಎಂ.ಎಂ. ಕಲಬುರ್ಗಿ : (ಸಂ.) ನಿಂಬಸಾಮಂತ ಚರಿತೆ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೮೧

೫. ತೇರವಾಳ ಶಾಸನ ಪಿ.ಪಿ. ಮಿರಾಶಿ (ಸಂ.) ಶಿಲಾಹಾರರ ಶಾಸನಗಳು, ಪು. ೨೩೬ ಮತ್ತು ೨೨, ಅದೇ ಪುಟದಲ್ಲಿರುವ ೩೦ನೇ ಸಂಖ್ಯೆಯ ಗಂಡರಾದಿತ್ಯನ ಕಾಲದ ಕೊಲ್ಲಾಪುರದ ಶೇಷಶಾಯಿ ದೇವಸ್ಥಾನದ ಶಾಸನ.

೬. ಮಿರಾಶಿಯವರ ಮೇಲೆ ಹೇಳಿದ ಪುಸ್ತಕ ಪ್ರಸ್ತಾವನೆ ಪು. IXXIX.

ಅವಕಾಶವಿದೆಯೆನ್ನುವುದನ್ನು ಈಗ ನೋಡೋಣ. ಅವನು ಕೊಲ್ಲಾಪುರದವನು. ಅವನಿಗೆ ಈ ನೀತಿ ಶಾಸ್ತ್ರದಲ್ಲಿ ಅಪಾರ ಆಸಕ್ತಿ ಇತ್ತೆಂದೇ ಅವನು ಆಗ ಕರ್ನಾಟಕದಲ್ಲಿ ಪ್ರಸಿದ್ಧ ರಾಜನೀತಿಶಾಸ್ತ್ರಗ್ರಂಥವಾದ ಸೋಮದೇವ ಸೂರಿಯ ನೀತಿವಾಕ್ಯಾಮೃತಕ್ಕೆ ಟೀಕೆಯನ್ನು ಬರೆಯಲು ಆರಿಸಿದನು. ಅವನೇ ಹೇಳುವ ಹಾಗೆ ಅವನು ಸಂಧಿವಿಗ್ರಹಿ ಪದವಿಯಿಂದ ನಿವೃತ್ತನಾದ ಮೇಲೆ ಈ ಟೀಕೆಯನ್ನು ಬರೆದನು. ಆಗ ರಾಜನೀತಿಶಾಸ್ತ್ರದ ತತ್ವಗಳು ಮಾತ್ರ ಗೊತ್ತಿರದೆ ಅವುಗಳ ಆಚರಣೆಯಲ್ಲಿಯೂ ಪರಿಣತನಾಗಿರಬೇಕು. ಆದ್ದರಿಂದಲೇ ಅವನು ನಿವೃತ್ತನಾದ ಮೇಲೂ ಸಂಧಿವಿಗ್ರಹಿ ಎನ್ನುವ ಹೆಸರು ಜನರಲ್ಲಿ ರೂಢಿಯಾಗಿ ನೆಲೆಯಾಗಿ ನಿಂತಿತ್ತು. ಇಂತಹ ಕೊಲ್ಲಾಪುರದ ನಿವಾಸಿ ಅಲ್ಲಿಯ ಶಿಲಾಹಾರರ ಆಸ್ಥಾನದಲ್ಲಿ ಸಂಧಿವಿಗ್ರಹಿಯಾಗಿದ್ದರೆ ಏನು ಆಶ್ಚರ್ಯ! ಕ್ರಿ.ಶ. ೧೧೫೪ರವರೆಗು ಕೊಲ್ಲಾಪುರದಲ್ಲಿ ಯಾರು ಯಾರು ಸಂಧಿವಿಗ್ರಹಿಯಾಗಿದ್ದರೆನ್ನುವುದನ್ನು ನಾವು ಮೇಲೆ ನೋಡಿದ್ದೇವೆ. ಅದಾದ ನಂತರ ವಿಜಯಾದಿತ್ಯ ಮತ್ತು ಎರಡನೆಯ ಭೋಜನ ಕಾಲದಲ್ಲಿ ನೇಮಿನಾಥನು ಆ ಶತಮಾನದ ಕೊನೆಯ ಅವಧಿಯಲ್ಲಿ ಸಂಧಿವಿಗ್ರಹಿಯಾಗಿರಲು ಅವಕಾಶವಿದೆ. ಅವನು ಸಂಧಿವಿಗ್ರಹಿಯಾಗಿರುವಾಗ, ಎರಡನೆಯ ಭೋಜನ ಕಾಲದಲ್ಲಿ ದೇವಗಿರಿಯ ಯಾದವ ಸಿಂಘಣನು ಭೋಜನನ್ನು ಸೋಲಿಸಿ ಶಿಲಾಹಾರರನ್ನು ನಿರ್ನಾಮ ಮಾಡಿದನು. ಇದು ಆಗಿದ್ದು ಸು. ೧೨೧೨ರಲ್ಲಿ ಆದ್ದರಿಂದ ನೇಮಿನಾಥನು ೧೧೫೪ ರಿಂದ ೧೨೧೨ರೊಳಗೆ ಶಿಲಾಹಾರ ವಿಜಯಾದಿತ್ಯ ಮತ್ತು ಎರಡನೆಯ ಭೋಜನ ಆಸ್ಥಾನದಲ್ಲಿ ಸಂಧಿವಿಗ್ರಹಿಯಾಗಿರಬೇಕು.[೭]

ಶಿಲಾಹಾರನು ನಾಶವಾದ ವೇಳೆಯಲ್ಲಿಯೇ ಕಲ್ಯಾಣದ ಚಾಲುಕ್ಯರ ಸಾಮ್ರಾಜ್ಯವು ಕ್ರಿ.ಶ. ೧೨೦೦ ರಲ್ಲಿ ಕೊನೆಗೊಂಡಿತು. ಹೀಗಾಗುವುದು ಮೊದಲೇ ಅಲ್ಲಿಯ ಜನರಿಗೆ ಗೊತ್ತಿತ್ತು. ಕಲ್ಯಾಣದ ಚಾಲುಕ್ಯರ ಬಲವು ಕುಂದುತ್ತಾ ಬಂದಿತ್ತು. ಉತ್ತರದಿಂದ ಯಾದವರು, ದಕ್ಷಿಣದಿಂದ ಹೊಯ್ಸಳರು ಅವರ ಮೇಲೆ ದಾಳಿಮಾಡಲು ಆರಂಭಿಸಿದ್ದರು. ಆಗ ಉತ್ತರ ಕರ್ನಾಟಕದಿಂದ ಸಾಹಿತಿಗಳು, ಕಲಾವಿದರು, ಮತ್ತು ಯೋಧರು ಹೊಯ್ಸಳರ ಆಸ್ಥಾನಕ್ಕೆ ಆಶ್ರಯವನ್ನು ಬಯಸಿ ಹೋದರೆಂದು ಊಹಿಸಬಹುದು. ಹಂಪೆಯ ಹರಿಹರ, ಬಳ್ಳಿಗಾವೆಯ ಶಿಲ್ಪಿ ದಾಸೋಜ, ಮುಳುಗುಂದದ ಯೋಧ ಅನಂತದಂಡನಾಯಕ ಇವರಂತೆ ನೇಮಿನಾಥನು ಶಿಲಾಹಾರವು ನಾಶವಾಗುವ ಸ್ವಲ್ಪ ಮುಂಚೆ ಕೊಲ್ಲಾಪುರದಿಂದ ಹಳೇಬೀಡಿಗೆ ಹೋಗಿರಬೇಕು. ಹಳೇಬೀಡಿನಲ್ಲಿ ಈತನು ಇದ್ದುದಕ್ಕೆ ಸಾಕ್ಷಿ ಇವನು ಅಲ್ಲಿ

---

೭. ಮೇಲಿನ ಪುಸ್ತಕ, ಪು. XXIV.

ಪ್ರಭಾವಶಾಲಿಯಾಗಿದ್ದ ರಾಮಚಂದ್ರ ಯತಿಯ ಮನ್ನಣೆಯನ್ನು ಆಶಿಸಿದ್ದು. ಆದ್ದರಿಂದ ಸು. ೧೨೦೦ರಲ್ಲಿ ಹಳೇಬೀಡಿನಲ್ಲಿ ನೇಮಿನಾಥನು ತನ್ನ ಟೀಕೆಯನ್ನು ಬರೆದನೆಂದು ಊಹಿಸಿಬಹುದು.

■

---

*೧. ವಿ.ವಿ. ಮಿರಾಶಿಯವರ ಶಿಲಾಹಾರರ ಶಾಸನಗಳು. ಈ ಪುಸ್ತಕವು, ೧೨ನೇ ಶತಮಾನದಲ್ಲಿ ಕೊಲ್ಲಾಪುರದಲ್ಲಿ ಜೈನ ಮತ್ತು ಕನ್ನಡ ವಾತಾವರಣವು ಇತ್ತು ಎನ್ನುವುದನ್ನು ಸೊಗಸಾಗಿ ತೋರಿಸುತ್ತದೆ.

*೨. ಎಂ.ಎಂ. ಕಲಬುರ್ಗಿಯವರು ಸಂಪಾದಿಸಿರುವ 'ನಿಂಬ ಸಾಮಂತ ಚರಿತೆ' ಯ ಪ್ರಸ್ತಾವನೆಯಲ್ಲಿ ನಮಗೆ ಸಂಬಂಧಪಟ್ಟ ಶಾಸನಗಳ ಸಾರಾಂಶವಿದೆ.

*೩. ಆರ್. ನರಸಿಂಹಾಚಾರ್‌ರ ಕರ್ನಾಟಕ ಕವಿಚರಿತೆ ಸಂಪುಟ ೧ ದಲ್ಲಿ ಅಭಿನವ ಪಂಪ ಮೇಘಚಂದ್ರ ಮತ್ತು ಜನ್ನರ ಬಗೆಗಿನ ಮಾಹಿತಿ ಉಪಯುಕ್ತವಾಗಿದೆ.

*೪. ಹಾ.ಮಾ. ನಾಯಕ ಮತ್ತು ಟಿ.ವಿ. ವೆಂಕಟಾಚಲಶಾಸ್ತ್ರೀಯವರ ಕನ್ನಡ ಸಾಹಿತ್ಯ ಚರಿತ್ರೆ ಸಂಪುಟ ೩ ಮತ್ತು ೪ ರಲ್ಲಿರುವ ಅಭಿನವ ಪಂಪ, ಮೇಘಚಂದ್ರ, ಜನ್ನ, ವೀರಣಂದಿ ಇವರ ಬಗ್ಗೆ ಇನ್ನೂ ಹೆಚ್ಚಿನ ಮಾಹಿತಿ ಲಭ್ಯ.

*೫. ಗೋವಿಂದ ಪೈ ಸಂಶೋಧನ ಸಂಪುಟದಲ್ಲಿ ಅಭಿನವ ಪಂಪನ ಕುರಿತ ಲೇಖನಗಳಲ್ಲಿ ಮೇಘಚಂದ್ರ ಮತ್ತು ವೀರಣಂದಿಗಳ ಬಗ್ಗೆ ಚರ್ಚೆ ಇದೆ.

*೬. ಬಿ.ಆರ್. ಗೋಪಾಲರವರು ಸಂಪಾದಿಸಿರುವ, ಎ.ಕ. II ಶ್ರವಣಬೆಳ್ಗೊಳ ಶಾಸನ ಸಂಪುಟದಲ್ಲಿ ಶಾಸನ ಸಂಖ್ಯೆ : ೭೧, ೭೨, ೭೩ ಮತ್ತು ೧೭೩ ನಮಗೆ ಪ್ರಸ್ತುತ.

ವಿಮರ್ಶೆ : ೩೩

ಚಾವುಂಡರಾಯನ 'ಲೋಕೋಪಕಾರ'

ಚಾವುಂಡರಾಯನ ಲೋಕೋಪಕಾರ ನಮ್ಮ ಜನಕ್ಕೆ ಪರಿಚಯವಾದ ಬಗೆಗೆ ಒಂದೆರಡು ಮಾತು ಅವಶ್ಯ. ಇಂತಹ ಗ್ರಂಥವೊಂದಿದೆಯೆಂದು ಮೊದಲು ಪರಿಚಯಿಸಿದವರು ಕವಿಚರಿತೆಕಾರರು. ಅವರಿಗೆ ಸಮಗ್ರ ಪ್ರತಿ ದೊರೆತಿರಲಿಲ್ಲ. ಕಾಲವನ್ನು ೧೧೦೦ ಎಂದಿದ್ದರು. ಡಾ॥ ಅನಂತರಂಗಾಚಾರರು ಸುಮಾರು ೪೦ ವರ್ಷದ ಹಿಂದೆ ಪ್ರಬುದ್ಧ ಕರ್ನಾಟಕ, ೧೮ನೆಯ ಸಂಪುಟದಲ್ಲಿ ಒಂದು ಲೇಖನ ಬರೆದು ಇದರ ಮಹತ್ವವನ್ನು ಕನ್ನಡಿಗರಿಗೆ ಮೊದಲು ಮಾಡಿಕೊಟ್ಟರು. ನಂತರ ೧೯೫೦ರಲ್ಲಿ ಮದ್ರಾಸ್ ವಿಶ್ವವಿದ್ಯಾಲಯದಲ್ಲಿ ಕನ್ನಡ ಪ್ರಾಧ್ಯಾಪಕರಾಗಿದ್ದ ಶ್ರೀ ಹೆಚ್. ಶೇಷ ಅಯ್ಯಂಗಾರರು ನಾಲ್ಕು ಹಸ್ತಪ್ರತಿಗಳ ಸಹಾಯದಿಂದ ಈ ಗ್ರಂಥವನ್ನು ಸಂಪಾದಿಸಿ ಕನ್ನಡಿಗರಿಗೆ ಮಹದುಪಕಾರ ಮಾಡಿದ್ದಾರೆ.

೧೧ನೇ **ಶತಮಾನದ ಸಾಹಿತ್ಯ** : ಹನ್ನೊಂದನೆಯ ಶತಮಾನದ ಎಲ್ಲ ಕವಿಗಳು ಹೊಸ ರೀತಿಯ ಗ್ರಂಥಗಳನ್ನು ಬರೆದಿರುವರು. ೧೦ನೇ ಶತಮಾನದಲ್ಲಿ ಪಂಪ, ರನ್ನ, ಪೊನ್ನರು ಪುರಾಣಗಳನ್ನು, ಮಹಾಕಾವ್ಯಗಳನ್ನು ಬರೆದಂತೆ ಈ ಕಾಲದ ಕವಿಗಳು ಶಾಸ್ತ್ರೀಯ ಗ್ರಂಥಗಳನ್ನು ಬರೆದಿರುವರು. ಈ ಶತಮಾನದ ಆದಿಯಲ್ಲಿ ಚಾವುಂಡರಾಯ 'ಲೋಕೋಪಕಾರ' ಬರೆದ. ಇವನ ಕಾಲದಲ್ಲಿಯೇ ಚಂದ್ರರಾಜನು ಕಾಮಶಾಸ್ತ್ರದ ಮೇಲೆ 'ಮದನ ತಿಲಕ' ಎನ್ನುವ ಗ್ರಂಥವನ್ನು, ದುರ್ಗಸಿಂಹ ಇದೇ ಕಾಲಕ್ಕೆ (೧೦೩೧) ಪಂಚತಂತ್ರವನ್ನು ಬರೆದು ಲೌಕಿಕ ಧರ್ಮವನ್ನು, ನೀತಿಸಾರವನ್ನು ತೋರಿಸಲು ಪ್ರಯತ್ನಿಸಿದ್ದಾನೆ. ೧೦೪೯ರಲ್ಲಿ ಶ್ರೀಧರಚಾರ್ಯ ಜ್ಯೋತಿಷ್ಯಶಾಸ್ತ್ರವನ್ನು ಬರೆದ. ಇವೆಲ್ಲವುಗಳ ನಂತರ 'ಮಾನಸೋಲ್ಲಾಸ'ವನ್ನು ೩ನೇ ಸೋಮೇಶ್ವರ ೧೨ನೇ ಶತಮಾನದ ಆದಿಯಲ್ಲಿ ಬರೆದ. ಇದು ಸಂಸ್ಕೃತ ಕೃತಿ.

ಇನ್ನು 'ಲೋಕೋಪಕಾರ'ದ ಕರ್ತೃವಿನ ವಿಷಯ ತಿಳಿದುಕೊಳ್ಳೋಣ. ಚಾವುಂಡರಾಯನು ತನ್ನ ವಿಷಯವನ್ನೂ ತನ್ನ ಮನೆತನದ ವಿಷಯವನ್ನೂ

ಗ್ರಂಥ ಬರೆದ ಇಸ್ವಿಯನ್ನೂ ಹೇಳಿರುವುದರಿಂದ ಇಂಥ ವಿಷಯಗಳ ಬಗ್ಗೆ, ಇತರ ಲೇಖಕರ ಬಗ್ಗೆ ಇರುವ ಊಹಾಪೋಹಗಳು ಇವನ ಬಗ್ಗೆ ಇಲ್ಲದಿರುವುದು ನಮ್ಮ ಸುಕೃತ. ಈತ ಎರಡನೆಯ ಜಯಸಿಂಹನ ಕಾಲದಲ್ಲಿದ್ದು (೧೦೨೦-೪೫) ಅವನಿಂದ ಪೋಷಿತನಾಗಿದ್ದ. ಚಾವುಂಡರಾಯನ ಕಾಲ ೧೦೨೫ರ ಹತ್ತಿರವಿತ್ತು ಎನ್ನುವ ಬಗ್ಗೆ ಯಾವ ಸಂಶಯವೂ ಇಲ್ಲ. ಇವನು ವೈದಿಕ ಮತದ ಅದ್ವೈತಿಗಳ ಪಂಗಡಕ್ಕೆ ಸೇರಿದ ಬ್ರಾಹ್ಮಣ. ಈತನ ಊರು ಮುದಗಲ್. ಆ ಊರಿನಲ್ಲಿ ಕಾಶ್ಯಪ ಗೋತ್ರದ ಶಂಕರಭಟ್ಟರೆಂಬವರ ಮಗ ಪಂಗೌಂಡಭಟ್ಟನೆಂಬ ಪಂಡಿತ ನಿದ್ದ. ಇವನು ಅಪರಿಮಿತ ದಾನಿ. ಚಾಲುಕ್ಯರಾಜಪೋಷಿತ. ಹಲವು ಕೆರೆಗಳ ನಿರ್ಮಾತೃ ; ಕವಿ ಕಲ್ಪವೃಕ್ಷ ; ವಿದ್ವಜ್ಜನ ರತ್ನ ; ವಿದ್ವತ್ಪಕ್ಷಪಾತಿ ; ಕಾವ್ಯಗಳನ್ನು ರಚಿಸಿ 'ಕವಿತಾ ವಿಳಾಸ'ನೆಂಬ ಬಿರುದು ಪಡೆದಿದ್ದ. ಈತನ ಕಾವ್ಯಗಳಾವುವೂ ಸಿಕ್ಕಿಲ್ಲ. ಆದರೆ ದುರ್ಗಸಿಂಹನೆಂಬುವನು ೧೦೩೧ರಲ್ಲಿ ತನ್ನ 'ಪಂಚತಂತ್ರ'ದಲ್ಲಿ ಈ ಕವಿತಾ ವಿಳಾಸನನ್ನು ತನ್ನ ಸರ್ವಕವಿಗಳ ಪೈಕಿ ಸೇರಿಸಿ ಹೊಗಳಿದ್ದಾನೆ. ಈತನ ಹೆಂಡತಿ ಮಲ್ಲಿಕಬ್ಬೆ. ಇವರ ಸುಪುತ್ರ ಚಾವುಂಡರಾಯ. ಜಯಸಿಂಹಚಕ್ರಿ ಈತನನ್ನು ಸರ್ವಾಧಿಕಾರಿಯನ್ನಾಗಿ ಮಾಡಿ 'ಮಹಾಬಳಿ' ಎಂಬ ಗ್ರಾಮವನ್ನು ದಾನಮಾಡಿದ. ಚಾವುಂಡರಾಯನು ಹಾಕಿಸಿದ ತೋಪುಗಳು, ಕಟ್ಟಿಸಿದ ದೇವಸ್ಥಾನಗಳು, ತೋಡಿಸಿದ ಕೆರೆ ಕಟ್ಟೆ ಬಾವಿ ಅಸಂಖ್ಯಾತವಾದುದರಿಂದ ಈತನಿಗೆ ಧರ್ಮ ಧರ್ಮಾತ್ಮಜನೆನ್ನುವ ಬಿರುದನ್ನು ತಂದವು. 'ಕವಿತಾ ವಿಳಾಸ'ನ ಮಗನಾದ ಇವನಿಗೆ 'ಕಾವ್ಯ ವಿಳಾಸ'ವೆಂಬ ಬಿರುದು ಒಪ್ಪತಕ್ಕದ್ದು. ಇವನು ಕೇಳುತ್ತಾನೆ : "ಕೇವಲ ಛಂದಸ್ಸಿನಿಂದ, ಮಾತ್ರಾಪದಗಳಿಂದ ತುಂಬಿರುವ ಕಾವ್ಯಗಳಿಂದ ಏನು ಪ್ರಯೋಜನ?" ಹೀಗೆಂದು ತನ್ನ ಗ್ರಂಥದಲ್ಲಿ ತಾನು ಏನು ಮಾಡಿದ್ದೇನೆಂದು ಹೇಳುತ್ತಾನೆ:

"ನನ್ನ ಗ್ರಂಥವಾದರೋ ಛಂದಸ್ಸಿನಲ್ಲಿಯೂ ಶಾಸ್ತ್ರದ ಕವಿತ್ವದ ಬೆಡಗಿನಲ್ಲಿಯೂ ಶೋಭಿಸುತ್ತಿರುವುದು. ಹಲವು ಲೌಕಿಕ. ಶಾಸ್ತ್ರಗಳನ್ನೊಳಗೊಂಡಿರುವ ಈ ಲೋಕೋಪಕಾರವು ಜಗತ್ತಿಲಕವೆನಿಸಿ ರಾಜಪೂಜಿತವೂ ಆಗಿರುವುದು." ಈ ಗ್ರಂಥವು ಈ ಮೇದಿನಿಯ ಜನರಿಗೆ ಹಲವು ಬಗೆಯಿಂದ ಉಪಕಾರವಾಗಿರುವುದರಿಂದ 'ಅನ್ವರ್ಥ'ವಾದ ಹೆಸರನ್ನು ಪಡೆದಿರುತ್ತದೆ.

ಈ ಗ್ರಂಥದಲ್ಲಿ ಹನ್ನೆರಡು ಅಧಿಕಾರಿಗಳು ಅಥವಾ ಅಧ್ಯಾಯಗಳಿವೆ. ಮೊದಲಿನ ಎರಡು ಅಧ್ಯಾಯಗಳು ಜ್ಯೋತಿಷ್ಯಶಾಸ್ತ್ರಕ್ಕೆ ಸಂಬಂಧಿಸಿದವು. ಮನುಷ್ಯನಿಗೆ ಬೇಕಾಗಿರುವ ಸುಖ ಸಾಧನಗಳಾದ ವಸತಿ, ಆಹಾರ, ಆರೋಗ್ಯ, ಅಲಂಕಾರ ಇವುಗಳ ವರ್ಣನೆ ಈ ಗ್ರಂಥದಲ್ಲಿದೆ. ಮೊದಲನೆಯ ಅಧ್ಯಾಯದಲ್ಲಿ ಮನುಷ್ಯ

ತನ್ನ ಸುಖಸಾಧನಕ್ಕೆ ಪ್ರಾರಂಭಿಸಿದ ಕೆಲಸ ಸುಸೂತ್ರವಾಗಿ ಆಗಬೇಕಾಗಿರುವುದರಿಂದ ಇದಕ್ಕೆ ಅವಶ್ಯವಾಗಿ ತಿಳಿಯಬೇಕಾಗಿರುವ ತಿಥಿ, ವಾರ, ನಕ್ಷತ್ರ, ಯೋಗ, ಕರಣಗಳೆಂಬ ದಿನ ಪಂಚಾಂಗ ಶುದ್ಧಿಯನ್ನು ವಿವರಿಸಿದೆ. ಎರಡನೆಯ ಅಧ್ಯಾಯ ಮೊದಲನೆಯದಕ್ಕೆ ಪೂರಕ; ಮೊದಲನೆಯದರಲ್ಲಿ ಯಾವ ಯಾವ ತಿಥಿ ವಾರ ನಕ್ಷತ್ರ ಒಳ್ಳೆಯದು ಯಾವುದು ಕೆಟ್ಟದ್ದು ಎಂದು ಹೇಳಿದ್ದರೆ, ಎರಡನೆಯದರಲ್ಲಿ ಷೋಡಶ ಕರ್ಮಗಳನ್ನು ಮಾಡುವುದಕ್ಕೆ ಶುಭಕರಗಳಾದ ತಿಥಿ ಲಗ್ನಾದಿಗಳನ್ನು ವಿವರಿಸಿದೆ. ವಿವಾಹ ಯಾವಾಗ ಮಾಡಬೇಕು, ಮಕ್ಕಳಿಗೆ ಅನ್ನಪ್ರಾಶನ, ಚೌಲಕರ್ಮ, ವಿದ್ಯಾರಂಭ ದಿನ, ಧಾನ್ಯ ಬಿತ್ತುವುದು, ಪ್ರಯಾಣಕ್ಕೆ ತಕ್ಕ ಶುಭ ಇತ್ಯಾದಿಗಳನ್ನು ವರ್ಣಿಸಿದೆ. ಈ ಎರಡು ಅಧ್ಯಾಯಗಳು ಜ್ಯೋತಿಷಶಾಸ್ತ್ರವನ್ನು ಅವಲಂಬಿಸಿವೆ. ಮುಂತಾಚಾರ್ಯರು, ಶೌನಕ, ಗಾರ್ಗ್ಯ, ವರಾಹ ಇವರ ಬರವಣಿಗೆಗಳ ಮೇಲೆ ಆಧರಿಸಿವೆ.

೩ನೇ ಅಧ್ಯಾಯ ವಾಸ್ತು ಪ್ರಕರಣ. ಮನುಷ್ಯನಿಗೆ ಬೇಕಾಗಿರುವ ಎಲ್ಲಾ ಸುಖಸಾಧನಗಳಲ್ಲಿ ಮನೆ ಬಹುಮುಖ್ಯ. ಇದನ್ನು ಕಟ್ಟಲಾರಂಭಿಸಲಿಕ್ಕೆ ಶುಭ ತಿಥಿ ನಕ್ಷತ್ರಗಳು, ಮನೆಗೆ ಉಪಯೋಗಿಸುವ ಮರಗಳ ಜಾತಿ ಸ್ವರೂಪ. ಇದ್ದ ಮನೆಯನ್ನು ಹೆಚ್ಚಿಸುವುದಕ್ಕೆ ತಕ್ಕ ದಿಕ್ಕು, ಮನೆಯಲ್ಲಿ ಸ್ನಾನ ಅಡುಗೆ ಈ ಭಾಗಗಳಿಗೆ ಬೇಕಾಗುವ ಉದ್ದಗಲಗಳ ಪ್ರಮಾಣ, ಬಾಗಿಲ್ವಾಡವನ್ನು ನಿಲ್ಲುಸುವುದಕ್ಕೆ ತಕ್ಕ ಶುಭ ದಿನ ಇತ್ಯಾದಿ. ಅರಮನೆಯ ಬಗೆಗೂ ಸ್ವಲ್ಪ ವಿವರಣೆ ಇದೆ.

೪ನೇ ಅಧ್ಯಾಯ ಉತ್ಪಾತ ಅಧ್ಯಾಯ. ಲೋಕದೊಳಗೆ ಮನುಷ್ಯನ ಅನ್ಯಾಯದಿಂದ ಪಾಪ ಹೆಚ್ಚುವುದು. ಪಾಪ ಹೆಚ್ಚುವುದರಿಂದ ದೈವ ವಿಮುಖವಾಗುವುದು. ಆ ದೇವತಾಕ್ಷೋಭೆಯಿಂದ ಅಪಾಯ ಹುಟ್ಟುವುದು. ಆ ಅಪಾಯಗಳು ಮೂರು ತರ: ದಿವ್ಯ, ಅಂತರಕ್ಷ, ಭೌಮ್ಯ. ದಿವ್ಯ ಎಂದರೆ ತಾರೆಗಳ ಮತ್ತು ಗ್ರಹಗಳಲ್ಲಿ ತೋರುವ ವಿಕಾರ. ಆಕಾಶದಲ್ಲಿ ತೋರುವ ವಿಕಾರ ಚಂಡಮಾರುತ, ಸಿಡಿಲು, ಮಿಂಚು, ಗುಡುಗು. ಭೂಮಿಯಲ್ಲಿ ತೋರುವ ವಿಕಾರಗಳು (ಭೂಕಂಪ), ಯಾವಾಗಲೂ ಬತ್ತದಿರುವ ಕೆರೆ ಬತ್ತುವುದು, ನದಿ ನೀರು ಮೇಲ್ಗಡೆಗೆ ಏರುವುದು, ನೀರಿನಲ್ಲಿ ಉರಿ ತೋರುವುದು ಇವೇ ಮೊದಲಾದವು. ನೀರಿನ ವಿಕಾರದ ಉತ್ಪಾತಗಳಿಗೆ ವರುಣನನ್ನು ಪೂಜಿಸಿ ಜಪ ಹೋಮಾದಿಗಳನ್ನು ಮಾಡಿಸಬೇಕು. ಇವನ್ನೆಲ್ಲ ನಂಬಲಿಕ್ಕೆ ಆಗುವುದಿಲ್ಲ ಎನ್ನುವವರಿಗೆ ಆಂಧ್ರದಲ್ಲಿ ಕೆಲವು ವರ್ಷಗಳ ಹಿಂದಿನ ಚಂಡಮಾರುತ ಒಳ್ಳೆಯ ಉತ್ತರ. ಆಗ ಸಮುದ್ರದಲ್ಲಿ ಉರಿಯನ್ನು ನೋಡಿದವರು ವರ್ಣಿಸಿದ್ದಾರೆ.

೫ನೇ ಅಧ್ಯಾಯ ಉದಕಾರ್ಗಳ. ಜೀವನಕ್ಕೆ ನೀರು ಅತ್ಯವಶ್ಯಕ. ಈಗ ಈ ನೀರು ಸಾಕಾಗದೆ ಹೋಗುತ್ತಿವೆ. ಆದ್ದರಿಂದ ಭೂಮಿಯ ಕೆಳಗೆ ಇರುವ

ನೀರನ್ನು ಹುಡುಕುವುದು ಅನಿವಾರ್ಯ. ಅದಕ್ಕೆ ಸಹಾಯ ಮಾಡುವ ಈ ಅಧ್ಯಾಯ ಎಷ್ಟು ಉಪಯುಕ್ತವೆಂದು ಬೇರೆ ಹೇಳಬೇಕಾಗಿಲ್ಲ. ನೀರು ಎಷ್ಟು ಪ್ರಮಾಣದ ಕೆಳಗೆ ದೊರಕುವುದು, ದೊರಕುವ ನೀರಿನ ರುಚಿ ಎಂತಹುದು, ಬಾವಿ ತೋಡುವಾಗ ಕೆಳಗಡೆ ಬಂಡೆ ಅಡ್ಡವಾದರೆ ಅದನ್ನು ಮೃದುಮಾಡುವುದು ಹೇಗೆ, ಕಲ್ಲನ್ನು ಸೀಳುವ ಉಳಿಗಳನ್ನು ವಜ್ರದಂತೆ ಗಟ್ಟಿ ಮಾಡುವ ಕ್ರಮ, ಇವೆಲ್ಲವನ್ನೂ ಹೇಳಿರುವನು.

ಎಂಥಲ್ಲಿ ನೀರು ಸಿಗುವುದು? ಇದಕ್ಕೆ ಉತ್ತರ, ಮರಗಳು ಚಿಗುರಿ ಸೊಂಪಾಗಿ ಬೆಳೆದಿರುವ ಸ್ಥಳದಲ್ಲಿ ನೀರು ಸಿಕ್ಕುವುದು. ಮರಗಳು ಒಣಗಿ ಬಿದ್ದ ಸ್ಥಳದಲ್ಲಿ ಸಿಗುವುದಿಲ್ಲ. ಸುತ್ತಲೂ ಹುಲ್ಲಿಲ್ಲದ ಬಯಲಿನಲ್ಲಿ ಹುಲ್ಲು ಬೆಳೆದಿರುವ ಸ್ಥಳ, ಹುಲುಗಿಲು ಮರಗಳು ಬೆಳೆದಿರುವ ಸ್ಥಳದಲ್ಲಿಯೂ ಕೆಂಪು ಚಿಗುರುಗಳು ಮರಗಳಲ್ಲಿ ತೋರುವ ಸ್ಥಳದಲ್ಲಿಯೂ ನೀರು ಸಿಕ್ಕುತ್ತದೆ.

ಒಂದು ಸ್ಥಳದಲ್ಲಿ ಬೆಳೆದಿರುವ ಮರಗಿಡಗಳ ಜಾತಿ ವಿಶೇಷ, ಬೆಳೆದಿರುವ ಸ್ವರೂಪ – ಇವುಗಳ ಪ್ರಕಾರ ಆ ಸ್ಥಳಕ್ಕೆ ಇಷ್ಟಿಷ್ಟು ಹಸ್ತಪ್ರಮಾಣ ದೂರದಲ್ಲಿ, ನೀರು ಸಿಕ್ಕುವುದು.

ಕೇಂದ್ರ ಸರ್ಕಾರದಲ್ಲಿ ಭೂಗರ್ಭ ಜಲವನ್ನು ಕಂಡು ಹಿಡಿಯಲು ಒಂದು ಶಾಖೆಯಿರುವುದು. ಅದರಲ್ಲಿ ಕೆಲಸ ಮಾಡುವವರು ಚಾವುಂಡರಾಯನ ಹೇಳಿಕೆಗಳ ಸತ್ಯಾಸತ್ಯತೆಯನ್ನು ಪ್ರಯೋಗಗಳಿಂದ ಕಂಡುಹಿಡಿಯಬೇಕು.

೬ನೇ ಅಧ್ಯಾಯ ವೃಕ್ಷಾಯುರ್ವೇದದ ಪ್ರಕರಣ. ಮನುಷ್ಯನ ಆಹಾರಕ್ಕೂ ಅಲಂಕಾರಕ್ಕೂ ಅತ್ಯವಶ್ಯಕವಾದ ಫಲಪುಷ್ಪ ವೃಕ್ಷಲತೆಗಳನ್ನು ಬೆಳೆಸುವ ಕ್ರಮ ಮತ್ತು ಹೆಚ್ಚು ಫಲ ಬರುವಂತೆ ಮಾಡುವ ಕ್ರಮ, ಮರಗಳನ್ನು ಬಿತ್ತುವಾಗ ಮತ್ತು ನಾಟುವಾಗ ಗುಳಿಗಳ ಅಂತರ, ಗಿಡಮರಗಳಿಗೆ ಬರುವ ರೋಗಗಳಿಗೆ ಔಷಧಿ – ಇವುಗಳನ್ನು ಹೇಳಿ ಕೆಲವು ಸಂಸ್ಕಾರಗಳನ್ನು ಮಾಡಿದರೆ ಫಲ ಬಿಡುವುದರಲ್ಲಿ ಕೆಲವು ಆಶ್ಚರ್ಯಕರವಾದ ಪರಿಣಾಮಗಳಾಗುವುವು ಎನ್ನುತ್ತಾನೆ.

(೧) ಒಂದು ಮರದ ಕೊಂಬೆಯನ್ನಾಗಲೀ ಬೀಜವನ್ನಾಗಲೀ ಸಮನಾಗಿ ಸೀಳಿ, ಸೇರಿಸಿ ಕಟ್ಟಿ, ತುಪ್ಪ, ಜೇನುತುಪ್ಪ ಇವನ್ನು ಚೆನ್ನಾಗಿ ಬಳಿದು ನೆಟ್ಟರೆ ಒಂದೇ ಬುಡದ ಮರದಲ್ಲಿ ಎರಡು ಬಗೆಯ ಹಣ್ಣುಗಳು ಬಿಡುವುದು. (ಈಗ ಬೋಗನ್‌ವೇಲ್‌ನಲ್ಲಿ ಎರಡು ಬಗೆಯ ಹೂವು ಬಿಡುವುದು ಗೊತ್ತಿದೆ.)

(೨) ಹಣ್ಣಿನಲ್ಲಿ ಬೀಜ ಇಲ್ಲದ ಹಾಗೆ ಮಾಡುವುದು ಸಾಧ್ಯವಂತೆ. ಈಗ ದ್ರಾಕ್ಷಿ, ಪಪ್ಪಾಯಿಗಳಲ್ಲಿ ಹೀಗೆ ಮಾಡಿದ್ದಾರೆ.

೭ನೇ ಅಧ್ಯಾಯ ಸುಗಂಧ ವಾದ. ಮನುಷ್ಯರ ಆರೋಗ್ಯಕ್ಕೂ ಉಲ್ಲಾಸಕ್ಕೂ ವಿರೋಧಿಯಾದ ದುರ್ಗಂಧವನ್ನು ಹೋಗಲಾಡಿಸಿ ಸುಗಂಧವನ್ನುಂಟುಮಾಡುವ ವಸ್ತುಗಳನ್ನು ತಯಾರಿಸುವ ಕ್ರಮ ಈ ಅಧ್ಯಾಯದಲ್ಲಿ ಹೇಳಿದೆ. ಬಾಯಿ ಮುಕ್ಕಳಿಸುವ ಸುಗಂಧಜಲ, ಬಗೆಬಗೆಯ ಪರಿಮಳ ತೈಲ, ದೇಹಧೂಪ, ವಸ್ತ್ರಧೂಪದ್ರವ್ಯಗಳು, ಬಗೆಬಗೆಯ ಊದುಬತ್ತಿ, ದಶಾಂಗ ಧೂಪ, ತಗಣಿ, ಸೊರಜು ಮೊದಲಾದ ಕಚ್ಚುವ ಕ್ರಿಮಿಗಳನ್ನು ನಿವಾರಿಸುವ ಧೂಪ, ಹೂವುಗಳ ದ್ರವವನ್ನು ಸಂಗ್ರಹಿಸುವ ಕ್ರಮ, ಕಸ್ತೂರಿಯ ವಾಸನೆಯನ್ನು ಪಡೆವ ಕ್ರಮ, ಹೂವುಗಳಿಗೆ ಸುವಾಸನೆ ಹೆಚ್ಚಿಸಲು ಧೂಪ ಮಾಡುವ ಕ್ರಮ, ಇವುಗಳನ್ನು ಹೇಳಿ. ಕೃತ್ರಿಮ ಕುಂಕುಮ ಕೇಸರಿ (V, 63), ಕೃತ್ರಿಮ ಕಸ್ತೂರಿ (V, 65), ಕರ್ಪೂರ (V, 67), ಕೃತ್ರಿಮ ಇಂಗು (V, 68-69)-ಇವುಗಳನ್ನು ತಯಾರಿಸುವ ಕ್ರಮಗಳನ್ನು ಹೇಳಿದ್ದಾನೆ.

೮ನೇ ಅಧ್ಯಾಯ ಸೂಪಶಾಸ್ತ್ರ. ಅನ್ನವನ್ನು ಕೆಲವು ದಿನಗಳವರೆಗೆ ಕೆಡದಂತಿಡುವ ಕ್ರಮ (P 120 V 3) ಸತ್ವಕಾರಿಯಾದ ಆಹಾರ (121 V 6-8, 10) ಇಡ್ಡಲಿಗೆ (V, 11) ಲಡ್ಡು, ಮಾಂಸ, ಮೀನುಗಳ ಭಕ್ಷ್ಯಗಳನ್ನು ತಯಾರಿಸುವ ವಿಧಾನ, ಸಂಡಿಗೆ, ಹಾಗಲಕಾಯಿ ಇತ್ಯಾದಿಗಳಲ್ಲಿ ಕಹಿ ನಿವಾರಿಸುವ ಕ್ರಮ ಇಲ್ಲಿ ಹೇಳಿದೆ.

ಹಣ್ಣುಗಳ ರಸವನ್ನು ದ್ರವಿಯಿಸುವ ಕ್ರಮ, ಸಕ್ಕರೆ, ಸುವಾಸನೆ ತುಪ್ಪ (129V, 40 ; 130V, 41) ಸುವಾಸನೆ ಬೆಣ್ಣೆ (V, 42) ಕೃತ್ರಿಮ ಹಾಲು (V, 45) ಕೃತ್ರಿಮ ಮೊಸರು (V, 48-49) ಈ ಕ್ರಮಗಳನ್ನು ಹೇಳಿದ್ದಾನೆ.

೯ನೇ ಅಧ್ಯಾಯ : ನರವೈದ್ಯ, ಸ್ತ್ರೀವೈದ್ಯ, ಬಾಲವೈದ್ಯ, ಗೋ ಅಶ್ವ ಗಜ ವೈದ್ಯ.

ಮೊರಾರ್ಜಿ ದೇಸಾಯರ ಔಷಧಿಯನ್ನು ಜ್ವರಕ್ಕೆ, ಗೋಮೂತ್ರದಲ್ಲಿ ಬನ್ನಿಯ ಬೀಜ ಅರೆದು ಉಪಯೋಗಿಸುವುದು ಮುಖಕಾಂತಿ ಹೆಚ್ಚಿಸುವುದಕ್ಕೆ.

ವಿಷಮಜ್ವರ (೧೪೦), ಕ್ಷಯ (೧೪೩), ಇವುಗಳಿಗೆ ಸುಲಭ ಚಿಕಿತ್ಸೆ. ಆಯುಷ್ಯ ವರ್ಧನ (೧೪೫), ಬುದ್ಧಿ ಪೆರ್ಚುವುದು (೧೪೫), ವೀರ್ಯವೃದ್ಧಿ (೧೪೬), ನರೆ ಕಪ್ಪಾಗುವುದಕ್ಕೆ (೧೪೭), ತೊನ್ನು (೧೬೨), ನೆತ್ತರು ಹೊಡಗೆ (೧೬೨; ರಕ್ತದ ಒತ್ತಡ?), ಮೂಲವ್ಯಾಧಿ, ಅತಿಕ್ರೂರವಾದ ವ್ಯಾಧಿಗಳಾದ ಕ್ಷಯ ಮುಂತಾದವುಗಳಿಗೆ ಬಹು ಸುಲಭವಾದ ಔಷಧಿಯನ್ನು ಹೇಳಿರುವುದರಿಂದ ಅವು ಪರೀಕ್ಷಾರ್ಹ.

ಸ್ತ್ರೀವೈದ್ಯದಲ್ಲಿ ಗರ್ಭ ನಿಲ್ಲುವುದಕ್ಕೆ ಹೇಳಿರುವ ಈತನ ಕೆಲವು ಉಪಾಯಗಳು ಬೆಳೆಯುತ್ತಿರುವ ಜನ ಸಂಖ್ಯೆಯನ್ನು ಕಡಿಮೆ ಮಾಡಲು ಆಸ್ಥೆ ವಿಶೇಷವಾಗಿರುವ

ಈ ದಿನಗಳಲ್ಲಿ ಪರೀಕ್ಷೆಗೆ ಯೋಗ್ಯವಾಗಿದೆ (೧೭೯ – ೧೮೦). ಶಿಶುವೈದ್ಯದಲ್ಲಿ ಅವುಗಳ ದೃಷ್ಟಿ ಪರಿಹಾರಕ್ಕೆ ತಾಯಿತಗಳನ್ನು ಕಟ್ಟಲು ಹೇಳುತ್ತಾನೆ. ಬೇರೆ ಕಡೆ ತಾಯಿತ ಹೇಳದಿರುವುದು ಗಮನಾರ್ಹ. ಹಲ್ಲು ಬೇಗ ಬರಲಿಕ್ಕೆ, ಅತಿಸಾರಕ್ಕೆ ಔಷಧಿ ಹೇಳಿದ್ದಾನೆ.

ಪಶುವೈದ್ಯದ ಬಗ್ಗೆ ನಾನು ಏನೂ ಹೇಳುವುದಿಲ್ಲ. ಆದರೆ ಪಶುವೈದ್ಯರು ಇದನ್ನು ಅವಶ್ಯ ಓದಬೇಕೆಂದು ಮಾತ್ರ ಹೇಳುತ್ತೇನೆ.

೧೦ನೇ ಅಧ್ಯಾಯ : ವಿಷತತ್ವ ಪ್ರಕರಣದಲ್ಲಿ ಎಲ್ಲಾ ತರಹ ವಿಷಸ್ವರೂಪಗಳನ್ನೂ ಹೇಳಿ, ಕೆಲವು ಪ್ರಾಣಿಗಳು ಕಚ್ಚಿದರೆ ಔಷಧ ಹೇಳಿದ್ದಾನೆ. ಉದಾ. ಹಾವು ಕಚ್ಚಿದರೆ ವಿಷ ಹಬ್ಬದ ಹಾಗೆ ಔಷಧಿಯನ್ನು, ನಾಯಿ ಕಚ್ಚಿದರೆ ನಂಜು ಆಗದ ಹಾಗೆ ಔಷಧಿಯನ್ನು ಹೇಳಿದ್ದಾನೆ. ಹಾವು ಕಚ್ಚಿದರೆ ಮಂತ್ರವನ್ನು ಹೇಳಬೇಕೆನ್ನುತ್ತಾನೆ. ಜತೆಗೆ ಔಷಧಿಯನ್ನು ಹೇಳುತ್ತಾನೆ (೨೦೧–೨೦೩).

೧೧ನೇ ಅಧ್ಯಾಯ : ಸರ್ವಲಕ್ಷಣ ಪರಿಜ್ಞಾನ ಪ್ರಕರಣ. ಇದರಲ್ಲಿ ಸ್ತ್ರೀಪುರುಷ ಗಜಾಶ್ವ ಗೋಶುನಕ ಅಜ ಕುಕ್ಕುಟ ಸ್ತ್ರೀಪುರುಷ ಅವಯವಗಳು ಹೇಗೆ ಇದ್ದರೆ ಯಾವುದನ್ನು ಸೂಚಿಸುತ್ತದೆ ಎನ್ನುವುದನ್ನು ಇಲ್ಲಿ ಹೇಳುತ್ತಾನೆ. ಹಸ್ತಸಾಮುದ್ರಿಕವನ್ನೂ ಹೇಳುತ್ತಾನೆ. ಇಷ್ಟವಿರುವವರು ಇದನ್ನು ಓದಬಹುದು.

೧೨ನೇ ಅಧ್ಯಾಯ ಶಕುನ ಪ್ರಕಣ : ಸಾಮಾನ್ಯ ಶಕುನಗಳು, ಬೆಕ್ಕು, ಪಕ್ಷಿ, ಹಲ್ಲಿ ಮೊದಲಾದ ಶಕುನಗಳನ್ನು ಹೇಳಿದೆ. ಇಂಥ ಮೂಢನಂಬಿಕೆಗಳು ಎಲ್ಲಾ ಜನರಲ್ಲಿಯೂ ಇವೆ.

ಲೋಕೋಪಕಾರದ ಮಹತ್ವ : ಲೋಕೋಪಕಾರದಲ್ಲಿ ಮೂಢನಂಬಿಕೆಗಳು ಕಡಿಮೆ. ಚಿಕಿತ್ಸಕ ಬುದ್ಧಿ, ಪ್ರಯೋಗಶೀಲತೆ ಹೆಚ್ಚಾಗಿ ಕಾಣುತ್ತದೆ. ಬರಬರುತ್ತ ನಮ್ಮ ಜನರಲ್ಲಿ ಈ ಒಳ್ಳೆಯ ಗುಣಗಳು ಕಡಿಮೆಯಾದವು ಅಥವಾ ಹೋಗೇ ಹೋದವು ಅಂತ ಕೂಡ ಹೇಳಬಹುದು. ಸು. ೧೭೦೦ ರಲ್ಲಿ ಬರೆದ ಕಡೆಯ ವಿಶ್ವಕೋಶವಾದ ಶಿವತತ್ವರತ್ನಾಕರದಲ್ಲಿ ವಿಷಯ ಸಂಗ್ರಹ ಅಪಾರವಾಗಿದ್ದರೂ ಮೇಲೆ ನಾವು ಲೋಕೋಪಕಾರದಲ್ಲಿ ಕಂಡಂಥ ಪ್ರಯೋಗಶೀಲಗಳನ್ನು ಕಾಣುವುದಿಲ್ಲ. ಲೋಕೋಪಕಾರ ಬರೆದ ಕಾಲದಲ್ಲಿ ಮತ್ತು ಅದರ ಹಿಂದೆ ನಮ್ಮ ಜನರು ವಿಜ್ಞಾನದಲ್ಲಿ ಮಾಡಿದ ಪ್ರಯೋಗಗಳನ್ನು ಅರಬ್ಬರು, ಚೀನಿಯರು ನಮ್ಮಿಂದ ಕಲಿತುಕೊಂಡರು. ಅವರಿಂದಲೂ ಕಲಿಯಲು ನಾವು ಹಿಂಜರಿಯುತ್ತಿರಲಿಲ್ಲ. ವರಾಹಮಿಹಿರ ಹೇಳುತ್ತಾನೆ. ನಮ್ಮ ದೇಶದಲ್ಲಿ ಮಾತ್ರ ಋಷಿಗಳಿಲ್ಲ, ಬೇರೆ ದೇಶದಲ್ಲಿಯೂ ಋಷಿಗಳಿದ್ದಾರೆ. ಅವರಿಂದ ನಾವು ಕಲಿಯುವುದು ತಪ್ಪಲ್ಲ.

ಈತನು ರೋಮಕ ಸಿದ್ಧಾಂತವನ್ನು ಬರೆದು ನಮ್ಮ ಜನರಿಗೆ ಗ್ರೀಕ್ ಖಗೋಲ ವಿಜ್ಞಾನದ ಪರಿಚಯ ಮಾಡಿಕೊಟ್ಟ. ಕ್ರಮೇಣ ನಮ್ಮ ಜನರಲ್ಲಿ ಒಂದು ತರಹ ಅಹಂಕಾರ ಬಂದು ಚಿಕಿತ್ಸಕ ಬುದ್ಧಿ ಕಳೆದುಕೊಂಡೆವು. ನಾವು ಬುದ್ಧಿವಂತರು, ಇತರರು ಮ್ಲೇಚ್ಛರು, ಅವರಿಂದ ನಾವು ಕಲಿಯತಕ್ಕದ್ದೇನೂ ಇಲ್ಲ ಅನ್ನುವ ಭಾವನೆ ಬಂತು. ಈ ಭಾವನೆ ಇನ್ನೂ ಇಲ್ಲದೆ ಇದ್ದ ಕಾಲದಲ್ಲಿ ಬರೆದದ್ದು ಲೋಕೋಪಕಾರ. ಇದರ ಅನೇಕ ಭಾಗಗಳಲ್ಲಿ ಹೇಳಿರುವ ಪ್ರಯೋಗಗಳನ್ನು ಮಾಡಿ ಅವುಗಳ ಸತ್ಯಾಸತ್ಯತೆಯನ್ನು ನಾವು ಕಂಡುಕೊಳ್ಳಬೇಕು.

■

ವಿಮರ್ಶೆ : ೩೪

ಮಧುರಸ್ಮೃತಿ – ಅಪರೂಪದ ಸಂಸ್ಮರಣ ಸಂಪುಟ

'ಮಧುರಸ್ಮೃತಿ' ಪ್ರೊ. ಬಿ. ರಾಮಸ್ವಾಮಿ ಸಂಸ್ಮರಣ ಸಂಪುಟ. ಪ್ರಧಾನ ಸಂಪಾದಕರು ಡಾ। ಟಿ.ವಿ. ವೆಂಕಟಾಚಲಶಾಸ್ತ್ರೀ, ಸಂ. ಶ್ರೀಮತಿ ಸಾವಿತ್ರಮ್ಮ ರಾಮಸ್ವಾಮಿ ಮತ್ತು ಪ್ರೊ॥ ನಾ. ಗೀತಾಚಾರ್ಯ, ಪ್ರ: ಪ್ರೊ॥ ಬಿ. ರಾಮಸ್ವಾಮಿ ಸಂಸ್ಮರಣ ಸಮಿತಿ, ಬಿ.ಎಂ.ಶ್ರೀ., ಸ್ಮಾರಕ ಪ್ರತಿಷ್ಠಾನ, ಪು. ೪೮೬ . ಬೆಲೆ ೩೦೦=೦೦. ವರ್ಷ ೨೦೦೩ ಡೆಮ್ಮಿ ಅಷ್ಟದಳ.

ಈ ಗ್ರಂಥಕ್ಕೆ 'ಮಧುರಸ್ಮೃತಿ' ಎನ್ನುವ ಹೆಸರನ್ನು ಸೂಚಿಸಿದ್ದಕ್ಕೆ ಮತ್ತು ಈ ಗ್ರಂಥವನ್ನು ಸರ್ವಾಂಗಸುಂದರವಾಗಿ ಹೊರಬರಲು ಶ್ರಮಿಸಿರುವುದಕ್ಕೆ ನನ್ನ ಸ್ನೇಹಿತರೂ ಮುಖ್ಯ ಸಂಪಾದಕರೂ ಆದ ಪ್ರೊ॥ ಟಿ.ವಿ. ವೆಂಟಾಚಲಶಾಸ್ತ್ರಿಗಳನ್ನು ಅಭಿನಂದಿಸುತ್ತೇನ. ಪ್ರೊ॥ ರಾಮಸ್ವಾಮಿಗಳ ಸಂಬಂಧ ಬಂದವರೆಲ್ಲರಿಗೂ ಅವರ ಬಗೆಗಿನ ಸ್ಮೃತಿ "ಮಧುರಸ್ಮೃತಿ" ಎನ್ನುವುದರಲ್ಲಿ ಸಂದೇಹವಿಲ್ಲ.

ಇದರಲ್ಲಿಯ ಮೊದಲನೇ ಲೇಖನ ಶ್ರೀಮತಿ ಸಾವಿತ್ರಮ್ಮನವರದು. ಅದರ ಶೀರ್ಷಿಕೆ 'ಪ್ರವೇಶಿಕೆ'. ಈ ಲೇಖನದ ಶೀರ್ಷಿಕೆ, ಲೇಖನದ ವಿಷಯ ಮತ್ತು ಈ ಲೇಖನವನ್ನು ಮೊದಲನೆಯದನ್ನಾಗಿ ಮಾಡಿರುವುದು. ಇವೆಲ್ಲಾ ಲೇಖಕರಿಗೂ ಮತ್ತು ಸಂಪಾದಕರಿಗೂ ಮೆಚ್ಚಿಗೆಯನ್ನು ತರತಕ್ಕಂಥ ವಿಷಯಗಳು; ಇದರಲ್ಲಿ ಪ್ರೊ॥ ರಾಮಸ್ವಾಮಿಯವರ ಜೀವನ ಚರಿತ್ರೆ, ಅವರ ವ್ಯಕ್ತಿತ್ವ, ಸ್ವಭಾವ, ಸಂಶೋಧನ ರೀತಿ, ಇತ್ಯಾದಿಗಳಿವೆ. ಇವೆಲ್ಲವುಗಳನ್ನು ಎಲ್ಲರಿಗಿಂತ ಸಹಜವಾಗಿ ಚೆನ್ನಾಗಿ ಬಲ್ಲ ಶ್ರೀಮತಿ ಸಾವಿತ್ರಮ್ಮನವರ ಬರಹ ಈ ಗ್ರಂಥಕ್ಕೆ ಒಂದು ವಿಧದಲ್ಲಿ ತಳಹದಿ. ಇನ್ನೊಂದು ವಿಧದಲ್ಲಿ ಕಿರೀಟಪ್ರಾಯವಾಗಿದೆ. ಶ್ರೀಮತಿ ಸಾವಿತ್ರಮ್ಮನವರು ಪ್ರೊ॥ ರಾಮಸ್ವಾಮಿಯವರ ಬಗೆಗೆ ಹೇಳಿದ್ದಕ್ಕೆ ಪೂರಕವಾಗಿ ಪ್ರೊ॥ ರಾಮಸ್ವಾಮಿಯವರು ಶ್ರೀಮತಿ ಸಾವಿತ್ರಮ್ಮನವರ ಕುರಿತು ಏನು ಹೇಳುತ್ತಿದ್ದರು ಎನ್ನುವ ವಿಷಯದಲ್ಲಿ ನನಗೆ ಗೊತ್ತಿರುವುದನ್ನು ಹೇಳುತ್ತೇನೆ. ಬೆಂಗಳೂರು ಆಕಾಶವಾಣಿಯಲ್ಲಿ "ಬಾಳುಬೆಳಕು" ಎನ್ನುವ "ವೃದ್ಧರಿಂದ ವೃದ್ಧರಿಗಾಗಿ ಭಾಷಣ"ಗಳನ್ನು, ಡಾ॥

ಶ್ರೀಮತಿ ಜ್ಯೋತ್ಸ್ನಾ ಕಾಮತರು ನಿರ್ದೇಶಕರಾಗಿದ್ದಾಗ ಏರ್ಪಡಿಸಿದ್ದರು. ಈ ನಿರ್ದೇಶಕರಿಗೆ ರಾಮಸ್ವಾಮಿ ದಂಪತಿಗಳ ಪರಿಚಯ ಚೆನ್ನಾಗಿದ್ದುದರಿಂದ ಈ ದಂಪತಿಗಳ ಸಂವಾದವನ್ನು ಈ ಮಾಲಿಕೆಯಲ್ಲಿ ಏರ್ಪಡಿಸಿದ್ದರು. ಇದೊಂದು ಅಪೂರ್ವ ಸಂವಾದವಾಗಿತ್ತು.

ಈ ಸಂವಾದದ ಧ್ವನಿ ಮುದ್ರಣದ ಪ್ರತಿ ಆಕಾಶವಾಣಿಯಿಂದ ಸಿಗುವದಾಗಿದ್ದರೆ ಈ ದಂಪತಿಗಳ ಧ್ವನಿಯನ್ನು ಅವರ ಅಭಿಮಾನಿಗಳು ಯಾವಾಗಲೂ ಕೇಳಬಹುದು. ಈ ಕಾರ್ಯಕ್ರಮವಾದ ಮೇಲೆ ಅದರಲ್ಲಿ ತಮಗಿಂತ ತಮ್ಮ ಶ್ರೀಮತಿಯವರು ಚೆನ್ನಾಗಿ ಮಾತನಾಡಿದರೆಂದು ಪ್ರೊ॥ ರಾಮಸ್ವಾಮಿಯವರು ಹೆಮ್ಮೆಯಿಂದ ನನಗೆ ಹೇಳಿದರು.

ಶ್ರೀಮತಿ ಸಾವಿತ್ರಮ್ಮನವರ ಲೇಖನವಲ್ಲದೆ, ಅವರ ಮಕ್ಕಳು, ಬಂಧುಗಳು ಮತ್ತು ಪ್ರೊ॥ ರಾಮಸ್ವಾಮಿಯವರ ಸ್ನೇಹಿತರು, ಅಭಿಮಾನಿಗಳು, ವಿದ್ಯಾರ್ಥಿಗಳು ಪ್ರೊಫೆಸರರ ಸರಳ ಸ್ವಭಾವ, ಸಜ್ಜನಿಕೆ, 'ಪಾಲಿಗೆ ಬಂದದ್ದು ಪಂಚಾಮೃತ'ವೆನ್ನುವ ಅವರ ಸಮಾಧಾನಸ್ವಭಾವ -- ಇವುಗಳನ್ನು ಮುಕ್ತಕಂಠದಿಂದ ಹೊಗಳಿದ್ದಾರೆ. ಈ ಪ್ರಶಂಸೆಯಲ್ಲಿ ಒಂದು ಸ್ವಾರಸ್ಯವೆಂದರೆ, ಅದೇ ಭಾವ, ಅದೇ ಭಾಷೆಗಳ ಪುನರುಕ್ತಿ ನೋಡಿದರೆ ಒಬ್ಬರು ಬರೆದದ್ದನ್ನು ಇನ್ನೊಬ್ಬರು ನೋಡಿ ಬರೆದಿದ್ದಾರೋ ಎನ್ನುವ ಹಾಗಿದೆ. ನನ್ನ ಮಟ್ಟಿಗೆ ಹೇಳುವುದಾದದರೆ ಅವರ ಸ್ನೇಹ, ಸರ್ವಜ್ಞ ಹೇಳಿದ ಹಾಗೆ "ಸಜ್ಜನರ ಸಂಗವದು ಹೆಜ್ಜೇನು ಮೆದ್ದಂತೆ" ಎನ್ನುವ ಹಾಗಿತ್ತು. ಅವರ ನೆಂಟರಿಗೆಲ್ಲಾ ಅವರ 'ರಾಯಣ್ಣ' ಸ್ಫೂರ್ತಿಯ ಸೆಲೆಯಾಗಿದ್ದರು.

ಈ ಸಂಸ್ಮರಣ ಗ್ರಂಥದ ಇನ್ನೊಂದು ಮುಖ್ಯಭಾಗ, ಅವರ ಸಂಶೋಧನೆಗಳು. ಅವರು ಸಂಶೋಧನೆ ಮಾಡುತ್ತಿದ್ದ ಬಗ್ಗೆ ಮತ್ತು ಅದನ್ನು ಪ್ರಾರಂಭಿಸಿದ ಬಗ್ಗೆ ಅವರೇ ಬರೆದ ಒಂದು ಲೇಖನವನ್ನು ಮೊದಲು ಓದಬೇಕು. ಅವರು ಒಂದು ಭಾಷಣವನ್ನು ಮಾಡಬೇಕಾದಾಗ ಆಗಲಿ ಅಥವಾ ಒಂದು ಲೇಖನ ಬರೆಯುವಾಗಲಾಗಲಿ ಒಂದೇ ವಿಷಯದ ಬಗ್ಗೆ ಮೂರು ನಾಲ್ಕು ತರಹ ಬರೆದಿಟ್ಟುಕೊಳ್ಳುತ್ತಿದ್ದರು. ಶ್ರೀಮತಿ ಸಾವಿತ್ರಮ್ಮ ಅವುಗಳನ್ನು ಸಂಗ್ರಹಿಸಿ ಕೊಟ್ಟದ್ದನು ಶ್ರೀ ಗೀತಾಚಾರ್ಯರು ಓದಿ ಒಂದು ಸುಸಂಬದ್ಧವಾದ ಲೇಖನವನ್ನಾಗಿ ಮಾಡುವಲ್ಲಿ ತಮ್ಮ ಕೌಶಲ್ಯವನ್ನು ಈ ಗ್ರಂಥದಲ್ಲಿ ತೋರಿಸಿದ್ದಾರೆ.

ಸೋಮದೇವನ ನೀತಿವಾಕ್ಯಾಮೃತದ ನೇಮಿನಾಥನ ಕನ್ನಡ ಟೀಕೆಯನು ಪ್ರೊ॥ ರಾಮಸ್ವಾಮಿ, ಪ್ರೊ॥ ರಿತ್ತಿ ಮತ್ತು ನಾನು ಸೇರಿ ಸಂಪಾದಿಸಿದ್ದೇವೆ. ಪ್ರೊ॥ ರಾಮಸ್ವಾಮಿಯವರು ಈ ಕನ್ನಡ ಟೀಕೆಯನ್ನು ಕುರಿತು ಮಾಡಿದ ಒಂದು ಭಾಷಣ ಈ ಲೇಖನ ಸಂಗ್ರಹದಲ್ಲಿದೆ. ನಾವು ಮೂರು ಜನರು ಸೇರಿ ಈ ಟೀಕೆಯನು

ಸಂಪಾದಿಸಿದ್ದರಿಂದ ಅದರಲ್ಲಿ ಯಾವ ಭಾಗ ಯಾರದು ಎಂದು ಹೇಳಲು ಬರುವುದಿಲ್ಲ. ಆದರೂ ಗ್ರಂಥಸಂಪಾದನ ಕಲೆಯನ್ನು ರಾಮಸ್ವಾಮಿಗಳು, ಪ್ರೊಫೆಸರುಗಳಾದ ವೆಂಕಣ್ಣಯ್ಯನವರು ಮತ್ತು ಡಿ.ಎಲ್. ನರಸಿಂಹಾಚಾರ್ಯರಿಂದ ಕಲಿತಿದ್ದರಿಂದ ನಮ್ಮ ನೀತಿವಾಕ್ಯಾಮೃತ ಮತ್ತು ಟೀಕೆಯ ಪಾಠವನ್ನು ಗುರುತಿಸುವಲ್ಲಿ ರಾಮಸ್ವಾಮಿಗಳ ಪಾತ್ರ ಹಿರಿದು ಎಂದು ಹೇಳಬಹುದು.

ಪ್ರಸ್ತುತ ಗ್ರಂಥದಲ್ಲಿ ವೀರಶೈವ ಸಾಹಿತ್ಯ ಮತ್ತು ಇತಿಹಾಸಗಳನ್ನು ಕುರಿತು ಅನೇಕ ಲೇಖನಗಳಿವೆ. ಇವೇ ಒಂದು ಪ್ರತ್ಯೇಕ ಗ್ರಂಥವೂ ಆಗಬಹುದು. ಈ ಭಾಗದಲ್ಲಿರುವ ಹೆಚ್ಚಿನ ಲೇಖನಗಳು ನಾನು ಅವರು ಸೇರಿ ಬಸವ-ಬಿಜ್ಜಳರ ಸಂಬಂಧ ಕುರಿತು ಬರೆಯಬೇಕೆಂದಿದ್ದ ಒಂದು ಪುಸ್ತಕದ ಸಲುವಾಗಿ ಅವರು ಮಾಡಿದ ಸಂಶೋಧನೆಯ ಫಲಗಳು: ಇನ್ನು ಕೆಲವು, ಅವರು ಪ್ರೊ॥ ಟಿ.ಎಸ್. ವೆಂಕಣ್ಣಯ್ಯ ಮತ್ತು ಪ್ರೊ॥ ಡಿ.ಎಲ್. ನರಸಿಂಹಚಾರ್ಯರು ವೀರಶೈವ ಸಾಹಿತ್ಯದಲ್ಲಿ ಮಾಡಿದ ಸಂಶೋಧನೆಯಿಂದ ಸ್ಫೂರ್ತಿಯನ್ನು ಪಡೆದು ಬರೆದ ಲೇಖನಗಳು. 'ವೀರಶೈವ ಪುರಾಣಗಳು' ಮತ್ತು 'ಸಿದ್ಧರಾಮ ಕೆಲವು ವಿಚಾರಗಳು' ಇವಕ್ಕೆ ಉದಾಹರಣೆಗಳು. ಬಾಡಾಲ ರಾಮಯ್ಯನವರ "ಬಸವೇಶ್ವರ ವಚನಾಲು – ಸಮಗ್ರ ಸಮೀಕ್ಷ" – ಎಂಬ ತೆಲುಗು ಗ್ರಂಥದ ಕೆಲವು ಭಾಗಗಳ ಕನ್ನಡ ಅನುವಾದ ಈ ಪುಸ್ತಕದಲ್ಲಿದೆ. ಅದೇರೀತಿ ಇನ್ನೊಂದು ತೆಲುಗು ಗ್ರಂಥ 'ನವನಾಥ ಚರಿತೆ'ಯ ಕೆಲವು ಭಾಗಗಳ ಅನುವಾದವು ಇಲ್ಲಿ ಇದೆ. ಇವೆಲ್ಲಾ ಬಸವ-ಬಿಜ್ಜಳರ ಸಂಬಂಧಗಳನ್ನು ತಿಳಿದುಕೊಳ್ಳಲು ಅನುಕೂಲವಾಗುತ್ತವೆ. ಇದೇ ಉದ್ದೇಶದಿಂದ ರಾಮಸ್ವಾಮಿಗಳು: ಅಣ್ಣಿಗೆರೆ, ತಾಳಿಕೋಟೆ, ಅಬ್ಬಲೂರು, ಎಮಟಿಗೆ ಮತ್ತು ಹಳೇಬೀಡುಗಳಲ್ಲಿರುವ ಕೆಲವು ಶಾಸನಗಳ ಕಾಲನಿರ್ಣಯ ಮಾಡುವಲ್ಲಿ ಮತ್ತು ಅರ್ಥೈಸುವುದರಲ್ಲಿ ಹಿಂದಿನ ವಿದ್ವಾಂಸರಿಂದ ಒಂದು ಹೆಜ್ಜೆ ಮುಂದೆ ಹೋಗಿದ್ದಾರೆ. ಎಮಟಿಗೆ ಶಾಸನವನ್ನು ಅವರಿಗೆ ಅವರ ವಿದ್ಯಾರ್ಥಿ ಮತ್ತು ಅಭಿಮಾನಿಗಳಾದ ಪ್ರೊ॥ ಭೀಮಪ್ಪ ಸುರಪುರ ಇವರು ಪರಿಚಯಿಸಿದರು. ಅನೇಕ ವಿದ್ವಾಂಸರಿಗೆ ಈ ಶಾಸನ ಗೊತ್ತಿಲ್ಲ.

ಇಂತಹ ಅನೇಕ ಅಮೂಲ್ಯ ಲೇಖನಗಳು ಈ ಗ್ರಂಥದ ಮೂಲಕ ಕನ್ನಡ ಸಾಹಿತ್ಯ – ಸಂಶೋಧನೆ ವಲಯಕ್ಕೆ ತೆರೆದುಕೊಳ್ಳುತ್ತವೆ. ಹಾಗೆಯೇ ಪ್ರೊ॥ ಬಿ.ರಾಮಸ್ವಾಮಿಯಂತಹ ಘನ ವಿದ್ವಾಂಸರ ವಿದ್ವತ್ ನಿಷ್ಠೆಯೂ ದಾಖಲೆಯಾಗುತ್ತದೆ. ಈ ಪುಸ್ತಕವೇನಾದರೂ ಬರದೇ ಹೋಗಿದ್ದಿದ್ದರೆ ಪ್ರೊ ॥ ರಾಮಸ್ವಾಮಿಗಳಂತಹ ಶ್ರೇಷ್ಠ ವಿದ್ವಾಂಸರು ಇದ್ದರೆಂಬುದೇ ಗೊತ್ತಾಗುತ್ತಿರಲಿಲ್ಲ. ಈ ದೃಷ್ಟಿಯಲ್ಲಿಯೂ ಇಂತಹ ಸಂಪುಟಗಳು ಅತ್ಯಗತ್ಯವಾಗಿವೆ.

ರಾಮಸ್ವಾಮಿಯವರ ವಂಶದ ದಾಖಲೆಗಳನ್ನು ಪತ್ತೆಮಾಡಿ ಅವರ ವಂಶದ ಪ್ರಾಚೀನತೆ ಮತ್ತು ಇತಿಹಾಸ ಕುರಿತಾದ ಲೇಖನ ಎಲ್ಲಾ ಇತಿಹಾಸಕಾರರು ಮೆಚ್ಚತಕ್ಕಂಥದ್ದು. ಮತ್ತು ಅನುಸರಿಸತಕ್ಕದಂಥದ್ದು. ಇದಕ್ಕಾಗಿ ಸಂಪಾದಕರನ್ನು ಅಭಿನಂದಿಸಲೇಬೇಕು.

ಪುಸ್ತಕದ ಮುದ್ರಣ ಆಕರ್ಷಕವಾಗಿ ಆಗಿದೆ. ಹಾಗೆ ಆಗುವುದಕ್ಕೆ ಎಂದಿನಂತೆ ಮುತುವರ್ಜಿವಹಿಸಿದ ಪ್ರತಿಷ್ಠಾನದ ಕಾರ್ಯದರ್ಶಿ ಹಾಗೂ ನಿಸ್ಪೃಹ ಕಾರ್ಯಕರ್ತರೂ ವಿದ್ವಾಂಸರೂ ಆದ ಶ್ರೀ ಗೀತಾಚಾರ್ಯರು ಮತ್ತು ರೋಟಗ್ರಾಫಿಕ್ಸನ ಮಾಲಿಕರಾದ ಶ್ರೀ ಆರ್.ಜಿ. ಪ್ರಸಾದ್ ಇವರು ವಿಶೇಷ ಅಭಿನಂದನಾರ್ಹರು. ಇಂತಹ ಬೃಹದ್ ಗ್ರಂಥವನ್ನು ಕನ್ನಡಿಗರಿಗೆ ಕೊಡಮಾಡಿದ ಪ್ರೊ. ರಾಮಸ್ವಾಮಿಗಳ ಬಂಧು ಬಳಗದವರೂ, ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದ ಕಾರ್ಯಕರ್ತರೂ ಮತ್ತು ಸಂಪಾದಕರೂ ಕೃತಜ್ಞತೆಗೆ ಪಾತ್ರರಾಗಿದ್ದಾರೆ.

ಮುನ್ನುಡಿ : ೩೫

ಜ್ಯೋತ್ಸ್ನಾ ಕಾಮತರ 'ಕರುನಾಡಿನ ಜನಜೀವನ'

ಕಾಮತರು ತಮ್ಮ ಪ್ರಾಚೀನ ಕರ್ನಾಟಕದ ಜನಜೀವನ ಕುರಿತಾದ ಪುಸ್ತಕಕ್ಕೆ ಮುನ್ನುಡಿಯನ್ನು ನಾನು ಬರೆಯಬೇಕು, ಎಂದು ಕೇಳಿಕೊಂಡಾಗ, ಆನಂದದಿಂದ ಒಪ್ಪಿಕೊಂಡೆ. ಅವರು ಈ ಪುಸ್ತಕಕ್ಕೆ ಯೋಚಿಸಿದ ಶೀರ್ಷಿಕೆ, 'ಕರುನಾಡಿನ ಜನಜೀವನ' ಎಂದಿದೆ. ಇದು ದಿವಂಗತ ಶ್ರೀ ಬೆಟಗೇರಿ ಕೃಷ್ಣಶರ್ಮರ 'ಕರ್ನಾಟಕ ಜನಜೀವನ'ವೆನ್ನುವ ಪ್ರಖ್ಯಾತ ಪುಸ್ತಕದ ಶೀರ್ಷಿಕೆಯನ್ನು ನೆನಪಿಗೆ ತಂದಿತು. ಆದರೆ ಎರಡೂ ಗ್ರಂಥಗಳಲ್ಲಿ ವಿಷಯ ನಿರೂಪಣೆ ಬೇರೆ ಬೇರೆ ಹಾದಿಯನ್ನು ತುಳಿದಿವೆ. ಬೆಟಗೇರಿಯವರು, ವಿಜಯನಗರ ಕಾಲದ ಜನಜೀವನವನ್ನು ಕನಕದಾಸರ 'ಮೋಹನ ತರಂಗಿಣಿ' ಯಿಂದಲೂ ಮತ್ತು ಒಡೆಯರ ಕಾಲದ ಜನಜೀವನವನ್ನು ಗೋವಿಂದ ವೈದ್ಯನ 'ಕಂಠೀರವ ನರಸರಾಜ ವಿಜಯ'ದ ಸಹಾಯದಿಂದಲೂ ಚಿತ್ರಿಸಿದ್ದಾರೆ. ಜ್ಯೋತ್ಸ್ನಾ ಕಾಮತರು ಜೀವನದ ಕೆಲವು ಅವಶ್ಯಕತೆಗಳ ಮತ್ತು ಸೌಕರ್ಯಗಳ ಸಾದ್ಯಂತ ಇತಿಹಾಸದಲ್ಲಿಯ ಮೈಲಿಗಲ್ಲುಗಳನ್ನು ಗುರುತಿಸಿದ್ದಾರೆ. ಅವರ ೧೮ ಲೇಖನಗಳನ್ನು ಹೀಗೆ ವಿಂಗಡಿಸಬಹುದು.

೧) ಜನರ ಒಟ್ಟು ಜನಜೀವನ : ೧) ತ್ರಿವಿಕ್ರಮಭಟ್ಟ ಮತ್ತು ೨) ಆದಿಪಂಪರ ಕಾವ್ಯಗಳಿಂದ ; ೩) ಕಾಷ್ಠಶಿಲ್ಪಗಳಿಂದ, ಮತ್ತು ೪) ಹಂಪೆಯ ಉಬ್ಬು ಚಿತ್ರಗಳಿಂದ ೫) ಶಾಸ್ತ್ರ ಗ್ರಂಥದಿಂದ

೨) ಜೀವನದ ಅವಶ್ಯಕತೆಗಳು : ೫) ಆಹಾರ, ೬) ಸ್ನಾನ ೭) ಉಡಿಗೆ-ತೊಡಿಗೆ ೮) ಸೀರೆ, ಮತ್ತು ೯) ಕನ್ನಡಿಗಳು

೩) ಜೀವನದ ಸೌಯುರ್ಕಗಳು ೧೦) ಮಂಚ ೧೧) ಕುಲಾಯಿ ೧೨) ಕೇಶಾಲಂಕಾರ

೪) ಮನರಂಜನ : ೧೩) ಸುರಾಪಾನ ೧೪) ಆಟಕೂಟಗಳು, ಮತ್ತು ೧೫) ತೇರು

೫)　ಸಂಕೀರ್ಣ ೧೬) ಐತಿಹಾಸಿಕ ವ್ಯಕ್ತಿಗಳು, ಮತ್ತು ೧೭) ಪರಿಸರ ಪ್ರೇಮ ೧೮) ಸಮಾಜ ವ್ಯವಸ್ಥೆ

ಈ ೧೮ ಲೇಖನಗಳ ಸ್ವಾರಸ್ಯವನ್ನು, ಅವುಗಳನ್ನು ಓದಿಯೇ ಸವಿಯಬೇಕು. ಇಲ್ಲಿ ಲೇಖಕಿಯ ಐತಿಹಾಸಿಕ ಪ್ರಜ್ಞೆ ಮತ್ತು ಸೂಕ್ಷ್ಮ ನೋಟಗಳ ಕೆಲವು ಉದಾಹರಣೆಗಳನ್ನು ಕೊಡಲು ಮಾತ್ರ ಸಾಧ್ಯ. ಆದಿಪಂಪನ ತುರುಕಾಳಗದ ವರ್ಣನೆಯನ್ನು ಯಥಾವತ್ ಕಲ್ಲಿನಲ್ಲಿ ಕಂಡರಿಸಿದಂತಿರುವ ವೀರಗಲ್ಲೊಂದು ಬನವಾಸಿಯ ಮ್ಯುಝಿಯಂದಲ್ಲಿದೆ. ತನ್ನ ಪ್ರೀತಿಯ ಬನವಾಸಿಯಲ್ಲಿ ಕಂಡಂಥ ತುರುಕಾಳಗದ ಹಸಿರು ನೆನಪವನ್ನು ತನ್ನ ಕಾವ್ಯದಲ್ಲಿ ಸ್ಥಾಯಿಯಾಗಿಡಲು ಕವಿಯು ಹವಣಿಸಿದನೇ? ಎಂದು ಲೇಖಕಿ ಕೇಳುತ್ತಾರೆ.

'ಆಹಾರ ಸಂಸ್ಕೃತಿ'ಯನ್ನು ಕುರಿತ ಲೇಖನ ಈ ಸಂಗ್ರಹದಲ್ಲಿ ಅತ್ಯುತ್ತಮ ಲೇಖನ. ನಮ್ಮ ತಿನಸುಗಳ ಪ್ರಾಚೀನತೆ ಆಶ್ಚರ್ಯಕರ. ಎಲ್ಲೆಡೆ ಈಗ ಜನಪ್ರಿಯವಾಗಿರುವ ಇಡ್ಲಿ. 'ವಡ್ಡಾರಾಧನೆ' (೧೦ನೇ ಶತಮಾನ) ಯಷ್ಟು ಹಳೆಯದು. ನಮ್ಮ ತಿನಸುಗಳು ಎಷ್ಟು ಹಳೆಯವೋ ಅಷ್ಟು ವೈವಿಧ್ಯಮಯ. ಮಂಗರಸ (ಕ್ರಿ.ಶ. ಸುಮಾರು ೧೫೦೮) ತನ್ನ ಸೂಪಶಾಸ್ತ್ರದಲ್ಲಿ ೧೫ ಪ್ರಕಾರದ ಭಾತುಗಳನ್ನು ಮತ್ತು ಬದನೆಕಾಯಿಯ ೩೦ ಪ್ರಕಾರದ ವ್ಯಂಜನಗಳನ್ನು ವರ್ಣಿಸಿದ್ದಾನೆ. ಇವರು ಲೇಖನಗಳಲ್ಲಿ ಪದೇ ಪದೇ ಹೇಳುತ್ತಿರುವದು, ನಮ್ಮ ಸಂಸ್ಕೃತಿಯ ಅನೇಕ ಒಳ್ಳೆಯ ಆದರ್ಶಗಳನ್ನು ಮರೆತಿದ್ದೇವೆ ಎಂದು. ನಾವು ಮರೆತಿರುವ, ಮರೆಯಬಾರದ ಕೆಲವು ತಿನಸುಗಳನ್ನು ಮಾಡುವ ವಿಧಾನವನ್ನು ವಿವರಿಸಿದ್ದಾರೆ.

ಹತ್ತರಿಂದ ಹನ್ನೆರಡನೆಯ ಶತಮಾನಗಳಲ್ಲಿ ಅಂದರೆ ಕಲ್ಯಾಣದ ಚಾಳುಕ್ಯರ ಕಾಲದಲ್ಲಿ ಕರ್ನಾಟಕದ ವೇಷ-ಭೂಷಣಗಳು ಭಾರತಕ್ಕೆ ಮಾದರಿಯಾಗಿದ್ದವು. ಇದಕ್ಕೆ ಒಳ್ಳೆಯ ಉದಾಹರಣೆ, ಕಲ್ಹಣನ ರಾಜತರಂಗಿಣಿಯಲ್ಲಿದೆ. ಕಾಶ್ಮೀರದ ದೊರೆ ಹರ್ಷನು, ಕರ್ನಾಟಕದ ವೇಷ-ಭೂಷಣಗಳಿಗೆ ಮಾರುಹೋಗಿ, ಅವನ್ನು ತನ್ನ ದೇಶದಲ್ಲಿ ತರುವದಕ್ಕೆ ಪ್ರಚಾರ ಮಾಡಿದನಂತೆ. ಭಾರತದಲ್ಲಿ ಮಾತ್ರವಲ್ಲ, ವಿದೇಶಿಯರು, ನಮ್ಮ ಕರಕುಶಲತೆಯನ್ನು ಮನಸಾರೆ ಹೊಗಳಿದ್ದಾರೆ. 'ಸಾಹಿತ್ಯ, ಶಿಲ್ಪ, ಚಿತ್ರಗಳಲ್ಲಿ ಮಂಚ' ಎನ್ನುವ ಲೇಖನದಲ್ಲಿ ಲೇಖಕಿಯು ಹದಗೊಳಿಸಿದ ಮೇಲ್ಹಾಸುಗಳ ಮೇಲೆ ಚಿನ್ನ-ಬೆಳ್ಳಿಗಳ ಕಸೂತಿಯಿದ್ದು, ಇದರಲ್ಲಿ ಭಾರತೀಯರ ನೈಪುಣ್ಯವನ್ನು ಇನ್ನಾವ ದೇಶವೂ ಪಡೆದಿಲ್ಲ ಎಂಬ ಮಾರ್ಕೊಪೋಲೋನ ಹೇಳಿಕೆಯನ್ನು ನಮ್ಮ ಲಕ್ಷಕ್ಕೆ ತಂದಿದ್ದಾರೆ.

'ಹಂಪೆಯ ಮಹಾನವಮಿಯ ದಿಬ್ಬದ / ಚಿತ್ರಗಳಲ್ಲಿ ಜನಸಾಮಾನ್ಯ' ಎನ್ನುವ ಲೇಖನ, ಲೇಖಕಿಯ ಸೂಕ್ಷ್ಮನೋಟಕ್ಕೆ ಅತ್ಯುತ್ತಮ ಉದಾಹರಣೆ. ಅವುಗಳಲ್ಲಿ

ಎದ್ದು ಕಾಣುವವು. ಆನೆ- ಕುದುರೆಗಳಾಗಿದ್ದರಿಂದ, ಅವುಗಳ ಸವಾರರು ರಾಜರು, ಸೇನಾಪತಿಗಳು, ಅಂದುಕೊಂಡು ಸುಮ್ಮನಿರುತ್ತೇವೆ. ಇವರ ಸೂಕ್ಷ್ಮನೋಟದಿಂದ, ಕುದುರೆಯ ತರಬೇತಿಗಾರರು, ಗೃಹಕೃತ್ಯದಲ್ಲಿ ತೊಡಗಿರುವ ಹೆಂಗಳೆಯರು, ಒನಕೆಯಿಂದ ಬತ್ತಕುಟ್ಟಿ ಅಕ್ಕಿ ಮಾಡುವವದರಲ್ಲಿ ಮೈ-ಮರೆತಿರುವವರು.... ಕೋಲಾಟವಾಡುವ ಹೆಂಗಳೆಯರು ಜನಸಾಮಾನ್ಯರ ಪ್ರತಿನಿಧಿಗಳೆಂದು ಅವರ ಮಿತವಾದ ಆಭರಣ-ಅಲಂಕಾರಗಳಿಂದ ಮಾಡಿರುವ ಇವರ ಊಹೆ ಸಮಂಜಸವಾಗಿದೆ.

ಇವರ ಅಷ್ಟೇ ಸೂಕ್ಷ್ಮ ನಿರೀಕ್ಷಣೆಗೆ ಇನ್ನೊಂದು ನಿದರ್ಶನ, 'ವಾಸ್ತು, ಶಿಲ್ಪ, ಭಿತ್ತಿ-ಚಿತ್ರಗಳಲ್ಲಿ ಕೇರು', ಎನ್ನುವ ಲೇಖನ. ಇದರಲ್ಲಿ ಶ್ರವಣಬೆಳ್ಗೊಳದ ಮಠದಲ್ಲಿಯ ಭಿತ್ತಿ-ಚಿತ್ರಗಳಲ್ಲಿಯ ಸವಿಸ್ತರ ಮಾಹಿತಿ ನಮ್ಮ ಮುಂದೆ ಕಣ್ಣಿಗೆ ಕಟ್ಟಿದಂತೆ ವರ್ಣಿಸಿದ್ದಾರೆ. ಸೂಕು-ಸುಗ್ಗಲಲ್ಲಿ, ಕಳ್ಳಕಾಕರು ತಮ್ಮ ಕೈಚಳಕವನ್ನು ತೋರಿಸಿ ಗುಪ್ತಚಾರರ ಕೈಗೆ ಸಿಕ್ಕು ಏಟು ತಿನ್ನುತ್ತಿರುವ ದೃಶ್ಯವನ್ನು, ಲೇಖಕಿ ಪತ್ತೆ ಮಾಡಿರುವದು, ಗುಪ್ತಚಾರರ ಪತ್ತೆದಾರಿಗೆ ಸಮನಾದ ಪತ್ತೆದಾರಿಯಾಗಿದೆ.

"ಇವರ ಲೇಖನಗಳಿಗೆ ಇವರು ಹಳೆಯದೆಲ್ಲವೂ ಚೆನ್ನಾಗಿತ್ತು ಹಿಂದೆ ಕೆಟ್ಟದು ಯಾವುದೂ ಇರಲಿಲ್ಲವೆಂದು ತಿಳಿದುಕೊಂಡ ಹಾಗೆ ಇದೆ!" ಎಂಬ ಟೀಕೆ ಬರಬಹುದು. ಇದಕ್ಕೆ ಉತ್ತರ : ಇವರ ವಿಷಯ ಸಂಗ್ರಹವೇ ಹಾಗಿದೆ. ಹಳೆಯದರಲ್ಲಿ ಒಳ್ಳೆಯ ಪದ್ಧತಿಗಳನ್ನು ಆರಿಸಿ ಇವು ನಮ್ಮಲ್ಲಿ ಈಗಿಲ್ಲ, ಅವು ಇದ್ದಿದ್ದರೆ ಚೆನ್ನಾಗಿತ್ತು! ಎಂದು ಅನೇಕ ಕಡೆ ಹೇಳಿದ್ದಾರೆ. ಕೆಲವು ಒಳ್ಳೆಯ ಪದ್ಧತಿಗಳನ್ನು ನಾವು ಮರೆತು ಬಿಟ್ಟಿದ್ದೇವೆಂದು ದುಃಖಪಡುತ್ತಾರೆ. ಇವರ ಗ್ರಂಥಕ್ಕೆ ಪರ್ಯಾಯ ಶೀರ್ಷಿಕೆ ಸೂಚಿಸಬಹುದಾದರೆ ಅದು "ಕನ್ನಡಿಗರು ಮರೆತುಹೋದ ತಮ್ಮ ಸಂಸ್ಕೃತಿಯ ಒಳ್ಳೆಯ ಪದ್ಧತಿಗಳು." ಆದ್ದರಿಂದ ಅವರು ನಮ್ಮಲ್ಲಿ ಹಿಂದೆ ಇದ್ದ ಕೆಟ್ಟ ಪದ್ಧತಿಗಳನ್ನು ಹೇಳುವುದಿಲ್ಲವೆನ್ನುವ ಟೀಕೆ ಅಪ್ರಸ್ತುತ.

ಇದೇ ಲೇಖಕಿ, 'ಸಂಸಾರದಲ್ಲಿ ಸ್ವಾರಸ್ಯ' ಎನ್ನುವ ಹಾಸ್ಯಲೇಖನ ಸಂಗ್ರಹವನ್ನು ಪ್ರಕಟಿಸಿದ್ದಾರೆ. ಅದೇ ತರಹ ಈ ಸಂಗ್ರಹಕ್ಕೆ 'ಸಂಶೋಧನೆಯಲ್ಲಿ ಸ್ವಾರಸ್ಯ'ವೆನ್ನುವ ಶೀರ್ಷಿಕೆ ಒಪ್ಪುತ್ತದೆ. ಬರಹಗಳು ಎಲ್ಲರಿಗೂ ತಿಳಿಯುವ ವಿಷಯಗಳ ಕುರಿತು, ಎಲ್ಲರೂ ತಿಳಿದುಕೊಳ್ಳಬಹುದಾದ ಸರಳ ಭಾಷೆಯಲ್ಲಿ ಮನಮುಟ್ಟುವ ಹಾಗೆ ಮೂಡಿ ಎಂದಿವೆ.

ಸ್ವಾರಸ್ಯದ ಜೊತೆಗೆ ಈ ಲೇಖನಗಳಲ್ಲಿ ಮಿತದ - ಹಿತದ ಬೋಧನೆಯೂ ಇದೆ. ನಮ್ಮ ಹಿರಿಯರು ಪಾಲಿಸಿಕೊಂಡು ಬಂದ ಪಾನಪದ್ಧತಿಯನ್ನು

ರೂಢಿಸಿಕೊಂಡು ಬಂದರೆ, ಮಿತಿ ಆಹಾರ, ಯೋಗ್ಯ ವ್ಯಾಯಾಮಗಳಂತೆ, ಮಿತಪಾನವೂ ಸರ್ವರಿಗೂ ಹಿತಕಾರಿಯಾದೀತು! ಎನ್ನುತ್ತಾರೆ.

ಹೊಸ ಸಂಶೋಧಕರಿಗೆ ಇವರು ಮಾರ್ಗದರ್ಶಿಯಾಗಿರುವ ಒಂದೆರಡು ಉದಾಹರಣೆಗಳೊಂದಿಗೆ ಈ ಮುನ್ನುಡಿಯನ್ನು ಮುಗಿಸುತ್ತೇನೆ. ೧. ಕೊರಡಿನ ಚಿತ್ರಗಳು ಇತಿಹಾಸದ ಅಧ್ಯಯನಕ್ಕೆ ಹೊಸ ಆಯಾಮ ನೀಡಬಲ್ಲವು. ಇವು ಪರ್ತಕಾಳಿಮಠ, ಶಿರಾಲಿಯ ಚಿತ್ತಾಪುರಮಠ, ಶಿವಪ್ಪನಾಯಕನ ವಸ್ತು ಸಂಗ್ರಹಾಲಯ, ಶಿವಮೊಗ್ಗ ಮತ್ತು ಗೋವಾದ ರಾಮನಾಥ ದೇವಾಲಯಗಳಲ್ಲಿವೆ. ೨. ಕರ್ನಾಟಕ, ಆಂಧ್ರ ಮತ್ತು ತಮಿಳುನಾಡುಗಳಲ್ಲಿ ಉಬ್ಬುಚಿತ್ರಗಳಿವೆ. ಇವುಗಳಲ್ಲಿ ರೂಪಗೊಂಡ ವಿಗ್ರಹಗಳ ಕೇಶಾಲಂಕಾರ, ಬಟ್ಟೆಬರೆ, ಒಡವೆಗಳನ್ನು ಅಭ್ಯಸಿಸಿ ಗುರುತಿಸಿದರೆ, ಅಂದಿನವರ ಸಾಮಾಜಿಕ ಜೀವನದ ಮೇಲೆ ಹೊಸ ಬೆಳಕನ್ನು ಬೀರಬಹುದಾಗಿದೆ.

■

ಮುನ್ನುಡಿ : ೩೬

ಮೈಸೂರು ಇತಿಹಾಸದ ಹಳೆಯ ಪುಟಗಳು

ದಿ॥ ತಿರುಮಲೆ ತಾತಾಚಾರ್ಯ ಶರ್ಮ ಇವರ ಜನ್ಮ ಶತಮಾನೋತ್ಸವ ಸಂದರ್ಭದಲ್ಲಿ ಪುನಃ ಪ್ರಕಟವಾಗುತ್ತಿರುವ ಅವರ 'ಮೈಸೂರಿನ ಇತಹಾಸದ ಹಳೆಯ ಪುಟಗಳು' ಈ ಪುಸ್ತಕಕ್ಕೆ ನಾನು ಮುನ್ನುಡಿ ಬರೆಯಲೇಬೇಕೆಂದು ಶರ್ಮರ ಮಕ್ಕಳು ಶ್ರೀ ಶ್ರೀರಂಗಾಚಾರ್ಯರು ಸೂಚಿಸಿದರು. ನಾನು ಆನಂದದಿಂದ ಒಪ್ಪಿಕೊಂಡೆ. ಇತಿಹಾಸಕ್ಕೆ ಶರ್ಮರ ಕೊಡುಗೆ ಅಪಾರ. ಇವರು ವಿಜಯನಗರ ರಾಜಗುರುಗಳ ಮನೆತನದವರು. ಸ್ವಾತಂತ್ರ್ಯ ಹೋರಾಟಗಾರರಾಗಿ, ವಿಶ್ವಕರ್ನಾಟಕ ಪತ್ರಿಕೆಯ ಸಂಸ್ಥಾಪಕ - ಸಂಪಾದಕರಾಗಿ, ಕನ್ನಡ ಸಾಹಿತ್ಯ ಪರಿಷತ್ತಿನ ಮತ್ತು ಮಿಥಿಕ್ ಸೊಸೈಟಿಯ ಅಧ್ಯಕ್ಷರಾಗಿ ಮತ್ತು ಹೆಸರಾಂತ ವಾಗ್ಮಿಗಳಾಗಿ ಇತಿಹಾಸವನ್ನು ಸೃಷ್ಟಿಸಿದ್ದಾರೆ. ಕಾಸರಗೋಡಿನ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿಯೂ ಇದ್ದರು. ಭಾರತ ಸರ್ಕಾರದ ಶಾಸನ ಇಲಾಖೆಯಲ್ಲಿ ಕೆಲವು ವರ್ಷ ಕೆಲಸ ಮಾಡಿದ್ದರಿಂದ ಕರ್ನಾಟಕದ ಪುರಾತನ ಇತಿಹಾಸದಲ್ಲಿ ಸಹಜವಾಗಿ ಅವರ ಆಸಕ್ತಿ ಬೆಳೆಯಿತು. ಕನ್ನಡ ಶಾಸನಗಳಲ್ಲಿ ಕಂಡು ಬರುವ ಕವಿಗಳ ಬಗೆಗೆ ಒಂದು ಪುಸ್ತಕವನ್ನು ಆಗ ಬರೆದರು. ಇದು ಪ್ರಾಚೀನ ಮತ್ತು ಮಧ್ಯಕಾಲಕ್ಕೆ ಸಂಬಂಧಪಟ್ಟ ವಿಷಯ. ಬ್ರಿಟಿಷರ ಕಾಲದ ಕರ್ನಾಟಕದ ಇತಿಹಾಸದಲ್ಲಿಯೂ ಅವರು ಆಸಕ್ತರಾಗಿದ್ದರು. ಇವಕ್ಕೆ ಉದಾಹರಣೆ ಪ್ರಸ್ತುತ ಪುಸ್ತಕ. ಎರಡು ಉದ್ದೇಶಗಳಿಂದ ಈ ಪುಸ್ತಕವನ್ನು ಬರೆದಿದ್ದಾರೆ. ಒಂದು ಬ್ರಿಟಿಷರ ವಿರುದ್ಧ ಹೋರಾಡುತ್ತಿದ್ದ ಅವರ ಕಾಲದವರು ಈ ಹೋರಾಟಕ್ಕೆ ಅಸ್ತಿಭಾರ ಹಾಕಿದವರನ್ನು ನೆನೆಯಬೇಕು ಮತ್ತು ಅನುಸರಿಸಬೇಕು. ಎರಡನೆಯದು, ಹಿಂದೂ-ಮುಸ್ಲಿಂ ಬಾಂಧವ್ಯಕ್ಕೆ ಹಿಂದೆ ಇದ್ದ ಉದಾಹರಣೆಗಳನ್ನು ನಾವು ಮರೆಯಬಾರದು; ಅವುಗಳಿಂದಲೂ ನಾವು ಸ್ಫೂರ್ತಿಯನ್ನು ಪಡೆಯಬೇಕು. ಇವೇ ಆ ಎರಡು ಉದ್ದೇಶಗಳು.

ಹೈದರ್, ಟೀಪು ಮತ್ತು ಮುಮ್ಮಡಿ ಕೃಷ್ಣರಾಜ ಒಡೆಯರರು - ಈ ಮೂವರು ಕರ್ನಾಟಕದ ರಾಜರ ಬಗೆಗೆ ತಮ್ಮ ಸಂಶೋಧನೆಯಿಂದ ಹೊಸ

ಮಾಹಿತಿಯನ್ನು ಸಂಗ್ರಹಿಸಿ ನಮ್ಮ ಮುಂದೆ ಇಟ್ಟಿದ್ದಾರೆ. ಈ ಮೂವರ ವಿಷಯಕ್ಕೂ ಬ್ರಿಟಿಷ್ ಇತಿಹಾಸಕಾರರು ಇದ್ದ ಸತ್ಯವನ್ನು ಹೇಳಿರಲಿಲ್ಲ. ಹೇಳಿದ್ದರೂ ತಪ್ಪು ಅಭಿಪ್ರಾಯ ಹುಟ್ಟುವ ಹಾಗೆ ಹೇಳಿದ್ದರು. ಬ್ರಿಟಿಷರು ನಮ್ಮ ದೇಶದಲ್ಲಿ ತಮ್ಮ ಸಾಮ್ರಾಜ್ಯವನ್ನು ಸ್ಥಾಪಿಸಲು ಹೊರಟಿರುವುದನ್ನು ಹೈದರ್ ಮತ್ತು ಟೀಪು ಎಲ್ಲರಿಗಿಂತ ಮೊದಲೇ ಗುರುತಿಸಿದರು. ಅವರ ಸಂಚನ್ನು ಮನಗಂಡು ಇವರನ್ನು ನಮ್ಮಲ್ಲಿ ನೆಲೆಯೂರಲು ಬಿಡಬಾರದೆಂಬ ನಿಶ್ಚಯವನ್ನು ಮಾಡಿದರು. ಅವರೊಡನೆ ಛಲದಿಂದ ಹೋರಾಡಿದರು ಮತ್ತು ಸಾಕಷ್ಟು ಯಶಸ್ಸನ್ನು ಗಳಿಸಿದರು. ಹಾಗೆ ಹೋರಾಡುತ್ತಿರುವಾಗಲೆ ಹೈದರನು ಅಕಾಲಮರಣಕ್ಕೆ ತುತ್ತಾದನು. ಟೀಪು ಧೈರ್ಯವಾಗಿ ಹೊಡೆದಾಡಿ ರಣರಂಗದಲ್ಲಿ ಪ್ರಾಣಬಿಟ್ಟನು. ಅವನ ಮಿತ್ರರೇ ಅವನಿಗೆ ದ್ರೋಹವೆಸಗಿದಾಗ ಹೀಗಾಯಿತು. ಆಗ ಟೀಪು ಹೇಳಿದ್ದನ್ನು ಮರೆಯುವ ಹಾಗಿಲ್ಲ. "ಈ ದ್ರೋಹಿಗಳಿಗೆ ಅರ್ಥವಾಗುವುದಿಲ್ಲ ಬಹಳ ಬೇಗ ಒಂದು ದಿನ ಬರುತ್ತದೆ, ಆಗ ಅವರ ಮಕ್ಕಳು ಮರಿಗಳಿಗೆ ಒಂದು ಚೂರು ರೊಟ್ಟಿಗೆ, ಒಂದು ಉಳ್ಳಿಗಡ್ಡೆಗೆ ಸಹ ಗತಿ ಇಲ್ಲದೆ ಉಪವಾಸದಿಂದ ನರಳುತ್ತಾರೆ!" ಅಂದ ಅವನ ಭವಿಷ್ಯ ಅಕ್ಷರಶಃ ನಿಜವಾಯಿತು (ಪು. ೪೩)

ಇವರಿಬ್ಬರೂ ತಮ್ಮ ತಮ್ಮ ರೀತಿಯಲ್ಲಿ ಶತ್ರುವನ್ನು ಎದುರಿಸಿದ್ದನ್ನು ಶರ್ಮರು ವರ್ಣಿಸಿದ್ದಾರೆ. ಬ್ರಿಟಿಷರ ಬಲವು ನೌಕಾಬಲದಲ್ಲಿರುವುದನ್ನು ಹೈದರನು ಮೊದಲು ಗುರುತಿಸಿದನು. "ನಾನು ನೂರಾರು ಬೇಲಿಗಳನ್ನು, ಬ್ರೇತ್‌ವೇಟರನ್ನು ಸೋಲಿಸಬಲ್ಲೆ. ಆದರೆ ಸಮುದ್ರವನ್ನು ಒಣಗಿಸಲಾರೆ" ಎಂದನು. ಆದರೂ ಅವರನ್ನು ಸಮುದ್ರದಲ್ಲಿ ಎದುರಿಸಲು ಒಂದು ನೌಕಾಪಡೆಯನ್ನು ಕಟ್ಟಿದನು. ನಮ್ಮ ಇತಿಹಾಸದಲ್ಲಿ ನಮ್ಮ ರಾಜರು ನೌಕಾಬಲವನ್ನು ಅಲಕ್ಷಿಸಿದ್ದಾರೆ. ಅಂಥವರಿಗೆ ಹೈದರ್ ಅಪವಾದ. ಅವನ ನೌಕಾಬಲ ಸಮರ್ಥವಾಗಿತ್ತೆನ್ನುವುದನ್ನು ಸಮಕಾಲೀನ ಯುರೋಪಿಯನ್ ಬರಹಗಾರರು ಒಪ್ಪಿಕೊಂಡಿದ್ದಾರೆ. ಜೋಸ್ ಪಿಡ್ರೂಡ ಕೆಮರಾ ಅವನು ಹೀಗೆ ಹೇಳಿದ್ದಾನೆ : (ಪು. ೧೮-೧೯) "ಹೈದರಾಲಿಯು ಭೂಬಲದಲ್ಲಿ ಪ್ರಚಂಡನಾಗಿದ್ದಾನೆ. ಜಲಬಲದಲ್ಲಿಯೂ ಅಷ್ಟೇ ಬಲಶಾಲಿಯಾಗಬೇಕೆಂಬ ಆಶೆಯಿಂದ ಕೂಡಿದ್ದಾನೆ. ಏಷಿಯಾ ಖಂಡದಲ್ಲೆ ಬಲಯುತವಾದ ನೌಕಾತಾಣ (ಭಟಕಲ್ಲಿನಲ್ಲಿ) ನಿರ್ಮಾಣವಾಗುತ್ತಿದೆ." ಲೋ ಎನ್ನುವ ಇಂಗ್ಲೀಷ್ ಯೋಧನು ಇದನ್ನು ಸಮರ್ಥಿಸಿ ಹೀಗೆ ಬರೆದಿದ್ದಾನೆ : "ಹೈದರನನ್ನು ಎದುರಿಸಿ ನಾವು ಬದುಕು-ಸಾವಿನ ಸಂಗ್ರಾಮ ನಡೆಸುತ್ತಿದ್ದೇವೆ, ಅವನ ನೌಕಾಬಲವೇರುತ್ತಿದೆ."

ಬ್ರಿಟಿಷರನ್ನು ಸೋಲಿಸಲಿಕ್ಕೆ ಟೀಪು ಬೇರೆ ರೀತಿಯಲ್ಲಿ ಹೆಣಗಾಡಿದನು. ನೆಪೋಲಿಯನ್ನನ ಜತೆಗೆ ಪತ್ರವ್ಯವಹಾರ ಮಾಡಿ ಅವನ ಸಹಾಯದಿಂದ ಅವರನ್ನು

ಭಾರತದಿಂದ ಹೊರದೂಡಲು ಯತ್ನಿಸಿದನು. ನೆಪೋಲಿಯನ್ನನು ಈಜಿಪ್ಟಿನವರೆಗೂ ಬಂದಿದ್ದನು. ಅಲ್ಲಿ ನೆಲ್ಸನನ್ನು ಅವನ ನೌಕಾಬಲವನ್ನು ನುಚ್ಚುನೂರು ಮಾಡಿದ್ದರಿಂದ ನೆಪೋಲಿಯನ್ನನು ಭಾರತಕ್ಕೆ ಬರುವ ಆಸೆಯನ್ನು ಬಿಟ್ಟು ಸ್ವದೇಶಕ್ಕೆ ಹಿಂತಿರುಗಬೇಕಾಯಿತು. ಆದರೂ ಟೀಪುವಿನ ಪ್ರಯತ್ನ ಸ್ತುತ್ಯರ್ಹ. ಯಾಕೆಂದರೆ ನಮ್ಮ ಹಿಂದಿನ ರಾಜರು ನೌಕಾಬಲವನ್ನು ಹೇಗೆ ಅಲಕ್ಷಿಸಿದರೊ ಹಾಗೆ ಪರದೇಶಗಳೊಡನೆ ವ್ಯವಹರಿಸುವುದನ್ನು ಅಲಕ್ಷಿಸಿದ್ದರು. ಹೀಗೆ ನೌಕಾಬಲವನ್ನು ಬಲಪಡಿಸುವಲ್ಲಿ ಮತ್ತು ವಿದೇಶ ವ್ಯವಹಾರದಿಂದ ನಮ್ಮ ದೇಶವನ್ನು ಸುಭದ್ರವನ್ನಾಗಿ ಮಾಡುವಲ್ಲಿ ಹೈದರ್-ಟೀಪು ಸ್ವತಂತ್ರ ಭಾರತಕ್ಕೆ ಮಾರ್ಗದರ್ಶಿಯಾಗಬಲ್ಲರೆಂದು ಶರ್ಮರು ತೋರಿಸಿಕೊಟ್ಟಿದ್ದಾರೆ.

ಬ್ರಿಟಿಷ್ ಇತಿಹಾಸಕಾರರು ಟೀಪು ಮತಾಂಧನೆಂದು ಹೀಯಾಳಿಸುತ್ತಿದ್ದರು. ಶೃಂಗೇರಿ ಮಠದಲ್ಲಿರುವ ಅಲ್ಲಿಯ ಮಠಾಧೀಶರಿಗೆ ಹೈದರ್ ಮತ್ತು ಟೀಪು ಇವರು ಬರೆದ ಪತ್ರಗಳಿವೆ. ಅವುಗಳಿಂದ ಮಠಾಧೀಶರ ಬಗೆಗೆ ಇವರಿಬ್ಬರ ಭಕ್ತಿ-ಪೂಜ್ಯ ಭಾವಗಳು ಎದ್ದು ಕಾಣುತ್ತವೆ. ಎಂತಹ ವಿಪರ್ಯಾಸ! ಹಿಂದೂಗಳಾದ ಮರಾಠರ ಸೈನಿಕರು ಶೃಂಗೇರಿಯ ಮಠದಿಂದ ೬೦ ಲಕ್ಷ ರೂ.ಗಳನ್ನು ಲೂಟಿ ಮಾಡಿಕೊಂಡು ಹೋದರು. ಇಂತಹ ಆಪತ್ತಿನ ಸಮಯದಲ್ಲಿ ಮುಸಲ್ಮಾನನಾದ ಟೀಪು ಅವರ ನೆರವಿಗೆ ಬಂದ. ಸ್ವಾಮಿಗಳು ಪುಣೆಗೆ ಹೋಗಿ ಲೂಟಿಯ ಸಂಬಂಧ ಪೇಷ್ವೆಯವರ ಜತೆಗೆ ಮಾತನಾಡಲು ಹೋಗಬೇಕೆಂದಾಗ ಅವರ ಪ್ರವಾಸಕ್ಕೆ ಟೀಪು ಎಲ್ಲಾ ಅನುಕೂಲತೆಗಳನ್ನು ಮಾಡಿಕೊಟ್ಟ. ಸ್ವಾಮಿಗಳು ಪುಣೆಯಲ್ಲಿ ಬಹಳ ದಿನಗಳಿದ್ದಾಗ. ಟೀಪು ಅವರಿಗೆ ಈ ರೀತಿ ಪತ್ರವನ್ನು ಬರೆದ: "ತಮ್ಮಂಥ ದೊಡ್ಡವರು ಯಾವ ದೇಶದಲ್ಲಿ ಇದ್ದರೆ ಆ ದೇಶಕ್ಕೆ ಮಳೆ ಬೆಳೆ ಸಕಲವೂ ಆಗಿ ಸುಭಿಕ್ಷವಾಗಿ ಇರತಕ್ಕದ್ದರಿಂದ ಪರಸ್ಥಳಗಳಲ್ಲಿ ಬಹಳ ದಿವಸ ತಾವು ಯಾತಕ್ಕೆ ಇರಬೇಕು. ಹೋದ ಕೆಲಸವನ್ನು ಕ್ಷಿಪತ್ರದಲ್ಲಿ ಅನುಕೂಲ ಮಾಡಿಕೊಂಡು ಸ್ಥಳಕ್ಕೆ ಸಾಗಿ ಬರುವಂತೆ ಮಾಡಿಸುವುದು. ಹೈದರ್ ಯಾವಾಗಲೂ ಮತಾಂಧನಾಗಿರಲಿಲ್ಲ; ಟೀಪುವೂ ಆಗಿರಲಿಲ್ಲ. ಮೇಲೆ ಹೇಳಿದ ಉದಾಹರಣೆಯಿಂದ ಆತನನ್ನು ಅಕ್ಬರನಿಗೆ ಹೋಲಿಸಬಹುದು. ಕೆಲವು ಸಲ ಅವನು ಅವರಂಗಜೇಬನ ಹಾಗೆ ವರ್ತಿಸುತ್ತಿದ್ದ. ಇವೆರಡಕ್ಕೂ ಉದಾಹರಣೆಗಳನ್ನು ಶ್ರೀರಂಗಪಟ್ಟಣದಲ್ಲಿಯೇ ನೋಡಬಹುದು. ಅಲ್ಲಿ ಶ್ರೀರಂಗನಾಥ ದೇವಾಲಯವನ್ನು ಆತನು ಪುನರುದ್ಧಾರ ಮಾಡಿಸಿದ್ದಾನೆ. ಅದೇ ಊರಿನಲ್ಲಿರುವ ಟೀಪು ಕಟ್ಟಿಸಿದ ಜುಮ್ಮಾ ಮಸೀದಿಯಲ್ಲಿ ಹಳೆಯ ನರಸಿಂಹ ಮತ್ತು ಹನುಮಂತ ದೇವರ ದೇವಾಲಯಗಳ ಭಾಗಗಳನ್ನು ನೋಡಬಹುದು. ಬ್ರಿಟಿಷ್ ಇತಿಹಾಸಕಾರರು ಅವನನ್ನು ಅವರಂಗಜೇಬನಂಥವರಿಗೆ ಹೋಲಿಸಿದ್ದಾರೆ. ಶರ್ಮರು ಅವನಲ್ಲಿದ್ದ ಅಕ್ಬರನ ಗುಣಗಳನ್ನು ತೋರಿಸಿದ್ದಾರೆ. ಹೀಗೆ ಪರಸ್ಪರ

ವಿರುದ್ಧ ಸ್ವಭಾವಗಳು ಒಬ್ಬನಲ್ಲಿರುವ ಕೌತುಕವನ್ನು ಟೀಪುನಲ್ಲಿ ಮಾತ್ರ ನಾವು ನೋಡಬಹುದು.

ಮುಮ್ಮಡಿ ಕೃಷ್ಣರಾಜ ಒಡೆಯರರ ಬಗ್ಗೆ ಶರ್ಮರು ಅನೇಕ ಹೊಸ ಶೋಧಗಳನ್ನು ಮಾಡಿದ್ದಾರೆ. ಒಡೆಯರರವರದು ದುರಂತ ಕಥೆ. ಅದನ್ನು ಲೇಖಕರು ಮೂರು ಹಂತಗಳಾಗಿ ವಿಂಗಡಿಸಿದ್ದಾರೆ:

೧) ಮೊದಲನೆ ಹಂತ ಒಡೆಯರರ ಬಾಲ್ಯದ ಕಾಲ ೧೮೦೦ ರಿಂದ ೧೮೧೨ ರವರೆಗೆ. ಈ ಅವಧಿಯಲ್ಲಿ ಪೂರ್ಣಯ್ಯನವರು ಸರ್ವಾಧಿಕಾರಿಯಾಗಿದ್ದರು. ಪೂರ್ಣಯ್ಯನವರು ಭಾರತೀಯ ಇತಿಹಾಸದಲ್ಲಿ ಮಂತ್ರಿಗಳಾಗಿದ್ದವರಲ್ಲಿ ಅತ್ಯಂತ ಮೇಲ್ಮಟ್ಟಕ್ಕೆ ಸೇರಲು ಯೋಗ್ಯರಾಗಿದ್ದವರು. ಅವರ ಯೋಗ್ಯತೆಯನ್ನು ಹೈದರನು ಗುರುತಿಸಿ ತನ್ನ ಆಪ್ತಮಂತ್ರಿಯನ್ನಾಗಿ ನೇಮಿಸಿದ್ದನು. ಎಷ್ಟೋ ಮಂತ್ರಿಗಳು ಹೈದರನಿಗೆ ಬೇಕಾದವರು ಟೀಪುಗೆ ಬೇಕಾಗಲಿಲ್ಲ. ಆದರೆ ಪೂರ್ಣಯ್ಯನವರು ಟೀಪುಗೂ ಬೇಕಾದವರಾದರು. ಟೀಪು ನಿಧನನಾದ ಮೇಲೆ ಬ್ರಿಟಿಷರು ಮೈಸೂರು ರಾಜ್ಯವನ್ನು ಆಳಲಿಕ್ಕೆ ಪೂರ್ಣಯ್ಯನವರೆ ಯೋಗ್ಯರೆಂದು ನಿರ್ಧರಿಸಿದರು. ಆಗ ಒಡೆಯರರು ಚಿಕ್ಕವರಾಗಿದ್ದದರಿಂದ ಪೂರ್ಣಯ್ಯನವರು ಅವರ ಪ್ರತಿನಿಧಿಯಾಗಿ ಆಳಿದರು. ೧೮೧೨ರ ಹೊತ್ತಿಗೆ ಒಡೆಯರರು ಪ್ರಬುದ್ಧಮಾನರಾದರು. ಆಡಳಿತದಲ್ಲಿ ಭಾಗವಹಿಸುವ ಆಸೆ ಅವರಲ್ಲಿ ಉತ್ಕಟವಾಗಿತ್ತು. ಆದರೆ ಪೂರ್ಣಯ್ಯನವರಿಗೆ ಅವರು ಆಡಳಿತಗಾರರಾಗಲು ಅಯೋಗ್ಯರೆಂದು ಮನವರಿಕೆಯಾಗಿತ್ತು. ಇದಕ್ಕೆ ಮುಖ್ಯ ಕಾರಣ ಅವರ ಕೆಟ್ಟ ಸಹವಾಸ. ಪೂರ್ಣಯ್ಯನವರ ವಿರುದ್ಧ ಒಡೆಯರರು ಬ್ರಿಟಿಷ್ ರೆಸಿಡೆಂಟರಿಗೆ ದೂರಿಕೊಂಡರು. ಅಷ್ಟೊತ್ತಿಗೆ ಪೂರ್ಣಯನವರು ಮುದುಕರಾಗಿದ್ದರು. ಆದ್ದರಿಂದ ಬ್ರಿಟಿಷರು ಪೂರ್ಣಯ್ಯನವರನ್ನು ನಿವೃತ್ತಿ ಮಾಡಿಸಿ ಆಡಳಿತದ ಹೊಣೆಯನ್ನು ಒಡೆಯರರಿಗೆ ಒಪ್ಪಿಸಿದರು.

೨) ಒಡೆಯರರ ಜೀವನದಲ್ಲಿ ಎರಡನೆಯ ಹಂತ ೧೮೧೩ ರಿಂದ ೧೮೩೧ ರವರೆಗೆ. ಈ ಅವಧಿಯಲ್ಲಿ ಅವರು ತಮ್ಮ ಸ್ನೇಹಿತರ ಸಹಾಯದಿಂದ ಆಡಳಿತವನ್ನು ನಿರ್ವಹಿಸಿದರು. ಪೂರ್ಣಯ್ಯನವರು ಅಭಿಪ್ರಾಯ ಪಟ್ಟ ಹಾಗೆ ಒಡೆಯರರ ಸ್ನೇಹಿತರು ರಾಜ್ಯಕ್ಕೆ ಸರಿಯಾದ ಆಡಳಿತವನ್ನು ಒದಗಿಸಲು ವಿಫಲರಾದರು. ಎಲ್ಲ ಕಡೆಗೂ ದಂಗೆಗಳಾದವು. ಅದರಲ್ಲಿಯೂ ಮಲೆನಾಡಿನಲ್ಲಿ ನಡೆದ ಬೂದಿ ಬಸಪ್ಪನ ದಂಗೆಯು ರಾಜ್ಯದ ತಳಹದಿಯನ್ನು ಅಲುಗಾಡಿಸಿತು. ಬ್ರಿಟಿಷ್ ಸೈನ್ಯದ ಸಹಾಯ ಅನಿವಾರ್ಯವಾಯಿತು. ಅವರ ಸಹಾಯದಿಂದ ದಂಗೆ ಅಡಗಿತು. ಬ್ರಿಟಿಷ್ ಸೈನ್ಯದ ಅಧಿಕಾರಿಗಳು ಒಡೆಯರರು ಆಳಲಿಕ್ಕೆ ಯೋಗ್ಯರಲ್ಲವೆಂದು ನಿರ್ಣಯಿಸಿ

ಅವರಿಂದ ರಾಜ್ಯವನ್ನು ವಶಪಡಿಸಿಕೊಂಡು ಅದನ್ನು ಬ್ರಿಟಿಷ್ – ಕಮಿಷನರಿಗೆ ವಹಿಸಿಕೊಟ್ಟರು. ಹೀಗೆ ಮಾಡಿದ್ದು ಒಡೆಯರರರಿಗೆ ಅನ್ಯಾಯ ಮಾಡಿದ ಹಾಗಾಯಿತು. ಶ್ರೀರಂಗಪಟ್ಟಣದ ಒಪ್ಪಂದದ ಪ್ರಕಾರ ದಂಗೆಯನ್ನು ಅಡಗಿಸಿದ ಮೇಲೆ ಆಡಳಿತವನ್ನು ಒಡೆಯರರಿಗೆ ಕೊಡಬೇಕಾಗಿತ್ತು.

೩) ಒಡೆಯರರ ಜೀವಮಾನದಲ್ಲಿ ಮೂರನೆ ಹಂತ ೧೮೩೧ ರಿಂದ ೧೮೬೮ ರವರೆಗೆ. ಈ ಹಂತದಲ್ಲಿ ಒಡೆಯರರು ಬ್ರಿಟಿಷ್ ಅಧಿಕಾರಿಗಳ ವಿರುದ್ಧ ನಡೆಸಿದ ತಾತ್ವಿಕ ಹೋರಾಟದಿಂದ ಅವರ ಹಿಂದಿನ ಜೀವನದಲ್ಲಿ ಗಳಿಸಿದ ಅಪಖ್ಯಾತಿಯನ್ನು ಸಂಪೂರ್ಣವಾಗಿ ಹೋಗಲಾಡಿಸಿಕೊಂಡರು. ತಮಗಾದ ಅನ್ಯಾಯವನ್ನು ಸರಿಪಡಿಸಿಕೊಂಡು ಆಡಳಿತದ ಸೂತ್ರಗಳನ್ನು ಪಡೆಯಲು ಸತತವಾಗಿ ಹೋರಾಡಿದರು. ಈ ಮೂವತ್ತೇಳು ವರ್ಷಗಳು ಮೈಸೂರಿಗೆ ಕಮಿಷನರಾಗಿ ಬಂದವರು ಒಡೆಯರರಿಗೆ ಅನೇಕ ವಿಧವಾಗಿ ನೋವನ್ನುಂಟು ಮಾಡಿದರು. ಈ ಕಮೀಷನರಲ್ಲಿ ಇವರಿಗೆ ಆಗದಿದ್ದವರು ಕಬ್ಬನ್ ಮತ್ತು ಬೌರಿಂಗ್. ಇವರಿಬ್ಬರೂ ಮೈಸೂರನ್ನು ಒಡೆಯರರಿಗೆ ಹಿಂತಿರುಗಿಸದೆ ಕಬಳಿಸಬೇಕೆಂದು ಆಲೋಚಿಸಿದರು. ಹೀಗೆ ಮಾಡಲು ಕಾರಣ ಮೈಸೂರಿನ ಸಮಶೀತೋಷ್ಣಹವೆ. ಈ ಹವೆ ಬ್ರಿಟಿಷರಿಗೆ ಒಗ್ಗಿ ಹೋಗಿತ್ತು. ಇದರ ಜತೆಗೆ ಕೊಡಗು ಮತ್ತು ಹಾಸನ ಜಿಲ್ಲೆಗಳಲ್ಲಿ ಕಾಫಿ ತೋಟಗಳನ್ನು ಅವರು ಬೆಳೆಸಿದ್ದರು. ಆದ್ದರಿಂದ ಒಡೆಯರರ ವಿರುದ್ಧ ಪ್ರಚಾರವನ್ನು ಮಾಡಿ ಅವರಿಗೆ ನ್ಯಾಯ ಸಿಗದ ಹಾಗೆ ಮಾಡಿದ್ದರು. ಅವರು ಒಡೆಯರರಿಗೆ ಒಂದು ಸಣ್ಣ ಜಹಗಿರಿಯನ್ನು ಕೊಟ್ಟು ಉಳಿದ ರಾಜ್ಯವನ್ನು ಬ್ರಿಟಿಷರಿಗೆ ಉಳಿಸಿಕೊಳ್ಳಬೇಕೆಂದು ಹವಣಿಸಿದರು.

ಕಮಿಷನರರು ಎಷ್ಟೇ ತಮ್ಮ ವಿರುದ್ಧ ಅಪಪ್ರಚಾರ ಮಾಡಿದರೂ ಎದೆಗುಂದದೆ, ಒಡೆಯರು ಇಂಗ್ಲೆಂಡಿನ ಪಾರ್ಲಿಮೆಂಟ್ ಸದಸ್ಯರಿಗೆ ತಮಗಾದ ಅನ್ಯಾಯದ ಕಥೆಯನ್ನು ಹೇಳಿಕೊಂಡರು. ಇದರ ಫಲವಾಗಿ ಪಾರ್ಲಿಮೆಂಟಿನಲ್ಲಿ ಇವರ ಪರವಾದ ಒಂದು ಸಣ್ಣ ಗುಂಪು ಸಿದ್ಧವಾಯಿತು. ಇದರ ಮುಖಂಡರು ಪ್ರಸಿದ್ಧ ವಿದ್ವಾಂಸ ಜಾನ್ ಸ್ಟೂವರ್ಟ್ ಮಿಲ್. ಮಿಲ್‌ನ ಸಹಾಯದಿಂದ ಪಾರ್ಲಿಮೆಂಟಿನಲ್ಲಿ ಒಡೆಯರರಿಗೆ ನ್ಯಾಯ ದೊರಕುವ ಕಾಲ ಸನ್ನಿಹಿತವಾಯಿತು. ಅಷ್ಟೊತ್ತಿಗೆ ಒಡೆಯರರು ಮುದುಕರಾಗಿದ್ದರು. ಅವರಿಗೆ ಮಕ್ಕಳಿರಲಿಲ್ಲ. ದತ್ತು ತೆಗೆದುಕೊಳ್ಳುವುದಕ್ಕೆ ಕಮಿಷನರರು ಮೊದಮೊದಲು ಅಡ್ಡಿಮಾಡಿ ಕೊನೆಗೆ ಒಪ್ಪಿಗೆ ಕೊಟ್ಟರು. ಪಾರ್ಲಿಮೆಂಟಿನಲ್ಲಿ ದತ್ತುಮಗ ಚಾಮರಾಜ ಒಡೆಯರರಿಗೆ ಆಡಳಿತ ವಹಿಸಬೇಕೆಂದು ನಿರ್ಣಯವಾಯಿತೇ ವಿನಾ ಒಡೆಯರರಿಗಲ್ಲ. ಮುಮ್ಮಡಿ ಕೃಷ್ಣರಾಜ ಒಡೆಯರರು ರಾಜ್ಯವನ್ನು ಆಳದೆ ನಿರಾಶರಾಗಿ ೧೮೬೮ರಲ್ಲಿ ಅಸುನೀಗಿದರು. ಆದರೆ ಅವರು

ಹೋರಾಡದಿದ್ದರೆ, ಮೈಸೂರು ರಾಜ್ಯವು ಒಡೆಯರ ಮನೆತನಕ್ಕೆ ದಕ್ಕುತ್ತಿರಲಿಲ್ಲ. ಅವರ ಅವಿರತ ಹೋರಾಟ ಸ್ಫೂರ್ತಿದಾಯಕವಾದದ್ದು. ಹೀಗೆ ಈ ಪುಸ್ತಕದಲ್ಲಿ ಹೈದರ್, ಟೀಪು ಮತ್ತು ಮುಮ್ಮಡಿ ಕೃಷ್ಣರಾಜ ಒಡೆಯರರು ಬ್ರಿಟಿಷರ ವಿರುದ್ಧ ಕೈಕೊಂಡ ಹೋರಾಟ ಬೇರೆ ಬೇರೆ ತರಹದ್ದಾದರೂ, ನಮ್ಮ ಸ್ವಾತಂತ್ರ್ಯ ಸಂಗ್ರಾಮದ ಇತಿಹಾಸದಲ್ಲಿ ಸ್ಥಾನ ಪಡೆಯಲು ಯೋಗ್ಯವಾಗಿವೆ. ಶರ್ಮರ ಈ ವಾದವನ್ನು ಎಲ್ಲರೂ ಒಪ್ಪುತಕ್ಕಂಥಾದ್ದು. ಈ ಪುಸ್ತಕವನ್ನು ಬರೆಯಲಿಕ್ಕೆ ಶರ್ಮರು ಶೃಂಗೇರಿ ಕಡತಗಳಿಂದ, ಸುರೇಂದ್ರನಾಥ ಸೇನ್ ಇವರ Studies in Indian History ಯಿಂದ ಮತ್ತು ಮೈಸೂರು ಅರಮನೆ ದಾಖಲೆಗಳಿಂದ ಮಾಹಿತಿಯನ್ನು ದೊರಕಿಸಿ ಅದನ್ನು ಸ್ಫೂರ್ತಿದಾಯಕವಾಗಿ ನಿರೂಪಿಸಿದ್ದಾರೆ. ಕರ್ನಾಟಕ ಇತಿಹಾಸದಲ್ಲಿ ಮತ್ತು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಆಸ್ಥೆಯುಳ್ಳವರೆಲ್ಲರೂ ಈ ಪುಸ್ತಕವನ್ನು ಅವಶ್ಯವಾಗಿ ಓದತಕ್ಕದ್ದು.

■

ಪೀಠಿಕೆ : ೩೭

ಕೆಳದಿ ಐತಿಹಾಸಿಕ ನಿಬಂಧಗಳು

ಈ ಪೀಠಿಕೆಯಲ್ಲಿ, ಕೆಳದಿ ಇತಿಹಾಸದ ಬಗ್ಗೆ ನಡೆದ ಸಮ್ಮೇಳನಕ್ಕೆ ಒಪ್ಪಿಸಿದ ಪ್ರಬಂಧಗಳ ಮುಖ್ಯಾಂಶಗಳನ್ನು ಎತ್ತಿತೋರಿಸಬೇಕೆಂದಿದ್ದೇನೆ. ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಎಸ್.ಆರ್. ರಾವ್ ಇವರು ಕೆಳದಿ ಇತಿಹಾಸದ ಮೂಲಗಳ ಮತ್ತು ಹಿಂದಿನ ಲೇಖನಗಳ ಮೇಲೆ ದೃಷ್ಟಿಹರಿಸಿ, ಕೆಳದಿಯ ಅರಸರು ದಕ್ಷಿಣ ಭಾರತ ಸಂಸ್ಕೃತಿಗೆ ಸಲ್ಲಿಸಿದ ಕೊಡುಗೆಯ ಬೆಲೆ ಅಂದಾಜು ಮಾಡಿದ್ದಾರೆ. ವಾಸ್ತುಶಿಲ್ಪದಲ್ಲಿ ಗಳಿಸಿದ ಸಾಧನೆಯ ಬಗ್ಗೆ ಅವರು ಹೇಳಿದ ಮಾತು ಗಮನಾರ್ಹವಾಗಿದೆ; ಮತ್ತು ಮುಂದಿನ ಸಂಶೋಧನೆಯ ವಿಷಯದಲ್ಲಿ ಅವರು ಮಾಡಿದ ಮಾರ್ಗದರ್ಶಕ ಸೂಚನೆಗಳು ವ್ಯವಹಾರ್ಯವಿವೆ.

ಸರ್ವಶ್ರೀ ಗಾಯಿ ಮತ್ತು ಗೋಪಾಲ ಇವರು ಬರೆದ ಪ್ರಬಂಧಗಳಲ್ಲಿ ವಂಶಾವಳಿ ಮತ್ತು ಕಾಲಮಾನದಂಥ ವಿಷಯಗಳನ್ನು ವಿವೇಚಿಸಿದ್ದಾರೆ. ಇಬ್ಬರೂ 'ಶಿವತತ್ವರತ್ನಾಕರ' ಮತ್ತು 'ಕೆಳದಿ ನೃಪವಿಜಯಂ' – ಇಂತಹ ಸಾಹಿತ್ಯಿಕ ಮೂಲಗಳಿಗಿಂತ ಇತಿಹಾಸಕ್ಕೆ ಶಾಸನಲೇಖಗಳೇ ಹೆಚ್ಚು ವಿಶ್ವಾಸಾರ್ಹವೆಂದು ತೋರಿಸಿದ್ದಾರೆ. ಕೆಳದಿ ವಂಶಾವಳಿಯಲ್ಲಿ ಸಂಕಣ್ಣನಾಯಕ ಮತ್ತು ಇಮ್ಮಡಿ ಸದಾಶಿವನಾಯಕರ ಸ್ಥಾನದ ಬಗ್ಗೆ ಅವರಿಬ್ಬರೂ ಚರ್ಚಿಸಿದ್ದಾರೆ. ಈ ವಿಷಯದಲ್ಲಿ ಮುಂದೆ ಅವರ ಅಭಿಪ್ರಾಯಗಳನ್ನು ಹೋಲಿಸುವೆ. ಗಾಯಿಯವರ ಪ್ರಬಂಧವು ಹೊಸದಾಗಿ ಕಂಡುಹಿಡಿದ ಶಾಸನಗಳ ಬಗ್ಗೆ ಚೆನ್ನಾಗಿ ತಿಳಿವಳಿಕೆ ಕೊಡುತ್ತದೆ. ಉದಾಹರಣೆಗೆ, ಶಹಾಜಹಾನನ ಕಾಲದಲ್ಲಿ ಶಿವಪ್ಪನಾಯಕನು ಕಪಿಲಧಾರಾ ಕೆರೆಯನ್ನು ಜೀರ್ಣೋದ್ಧಾರ ಮಾಡಿದ್ದನ್ನು ಉಲ್ಲೇಖಿಸಿದ, ಸಂಸ್ಕೃತ–ಕನ್ನಡ–ಮತ್ತು–ಫಾರ್ಸಿ ಭಾಷೆಗಳಲ್ಲಿದ್ದ, ಇ.ಸ. ೧೬೫೫ ರ ಕೆಳದಿಯ ಶಾಸನಗಳು ವಾರಣಾಸಿಯಲ್ಲಿ ದೊರೆತದ್ದನ್ನು ಹೇಳಿದ್ದಾರೆ.

ಮೊದಲಿನ ಕೆಳದಿ ಅರಸರ ವಂಶಾವಳಿ ಮತ್ತು ಕಾಲಾವಧಿಗಳನ್ನು ಕುರಿತು, ಮುಖ್ಯ ಎರಡು ಆಕರಗಳಾದ 'ಶಿವತತ್ವ ರತ್ನಾವಳಿ' (ಶಿರ) ಮತ್ತು 'ಕೆಳದಿ

ನೃಪವಿಜಯಂ' (ಕೆನ್ನ)ಗಳಲ್ಲಿರುವ ವ್ಯತ್ಯಾಸಗಳನ್ನು ಬಿ.ಆರ್. ಗೋಪಾಲರವರು ಕೂಲಂಕಷವಾಗಿ ತೋರಿಸಿದ್ದಾರೆ. ಇಮ್ಮಡಿ ಸದಾಶಿವನಾಯಕನ ವ್ಯಕ್ತಿತ್ವದ ಬಗ್ಗೆ ಅವರ ಅಭಿಪ್ರಾಯ ಗಾಯಿಯವರ ಅಭಿಪ್ರಾಯಕ್ಕಿಂತ ಬೇರೆ ಆಗಿದೆ. ಗಾಯಿ ಅವರು ಸದಾಶಿವನಾಯಕನ ಮಗ ದೊಡ್ಡ ಸಂಕಣ್ಣನಾಯಕನ ಬಿರುದು 'ಇಮ್ಮಡಿ ಸದಾಶಿವನಾಯಕ'ನೆಂದು ಹೇಳುವಾಗ ವೆಂಕಟಪ್ಪನಾಯಕನ ಕಾಲದ ಎರಡು ದಾಖಲೆಗಳನ್ನು ಅವಲಂಬಿಸಿದ್ದಾರೆ. ಸದಾಶಿವನಾಯಕನೇ ಸ್ವತಃ ಆ ಬಿರುದನ್ನು ತಾಳಿದ್ದನೆಂದು ಹೇಳುವ ಸಾತೇನಹಳ್ಳಿ ದಾಖಲೆಯನ್ನು ಗೋಪಾಲರು ಆಧಾರವಾಗಿ ಇಟ್ಟುಕೊಂಡಿದ್ದಾರೆ. ಸದ್ಯಕ್ಕೆ ಸಿಗುವ ಮೂಲಗಳಲ್ಲೇ ಹೊಂದಿಕೆಯಿಲ್ಲದಿರುವುದರಿಂದ ಈ ಸಮಸ್ಯೆ ಬಿಡಿಸಲಾಗದು. ಸಂಕಣ್ಣ ನಾಯಕನು ಯಾರೆಂಬ ವಿಷಯದಲ್ಲಿ ವಿವಾದವಿದೆ. ಸದಾಶಿವನಾಯಕನೇ ಮೊದಲು ಸಂಕಣ್ಣನಾಯಕನೆಂದು ಕರೆಯಲ್ಪಡುತ್ತಿದ್ದನೆಂದೂ ಕೃಷ್ಣದೇವರಾಯನು ಇಕ್ಕೇರಿಯಲ್ಲಿ ಸ.ಇ. ೧೫೧೨ರಲ್ಲಿ ಭೇಟಿಯಾದ ಸಂಕಣ್ಣನಾಯಕನೇ ಇವನೆಂದೂ ಗೋಪಾಲರ ಅಭಿಮತ. ಇದು ವಿಚಾರಾರ್ಹ. ಆದರೆ, ದಕ್ಷಿಣಕನ್ನಡ ಜಿಲ್ಲೆಯ ಇ.ಸ. ೧೫೩೩ ರಿಂದ ೧೫೩೬ ರವರೆಗೆ ಕೆಲವು ದಾಖಲೆಗಳಲ್ಲಿ ಕಾಣಬರುವ ಸಂಕಣ್ಣನಾಯಕನೇ ಕೆಳದಿಯ ಆಳರಸು ಸದಾಶಿವ ನಾಯಕನೆಂದು ಗುರುತಿಸಲು ಗೋಪಾಲರು ಯತ್ನಿಸಿದರೆ, ಅವನಿಗೆ ಬಳಿಕೆಯ ಬಿರುದುಗಳಿಂದ ಗೌರವಿಸಿದ್ದರಿಂದ ಅವನೊಬ್ಬ ಪ್ರಾದೇಶಿಕ ದೊರೆ ಇರಬೇಕೆಂದು ಗಾಯಿಯವರ ಮತವಿದೆ. ಇಷ್ಟೆಲ್ಲ ವಂಶವೃಕ್ಷಕ್ಕೆ ಸಂಬಂಧಿಸಿದ ಮಾತಾಯಿತಿದು.

ಕೆಳದಿಯ ಅರಸರು ಸಮಕಾಲೀನರೊಡನೆ ತಳೆದ ಸಂಬಂಧಗಳನ್ನು ವಿವೇಚಿಸುವಾಗ ನಮಗೆ, ಅವರು ಆದಿಲಶಾಹಿ, ಮರಾಠಾ, ಪೋರ್ಚುಗೀಸ್ ಮತ್ತು ಕೊನೆಯಲ್ಲಿ ಹೈದರ ಆಲಿಯೊಡನೆ ಹೊಂದಿದ್ದ ಸಂಬಂಧದ ಬಗ್ಗೆ ಪ್ರಬಂಧಗಳಿವೆ. ೧೬೩೬ರ ಮೊಗಲ-ಆದಿಲಶಾಹಿ ಒಪ್ಪಂದದಲ್ಲಿ ಬಿಜಾಪುರದವರು ಉತ್ತರದ ಭಾಗಗಳನ್ನು ಬಿಟ್ಟು, ದಕ್ಷಿಣದಲ್ಲಿ ರಾಜ್ಯವಿಸ್ತಾರ ಕೈಕೊಳ್ಳಬಹುದೆಂದು ಒತ್ತಾಯಿಸಲಾಗಿದೆ. ಆಗ ಕೆಳದಿಯ ವೀರಭದ್ರನಾಯಕನ ಮತ್ತು ಅವನ ಕೈಕೆಳಗಿನ ಬಸವಪಟ್ಟಣದ ಕೆಂಗನಾಯಕನ ಮಧ್ಯೆ ಇದ್ದ ಜಗಳವು ಬಿಜಾಪುರದವರ ಆಕ್ರಮಣಕ್ಕೆ ಅನುವು ಮಾಡಿಕೊಟ್ಟಿತು. ಕೆಳದಿ ರಾಜ್ಯದ ಮೇಲೆ ದಂಡೆತ್ತಿ ಬರಲು ಕೆಂಗನಾಯಕನು ಆದಿಲಶಹನಿಗೆ ಕರೆಕೊಟ್ಟನು. ವೀರಭದ್ರನು ಆದಿಲಶಹನಿಗೆ ಕಪ್ಪ ಕೊಡಬೇಕಾಯಿತು; ಆದರೆ, ಅವನ ರಾಜಧಾನಿ ಇಕ್ಕೇರಿಯು ಶತ್ರುಗಳನ್ನು ಎದುರಿಸಲಾರದೆಂದು ಮನಗಂಡು, ಅವನು ಹೆಚ್ಚು ಸುಭದ್ರವಾದ ಬಿದನೂರಿಗೆ ಅದನ್ನು ಸ್ಥಳಾಂತರಿಸಿದನು. ಆದಿಲಶಾಹಿ ಇತಿಹಾಸದಲ್ಲಿ ಪರಿಣತರಾದ ಪಿ.ಎಂ. ಜೋಷಿಯವರು ಈ ವಿಷಯದಲ್ಲಿ ಕೊಟ್ಟ ಟಿಪ್ಪಣಿಗಳು, ಮುಖ್ಯವಾಗಿ ಬ್ರಿಟಿಷ್ ಮ್ಯೂಜಿಯಂನಲ್ಲಿದ್ದ ಫುತೂಹತ್-

ಇ-ಆದಿಲಶಾಹಿ ಎಂಬ ಹಸ್ತಪ್ರತಿಯನ್ನು ಅವಲಂಬಿಸಿವೆ. ಅದಕ್ಕೆ ಸಂಬಂಧಿಸಿದ ಮತ್ತು ಅವರೇ ಭಾಷಾಂತರಿಸಿದ ಕೆಲವು ಭಾಗಗಳನ್ನು ಅವರ ಟಿಪ್ಪಣಿಗಳಿಗೆ ಇದ್ದ ಪರಿಶಿಷ್ಟದಲ್ಲಿ ಕೊಡಲಾಗಿದೆ. ಇದಲ್ಲದೆ ಝುಹುರ್-ಬಿನ್-ಝುಹುರಿಯ 'ಮಹಮ್ಮದನಾಮಾ' ಮತ್ತು ಸಯ್ಯದ ನೂರುಲ್ಲಾನ 'ತರೀಖಿಅಲಿ-ಆದಿಲ್‌ಶಾಹ-ಸನಿ'ಗಳಂತಹ ಇತರ ಗ್ರಂಥಗಳನ್ನು ಜೋಷಿಯವರು ಉಪಯೋಗಿಸಿದ್ದಾರೆ.

ಆದಿಲಶಾಹಿಯವರ ಮತ್ತು ಅವರ ಉತ್ತರಾಧಿಕಾರಿಗಳಾದ ಮೊಗಲರ ಕೂಡ ಕೆಳದಿಯವರ ಸಂಬಂಧವು ಸೌಹಾರ್ದಯುತವಾಗಿರಲಿಲ್ಲ. ಅದೇ ಕಾರಣಕ್ಕಾಗಿ, ಮರಾಠರ ಕೂಡ ಸಂಬಂಧಗಳು ಸ್ನೇಹಭಾವದ್ದಿದ್ದವು. ಇದನ್ನು ಸರ್ವಶ್ರೀ ಜಿ.ಹೆಚ್. ಖರೆ ಮತ್ತು ಎ.ಆರ್. ಕುಲಕರ್ಣಿಯವರ ಪ್ರಬಂಧಗಳು ಸ್ಪಷ್ಟಪಡಿಸುತ್ತವೆ. ಖರೆಯವರು ತಮ್ಮ ಕಥನವನ್ನು 'ರಾಜಾರಾಮಚರಿತ', 'ಶಿವತತ್ವ ರತ್ನಾಕರ' ಮತ್ತು 'ಕೆಳದಿ ನೃಪವಿಜಯಂ'ಗಳನ್ನು ಆಧಾರವಾಗಿಟ್ಟುಕೊಂಡು ರಾಜಾರಾಮನು ಕೆಳದಿ ರಾಜ್ಯದೊಳಗಿಂದ ಧೀರರಾಣಿ ಚನ್ನಮ್ಮಾಜಿಯ ಸಹಾಯದಿಂದ ಪಾರಾದ ಅದ್ಭುತ ಸಾಹಸವನ್ನು ಬಣ್ಣಿಸಿದ್ದಾರೆ. ವಾಗ್ದಾನದ ಪತ್ರ ಬರೆದು ಕೊಟ್ಟ ಭದ್ರತೆಯ ಮೇಲೆಯೇ ರಾಜಾರಾಮನಿಗೆ ಸಾಲಕೊಟ್ಟ ಕೆಳದಿ ರಾಣಿಯ ಮಾಂಡಲಿಕನಾದ ಸ್ವಾದಿನಾಯಕ ಸದಾಶಿವನ ಬಗ್ಗೆ ಎ.ಆರ್. ಕುಲಕರ್ಣಿಯವರು ಬರೆದಿದ್ದಾರೆ. ರಾಜಾರಾಮನ ಪಲಾಯನದ ಮೇಲೆ ಇದು ಹೊಸ ಬೆಳಕು ಬೀರುತ್ತದೆ. 'ಶಿವಚರಿತ್ರ ಸಾಹಿತ್ಯ'ದಲ್ಲಿ ಸ್ವಾದಿ (ಸೋಂದೆ) ಸಂಸ್ಥಾನಕ್ಕೆ ಸಂಬಂಧಿಸಿದ ಕೆಲವು ಮರಾಠಿ ದಾಖಲೆಗಳಲ್ಲಿ ಅವರಿಗೆ ಈ ಮಾಹಿತಿ ದೊರಕಿದೆ. ರಾಜಾರಾಮನ ತರುವಾಯ ಸಹ ಸ್ವಾದಿ ಮನೆತನ ಮತ್ತು ಮರಾಠರಲ್ಲಿ ಈ ಗೆಳೆತನದ ಸಂಬಂಧ ಮುಂದುವರಿಯಿತೆಂದೂ ಈ ಮೈತ್ರಿಯು ಮೊಗಲರ ವಿರುದ್ಧವಿತ್ತೆಂದೂ ಅವೇ ದಾಖಲೆಗಳು ತೋರಿಸುತ್ತವೆ.

ಮರಾಠರ ಕೇಂದ್ರ ಸರಕಾರವು ಕೆಳದಿಯವರೊಡನೆ ಸೌಹಾರ್ದಭಾವ ತಾಳಿದ್ದರೂ, ಅವರ ನೌಕಾಬಲದ ಅಧಿಪತಿಗಳಾದ ಆಂಗ್ರಿಯಾ ಮನೆತನದವರು ಕನ್ನಡ ಜಿಲ್ಲೆಗಳ ಬಂದರುಗಳನ್ನು ಸೂರೆಗೈದು, ಸ್ವಕೀಯ ಲಾಭಕ್ಕಾಗಿ ಸ್ವಕೀಯ ಜಗಳವನ್ನು ನಡೆಸಿದ್ದರು. ಈ ಪ್ರಸಂಗಗಳಲ್ಲಿ, ಕೆಳದಿಯ ಅರಸರು ಪೋರ್ಚುಗೀಸರ ಸಹಾಯವನ್ನು ಕೋರುತ್ತಿದ್ದರು. ಇ.ಸ. ೧೭೪೭ ಮತ್ತು ೧೭೫೦ ರ ಮಧ್ಯದಲ್ಲಿ ತುಳಾಜಿ ಆಂಗ್ರಿಯಾ ಕೆಳದಿಯವರ ಬಂದರುಗಳ ಮೇಲೆ ದಾಳಿ ಮಾಡಿದನೆಂದೂ ಹೇಗೆ ಎರಡನೇ ಬಸವಪ್ಪನಾಯಕನು ಪೋರ್ಚುಗೀಸರ ಸಹಾಯ ಯಾಚಿಸಿದನೆಂದೂ ಆದರೆ ಅದನ್ನು ತಡೆಯಲಿಲ್ಲವೆಂದೂ ತೋರಿಸಲು ಜಿ.ಎಸ್. ಶಾಸ್ತ್ರಿಯವರು ಪೋರ್ಚುಗೀಸರ ದಾಖಲೆಗಳನ್ನು ಬಳಸಿದ್ದಾರೆ. ಈ ಮೂರು ಪ್ರಭುತ್ವಗಳು ಒಬ್ಬರನ್ನೊಬ್ಬರು ನಂಬದೆ ತೊಡಕು ತುಂಬಿದ ಸಂಬಂಧವಿಟ್ಟುಕೊಂಡಿದ್ದನ್ನು ಶಾಸ್ತ್ರಿಗಳು ವಿಶ್ಲೇಷಿಸಿದ್ದಾರೆ.

ಆದರೆ, ಕೆಳದಿಗೆ ಮೊಗಲರಾಗಲಿ ಪೋರ್ಚುಗೀಸರಾಗಲಿ ಮೈಸೂರಿನ ಪ್ರಭುತ್ವದವರಷ್ಟು ವಿಧ್ವಂಸಕವೆನಿಸಲಿಲ್ಲ. ಕೆಳದಿ–ಮೈಸೂರುಗಳು ಸಂಬಂಧ ಎಂದೂ ಹಿತವಾಗಿರಲಿಲ್ಲ. ಎರಡಕ್ಕೂ ಒಂದನ್ನೊಂದು ನಾಶಪಡಿಸುವ ಶಕ್ತಿಯು ಇದ್ದಿಲ್ಲ. ಆದರೆ ಹೈದರ್ ಅಲಿಯು ಮೈಸೂರಿನ ಆಡಳಿತಾಧಿಕಾರ ಪಡೆದಮೇಲೆ, ತೂಕವು ಮೈಸೂರಿನ ಕಡೆಗೆ ವಾಲಿತು. ಕೆಳದಿಯ ಸಿರಿಯನ್ನು ಲೋಭಿಸಿ, ಆ ರಾಜ್ಯವನ್ನು ಕೊನೆಗೊಳಿಸಲು ನಿಶ್ಚಯಿಸಿದನು. ಕೆಳದಿ ರಾಜ್ಯದೊಳಗಿನ ಆಂತರಿಕ ಜಗಳಗಳಿಂದ ದಾಳಿಗಾರನಿಗೆ ಲಾಭವಾಯಿತು. ಕೆಳದಿಯ ಕೊನೆಯ ಅರಸಿ, ವೀರಮ್ಮಾಜಿಯು ಶೌರ್ಯದಿಂದ ಎದುರಿಸಿದರೂ ಸೋಲುಂಡು, ದೇಶಾಂತರಕ್ಕೆ ದೂಡಲ್ಪಟ್ಟು, ನಿರ್ವಾಸದಲ್ಲೇ ತೀರಿಕೊಂಡಾಗ, ಅವಳ ಸಂತತಿಯವರು ಮರಾಠರ ಕರುಣೆಗೆ ಈಡಾಗಿ, ಜೀವನ ಸಾಗಿಸಬೇಕಾಯಿತು. ಹೈದರನಿಗೆ ಯಶಸ್ಸು ತಂದ ಕಾರಣಾಂಶಗಳನ್ನು ಬಿ. ಷೇಕ ಅಲಿಯವರು ಪರಿಷ್ಕಾರವಾಗಿ ಬಿಡಿಸಿದ್ದಾರೆ. ಅವರ ಪ್ರಬಂಧವು 'ಕೆಳದಿ ನೃಪವಿಜಯಂ', ಕಿರ್ಮಾನಿಯವರ 'ನಿಶಾನ–ಏ–ಹೈದರಿ' ಮತ್ತು ಸಮಕಾಲೀನ ಫ್ರೆಂಚ್ ಮತ್ತು ಇಂಗ್ಲಿಷ್ ಮೂಲಗಳನ್ನು ಅವಲಂಬಿಸಿದೆ. ಹೈದರನು ಗೆದ್ದು, ವೀರಮ್ಮಾಜಿ ಸೋತರೂ ಇತಿಹಾಸವು ಈ ಶೂರಮಹಿಳೆಗೆ ಮರುಕ ತೋರದಿರಲಾರದೆಂದೇ ಇವರ ಸಿದ್ಧಾಂತವಿದೆ.

ಈ ಪ್ರಕಾರ ಕೆಳದಿಯ ನಾಯಕರ ಆಳ್ವಿಕೆ ಕೊನೆಗೊಂಡಿತು. ಅವರ ಪ್ರಭುತ್ವ ಮಣ್ಣುಪಾಲಾದರೂ ಅವರು ಕಟ್ಟಿದ ಸಂಸ್ಥೆಗಳು ಕಾಲವೆಂಬ ಮರಳಿನಲ್ಲಿ ತಮ್ಮ ಪಾದಮುದ್ರೆ ಮೂಡಿಸಿಬಿಟ್ಟವೆ. ಕೆ.ಎನ್. ಚಿಟ್ನೀಸರು ಅವರ ಆಡಳಿತ ಪದ್ಧತಿಯನ್ನು ಅಭ್ಯಸಿಸಿ, 'ಕೆಳದಿ ಪಾಲಿಟಿ' ಅಥವಾ ಆಡಳಿತ ಕ್ರಮವೆಂಬ ಪ್ರಮಾಣ ಗ್ರಂಥ ಬರೆದಿದ್ದಾರೆ. ತಾವು ಓದಿದ ಪ್ರಬಂಧದಲ್ಲಿ, ವಿಜಯನಗರದವರ ಆಡಳಿತದಂತೆ, ಪುರಾತನ ಮತ್ತು ಮಧ್ಯಯುಗದ ರಾಜಕೀಯ ತತ್ವಗಳ ಆದೇಶಗಳಿಗೆ ಸರಿಹೋಗುವ ಕೆಳದಿಯ ಆಡಳಿತ ಪದ್ಧತಿಯ ವಿಶಿಷ್ಟಾಂಶಗಳು ಇರುವುದನ್ನು ತೋರಿಸಿದ್ದಾರೆ. ವಿಜಯನಗರ ಸಾಮ್ರಾಜ್ಯವು ಮೊದಲಿನಂತೆ ತನ್ನ ಸೀಮಾಪ್ರಾಂತಗಳನ್ನು ಹತೋಟಿಯಲ್ಲಿ ಇಟ್ಟುಕೊಳ್ಳಲು ಸಹಾಯವಾಗುವಂತೆ ಕೆಳದಿಯ ಅರಸೊತ್ತಿಗೆಯನ್ನು ಸ್ಥಾಪಿಸಿತೆಂದು ಕೆ.ವಿ. ರಮೇಶ ಇವರು ತಮ್ಮ 'ಕೆಳದಿ ರಾಜ್ಯದ ಪ್ರಾದೇಶಿಕ ಇತಿಹಾಸದ ಮೇಲೆ ಕೆಲವು ಟಿಪ್ಪಣಿಗಳು' ಎಂಬ ಪ್ರಬಂಧದಲ್ಲಿ ಒತ್ತಿ ಹೇಳಿದ್ದಾರೆ. ಮಾತೃಸಾಮ್ರಾಜ್ಯದ ಶಕ್ತಿಯು ಕುಗ್ಗುತ್ತಿದ್ದಂತೆ, ಕೆಳದಿಯ ಅಧೀನರಾಗಿದ್ದ ಪಾಳೇಗಾರರು ನಾಯಕರ ಆಧಿಪತ್ಯವನ್ನು ಒಪ್ಪಿಕೊಳ್ಳಲು ಹಿಂತೆಗೆಯಲಾರಂಭಿಸಿದರು. ಕೆಳದಿ ನಾಯಕರು ಪುನಃ ಪುನಃ ಅವರ ದಂಗೆಗಳನ್ನು ಅಡಗಿಸಬೇಕಾಗುತ್ತಿತ್ತು. ಅವರು ಆಡಳಿತ ಸೌಕರ್ಯಕ್ಕಾಗಿ ತಮ್ಮ ಭೂಪ್ರದೇಶವನ್ನು ಘಟ್ಟದ ಮೇಲಿನ

ಮತ್ತು ಕೆಳಗಿನ ಎಂಬ ಎರಡು ಮುಖ್ಯ ಭಾಗಗಳಲ್ಲಿ ವಿಂಗಡಿಸಿ, ಬಾರಕೂರು-ಮಂಗಳೂರುಗಳಂಥ ಕೆಲವು ಬೇರೆ 'ರಾಜ್ಯ'ಗಳೆಂಬ ವಿಭಾಗಗಳನ್ನೂ, ಆರಗ-ಗುತ್ತಿಗಳಂಥ 'ವೇಂಠಿ'ಗಳನ್ನೂ ರಚಿಸಿದರು. ಈ ಮುಖ್ಯಭಾಗಗಳಲ್ಲಿ ಮತ್ತೆ 'ಕಂಪಣ ಮಾಗಣೆ' ಎಂಬ ಭಾಗಗಳನ್ನು ಮಾಡಿ, ಅವನ್ನು ಪುನಃ 'ಸೀಮೆ' ಎಂಬ ಮಂಡಲಗಳಲ್ಲಿ ಹಂಚಿ, ಮತ್ತೆ ಅವುಗಳ ಕೆಳಗೆ 'ನಾಡು, ಹೋಬಳಿ, ಗ್ರಾಮ'ಗಳನ್ನು ಇಟ್ಟರು. ಆದರೆ ಈ ಅನುಕ್ರಮವನ್ನು ಒಂದೇ ರೀತಿಯಾಗಿ ಎಲ್ಲ ಕಡೆಯಲ್ಲಿ ಅನುಸರಿಸಲಿಲ್ಲ.

ದಕ್ಷಿಣ ಕನ್ನಡದಲ್ಲಿ ಕೆಳದಿಯವರ ಆಡಳಿತವು ಕಲ್ಯಾಣಕಾರಿಯಾಗಿತ್ತೆಂಬುದನ್ನು, ಸೂರ್ಯನಾಥ ಕಾಮತರು ತೋರಿಸಿಕೊಟ್ಟಿದ್ದಾರೆ. ದಕ್ಷಿಣ ಕನ್ನಡವು ತನ್ನ ನಿರ್ಯಾತ ವ್ಯಾಪಾರದಿಂದ ಮತ್ತು ಏಳ್ಗೆಹೊಂದಿದ ಬೇಸಾಯದಿಂದ ಸಂಪದ್ಭರಿತವಾಗಿತ್ತು. ಕೆಳದಿಯ ಕೇಂದ್ರಸರ್ಕಾರದೊಡನೆ ಕಾದುತ್ತಾ ಮತ್ತು ಮಣಿಯುತ್ತಿದ್ದ ಮಾಂಡಲಿಕ 'ಆಳುವ'ರ ಸ್ವತಂತ್ರ ಪ್ರವೃತ್ತಿಯ ಬಗ್ಗೆ ಈ ತುಳುನಾಡು ಪ್ರಸಿದ್ಧವಿತ್ತು. ಕಟ್ಟಕಡೆಗೆ ಕೆಳದಿಯು ಈ ಪ್ರದೇಶದಲ್ಲಿ ಶಾಂತಿಯನ್ನು ಉಳಿಸಿಕೊಳ್ಳುವುದರಲ್ಲಿ ಯಶಸ್ಸನ್ನು ಸಾಧಿಸಿತು. ವಿದೇಶಿ ಆಕ್ರಮಣಗಳಿಂದ ಅಲ್ಲಿಯ ಜನರನ್ನು ರಕ್ಷಿಸಲು ಮತ್ತು ಅಲ್ಲಿ ದಂಗೆಗಳಾಗದಂತೆ ತಡೆಯೊಡ್ಡಲು, ಕೆಳದಿಯು ಬಹಳಷ್ಟು ಕೋಟೆಗಳನ್ನು ಕಟ್ಟಿ ಹೊರಗಿನ ಜನರನ್ನು ಅವುಗಳ ಕಾವಲಿಗೆ ಇಟ್ಟಿತು. ಸಹಜವಾಗಿ, ಸ್ಥಾನಿಕ ಪಾಳೇಗಾರರಿಗೆ ಈ ವ್ಯವಸ್ಥೆ ಸೇರದಾಯಿತು. ಆದರೆ, ಇದೇ ಕಾರಣಕ್ಕಾಗಿ ಶಾಂತಿ ನೆಲೆಸಿದ್ದರಿಂದ ಜನಸಾಮಾನ್ಯರು ಸಮೃದ್ಧಿಯಿಂದ ಇರುವಂತೆ ಆಯಿತು. ಕೆಳದಿ ನಾಯಕರು ಸ್ಥಾಪಿಸಿದ ವೀರಶೈವ ಮಠಗಳು ಬಡವರಿಗೆ ಅನ್ನ ಸಂತರ್ಪಣೆ ನೀಡಿದವು. ಉತ್ತರ ಮತ್ತು ದಕ್ಷಿಣ ಕನ್ನಡಗಳಲ್ಲಿ ತಾವಾಗಿ ವಲಸೆ ಬಂದ ಕಷ್ಟಸಹಿಷ್ಣು ಕೊಂಕಣಿ ಜನರನ್ನು ಅರಸರು ಪ್ರೋತ್ಸಾಹಿಸಿದರು. ಪರಿಣಾಮವಾಗಿ, ಇಂದಿಗೂ ಅಲ್ಲಿಯ ಜನರು ನಗರ ಸಂಸ್ಥಾನವನ್ನು ಹಂಬಲಿಸಿ ಸ್ಮರಿಸುತ್ತಾರೆ.

ಮೇಲ್ಕಾಣಿಸಿದ ಕೆಳದಿ ಆಡಳಿತದ ಮೂರು ಪ್ರಬಂಧಗಳ ಹೊರತಾಗಿ, ಈ ಪುಸ್ತಕದಲ್ಲಿ ಕೆಳದಿ ಅರಸರ ಕಾಲದ ಸಾಹಿತ್ಯದ ಬಗ್ಗೆ ಮೂರು ಪ್ರಬಂಧಗಳು ಇವೆ. ವಿಜಯನಗರ ಸಾಮ್ರಾಜ್ಯದ ಪರಂಪರೆಯನ್ನು ಮುಂದುವರಿಸಿಕೊಂಡು ಹೇಗೆ ಕೆಳದಿಯ ಅರಸರು ಸಂಸ್ಕೃತ ಸಾಹಿತ್ಯಕ್ಕೆ ಆಶ್ರಯ ನೀಡಿದ್ದರೆಂಬುದನ್ನು ಆರ್.ಎಸ್. ಶಿವಗಣೇಶಮೂರ್ತಿಯವರು ತೋರಿಸಿದ್ದಾರೆ. ಅವರಲ್ಲಿ, ವೆಂಕಟಪ್ಪನಾಯಕ ಮತ್ತು ಬಸವಪ್ಪನಾಯಕರಂಥವರು ಸ್ವತಃ ಲೇಖಕರಾಗಿದ್ದರು. ಬಹುಮಟ್ಟಿಗೆ ನಾಯಕರೆಲ್ಲ ಲೇಖಕರ ಆಶ್ರಯದಾತರಾಗಿದ್ದರು. ಪ್ರಸಿದ್ಧ ವಿಶ್ವಕೋಶವಾದ 'ಶಿವತತ್ತ್ವರತ್ನಾಕರ'ವನ್ನೂ, 'ಸುಭಾಷಿತ ಸುರದ್ರುಮ'ವೆಂಬ

ಸುಭಾಷಿತಗಳ ಸಂಕಲನವನ್ನೂ ರಚಿಸಿದ ಶ್ರೇಯಸ್ಸು ಬಸವಪ್ಪನಾಯಕನಿಗೆ ಸಲ್ಲುತ್ತದೆ. ಕೆಳದಿ ಅರಸರು ಆಶ್ರಯವಿತ್ತ ಸಂಸ್ಕೃತ ವಿದ್ವಾಂಸರಲ್ಲಿ ಸುಪ್ರಸಿದ್ಧ ವೈಯಾಕರಣಿ ಮತ್ತು ಅದ್ವೈತ ಸಿದ್ಧಾಂತ ಪಂಡಿತ ಭಟ್ಟೋಜಿ ದೀಕ್ಷಿತನೊಬ್ಬನು.

ಆರಸೊತ್ತಿಗೆಯಿಂದ ಬಾಣಸದ ತನಕ ವಿವಿಧ ಮಾಹಿತಿಯನ್ನೊಳಗೊಂಡ 'ಶಿವತತ್ವ ರತ್ನಾಕರ'ವನ್ನು ಒಂದು ವಿಶ್ವಕೋಶವೆಂದು ಬಗೆಯುತ್ತಾರೆ. ಆದರೆ, ಆದರಲ್ಲಿದ್ದ ವಿಷಯವೈವಿಧ್ಯಕ್ಕಿಂತ ಅದರ ಸಾಹಿತ್ಯಕ ಯೋಗ್ಯತೆಯು ಕಡಿಮೆ ಗಮನಾರ್ಹವಲ್ಲ. ಗ್ರಂಥದ ಆದಿಭಾಗದಲ್ಲಿ ಸೇರಿಸಲಾದ ಸ್ವಸ್ತಿವಾಚನದ ಶ್ಲೋಕಗಳ ಮಾದರಿಯ ಮೇಲೆ ಪುಸ್ತಕದ ಒಂಬತ್ತು ಪ್ರಕರಣಗಳ ಯೋಗ್ಯತೆ ಕಟ್ಟಿ, ಬರವಣಿಗೆಯ ಒಪ್ಪನ್ನು ಕೆ. ಕೃಷ್ಣಮೂರ್ತಿಯವರು ಎತ್ತಿತೋರಿಸಿದ್ದಾರೆ. ಅದರ ಗುಣಗಳನ್ನು ಸಾಹಿತ್ಯದ ದೃಷ್ಟಿಯಿಂದ ಬಣ್ಣಿಸಿ, ಕವಿತಾ ವ್ಯಾಸಂಗಿಗಳು ಈ ಸಾಹಿತ್ಯದ ಖನಿಯನ್ನು ಅಲಕ್ಷಿಸದೆ, ಅದನ್ನು ಓದಿಕೊಂಡು ಅರಿವು-ಆನಂದಗಳನ್ನು ಪಡೆಯಬಹುದು ಎಂದಿದ್ದಾರೆ. 'ಕೆಳದಿಯ ಅರಸರ ಕಾಲದ ಕನ್ನಡ ಸಾಹಿತ್ಯ'ವೆಂಬ ಪ್ರಬಂಧವನ್ನು ಬರೆದ ಸಾ.ಶಿ. ಮರುಳಯ್ಯನವರು, ಸಂಸ್ಕೃತ ಸಾಹಿತ್ಯಕ್ಕೆ ಕೊಟ್ಟಷ್ಟೇ ಪ್ರೋತ್ಸಾಹವನ್ನು ಕೆಳದಿಯ ಅರಸರು ಕನ್ನಡ ಸಾಹಿತ್ಯಕ್ಕೆ ನೀಡಿದರೆಂದು ಹೇಳಿದ್ದಾರೆ. ಇವರು ತಮ್ಮ ಪ್ರಬಂಧದಲ್ಲಿ, ವಿಮರ್ಶಕರಿಗೆ ಕ್ಷಿಪ್ರವಾಗಿ ಗೊತ್ತಾಗುವಂತೆ, ಕೆಳದಿ ನಾಯಕರ ಪ್ರೋತ್ಸಾಹದಿಂದ ರಚಿತವಾದ ಸಂಸ್ಕೃತ ಮತ್ತು ಕನ್ನಡ ಗ್ರಂಥಗಳ ಸಂಪೂರ್ಣ ಪಟ್ಟಿಯೊಂದನ್ನು ಸೇರಿಸಿದ್ದಾರೆ. ಈ ಪಟ್ಟಿಯು ಎಲ್ಲಾ ಪುಸ್ತಕ ಪ್ರೇಮಿಗಳಿಗೆ ವರಪ್ರದಾನದಂತಿದೆ.

ಎಂ. ಚಿದಾನಂದ ಮೂರ್ತಿಯವರು 'ಕೆಳದಿ ನೃಪವಿಜಯಂ- ಒಂದು ಐತಿಹಾಸಿಕ ಕಾವ್ಯ' ಎಂಬ ಪ್ರಬಂಧದಲ್ಲಿ, ಕನ್ನಡದಲ್ಲಿದ್ದ ಐತಿಹಾಸಿಕ ಕಾವ್ಯಗಳ ಚರಿತ್ರೆಯನ್ನು ನಿರೂಪಿಸುವಾಗ, ಅವು ಕಾಲಕ್ರಮದಲ್ಲಿ ಅಭಿವೃದ್ಧಿ ಹೊಂದಿದ್ದನ್ನು ತೋರಿಸಿದ್ದಾರೆ. 'ಕೆಳದಿ ನೃಪವಿಜಯ'ವು ಆ ಮಾಲಿಕೆಯಲ್ಲಿ ಕೊನೆಯದೆಂದೂ ಮತ್ತು ಬಹಳ ಮಹತ್ವದ್ದೆಂದೂ ತಿಳಿಯುತ್ತಾರೆ. ಅವರ ಹೇಳಿಕೆಯ ಪ್ರಕಾರ ಲಿಂಗಣ್ಣನು ಪ್ರಥಮತಃ ವಿದ್ವಾಂಸನು; ಇತಿಹಾಸಪ್ರಿಯನು; ನಂತರ ಕವಿಯು ತನಗೆ ಅವಶ್ಯವಾದ ಮಾಹಿತಿಯನ್ನು 'ಶಿವತತ್ವ ರತ್ನಾಕರ'ದಿಂದ, ಶಾಸನಗಳಿಂದ ವಂಶಾವಳಿಗಳ ಇತಿಹಾಸಗಳಂತಹ ಮೂಲಗಳಿಂದ ಸಂಗ್ರಹಿಸಿದ್ದಾನೆಂದು ಕಾಣುತ್ತದೆ. ಆದರೆ, ಆಧುನಿಕ ಇತಿಹಾಸಕಾರರಿಗೆ ವ್ಯತಿರಿಕ್ತವಾಗಿ ಅವನು ಅಲೌಕಿಕ ಘಟನೆಗಳನ್ನು ವಿಶ್ವಾಸಾರ್ಹವೆಂದು ಬಗೆದಿದ್ದನು. ಇಷ್ಟಾದರೂ, ಅವನ ಗ್ರಂಥದಲ್ಲಿ ಕಾವ್ಯಗುಣಕಿರಿದಾಗಿ ಇತಿಹಾಸಗುಣ ಹಿರಿದಾಗಿದೆ.

ಸಾಹಿತ್ಯವನ್ನು ಪ್ರೋತ್ಸಾಹಿಸಿದಂತೆ, ಕೆಳದಿಯ ನಾಯಕರು ವಿವಿಧ

ಧರ್ಮಗಳನ್ನೂ ಮತಗಳನ್ನೂ ಪಂಥಗಳನ್ನೂ ಪೋಷಿಸಿ. ವಿಜಯನಗರದ ಪರಂಪರೆಯನ್ನು ಅನುಸರಿಸಿದರು. ಈ ವಿಷಯವನ್ನು ಸದ್ಯೋಜಾತ ಸ್ವಾಮೀಜೀಯವರ ಪ್ರಬಂಧದಲ್ಲಿ ಸ್ಪಷ್ಟಪಡಿಸಿದೆ. ಬೇರೆ ಮತಗಳಿಗೆ ಆಸರೆ ಕೊಡುವಾಗ, ಅವರು ತಮ್ಮ ಮತವನ್ನು ಕಡೆಗಣಿಸಲಿಲ್ಲ. ಅವರು ವೀರಶೈವರು; ಅವರ ಕಾಲದಲ್ಲಿ ಕಟ್ಟಿದ, ಕಟ್ಟಿಸಿದ, ಪೋಷಿಸಿದ ಮತದವರ ಮಠಗಳು ನಮ್ಮ ಕಾಲದಲ್ಲಿ ಇನ್ನೂ ಉಳಿದಿವೆ. ಅವರಿಂದ ಅತಿ ಹೆಚ್ಚು ಆಶ್ರಯ ಪಡೆದ ಸಂಸ್ಥೆಯೆಂದರೆ ಶೃಂಗೇರಿಯ ಅದ್ವೈತಮಠ. ಶಂಕರರ ಸ್ಥಾಪಿಸಿದ ಈ ಮಠಕ್ಕೆ ವಿಜಯನಗರದ ಚಕ್ರವರ್ತಿಗಳು ಆಶ್ರಯ ಕಟ್ಟಿದ್ದರು. ಈ ಮಠವು, ಮತಧರ್ಮಗಳನ್ನು ಲೆಕ್ಕಿಸದ ನೆರೆಹೊರೆಯ ಸರದಾರ-ಪಾಳೇಗಾರರ ದುರಾಶೆಯದ ಸುಲಿಗೆಗೆ ತುತ್ತಾಗದೆ ಪಾರಾಗಿ ಇನ್ನೂ ಉಳಿದದ್ದು ಕೇವಲ ಕೆಳದಿಯ ಅರಸರ ಸಹಾಯದಿಂದ. ಅದರಂತೆ, ಕೆಳದಿಯವರು ಉಡುಪಿಯ ದ್ವೈತಮಠಕ್ಕೆ, ಜೈನರ, ಮುಸಲ್ಮಾನರ ಮತ್ತು ಕ್ರೈಸ್ತರ ಧರ್ಮ ಸಂಸ್ಥೆಗಳಿಗೆ ಬೆಂಬಲ ನೀಡಿದ್ದಾರೆ. ಎಲ್ಲ ಧರ್ಮಗಳ ಬಗ್ಗೆ ಇದ್ದ ಅವರ ಕಳಕಳಿ ನಿರ್ವಿವಾದ.

ಕೆಳದಿ ಇತಿಹಾಸದ ಕೆಲವು ವಿಶಿಷ್ಟ ವಿಷಯಗಳು ಈ ಸಂಗ್ರಹದಲ್ಲಿ ಇಲ್ಲದೇ ಇರುವುದರಿಂದ ಈ ಮೇಲ್ನೋಟದಲ್ಲಿ ನಮೂದಿಸಿಲ್ಲ. ಉದಾಹರಣೆಗೆ, ಎಸ್.ಆರ್. ರಾವ್ ಇವರು ಕೆಳದಿ ಸ್ಮಾರಕ ಕಟ್ಟಡಗಳ ಬಗ್ಗೆ ಓದಿದ ಪಾಂಡಿತ್ಯ ಪೂರ್ಣ ಪ್ರಬಂಧವನ್ನು ಬಿಟ್ಟರೆ, ಸಾಮಾಜಿಕ-ಆರ್ಥಿಕ ಇತಿಹಾಸವೂ ಕಲಾಕೃತಿಗಳ ಇತಿಹಾಸವೂ ಕಾಣಿಸಿಗಲಿಕ್ಕಿಲ್ಲ. 'ಶಿವತತ್ವ ರತ್ನಾಕರ'ವನ್ನು ವಿಶ್ವಕೋಶವೆಂದೆಣಿಸಿ ಪ್ರಬಂಧವೊಂದನ್ನು ಇದರಲ್ಲಿ ಸೇರಿಸಲು ಆತುರಗೊಂಡಿದ್ದೆ. ಕೆ. ಕೃಷ್ಣಮೂರ್ತಿಯವರ ಸ್ವಾರಸ್ಯವುಳ್ಳ ಪ್ರಬಂಧವು ಅದರ ಸಾಹಿತ್ಯದ ಶ್ರೇಷ್ಠತೆಯನ್ನು ಮಾತ್ರ ತೋರಿಸುತ್ತದೆ. ಮೇಲೆ ಕಾಣಿಸಿದ ಕೊರತೆಗಳಿದ್ದರೂ ಈ ಸಂಗ್ರಹವು ಕೆಳದಿ ಇತಿಹಾಸದ ಬಹುಭಾಗವನ್ನು ಒಳಗೊಂಡಿದೆ. ವಿಜಯನಗರದ ಪತನದ ನಂತರದ, ಬ್ರಿಟಿಷರು ದಕ್ಷಿಣ ಭಾರತವನ್ನು ಗೆಲ್ಲುವ ಪೂರ್ವದ ಅಂದರೆ ಹದಿನೇಳನೇ ಮತ್ತು ಹದಿನೆಂಟನೇ ಶತಮಾನಗಳ ದಕ್ಷಿಣ ಭಾರತದ ಇತಿಹಾಸವನ್ನು ತಿಳಿದುಕೊಳ್ಳಲು ಇದೊಂದು ಮುಖ್ಯ ಕೊಡುಗೆಯಾಗಬಹುದು.

ಕೆಲವು ಬೇರೆ ಬೇರೆ ಕಾರಣಗಳಿಗಾಗಿ ಕೆಳಗೆ ಬರೆದ ಮೂರು ಪ್ರಬಂಧಗಳನ್ನು ಈ ಸಂಗ್ರಹದಲ್ಲಿ ಸೇರಿಸಿಸಲಾಗಲಿಲ್ಲ. ಅವೆಂದರೆ :

ಶ್ರೀಮತಿ ಭಾರ್ಗವೀ ಶಿವಯ್ಯ ಇವರ 'ಕೃಷ್ಣದೇವರಾಯ ಮತ್ತು ಕೆಳದಿಯ ಚೌಡಪ್ಪ'.

ಡಿ. ಟಿ. ಜೋಶಿಯವರ 'ಕೆಳದಿ ಅರಸರ ಉತ್ತರ ಕನ್ನಡ',

ಡಿ.ಎಸ್. ಕೃಷ್ಣಯ್ಯನವರ 'ಇಕ್ಕೇರಿ ನಾಯಕರು ಅಥವಾ ನಗರ ಮತ್ತು ಪಾಲೇರಿ ರಾಜರು ಅವರ ಪರಸ್ಪರ ಸಂಬಂಧ'.

ಮೇಲೆ ಕಾಣಿಸಿದ ಮೂರು ಪ್ರಬಂಧಗಳ ಮತ್ತು ೧೯೬೯ರಲ್ಲಿ ಕೆಳದಿ ಇತಿಹಾಸ ಸಮ್ಮೇಳನದಲ್ಲಿ ಒಪ್ಪಿಸಿದ ಬೇರೆ ಪ್ರಬಂಧಗಳತ್ತ ಸ್ವಲ್ಪ ಗಮನ ಸೆಳೆದು, ಕೆಳದಿ ಇತಿಹಾಸದ ಮೇಲೆ ವಿಸ್ತೃತ ಚರ್ಚೆಯನ್ನೊಳಗೊಂಡ ವಿವರಗಳನ್ನು 'ಕರ್ನಾಟಕದ ಚಿಕ್ಕಪುಟ್ಟ ಅರಸರ ಇತಿಹಾಸದ ಮೂಲಗಳು' ಎಂಬ ಕೆ.ಆರ್. ಬಸವರಾಜರ ಮಹತ್ವದ ಲೇಖದಲ್ಲಿ ಓದಬಹುದು. ಆ ಲೇಖವು ಎಸ್.ಪಿ. ಸೇನರು ಸಂಪಾದಿಸಿದ 'ಭಾರತ ಇತಿಹಾಸದ ಮೂಲಗಳು ಭಾಗ-೧' ಇದರಲ್ಲಿ ಸಮಾವೇಶಗೊಂಡಿದೆ. ಈ ಪುಸ್ತಕವನ್ನು ೧೯೭೮ರಲ್ಲಿ 'ಇನ್‌ಸ್ಟಿಟ್ಯೂಟ್ ಆಫ್ ಹಿಸ್ಟಾರಿಕಲ್ ಸ್ಟಡೀಸ್, ಕಲ್ಕತ್ತ' ಇವರು ಪ್ರಕಟಿಸಿದ್ದಾರೆ.

■

ಮುನ್ನುಡಿ : ೩೮

ಇತಿಹಾಸ ಸಂಶೋಧನ ಮಾರ್ಗ

ಡಾ॥ ವಿ.ವಿ. ವೆಂಕಟರತ್ನಂ ಮತ್ತು ಡಾ॥ ಎಂ.ಪಿ. ಪದ್ಮ ಇವರ 'ಇತಿಹಾಸ ಸಂಶೋಧನಾ ಮಾರ್ಗ' ಪುಸ್ತಕಕ್ಕೆ ನಾನು ಮುನ್ನುಡಿಯನ್ನು ಬರೆಯಬೇಕೆಂದು ನನ್ನ ಮಿತ್ರರಾದ ಮತ್ತು ಲೇಖಕರಲ್ಲಿ ಒಬ್ಬರಾದ ಡಾ॥ ವೆಂಕಟರತ್ನಂ ಇವರು ಕೇಳಿಕೊಂಡರು. ನಾನು ಆನಂದದಿಂದ ಈ ಕೆಲಸವನ್ನು ನೆರವೇರಿಸುತ್ತಿದ್ದೇನೆ. ಈ ವಿಷಯವನ್ನು ಕುರಿತು ಕನ್ನಡದಲ್ಲಿ ಬರೆದ ಮೊದಲನೆಯ ಪುಸ್ತಕವಿದು. ಇದರಲ್ಲಿ ಮೂರು ವಿಭಾಗಗಳಿವೆ.

ಮೊದಲನೆಯ ವಿಭಾಗದಲ್ಲಿ 'ಇತಿಹಾಸ' ಶಬ್ದದ ಅನೇಕ ಅರ್ಥಗಳು, ಇತಿಹಾಸ ಅಧ್ಯಯನದ ವಿಷಯ, ವ್ಯಾಪ್ತಿ, ರಾಜಕೀಯ, ಆರ್ಥಿಕ, ಸಾಮಾಜಿಕ ಮುಂತಾದ ಇತಿಹಾಸದ ಬಗೆಗಳು, ಇತಿಹಾಸವನ್ನು ಬರೆಯಲು ಉಪಯುಕ್ತವಾಗುವ ಪ್ರಾಚೀನ ಶೋಧನ ವಿಜ್ಞಾನ, ಲಿಪಿಶಾಸ್ತ್ರ, ನಾಣ್ಯವಿಜ್ಞಾನ, ರಾಜಪತ್ರ ಹಾಗೂ ತಂತ್ರಶಾಸ್ತ್ರ – ಈ ಸಹಾಯಕ ಶಾಸ್ತ್ರಗಳ ವಿವೇಚನೆ ಇದೆ. ಇದಾದ ಮೇಲೆ ಲೇಖಕರು ಇತಿಹಾಸವು ವಿಜ್ಞಾನವೋ ಕಲೆಯೋ ಎನ್ನುವ ವಾದವನ್ನು ಚರ್ಚಿಸಿ ಅದರಲ್ಲಿ ವಿಷಯ ಸಂಗ್ರಹಿಸುವಾಗ ವಿಜ್ಞಾನ ಮತ್ತು ಸಂಗ್ರಹಿಸಿದ ಮಾಹಿತಿಯನ್ನು ಓದುಗರಿಗೆ ಅರ್ಥವಾಗುವ ರೀತಿಯಲ್ಲಿ ನಿರೂಪಿಸುವುದು ಒಂದು ಕಲೆಯೆಂದು ತೀರ್ಮಾನಿಸುತ್ತಾರೆ. ನಂತರ ಇತಿಹಾಸದ ಅಧ್ಯಯನದಿಂದ ಆಗುವ ಉಪಯೋಗಗಳನ್ನು ವಿಶದೀಕರಿಸಿ ಐತಿಹಾಸಿಕ ವಿಷಯಗಳನ್ನು ಹಾಗೂ ಸಾಮಾಜಿಕ ಬದಲಾವಣೆಗಳನ್ನು ವಿವರಿಸುವ ಬಗೆಗೆ ಏನಾದರೂ ಒಂದು ಸೂತ್ರವಿದೆಯೆ ಎನ್ನುವ ವಿಷಯದಲ್ಲಿ ಹೆಗಲ್, ಕಾಂಪ್ಟ್, ಸ್ಪೆಂಗ್ಲರ್ ಮತ್ತು ಟಾಯ್ನ್ಬಿ ಇಂಥವರ ತತ್ವಗಳನ್ನು ಚರ್ಚಿಸುತ್ತಾರೆ.

ಎರಡನೆಯ ವಿಭಾಗದಲ್ಲಿ ಇತಿಹಾಸದಲ್ಲಿ ಸಂಶೋಧನೆ ಮಾಡುವವರಿಗೆ ತಮ್ಮ ಕೆಲಸವನ್ನು ಯಾವ ರೀತಿ ನಿರ್ವಹಿಸಬೇಕೆನ್ನುವುದಕ್ಕೆ ಮುಂಚೆ ಮಾರ್ಗದರ್ಶನವಿದೆ. ಸಂಶೋಧನೆಯೆಂದರೇನು, ಸಂಶೋಧಕನಿಗೆ ಅವಶ್ಯಕವಾಗಿ

ಇರಬೇಕಾದ ಗುಣಗಳಾವುವು, ಸಂಶೋಧನೆಯ ವಿಷಯವನ್ನು ಆರಿಸುವ ರೀತಿ, ಗ್ರಂಥಗಳ ಪಟ್ಟಿಯನ್ನು ತಯಾರಿಸುವ ಪದ್ಧತಿ, ಕರಡು ರೂಪರೇಖೆಯ ಅವಶ್ಯಕತೆ, ಟಿಪ್ಪಣಿ ಮಾಡುವ ವಿಧಾನ, ಮಾಹಿತಿ ಸಂಗ್ರಹ ವಿಧಾನ, ಸಂಗ್ರಹವಾದ ಮಾಹಿತಿಯ ವರ್ಗೀಕರಣ, ಇದಾದನಂತರ ಅದರ ವಿಶ್ಲೇಷಣೆ ಅಂದರೆ ಬಾಹ್ಯ ವಿಮರ್ಶೆ ಮತ್ತು ಆಂತರಿಕ ವಿಮರ್ಶೆ – ಇವುಗಳ ಮುಖಾಂತರ ಸತ್ಯಶೋಧನೆ. ಹೀಗೆ ಶೋಧಿಸಿದ ಮಾಹಿತಿಯನ್ನು ಸುಸಂಬದ್ಧವಾಗಿ, ಕಾಲಾನುಕ್ರಮವಾಗಿ, ಮತ್ತು ಸ್ವಾರಸ್ಯವಾಗಿ ಹೆಣೆಯುವ ಬಗೆ, ಅಡಿಟಿಪ್ಪಣಿಗಳನ್ನು ಬರೆಯುವ ರೀತಿ, ಗ್ರಂಥ ವಿವರಣಾ ಪಟ್ಟಿಯ ವರ್ಗೀಕರಣ ಇವುಗಳಲ್ಲಿ ಸಂಶೋಧಕನು ಅನುಸರಿಸಬೇಕಾದ ವಿಧಾನಗಳನ್ನು ಗ್ರಂಥಕರ್ತರು ಮನಮುಟ್ಟುವ ಹಾಗೆ ವರ್ಣಿಸಿದ್ದಾರೆ. ಈ ವಿಭಾಗ ಹೊಸ ಸಂಶೋಧಕರಿಗೆ ಅತ್ಯಮೂಲ್ಯವಾದ ಕೈಪಿಡಿ.

ಗ್ರಂಥದ ಅರ್ಧಕ್ಕಿಂತ ಹೆಚ್ಚಾಗಿರುವ ಮೂರನೆಯ ವಿಭಾಗದಲ್ಲಿ ಇತಿಹಾಸ ಚರಿತ್ರೆಯಿದೆ. ಈ ಚರಿತ್ರೆಯಲ್ಲಿ ಪಾಶ್ಚಿಮಾತ್ಯ ಮತ್ತು ಭಾರತೀಯ ಎರಡು ಭಾಗ. ಪಾಶ್ಚಿಮಾತ್ಯ ಭಾಗದಲ್ಲಿ ಪುರಾತನ, ಮಧ್ಯಯುಗ ಮತ್ತು ಆಧುನಿಕವೆನ್ನುವ ಒಳಭಾಗಗಳಿವೆ. ಪುರಾತನ ಇತಿಹಾಸಕಾರರಲ್ಲಿ ಹೆರಡೋಟಸ್ ಮತ್ತು ಥೂಸಿಡಿಡಿಸ್ ಮುಂತಾದ ಗ್ರೀಕರು, ಲಿವಿ ಮತ್ತು ಟ್ಯಾಸಿಟಸ್ ನಂತಹ ರೋಮಿನ ಇತಿಹಾಸಕಾರರು ಸಮಾವೇಶವಾಗಿದ್ದಾರೆ. ಮಧ್ಯಯುಗದ ಇತಿಹಾಸಕಾರರ ಪಟ್ಟಿಯು ಸೇಂಟ್ ಆಗಸ್ಟೈನರಿಂದ ಆರಂಭವಾಗಿ ಇಬ್ನೆ–ಖಲ್ದೂನ್ ಎನ್ನುವ ಅತ್ಯಂತ ಶ್ರೇಷ್ಠ ಅರಬ್ ಇತಿಹಾಸಕಾರನ ಕೊಡುಗೆಗಳ ವರ್ಣನೆಯಲ್ಲಿ ಕೊನೆಗೊಂಡಿದೆ. ಆಧುನಿಕ ಯುಗದ ಇತಿಹಾಸಕಾರರ ಬಗ್ಗೆ ಹೇಳುವ ಮೊದಲು ಲೇಖಕರು ಈ ಯುಗದ ವಿಶೇಷ ಪ್ರವೃತ್ತಿಗಳಾದ ಪುನರುಜ್ಜೀವನ (Renaissance), ಜ್ಞಾನೋದಯ (Enlightenment), ಭಾವನಾ ಸ್ವಾತಂತ್ರ್ಯವಾದ (Romanticism) ಮತ್ತು ದೃಷ್ಟಪ್ರಮಾಣವಾದ (Positivism) ಇವುಗಳು ಆಯಾ ಕಾಲದ ಇತಿಹಾಸ ಲೇಖನ ಕಲೆಯ ಮೇಲೆ ಹೇಗೆ ಪ್ರಭಾವ ಬೀರಿದವೆನ್ನುವುದನ್ನು ತೋರಿಸಿಕೊಡುತ್ತಾರೆ. ನಂತರ ಆಧುನಿಕ ಯುಗದ ಪಾಶ್ಚಾತ್ಯ ಇತಿಹಾಸಕಾರರನ್ನು ಅವರ ದೇಶದ ಪ್ರಕಾರ ವಿಂಗಡಿಸಿದ್ದಾರೆ; ಇಂಗ್ಲೆಂಡಿನ ಗಿಬನ್, ಕಾರ್ಲೈಲ್, ಬಕೆಲ್ ಮತ್ತು ಟಾಯ್ನಬಿ; ಜರ್ಮನಿಯ ಹೆಗಲ್, ಕಾರ್ಲ್ ಮಾರ್ಕ್ಸ್, ರಾಂಕೆ ಮತ್ತು ಸ್ಪೆಂಗ್ಲರ್; ಫ್ರಾನ್ಸಿನ ವಾಲ್ಟೇರ್ ಮತ್ತು ಕಾಂಪ್ಟ್; ಇಟಲಿಯ ವಿಕೊ ಮತ್ತು ಕ್ರೊಚೆ – ಇವರ ಕೊಡುಗೆಗಳ ಮೌಲ್ಯಮಾಪನವನ್ನು ಸಮರ್ಥರೀತಿಯಲ್ಲಿ ಲೇಖಕರು ಮಾಡಿದ್ದಾರೆ.

ಭಾರತೀಯ ಇತಿಹಾಸಕಾರರ ಕೆಲಸದ ವರ್ಣನೆಯ ಮುಂಚೆ ಪುರಾತನ ಭಾರತೀಯರಲ್ಲಿ ಐತಿಹಾಸಿಕ ಪ್ರಜ್ಞೆ ಇತ್ತೆ ಇಲ್ಲವೆ ಎನ್ನುವುದನ್ನು ಲೇಖಕರು ಚರ್ಚಿಸಿ

ಪ್ರಾಚೀನ ಭಾರತದಲ್ಲಿ ಇತಿಹಾಸ ಸಾಹಿತ್ಯದ ಅಭಾವವಿದೆಯಾದರೂ ಇತಿಹಾಸಕ್ಕೆ ಉಪಯುಕ್ತವಾಗುವ ಸಾಮಗ್ರಿಯನ್ನು ಪ್ರಾಚೀನ ಭಾರತೀಯರು ವಿಪುಲವಾಗಿ ಒದಗಿಸಿದ್ದಾರೆನ್ನುತ್ತಾರೆ. ಇದಕ್ಕೆ ಉದಾಹರಣೆಯೆಂದು ವೇದ, ಉಪನಿಷತ್, ಬ್ರಾಹ್ಮಣಗಳಲ್ಲಿ ಸಮಕಾಲೀನ ಜೀವನದ ಚಿತ್ರ, ಭಾರತೀಯ ರಾಜರ, ಇತಿಹಾಸಕ್ಕೆ ಸೇವೆ ಸಲ್ಲಿಸಿರುವ ಭೃಗು ಮತ್ತು ಅಂಗೀರಸ ವಂಶದವರಿಗೆ ನೀಡಿರುವ ಪ್ರೋತ್ಸಾಹ ಇತ್ಯಾದಿಗಳನ್ನು ವರ್ಣಿಸಿ, ಪ್ರಾಚೀನ ಭಾರತೀಯರಲ್ಲಿ ಒಬ್ಬನೇ ಒಬ್ಬ ಇತಿಹಾಸಕಾರ ಕಲ್ಹಣನ ಗ್ರಂಥವಾದ 'ರಾಜತರಂಗಿಣಿ'ಯನ್ನು ಪ್ರಶಂಸಿಸಿ, ಪ್ರಾಚೀನ ಭಾರತವು ಇತಿಹಾಸ ದಾರ್ಶನಿಕರನ್ನು ಸೃಷ್ಟಿಸಿತೇ ಹೊರತು ಇತಿಹಾಸಕಾರರನ್ನಲ್ಲವೆನ್ನುವ ಸಮಂಜಸ ತೀರ್ಮಾನಕ್ಕೆ ಬರುತ್ತಾ ಮಧ್ಯಕಾಲ ಭಾರತದಲ್ಲಿಯ ಮುಸ್ಲಿಂ ಇತಿಹಾಸಕಾರರಲ್ಲಿ ಅಮೀರ್ ಖುಸ್ರೊ, ಬರನಿ, ಅಬುಲ್ ಫಜಲ್, ಕಾಫೀಖಾನ್ ಮತ್ತು ಫರಿಸ್ತಾ ಮುಂತಾದವರ ಕೊಡುಗೆಗಳನ್ನು ವಿವರಿಸಿದ್ದಾರೆ.

ಆಧುನಿಕ ಭಾರತದಲ್ಲಿ ನಮ್ಮ ಇತಿಹಾಸವನ್ನು ಮೊದಮೊದಲು ಬ್ರಿಟಿಷರೇ ಬರೆದರು. ಅವರಲ್ಲಿ ಮಿಲ್, ಎಲ್‌ಫಿನ್‌ಸ್ಟನ್, ಮೆಕಾಲೆ, ಗ್ರಾಂಟ್‌ಡಫ್ ಲಾಯಲ್ ಮತ್ತು ಬೆವರಿಜ್ ಇವರು ಬ್ರಿಟಿಷ್ ಕಾಲದ ಇತಿಹಾಸವನ್ನು ಬರೆದರು. ಇವರಲ್ಲಿಯ ಮೆಕಾಲೆಯನ್ನು ಭಾರತೀಯ ಇತಿಹಾಸಕಾರರ ಪಟ್ಟಿಗಿಂತ ಬ್ರಿಟನ್ನಿನಲ್ಲಿಯ ಇತಿಹಾಸಕಾರರಲ್ಲಿ ಗಣನೆಗೆ ತೆಗೆದುಕೊಳ್ಳಬೇಕಾಗಿತ್ತೆಂದು ವಾದಿಸಬಹುದು. ಸರ್ ವಿಲಿಯಂ ಜೋನ್ಸ್, ಕೋಲ್ ಬ್ರೂಕ್, ಮ್ಯಾಕ್ಸ್‌ಮುಲ್ಲರ್, ಜಾಕೊಬಿ, ಕನ್ನಿಂಗ್ಹಾಮ್, ಪ್ಲೀಟ್ ಮುಂತಾದವರು ಪ್ರಾಚೀನ ಭಾರತೀಯ ಇತಿಹಾಸಕ್ಕೆ ಉಪಯುಕ್ತವಾಗುವ ಮಾಹಿತಿಯನ್ನು ಸಂಗ್ರಹಿಸಿದರು. ಇಲಿಯಟ್ ಮತ್ತು ಡಾಸನ್ ಇವರು ಮಧ್ಯಯುಗದ ಇತಿಹಾಸದ ಮೂಲಗಳನ್ನು ಸಂಗ್ರಹಿಸಿ ಪ್ರಕಟಿಸಿದರು. ಹಂಟರ್ ಇವರು ರೂಲರ್ಸ್ ಆಫ್ ಇಂಡಿಯಾ ಎನ್ನುವ ಪುಸ್ತಕ ಮಾಲೆಯನ್ನು, ಗೆಜಟಿಯರ್ ಬರವಣಿಗೆಯನ್ನು ಆರಂಭಿಸಿದರು. ಆಧುನಿಕ ಭಾರತದ ಪ್ರಮುಖ ಇತಿಹಾಸಕಾರರಾದ ಜಯಸ್ವಾಲ್, ಆರ್.ಜಿ. ಭಂಡಾರ್‌ಕರ್, ಸರ್‌ದೇಸಾಯಿ ಜಾದೂನಾಥಸರ್ಕಾರ್, ಆರ್.ಸಿ. ಮಜುಂದಾರ್ ಮತ್ತು ದಕ್ಷಿಣ ಭಾರತದ ಇತಿಹಾಸ ಕಾರರಲ್ಲಿ ಎಂ.ಹೆಚ್. ಕೃಷ್ಣ, ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್, ನೀಲಕಂಠಶಾಸ್ತ್ರಿ ಮತ್ತು ಪಣಿಕ್ಕರ್–ಇವರ ಗ್ರಂಥಗಳ ಪಟ್ಟಿ ಮತ್ತು ಅವರ ಕೊಡುಗೆಗಳ ವಿವೇಚನೆಯನ್ನು ಯಶಸ್ವಿಯಾಗಿ ಮಾಡಿ ಪುಸ್ತಕವನ್ನು ಮುಗಿಸಿದ್ದಾರೆ.

ಗ್ರಂಥದ ಹೆಸರು 'ಇತಿಹಾಸ ಸಂಶೋಧನಾ ಮಾರ್ಗ' ಎಂದಿರುವುದರಿಂದ ಅದರ ವ್ಯಾಪ್ತಿ ಸರಿಯಾಗಿ ಹೇಳಿದಂತಾಗುವುದಿಲ್ಲ. ಇದೊಂದು ಇತಿಹಾಸಕ್ಕೆ ಸಂಬಂಧವುಳ್ಳ ವಿಶ್ವಕೋಶ. ವ್ಯಾಪ್ತಿಯಲ್ಲಿ ಅಲ್ಲದೆ, ಗ್ರಂಥಕರ್ತರು ಉಪಯೋಗಿಸುವ

ಪುಸ್ತಕಗಳ ಪಟ್ಟಿಯು ಆಶ್ಚರ್ಯವನ್ನುಂಟುಮಾಡುವಷ್ಟು ವಿಸ್ತಾರವಾಗಿದೆ. ಅಷ್ಟೇ ಸಮಾಧಾನಕರವಾದುದು. ಗ್ರಂಥಕರ್ತರು ವಿವಾದಾಸ್ಪದವಾದ ವಿಷಯಗಳ ಚರ್ಚೆಯ ಪದ್ಧತಿ ವಾದಗ್ರಸ್ತ ವಿಷಯದ ಎರಡೂ ಮುಖಗಳಿಗೂ ಸರಿಸಮಾನ ಮಹತ್ವವನ್ನು ಕೊಟ್ಟು ಎಲ್ಲರಿಗೂ ಗ್ರಾಹ್ಯವಾದ ತೀರ್ಮಾನಕ್ಕೆ ಬರುತ್ತಾರೆ.

ಪಾಶ್ಚಿಮಾತ್ಯರು ಬರೆದ ಇಂತಹ ಪಠ್ಯಪುಸ್ತಕಗಳಲ್ಲಿ ನಮ್ಮ ವಿದ್ಯಾರ್ಥಿಗಳಿಗೆ ಬೇಕಾಗುವ ಭಾರತೀಯ ಇತಿಹಾಸದ ಉದಾಹರಣೆಗಳಿರುವುದಿಲ್ಲ. ಈ ನ್ಯೂನತೆಯನ್ನು ಗ್ರಂಥಕರ್ತರು ನಿವಾರಿಸಿದ್ದಾರೆ. ಕನ್ನಡದಲ್ಲಿ ಉಚ್ಚತರಗತಿಗಳಿಗೆ ಪಠ್ಯಪುಸ್ತಕಗಳನ್ನು ಬರೆಯುವುದು ಕಷ್ಟವೆನ್ನುವುದು ಸರಿಯಲ್ಲವೆನ್ನುವುದನ್ನು ಮೊದಲನೆಯ ಪುಸ್ತಕ ತೋರಿಸಿ ಕೊಟ್ಟಿದೆ. ಓದುವುದಕ್ಕೂ ಚೆನ್ನಾಗಿದೆ. ಹೊಸದಾಗಿ ಇರುವ ಉಪಯೋಗಿಸುವ ಪದಗಳ ಅರ್ಥ ತಿಳಿಯಲು ಅನುಕೂಲವಾಗುವುದಕ್ಕೆ ಇಂಗ್ಲಿಷ್ ಸಮಾನ ಪದಗಳನ್ನು ಜತೆಗೆ ಕೊಟ್ಟಿದ್ದಾರೆ. ಅಚ್ಚಿನ ದೋಷಗಳು ಅಷ್ಟಿಲ್ಲದಿದ್ದರೆ ಪುಸ್ತಕ ಎಲ್ಲಾ ಅರ್ಥದಲ್ಲಿಯೂ ಮೊದಲನೆಯದಾಗುತ್ತಿತ್ತು. ಮುಂದಿನ ಆವೃತ್ತಿಯಲ್ಲಿ ಹಾಗಾಗುವುದೆಂದು ಆಶಿಸೋಣ.

■

ಪೀಠಿಕೆ : ೩೯

ಎಸ್. ಶ್ರೀಕಂಠಯ್ಯ ಶತಮಾನೋತ್ಸವ ವಿಚಾರಗೋಷ್ಠಿ ಗ್ರಂಥ

(ಈ ಪೀಠಿಕೆಯಲ್ಲಿ ಮೂರು ವಿಷಯಗಳಿವೆ. ಮೊದಲನೆಯದು ಇತಿಹಾಸಕಾರ ಸಕಲೇಶಪುರ ಶ್ರೀಕಂಠಯ್ಯನವರು. ಎರಡನೆಯದು, ಅವರ ಜನ್ಮ ಶತಾಬ್ದಿಯ ಆಚರಣೆಯ ಸಂಬಂಧದಲ್ಲಿ ಏರ್ಪಡಿಸಿದ ವಿಚಾರಗೋಷ್ಠಿಯ ಸ್ವರೂಪ. ಮೂರನೆಯದು, ಆ ವಿಚಾರಗೋಷ್ಠಿಯಲ್ಲಿ ಚರ್ಚಿಸಬೇಕಾಗಿದ್ದ ಆದರೆ ಚರ್ಚಿಸಲಾಗದಿದ್ದ, ಕೆಲವು ವಿಷಯಗಳ ನಿರೂಪಣೆ.)

ವಿಜಯನಗರದ ಸಾಮ್ರಾಜ್ಯ ಸ್ಥಾಪನೆಯಾದದ್ದು ೧೩೩೬ರಲ್ಲಿ. ೧೯೩೬ರಲ್ಲಿ ಅಂದರೆ ಅದರ ೬೦೦ನೇ ಹುಟ್ಟು ಹಬ್ಬದ ಆಚರಣೆಯ ಪ್ರಯುಕ್ತ ಹಂಪೆಯಲ್ಲಿ ಒಂದು ಉತ್ಸವವನ್ನು ಅತ್ಯಂತ ವಿಜೃಂಭಣೆಯಿಂದ ಆಚರಿಸಲಾಯಿತು. ಆ ಸಂದರ್ಭದಲ್ಲಿ Vijayanagar Sexcentenary Commemoration Volume ಎನ್ನುವ ಗ್ರಂಥದ ಪ್ರಕಟಣೆಯಾಯಿತು. ೧೯೭೦ರಲ್ಲಿ ಹಂಪೆ-ಹೊಸಪೇಟೆಗಳಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಇತಿಹಾಸ ವಿಭಾಗದವರು ವಿಜಯನಗರ ಇತಿಹಾಸಕ್ಕೆ ಸಂಬಂಧಿಸಿದಂತೆ ಒಂದು ವಿಚಾರಗೋಷ್ಠಿಯನ್ನು ಏರ್ಪಡಿಸಿದರು. ಆದರೆ ಅದರಲ್ಲಿ ಮಂಡಿಸಿದ ಲೇಖನಗಳನ್ನು ಪ್ರಕಟಿಸಲಾಗಲಿಲ್ಲ. ಅದಾದನಂತರ ವಿಜಯನಗರಕ್ಕೆ ಸಂಬಂಧಿಸಿದ ವಿಚಾರಗೋಷ್ಠಿಯನ್ನು, ಸಕಲೇಶಪುರ ಶ್ರೀಕಂಠಯ್ಯನವರ ಜನ್ಮ ಶತಾಬ್ದಿಯ ಆಚರಣೆಯ ಭಾಗವಾಗಿ ಏರ್ಪಡಿಸಲಾಯಿತು. ಈ ವಿಚಾರಗೋಷ್ಠಿಯಲ್ಲಿ ವಿಜಯನಗರ ಸ್ಥಾಪನೆಗೆ ಸಂಬಂಧಿಸಿದ ಸಮಸ್ಯೆಗಳ ಚರ್ಚೆ ಬಹುಮುಖ್ಯವಾದ ವಿಷಯವಾಗಿತ್ತು. ಈ ವಿಚಾರಗೋಷ್ಠಿ ಈ ಸಾಮ್ರಾಜ್ಯ ಸ್ಥಾಪನೆಯ ೬೫೦ನೇ ವರ್ಷದಲ್ಲಿ (೧೯೮೬ರಲ್ಲಿ) ಆಗಿದ್ದು ಒಂದು ಯೋಗಾಯೋಗ.

೧. ಇತಿಹಾಸಕಾರ ಸಕಲೇಶಪುರ ಶ್ರೀಕಂಠಯ್ಯ

ಇತಿಹಾಸಕಾರರಿಂದ ಸ್ಫೂರ್ತಿ

ಶ್ರೀಕಂಠಯ್ಯನವರು ವೃತ್ತಿಯಿಂದ ವಕೀಲರಾಗಿದ್ದರೂ, ಪ್ರವೃತ್ತಿಯಿಂದ ಸಮಾಜಶಾಸ್ತ್ರ ಮತ್ತು ಮಾನವೀಯಶಾಸ್ತ್ರ, ಅದರಲ್ಲಿಯೂ ಇತಿಹಾಸದಲ್ಲಿ, ಆಸಕ್ತಿಯನ್ನು

ಬೆಳೆಸಿಕೊಂಡು ಆ ವಿಷಯದಲ್ಲಿ ಒಳ್ಳೆಯ ಲೇಖಕರಾದರು. ಇತಿಹಾಸದಲ್ಲಿ ತಮಗೆ ಆಸಕ್ತಿ ಹೇಗೆ ಹುಟ್ಟಿತು ಮತ್ತು ಬೆಳೆಯಿತೆನ್ನುವುದನ್ನು ಅವರೇ ವರ್ಣಿಸಿದ್ದಾರೆ. ಹೊಯ್ಸಳ ರಾಜ್ಯದ ಹೃದಯದಂತಿರುವ ಭಾಗದವರಾದ್ದರಿಂದ ಅವರಿಗೆ ಸಹಜವಾಗಿ ಆ ರಾಜ್ಯದ ಇತಿಹಾಸದ ಬಗೆಗೆ ಮತ್ತು ಅದರ ರಾಜಧಾನಿ ದೋರಸಮುದ್ರ ಅಥವಾ ಹಳೇಬೀಡುಗಳ ಕಡೆಗೆ ಆಕರ್ಷಣೆ ಹುಟ್ಟಿತು. ದೋರಸಮುದ್ರದಲ್ಲಿ ಬರುವ ದೋರ ಶಬ್ದಕ್ಕೂ ರಾಷ್ಟ್ರಕೂಟರ ದೊರೆಧೋರನಿಗೂ ಏನಾದರೂ ಸಂಬಂಧವಿತ್ತೇ ಎನ್ನುವ ಸಂಶಯ ಅವರನ್ನು ಕಾಡತೊಡಗಿತು. ಇಂತಹ ಸಂಶಯಗಳನ್ನು ನಿವಾರಿಸತಕ್ಕವರು ಸೆಂಟ್ರಲ್ ಕಾಲೇಜಿನಲ್ಲಿ ಅವರ ಗುರುಗಳಾಗಿದ್ದ ಪ್ರಸಿದ್ಧ ಇತಿಹಾಸಕಾರ ಪ್ರೊ. ಎಸ್. ಕೃಷ್ಣಸ್ವಾಮಿ ಅಯ್ಯಂಗಾರರು. ಅವರ ಹತ್ತಿರ ಶ್ರೀಕಂಠಯ್ಯನವರು ಈ ಸಮಸ್ಯೆಯನ್ನಲ್ಲದೆ ತಮ್ಮ ಇತರ ಐತಿಹಾಸಿಕ ಸಮಸ್ಯೆಗಳನ್ನು ಚರ್ಚಿಸಬಹುದಾಗಿತ್ತು. ಶ್ರೀಕಂಠಯ್ಯನವರು ಈ ಪ್ರೊಫೆಸರರನ್ನು ೧೯೦೯ರಲ್ಲಿ ಭೇಟಿಯಾದರು. ಈ ಸಮಸ್ಯೆಗಳಿಗೆಲ್ಲಾ ಗುರುಗಳು ಪರಿಹಾರಗಳನ್ನು ಸೂಚಿಸಿದರಲ್ಲದೆ, ಇಂತಹ ಐತಿಹಾಸಿಕ ಸಮಸ್ಯೆಗಳನ್ನು ಚರ್ಚಿಸುವುದಕ್ಕಾಗಿಯೆ ಒಂದು ಸಂಸ್ಥೆಯನ್ನು ಬೆಂಗಳೂರಿನಲ್ಲಿ ಸ್ಥಾಪಿಸುವ ತಮ್ಮ ಯೋಜನೆಯನ್ನೂ ತಿಳಿಸಿದರು. ಈ ಸಂಸ್ಥೆಯೇ ಮಿಥಿಕ್ ಸೊಸೈಟಿಯೆಂದು ಆಗ ಶ್ರೀಕಂಠಯ್ಯನವರಿಗೆ ತಿಳಿಯಲಿಲ್ಲ. ಶ್ರೀಕಂಠಯ್ಯನವರು ಬೆಂಗಳೂರಿನಲ್ಲಿ ವಕೀಲರಾಗಿ ನೆಲೆಸಿದ ಮೇಲೆ ಹೊಯ್ಸಳ ಇತಿಹಾಸದ ಬಗೆಗಿನ ತಮ್ಮ ಅಭ್ಯಾಸವನ್ನು ಮುಂದುವರೆಸಿದರು. 'History of India' ಈ ಪುಸ್ತಕದ ಲೇಖಕರಾಗಿ, ಹೆಸರುವಾಸಿಯಾದ ಎಡ್ವರ್ಡ್ ಥಾಮ್ಸನ್ನರು ಆಕಸ್ಮಾತ್ತಾಗಿ, ಶ್ರೀಕಂಠಯ್ಯನವರಿಗೆ ಭೇಟಿಯಾದರು. ಅವರು ಶ್ರೀಕಂಠಯ್ಯನವರಿಗೆ ಮಿಥಿಕ್ ಸೊಸೈಟಿಯೊಡನೆ ಸಂಪರ್ಕವಿಟ್ಟುಕೊಳ್ಳಿ ಎಂದು ಸೂಚಿಸಿದರು. ಅದರಂತೆ ಶ್ರೀಕಂಠಯ್ಯನವರು ಆ ಸಂಸ್ಥೆಯ ಸಂಚಾಲಕ ಫಾದರ್ ಟಬಾರ್ಡರನ್ನು ಭೇಟಿಯಾದರು. ಅವರು ಶ್ರೀಕಂಠಯ್ಯನವರ ಹೊಯ್ಸಳ ಇತಿಹಾಸದ ಮೇಲಿನ ಭಾಷಣಗಳನ್ನು ಮಿಥಿಕ್ ಸೊಸೈಟಿಯಲ್ಲಿ ಏರ್ಪಡಿಸಿದರು. ಟಬಾರ್ಡರು ಈ ಭಾಷಣವನ್ನು ಬಹುವಾಗಿ ಮೆಚ್ಚಿದರು. ಈ ಮೆಚ್ಚುಗೆಯ ಪರಿಣಾಮವೇನಾಯಿತೆಂದರೆ ಟಬಾರ್ಡರು ಶ್ರೀಕಂಠಯ್ಯನವರನ್ನು ಮಿಥಿಕ್ ಸೊಸೈಟಿಯ ಇತಿಹಾಸ ವಿಭಾಗದ ಕಾರ್ಯದರ್ಶಿಯನ್ನಾಗಿ ನೇಮಿಸಿದರು. ಇದು ನಡೆದದ್ದು ೧೯೧೭ರಲ್ಲಿ. ಅಲ್ಲಿಂದ ಮುಂದೆ ೪೦ ವರ್ಷಗಳ ಕಾಲ ಅಂದರೆ ೧೯೫೭ ರವರೆಗೆ ಶ್ರೀಕಂಠಯ್ಯನವರಿಗೂ ಮಿಥಿಕ್ ಸೊಸೈಟಿಗೂ ನಿಕಟ ಸಂಬಂಧವು ಬೆಳೆಯಿತು. ಈ ಸಂಬಂಧವು ಎಷ್ಟರಮಟ್ಟಿಗೆ ನಿಕಟವಾಯಿತೆಂದರೆ ಮಿಥಿಕ್ ಸೊಸೈಟಿ ಎಂದರೆ ಶ್ರೀಕಂಠಯ್ಯ, ಶ್ರೀಕಂಠಯ್ಯ ಎಂದರೆ ಮಿಥಿಕ್ ಸೊಸೈಟಿ ಎನ್ನುವವರೆಗೂ ಆಯಿತು.

ಪ್ರವಾಸ ಸಾಹಿತ್ಯ

ಮಿಥಿಕ್ ಸೊಸೈಟಿಯ ಕೆಲಸದ ಸಲುವಾಗಿ ಶ್ರೀಕಂಠಯ್ಯನವರು ದಕ್ಷಿಣ ಭಾರತದಲ್ಲಿ ಪ್ರವಾಸವನ್ನು ಕೈಕೊಳ್ಳಬೇಕಾಗಿತ್ತು. ಹೋದ ಸ್ಥಳಗಳ ಬಗ್ಗೆ ಮಿಥಿಕ್ ಸೊಸೈಟಿಯಲ್ಲಿ ಭಾಷಣ ಮಾಡುತ್ತಿದ್ದರು. ಭಾಷಣಗಳು ಸೊಸೈಟಿಯ ನಿಯತಕಾಲಿಕ "Quarterly Journal of the Mythic Society" ಯಲ್ಲಿ ಲೇಖನಗಳಾದವು. ಈ ರೀತಿಯಾಗಿ, ಹಳೇಬೀಡು, ಅನುರಾಧಪುರ, ಚಿತ್ರದುರ್ಗಗಳ ಬಗ್ಗೆ ಕೃತಿಪಿಡಿಗಳಾಗುವಷ್ಟು ದೀರ್ಘಲೇಖನಗಳಾದವು. ಹಂಪೆ, ಪಾಂಡಿಚೇರಿಗಳ ಬಗ್ಗೆ ಪುಟ್ಟ ಲೇಖನಗಳು ಪ್ರಕಟವಾದವು. ಆದರೆ ಅವರು ಬರೆದ ಪ್ರವಾಸ ಸಾಹಿತ್ಯಕ್ಕೆ ಕಿರೀಟಪ್ರಾಯವಾದದ್ದು ಮೈಸೂರು ಮಹಾರಾಜ ನಾಲ್ವಡಿ ಕೃಷ್ಣರಾಜರ ಕೈಲಾಸಯಾತ್ರೆಯ ವರ್ಣನೆ. ನಾಲ್ವಡಿ ಕೃಷ್ಣರಾಜ ಮಹಾರಾಜರ ಜೊತೆಗೆ ಹೋಗಿದ್ದವರ ದಿನಚರಿಗಳನ್ನಾಧರಿಸಿ ಈ ಹೊತ್ತಿಗೆಯನ್ನು ಬರೆದಿದ್ದರು. ಸರ್. ಸಿ.ವಿ. ರಾಮನ್ ಅವರು ಈ ಪುಸ್ತಕವನ್ನು ಓದಿ ಅದರ ಲೇಖಕರು, ಶ್ರೀಕಂಠಯ್ಯನವರು. ಈ ಪ್ರವಾಸವನ್ನು ಮಾಡಿ ಪುಸ್ತಕವನ್ನು ಬರೆದಿರಬೇಕೆಂದು ತಿಳಿದಿದ್ದರು. ಅವರು ಈ ಪ್ರವಾಸವನ್ನು ಮಾಡಿಲ್ಲವೆಂದು ಕೇಳಿದಾಗ ಅವರ ಕುತೂಹಲ ಹೆಚ್ಚಾಗಿ, ಹೋಗದೇ ಇದ್ದವರು, ಹೋದವರ ಹಾಗೆ ಎಲ್ಲರ ಮನ ಮುಟ್ಟುವ ಹಾಗೆ ಪ್ರವಾಸದ ಚಿತ್ರಣ ಮಾಡುವುದು ಇಂತಹ ವಿದ್ವಾಂಸರಿಗೆ ಮಾತ್ರ ಸಾಧ್ಯವೆಂದುಕೊಂಡರಂತೆ.

ಮಹನೀಯರ ಜೀವನ ಚರಿತ್ರೆಗಳು

ಭಾರತೀಯ ಸಂಸ್ಕೃತಿಯ ವಿಶ್ಲೇಷಣೆಯನ್ನು ಮಾಡಲು ಶ್ರೀಕಂಠಯ್ಯನವರು ವಿವಿಧ ರೀತಿಯಲ್ಲಿ ಶ್ರಮಿಸಿದರು. ಇವುಗಳಲ್ಲಿ ಅತ್ಯಂತ ಮಹತ್ವವಾದದ್ದು, "Quarterly Journal of the Mythic Society" ಯ ಒಂದು ವಿಶೇಷ ಸಂಚಿಕೆಯನ್ನು ಕರ್ನಾಟಕದ ಸಂಸ್ಕೃತಿ ಮತ್ತು ಪರಂಪರೆಗೆ ಮೀಸಲಿಟ್ಟದ್ದು. ಈ ಸಂಚಿಕೆಯಲ್ಲಿ ಕೆ.ಎಂ. ಪಣಿಕ್ಕರ್, ಕೆ.ಎಂ. ಮುನ್ಷಿ, ಹುಮಾಯೂನ್ ಕಬೀರ್, ಗುರುದತ್, ಮಾಸ್ತಿ ಇವರೆಲ್ಲರೂ ಭಾರತೀಯ ಸಂಸ್ಕೃತಿಯ ವಿವಿಧ ಮುಖಗಳ ಬಗೆಗೆ ಬರೆದಿದ್ದಾರೆ. ಇದೇ ತ್ರೈಮಾಸಿಕದ ಬೇರೆ ಬೇರೆ ಸಂಚಿಕೆಗಳಲ್ಲಿ ಶ್ರೀಕಂಠಯ್ಯನವರು ಅಶೋಕ, ಶಂಕರಾಚಾರ್ಯ, ವಿದ್ಯಾರಣ್ಯ, ರಾಮಕೃಷ್ಣ ಪರಮಹಂಸ, ವಿವೇಕಾನಂದ, ಟಾಗೋರ್, ಅರಬಿಂದೋ, ಗಾಂಧೀಜಿ ಇವರ ಜೀವನಚರಿತ್ರೆಗಳನ್ನು ಬರೆದಿದ್ದಾರೆ ಮತ್ತು ಅದೇ ತ್ರೈಮಾಸಿಕದಲ್ಲಿ ನಮ್ಮ ಕಾಲದ ಮಹಾನ್ ಗ್ರಂಥಗಳ ವಿಶದವಾದ ಸಮೀಕ್ಷೆಯನ್ನು ಮಾಡಿದ್ದಾರೆ. ಗ್ರಂಥಗಳು ಯಾವುದೆಂದರೆ : ಆನಂದ ಕುಮಾರಸ್ವಾಮಿಯವರ Time and Eternity,

ಗಾಂಧೀಜಿಯವರ ಹಿಂದ್‌ಸ್ವರಾಜ್, ರಾಧಾಕೃಷ್ಣನ್ನರ Eastern Religions and Western Thought. ಕರ್ನಾಟಕದ ಮಹನೀಯರಲ್ಲಿ ಎಂ. ಶ್ಯಾಮರಾವ್, ಆರ್. ನರಸಿಂಹಾಚಾರ್, ಎಸ್.ಎಸ್. ಸುಬ್ಬರಾವ್, ಯುವರಾಜ ಕಂಠೀರವ ನರಸರಾಜ ಒಡೆಯರರು, ಬಿ.ಎಂ. ಶ್ರೀಕಂಠಯ್ಯ, ಸರ್. ಎಂ. ವಿಶ್ವೇಶ್ವರಯ್ಯ, ಎಂ. ಹೆಚ್. ಕೃಷ್ಣ – ಇವರುಗಳ ಬಗೆಗೆ ಕೆಲವರ ಬಗೆಗೆ ದೀರ್ಘವಾಗಿಯೂ, ಉಳಿದವರ ಬಗೆಗೆ ಸಂಕ್ಷಿಪ್ತವಾಗಿಯೂ ಬರೆದಿದ್ದಾರೆ.

ಕರ್ನಾಟಕ ಇತಿಹಾಸ

ಕರ್ನಾಟಕ ಇತಿಹಾಸದ ಮೂರು ರಾಜವಂಶಗಳು ಅವರನ್ನು ವಿಶೇಷವಾಗಿ ಆಕರ್ಷಿಸಿದವು. ಅವು ಯಾವುವೆಂದರೆ : ಹೊಯ್ಸಳ, ವಿಜಯನಗರ ಮತ್ತು ಒಡೆಯರರು. ಆಶ್ಚರ್ಯದ ಸಂಗತಿಯೆಂದರೆ, ಈ ಮೂರು ವಂಶಗಳಲ್ಲಿ ಇರಬಹುದಾದ ಸಂಬಂಧವನ್ನು ಸೂಚಿಸಿದವರು ಹೊರಗಿನವರಾದ ಟಿಬಾರ್ಡರು. ಈ ಸೂಚನೆಯನ್ನು ಶ್ರೀಕಂಠಯ್ಯನವರು ಈ ರೀತಿಯಾಗಿ ಒಪ್ಪಿಕೊಳ್ಳುತ್ತಾರೆ, "ಮೈಸೂರಿನ ಒಡೆಯರರಿಗೂ, ಹೊಯ್ಸಳರಿಗೂ, ವಿಜಯನಗರ ಸಾಮ್ರಾಜ್ಯ ಸ್ಥಾಪಕರಾದ ಹರಿಹರ ಬುಕ್ಕರ ಮುಖಾಂತರ ಸಂಬಂಧವಿದ್ದಿರಬಹುದೆನ್ನುವ ಅವರ ಸೂಚನೆಯನ್ನು ಅನುಸರಿಸಿ ನಾನು ನನ್ನ Founders of Vijayanagara ಎನ್ನುವ ಪುಸ್ತಕದಲ್ಲಿ ಕೆಲವು ಸೂಚನೆಗಳನ್ನು ಮಾಡಿದ್ದೇನೆ." ಇವರಿಗಿಂತ ಮೊದಲು, ಎಸ್.ಕೆ. ಅಯ್ಯಂಗಾರ್, ಹೆರಾಸ್ ಮತ್ತು ಸಾಲೆತೊರೆಯವರು ವಿಜಯನಗರ ಸಂಸ್ಥಾಪಕರು ಮತ್ತು ಹೊಯ್ಸಳರಲ್ಲಿ ಸಂಬಂಧವಿದ್ದಿರಬಹುದೆಂದು ಊಹಿಸಿದ್ದರು. ಅವರ ಅಭಿಪ್ರಾಯಗಳನ್ನು ಶ್ರೀಕಂಠಯ್ಯನವರು ಸಮರ್ಥಿಸಿದರು. ಪ್ರಕೃತ ವಿಚಾರಗೋಷ್ಠಿಯಲ್ಲಿ ಇದೇ ವಿಷಯವನ್ನು ಕೂಲಂಕಷವಾಗಿ ಚರ್ಚಿಸಿರುವುದರಿಂದ ಪುನಃ ಇಲ್ಲಿ ಅದರ ಉಲ್ಲೇಖ ಅನವಶ್ಯ. ಒಡೆಯರರ ಇತಿಹಾಸ ರಚನೆಗೂ ಶ್ರೀಕಂಠಯ್ಯನವರ ಕೊಡುಗೆ ಗಣನೀಯ. ನಾಲ್ವಡಿ ಕೃಷ್ಣರಾಜ ಒಡೆಯರರ ಆಡಳಿತದ ರಜತೋತ್ಸವ (೧೯೨೭)ದಲ್ಲಿ ಆ ಮಹಾರಾಜರ ಆಳ್ವಿಕೆಯ ಸಾಧನೆಗಳ ಕೈಪಿಡಿಯೊಂದನ್ನು ಹೊರತಂದರು. ಅದೇ ಮಹಾರಾಜರು ೧೯೪೦ರಲ್ಲಿ ನಿಧನರಾದಾಗ ತಾವು ಸಂಪಾದಿಸುತ್ತಿದ್ದ ತ್ರೈಮಾಸಿಕದ ವಿಶೇಷ ಸಂಚಿಕೆಯೊಂದನ್ನು ಪ್ರಕಟಿಸಿದರು. ಈ ಸಂಚಿಕೆಯು ಒಡೆಯರರ ಇತಿಹಾಸದ ವಿದ್ಯಾರ್ಥಿಗಳಿಗೆ ಅತ್ಯಮೂಲ್ಯ.

ಕಣ್ಣು ತೆರೆದ ಸನಾತನಿ

ಶ್ರೀಕಂಠಯ್ಯನವರು ಸನಾತನ ಧರ್ಮದ ಕುರುಡು ಆರಾಧಕರಾಗಿರಲಿಲ್ಲ.

ನಮ್ಮ ಸಂಸ್ಕಾರಗಳು ಹೇಗೆ ಹುಟ್ಟಿ ಬೆಳೆದವು ಎನ್ನುವುದನ್ನು ಐತಿಹಾಸಿಕವಾಗಿ ಅಭ್ಯಾಸ ಮಾಡಿ ಅವುಗಳನ್ನು ಒಪ್ಪಿಕೊಳ್ಳುತ್ತಿದ್ದರು. ಇಂತಹ ಒಪ್ಪಿಗೆಗೆ ಒಳ್ಳೆಯ ನಿದರ್ಶನ ಯಜ್ಞೋಪವೀತದ ಬಗೆಗೆ ಅವರು ಬರೆದ ಪುಟ್ಟ ಹೊತ್ತಿಗೆ. ಅವರ ಸಂಶೋಧನೆಯ ಪ್ರಕಾರ ಮೊಟ್ಟಮೊದಲು ಕೆಲವು ನಮ್ಮ ಆಚರಣೆಗಳನ್ನು ಮಾಡುವಾಗ ಉಪವೀತವನ್ನು ಬೇರೆ ಬೇರೆ ರೀತಿಯಲ್ಲಿ ಉಪಯೋಗಿಸಬೇಕಾಗಿತ್ತು. ಬಹಳ ಹಿಂದಿನ ಕಾಲದಲ್ಲಿ ಅದರ ಉಪಯೋಗವಿರಲೇ ಇಲ್ಲ. ಕ್ರಮೇಣ ಉಪವೀತದ ಬದಲು ಯಜ್ಞೋಪವೀತವನ್ನು ಉಪಯೋಗಿಸಲಾಯಿತು. ನಂತರ ಈ ಯಜ್ಞೋಪವೀತದಲ್ಲಿ ಅತಿಮಾನುಷ ಗುಣಗಳಿವೆಯೆಂದು ಹೇಳಲಾಯಿತು. ನಮ್ಮ ಸನಾತನ ಧರ್ಮದ ಬಗ್ಗೆ ಅವರು ಬರೆದ ಅತಿ ಮಹತ್ವದ ಗ್ರಂಥವೆಂದರೆ Sri Sankaracharya and his Mission – ಶ್ರೀ ಶಂಕರಾಚಾರ್ಯರು ಮತ್ತು ಅವರ ಧರ್ಮ ಪ್ರಚಾರ. ಈಗಿನ ಕಾಲಕ್ಕೂ ಶಂಕರಾಚಾರ್ಯರ ಮಾನವ ಕುಲದ ಬಗೆಗಿನ ಅನುಕಂಪವು ಅವರನ್ನು ಮತಾಂಧತೆ ಇಲ್ಲದಿರುವ ನಿರ್ಭೀತ ಧೋರಣೆಯನ್ನು ಪ್ರಚಾರಮಾಡತೊಡಗಿಸಿತು. ಈ ಧೋರಣೆಯು ಮತೀಯ ಇತಿಹಾಸದಲ್ಲಿ ವಿಶಾಲ ಮನೋಭಾವಕ್ಕೂ ಮತ್ತು ಆಳವಾದ ತಿಳಿವಳಿಕೆಗೂ ಸಾಟಿ ಇಲ್ಲದದು." "ನಮ್ಮ ಹೆಂಗಸರು ನಮ್ಮ ಪರಂಪರೆಯನ್ನು ಉಳಿಸಿಕೊಳ್ಳಲು ಶಕ್ತಿ ಮೀರಿ ಯಾವುದೇ ಮಾರ್ಗದಿಂದಾಗಲಿ, ಅವರಿಗೆ ಬೆಂಬಲವಾಗುತ್ತದೆ. ಇದೇ ಶಂಕರಾಚಾರ್ಯರ ಧರ್ಮಪ್ರಚಾರದ ಉದ್ದೇಶ. ಅವರ ಕಾಲದಲ್ಲಿಯೂ ಇದೇ ಆಗಿತ್ತು. ಅವರ ದಿವ್ಯ ಉದಾಹರಣೆಯು ಇಂದೂ ನಮಗೆ ಮಾರ್ಗದರ್ಶಿಯಾಗಬಲ್ಲದು." ಶ್ರೀಕಂಠಯ್ಯನವರ ಈ ಆಶಯದೊಂದಿಗೆ ಈ ಮಾತನ್ನು ಇಲ್ಲಿಗೆ ಮುಗಿಸಬಹುದು.

ಶ್ರೀಕಂಠಯ್ಯನವರ ಬರವಣಿಗೆಗಳಿಂದ ಅಶೋಕ, ಶಂಕರಾಚಾರ್ಯ, ರಾಮಕೃಷ್ಣ ಪರಮಹಂಸ, ವಿವೇಕಾನಂದ, ನಾಲ್ವಡಿ ಕೃಷ್ಣರಾಜ ಒಡೆಯರ್ – ಈ ಮಹನೀಯರ ಸಂಕ್ಷಿಪ್ತ ಜೀವನ ಚರಿತ್ರೆಗಳನ್ನು ಮತ್ತು ಆನಂದಕುಮಾರಸ್ವಾಮಿ, ಗಾಂಧೀಜಿ ಮತ್ತು ರಾಧಾಕೃಷ್ಣನ್ – ಇವರ ಅಮರ ಗ್ರಂಥಗಳ ಬಗ್ಗೆ ಟಿಪ್ಪಣಿಗಳನ್ನು ಮತ್ತು ಭಾರತೀಯ ಸಂಸ್ಕೃತಿಯ ಬಗ್ಗೆ ಕೈಪಿಡಿಯನ್ನು ಸಂಗ್ರಹ ಮಾಡಲು ಸಾಧ್ಯ. ಹಾಗೆ ಮಾಡಲು ಸಾಧ್ಯವಾದರೆ, ಅಂತಹ ಸಂಗ್ರಹವು ಶ್ರೀಕಂಠಯ್ಯನವರಿಗೆ ಸೂಕ್ತ ಸ್ಮಾರಕವಾಗಬಲ್ಲದು.

೨. ವಿಚಾರಗೋಷ್ಠಿಯ ಸ್ವರೂಪ

Founders of Vijayanagara ಎಂಬ ಅವರ ಪುಸ್ತಕದಲ್ಲಿಯೂ ಮತ್ತು 'ವಿಜಯನಗರ ಮತ್ತು ವಿದ್ಯಾರಣ್ಯ' ಎನ್ನುವ ಅವರ ಲೇಖನದಲ್ಲಿಯೂ

ಶ್ರೀಕಂಠಯ್ಯನವರು ಚರ್ಚಿಸಿದ ಎರಡು ಸಮಸ್ಯೆಗಳು ವಿಚಾರಗೋಷ್ಠಿಯ ಮುಖ್ಯ ವಿಷಯಗಳು. ಅವು ಯಾವುದೆಂದರೆ :

೧) ಸಂಗಮ ಸಹೋದರರು ಮೊದಲಿನಿಂದಲೂ ಸ್ವತಂತ್ರವಾಗಿದ್ದರೋ ಅಥವಾ ಯಾವುದಾದರೂ ರಾಜನಿಗೆ ಅಧೀನರಾಗಿದ್ದರೋ?

೨) ಶೃಂಗೇರಿಯ ಜಗದ್ಗುರುಗಳು ಅವರಲ್ಲಿಯೂ ವಿದ್ಯಾರಣ್ಯರು ವಿಜಯನಗರ ಸಾಮ್ರಾಜ್ಯದ ಸ್ಥಾಪನೆಯಲ್ಲಿ ಪಾತ್ರವಹಿಸಿದ್ದರೇ? ಆ ಪಾತ್ರ ಯಾವುದು?

ವಿಚಾರಗೋಷ್ಠಿಯಲ್ಲಿ ಇವೇ ಮುಖ್ಯ ವಿಷಯಗಳಾಗಿದ್ದವು. ವಿದ್ಯಾರಣ್ಯರು ಒಬ್ಬರೇ ಏನನ್ನೂ ಮಾಡಲಿಲ್ಲ. ಇತರರ ಸಹಾಯವನ್ನು ತೆಗೆದುಕೊಂಡರು. ಇವರು ಯಾರೆಂದರೆ ವೇದಾಂತ ದೇಶಿಕರು ಮತ್ತು ದ್ವೈತ ಸಂತರು. ಇದಲ್ಲದೇ ವಿದ್ಯಾರಣ್ಯರು ಧಾರ್ಮಿಕ ವಿಷಯಗಳಲ್ಲಿಯೂ ಮತ್ತು ಸಾಹಿತ್ಯದಲ್ಲಿಯೂ ಒಂದು ನವೋದಯ ಯುಗವನ್ನು ಆರಂಭಿಸಿದರು. ಅವರ, ಅವರ ಸಹವರ್ತಿಗಳ ಮತ್ತು ಸಮಕಾಲೀನರ ಕೃತಿಗಳ ಚರ್ಚೆಯೂ ಇಲ್ಲಿದೆ. ತೆಲುಗು ಮತ್ತು ಕನ್ನಡ ಸಾಹಿತ್ಯಗಳಲ್ಲಿಯೂ ನವೋದಯವಾಯಿತು. ಅವುಗಳ ಪರಸ್ಪರ ಪ್ರಭಾವವು ಇಲ್ಲಿ ಚರ್ಚಿಸಲ್ಪಟ್ಟಿದೆ. ಸಂಗಮ ವಂಶದವರ ಆಳ್ವಿಕೆಯಲ್ಲಿ ತಮ್ಮ ಧರ್ಮ ಮತ್ತು ಸಾಹಿತ್ಯಗಳು ಬಲವಾಗಿ ಬೇರೂರುವ ಹಾಗೆ ಮಾಡುವ ವೀರಶೈವ ಮುಖಂಡರ ಪ್ರಯತ್ನಕ್ಕೆ ಸಕಾಲವಾಯಿತೆನ್ನುವುದನ್ನು ಇಲ್ಲಿ ನೋಡಬಹುದು. ಎಲ್ಲಾ ಧರ್ಮಗಳನ್ನು ಸಂಗಮ ವಂಶದ ರಾಜರು ಸಮನಾಗಿ ಕಂಡರು. ಈ ಸಮದೃಷ್ಟಿಗೆ ಬುಕ್ಕರಾಯನ ಕಲ್ಯ ಮತ್ತು ಶ್ರವಣಬೆಳ್ಗೊಳ ಶಾಸನಗಳು ನಿದರ್ಶನ. ಈ ಎರಡೂ ಶಾಸನಗಳು ಒಂದರ ನಕಲು ಇನ್ನೊಂದೆಂದು ಇದುವರೆಗು ಎಲ್ಲರೂ ತಿಳಿದಿದ್ದರು. ಆದರೆ ಇಲ್ಲಿ ಅವೆರಡರಲ್ಲಿಯೂ ಇರುವ ವ್ಯತ್ಯಾಸವನ್ನು ತೋರಿಸುವ ಲೇಖನವೂ ಇದೆ.

ಈ ಚಟುವಟಿಕೆಗಳೆಲ್ಲಾ ಹಂಪೆಯಲ್ಲಿ ನಡೆದವು. ಆದ್ದರಿಂದ ಹಂಪೆ, ಆನೆಗೊಂದಿ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ಕಾಣುವ ಸ್ಮಾರಕಗಳು ಇಲ್ಲಿ ವರ್ಣಿಸಲ್ಪಟ್ಟಿದೆ. ಈ ಮೇಲೆ ಕಾಣಿಸುವ ಸ್ಮಾರಕಗಳಷ್ಟೇ ಭೂಶೋಧನೆಯಿಂದ ಹೊರಬಂದ ಅವಶೇಷಗಳು ಕುತೂಹಲಕಾರಿಯಾಗಿವೆ. ಈ ಭೂಶೋಧನೆಯಿಂದ ಹೊರಬಂದ ಅಂಶಗಳನ್ನೆಲ್ಲಾ ಡಾ ॥ ಎಂ.ಎಸ್. ನಾಗರಾಜರಾಯರು ತಮ್ಮ ವಿಜಯನಗರ ವರದಿಗಳಲ್ಲಿ ವರ್ಣಿಸಿದ್ದಾರೆ. ಅದೇ ವಿಷಯದ ಮೇಲೆ ಇಲ್ಲಿಯೂ ಒಂದು ಲೇಖನವಿದೆ. ಆದರೆ ಭೂಶೋಧನೆಯಿಂದಲೇ ಎಲ್ಲವನ್ನೂ ತಿಳಿಯಲಾಗುವುದಿಲ್ಲ. ಶಾಸನಗಳು, ನಾಣ್ಯಗಳು, ಶೃಂಗೇರಿ ಮಠದ ಕಡಿತಗಳು ಅನೇಕ ಹೊಸ ವಿಷಯಗಳನ್ನು ಹೊರತಂದಿವೆ. ಇವೆಲ್ಲದರ ಬಗೆಯೂ ಇಲ್ಲಿ ಲೇಖನಗಳಿವೆ.

೩. ವಿಜಯನಗರ ಸಾಮ್ರಾಜ್ಯ ಸ್ಥಾಪನೆಯಾಗುವ ಮುನ್ನಿನ ದಕ್ಷಿಣ ಭಾರತ

ಈ ಲೇಖನವು ವಿಜಯನಗರದ ಸ್ಥಾಪನೆಯಾಗುವ ಮುನ್ನಿನ ದಕ್ಷಿಣ ಭಾರತದ ರಾಜಕೀಯ ಮತ್ತು ಆರ್ಥಿಕ ಸ್ಥಿತಿಗತಿಗಳಿಗೆ ಮೀಸಲಾಗಿದೆ. ಇದರಲ್ಲಿ ಸಮಗ್ರ ದಕ್ಷಿಣ ಭಾರತದ ಆರ್ಥಿಕ ಸ್ಥಿತಿಗಳ ಬಗೆಗೂ ಮತ್ತು ಆಂಧ್ರ-ಮಹಾರಾಷ್ಟ್ರಗಳ ರಾಜಕೀಯ ಸ್ಥಿತಿಯ ಬಗೆಗೂ ಒತ್ತಿ ಹೇಳಿದೆ. ಇದಕ್ಕೆ ಕಾರಣ ಈ ವಿಷಯಗಳನ್ನು ಗೋಷ್ಠಿಯಲ್ಲಿ ಚರ್ಚಿಸಲಾಗಲಿಲ್ಲ. ಮುಂಬರುವ ಲೇಖನಗಳಲ್ಲಿ ಕರ್ನಾಟಕ ಮತ್ತು ತಮಿಳುನಾಡುಗಳಲ್ಲಿಯ ರಾಜಕೀಯ ಸ್ಥಿತಿಗಳ ವರ್ಣನೆಯಿದೆ. ೧೩ನೇ ಶತಮಾನದ ಅಂತ್ಯಭಾಗದಲ್ಲಿ ದಕ್ಷಿಣ ಭಾರತದಲ್ಲಿ ನಾಲ್ಕು ರಾಜ್ಯಗಳಿದ್ದವು; ಉತ್ತರದಲ್ಲಿ ಯಾದವರು, ಕಾಕತೀಯರು, ಮಧ್ಯಭಾಗದಲ್ಲಿ ಹೊಯ್ಸಳರು, ದಕ್ಷಿಣದಲ್ಲಿ ಪಾಂಡ್ಯರು ಇದ್ದರು. ಇವು ನಾಲ್ಕು ರಾಜ್ಯಗಳು ಪರಸ್ಪರ ಬಡೆದಾಟಗಳಲ್ಲಿ ನಿರತರಾಗಿದ್ದರು. ಈ ಬಡೆದಾಟಗಳು ಜನಸಾಮಾನ್ಯರ ಆರ್ಥಿಕ ಚಟುವಟಿಕೆಗಳಿಗೆ ಅಡ್ಡಿಯಾಗಿರಲಿಲ್ಲ. ಯಾದವರ ರಾಜಧಾನಿ ದೇವಗಿರಿಯ ಜನರ ಸಂಪತ್ತನ್ನು ಸಮಕಾಲೀನ ಲೇಖಕ ಇಸಾಮಿಯು ಕಾವ್ಯಮಯವಾಗಿ ಹೀಗೆ ವರ್ಣಿಸಿದ್ದಾನೆ: "ಪ್ರತಿಯೊಂದು ಮನೆಯಲ್ಲಿಯೂ ಬೆಳ್ಳಿ, ಬಂಗಾರ ವಜ್ರಗಳು ತುಂಬಿ ತುಳುಕಾಡುತ್ತಿದ್ದವು. ಎಲ್ಲಾ ಕಡೆಯಲ್ಲಿ ರೇಷ್ಮೆ ಬಟ್ಟೆಗಳು ಭಾರೀ ಪ್ರಮಾಣದಲ್ಲಿ ದೊರೆಯುತ್ತಿತ್ತು. ದೇವಗಿರಿ ಬಿಟ್ಟರೆ ಇನ್ನೆಲ್ಲಿಯೂ ಇಷ್ಟು ವಿಧವಿಧವಾದ ಬಟ್ಟೆಗಳು ಸಿಕ್ಕುತ್ತಿರಲಿಲ್ಲ."[೧] ಮಧ್ಯಕಾಲೀನ ಪ್ರವಾಸಿಗಳಲ್ಲಿ ರಾಜನೆಂದು ಪ್ರಸಿದ್ಧವಾದ ಮಾರ್ಕೋಪೋಲೋ ೧೨೯೪ರಲ್ಲಿ ತನ್ನ ವರದಿಯನ್ನು ಬರೆದನು. ಅವನು ಕಾಕತೀಯ ರಾಜ್ಯದ ಬಗ್ಗೆ ಈ ರೀತಿ ಬರೆದಿದ್ದಾನೆ: "ಈ ರಾಜ್ಯದಲ್ಲಿ ತಯಾರಾದ ಮಸ್ಲಿನ್ ಬಟ್ಟೆಯು ಅತ್ಯಂತ ಶ್ರೇಷ್ಠಗುಣಮಟ್ಟದ್ದು, ನಾಜೂಕಾದ್ದು ಮತ್ತು ಶ್ಲಾಘನೀಯವಾದದ್ದು. ಜೇಡರ ಬಲೆಯಷ್ಟು ತೆಳುವಾಗಿತ್ತು. ಪ್ರಪಂಚದ ಯಾವ ರಾಜ ಅಥವಾ ರಾಣಿಯಾದರೂ ಅವುಗಳನ್ನು ಉಡುವುದರಲ್ಲಿ ಸಂತೋಷಪಡುತ್ತಿದ್ದರು." ಆ ರಾಜ್ಯದಲ್ಲಿ ಜನಜೀವನದ ಅವಶ್ಯಕವಸ್ತುಗಳು ಸಮೃದ್ಧಿಯಾಗಿದ್ದುವೆಂದೂ ಹೇಳುತ್ತಾನೆ.[೨] ಅವನ ಪ್ರಕಾರ ಕಾಕತೀಯ ರಾಜ್ಯದ ಸಂಪತ್ತು ಅಲ್ಲಿ ಸಿಗುತ್ತಿದ್ದ ವಜ್ರದ ಮೇಲೆ ಅವಲಂಬಿಸಿತ್ತು. ಇನ್ಯಾವ ರಾಜ್ಯದಲ್ಲಿಯೂ ಅಷ್ಟು ಭಾರೀ ಪ್ರಮಾಣದಲ್ಲಿಯೂ ಮತ್ತು ಅಷ್ಟು ದೊಡ್ಡಗಾತ್ರದವೂ ಅವು ಸಿಕ್ಕುತ್ತಿರಲಿಲ್ಲವೆಂದು ಅವನೇ ಹೇಳುತ್ತಾನೆ.[೩] ಕಾಕತೀಯ ರಾಜ್ಯವು ವಜ್ರಕ್ಕೆ ಹೇಗೆ ಪ್ರಸಿದ್ಧಿಯಾಗಿತ್ತೊ ಪಾಂಡ್ಯರ ರಾಜ್ಯವು ಮುತ್ತು ಹವಳಗಳಿಗೆ

---

೧. ಷೇರ್ವಾನಿ, ಹೆಚ್.ಕೆ. ಮತ್ತು ಜೋಷಿ.ಪಿ.ಎಂ (ಸಂ) ಹಿಸ್ಟರಿ ಆಫ್ ಮಿಡೀವಲ್ ಡೆಕ್ಕನ್ (೧೨೯೫-೧೭೨೪), ಸಂ. ೧, (ಹೈದ್ರಾಬಾದ್, ೧೯೭೩), ಪು. ೩೬.

೨. ಶಾಸ್ತ್ರಿ, ಕೆ.ಎ.ಎನ್., ಫಾರಿನ್ ನೋಟಿಸಸ್ ಆಫ್ ಸೌತ್ ಇಂಡಿಯಾ ಪು. ೧೭೫

ಅಷ್ಟೇ ಪ್ರಸಿದ್ಧಿಯಾಗಿತ್ತು. "ಇಲ್ಲಿ ಮುತ್ತು ಹವಳಗಳನ್ನು ಅಧಿಕ ಸಂಖ್ಯೆಯಲ್ಲಿ ಹೊರತೆಗೆಯುತ್ತಾರೆ. ಇಲ್ಲಿಂದಲೇ ಮುತ್ತು ಹವಳಗಳು ಪ್ರಪಂಚದಾದ್ಯಂತ ಪ್ರಸಾರವಾಗುವುದು."[೪] ಪಾಂಡ್ಯರಾಜರು ಅವುಗಳ ಮಾರಾಟದಿಂದ ಒಳ್ಳೆಯ ಆದಾಯವನ್ನು ಪಡೆಯುತ್ತಿದ್ದರೆಂದೂ ಅವನು ಹೇಳುತ್ತಾನೆ.

ವಿದೇಶಿ ವ್ಯಾಪಾರ ಕಾಕತೀಯ ಮತ್ತು ಪಾಂಡ್ಯ ರಾಜ್ಯಗಳ ಇನ್ನೊಂದು ಆದಾಯದ ಮೂಲವಾಗಿತ್ತು. ಮೋಟುಪಲ್ಲಿ ಬಂದರಿನಿಂದ ನಡೆಯುತ್ತಿದ್ದ ಈ ವ್ಯಾಪಾರದಿಂದ ಎಷ್ಟು ಸಂಪತ್ತು ಕಾಕತೀಯ ರಾಜ್ಯಕ್ಕೆ ಬರುತ್ತಿತ್ತೆಂದರೆ, ಮಾರ್ಕೋಪೋಲೋನಂಥ ಹೊರಗಿನವರಿಗೆ ಕಾಕತೀಯ ರಾಜರು ಮೋಟುಪಲ್ಲಿಯ ರಾಜರೆಂದೇ ಪ್ರಸಿದ್ಧಿಯಾಗಿದ್ದರು. ಈ ವಿದೇಶಿ ವ್ಯಾಪಾರಕ್ಕೂ ಮತ್ತು ದಕ್ಷಿಣ ಭಾರತದ ಸಂಪತ್ತಿಗೂ ಬೆನ್ನೆಲುಬಿನ ಹಾಗೆ ಇದ್ದವರೆಂದರೆ ಗುಜರಾತಿ ಬನಿಯಾಗಳು. ಅವರನ್ನು ಮಾರ್ಕೋಪೋಲೋ ಅಬ್ರಮನ್ನರೆಂದು ಕರೆಯುತ್ತಾನೆ. ಅವನು ಬರೆದಾಗ ಅಂದರೆ ೧೩ನೇ ಶತಮಾನದ ಅಂತ್ಯ ಭಾಗದಲ್ಲಿ – ಮತ್ತು ಅದಕ್ಕೆ ಮುಂಚೆ ಹಾಗೂ ನಂತರವೂ ಕೂಡ – ಗುಜರಾತಿ ಬನಿಯಾಗಳು ದಕ್ಷಿಣಭಾರತದ ಎಲ್ಲಾ ಕಡೆಗಳಲ್ಲಿಯೂ ತಮ್ಮ ವ್ಯವಹಾರಗಳನ್ನು ನಡೆಸಿಕೊಂಡು ಹೋಗುತ್ತಿದ್ದರು. ಈ ವ್ಯವಹಾರಗಳನ್ನು ಮಾರ್ಕೋಪೋಲೋ ಈ ರೀತಿಯಾಗಿ ವರ್ಣಿಸುತ್ತಾನೆ: "ಈ ಅಬ್ರಮನ್ನರು ಪ್ರಪಂಚದ ವರ್ತಕರಲ್ಲೆಲ್ಲಾ ಅಗ್ರಗಣ್ಯರು ಮತ್ತು ಸತ್ಯಸಂಧರು. ಅವರು ಸುಳ್ಳನ್ನು ಹೇಳುವುದೇ ಇಲ್ಲ. ಈ ದೇಶದ ವ್ಯವಹಾರಗಳನ್ನು ಅರಿಯದ ವಿದೇಶಿ ವ್ಯಾಪಾರಿಯು ಇವರಿಗೆ ತನ್ನ ಸಾಮಾನುಗಳ ಮಾರಾಟವನ್ನು ಒಪ್ಪಿಸಿದರೆ, ಅವುಗಳನ್ನು ಆ ವ್ಯಾಪಾರಿಗೆ ಅತ್ಯಂತ ಲಾಭವಾಗುವ ಹಾಗೆ ಮಾರಿ, ಅವನು ಸಂತೋಷದಿಂದ ಕೊಡುವ ಕಮಿಷನ್ನನ್ನು ಮಾತ್ರ ತೆಗೆದುಕೊಳ್ಳುತ್ತಿದ್ದರು."[೫]

ಪಾಂಡ್ಯರಾಜರು ಸಂಪತ್ತನ್ನು ಕೂಡಿಡುವ ವಿಧಾನವನ್ನು ಮಾರ್ಕೋಪೋಲೋ ವರ್ಣಿಸುತ್ತಾನೆ.[೬] ಅವನು ಪಾಂಡ್ಯರ ಬಗೆಗೆ ಹೇಳಿದ್ದು ದಕ್ಷಿಣ ಭಾರತದ ಇತರ ರಾಜರಿಗೂ ಅನ್ವಯಿಸುತ್ತದೆ. ಸಂಪತ್ತನ್ನು ರಾಜರು ಮಾತ್ರ ಕೂಡಿಡುತ್ತಿರಲಿಲ್ಲ. ಚಿದಂಬರಂ ಮತ್ತು ಶ್ರೀರಂಗಂಗಳಲ್ಲಿಯಂತಹ ದೇವಸ್ಥಾನಗಳು ಸಂಪತ್ತನು ಕೂಡಿಡುತ್ತಿದ್ದವು. ೧೩ನೇ ಶತಮಾನದ ಕೊನೆಯ ಹೊತ್ತಿಗೆ ಅರಮನೆಗಳಲ್ಲಿಯೂ

---

೩. ಅದೇ ಪುಟದಲ್ಲಿ.

೪. ಅದೇ ಪುಸ್ತಕ, ಪು. ೧೬೩

೫. ಅದೇ ಪುಸ್ತಕ, ಪು. ೧೭೬

೬. ಅದೇ ಪುಸ್ತಕ.

ಮತ್ತು ದೇವಸ್ಥಾನಗಳಲ್ಲಿಯೂ ವಿಪುಲ ಸಂಪತ್ತು ಸಂಗ್ರಹವಾಗಿದ್ದು ಎಲ್ಲರಿಗೂ ಗೊತ್ತಿತ್ತು.

೧೨೯೬ರಲ್ಲಿ ನಡೆದ ಅಲ್ಲಾವುದ್ದೀನನ ದೇವಗಿರಿಯ ಮೇಲಿನ ಮೊದಲ ದಂಡೆಯಾತ್ರೆಯು ಈ ಸಂಪತ್ತಿನ ಕಡೆ ಅವನ ಲಕ್ಷ್ಯವನ್ನು ಸೆಳೆಯಿತು. ಅವನು ರಾಜನಾದ ಮೇಲೆ ತನ್ನ ಸೇನಾಪತಿ ಮಲ್ಲಿಕಾಫರನನ್ನು ಮೂರು ಸಲ (೧೩೦೬–೧೦) ಈ ಸಂಪತ್ತನ್ನು ಲೂಟಿ ಮಾಡಲು ಕಳಿಸಿಕೊಟ್ಟನು. ಈ ಸೇನಾನಿಯು ತಂದ ಸಂಪತ್ತು ಲೋಭಿಯು ಕಾಣುವ ಕನಸನ್ನು ಮೀರುವಷ್ಟು ಅಗಣಿತವಾಗಿತ್ತು. ದಕ್ಷಿಣ ಭಾರತದ ಸಂಪತ್ತನ್ನು ಖಿಲ್ಜಿಗಳು ಕಂಡುಕೊಂಡಂತೆ, ಅಲ್ಲಿಯ ರಾಜ್ಯಗಳು ಸೈನಿಕದೃಷ್ಟಿಯಿಂದ ಎಷ್ಟು ದುರ್ಬಲರೆನ್ನುವುದನ್ನೂ ಮನಗಂಡರು. ಖಿಲ್ಜಿಗಳು ಯಾದವರ ರಾಜ್ಯವನ್ನು ಡೆಲ್ಲಿ ಚಕ್ರಾಧಿಪತ್ಯಕ್ಕೆ ಸೇರಿಸಿದರು. ಅವರ ನಂತರ ಬಂದ ಮಹಮದ್ ಬಿನ್ ತೊಗಲಕ್ಕನ ಕಾಲದಲ್ಲಿ, ಕಾಕತೀಯ ಮತ್ತು ಪಾಂಡ್ಯ ರಾಜ್ಯಗಳು ಅವನ ಸಾಮ್ರಾಜ್ಯದ ಭಾಗಗಳಾದವು. ಹೊಯ್ಸಳ ರಾಜನೂ ಅವನ ಅಧೀನನಾದನು.[೭]

ಒಂದಾದ ಮೇಲೊಂದು ನಡೆದಂಥ ದಂಡೆಯಾತ್ರೆಗಳ ಪರಿಣಾಮ, ಬೇರೆ ಬೇರೆ ರಾಜ್ಯಗಳ ಮೇಲೆ ಬೇರೆ ಬೇರೆ ರೀತಿಯಾಯಿತು. ಉತ್ತರ ಕರ್ನಾಟಕ ಮತ್ತು ಮಹಾರಾಷ್ಟ್ರಗಳಲ್ಲಿದ್ದ ಯಾದವ ರಾಜ್ಯವು ಅಷ್ಟು ನಷ್ಟವನ್ನು ಅನುಭವಿಸಲಿಲ್ಲ. ಹೊಯ್ಸಳ ರಾಜ್ಯವೂ ಅಷ್ಟು ನಷ್ಟವನ್ನು ಅನುಭವಿಸಲಿಲ್ಲ. ಯಾಕೆಂದರೆ ಹೊಯ್ಸಳರ ಮೂರನೆ ಬಲ್ಲಾಳನು ತನ್ನ ಮೇಲೆ ಬಂದಂಥ ಬಿರುಗಾಳಿಯಂಥ ವಿಪತ್ತಿಗೆ ತಲೆ ಬಗ್ಗಿಸಿ ನಡೆದು ತನ್ನ ರಾಜ್ಯವನ್ನು ಉಳಿಸಿಕೊಂಡನು. ಕಾಕತೀಯ ರಾಜ್ಯವು ಬಲವಾಗಿ ಪ್ರತಿಭಟಿಸಿದ್ದಕ್ಕೆ ಮತ್ತು ಮಧುರೈ ಸುಲ್ತಾನನು ಇತಿಹಾಸದಲ್ಲಿಯೇ ಅತ್ಯಂತ ಕ್ರೂರಿಯೆಂದು ಕುಪ್ರಸಿದ್ಧನಾದುದರಿಂದ, ಈ ರಾಜ್ಯಗಳು ಬಹಳ ಆಪತ್ತಿಗೆ ಗುರಿಯಾದವು. ಅನೇಕ ಸಲ ಉದಾಹರಿಸಲಾದ ವಿಲಾಸ ಶಾಸನವು ತುಗಲಕರ ಕಾಲದಲ್ಲಿ ಆಂಧ್ರರು ಅನುಭವಿಸಿದ ಯಾತನೆಯನ್ನು ಈ ರೀತಿಯಾಗಿ ವರ್ಣಿಸುತ್ತದೆ. "ಈ ಕ್ರೂರಿಗಳು ಶ್ರೀಮಂತರನ್ನು ಅವರ ಸಂಪತ್ತನ್ನು ಕಿತ್ತುಕೊಳ್ಳುವುದಕ್ಕೆ ಹಿಂಸಿಸಿದರು. ಅನೇಕರು ಅವರ ಅನಿಷ್ಟ ಮುಖಗಳನ್ನು ನೋಡಿದ ಕೂಡಲೆ ಹೆದರಿ ಸತ್ತರು. ರೈತರು ತಮ್ಮ ದುಡಿಮೆಯ ಫಲವನ್ನು ಕಳೆದುಕೊಂಡರು. ಯಾರೂ ತಮ್ಮ ಆಸ್ತಿಯನ್ನಾಗಲಿ ತಮ್ಮ ಹೆಂಡತಿಯರನ್ನಾಗಲಿ ತಮ್ಮದು ಎನ್ನುವ ಹಾಗಿರಲಿಲ್ಲ.

---

೭. ಶೇರವಾನಿ, ಎಚ್.ಕೆ. ಮತ್ತು ಜೋಷಿ, ಪಿ.ಎಂ. (ಸಂ): ಪೂರ್ವೋಕ್ತ, ಪು. ೩೬–೫೫.

ಕಾಡ್ಕಿಚ್ಚಿಗೆ ಬಲಿಯಾದ ಕಾಡಿನಂತೆ, ರಕ್ಷಣವಿಲ್ಲದೆ ತೆಲುಗು ಜನರ ಪಾಡು ಯವನರ ದೌರ್ಜನ್ಯದಿಂದ ಬೆಂದು ಬೇಗೆಯಾಯಿತು."[೮]

ದಕ್ಷಿಣ ಭಾರತೀಯರಲ್ಲಿ ಆಂಧ್ರರು ಹೆಚ್ಚಿನ ಪ್ರಮಾಣದಲ್ಲಿ ವಿನಾಶಕರನ್ನು ಪ್ರತಿಭಟಿಸಿದರೆನ್ನುವುದು ಆ ಜನರಿಗೆ ಕೀರ್ತಿಯನ್ನು ತರುವ ವಿಷಯ. ಮೇಲೆ ಹೇಳಿದ ವಿಲಾಸ ಶಾಸನದ ಸಂಪಾದಕರು ಈ ಹೋರಾಟವನ್ನು ಹೀಗೆ ವರ್ಣಿಸುತ್ತಾರೆ. "ಮುಸಲ್ಮಾನರ ದೌರ್ಜನ್ಯವನ್ನು ಸಹಿಸಲಾರದೆ ಒಕ್ಕಟ್ಟಿನಿಂದ ಆಂಧ್ರರು ಅವರನ್ನು ಎದುರಿಸಿದರು. ರೈತರು, ಶ್ರೀಮಂತರು ತಮ್ಮಿಷ್ಟಿಗೆ ತಾವೇ ಪ್ರೋಲಯನಾಯಕನ ಹಿಂದ ಹೋರಾಡಿದರು. ಯಶಸ್ವಿಯಾಗಿ ಹೋರಾಟವನ್ನು ನಡೆಸುವುದಕ್ಕೆ ಸ್ವಸಂತೋಷದಿಂದ ಕಂದಾಯವನ್ನು ಕೊಟ್ಟರು."[೯] ಈ ಹೋರಾಟದ ಪರಿಣಾಮವಾಗಿ ಆಂಧ್ರರು ಸ್ವತಂತ್ರರಾದರು. ಆದರೆ ಒಂದು ಸಂಘಟಿತ ರಾಜ್ಯವನ್ನು ಸ್ಥಾಪಿಸಲಾಗಲಿಲ್ಲ. ಮುಖಂಡರಲ್ಲಿ ಒಗ್ಗಟ್ಟಿರಲಿಲ್ಲ. ಪ್ರೋಲಯನಾಯಕ ಮತ್ತು ಅವನ ತಮ್ಮ ಕಾಪಯನಾಯಕನು, ರೇಚರ್ಲಾದಂತಹ ಇತರ ಮುಂದಾಳುಗಳ ವೈರತ್ವವನ್ನು ಎದುರಿಸಬೇಕಾಯಿತು. ಬಹಮನಿ ಸುಲ್ತಾನರು ಈ ಒಳ ಜಗಳಗಳ ಲಾಭವನ್ನು ಪಡೆದು ಆಂಧ್ರದ ಬಹುಭಾಗವನ್ನು ಗೆದ್ದರು. ಹೊಯ್ಸಳರ ಹೋರಾಟದಲ್ಲಿ ಏರಿಳಿತಗಳಿದ್ದವು. ಅದರ ಪರಿಣಾಮವಾಗಿ ವಿಜಯನಗರ ಸಾಮ್ರಾಜ್ಯವು ಹೇಗೆ ಸ್ಥಾಪನೆಯಾಯಿತೆನ್ನುವುದು ಮುಂಬರುವ ಲೇಖನಗಳ ಸಾಮಗ್ರಿ.

■

---

೮. ಎ.ಇಂ. XXXII, ಪು. ೨೪೧.

೯. ಅದೇ ಪುಸ್ತಕ, ಪು. ೨೪೯

ಪೀಠಿಕೆ : ೪೦

ಸಂಗಮರ ಕಾಲದ ವಿಜಯನಗರ

ಬಿ. ಎಂ. ಶ್ರೀ. ಸ್ಮಾರಕ ಪ್ರತಿಷ್ಠಾನವು ೧೯೮೮ರಲ್ಲಿ ಪ್ರಕಟಿಸಿದ Early Vijayanagara- Studies in its History and Culture –ಈ ಪುಸ್ತಕದ ಕನ್ನಡ ಅನುವಾದ – "ಸಂಗಮರ ಕಾಲದ ವಿಜಯನಗರ – ಅದರ ಇತಿಹಾಸ ಮತ್ತು ಸಂಸ್ಕೃತಿಗಳ ಅಧ್ಯಯನ"ವೆಂದು ಈಗ ಪ್ರಕಟವಾಗುತ್ತಿದೆ. ಈ ಕನ್ನಡ ಅನುವಾದವನ್ನು ಆದಷ್ಟು ಶೀಘ್ರವಾಗಿ ಪ್ರಕಟಿಸಲು ಶ್ರಮಿಸಿದ ಪ್ರತಿಷ್ಠಾನದ ಜನಕರಾದ ಪ್ರೊ. ಎಂ.ವಿ. ಸೀತಾರಾಮಯ್ಯನವರು ಪುಸ್ತಕದ ಪ್ರಕಟಣೆಯ ಮುಂಚೆ ನಿಧನರಾಗಿದ್ದು ಅತ್ಯಂತ ದುರ್ದೈವದ ಸಂಗತಿ.

ಈ ಪುಸ್ತಕದ ಬಹುಮುಖ್ಯಭಾಗ ವಿಜಯನಗರ ಸಾಮ್ರಾಜ್ಯದ ಸ್ಥಾಪನೆಗೆ ಸಂಬಂಧಪಟ್ಟ ಸಮಸ್ಯೆಗಳ ಚರ್ಚೆ. ಇದರ ಇಂಗ್ಲೀಷ್ ಮೂಲಗ್ರಂಥ ಹೊರಬಂದ ಮೇಲೆ ಶ್ರೀ ಸೀತಾರಾಮ ಜಾಗೀರದಾರರು ಈ ಚರ್ಚೆಗೆ ಹೊಸತಿರುವು ಕೊಟ್ಟಿದ್ದಾರೆ. ಅವರಿಗೆ ಸಹಾಯವಾದದ್ದು ಹಳೇಬೀಡಿನ ಒಂದು ಶಾಸನ (ಎ.ಕ. ೫ಗಿ ಬೇಲೂರು, ೩೪೬)*. ಈ ಶಾಸನದಲ್ಲಿ ತೇದಿಯಿಲ್ಲ. ಅಕ್ಷರದ ಸ್ವರೂಪದ ಮೇಲಿನಿಂದ ಅದರ ಸಂಪಾದರು ಈ ಶಾಸನವನ್ನು ೧೪ನೆಯ ಶತಮಾನದ್ದೆಂದೂ ಮತ್ತು ಅದರಲ್ಲಿ ಉಲ್ಲೇಖಿತನಾದ ವೀರ ಹರಿಹರ ಮಹಾರಾಯನು, ಎರಡನೆಯ ಹರಿಹರನೆಂದೂ ನಿರ್ಧರಿಸಿದ್ದರು. ಹಾಗೆ ಮಾಡಿದರೆ ಈ ಶಾಸನಕ್ಕೂ ವಿಜಯನಗರ ಸಾಮ್ರಾಜ್ಯ ಸ್ಥಾಪನೆಗೂ ಯಾವ ಸಂಬಂಧವೂ ಇರುವುದಿಲ್ಲ. ಶ್ರೀ ಜಾಗೀರದಾರರು ಇದರಲ್ಲಿರುವ ಹರಿಹರನು ಮೊದಲನೆಯ ಹರಿಹರನಿರಬೇಕೆನ್ನುತ್ತಾರೆ. ಈ ಊಹೆಗೆ ನಾಣ್ಯಗಳ ಬೆಂಬಲ ಸಿಗುತ್ತದೆ. ನಾಣ್ಯಗಳಲ್ಲಿ ಎರಡನೆಯ ಹರಿಹರನು ಪ್ರತಾಪ ಹರಿಹರನೆಂದು ಕರೆದುಕೊಳ್ಳುತ್ತಾನೆ. ಆ ಹೆಸರಿನ ಮೊದಲನೆಯವನು ವೀರಹರಿಹರನೆಂದು ಕರೆದುಕೊಳ್ಳುತ್ತಾನೆ. ಪ್ರಸ್ತುತ ಶಾಸನದಲ್ಲಿ ವೀರ ಹರಿಹರ ಮಹಾರಾಯನೆಂದಿರುವುದರಿಂದ ಇದು ಮೊದಲನೆಯ ಹರಿಹರನ ಕಾಲದ್ದೆಂದು ಹೇಳಬಹುದು.

---

* ೧೩-೪-೧೯೯೯ರಂದು ಬೆಂಗಳೂರಿನ ಮಿಥಿಕ್ ಸೊಸೈಟಿಯಲ್ಲಿ ಮಾಡಿದ ಭಾಷಣದಲ್ಲಿ ಶ್ರೀ ಜಾಗೀರದಾರರು ಈ ಶಾಸನದ ಪ್ರಸ್ತಾಪ ಮಾಡಿದರು.

ಈ ಶಾಸನದಲ್ಲಿ "ವೋರುಂಗಲ್ ಶ್ರೀ ವೀರಭದ್ರದೇವರಿಗೆ ಶ್ರೀ ವೀರಹರಿಹರಮಹಾರಾಯರ ಅಳಿಯ ಪುಲ್ಲಖಂಡ ಸಿದರಾಜರು" ಭೂದಾನ ಮಾಡಿದ್ದಾರೆ. ಇದರ ಪ್ರಕಾರ ಮೊದಲನೆ ಹರಿಹರನ ಅಳಿಯ ಪುಲ್ಲಖಂಡ ಸಿದ್ಧರಾಜನ ಮನೆಯ ದೇವರು ವಾರಂಗಲ್ಲಿನ ವೀರಭದ್ರದೇವರು. ಈ ಮನೆತನವಲ್ಲದೆ ಇನ್ನು ಕೆಲವು ಮನೆತನಗಳು ವಾರಂಗಲ್ ಕಡೆಯಿಂದ ಹಳೇಬೀಡಿನ ಸುತ್ತಮುತ್ತ ಬಂದು ನೆಲೆಸಿದ ಉದಾಹರಣೆಗಳನ್ನು ಶ್ರೀ ಜಾಗೀರದಾರರು ಹುಡುಕಿದ್ದಾರೆ (ಎ. ಕ. XV. ಎಲೂರು, ೩೬೭,೩೬೮). ಇಂತಹ ಮನೆತನಗಳಲ್ಲೊಂದರ ಜತೆಗೆ ಹರಿಹರನ ಸಂಬಂಧವಿರುವುದರಿಂದ, ಈ ಸಂಬಂಧವು ಹರಿಹರ-ಬುಕ್ಕರು ವಾರಂಗಲ್ಲಿನಲ್ಲಿ ಇದ್ದುದರಿಂದ ಆಗಿರಬಹುದೆಂದು ಊಹಿಸಬಹುದು. ಹಾಗೆ ಆಗಿದ್ದರೆ, ಅನೇಕ ದಂತಕಥೆಗಳು ಹೇಳುವಂತೆ ಹರಿಹರ-ಬುಕ್ಕರು ವಾರಂಗಲ್ಲಿನಲ್ಲಿ ಕಾಕತೀಯ ಅರಸರ ಸೇವೆಯಲ್ಲಿದ್ದಿರಬೇಕು. ಇದರಿಂದ ಅವುರ ಆಂಧ್ರರಾಗುವುದಿಲ್ಲ. ಅವರೇ ಹೇಳಿಕೊಳ್ಳುವಂತೆ ಅವರು 'ಪಂಪಾಪುರಿಪರಿಸರ'ದವರು (ಎ. ಕ. IV. ಎಡತೊರೆ ೪೬). ವಾರಂಗಲ್ಲಿಗೆ ಕೆಲಸ ಹುಡುಕಿಕೊಂಡು ಕಾಕತೀಯರ ಹತ್ತಿರ ಹೋಗಿರಬೇಕು. ಆ ರಾಜರ ಪತನವಾದ ಮೇಲೆ ಕರ್ನಾಟಕಕ್ಕೆ ಹಿಂತಿರುಗಿರಬೇಕು. ಇವರ ಅಳಿಯ ಪುಲ್ಲಖಂಡ ಸಿದ್ಧರಾಜ ಮತ್ತು ಇತರರೂ ಕರ್ನಾಟಕಕ್ಕೆ ಹೊಯ್ಸಳ ಆಶ್ರಯಕ್ಕಾಗಿ ಬಂದಿರಬೇಕು.

ಇಂಗ್ಲೀಷ್ ಆವೃತ್ತಿಯ ಪೀಠಿಕೆಯಲ್ಲಿ ಹೇಳಿದಂತೆ. ಈ ಕನ್ನಡ ಅನುವಾದದ ಪ್ರಕಟಣೆಗೆ ಕರ್ನಾಟಕ ರಾಜ್ಯದ ಪುರಾತತ್ವ ಇಲಾಖೆಯ ನಿರ್ದೇಶಕರಾಗಿದ್ದ ಡಾ॥ ಎಂ. ಎಸ್. ಅವರು ಬಂದಿದ್ದಾಗ, ಆ ಸಭೆಯಲ್ಲಿಯೆ, ಕನ್ನಡ ಭಾಷಾಂತರದ ಪ್ರಕಟಣೆಗೆ ಧನಸಹಾಯ ವಾಗ್ದಾನ ಮಾಡಿ ತಕ್ಷಣ ಹಣ ಕಳಿಸಿಕೊಟ್ಟು ಉಪಕಾರ ಮಾಡಿದ್ದಾರೆ.

ಲೇಖನಗಳನ್ನು ಅನುವಾದ ಮಾಡಿದ ಮೂಲಲೇಖಕರಿಗೂ ಮತ್ತು ಇತರರಿಗೂ ನಾನು ಋಣಿಯಾಗಿದ್ದೇನೆ. ಸಹಸಂಪಾದಕ ಶ್ರೀ ಎಂ. ವಿ. ವಿಶ್ವೇಶ್ವರ, ಸಹಾಯಕ ಪುರಾತತ್ವಜ್ಞ, ಭಾರತೀಯ ಪುರಾತತ್ವ ಸರ್ವೇಕ್ಷಣ, ಬೆಂಗಳೂರು ವೃತ್ತ, ಇರವು ಕರಡು ತಿದ್ದವಲ್ಲಿ, ಲೇಖನಗಳ ಕನ್ನಡವನ್ನು ಪರಿಷ್ಕರಿಸುವಲ್ಲಿ ಮತ್ತು ಗ್ರಂಥದ ಮೌಲ್ಯ ಹೆಚ್ಚುವ ಹಾಗೆ ಸಲಹೆ ಮಾಡಿ, ನನಗೆ ಬಹಳ ಸಹಾಯ ಮಾಡಿದ್ದಾರೆ. ಶ್ರೀ ಷೇಕ್ ಸೈಫುಲ್ಲಾ ಇವರು ಆಧಾರಗ್ರಂಥಗಳ ಪಟ್ಟಿಯನ್ನು ತಯಾಗಿಸುವಲ್ಲಿ ಬಹಳ ಸಹಾಯ ಮಾಡಿದ್ದಾರೆ. ಮೂಲಇಂಗ್ಲೀಷ್ ಪುಸ್ತಕವನ್ನು ಮುದ್ರಣ ಮಾಡಿದ ಶ್ರೀ ಆರ್.ಜಿ. ಪ್ರಸಾದ್ ಇವರೇ ಈ ಕನ್ನಡ ಅನುವಾದವನ್ನು ಸೊಗಸಾಗಿ ಮುದ್ರಿಸಿದ್ದಾರೆ. ಈ ಎಲ್ಲಾ ಮಹನೀಯರಿಗೂ ಪ್ರತಿಷ್ಠಾನದ ಪರವಾಗಿ ವಂದನೆಗಳು.

■

೪೧

ಶುಭ ಹಾರೈಕೆ
ಡಾ. ಎ.ಕೆ.ಶಾಸ್ತ್ರಿಗಳಿಗೆ

ಡಾ. ಎ. ಕೆ. (ಅನಂತ ಕೃಷ್ಣ) ಶಾಸ್ತ್ರಿಗಳು ತಮ್ಮ ವೃತ್ತಿಯಿಂದ ನಿವೃತ್ತರಾಗುತ್ತಿರುವ ಸಂದರ್ಭದಲ್ಲಿ ಅವರ ಅಭಿಮಾನಿಗಳು ಅವರಿಗೆ ಈ ಅಭಿನಂದನ ಗ್ರಂಥವನ್ನು ಅರ್ಪಿಸಿ ಸತ್ಕರಿಸುವುದು ಯಥಾಯೋಗ್ಯ. ಈ ಗ್ರಂಥದ ಸಂಪಾದಕರಾದ ಡಾ ಜಿ. ಎಂ. ಹೆಗಡೆಯವರು ಈ ಗ್ರಂಥಕ್ಕೆ ನಾನು ನಾಲ್ಕು ಮಾತುಗಳನ್ನು ಬರೆಯಬೇಕೆಂದು ಸೂಚಿಸಿದಾಗ ನನಗೆ ಆದ ಆನಂದ ಅಷ್ಟಿಷ್ಟಲ್ಲ. ಯಾಕೆಂದರೆ ನನ್ನ ಶಿಷ್ಯರಲ್ಲಿ ಡಾ. ಶಾಸ್ತ್ರಿಗಳು ಅಗ್ರಗಣ್ಯರು. ಈ ಅಭಿನಂದನ ಗ್ರಂಥ ಇವರ ವಿದ್ವತ್ತು ಮತ್ತು ಜನಪ್ರಿಯತೆಗೆ ಸಂಕೇತ. ಇವೆರಡೂ ಗುಣಗಳು ಒಬ್ಬರಲ್ಲಿ ಇರುವುದು ಅತಿ ವಿರಳ. ಇವರಲ್ಲಿ ಇವು ಇರುವುದು ಬಹುಶಃ ಅವರ ಸಂಶೋಧನೆಯ ಕ್ಷೇತ್ರದಿಂದಿರಬಹುದು. ಮಠಗಳ ದಾಖಲೆಗಳ ಅಭ್ಯಾಸದಲ್ಲಿ ಶಾಸ್ತ್ರಿಗಳು ನಿಷ್ಣಾತರು. ಇವರ ಗ್ರಂಥ ಶೃಂಗೇರಿಯ ಇತಿಹಾಸ ಇಂಗ್ಲೀಷ್ ಮತ್ತು ಕನ್ನಡದಲ್ಲಿ ಪ್ರಕಟವಾಗಿ ಇವರಿಗೆ ರಾಷ್ಟ್ರಮಟ್ಟದಲ್ಲಿ ಮತ್ತು ರಾಜ್ಯಮಟ್ಟದಲ್ಲಿ ಖ್ಯಾತಿಯನ್ನು ತಂದಿದೆ. ಇಂತಹ ವಿದ್ವಾಂಸರಿಗೆ, ಶ್ರೀ ಸ್ವರ್ಣವಲ್ಲೀ ಮಠದ ಶ್ರೀಮದ್ ಗಂಗಾಧರೇಂದ್ರ ಸರಸ್ವತಿ ಶ್ರೀಸ್ವಾಮಿಗಳು ತಮ್ಮ ಮಠದ ಇತಿಹಾಸವನ್ನು ಬರೆಯಬೇಕೆಂದು ಆದೇಶಿಸಿದ್ದು ಸೂಕ್ತ. ಈ ಆದೇಶದ ಅನುಸಾರವಾಗಿ ಹೊರಬಂದ "ಶ್ರೀ ಸ್ವರ್ಣವಲ್ಲೀ ಮಹಾ ಸಂಸ್ಥಾನ"ವೆಂಬ ಪುಸ್ತಕ ಮಠಗಳ ಇತಿಹಾಸಕಾರರಿಗೆ ಮಾದರಿಯಾಗಿದೆ. ಈ ವಿಷಯದಲ್ಲಿ ಇನ್ನೂ ಆಳವಾದ ಅಭ್ಯಾಸ ಮಾಡುವವರಿಗೆ ನಮ್ಮ ರಾಜ್ಯದ ಪತ್ರಾಗಾರ ಇಲಾಖೆಯವರು ಪ್ರಕಟಿಸಿರುವ "ಶ್ರೀ ಮಂಜುಗುಣಿ ಕ್ಷೇತ್ರದ ಚಾರಿತ್ರಿಕ ದಾಖಲೆಗಳು". ನಮ್ಮ ರಾಜ್ಯದ ಪತ್ರಾಗಾರ ಇಲಾಖೆಗೂ, ಶಾಸ್ತ್ರಿಗಳಿಗೂ ಮತ್ತು ಮಠಕ್ಕೂ ಕೀರ್ತಿಯನ್ನು ತಂದಿವೆ. ಇದೇ ರೀತಿ ಶಾಸ್ತ್ರಿಗಳು ಶೃಂಗೇರಿ ಮಠದ ದಾಖಲೆಗಳ ಪಟ್ಟಿಯನ್ನು ಪ್ರಕಟಿಸಿದ್ದಾರೆ. ಶೃಂಗೇರಿ ಮಠದ ಹೆಚ್ಚಿನ ಅಭ್ಯಾಸ ಮಾಡುವವರಿಗೆ ಈ ಪಟ್ಟಿ ಅತ್ಯವಶ್ಯ. ಹೀಗೆ ತಾವು ಮಾಡಿದ ಅಭ್ಯಾಸದ ವಿಷಯದಲ್ಲಿ ಇತರರು ಮುಂದು ಹೋಗುವ ಸಲುವಾಗಿ

ಇಲ್ಲಿಯ ದಾಖಲೆಗಳನ್ನು ಪ್ರಕಟಿಸುವ ಪದ್ಧತಿಯು ಸಂಶೋಧಕರಿಗೆ ಇರುವ ಕಲ್ಪಿಸಿಕೊಟ್ಟಿರುವ ಸೌಕರ್ಯ.

ಇದರ ಸಂಶೋಧನೆ ಮಠಗಳ ಇತಿಹಾಸಕ್ಕೆ ಮಾತ್ರ ಸೀಮಿತವಾಗಿಲ್ಲ. ಬನವಾಸಿ ಕದಂಬರ ಬಗ್ಗೆ ಒಂದು ಗ್ರಂಥವನ್ನು ಸಂಪಾದಿಸಿದ್ದಾರೆ. ತಮ್ಮ ತಾಲ್ಲೂಕಾದ ಶಿರ್ಸಿ ತಾಲ್ಲೂಕಿನ ಬಗ್ಗೆ ಬರೆದ 'ಶಿರ್ಸಿ ತಾಲ್ಲೂಕಿನ ಇತಿಹಾಸ' ಮತ್ತು ಇವರು ಸಂಪಾದಿಸಿದ 'ಶಿರ್ಸಿ ತಾಲ್ಲೂಕ ದರ್ಪಣ' ಪ್ರಾದೇಶಿಕ ಇತಿಹಾಸಕ್ಕೆ ಇವರ ಕೊಡುಗೆ, ಯಾವ ತಾಲ್ಲೂಕೂ ಇಂತಹ ವಿದ್ವತ್ಪೂರ್ಣ ಕೈಪಿಡಿಗಳನ್ನು ಹೊಂದಿಲ್ಲ. ಇವರ ಇತರ ಕೊಡುಗೆಗಳಲ್ಲಿ ಕೆಲವನ್ನು ಪ್ರಸ್ತುತ ಪುಸ್ತಕದಲ್ಲಿ ನೋಡಿದರೆ ಇವರ ಪಾಂಡಿತ್ಯದ ವಿಸ್ತಾರ ಮತ್ತು ಗುಣಮಟ್ಟಗಳನ್ನು ತಿಳಿದುಕೊಳ್ಳಬಹುದು.

ನಮ್ಮ ರಾಜ್ಯದ ಪತ್ರಾಗಾರ ಖಾತೆಯವರಿಗೆ ಇವರ ಪ್ರಕಟಣೆಗಳಿಂದ ಒಳ್ಳೆಯ ಹೆಸರು ಬಂದಿದೆ. ಈಗ ಇವರು ನಿವೃತ್ತರಾಗುವುದರಿಂದ ಇವರ ಸಹಾಯದಿಂದ ಈ ಖಾತೆಯವರು ರಾಜ್ಯದ ಇತರ ಮಠಗಳ ದಾಖಲೆಗಳನ್ನು ಪ್ರಕಟಿಸಿದರೆ ಆ ಮಠಗಳಿಗೂ ಮತ್ತು ರಾಜ್ಯದ ಇತಿಹಾಸ ಪ್ರೇಮಿಗಳಿಗೂ ಸಹಾಯವಾಗುತ್ತದೆ. ರಾಷ್ಟ್ರಮಟ್ಟದಲ್ಲಿಯೂ ಇವರಿಗೆ ರಾಜ್ಯದಲ್ಲಿ ಸಿಕ್ಕ ಮನ್ನಣೆ ಸಿಗಲೆಂದು ನನ್ನ ಆಶಯ.

ಹೋದ ವರ್ಷ ಶಿರ್ಸಿ ಮತ್ತು ಸ್ವಾದಿಗಳಲ್ಲಿ ಶ್ರೀಮದ್ ಗಂಗಾಧರೇಂದ್ರ ಸರಸ್ವತೀ ಶ್ರೀ ಸ್ವಾಮಿಗಳ ಆದೇಶದ ಮೇರೆಗೆ ಕರ್ನಾಟಕ ಇತಿಹಾಸ ಅಕಾಡೆಮಿಯ ವಾರ್ಷಿಕ ಸಮ್ಮೇಳವನ್ನು ಅಚ್ಚುಕಟ್ಟಾಗಿ ಶಾಸ್ತ್ರಿಗಳು ನಡೆಯಿಸಿ ಕೊಟ್ಟ ನೆನಪು ಇನ್ನೂ ಹಸಿರಾಗಿ ಉಳಿದಿದೆ.

ಶಾಸ್ತ್ರಿಗಳಿಗೂ ಅವರ ಕುಟುಂಬವರ್ಗದವರಿಗೂ ಭಗವಂತನು ಆಯುರಾರೋಗ್ಯ ಸಂಪತ್ತನ್ನು ಅನುಗ್ರಹಿಸಲೆಂದು ನನ್ನ ಪ್ರಾರ್ಥನೆ.

ಶ್ರೀಮದ್‌ಗಂಗಾಧರೇಂದ್ರ ಸರಸ್ವತೀ ಶ್ರೀ ಸ್ವಾಮಿಗಳ ಆದೇಶವನ್ನು ಪಾಲಿಸಿ ತಮ್ಮ ಗುರುಗಳಾದ ಡಾ ಅನಂತ ಕೃಷ್ಣ ಶಾಸ್ತ್ರಿಗಳ ಋಣವನ್ನು ಈ ಗ್ರಂಥದ ಸಂಪಾದಕತ್ವ ಮತ್ತು ಪ್ರಕಟಣೆಗಳ ಮೂಲಕ ತೀರಿಸುತ್ತಿರುವ ಅವರ ಪ್ರಿಯ ಶಿಷ್ಯರಾದ ಡಾ. ಜಿ.ಎಂ. ಹೆಗಡೆಯವರ ಪದ್ಧತಿ ಮತ್ತು ಸಾಹಸದ ಉಪಕ್ರಮ ಸ್ತುತ್ಯರ್ಹ ಮತ್ತು ಅನುಕರಣೀಯ. ಈ ಗ್ರಂಥವು ಶಾಸ್ತ್ರಿಗಳ ಅಭಿಮಾನಿಗಳಿಂದಲೂ, ಇತಿಹಾಸಪ್ರೇಮಿಗಳಿಂದಲೂ ಮನ್ನಣೆ ಪಡೆಯುವುದರಲ್ಲಿ ಸಂದೇಹವಿಲ್ಲ.

■

ಅನುಬಂಧ

ವ್ಯಕ್ತಿ ಚಿತ್ರಣಗಳು

1

ರ್‍ಯಾಂಗ್ಲರ್ ಡಿ.ಸಿ. ಪಾವಟೆ

ಪದ್ಮಭೂಷಣ ರ್‍ಯಾಂಗ್ಲರ್ ಡಾ. ಡಿ.ಸಿ. ಪಾವಟೆಯವರು ನನಗೆ ಗುರು ಸಮಾನರು. ನಾನು ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಬರಲು ಅವರೇ ಕಾರಣ. ಇಲ್ಲಿ ಬಂದಮೇಲೆ ಎಲ್ಲಾ ವಿಧದಲ್ಲಿಯೂ ನಾನು ನನ್ನ ವೃತ್ತಿಯಲ್ಲಿ ಮುಂದುವರಿಯಲಿಕ್ಕೆ ಅವರ ಪ್ರೋತ್ಸಾಹವೇ ಕಾರಣ. ಇಂಥವರ ಋಣ ತೀರಿಸುವುದು ಅಸಾಧ್ಯ.

೧೯೪೭ ರಲ್ಲಿ ದೇಶಕ್ಕೆ ಸ್ವಾತಂತ್ರ್ಯ ಬಂದಾಗ, ನಾನು ಪುಣೆಯ ಫರ್ಗ್ಯುಸನ್ ಕಾಲೇಜಿನಲ್ಲಿ ಇತಿಹಾಸ ಪ್ರಾಧ್ಯಾಪಕನಾಗಿದ್ದೆ. ಪಾವಟೆಯವರು ಮುಂಬಯಿ ಪ್ರಾಂತ್ಯದ ಶಿಕ್ಷಣ ಖಾತೆಯ ಮುಖ್ಯಸ್ಥರಾಗಿ ಪುಣೆಯಲ್ಲಿದ್ದರು. ಅವರು ಅಲ್ಲಿಯ ಕರ್ನಾಟಕ ಸಂಘದ ಅಧ್ಯಕ್ಷರಾಗಿದ್ದರು. ನಾನು ಆ ಸಂಘದಲ್ಲಿ ಕಾರ್ಯಕರ್ತನಾಗಿದ್ದೆ. ಸಂಘದ ಸಭೆಗಳಲ್ಲಿ ನನಗೆ ಅವರ ಪರಿಚಯವಾಯಿತು. ಪುಣೆಯಲ್ಲಿ ಇನ್ನೊಂದು ಕರ್ನಾಟಕ ಸಂಘವಿತ್ತು. ಅದು ವಿದ್ಯಾರ್ಥಿ ಕರ್ನಾಟಕ ಸಂಘ. ಅದು ಅಲ್ಲಿಯ ಬೇರೆ ಬೇರೆ ಕಾಲೇಜುಗಳಲ್ಲಿಯ ಕನ್ನಡ ವಿದ್ಯಾರ್ಥಿಗಳ ಸಂಘ. ಅದಕ್ಕೆ ನನ್ನನ್ನು ಅಧ್ಯಕ್ಷರನ್ನಾಗಿ ಆರಿಸಿದ್ದರು. ಅದರ ಸಭೆಗಳಿಗೂ ಪಾವಟೆಯವರನ್ನು ಅತಿಥಿಗಳನ್ನಾಗಿ ಕರೆಯುತ್ತಿದ್ದೆವು. ಇಂಥದೊಂದು ಸಭೆಗೆ ಅವರನ್ನು ಮುಖ್ಯ ಅತಿಥಿಯನ್ನಾಗಿ ಕರೆದಿದ್ದೆವು. ಆ ವರ್ಷ ಬಿ.ಎ. ಪರೀಕ್ಷೆಯಲ್ಲಿ 'ಇಬ್ಬರು ಕನ್ನಡ ವಿದ್ಯಾರ್ಥಿಗಳು' ಇಂಗ್ಲೀಷ್ ಮತ್ತು ವಿಜ್ಞಾನ ವಿಭಾಗಗಳಲ್ಲಿ ಮುಂಬಯಿ ಪ್ರಾಂತ್ಯಕ್ಕೆ ಮೊದಲನೆಯವರಾಗಿ ಪಾಸಾಗಿದ್ದರು. ಅವರನ್ನು ಅಭಿನಂದಿಸಲು ಫರ್ಗ್ಯುಸನ್ ಕಾಲೇಜಿನಲ್ಲಿ ಸಭೆಯನ್ನು ಏರ್ಪಡಿಸಿದ್ದೆವು. ಪಾವಟೆಯವರು ಬರಲು ಒಪ್ಪಿದರು. ಅದೇ ಸಭೆಗೆ ಅಧ್ಯಕ್ಷರನ್ನಾಗಲೂ ಅವರಿಗೆ ಬಹಳ ಆತ್ಮೀಯರಾದ ಪ್ರಿ. ಜಿ. ಎಸ್. ಮಹಾಜನಿಯವರನ್ನು ಕರೆದಿದ್ದೆವು. ಪಾವಟೆ ಮನೆಯವರು ಮತ್ತು ಮಹಾಜನಿ ಮನೆಯವರು ಬಹಳ ಅನ್ಯೋನ್ಯವಾಗಿದ್ದರು. ಪಾವಟೆಯವರ ಹಾಗೆ ಮಹಾಜನಿಯವರು ರ್‍ಯಾಂಗ್ಲರ್ ಆಗಿ ಅನೇಕ ವರ್ಷ ಫರ್ಗ್ಯುಸನ್ ಕಾಲೇಜಿನ ಪ್ರಿನ್ಸಿಪಾಲರಾಗಿದ್ದರು. ಅವರು ಸಭೆಯ ಅಧ್ಯಕ್ಷತೆಯನ್ನು ವಹಿಸಲು ಒಪ್ಪಿಕೊಂಡರು.

ಸಭೆಯ ಹಿಂದಿನ ದಿನ ಪಾವಟೆಯವರಿಗೆ ಇದ್ದಕ್ಕಿದ್ದ ಹಾಗೆ ಮುಂಬಯಿಗೆ ಹೋಗಬೇಕಾಯಿತು. ಹಿಂತಿರುಗುವುದು ೨-೩ ದಿನಗಳಾದ ಮೇಲೆ ಎಂದು ಶ್ರೀಮತಿ ಪಾವಟೆಯವರು ಹೇಳಿದರು. ಇದನ್ನು ಕೇಳಿ ನನಗೆ ಬಹಳ ನಿರಾಶೆಯಾಯಿತು. ಆಗ ನಾನು ಶ್ರೀಮತಿ ಪಾವಟೆಯವರಿಗೆ "ನೀವು ಮುಖ್ಯ ಅತಿಥಿಯಾಗಿ ಬನ್ನಿ. ಪ್ರಿ. ಮಹಾಜನಿಯವರು ಬರಲು ಒಪ್ಪಿದ್ದಾರೆ. ನೀವು ಅತಿಥಿಯಾಗಿ ಬಂದರೆ ಚೆನ್ನಾಗಿರುವದೆಂದು, ಹೇಳಿದೆ. ಅದಕ್ಕೆ ಅವರು "ನಾನು ಯಾವ ಸಭೆಗೂ ಹೋಗಿಲ್ಲ, ನನಗೆ ಭಾಷಣ ಮಾಡಲು ಬರುವುದಿಲ್ಲ"ವೆಂದರು. ಅದಕ್ಕೆ ನಾನು ಹೇಳಿದೆ: "ನೀವು ಅತಿಥಿಯಾಗಿ ಬಂದು ಕೂತುಕೊಳ್ಳಿ, ವಿದ್ಯಾರ್ಥಿಗಳಿಗೆ ಬಹುಮಾನವನ್ನು ಕೊಡಿ, ನೀವು ಭಾಷಣ ಮಾಡದಿದ್ದರೂ ಚಿಂತಿಲ್ಲ, ನೀವು ಬಂದರೆ ಸಾಕು" ಎಂದು ಹೇಳಿದೆ. ಅವರು ಅದಕ್ಕೆ ಮನಸ್ಸಿಲ್ಲದ ಮನಸ್ಸಿನಿಂದ ಒಪ್ಪಿದರು. ಸಭೆಯಲ್ಲಿ ಪ್ರಿ. ಮಹಾಜನಿಯವರು ಹೇಳಿದರು ; ಸಭೆಯ ವಿಶೇಷವೆಂದರೆ ಮುಖ್ಯ ಅತಿಥಿಗಳು ಬರದೆ ಇದ್ದಾಗ ಅವರ ಶ್ರೀಮತಿಯವರು ಅವರ ಸ್ಥಾನವನ್ನು ಅಲಂಕರಿಸಿದ್ದು ಎಂದರು. ಶ್ರೀಮತಿ. ಪಾವಟೆಯವರು ರ್‍ಯಾಂಕ್ ವಿಜೇತರಿಗೆ ಬಹುಮಾನಗಳನ್ನು ಕೊಟ್ಟರು. ವಿಜೇತರು ಕೃತಜ್ಞತೆಗಳ ಮಾತನ್ನಾಡಿದರು. ಆಗ ನಾನು ಹೇಳಿದೆ, "ಶ್ರೀಮತಿ ಪಾವಟೆಯವರು ಭಾಷಣ ಮಾಡುವುದಿಲ್ಲವೆನ್ನುವ ಕರಾರಿನ ಮೇಲೆ ಬಂದಿದ್ದಾರೆ. ಅವರು ಒಂದು ವೇಳೆ ಇಲ್ಲಿಗೆ ಬಂದ ಮೇಲೆ ಮನಸ್ಸು ಬದಲಾಯಿಸಿ ನಾಲ್ಕು ಮಾತನ್ನಾಡಿದರೆ ಎಲ್ಲರಿಗೂ ಬಹಳ ಸಂತೋಷವಾಗುತ್ತದೆ." ಅವರು ಪುಟ್ಟ ಭಾಷಣ ಮಾಡಿದರು. ಬಹಳ ಸೊಗಸಾಗಿ ಮಾತನಾಡಿದರು. ಎಲ್ಲರಿಗೂ ಬಹಳ ಆನಂದವಾಯಿತು.

ಡಿ.ಸಿ. ಪಾವಟೆಯವರು ೧೩ ವರ್ಷಗಳ ಕಾಲ ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿಗಳಾಗಿದ್ದವರು. ಕೆಲವೇ ವರ್ಷಗಳಲ್ಲಿ ಅವರು ಈ ವಿಶ್ವವಿದ್ಯಾಲಯವನ್ನು ಭಾರತದ ಹನ್ನೆರಡು ಉತ್ತಮ ವಿಶ್ವವಿದ್ಯಾಲಯಗಳಲ್ಲಿ ಒಂದನ್ನಾಗಿ ಮಾಡಿದ ಶಿಲ್ಪಿಗಳು. ಅವರು ನನಗೆ ಗುರುಸಮಾನರಾಗಿದ್ದವರು ಇಂಥವರ ಋಣ ತೀರಿಸುವುದು ಅಸಾಧ್ಯ.

ಈ ಸಭೆಯಾದ ನಂತರ ೧೯೬೪ ರಲ್ಲಿ ಪಾವಟೆಯವರು ಶಿಕ್ಷಣ ಖಾತೆಯಿಂದ ನಿವೃತ್ತರಾದರು. ಪುಣೆಯಲ್ಲಿ ಇರುತ್ತಾ ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿ ಸ್ಥಾನಕ್ಕೆ ಸ್ಪರ್ಧಿಸಿದರು. ಧಾರವಾಡಕ್ಕೆ ಹೋಗದೆ ಸ್ಪರ್ಧೆಯಲ್ಲಿ ಸ್ಪಷ್ಟ ಬಹುಮತದಿಂದ ಕುಲಪತಿಗಳಾದರು. ಆಗ ಪುಣೆಯ ಕರ್ನಾಟಕ ವಿದ್ಯಾರ್ಥಿ ಸಂಘದಿಂದ ಅವರಿಗೆ ಬೀಳ್ಕೊಡುವ ಸಮಾರಂಭ ಹಾಗೂ ಅಭಿನಂದನೆ ಸಭೆಯನ್ನು ಏರ್ಪಡಿಸಿದೆವು. ವಿದ್ಯಾರ್ಥಿಗಳು ಪಾವಟೆಯವರ ಗುಣಗಾನ ಮಾಡಿದರು. ಆಮೇಲೆ ನನ್ನ

ಭಾಷಣದಲ್ಲಿ ನಾನು ಹೇಳಿದೆ: "ನಮ್ಮ ಹಿಂದಿನ ಸಭೆಗೆ ನಿಮಗೆ ಬರಲಿಕ್ಕೆ ಆಗಲಿಲ್ಲ. ಆಗ ನಿಮ್ಮ ಪರವಾಗಿ ನಿಮ್ಮ ಶ್ರೀಮತಿಯವರು ಅತಿಥಿಗಳಾಗಿ ಬಂದು ಬಹಳ ಸೊಗಸಾಗಿ ಕನ್ನಡದಲ್ಲಿ ಮಾತನಾಡಿದರು. ನೀವು ಆ ಭಾಷಣ ಕೇಳಬೇಕಾಗಿತ್ತು ಎಂದು" ಹೇಳಿದೆ. ಪಾವಟೆಯವರು ಕರ್ನಾಟಕದ ಹೊರಗೆ ಸೇವೆ ಸಲ್ಲಿಸುತ್ತಿದ್ದುದರಿಂದ ಕನ್ನಡದಲ್ಲಿ ಭಾಷಣ ಮಾಡುವ ಅಭ್ಯಾಸ ಅವರಿಗೆ ಇರಲಿಲ್ಲ. ಆದರೂ ಮಾತನಾಡಲು ಪ್ರಯತ್ನಿಸುತ್ತಿದ್ದರು. ಅವರು ಮಾತನಾಡಲು ಆರಂಭಿಸುವಾಗ ನನ್ನ ಕಡೆಗೆ ತಿರುಗಿ ಹೇಳಿದರು. "ನೀವು ನನಗೆ ಕೊಟ್ಟ ಸೂಚನೆ ತಿಳಿಯಿತು. ನಾನು ನನ್ನ ಶ್ರೀಮತಿಯ ಜತೆಗೆ ಸ್ಪರ್ಧಿಸುವುದಿಲ್ಲ" ಎಂದು ಹೇಳಿ ಇಂಗ್ಲಿಷಿನಲ್ಲಿ ತಮ್ಮ ಮಾತನ್ನು ಮುಂದುವರಿಸಿದರು.

ಕರಾರಿನ ಪ್ರಸಂಗ

ಅದಾದ ಒಂದು ವರ್ಷಕ್ಕೆ ೧೯೫೫ ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಇತಿಹಾಸದ 'ರೀಡರ್ ಹುದ್ದೆಯ ಜಾಹಿರಾತು' ಪ್ರಕಟವಾಯಿತು. ಅದಕ್ಕೆ ನಾನು ಅರ್ಜಿ ಹಾಕಿದೆ. ನನ್ನನ್ನು ಸಂದರ್ಶನಕ್ಕೆ ಕರೆದರು. ಸಂದರ್ಶನ ಮಾಡಿದವರು ಪಾವಟೆಯವರು, ಗೋಕಾಕರು ಮತ್ತು ಘ್ಯಾರನ್ನವರು, ಸಂದರ್ಶನ ಮುಗಿದ ಮೇಲೆ ಕುಲಪತಿಗಳು "ನಿಮ್ಮನ್ನು ಈ ಹುದ್ದೆಗೆ ನೇಮಿಸಿದರೆ ನೀವು ಒಪ್ಪಿಕೊಳ್ಳುತ್ತೀರಾ ಎಂದು ಕೇಳಿದರು. "ನಾನು ಬರುತ್ತೇನೆ, ಆದರೆ ಒಂದು ಕರಾರಿನ ಮೇಲೆ" ಎಂದೆ. ಏನು ಕರಾರು ಎಂದು ಕೇಳಿದರು. 'ನನಗೆ ವಿಶ್ವವಿದ್ಯಾಲಯದ ಆವರಣದಲ್ಲಿ ಕ್ವಾರ್ಟರ್ಸ್' ಬೇಕೆಂದೆ. ಪಾವಟೆಯವರು ನಗಲಿಕೆ ಶುರು ಮಾಡಿ ಹೇಳಿದರು. 'ನಾವು ಕ್ವಾರ್ಟರ್ಸ್' ಇರಲಿಕ್ಕೆ ಬನ್ನಿ ಎಂದು ನಮ್ಮ ಅಧ್ಯಾಪಕರನ್ನು ಕರೆದರೆ, ಅವರು ಬರುವುದಿಲ್ಲ. ನೀವು ಬರುತ್ತೇನೆಂತೀರಿ, ಅವಶ್ಯ ಬನ್ನಿ. ನಿಮ್ಮ ಕರಾರಿಗೆ ಒಪ್ಪುತ್ತೇನೆ ಎಂದರು.

ನಾನು ಇತಿಹಾಸ ವಿಭಾಗದಲ್ಲಿ ರೀಡರ್ ಆಗಿರಬೇಕಾದರೆ, ಆ ವಿಭಾಗಕ್ಕೆ ಪ್ರೊಫೆಸರರಾಗಿ ಡಾ. ಬಿ.ಎ. ಸಾಲೆತೊರೆಯವರನ್ನು ನೇಮಿಸಬೇಕೆಂದು ನಿಶ್ಚಯಿಸಲಾಗಿತ್ತು. ಹೀಗೆ ಅವರನ್ನು ನಿಶ್ಚಯ ಮಾಡಿದಾಗ ಡಾ. ಸಾಲೆತೊರೆಯವರು ಭಾರತ ಸರ್ಕಾರದ ರಾಷ್ಟ್ರೀಯ ಪತ್ರಾಗಾರದ ಮುಖ್ಯಸ್ಥರಾಗಿದ್ದರು. ಅವರನ್ನು ಪಾವಟೆಯವರು ಒಂದು ಭಾಷಣಕ್ಕೆ ಕರೆದರು. ಅವರು ಒಪ್ಪಿಕೊಂಡು ಬಂದರು. ಆ ಭಾಷಣದ ಸಭೆಗೆ ಪಾವಟೆಯವರೇ ಅಧ್ಯಕ್ಷರಾಗಿದ್ದರು. ಭಾಷಣದ ವಿಷಯ "ಕರ್ನಾಟಕದ ಸಾಗರೋತ್ತರ ಸಂಬಂಧಗಳು." ಅವರ ಭಾಷಣದಲ್ಲಿ ಅನೇಕ ಹೊಸ ವಿಷಯಗಳಿದ್ದವು. ಅವುಗಳಲ್ಲಿ ಕೆಲವು ವಿವಾದಾಸ್ಪದವಾಗಿದ್ದವು. ಸಭಿಕರಲ್ಲಿ ಡಾ. ಎಸ್.ಸಿ. ನಂದೀಮಠರು ಇದ್ದರು. ಅವರಿಗೆ ವಿವಾದಾಸ್ಪದ ವಿಷಯಗಳನ್ನು

ಕೇಳಿ ಅಸಮಾಧಾನವಾಯಿತು. ಭಾಷಣ ಮುಗಿದ ಕೂಡಲೇ ಡಾ. ಸಾಲೆತೊರೆಯವರು ಹೊರಟುಹೋದರು. ಪಾವಟೆಯವರು ನಂದೀಮಠರ ಜತೆಗೆ ಮಾತನಾಡುತ್ತ ಸಭಾಗೃಹದ ಹೊರಗೆ ಬರುತ್ತಿದ್ದರು. ನಾನು ಅವರ ಹಿಂದೆ ಬರುತ್ತಿದ್ದುದರಿಂದ ಅವರ ಮಾತು ನನ್ನ ಕಿವಿಯ ಮೇಲೆ ಬಿದ್ದವು. ನಂದೀಮಠರು ಪಾವಟೆಯವರನ್ನು ಕೇಳಿದರು. "ನೀವು ಈ ಭಾಷಣವನ್ನು ಪ್ರಕಟಿಸುತ್ತೀರಾ? ಇದರಲ್ಲಿ ಕೆಲವು ವಿಷಯಗಳನ್ನು ಎಲ್ಲರೂ ಒಪ್ಪಲಿಕ್ಕಿಲ್ಲ"ಎಂದರು' ಪಾವಟೆಯವರು ಹೇಳಿದರು: ನಾವು ಅದನ್ನು ಪ್ರಕಟಿಸುತ್ತೇವೆ. ನೀವು ಅದನ್ನೂ ಖಂಡಿಸಿ ಬರೆದುಕೊಡಿ. ಪಾವಟೆಯವರು ಎಲ್ಲರಿಗೂ 'ವಾಕ್ ಸ್ವಾತಂತ್ರ್ಯ ಕೊಡುತ್ತಿದ್ದರು. ಅವರು ಸರ್ವಾಧಿಕಾರಿಯ ಹಾಗೆ ವರ್ತಿಸುತ್ತಿದ್ದರೆಂದು ಅನೇಕರು ತಿಳಿದಿದ್ದಾರೆ. ಕೆಲವು ಸಂದರ್ಭಗಳಲ್ಲಿ ಅದು ನಿಜವಾಗಿಯೂ ಇತ್ತು. ನನಗೂ ಅದರ ಅನುಭವವಾಗಿತ್ತು. ಮುಂಬಯಿಯಲ್ಲಿ ಪ್ರೊ. ಜಾರ್ಜ್ ಮೋರೇಸ್ ಎನ್ನುವ ಕನ್ನಡಿಗ ಇತಿಹಾಸ ಪ್ರಾಧ್ಯಾಪಕರು ನನ್ನ ಸ್ನೇಹಿತರಿದ್ದರು. ಅವರನ್ನು ನಮ್ಮ ವಿಶ್ವವಿದ್ಯಾಲಯದ ಕಾರ್ಯಕ್ರಮಗಳಿಗೆ ಕರೆಸಬೇಕೆಂದು ಆಶಿಸಿ ನಾನು ಪಾವಟೆಯವರನ್ನು ಭೇಟಿಯಾದೆ. ಪ್ರೊ. ಜಾರ್ಜ್ ಮೋರೇಸರನ್ನು ಕರೆಸೋಣವೆಂದು ನಾನು ಅವರಿಗೆ ಹೇಳಿದೆ. ಅಷ್ಟೊತ್ತಿಗೆ 'ಟೈಮ್ಸ್ ಆಫ್ ಇಂಡಿಯಾ' ವರ್ತಮಾನ ಪತ್ರದಲ್ಲಿ ಅದರ ಸಂಪಾದಕ ಫ್ರ್ಯಾಂಕ್ ಮೋರೇಸ್ ಎನ್ನುವವರು ಪಾವಟೆಯವರು ಕುಲಪತಿಗಳಾಗುವ ಮುಂಚೆ ಕರ್ನಾಟಕ ವಿಶ್ವವಿದ್ಯಾಲಯದ ಆಡಳಿತ ಸರಿಯಾಗಿಲ್ಲವೆಂದು ಕೆಲವು ಲೇಖನಗಳನ್ನು ಬರೆದಿದ್ದರು. ಇದನ್ನು ಓದಿದ ಪಾವಟೆಯವರಿಗೆ ಫ್ರ್ಯಾಂಕ ಮೋರೇಸರ ಮೇಲೆ ಸಿಟ್ಟು ಬಂದಿತ್ತು. ನಾನು ಜಾರ್ಜ್ ಮೋರೇಸರನ್ನು ಕರೆಸೋಣವೆಂದಾಗ ಅವರು ನನಗೆ 'ನಮ್ಮ ವಿಶ್ವವಿದ್ಯಾಲಯದಲ್ಲಿ ಫ್ರ್ಯಾಂಕ್ ಅಥವಾ ಜಾರ್ಜ್ ಮೋರೇಸರು ಬೇಡ' ಅಂದರು. ಅಲ್ಲಿಗೆ ಈ ಚರ್ಚೆ ಮುಗಿಯಿತು. ಮುಂದೆ ಅವರು ಮನಸ್ಸು ಬದಲಾಯಿಸಿ ಜಾರ್ಜ್ ಮೋರೇಸ್‌ರನ್ನು ಕರೆಸಲಿಕ್ಕೆ ಒಪ್ಪಿದರು. ಪಾವಟೆಯವರು ಸೆನೆಟ್ ಮತ್ತು ಅಕ್ಯಾಡಮಿಕ ಕೌನ್ಸಿಲ್ ಸಭೆಗಳನ್ನು ನಿರ್ವಹಿಸುತ್ತಿದ್ದುದನ್ನು ನೋಡುವುದೇ ಒಂದು ಸೊಗಸು. ಎಲ್ಲರಿಗೂ ಮಾತನಾಡಲು ಅವಕಾಶವನ್ನು ಕೊಡುತ್ತಿದ್ದರು. ಮಧ್ಯ ಮಧ್ಯ ಅವರು ನಗೆ ಹೊನಲನ್ನು ಹರಿಸುತ್ತಿದ್ದರು. ಅವರು ಅಧ್ಯಕ್ಷರಾಗಿರುವವರೆಗೂ ಈ ಸಭೆಗಳು ಬೇಸರ ತರುತ್ತಿರಲಿಲ್ಲ. ಇದಕ್ಕೆ ಅಪವಾದವೆಂಬಂತೆ ಒಂದು ಸಭೆ ನಡೆಯಿತು. ಅದರಲ್ಲಿ ಒಬ್ಬರು ತೀರ ಹುಚ್ಚುಹುಚ್ಚಾಗಿ ಮಾತನಾಡಲಾರಂಭಿಸಿದರು. ನನಗೆ ಕೇಳಲಿಕ್ಕೆ ಆಗಲಿಲ್ಲ. ಸಾಧಾರಣವಾಗಿ ನಾನು ಈ ಸಭೆಗಳಲ್ಲಿ ಮಾತನಾಡುತ್ತಿರಲಿಲ್ಲ. ನನ್ನಂಥವನಿಗೂ ಈ ಭಾಷಣ ಅಸಹ್ಯವೆನಿಸಿ ಮಾತನಾಡುವ ಹಾಗೆ ಮಾಡಿತು. ಆಗ ನಾನೆದ್ದು, "ಸರ್, ಈ ಸಭಿಕರು ಹುಚ್ಚು ಹುಚ್ಚಾಗಿ ಮಾತನಾಡುತ್ತಿದ್ದಾರೆ. ನೀವು ಅವರಿಗೆ ಮಾತನಾಡಲು ಅವಕಾಶ

ಕೊಡಬಾರದು" ಎಂದೆ. ಅದಕ್ಕೆ ಅವರ ಉತ್ತರ. "ಎಲ್ಲರೂ ಅವರ ಹಾಗೆ ಅಪದ್ಧ ಮಾತನಾಡುತ್ತಿರಬೇಕಾದರೆ ಅವರು ಯಾಕೆ ಮಾತನಾಡಬಾರದು" ಎಂದು ಹೇಳಿ ಎಲ್ಲರನ್ನು ಚಕಿತಗೊಳಿಸಿದರು.

೧೯೫೯ ರಲ್ಲಿ ಪಾವಟೆಯವರಿಗೆ ೬೦ ವರ್ಷ ತುಂಬಿದವು. ಈ ಹುಟ್ಟುಹಬ್ಬವನ್ನು ಅವರು ಬೇಡವೆಂದರೂ ಕೇಳದೆ ಅವರ ಅಭಿಮಾನಿಗಳು ವಿಜೃಂಭಣೆಯಿಂದ ಆಚರಿಸಿದರು. ಸಮಾರಂಭಕ್ಕೆ ಆಗಿನ ರಾಷ್ಟ್ರಪತಿಗಳಾದ ಡಾ. ರಾಜೇಂದ್ರ ಪ್ರಸಾದರನ್ನು ಮುಖ್ಯ ಅತಿಥಿಯನ್ನಾಗಿ ಕರೆದಿದ್ದರು. ಪಾವಟೆಯವರು ತಮ್ಮ ಭಾಷಣದಲ್ಲಿ ತಮ್ಮ ಮದುವೆಯಾದಾಗ ಅವರ ಶ್ರೀಮತಿಯ ವಯಸ್ಸು ಚಿಕ್ಕದಾಗಿತ್ತು. ಅವರಿಗೆ ಮದುವೆ ಎಂದರೆ ಏನು ಎನ್ನುವುದು ಗೊತ್ತಿರಲಿಲ್ಲವೆಂದರು. ಡಾ. ರಾಜೇಂದ್ರ ಪ್ರಸಾದರು ತಮ್ಮ ಮದುವೆಯಾದಾಗ ತಮ್ಮ ಶ್ರೀಮತಿಯವರಿಗೂ ಮದುವೆಯೆಂದರೆ ಏನು ಎನ್ನುವುದು ಗೊತ್ತಿರಲಿಲ್ಲ, ನನಗೂ ಗೊತ್ತಿರಲಿಲ್ಲವೆಂದು ಸಭೆಯನ್ನು ನಗೆಗಡಲಿನಲ್ಲಿ ಮುಳುಗಿಸಿದರು.

ಡಾ. ಡಿ.ಸಿ. ಪಾವಟೆಯವರ ಅಣ್ಣಂದಿರು ವಿ.ಸಿ. ಪಾವಟೆಯವರು ವ್ಯವಸಾಯ ಇಲಾಖೆಯಲ್ಲಿ ದೊಡ್ಡ ಹುದ್ದೆಯಲ್ಲಿದ್ದು ನಿವೃತ್ತರಾಗಿ ಬಹಳ ಅನ್ಯೋನ್ಯವಾಗಿದ್ದರು. ದಿನಾ ಬೆಳಿಗ್ಗೆ ಅವರು ಕುಲಪತಿಗಳ ನಿವಾಸಕ್ಕೆ ಬರುತ್ತಿದ್ದರು ಮತ್ತು ಇಬ್ಬರೂ ವಾಕಿಂಗ್ ಹೋಗಿ ಸುಮಾರು ೯-೩೦ ಗಂಟೆಗೆ ವಾಪಸ್ಸು ಬರುತ್ತಿದ್ದರು. ಡಿ.ಸಿ. ಪಾವಟೆಯವರಿಗೆ ತೋಟಗಾರಿಕೆಯಲ್ಲಿ ಬಹಳ ಆಸಕ್ತಿ ಇತ್ತು. ಅವರು ವಿಶ್ವವಿದ್ಯಾಲಯದ ತೋಟಗಾರಿಕೆ ಸಮಿತಿಯ ಅಧ್ಯಕ್ಷರಾಗಿದ್ದರು. ವಿಶ್ವವಿದ್ಯಾಲಯದ ಕ್ಯಾಂಪಸ್‌ನಲ್ಲಿರುವ ಪ್ರೊಫೆಸರುಗಳ ತೋಟಗಳ ಮೇಲೆ ನಿಗಾ ಇಟ್ಟಿದ್ದರು. ನನ್ನ ಮನೆ ಬಿ-೫, ಎದುರಿಗಿನ ಬಿ-೪ ಮನೆಯಲ್ಲಿ ಸಂಖ್ಯಾಶಾಸ್ತ್ರದ ಪ್ರಾಧ್ಯಾಪಕರಿರುತ್ತಿದ್ದರು. ಅವರು ತಮ್ಮ ಕಂಪೌಂಡಿನಲ್ಲಿ ತೋಟವನ್ನು ಮಾಡಿರಲಿಲ್ಲ. ಅಷ್ಟೇ ಅಲ್ಲ ಕಂಪೌಂಡಿನಲ್ಲಿ ಬೆಳೆದ ಕಳೆಯನ್ನು ತೆಗೆಸಿರಲಿಲ್ಲ. ಹೀಗಾಗಿ ಅವರ ಕಂಪೌಂಡು ಒಂದು ಕಾಡಾಗಿತ್ತು. ನೋಡುವವರಿಗೆ ಅಸಹ್ಯವಾಗಿತ್ತು. ಇತರ ಯಾವ ಪ್ರೊಫೆಸರರು ತಮ್ಮ ಕಂಪೌಂಡನ್ನು ಇಷ್ಟು ಅಲಕ್ಷಿಸಿರಲಿಲ್ಲ. ಒಂದು ಬೆಳಿಗ್ಗೆ ವಿ.ಸಿ. ಪಾವಟೆಯವರು ಬಿ-೪ ಕಂಪೌಂಡಿಗೆ ಬಂದರು. ಈ ಪ್ರಾಧ್ಯಾಪಕರಿಗೆ ಕನ್ನಡ ಬರುತ್ತಿರಲಿಲ್ಲ. ಅವರಿಗೂ ವಿ.ಸಿ. ಪಾವಟೆಯವರಿಗೂ ಇಂಗ್ಲಿಷಿನಲ್ಲಿಯೆ ಮಾತುಕತೆ ಆಯಿತು. ವಿ.ಸಿ. ಪಾವಟೆಯವರು ಇಂಗ್ಲೀಷಿನಲ್ಲಿ ಹೇಳಿದ್ದರ ಕನ್ನಡ ಅನುವಾದ ಹೀಗಿದೆ. "ಏನು ಪ್ರಾಧ್ಯಾಪಕರೇ, ನಿಮ್ಮ ಕಂಪೌಂಡಿನಲ್ಲಿ ಒಂದು ಕಾಡನ್ನೇ ಬೆಳೆಸಿದ್ದೀರಲ್ಲಾ" ಅಂದರು; ಅವರು ಈ ತರಹ ಆಕ್ಷೇಪಣೆಯನ್ನು ನಿರೀಕ್ಷಿಸಿರಲಿಲ್ಲ. ಆದರೆ ಅವರು ಏನಾದರೂ ಹೇಳಬೇಕಾಗಿತ್ತು. ಆಗ ಅವರು ಹೇಳಿದರು "ಅದನ್ನು ನಾನು ಬೆಳೆಸಿಲ್ಲ, ಸರ್.

ಅದು ತನ್ನಷ್ಟಕ್ಕೆ ತಾನೇ ಬೆಳೆದುಕೊಂಡಿದೆ" ಅಂದರು. ಆಮೇಲೆ ವಿ.ಸಿ. ಪಾವಟೆಯವರು, ಕಂಪೌಂಡಿನಲ್ಲಿ ತೋಟ ಮಾಡಬೇಕು. ಅದು ಆಗದಿದ್ದರೆ ಸ್ವಚ್ಛವಾಗಿಯಾದರೂ ಇಟ್ಟುಕೊಳ್ಳಬೇಕೆಂದರು. ಅದಕ್ಕೆ ಅವರು ಒಪ್ಪಿದರು.

ಇಂಥದೇ ಕೆಲಸವನ್ನು ಕುಲಪತಿ ಪಾವಟೆಯವರು ಎಷ್ಟು ನಯವಾಗಿ ಮಾಡುತ್ತಿದ್ದರೆನ್ನುವುದಕ್ಕೆ ಒಂದು ಉದಾಹರಣೆ ಇದೆ. ಬಿ-೪ ಹಿಂದಿನ ಮನೆ ಬಿ-೩ ರಲ್ಲಿ ಪ್ರೊ. ಆರ್.ಸಿ. ಹಿರೇಮಠರು ಇರುತ್ತಿದ್ದರು. ಅವರು ಅವರ ಕಂಪೌಂಡ ತುಂಬ ಮೆಣಸಿನ ಗಿಡಗಳನ್ನು ಹಚ್ಚಿಸಿದ್ದರು. ಒಂದು ವರ್ಷ ಮೆಣಸಿನಕಾಯಿ ಫಸಲು ಬಹಳ ಚೆನ್ನಾಗಿ ಬಂತು. ಒಂದು ದಿನ ಕುಲಪತಿ ಪಾವಟೆಯವರು ತಮ್ಮ ವಾಕಿಂಗ್ ಮುಗಿಸಿಕೊಂಡು ಹಿರೇಮಠರ ಕಂಪೌಂಡಿನೊಳಗೆ ಬಂದರು. ಅವರನ್ನು ಕಾಣಲಿಕ್ಕೆ ಹಿರೇಮಠರು ಮನೆಯೊಳಗಿನಿಂದ ಬಂದರು. ಆಗ ಕುಲಪತಿಗಳು ಹೇಳಿದರು. 'ಹಿರೇಮಠರೇ, ನಿಮ್ಮ ಮೆಣಸಿನಕಾಯಿ ಫಸಲು ಬಹಳ ಚೆನ್ನಾಗಿ ಬಂದಿದೆ, ಈ ವರ್ಷ ಬ್ಯಾಡಗಿ ಮಾರ್ಕೆಟ್ ಡೌನ್ ಆಗುತ್ತದೆ, ಎಂದರು". ಆಗ ಇಬ್ಬರೂ ನಕ್ಕರು. ಹಿರೇಮಠ ಅವರಿಗೆ ಸೂಚನೆ ತಿಳಿಯಿತು. ಮತ್ತು ಕುಲಪತಿಗಳ ಟೀಕೆಯನ್ನು ಎಲ್ಲರಿಗೂ ಹೇಳಿ ನಗುತ್ತಿದ್ದರು.

ಪಾವಟೆ ಅಣ್ಣ ತಮ್ಮಂದಿರ ಭಿನ್ನ ಭಿನ್ನ ಸ್ವಭಾವವನ್ನು ತೋರಿಸುವ ಇನ್ನೊಂದು ಉದಾಹರಣೆ ಹೀಗಿದೆ. ಕುಲಪತಿ ಪಾವಟೆಯವರು ಉತ್ತರ ಬಿಹಾರದಲ್ಲಿರುವ ದರ್ಭಾಂಗಕ್ಕೆ ಭಾರತದ ವಿಶ್ವವಿದ್ಯಾಲಯಗಳ ಕುಲಪತಿಗಳ ಸಭೆಗೆ ಹೋಗಿದ್ದರು. ದರ್ಭಾಂಗ ವಿಶ್ವವಿದ್ಯಾಲಯದ ಕುಲಪತಿಗಳು ಆತಿಥೇಯರು. ಅವರನ್ನು ಪಾವಟೆಯವರು ಭೇಟಿಯಾದಾಗ ಅವರು ಹೇಳಿದರು, 'ಓಹೋ, ನೀವು ಕರ್ನಾಟಕದಿಂದ ಬರುತ್ತೀರಾ; ಬನ್ನಿ, ನಿಮ್ಮ ರಾಜ್ಯದವರು ಈ ಭಾಗದಲ್ಲಿ ಅಂದರೆ ಉತ್ತರ ಬಿಹಾರ ಮತ್ತು ನೇಪಾಳದಲ್ಲಿ ೪೦೦ ವರ್ಷ ಒಂದು ರಾಜ್ಯವನ್ನು ಸ್ಥಾಪಿಸಿ, ಇವತ್ತಿಗೂ ನೆನಪಿಡುವಷ್ಟು ಒಳ್ಳೆಯ ಕೆಲಸ ಮಾಡಿ ಹೋಗಿದ್ದಾರೆ, ಎಂದರು. ಆ ರಾಜವಂಶದವರು ತಮ್ಮನ್ನು ಕರ್ನಾಟಕದ ವಂಶದವರೆಂದೇ ಕರೆದುಕೊಳ್ಳುತ್ತಿದ್ದರೆಂದು ಹೇಳಿದರು. ಈ ವಿಷಯ ಕುಲಪತಿ ಪಾವಟೆಯವರಿಗೆ ಹೊಸದು. ದರ್ಭಾಂಗದಿಂದ ವಾಪಸಾದ ಮೇಲೆ ಒಂದು ಬೆಳಿಗ್ಗೆ ವಾಕಿಂಗ್ ಮುಗಿಸಿ ಅಣ್ಣತಮ್ಮಂದಿರು ಕೂತುಕೊಂಡಿದ್ದರು. ಆಗ ನನ್ನನ್ನು ಕರೆಸಿ "ಅಲ್ಲ ದೀಕ್ಷಿತರೇ ಕರ್ನಾಟಕದವರು ಉತ್ತರ ಬಿಹಾರ ಮತ್ತು ನೇಪಾಳಗಳಲ್ಲಿ ೪೦೦ ವರ್ಷ ಚೆನ್ನಾಗಿ ಆಳಿ ಅಲ್ಲಿಯವರು ಇವತ್ತಿಗೂ ನೆನೆಸುವ ಹಾಗೆ ಒಳ್ಳೆಯ ಹೆಸರು ಮಾಡಿದರಂತೆ, ಇದನ್ನು ನೀವು ನನಗೆ ಹೇಳಲೇ ಇಲ್ಲ"ವೆಂದು ಅಂದು, ಅವರಣ್ಣನಿಗೆ ಅದನ್ನೇ ಹೇಳಿದರು. ಅವರಣ್ಣನ ಮೇಲೆ ಈ ಹೊಸ ವಿಷಯ ಏನೂ ಪರಿಣಾಮ

ಮಾಡಲಿಲ್ಲ. ಅವರ ಅಣ್ಣನವರು. 'ಇದು ಎಲ್ಲಾ ಸುಳ್ಳು. ಯಾರೋ ಏನೋ ಬರೀತಾರೆ. ನೀವು ಅದನ್ನು ನಂಬ್ತೀರಿ. ಅದನ್ನು ನಾನು ನಂಬುವುದಿಲ್ಲ. ಇಲ್ಲಿ ಕರ್ನಾಟಕದಲ್ಲಿ ತಮ್ಮನ್ನು ತಾವು ಆಳಿಕೊಳ್ಳಲಿಕ್ಕೆ ಆಗ್ತಾ ಇಲ್ಲ. ನೇಪಾಳಕ್ಕೆ ಹೋಗಿ ಹೇಗೆ ಆಳ್ತೀವಿ. ನಾನು ಇದನ್ನು ನಂಬುವುದಿಲ್ಲ, ಎಂದು ಮಾತನ್ನು ಮುಗಿಸಿದರು.

ಪಾವಟೆಯವರು ೧೯೫೪ ರಿಂದ ೧೯೬೭ ರವರೆಗೂ ೧೩ ವರ್ಷಗಳು ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿಗಳಾಗಿದ್ದರು. ಅವರು ಈ ಹುದ್ದೆಯನ್ನು ಅಲಂಕರಿಸಿದ ಕೆಲವೇ ವರ್ಷಗಳಲ್ಲಿ ಈ ವಿಶ್ವವಿದ್ಯಾಲಯವನ್ನು ಭಾರತದ ಹನ್ನೆರಡು ಉತ್ತಮ ವಿಶ್ವವಿದ್ಯಾಲಯಗಳಲ್ಲಿ ಒಂದನ್ನಾಗಿ ಮಾಡಿದ ಶಿಲ್ಪಿಗಳು. ಇದರ ಜೊತೆಗೆ ಶಿಕ್ಷಣ ಕ್ಷೇತ್ರದಲ್ಲಿ ಸುಮಾರು ೩೭ ವರ್ಷಗಳು ತಮ್ಮ ಸಂಶೋಧನೆಯಿಂದ, ಪಠ್ಯಪುಸ್ತಕಗಳಿಂದ, ತಮ್ಮ ಭಾಷಣಗಳಿಂದ ಮತ್ತು ವರದಿಗಳಿಂದ ಅಮೂಲ್ಯ ಆಸ್ತಿಯನ್ನು ಬಿಟ್ಟು ಹೋಗಿದ್ದಾರೆ. ಈ ಆಸ್ತಿಯನ್ನು ಅವರು ಕೆಲಸ ಮಾಡಿದಂಥ ಮುಂಬಯಿ ಮತ್ತು ಕರ್ನಾಟಕ ವಿಶ್ವವಿದ್ಯಾಲಯಗಳ ಅಕ್ಯಾಡೆಮಿಕ ಕೌನ್ಸಿಲ್, ಸೆನೆಟ್ ಮತ್ತು ಸಿಂಡಿಕೇಟ್ ಸಭೆಗಳ ಕಾರ್ಯಕಲಾಪಗಳಲ್ಲಿ, ಮುಂಬಯಿ ಪ್ರಾಂತ್ಯದ ಶಿಕ್ಷಣ ಖಾತೆಗೆ ಸಂಬಂಧಿಸಿದ ದಾಖಲೆಗಳಲ್ಲಿ ಮತ್ತು ಕೇಂದ್ರ ಸರ್ಕಾರದವರು ಅವರನ್ನು ನೇಮಿಸಿದ ಸಮಿತಿಯ ವರದಿಗಳಲ್ಲಿ ನೋಡಬಹುದು. ನಮ್ಮ ಶಿಕ್ಷಣದಲ್ಲಿ, ಹಿಂದಿ ಮತ್ತು ಮಾತೃಭಾಷೆ ಮತ್ತು ಇಂಗ್ಲಿಷ್‌ಗಳ ಸ್ಥಾನ, ವಿಜ್ಞಾನದ ಅದರಲ್ಲಿಯೂ ಅವರ ಮೆಚ್ಚಿನ ವಿಷಯವಾದ ಗಣಿತದ ಸ್ಥಾನ ಇತ್ಯಾದಿ ವಿಷಯಗಳ ಮೇಲೆ ಅವರ ಅಭಿಪ್ರಾಯಗಳನ್ನು ನೋಡಬಹುದು. ಅವರ ಅನೇಕ ಅಭಿಪ್ರಾಯಗಳು ಪುಸ್ತಕೀಯವಲ್ಲ. ಅವು ಅವರು ಮಾಡಿದ ಪ್ರಯೋಗಗಳ ಆಧಾರದ ಮೇಲೆ ಬರೆದವು. ಇವುಗಳನ್ನೆಲ್ಲಾ ಅಭ್ಯಾಸ ಮಾಡಲಿಕ್ಕೆ ಒಂದು ಪ್ರತಿಷ್ಠಾನವನ್ನು ಸ್ಥಾಪಿಸಬೇಕು. ಅಂತಹ ಪ್ರತಿಷ್ಠಾನಕ್ಕೆ ತಕ್ಕ ಸ್ಥಳ ಅವರು ಬೆಳಸಿದ ಕರ್ನಾಟಕ ವಿಶ್ವವಿದ್ಯಾಲಯ.

■

2

ವರಕವಿ ಬೇಂದ್ರೆಯವರು

ವರಕವಿ ಬೇಂದ್ರೆಯವರಿಗೂ ಮತ್ತು ನನಗೂ ಮೊದಲು ಪರಿಚಯವಾಗಿದ್ದು ಸಾಂಗ್ಲಿಯಲ್ಲಿ. ಅಲ್ಲಿಯ ವಿಲ್ಲಿಂಗ್‌ಡನ್ ಕಾಲೇಜಿನಲ್ಲಿ ೧೯೪೦ ರಿಂದ ೧೯೪೬ರವರೆಗೆ ನಾನು ಅಧ್ಯಾಪಕನಾಗಿದ್ದೆ. ಈ ಅವಧಿಯಲ್ಲಿ ಬೇಂದ್ರೆಯವರು ಈ ಕಾಲೇಜಿಗೆ ಆಗಾಗ್ಗ ಬರುತ್ತಿದ್ದರು. ಇದಕ್ಕೆ ಒಂದು ಕಾರಣ ಅವರ ಮಗ ರಾಮು ಆ ಕಾಲೇಜಿನಲ್ಲಿ ಓದುತ್ತಿದ್ದ. ಅವನು ಆ ಕಾಲೇಜಿನಲ್ಲಿ ಪ್ರಿನ್ಸಿಪಾಲರಾಗಿದ್ದ ಪ್ರೊ ವಿ.ಕೃ. ಗೋಕಾಕರ ಮನೆಯಲ್ಲಿರುತ್ತಿದ್ದ. ಅವರು ಬಂದಾಗ ಕಾಲೇಜಿನಲ್ಲಿ ಅವರ ಭಾಷಣವಾಗುತ್ತಿತ್ತು. ಎಲ್ಲಾ ಕನ್ನಡ ಕಾರ್ಯಕ್ರಮಗಳಲ್ಲೂ ನಾನು ಪ್ರೊ ವಿ.ಕೃ. ಗೋಕಾಕ್ ಮತ್ತು ರಂ. ಶ್ರೀ. ಮುಗಳಿಯವರಿಗೆ ನೇರವಾಗುತ್ತಿದ್ದೆ. ಬೇಂದ್ರೆಯವರು ಇದನ್ನು ನೋಡಿದ್ದರಿಂದ ನಾನು ಅವರಿಗೆ ಆತ್ಮೀಯನಾದೆ. ೧೯೪೬ರಲ್ಲಿ ನನಗೆ ಪೂಣೆಯ ಫರ್ಗ್ಯುಸನ್ ಕಾಲೇಜಿಗೆ ವರ್ಗವಾಯಿತು. ವಿಲ್ಲಿಂಗಡನ್ ಮತ್ತು ಫರ್ಗ್ಯುಸನ್ ದೇ ಕಾಲೇಜುಗಳನ್ನು ಒಂದೇ ಸಂಸ್ಥೆಯವರು ನಡೆಸುತ್ತಿದ್ದರಿಂದ ಈ ತರಹ ವರ್ಗಾವಣೆ ಆಗುತ್ತಿದ್ದವು. ನಾನು ಪುಣೆಯಲ್ಲಿ ೧೯೪೬ ರಿಂದ ೧೯೫೫ ರವರೆಗ ಫರ್ಗ್ಯುಸನ್ ಕಾಲೇಜಿನಲ್ಲಿ ಅಧ್ಯಾಪಕನಾಗಿದ್ದೆ. ಈ ಕಾಲದಲ್ಲಿ ಬೇಂದ್ರೆಯವರು ಸೊಲ್ಲಾಪುರದಲ್ಲಿ ಡಿ.ಎ.ವಿ. ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದರು. ನಾನು ಪುಣೆಗೆ ಹೋದ ಕೂಡಲೆ ಬೇಂದ್ರೆಯವರು ನನ್ನನ್ನು ಸೊಲ್ಲಾಪುರದಲ್ಲಿ ನಾಡಹಬ್ಬಕ್ಕೆ ಭಾಷಣಕ್ಕೆ ಕರೆದರು.

ಸೊಲ್ಲಾಪುರದಿಂದ ಬೇಂದ್ರೆಯವರು ಮೇಲಿಂದ ಮೇಲೆ ಪುಣೆಗೆ ಬರುತ್ತಿದ್ದರು. ಪುಣೆಯ ಎರಡು-ಮೂರು ಕರ್ನಾಟಕ ಸಂಘಗಳು. ಮರಾಠಿ ಸಾಹಿತ್ಯ ಪರಿಷತ್ತು ಹಾಗೂ ವಸಂತ ವ್ಯಾಖ್ಯಾನ ಮಾಲೆಯ ಕಾರ್ಯಕರ್ತರು ಅವರನ್ನು ಭಾಷಣಕ್ಕೆ ಕರೆಯುತ್ತಿದ್ದರು. ಸೊಲ್ಲಾಪುರದ ಕಾಲೇಜು ಪುಣೆಯ ವಿದ್ಯಾಪೀಠದ ಕಕ್ಷೆಯಲ್ಲೆ ಬರುತ್ತದೆ. ಅದರ ಸಭೆಗಳಿಗಾಗಿಯೂ ಬೇಂದ್ರೆಯವರು ಪುಣೆಗೆ ಬರಬೇಕಾಗಿತ್ತು. ಹೀಗೆ ಬಂದಾಗಲೆಲ್ಲ ಅವರು ಡೆಕ್ಕನ್ ಜಿಮ್‌ಖಾನದಲ್ಲಿದ್ದ ಶ್ರೀ ವಿಠಲರಾವ್ ದೀಕ್ಷಿತ್ ಇವರ ಮನೆಯಲ್ಲಿ ಇರುತ್ತಿದ್ದರು. ಅವರು ಬಂದ ಕೂಡಲೆ ನಾನು ಅವರನ್ನು ಭೇಟಿಯಾಗಿ ಅವರ ಮನೆಯ ಕೆಲಸದಲ್ಲಿ ನೆರವಾಗುತ್ತಿದ್ದೆ.

ವಿಠಲರಾಯರು ಪುಸ್ತಕ ವ್ಯಾಪಾರಿ ಮತ್ತು ಮಹರ್ಷಿ ಅರವಿಂದರ ಭಕ್ತರು ಎಂಬ ಕಾರಣಗಳಿಂದಲೂ ಅವರಿಬ್ಬರ ಸ್ನೇಹ ಗಾಢವಾಗಿತ್ತು. ಇದಲ್ಲದೆ ವಿಠಲರಾಯರ ಪತ್ನಿ ಶ್ರೀಮತಿ ಮುಕ್ತಾಬಾಯಿಯವರು ಸಾಹಿತಿಯಾಗಿದ್ದರು. ಅನೇಕ ನಾಟಕಗಳನ್ನು ಬರೆದಿದ್ದರು. ಅವರ ಮನೆಯಲ್ಲಿ ಮರಾಠಿ ಸಾಹಿತಿಗಳು ಸೇರುತ್ತಿದ್ದರು. ಇಂತಹ ಸಾಹಿತಿಗಳಲ್ಲಿ ಪ್ರೊ| ನ.ರಾ.ಪಾಠಕ ಎನ್ನುವ ಮರಾಠಿ ಪ್ರಾಧ್ಯಾಪಕರು ಪ್ರಸಿದ್ಧರಾಗಿದ್ದರು. ಇವರು ಮುಂಬಯಿಯ ರುಯಾ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದರು. ಪುಣೆಗೆ ಬಂದಾಗಲೆಲ್ಲ ವಿಠಲರಾಯರ ಮನೆಗೆ ಬರುತ್ತಿದ್ದರು. ಅಲ್ಲಿ ಸೇರುತ್ತಿದ್ದ ಸಾಹಿತಿಗಳ ಕೂಟಕ್ಕೆ ಅವರು ಅನಭಿಷಿಕ್ತರಾಜರಾಗಿದ್ದರು. ವಾದದಲ್ಲಿ ಅವರನ್ನು ಅಲ್ಲಿ ಸೇರುತ್ತಿದ್ದವರಾರೂ ಸೋಲಿಸಲಾಗುತ್ತಿದ್ದಿಲ್ಲ. ಬೇಂದ್ರೆಯವರು ವಿಠಲರಾಯರ ಮನೆಗೆ ಬಂದಾಗ ಶ್ರೀಮತಿ ಮುಕ್ತಾಬಾಯಿಯವರ ಜುಗಾರ್ ನಾಟಕದ ಬಗ್ಗೆ ಬಿರುಸಿನ ಚರ್ಚೆಗಳಾಗುತ್ತಿದ್ದವು. ಪಾಠಕರು ಶ್ರೀಮತಿ ಮುಕ್ತಾಬಾಯಿಯವರನ್ನು ಅವರ ನಾಟಕ ಬಗ್ಗೆ ಪ್ರಶ್ನೆಗಳನ್ನು ಕೇಳುತ್ತಿದ್ದರು. ಈ ಪಾತ್ರವನ್ನು ಹೀಗೇಕೆ ಮಾಡಿದಿರಿ ಹಾಗೇಕೆ ಮಾಡಲಿಲ್ಲ ? ಇತ್ಯಾದಿ. ಮುಕ್ತಾಬಾಯಿಯವರಿಗೆ ನಾಟಕ ಬರೆಯುವುದು ಬರುತ್ತಿತ್ತೇ ವಿನಹ ಅದರ ಬಗ್ಗೆ ಚರ್ಚಿಸಲು ಬರುತ್ತಿರಲಿಲ್ಲ. ಇಂತಹ ಸಮಯದಲ್ಲಿ ಬೇಂದ್ರೆಯವರು ಅಲ್ಲಿ ಇದ್ದರೆ ಅವರು ಮುಕ್ತಾಬಾಯಿ ಅವರ ನೆರವಿಗೆ ಬರುತ್ತಿದ್ದರು. ಮುಕ್ತಾಬಾಯಿಯ ಮನಸ್ಸಿನಲ್ಲಿದುದನ್ನು ಅವರಿಗಿಂತ ಬಹಳ ಚೆನ್ನಾಗಿ ಹೇಳಿ ವಿಮರ್ಶಕರನ್ನು ನಿರುತ್ತರನನ್ನಾಗಿ ಮಾಡುತ್ತಿದ್ದರು. ಬೇಂದ್ರೆಯವರು ಅಲ್ಲಿಗೆ ಬಂದ ಮೇಲೆ ವಿಠಲರಾಯರ ಮನೆಯ ಸಾಹಿತಿಗಳ ಕೂಟಕ್ಕೆ ಅವರೇ ಅನಭಿಷಿಕ್ತ ರಾಜರಾದರು.

ವಿಠಲರಾವ್ ದಂಪತಿಗಳ ಸಹಕಾರದಿಂದ ಬೇಂದ್ರೆಯವರು ಮರಾಠಿ ಮತ್ತು ಕನ್ನಡ ಸಾಹಿತ್ಯಗಳ ಪರಸ್ಪರ ಪರಿಚಯವಾಗುವ ಹಾಗೆ ಮಾಡಿದರು. ಈ ಉದ್ದೇಶದ ಮೊದಲ ಉಪಕ್ರಮ ಜುಗಾರ್ ನಾಟಕವನ್ನು ಕನ್ನಡಕ್ಕೆ ಭಾಷಾಂತರಿಸುವುದು. ಈ ಭಾಷಾಂತರವನ್ನು ಅವರು ತಮ್ಮ ಬಂಧು ನಾಟಕಕಾರ ಶ್ರೀ ಲಕ್ಷ್ಮಣರಾವ್ ಬೇಂದ್ರೆಯವರಿಂದ ಮಾಡಿಸಿದರು. ಕನ್ನಡದಲ್ಲಿ ಇದಕ್ಕೆ 'ಜೂಜು' ಎನ್ನುವ ಹೆಸರಿಡಲಾಯಿತು. ಈ ಕನ್ನಡ ನಾಟಕವನ್ನು ಪುಣೆಯಲ್ಲಿ ಆಡಿಸಲಾಯಿತು. ಇದರಲ್ಲಿ ಮುಖ್ಯ ನಟ ನಟಿಯರಾಗಿದ್ದವರು ಶ್ರೀ ಜಿ.ಜಿ.ಪುರಾಣಿಕ ಮತ್ತು ಅವರ ಶ್ರೀಮತಿಯವರು. ಆ ದಂಪತಿಗಳ ಅಭಿನಯ ಶ್ರೇಷ್ಠ ತರಗತಿಯಾದಾಗಿತ್ತು. ಕನ್ನಡ ಜೂಜು ನಾಟಕವನ್ನು ಶ್ರೀ ಜಿ.ಬಿ.ಜೋಶಿಯವರು ತಮ್ಮ ಮನೋಹರ ಗ್ರಂಥಮಾಲೆಯಲ್ಲಿ ಪ್ರಕಟಿಸಿದರು ಮತ್ತು ಅವರೇ ಅದನ್ನು ಧಾರವಾಡದ ರಂಗ ಭೂಮಿಯ ಮೇಲೆ ತಂದರು. ಅನೇಕ ವರ್ಷಗಳಾದ ನಂತರ ಈ ನಾಟಕವನ್ನು ಬೆಂಗಳೂರಿನಲ್ಲಿಯೂ ಆಡಲಾಯಿತು.

ಹೀಗೆ ಮರಾಠಿಯ ಒಂದು ಒಳ್ಳೆಯ ನಾಟಕವನ್ನು ಕನ್ನಡಿಗರೂ ನೋಡುವ ಹಾಗೆ ಬೇಂದ್ರೆಯವರು ಮಾಡಿದರು. ಅವರ ಇನ್ನೊಂದು ಉದ್ದೇಶ ಕನ್ನಡ ಸಾಹಿತಿಗಳನ್ನು ಪುಣೆಯ ಸಾರ್ವಜನಿಕರಿಗೆ ಪರಿಚಯಿಸುವದಾಗಿತ್ತು. ಪೂಜ್ಯ ಸಾನೆ ಗುರುಜಿಯವರು ಇಂಥದೇ ಉದ್ದೇಶದಿಂದ ಅಂತರ ಭಾರತಿಯೆನ್ನುವ ಸಂಸ್ಥೆಯನ್ನು ಸ್ಥಾಪಿಸಿದ್ದರು. ೧೯೫೦ರ ಇಸ್ವಿಗೆ ಇದರ ಮುಖ್ಯಸ್ಥರಾಗಿದ್ದವರು. ಶ್ರೀ ಜ. ಸ. ಭಾಗವತ್ ಮತ್ತು ಶ್ರೀ ಶ್ರೀಪಾದ ಜೋಶಿ. ಈ ಸಂಸ್ಥೆಯವರು ಭಾಷಾ ಬಾಂಧವ್ಯದ ಪ್ರತೀಕವಾಗಿ ಕನ್ನಡದ ಪ್ರಸಿದ್ಧ ಸಾಹಿತಿ ಮಾಸ್ತಿಯವರನ್ನು ಪುಣೆಗೆ ಕರೆಸುವ ಪ್ರಯತ್ನ ಮಾಡುತ್ತಿದ್ದರು. ಈ ವಿಷಯದಲ್ಲಿ ಅವರು ಬೇಂದ್ರೆಯವರ ಸಹಾಯವನ್ನು ಕೋರಿದರು. ಮಾಸ್ತಿಯವರನ್ನು ತಮ್ಮ ಅಣ್ಣನೆಂದು ತಿಳಿಯುತ್ತಿದ್ದ ಮತ್ತು ಹಾಗೆ ಕರೆಯುತ್ತಿದ್ದ ಬೇಂದ್ರೆಯವರಿಗೆ ಇದು ಅತ್ಯಂತ ಇಷ್ಟವಾದ ವಿಷಯವಾಗಿತ್ತು. ಮಾಸ್ತಿಯವರು ಆಗಿನ ಮೈಸೂರು ಸರ್ಕಾರದಲ್ಲಿ ಅತ್ಯಂತ ಉನ್ನತ ಹುದ್ದೆಯಿಂದ ನಿವೃತ್ತರಾಗಿದ್ದರು. ಇಂಗ್ಲಿಷಿನಲ್ಲಿ ಪರಿಣಾಮಕಾರಿ ಭಾಷಣಕಾರರಾಗಿದ್ದರು. ಮಾಸ್ತಿಯವರು ಪುಣೆಗೆ ಬಂದರು. ಬೇಂದ್ರೆಯವರ ಜತೆಗೆ ಅವರೂ ವಿಠಲರಾಯರ ಮನೆಯಲ್ಲಿ ತಂಗಿದರು. ಪುಣೆಯಲ್ಲಿ ಅತ್ಯಂತ ವಿಶಾಲವಾದ ಸಭಾಗೃಹ ಎಸ್. ಪಿ. ಕಾಲೇಜಿನಲ್ಲಿದೆ. ಮಾಸ್ತಿಯವರ ವ್ಯಾಖ್ಯಾನವನ್ನು ಅಲ್ಲಿ ಏರ್ಪಡಿಸಲಾಗಿತ್ತು. ಸಭಾಗೃಹ ಕಿಕ್ಕಿರಿದು ತುಂಬಿತ್ತು. ಅಂದಿನ ಕಾರ್ಯಕ್ರಮಕ್ಕೆ ಪುಣೆ ವಿದ್ಯಾಪೀಠದ ಕುಲಪತಿಗಳಾಗಿದ್ದ ಶ್ರೇಷ್ಠ ವಾಗ್ಮಿ ಮತ್ತು ನ್ಯಾಯವಾದಿ ಬ್ಯಾರಿಷ್ಟರ್ ಎಂ. ಆರ್. ಜಯಕರ್ ಅವರು ಅಧ್ಯಕ್ಷರಾಗಿದ್ದರು. ಮಾಸ್ತಿಯವರ ಭಾಷಣದ ವಿಷಯ ಭಾರತೀಯ ಸಂಸ್ಕೃತಿಯ ಹಿರಿಮೆಯಾಗಿತ್ತು. ಅವರ ಶೈಲಿ ಮತ್ತು ವಿಷಯದ ಮಂಡನೆಯ ರೀತಿ ಶ್ರೋತೃಗಳನ್ನು ಮುಗ್ಧರನ್ನಾಗಿ ಮಾಡಿದವು. ಬಂದವರೆಲ್ಲರು ತಾವು ಒಂದು ಅತ್ಯುತ್ತಮ ಭಾಷಣವನ್ನು ಕೇಳಿದವೆಂದು ಸಂತುಷ್ಟರಾದರು. ಅಧ್ಯಕ್ಷರಾದ ಜಯಕರ್ ಶ್ರೋತೃಗಳ ಸಂತುಷ್ಟಿಯನ್ನು ಪುಷ್ಟೀಕರಿಸುವ ಹಾಗೆ ಮಾತನಾಡಿದರು. ಅವರು ಹೇಳಿದ್ದನ್ನು ೫೦ ವರ್ಷಗಳಾದರು ನಾನು ಮರೆತಿಲ್ಲ. I would go miles to hear a speech like this; ಎಂದು ಪ್ರಾರಂಭಿಸಿ. ಮಾಸ್ತಿ ಅಂಥವರು ಭಾರತದ ಸಾಂಸ್ಕೃತಿಕ ರಾಯಭಾರಿಗಳಾಗಿ ವಿದೇಶಗಳಲ್ಲಿ ಇಂತಹ ಭಾಷಣಗಳನ್ನು ಮಾಡಬೇಕು. ಹಾಗೆ ಮಾಡಿದರೆ ನಮ್ಮ ಬಗ್ಗೆ ಪರದೇಶಗಳಲ್ಲಿರುವ ಅಜ್ಞಾನ ಮತ್ತು ಪೂರ್ವಗ್ರಹಗಳು ಕಡಿಮೆಯಾಗುವುವೆಂದರು. ಇದಾಗಿ ಒಂದು ಭಾನುವಾರ ಬೆಳಗ್ಗೆ ಅಂದು ಮಧ್ಯಾಹ್ನ ಬೇಂದ್ರೆ ಮತ್ತು ಮಾಸ್ತಿಯವರನ್ನು ನನ್ನ ಮನೆಗೆ ಚಹಾಕ್ಕೆ ಮನೆಗೆ ಕರೆದಿದ್ದೆ. ಅದಾದ ಮೇಲೆ ಮಾಸ್ತಿಯವರ ಸಂಪರ್ಕವನ್ನು ಉಳಿಸಿಕೊಳ್ಳಲಿಲ್ಲ. ಬಹಳ ವರ್ಷಗಳಾದ ಮೇಲೆ ಅವರಿಗೆ ಜ್ಞಾನಪೀಠ ಪ್ರಶಸ್ತಿ ಬಂತು. ಮಾಸ್ತಿಯವರ ಸಂಪರ್ಕ ಉಳಿಸಿಕೊಂಡಿದ್ದರೆ

ಅವರನ್ನು ಅಭಿನಂದಿಸಿ ಪತ್ರ ಬರೆದರೆ ಅವರಿಗೆ ತಕ್ಷಣ ನನ್ನ ನೆನಪಾಗುತ್ತಿತ್ತು. ಈಗ ನಾನು ಅವರಿಗೆ ಪತ್ರ ಬರೆದರೆ ಅವರಿಗೆ ನನ್ನ ನೆನಪು ಇರುವದೋ ಇಲ್ಲೋ ಎನ್ನುವ ತವಕ ನನ್ನದಾಗಿತ್ತು. ಆದರೂ ನೋಡೋಣವೆಂದು ಅಭಿನಂದನ ಪತ್ರ ಬರೆದು ಅದರಲ್ಲಿ ನಿಮಗೆ ನನ್ನ ನೆನಪು ಇದೆಯೊ ಇಲ್ಲೊ ಎನ್ನುವ ತವಕ ನನ್ನದಾಗಿತ್ತು.

ಪುಣೆಯಲ್ಲಿ ನೀವು ನನ್ನ ಮನೆಗೆ ಬೇಂದ್ರೆಯವರ ಜತಗೆ ಚಹಾಕ್ಕೆ ಕರೆದಿದ್ದು ನೆನಪಿದೆ. ಅವತ್ತು ನಿಮ್ಮ ಶ್ರೀಮತಿಯವರು ಇಂತಹ ತಿಂಡಿಗಳನ್ನು ಕೊಟ್ಟಿದ್ದರು. ಆಗ ನಿಮ್ಮ ಮಗಳನ್ನು ಮಾತನಾಡಿಸಿದ್ದೆ ಎಂದು ಅವಳ ಹೆಸರನ್ನು ಹೇಳಿ ಅವಳು ಈಗ ಹೇಗಿರುವಳೆಂದು ವಿಚಾರಿಸಿದರು. ಹಾಗಿದೆ ದೊಡ್ಡವರ ಲಕ್ಷಣ. ಪೂಣೆಯಲ್ಲಿ ಕನ್ನಡಿಗರ ಬಗ್ಗೆ ಸದಭಿಪ್ರಾಯವನ್ನು ಹುಟ್ಟಿಸಬೇಕೆನ್ನುವ ಬೇಂದ್ರೆಯವರ ಪ್ರಯತ್ನದಲ್ಲಿ ಮಾಸ್ತಿಯವರ ಭಾಷಣ ಒಮದು ಮೈಲಿಗಲ್ಲಾಗಿತ್ತು.

ಮರಾಠಿಗರಲ್ಲಿ ಕನ್ನಡ ಸಾಹಿತ್ಯ-ಸಂಸ್ಕೃತಿಗಳ ಬಗ್ಗೆ ಸರಿಯಾದ ತಿಳವಳಿಕೆಯನ್ನುಂಟು ಮಾಡುವದರಲ್ಲಿ ಬೇಂದ್ರೆಯವರೇ ಪುಣೆಯಲ್ಲಿ ಭಾಷಣಕ್ಕೆ ಕರೆದಾಗಲೆಲ್ಲಾ ಆ ವಿಷಯಗಳ ಬಗ್ಗೆ ಮಾತನಾಡುತ್ತಿದ್ದರು. ಪುಣೆಯಲ್ಲಿ ಪ್ರತಿ ಬೇಸಿಗೆಯಲ್ಲಿ ಒಂದು ತಿಂಗಳು ಪ್ರತಿ ಸಂಜೆ ವಸಂತ ವ್ಯಾಖ್ಯಾನ ಮಾಲೆ ಎನ್ನುವ ಒಂದು ಸಂಸ್ಥೆಯವರು ಭಾಷಣಗಳನ್ನು ಏರ್ಪಡಿಸುತ್ತಾರೆ. ಭಾಷಣಕಾರರನ್ನಾಗಿ ಪ್ರಸಿದ್ಧರಾದಂಥ ಮಹಾರಾಷ್ಟ್ರವರನ್ನು ಮತ್ತು ಹೊರಗಿನವರನ್ನು ಕರೆಯುತ್ತಾರೆ. ಬೇಂದ್ರೆಯವರನ್ನು ೨-೩ ಸಲ ಕರೆದಿದ್ದ . ಇಂತಹ ಸಂದರ್ಭದಲ್ಲಿ ಅವರ ವಿಷಯ ಕರ್ನಾಟಕಕ್ಕೆ ಸಂಬಂಧಪಟ್ಟದ್ದೆಂದು ಹೇಳಬೇಕಾಗಿಲ್ಲ. ಮಹಾರಾಷ್ಟ್ರ ಸಾಹಿತ್ಯ ಪರಿಷತ್ತಿನವರೂ ಅವರನ್ನು ಕರೆಯುತ್ತಿದ್ದರು. ಆಗಲೂ ಅ ವಿಷಯ ಅದೇನೆ. ಒಂದು ಸಲ ಅವರನ್ನು ವಾಮನ ಮಲ್ಹಾರ ಜೋಶಿಯನ್ನುವ ಮರಾಠಿ ಕಾದಂಬರಿಕಾರರ ಗ್ರಂಥಗಳ ಕುರಿತು ಮಾತನಾಡಲು ಕರೆದಿದ್ದರು. ವಾಸ್ತವವಾಗಿ ವಾ.ಮ.ಜೋಶಿಯವರಿಗೂ ಕರ್ನಾಟಕಕ್ಕೆ ಸಂಬಂಧವಿದ್ದ ಹಾಗೆ ಕಾಣಲಿಲ್ಲ. ಆದರೆ ಬೇಂದ್ರೆಯವರು ಇಂತಹ ಸಂಬಂಧವನ್ನು ಹುಡುಕಿ ತೆಗೆದರು. ವಾ.ಮ. ಜೋಶಿಯವರ ಅಣ್ಣನ ಮಗ ಪ್ರೊ. ಟಿ.ಎಂ.ಜೋಶಿಯನ್ನುವರು ಪುಣೆಯಲ್ಲಿದ್ದ ಕರ್ನಾಟಕದಿಂದ ಬಂದ ಶ್ರೀಮತಿ ಪದ್ಮನಿ ಅಯ್ಯಂಗಾರ್ ಎನ್ನುವ ಗಣಿತದ ಅಧ್ಯಾಪಿಕೆಯನ್ನು ಮದುವೆಯಾದರು. ಈ ರೀತಿಯಾಗಿ ವಾ.ಮ.ಜೋಶಿಯವರಿಗೂ ಕರ್ನಾಟಕಕ್ಕೂ ಸಂಬಂಧವಿದೆ ಎಂದು ಹೇಳಿ ತಮ್ಮ ಭಾಷಣವನ್ನು ಆರಂಭಿಸಿದರು.

ನನಗೆ ಪುಣೆಯಲ್ಲಿ ಕರ್ನಾಟಕಸ್ಥರ ಮೂರು ಸಂಘಗಳ ಸಂಬಂಧವಿತ್ತು. ಅವುಗಳ ಸಲುವಾಗಿ ನಾನು ಬೇರೆ ಬೇರೆ ಕಡೆ ಹೋಗಬೇಕಾಗಿತ್ತು. ಬೇಂದ್ರೆಯವರಿಗೆ

ಇದು ಗೊತ್ತಿತ್ತು. ನಿನ್ನ ಕೆಲಸದ ಸಲುವಾಗಿ ನಿನ್ನ ಜತೆಗೆ ನಾನು ಬಂದರೆ ಕೆಲಸಕ್ಕೆ ಸಹಾಯವಾಗುವ ಹಾಗಿದ್ದರೆ ನನ್ನನ್ನು ಕರೆದುಕೊಂಡು ಹೋಗಬಹುದೆಂದು ಹೇಳಿದ್ದರು. ಆಗ ರ್‍ಯಾಂಗ್ಲರ್ ಡಿ.ಸಿ.ಪಾವಟೆಯವರು ಮುಂಬಯಿ ಪ್ರಾಂತ್ಯದ ಶಿಕ್ಷಣ ಇಲಾಖೆಯ ಮುಖ್ಯಸ್ಥರಾಗಿದ್ದರು. ಅವರು ಪುಣೆಯ ಕರ್ನಾಟಕ ಸಂಘದ ಅಧ್ಯಕ್ಷರಾಗಿ ಇದ್ದರು. ನಾನು ಆ ಸಂಘದ ಕಾರ್ಯಕರ್ತರಲ್ಲಿ ಒಬ್ಬನಾಗಿದ್ದೆ. ಪುಣೆಯಲ್ಲಿ ರಾಸ್ತಾಪೇಟೆಯಲ್ಲಿ ಕನ್ನಡಿಗರು ಹೆಚ್ಚಾಗಿದ್ದರು. ಅವರಿಗೆ ಅಲ್ಲಿ ಒಂದು ಕನ್ನಡ ಶಾಲೆಯ ಅವಶ್ಯಕತೆಯಿತ್ತು. ಡಾ. ಪಾವಟೆಯವರಿಗೆ ಈ ವಿಷಯ ಗೊತ್ತಿತ್ತು ಅವರು ನನಗೆ ಹೇಳಿದರು. ನೀನೊಂದು ಅರ್ಜಿಯನ್ನು ಬರೆದುಕೊಂಡು ನನ್ನ ಕಛೇರಿಗೆ ಬಾ ಎಂದು. ನಾನು ಅವರಲ್ಲಿಗೆ ಹೋಗುವ ಮುಂಚೆ ಬೇಂದ್ರೆಯವರಿಗೆ ಈ ವಿಷಯ ಹ.ಳಿದೆ. ನಾನೂ ಬರುತ್ತೇನೆಂದರು. ನಾವಿಬ್ಬರೂ ಶಿಕ್ಷಣ ಖಾತೆಯ ಕಛೇರಿಗೆ ಹೋದೆವು. ನಮ್ಮಿಬ್ಬರ ಹೆಸರುಗಳನ್ನು ಬರೆದು ಡಾ. ಪಾವಟೆಯವರಿಗೆ ಕಳಿಸಿದೆವು. ನಾನು ಕೆಲಸದಲ್ಲಿದ್ದೇನೆ. ಸ್ವಲ್ಲಪ ಹೊತ್ತು ಕಾಯಿರೆಂದು ಅವರು ನಮಗೆ ಹೇಳಿ ಕಳಿಸಿದರು. ಸ್ವಲ್ಪ ಹೊತ್ತಾದ ಮೇಲೆ ಅವರೇ ಹೊರಗೆ ಬಂದು ಬೇಂದ್ರೆಯವರಿಗೆ ಕೈ ಮುಗಿದು "ಕ್ಷಮಿಸಿ ಬೇಕು ನಿಮ್ಮನ್ನು ಕಾಯಸಿ ಬಿಟ್ಟೆ". ನಿಮ್ಮಂಥವರನ್ನು ಕಾಯಿಸಬಾರದೆಂದು ಹೇಳಿ ; ನನಗೆ ಹೇಳಿದರು. ದೀಕ್ಷಿತರೇ ನಮ್ಮಿಬ್ಬರನ್ನು ಜನರುಮರೆಯುತ್ತಾರೆ. ಬೇಂದ್ರೆಯಂತಹ ಕವಿಗಳನ್ನು ಮರೆಯುವುದಿಲ್ಲ. ಅವರ ಕವಿತೆಗಳು ಶಾಶ್ವತವಾಗಿ ಉಳಿಯುತ್ತವೆಂದರು. ನಂತರ ನಮ್ಮಿಬ್ಬರನ್ನು ಒಳಗೆ ಕರೆದು ನನ್ನಿಂದ ಅರ್ಜಿಯನ್ನು ತೆಗೆದುಕೊಂಡು ರಾಸ್ತಾಪೇಟೆಯಲ್ಲಿ ಕನ್ನಡ ಶಾಲೆಯನ್ನು ತೆಗೆಯಬೇಕೆಂದು ಆಜ್ಞಾಪಿಸಿದರು. ಆ ಶಾಲೆ ಇವತ್ತಿಗೂ ಸುಸ್ಥಿತಿಯಲ್ಲಿದೆಯೆಂದು ಹೇಳಲು ನನಗೆ ಹೆಮ್ಮೆಯೆನಿಸುತ್ತದೆ.

ಶ್ರೀಮತಿ ಜಯವಂತೀ ಹಿರೇಬೆಟ್ ಎನ್ನುವರು ಪುಣೆಯ ಕರ್ನಾಟಕ ಸಂಘದಲ್ಲಿ ಬೇಂದ್ರೆಯವರ ಮತ್ತು ನರಸಿಂಹ ಸ್ವಾಮಿಯವರ ಕವನಗಳನ್ನು ಮಧುರವಾಗಿ ಹಾಡುತ್ತಿದ್ದರು. ಅವರು ಅವರ ಮನೆಗೆ ಕರೆದರು ನಾನು ಬೇಂದ್ರೆಯವರನ್ನು ಅವರ ಮನೆಗೆ ಕರೆದುಕೊಂಡು ಹೋದೆ. ಆಗ ಜಯವಂತಿಯವರು ಬೇಂದ್ರೆಯವರಿಗೆ ಹೇಳಿದರು. "ನಾನು ನನ್ನ ಕಾವ್ಯಗಾಯನವನ್ನು ಇನ್ನು ಚೆನ್ನಾಗಿ ಆಗುವ ಹಾಗೆ ಮಾಡಿಕೊಳ್ಳಬೇಕೆಂದಿದ್ದೇನೆ. ಅದಕ್ಕೆ ನಿಮ್ಮ ಸಲಹೆ ಏನು" ಎಂದು ಕೇಳಿದರು. ನೀವು ಈ ವಿಷಯದಲ್ಲಿ ಶ್ರೀ ಭೀಮ್ಸೇನ್ ಜೋಶಿಯವರನ್ನು ಕೇಳಿ ಎಂದು ಬೇಂದ್ರೆಯವರು ಹೇಳಿ ನನಗೆ ಹೇಳಿದರು ನೀನು ಇವರಿಬ್ಬರ ಭೇಟಿ ಮಾಡಿಸೆಂದರು. ಈ ಭೇಟಿ ಯಾದಾಗ ಭೀಮ್ಸೇನ್ ಜೋಶಿಯವರು ಜಯಂತಿ ಅವರಿಗೆ ಏನು ಹೇಳಿದರೆಂದರೆ. ಗಾಯನದಲ್ಲಿ ಕಾವ್ಯಗಾಯನವೆನ್ನುವ ಒಂದು

ವಿಭಾಗವಿಲ್ಲ. ಇರುವುದು ಶಾಸ್ತ್ರಿಯ ಗಾಯನ ಒಂದೇ ನೀವು ಶಾಸ್ತ್ರಿಯ ಗಾಯನವನ್ನು ಅಭ್ಯಾಸ ಮಾಡಿ, ನಿಮ್ಮ ಕಾವ್ಯಗಾಯನ ತನ್ನಷ್ಟಕ್ಕೆ ತಾನೇ ಸುಧಾರಿಸುತೆಂದರು. ಇತ್ತೀಚಿಗೆ ಜಯಂತೀ ಅವರು ಕಾವ್ಯಗಾಯನ ಮಾಡುವವರಲ್ಲಿ ಮೊದಲಿಗರೆಂದು ಅವರಿಗೆ ಲಘು ಸಂಗೀತಕ್ಕೆ ಕರ್ನಾಟಕ ಸರ್ಕಾರದವರು ಕೊಡುವ ಶಿಶುನಾಳ್ ಶರೀಫ್ ಪ್ರಶಸ್ತಿ ಸಿಕ್ಕಿತು. ಅದನ್ನು ಸ್ವೀಕರಿಸುವಾಗ ಪುಣೆ ಕರ್ನಾಟಕ ಸಂಘದಲ್ಲಿ ತಮಗೆ ದೊರೆತ ಪ್ರೋತ್ಸಾಹವನ್ನು ಅವರು ನೆನಸಿದರು.

ಪುಣೆಗೆ ಬೇಂದ್ರೆಯವರು ಬಂದು ಹೋಗುತ್ತಿದ್ದಾಗ ಅವರನ್ನು ಬಲ್ಲವರು ತಮ್ಮ ಸಮಸ್ಯೆಗಳನ್ನು ಅವರೊಡನಡ ಚರ್ಚಿಸಿ. ಅವರಿಂದ ಮಾರ್ಗದರ್ಶನವನ್ನು ಪಡೆಯುತ್ತಿದ್ದರು. ಇಂತಹ ಸಮಸ್ಯೆಗಳಲ್ಲಿ ಮದುವೆಗೆ ಸಂಬಂಧಪಟ್ಟವೂ ಇರುತ್ತಿದ್ದವು. ಅಂಥವನ್ನು ಪರಿಹರಿಸಿದಕ್ಕೆ ಮೂರು ಉದಾಹರಣೆಗಳು ನನಗೆ ನೆನಪಿದೆ. ಪುಣೆಯ ಡೆಕ್ಕನ್ ಕಾಲೇಜಿನಲ್ಲಿ ಚೈತನ್ಯ ದೇವ ಎಂಬ ಒಬ್ಬ ಮೈಸೂರುಯುವಕರು ಭಾಷಾಶಾಸ್ತ್ರ ವಿಭಾಗದಲ್ಲಿದ್ದರು. ಅವರಿಗೆ ಪಂಡರಪುರದ ಒಂದು ಹೆಣ್ಣು ಬಂತು. ಅವರು ಈ ಮದುವೆ ಸಂಬಂಧ ಕುರಿತು ಬೇದ್ರೆಯವರ ಸಮಾಲೋಚನೆ ಮಾಡಿದರು. ಬೇಂದ್ರೆಯವರು ಹೆಣ್ಣಿನ ಮನೆಯವರ ಜತೆ ಮಾತನಾಡಿ ಚೈತನ್ಯ ದೇವರು ಈ ಕನ್ಯೆಯನ್ನು ಮದುವೆಯಾಗಬಹುದೆಂದು ಹೇಳಿದರು. ಮದುವೆಯು ಆಯಿತು. ಇನ್ನೊಬ್ಬ ಮೈಸೂರು ಕಡೆಯಿಂದ ಬಂದ ಯುವಕರು ವಜ್ರಂ ಎನ್ನುವವರು. ಇವರು ಪುಣೆಯಲ್ಲಿ ಕಂಟ್ರಾಕ್ಟ್ ಮಾಡುತ್ತಿದದ್ದರು. ಒಳ್ಳೆಯ ಹೆಸರೆಲು ಮಾಡಿದ್ದರು. ಅವರಿಗೆ ಸಾಹಿತ್ಯದಲ್ಲಿ ಅಭಿರುಚಿ ಇತ್ತು. ಬೇಂದ್ರೆಯವರನ್ನು ತಮ್ಮ ಮನೆಗೆ ಕರೆಯುತ್ತಿದ್ದರು. ಅವರಿಗೆ ಆ ಕಡೆಯ ಹೆಣ್ಣನ್ನು ಮದುವೆ ಮಾಡಿಕೊಳ್ಳಬೇಕೆಂದಿತ್ತು. ಅದನ್ನು ಅವರು ಬೇಂದ್ರೆಯವರ ಜತೆಗೆ ಪ್ರಸ್ತಾಪ ಮಾಡಿದರು. ಅದೇ ವೇಳೆಗೆ ಬೇಂದ್ರೆಯವರ ಮಿತ್ರರು ಪ್ರಸಿದ್ಧ ಕೊಂಕಣಿ ರವಿ ಬೋರ್‌ಕರ್ ಇವರು ತಮ್ಮ ಮಗಳಿಗೆ ವರವನ್ನು ಹುಡುಕುತ್ತಿದ್ದರು. ಇದು ಬೇಂದ್ರೆಯವರಿಗೆ ಗೊತ್ತಿತ್ತು. ಬೇಂದ್ರೆಯವರ ಮಧ್ಯಸ್ತಿಕೆಯಿಂದ ಕೊಂಕಣಿ ಬೋರ್‌ಕರರ ಮಗಳು ಕನ್ನಡದ ವಜ್ರಂ ಇವರನ್ನ ಮದುವೆಯಾದಳು.

ಮೂರನೆ ಮದುವೆ ಬಹಳ ಅಪರೂಪದ್ದು. ವಧು-ವರರಿಬ್ಬರೂ ಮಹಾರಾಷ್ಟ್ರದವರು. ವರ ಪೇಠೆಯವರು ಅರ್ಥಶಾಸ್ತ್ರದಲ್ಲಿ ಎಂ. ಎ. ಆಗಿದ್ದರು. ವಧುವೂ ಅಷ್ಟೆ ಕಲಿತವರು. ಇಬ್ಬರೂ ಎಲ್ಲಾ ವಿಧದಲ್ಲಿಯೂ ಅನುರೂಪರಾಗಿದ್ದರು. ಅಂಥ ವರಸಾಮ್ಯವನ್ನು ನಾನು ಎಲ್ಲಿಯೂ ನೋಡಿಲ್ಲ. ಇಬ್ಬರೂ ಆದರೆ ಕುಳ್ಳರು. ಇಬ್ಬರೂಸ್ಫುರದ್ರೂಪಿಗಳು ಇಬ್ಬರು ಒಬ್ಬರಿಗೊಬ್ಬರು ಹೇಳಿ ಮಾಡಿಸಿದ ಹಾಗಿದ್ದರು. ಸ್ವಭಾವದಲ್ಲಿಯೂ ಒಂದೇ ಸಮ. ಬೇಗನೆ ನಿರ್ಣಯಕ್ಕೆ ಬರುವವರಲ್ಲ. ನಿರ್ಣಯಕ್ಕೆ

ಬರಲಿಕ್ಕೆ ಬಹಳ ಆಲೋಚನೆ ಮಾಡುತ್ತಿದ್ದರು. ತಾವು ಮದುವೆ ಮಾಡಿಕೊಂಡರೆ ಹೇಗೆ, ಮಾಡಿಕೊಳ್ಳದಿದ್ದರೆ ಹೇಗೆ ಎನ್ನುವ ಪ್ರಶ್ನೆ ಅವರಿಬ್ಬರನ್ನು ಕಾಡುತ್ತಿತ್ತೆಂದು ಕಾಣುತ್ತದೆ. ಇವರಿಗೂ ಬೇಂದ್ರೆಯವರಿಗೂ ಹೇಗೆ ಪರಿಚಯವಾಯಿತು ನನಗೆ ಗೊತ್ತಿಲ್ಲ. ತಮ್ಮ ಮದುವೆಯ ವಿಷಯದಲ್ಲಿ ಮಾರ್ಗದರ್ಶನ ಪಡೆಯಲಿಕ್ಕೆ ಬೇಂದ್ರೆಯವರ ಭೇಟಿಗೆ ವಿಠಲರಾಯರ ಮನೆಗೆ ಬಂದರು. ಅದರ ಹಿಂದಿನ ದಿನ ಬೇಂದ್ರೆಯವರಿಗೆ ಇನ್ನೊಂದು ಕಾರ್ಯಕ್ರಮವನ್ನು ಅಂದಿಗೆ ಗೊತ್ತು ಮಾಡಿದ್ದೆ. ಅದೇನೆಂದರೆ ಒಂದು ಸಿನಿಮಾ ಥೇಟರಿನಲ್ಲಿ Kamlet ಸಿನಿಮಾ ನಡೆಯುತ್ತಿದೆ. Hamletನ ಪಾರ್ಟು ಮಾಡಿದವರು ಪ್ರಸಿದ್ಧ Shakespear ನಟ ಅದ್ದರಿಂದ ಅದನ್ನು ನೋಡಬೇಕು. ನೀವು ಬರುತ್ತೀರಾ? ಎಂದು ಕೇಳಿದೆ. ಅವರು ಬರುತ್ತೇನೆಂದಿದ್ದರು. ನಾನು ಅಂದು ಬೆಳಿಗ್ಗೆ ಥೇಟರಿಗೆ ಹೋಗಿ ಎರಡು ಟಿಕೆಟ್‌ಗಳನ್ನು ಕೊಂಡೆ. ಸಿನಿಮಾ ಆರಂಭವಾಗುವ ಅರ್ಧಗಂಟೆ ಮುಂಚೆ ಒಂದು ಟಾಂಗಾ ಗುರ್ತು ಮಾಡಿ ವಿಠಲರಾಯರ ಮನೆಗೆ ಬಂದೆ. ಒಳಗಡೆ ಅವರ ಮನೆಗೆ ಹೋದೆ. ಅಲ್ಲಿ ಬೇಂದ್ರೆಯವರು, ಪೇಠೆ ಮತ್ತು ಅವನ ಪ್ರೇಯಸಿ ಅವರ ಎದುರಿಗೆ ಕೂತಿದ್ದರು. ಮದುವೆ ವಿಷಯ ಮಾತನಾಡುತ್ತಿದ್ದರೆಂದು ಕಾಣುತ್ತದೆ. ನಾನು ಹೋಗಿ ಬೇಂದ್ರೆಯವರಿಗೆ ಹೇಳಿದೆ. ಟಾಂಗಾ ತಂದೇನಿ Hamlet ಸಿನಿಮಾ ನೋಡಲಿಕ್ಕೆ ವೇಳೆ ಆಗಿದೆ; ಎಂದೆ. ಬೇಂದ್ರೆಯವರ ಉತ್ತರವನ್ನು ನಾನು ನಿರೀಕ್ಷಿಸಿರಲಿಲ್ಲ. ಆದರೆ ಅದನ್ನು ಮರೆಯುವ ಹಾಗಿಲ್ಲ. ನಾನು ಸಿನಿಮಾಕ್ಕೆ ಬರುವುದಿಲ್ಲ ಇಲ್ಲಿಯೆ ನನ್ನೆದುರಿಗೆ ಜೀವಂತ Hamlet ಇರಬೇಕಾದರೆ ನಿಮ್ಮ Hamlet ಸಿನಿಮಾ ಯಾರಿಗೆ ಬೇಕೆಂದರು. ನನಗೆ ಬಹಳ ನಿರಾಸೆಯಾಯಿತು. ಆದರೆ ವಿಧಿ ಇಲ್ಲವೆಂದು ಸಿನಿಮಾ ಕಾರ್ಯಕ್ರಮವನ್ನು ಕೈ ಬಿಡಬೇಕಾಯಿತು.

ಮೇಲಿನ ಉದಾಹರಣೆಯಿಂದ ಬೇಂದ್ರೆಯವರು ಎಲ್ಲರ ಹಾಗೆ ಅಲ್ಲ. ಅವರ ಸ್ವಭಾವ ಮತ್ತು ವ್ಯಕ್ತಿತ್ವಗಳು ವಿಶಿಷ್ಟವಾಗಿದೆ ಎಂದು ತಿಳಿಯಬಹುದು. ಅವುಗಳ ಬಗ್ಗೆ ನನಗೆ ತಿಳಿದಮಟ್ಟಿಗೆ ನಾಲ್ಕು ಮಾತು ಅವಶ್ಯವೆಂದು ಹೇಳುತ್ತಿದ್ದೇನೆ. ಅವರ ಸ್ವಭಾವದಲ್ಲಿ ನನಗೆ ಬಹಳ ವಿಶೇಷವೆಂದು ಕಂಡದ್ದು ಅವರ ಸ್ವಾಭಿಮಾನ. ಯಾರಿಗೂ ಜೀ ಅನ್ನುವವರಲ್ಲ. ಅವರು ನಿರ್ಭೀತರಾದವರಾಗಿದ್ದರು. ಯಾರಿಗೂ ಹೆದರುವವರಲ್ಲ. ಅವರನ್ನು ಕೇಳಿದವರಿಗೆ ಅಲ್ಲಿಂದಲ್ಲೆ ಉತ್ತರವನ್ನು ಕೊಡಲು ಹಿಂದೆ ಮುಂದೆ ನೋಡುತ್ತಿರಲಿಲ್ಲ. ಒಂದು ಸಲ ಇವರ ಭಾಷಣಕ್ಕೆ ಒಬ್ಬ ಮಠದ ಸ್ವಾಮಿಗಳು ಅಧ್ಯಕ್ಷರಾಗಿದ್ದರು. ಬೇಂದ್ರೆಯವರನ್ನು ಭಾಷಣ ಆರಂಭಿಸುವ ಮುನ್ನ ಸ್ವಾಮಿಗಳು ಹೇಳಿದರು. ಈಗ ಬೇಂದ್ರೆಯವರು ಮಾತಾಡುತ್ತಾರೆ. ಅವರ ಮಾತಿನಲ್ಲಿ ಎಲ್ಲಾದರು ತಪ್ಪಿದ್ದರೆ ನನ್ನ ಭಾಷಣದಲ್ಲಿ ಅವರನ್ನು ತಿದ್ದುತ್ತೇನೆಂದರು. ಬೇಂದ್ರೆಯವರು ಅದಕ್ಕೆ ಉತ್ತರವಾಗಿ ಹೇಳಿದರು. ನಾನು ತಪ್ಪು ಮಾಡಿದರೆ ಅವರು ತಿದ್ದುತ್ತೇನೆಂದರು,

ಅವರು ತಪ್ಪು ಮಾಡಿದರೆ ನನಗೆ ಇಲ್ಲಿ ತಿದ್ದಲಿಕ್ಕೆ ಆಗುವುದಿಲ್ಲ. ಯಾಕೆಂದರೆ ಅವರದೇ ಕೊನೆಯ ಭಾಷಣ. ಆದರೂ ಬೇರೆ ಇನ್ನೆಲ್ಲಿಯಾದರೂ ತಿದ್ದುತ್ತೇನೆಂದರು.

ಇನ್ನೊಂದು ಸಲ ಅವರು ಮಹಾರಾಷ್ಟ್ರದಲ್ಲಿ ಒಂದು ಕಡೆ ಮರಾಠಿಯಲ್ಲಿ ಮಾತನಾಡಬೇಕಾಗಿತ್ತು. ಪ್ರಾಸ್ತಾವಿಕ ಭಾಷಣವನ್ನು ಮಾಡಿದವರು ಹೇಳಿದರು. ಬೇಂದ್ರೆಯವರು ಕರ್ನಾಟಕದಿಂದ ಬಂದರೂ ಮರಾಠಿಯನ್ನು ಚೆನ್ನಾಗಿ ಮಾತನಾಡಬಲ್ಲರೆಂದರು. ಬೇಂದ್ರೆಯವರ ಉತ್ತರ ಹೀಗಿತ್ತು. ನಾನು ಮರಾಠಿಯನ್ನು ಚೆನ್ನಾಗಿ ಮಾತನಾಡುವುದರಲ್ಲಿ ಏನು ಆಶ್ಚರ್ಯ ? ನಾನು ನನ್ನ ಮರಾಠಿಯನ್ನು ಬಜಾರಿನಲ್ಲಿ ಕೊಂಡಕೊಂಡಿಲ್ಲ. ನನ್ನ ತಾಯಿಯ ತೊಡೆಯ ಮೇಲೆ ಕಲಿತ್ತಿದ್ದೇನೆಂದರು.

ಕೆಲವರು ತಮ್ಮ ಅಂತಸ್ತಿನವರ ಜೊತೆಗೆ ಸರಿಯಾಗಿ ವರ್ತಿಸುತ್ತಾರೆ. ಇತರರ ಜೊತೆಗೆ ಅಷ್ಟು ಸ್ವತಂತ್ರವಾಗಿ ಮಾತನಾಡುವುದಿಲ್ಲ. ಬೇಂದ್ರೆಯವರು ಹಾಗಲ್ಲ. ಎಲ್ಲಾ ತರಹದ ಗುಂಪಿನ ಜನರಲ್ಲಿಯೂ ನಿಸ್ಸಂಕೋಚವಾಗಿ ವ್ಯವಹರಿಸುತ್ತಿದ್ದರು. ಚಿಕ್ಕವರು ದೊಡ್ಡವರು ಹೆಂಗಸರು–ಗಂಡಸರು, ಅಶಿಕ್ಷಿತರು–ಸುಶಿಕ್ಷಿತರು ಯಾರು ಯಾರ ಜೊತೆಗೆ ಹೇಗೆ ಮಾತನಾಡಬೇಕು ಹಾಗೆಯೆ ಮಾತಾನಾಡುತ್ತಿದ್ದರು. ವಿಠಲರಾಯರ ಮನೆಯಲ್ಲಿ ೧೦–೧೨ ವರ್ಷದ ಅವರ ಮಗ ಉಪೇಂದ್ರನ ಜೊತೆಗೆ ಆಟವಾಡುತ್ತಿದ್ದರು. ಅವನಿಗೆ ತಮಾಷೆ ಆಟಗಳನ್ನು ತೋರಿಸಿ ಅವನನ್ನು ಚಕಿತನನ್ನಾಗಿ ಮಾಡುತ್ತಿದ್ದರು. ಅವನಿಗೆ ಬೇಂದ್ರೆ ಕಾಕಾ ಅಂದರೆ ಪ್ರಾಣ. ಉಪಯುಕ್ತವಾಗುವ ವಿಷಯಗಳನ್ನು ಹೇಳುತ್ತಿದ್ದರು. ನನ್ನ ಸಂಶೋಧನೆಯ ವಿಷಯವನ್ನು ತಿಳಿದುಕೊಂಡು ನಾನು ಅವರನ್ನು ಕಂಡ ಕೂಡಲೆ ನನ್ನ ವಿಷಯದ ಮೇಲೆ ಹೊಸ ಬೆಳಕನ್ನು ಚೆಲ್ಲುತಿದ್ದರು. ನನಗೆ ಒಂದು ಶಬ್ದದ ಅರ್ಥ ಸಿಗಲೊಲ್ಲದು. ಬೇಂದ್ರೆಯವರು ಹೇಳಿದರು, ಅದು ವೇದದಲ್ಲಿ ಬರುತ್ತದೆ ನೋಡು ಎಂದರು. ಅವರ ಇಂದಿನ ಸಂಶೋಧನೆಯೆಂದರೆ ಆ ಶಬ್ದದ ಅಥವಾ ಇನ್ಯಾವದಾದರ ವಿಷಯಕ್ಕೆ ಮೂಲಕ್ಕೆ ಹೋಗಬೇಕೆನ್ನುತಿದ್ದರು.

ಅವರ ಬುದ್ಧಿಶಕ್ತಿ ಅಥವಾ ಜ್ಞಾನದ ತಾಖತ್ತು ಅಪ್ರತಿಮವಾಗಿತ್ತು. ಅನೇಕ ವಿಷಯಗಳನ್ನು ಎಲ್ಲರಿಗಿಂತ ಬೇಗ ತಿಳಿದುಕೊಳ್ಳುವ ಶಕ್ತಿಯನ್ನು ಅವರು ಸ್ವಾಧ್ಯಾಯದಿಂದ ಕರಗತ ಮಾಡಿಕೊಂಡಿದ್ದರು. ಭಾರತೀಯ ಸಂಸ್ಕೃತಿಯ ಯಾವ ಅಂಶವಾದರೂ ಅವರಿಗಿಷ್ಟವಾದ ವಿಷಯವೇ. ಅದೇ ಅವರ ಅಳತೆ ಗೋಲು ಕೂಡ. ಅವರ ಪ್ರಕಾರ ಭಾರತೀಯ ಸಂಸ್ಕೃತಿಯು ಎಲ್ಲಾ ಕಾಲಕ್ಕೂ ಜನರಿಗೆ ಉಪಯುಕ್ತವಾದದ್ದು ಮತ್ತು ಅವಶ್ಯವಾದದ್ದು. ತಮ್ಮ ಏಳ್ಗೆಗೆ ಮಾತ್ರ ನಮ್ಮ ಹಿರಿಯರು ಈ ಆಸ್ತಿಯನ್ನು ಮಾಡಿಕೊಳ್ಳಲಿಲ್ಲ. ಪ್ರಪಂಚ ಬದುಕಬೇಕೆಂದು ಮಾಡಿದರೆನ್ನುತ್ತಾರೆ.

ಈ ಅಳತೆ ಗೋಲಿನಿಂದ ಅವರು ಎಲ್ಲವನ್ನೂ, ಮತ್ತು ಎಲ್ಲರನ್ನೂ ಅಳೆಯುತ್ತಿದ್ದರು. ಒಬ್ಬ ವ್ಯಕ್ತಿಯನ್ನು ನೋಡಿ ಅವನ ಜತೆಗೆ ಸ್ವಲ್ಪ ಮಾತನಾಡಿದ ಕೂಡಲೆ ಅವನ ಯೋಗ್ಯತೆಯನ್ನು ತಿಳಿದುಕೊಳ್ಳಬಲ್ಲರಾಗಿದ್ದರು. ಅದೇ ರೀತಿ ಯಾವ ಪುಸ್ತಕವನ್ನು ಕೊಟ್ಟರೂ ಅದನ್ನು ಅಲ್ಲಿ ಇಲ್ಲಿ ನೋಡಿ ಅದರ ಮೌಲ್ಯಮಾಪನ ಮಾಡಬಲ್ಲವರಾಗಿದ್ದರು. ಅವರನ್ನು ಚೆನ್ನಾಗಿ ಬಲ್ಲ ಶ್ರೀಮತಿ ಮುಕ್ತಾಬಾಯಿ ದೀಕ್ಷಿತರು ಬೇಂದ್ರೆಯವರ ಬಗ್ಗೆ ಬರೆದ ತಮ್ಮ ಲೇಖನದಲ್ಲಿ ಈ ವಿಷಯವನ್ನು ಪ್ರಸ್ತಾಪಿಸಿದ್ದಾರೆ.

ಬೇಂದ್ರೆ ಅವರಿಗೆ ಮಾರ್ಗದರ್ಶಿಗಳೆಂದರೆ ಮಹರ್ಷಿ ಅರವಿಂದರು, ಶ್ರೀಮಾತಾ, ಸತ್ಯಸಾಯಿ ಬಾಬಾ, ಜಿಡ್ಡು ಕೃಷ್ಣ ಮೂರ್ತಿ, ನಿಂಬಾಳದ ರಾನಡೇ ಮಹಾರಾಜರು ಮತ್ತು ಪುಣೆಯ ಗುಲವಣಿ ಮಹಾರಾಜರು. ಅನೇಕರಿಗೆ ಇರುವ ಹಾಗೆ ಅವರಿಗೆ ಪರದೇಶದ ಮೋಹ ಎಳ್ಳಷ್ಟೂ ಇರಲಿಲ್ಲ. ಇಲ್ಲಿಯೆ ನನ್ನ ಮಾತು ಯಾರು ಕೇಳುವುದಿಲ್ಲ. ಅಲ್ಲಿಗೆ ಹೋಗಿ ನಾನು ಮಾಡುವುದು ಏನಿದೆ ? ಎಂದು ಕೇಳುತ್ತಿದ್ದರು.

೧೯೫೫ರಲ್ಲಿ ನಾನು ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ನೇಮಕಗೊಂಡೆ ಬೇಂದ್ರೆಯವರು ೧೯೫೬ರಲ್ಲಿ ಸೊಲ್ಲಾಪುರದ ಕಾಲೇಜಿನಿಂದ ನಿವೃತ್ತರಾಗಿ ತಮ್ಮ ಮನೆ ಶ್ರೀಮಾತಾದಲ್ಲಿ ನೆಲೆಸಲು ಬಂದರು. ನಾನು ಅವರು ಧಾರವಾಡದಲ್ಲಿಯೇ ಇದ್ದರೂ ಅವರು ಸೊಲ್ಲಾಪುರದಿಂದ ಪುಣೆಗೆ ಬಂದಾಗ ಭೇಟಿಯಾಗುತ್ತಿದ್ದ ಹಾಗೆ ಅವರ ಭೇಟಿಯಾಗಲು ಸಾಧ್ಯವಾಗುತ್ತಿರಲಿಲ್ಲ. ಅವರು ಇಲ್ಲಿಗೆ ಬಂದಕೂಡಲೆ ಕೆಲವು ಸಲ ಭೇಟಿ ಮಾಡಿದ್ದೆ. ಆಗ ಅವರು ವಿಜ್ಞಾನದ ಅಭ್ಯಾಸದಲ್ಲಿ ನಿರತರಾಗಿದ್ದರು. ರಾಸಾಯನ ಶಾಸ್ತ್ರಕ್ಕೆ ಸಂಬಂಧಪಟ್ಟಂತೆ Atomic Weight ಬಗ್ಗೆ ಚಾರ್ಟು ತಯಾರು ಮಾಡಿದ್ದರು. ಅದಕ್ಕಿಂತ ಹೆಚ್ಚಾಗಿ ಸಂಖ್ಯಾ ಶಾಸ್ತ್ರದಲ್ಲಿ ಮಗ್ನರಾಗಿದ್ದರು. ನಿಮ್ಮ ವಿಶ್ವವಿದ್ಯಾಲಯದ ವಿಜ್ಞಾನ ವಿಭಾಗದ ಪ್ರಾಧ್ಯಾಪಕರ ಕಡೆ ಕರೆದುಕೊಂಡು ಹೋಗೆಂದರು. ಹಾಗೆ ಮಾಡಿದೆ. ಆದರೆ ಅವರು ಯಾರಿಗೂ ಇವರ ಸಂಶೋಧನೆ ಅರ್ಥವಾಗಲಿಲ್ಲ.

ಹಾಗೇನೆ ಯಾವದಾದರೂ ದೊಡ್ಡ ವಿಜ್ಞಾನಿಗೆ ತಮ್ಮ ಸಂಖ್ಯಾಶಾಸ್ತ್ರದ ಸಂಶೋಧನೆಯನ್ನು ತೋರಿಸಿ ಅವರ ಮುಖಾಂತರ ಇತರರಿಗೆ ಅದನ್ನು ತಿಳಿಯಪಡಿಸಬೇಕೆಂದೆನ್ನುತ್ತಿದ್ದರು. ಆಗ ಅವರಿಗೆ ಅವರ ಸ್ನೇಹ ಶ್ರೀ ನಿಟ್ಟೂರು ಶ್ರೀನಿವಾಸ ರಾಯರ ಅಳಿಯ ಸುಪ್ರಸಿದ್ಧ ಭೌತಶಾಸ್ತ್ರ ಮತ್ತು ಗಣಿತಜ್ಞ ಡಾ॥ ಈ. ಸಿ. ಜಿ. ಸುದರ್ಶನ ಅವರು ಈ ಕೆಲಸದಲ್ಲಿ ನೆರವಾಗಬಹುದೆನ್ನಿಸಿತು.

ಅವರನ್ನು ಕರೆಸುವಾಗ ನಾನು ಸಹಾಯ ಮಾಡಿದೆ. ಮಾವ ಅಳಿಯ

ಇಬ್ಬರೂ ಧಾರವಾಡಕ್ಕೆ ಬಂದರು. ದುರ್ದೈವದಿಂದ ಆಗ ಬೇಂದ್ರೆಯವರು ತಾವರಗೇರಿ ದಾವಖಾನೆಯಲ್ಲಿ ಇರಬೇಕಾಗಿ ಬಂತು. ಯಾರು ಹೇಳಿದರೂ ಕೇಳದೆ ಬೇಂದ್ರೆಯವರು ಡಾ॥ ಸುದರ್ಶನ ಜತೆಗೆ ಚರ್ಚೆ ಮಾಡುತ್ತಿದ್ದರು. ಈ ಚರ್ಚೆಯ ವರದಿಗಳನ್ನು ಪ್ರತಿ ದಿನ ಡಾ॥ ಕೆ. ರಾಘವೇಂದ್ರ ರಾಯರು ಮತ್ತು ಕೆ. ಎಸ್. ಶರ್ಮಾ ಇವರು ಸಂಯುಕ್ತ ಕರ್ನಾಟಕಕ್ಕೆ ಕಳಿಸುತ್ತಿದ್ದರು. ಈ ವರದಿಗಳನ್ನು ಬಿಟ್ಟರೆ ಬೇಂದ್ರೆಯವರ ಸಂಖ್ಯಾ ಶಾಸ್ತ್ರದಲ್ಲಿಯ ಶೋಧನೆಯ ಬಗ್ಗೆ ಯಾರು ಎಲ್ಲಿಯೂ ಅದುವರೆಗೆ ಬರೆದಿರಲಿಲ್ಲ. ತೀರ ಇತ್ತೀಚೆಗೆ ಅವರ ಗಣಿತದಲ್ಲಿಯ ಸಂಶೋಧನೆಗೆ ಒಂದು ಅರ್ಥವನ್ನು ಕೊಡುವ ಪ್ರಯತ್ನವನ್ನು ಅವರ ಮೊಮ್ಮಗ ಶ್ರೀ ಪ್ರಭಾಕರ ಬೇಂದ್ರೆಯವರು ಮಾಡುತ್ತಿದ್ದಾರೆಂದು ಕೇಳಿ ಬಹಳ ಸಂತಸವಾಯಿತು. ನಾನು ಬೇಂದ್ರೆಯವರನ್ನು ಕೊನೆಯದಾಗಿ ಕಂಡಿದ್ದು ತಾವರಗೇರಿ ದವಾಖಾನೆಯಲ್ಲಿ.

ಭಾರದಲ್ಲಿಯ ಅತ್ಯಂತ ಶ್ರೇಷ್ಠ ಗಣಿತಜ್ಞ ಶ್ರೀನಿವಾಸ ರಾಮಾನುಜಂ ಅವರ ಸಂಶೋಧನೆಯನ್ನು ಅವರಿದ್ದಾಗ ವಿದ್ವಾಂಸರು ಎಷ್ಟರ ಮಟ್ಟಿಗೆ ತಿಳಿದುಕೊಳ್ಳಬೇಕು, ಅಷ್ಟರ ಮಟ್ಟಿಗೆ ತಿಳಿದುಕೊಳ್ಳಲಿಲ್ಲ. ಅವರ ನಿಧನದ ನಂತರ ಈಚೆಗೆ ಆಕೆಲಸ ಇಂಗ್ಲೆಂಡಿನಲ್ಲಿ ನಡೆದಿದೆ. ಬೇಂದ್ರೆಯವರ ಸಂಶೋಧನೆಯೂ ಹೀಗೇ ಆಗಬಹುದೆಂದು ಕಾಣುತ್ತದೆ.

■

ಟಿಪ್ಪಣಿ : ಸಂಖ್ಯಾಶಾಸ್ತ್ರದ ಬೇಂದ್ರೆ ಸಂಶೋಧನೆಯನ್ನು ಅರ್ಥಮಾಡಿಕೊಂಡಿದ್ದ ಇನ್ನೊಬ್ಬರು ಪತ್ರಕರ್ತ ಪಾ.ವೆಂ. ಆಚಾರ್ಯರು

3

ವಿ. ಸೀತಾರಾಮಯ್ಯ

ವಿ.ಸೀ. ಅವರ ಹೆಸರನ್ನು ನಾನು ಮೊದಲು ಕೇಳಿದ್ದು ೧೯೩೦-೩೧ ರಲ್ಲಿ. ಆಗ ನಾನು ಮೈಸೂರಿನ ಮಹಾರಾಜಾ ಕಾಲೇಜಿನಲ್ಲಿ ಬಿ.ಎ. ಆನರ್ಸ್ ತರಗತಿಯಲ್ಲಿ ಓದುತ್ತಿದ್ದೆ. ನನ್ನ ಎರಡನೆ ಭಾಷೆ ಸಂಸ್ಕೃತವಾಗಿತ್ತು. ಕನ್ನಡವನ್ನು ತೆಗೆದುಕೊಂಡ ನನ್ನ ಸಹಪಾಠಿಗಳಿಗೆ ವಿ.ಸೀ. ಅವರ ಪಂಪಾಯಾತ್ರೆ ಪಠ್ಯಪುಸ್ತಕವಾಗಿತ್ತು. ಅವರು ಪಂಪಾಯಾತ್ರೆಯಲ್ಲಿಯ ಸನ್ನಿವೇಶಗಳನ್ನು ನೆನೆಸಿಕೊಂಡು ನಕ್ಕು ನಕ್ಕು ನನ್ನನ್ನೂ ನಗಿಸುತ್ತಿದ್ದರು. ನಾನು ಆ ಪುಸ್ತಕವನ್ನು ಓದಬೇಕೆಂಬ ಕುತೂಹಲವನ್ನು ನನ್ನಲ್ಲಿ ಹುಟ್ಟಿಸಿದರು. ನಾನು ಅದನ್ನು ಓದಿ ಅದರ ಕನ್ನಡವನ್ನೂ ಹಾಸ್ಯ ಸನ್ನಿವೇಶಗಳನ್ನೂ ನನ್ನ ಸಹಪಾಠಿಗಳಷ್ಟೇ ಮೆಚ್ಚಿದೆ. ಆಗ ವಿ.ಸೀ. ಅವರು ಬೆಂಗಳೂರು ಇಂಟರ್‌ಮೀಡಿಯೆಟ್ ಕಾಲೇಜಿನಲ್ಲಿ ಉಪನ್ಯಾಸಕರಾಗಿದ್ದರು. ಅವರು ನನ್ನ ಗುರುಗಳಾಗದಿದ್ದರೂ ನನಗೆ ಅವರು ಗುರುಸಮಾನರಾಗಿದ್ದರು. ನನ್ನ ಜನ್ಮದಲ್ಲಿಯೇ ಭಾರೀ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿದ್ದಾಗ ನನಗೆ ಸಹಾಯ ಮಾಡಿದವರಲ್ಲಿ ಅವರು ಪ್ರಮುಖರು. ಆ ಪರಿಸ್ಥಿತಿಯ ಹಿನ್ನೆಲೆ ಹೀಗಿತ್ತು.

ನಾನು ಒರಿಸ್ಸಾದಲ್ಲಿಯ ಪರ್ಲಾಕಿ ಮುಂಡಿಯಲ್ಲಿ ಒಂದು ಕಾಲೇಜಿನಲ್ಲಿ ೧೯೩೩ ರಿಂದ ೧೯೩೯ ರವರೆಗೂ ಉಪನ್ಯಾಸಕನಾಗಿದ್ದೆ. ಅಲ್ಲಿಗೆ ಹೋಗುವ ಮುಂಚೆ ನನ್ನ ಗುರುಗಳೂ ಹಿತೈಷಿಗಳೂ ಮಹಾರಾಜಾ ಕಾಲೇಜಿನಲ್ಲಿ ಇತಿಹಾಸ ಪ್ರಾಧ್ಯಾಪಕರೂ ಆಗಿದ್ದ ಡಾ. ಎಂ.ಹೆಚ್. ಕೃಷ್ಣರವರಿಗೆ ಮೈಸೂರಿನಲ್ಲಿ ಕೆಲಸ ಖಾಲಿಯಾದ ಕೂಡಲೆ ತಿಳಿಸಿ ಎಂದು ಕೇಳಿಕೊಂಡಿದ್ದೆ. ೧೯೩೯ರಲ್ಲಿ ಒಂದು ಕೆಲಸ ಖಾಲಿ ಆಯಿತೆಂದು ಅವರಿಂದ ಒಂದು ಟೆಲಿಗ್ರಾಂ ಬಂತು. ಮುಂದಾಲೋಚನೆ ಮಾಡದೇ ನಾನು ನನ್ನ ಕೆಲಸಕ್ಕೆ ರಾಜೀನಾಮೆಕೊಟ್ಟು ಬರುತ್ತೇನೆಂದು ಟೆಲಿಗ್ರಾಂ ಕೊಡಲಿಕ್ಕೆ ಹೋದೆ. ಅಷ್ಟರಲ್ಲಿಯೆ ಡಾ. ಕೃಷ್ಣರವರಿಂದ ಎರಡನೆ ಟೆಲಿಗ್ರಾಂ ರಾಜೀನಾಮೆ ಕೊಡಬೇಡವೆಂದು ಬಂತು. ಪರ್ಲಾಕಿ ಮುಂಡಿ ಕಾಲೇಜಿನವರು ನನ್ನ ರಾಜೀನಾಮೆ ಹಿಂತೆಗೆದುಕೊಳ್ಳಲು ಒಪ್ಪಲಿಲ್ಲ. ಇದ್ದ ಕೆಲಸವನ್ನು,

ಕಳೆದುಕೊಂಡೆ. ಸಿಗುತ್ತದೆನ್ನುವ ಕೆಲಸ ಸಿಗಲಿಲ್ಲ. ಅದೇ ಇನ್ನು ಮದುವೆ ಮಾಡಿಕೊಂಡಿದ್ದೆ. ವೃದ್ಧ ಮಾತಾಪಿತೃಗಳನ್ನು ನಾನೇ ಪೋಷಿಸಬೇಕಾಗಿತ್ತು. ಮೈಸೂರಿನಿಂದ ಸೂರತ್ತಿನವರೆಗೂ ಎಲ್ಲ ಖಾಸಗಿ ಕಾಲೇಜುಗಳ ಬಾಗಿಲುಗಳನ್ನು ತಟ್ಟಿದೆ. ಯಾವದೂ ತೆಗೆಯಲಿಲ್ಲ. ಒಂದೇ ಒಂದು ಕಾಲೇಜಿನಲ್ಲಿ ಒಂದು ಅವಕಾಶವಿತ್ತು. ಅದು ಸಾಂಗ್ಲಿಯಲ್ಲಿಯ ವಿಲ್ಲಿಂಗಡನ್ ಕಾಲೇಜು. ಅದರ ಪ್ರಿನ್ಸಿಪಾಲರು ಪ್ರಸಿದ್ಧ ಕನ್ನಡ ಸಾಹಿತಿ ವಿ.ಕೃ. ಗೋಕಾಕರು. ವಿ.ಸೀ. ಅವರು ಅವರ ಸ್ನೇಹಿತರು. ವಿ.ಸೀ. ಅವರಿಂದ ಪರಿಚಯ ಪತ್ರ ತೆಗೆದುಕೊಂಡು ಹೋದರೆ ಕೆಲಸ ಸುಲಭವಾಗುತ್ತದೆಂದು ಸ್ನೇಹಿತರು ಸೂಚಿಸಿದರು. ನನಗೆ ವಿ.ಸೀ. ಅವರ ಪರಿಚಯವಿರಲಿಲ್ಲ. ಆದರೂ ೧೯೪೦ ರ ಬೇಸಿಗೆಯಲ್ಲಿ ಅವರ ಮನೆಗೆ ಹೋಗಿ ನನ್ನ ಕರುಣ ಕಥೆಯನ್ನು ಅವರಿಗೆ ಹೇಳಿದೆ. ಅವರು ಸಾವಧಾನವಾಗಿ ಕೇಳಿ ನನ್ನಿಂದ ಏನಾಗಬೇಕೆಂದು ಕೇಳಿದರು. ನೀವು ಪ್ರಿ. ಗೋಕಾಕರಿಗೆ ಒಂದು ಪತ್ರವನ್ನು ಕೊಟ್ಟರೆ ನನಗೆ ಸಹಾಯವಾಗಬಹುದೆಂದು ಹೇಳಿದೆ. ಒಳಗಡೆ ಹೋಗಿ ಒಂದು ಬಿಳಿ ಹಾಳೆಯನ್ನು ತಂದು ನಾನು ಹೇಳಿದ್ದನ್ನು ಸೊಗಸಾದ ಇಂಗ್ಲಿಷಿನಲ್ಲಿ ಬರೆದು ನನ್ನ ಕೈಯಲ್ಲಿಟ್ಟರು. ಅದನ್ನು ತೆಗೆದುಕೊಂಡು ಹೋಗಿ ಪ್ರಿ. ಗೋಕಾಕರಿಗೆ ಕೊಟ್ಟೆ. ನನಗೆ ಅಲ್ಲಿ ಕೆಲಸ ಸಿಗುವಲ್ಲಿ ಆ ಪತ್ರ ಮಹತ್ವದ ಪಾತ್ರವನ್ನು ವಹಿಸಿತ್ತು. ಹೀಗೆ ಎಂತಹ ಪರಿಸ್ಥಿತಿಯಲ್ಲಿ ತಮಗೆ ಗೊತ್ತಿಲ್ಲದ ಒಬ್ಬ ಯುವಕನಿಗೆ ಅಭಯ ಹಸ್ತವಿತ್ತವರನ್ನು ಮರೆಯಲು ಸಾಧ್ಯವೇ ? ಅವರೇ ಒಂದು ಸಂದರ್ಭದಲ್ಲಿ ಹೇಳುವ ಹಾಗೆ "ಕಷ್ಟದಲ್ಲಿ ಇರುವಾಗ ಯಾರೊ ಒಬ್ಬರಾಡಿದ ಮಾತು ಅಮೃತಸತ್ವವಾಗಬಲ್ಲದು." ನನ್ನ ವಿಷಯದಲ್ಲಿ ಇದು ಅಕ್ಷರಶಃ ಸತ್ಯವಾಯಿತು.

ಮುಂದೆ ವಿ.ಸೀ. ಅವರ ನನ್ನ ಭೇಟಿ ೧೯೪೫ರಲ್ಲಿ ಆಯಿತು. ಆಗ ಮದ್ರಾಸಿನಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ ಸೇರಿತು. ಟಿ.ಪಿ. ಕೈಲಾಸಂ ಅವರು ಅದರ ಅಧ್ಯಕ್ಷರಾಗಿದ್ದರು. ಅದು ಒಂದು ಪಾಲಿಟೆಕ್ನಿಕ್ ಶಾಲೆಯಲ್ಲಿ ನಡೆಯಿತು. ಆಗಿನ ದಿನಗಳಲ್ಲಿ ಸಾಹಿತ್ಯ ಸಮ್ಮೇಳನಕ್ಕೆ ಸಾವಿರಾರು ಜನರು ಬರುತ್ತಿರಲಿಲ್ಲ. ಅದೂ ಅಲ್ಲದೆ ಮದ್ರಾಸು ಕನ್ನಡಿಗರಿಗೆ ದೂರವಾಗಿತ್ತು. ಬಂದ ನೂರಾರು ಜನರನ್ನು ಆ ಪಾಲಿಟೆಕ್ನಿಕ್ ಕ್ಲಾಸ್ ರೂಮುಗಳಲ್ಲಿ ಇಳಿಸಿದ್ದರು. ಸಮ್ಮೇಳನದ ಅಧಿವೇಶನವು ಅದೇ ಕಟ್ಟಡದ ಸಭಾಗೃಹದಲ್ಲಿ ಏರ್ಪಡಿಸಲಾಗಿತ್ತು. ಪ್ರತಿನಿಧಿಗಳಿಗೆ ಒಂದು ಕಡೆಯಿಂದ ಇನ್ನೊಂದು ಕಡೆಗೆ ಓಡಾಡುವ ಪ್ರಮೇಯವೇ ಇರಲಿಲ್ಲ. ಒಂದೇ ಕಟ್ಟಡದಲ್ಲಿ ಎಲ್ಲಾ ಕಾರ್ಯಕ್ರಮಗಳೂ ನಡೆಯುತ್ತಿದ್ದವು. ನಾನು ಮತ್ತು ನನ್ನ ಶ್ರೀಮತಿ ಈ ಸಮ್ಮೇಳನಕ್ಕೆ ಹೋಗಿದ್ದೆವು. ವಿ.ಸೀ. ಮತ್ತು ಅವರ ಒಬ್ಬ ಮಗಳು ಅಲ್ಲಿಗೆ ಬಂದಿದ್ದರು. ಅದೃಷ್ಟವಶಾತ್ ನಾವು ಅವರು ಒಂದೇ ದೊಡ್ಡ

ರೂಮಿನಲ್ಲಿ ೩-೪ ದಿನ ಜತೆಗಿರುವ ಅವಕಾಶ ದೊರಕಿತು. ವಿ.ಸಿ. ಅವರ ಪರಿಚಯ ನಿಕಟವಾಯಿತು. ಇದರ ಜತೆಗೆ ಅವರ ಹತ್ತಿರ ಮೇಲಿಂದ ಮೇಲೆ ಬರುತ್ತಿದ್ದ ಪಡುಕೋಣೆ ರಮಾನಂದರಾಯರ ಪರಿಚಯವೂ ಆಯಿತು. ರಮಾನಂದರಾಯರು ವಿ.ಸೀ.ಯವರ ಆತ್ಮೀಯ ಸ್ನೇಹಿತರು. ಇಬ್ಬರೂ ಒಬ್ಬರನ್ನು ಬಿಟ್ಟು ಇನ್ನೊಬ್ಬರು ಇರುತ್ತಿರಲಿಲ್ಲ. ರಮಾನಂದರಾಯರು ಮದ್ರಾಸು ಪ್ರಾಂತ್ಯದ ವಿದ್ಯಾಖಾತೆಯಲ್ಲಿ ಕೆಲಸ ಮಾಡುತ್ತಿದ್ದರು. ಮದ್ರಾಸಿನಲ್ಲಿಯೂ ಕೆಲಸ ಮಾಡಿದ್ದರು. ಸಮ್ಮೇಳನದ ವ್ಯವಸ್ಥೆಯಲ್ಲಿ ಸಹಜವಾಗಿ ಅವರ ಪಾತ್ರವಿತ್ತು. ಅವರ ಮಗಳು ಜಯವಂತಿ ಅಧಿವೇಶನದಲ್ಲಿ ಪ್ರಾರ್ಥನೆಯನ್ನು ಸುಶ್ರಾವ್ಯವಾಗಿ ಹಾಡಿದರು. ಮುಂದೆ ಇವರು ಸುಗಮ ಸಂಗೀತದಲ್ಲಿ ದೊಡ್ಡ ಹೆಸರು ಮಾಡಿದರು. ನಾನು ಮುಂದೆ ಇತರ ಕನ್ನಡ ಸಾಹಿತ್ಯ ಸಮ್ಮೇಳನಗಳಿಗೆ ಹೋಗಿದ್ದೇನೆ. ಆದರೆ ಮದ್ರಾಸ್ ಸಾಹಿತ್ಯ ಸಮ್ಮೇಳನದಲ್ಲಿ ಇದ್ದಂಥ ಮನೆಯ ವಾತಾವರಣ ಇನ್ನೆಲ್ಲಿಯೂ ಇರಲಿಲ್ಲ. ಇಂತಹ ವಾತಾವರಣದಲ್ಲಿ ವಿ.ಸೀ. ಅವರ ಸಹವಾಸ ನನಗೆ ದೊರಕಿದ್ದು ನನ್ನ ಸುಕೃತ.

ಈ ಸಮ್ಮೇಳನವಾದ ಮೇಲೆ ಅನೇಕ ವರ್ಷ ವಿ.ಸೀ. ಅವರ ಸಂಪರ್ಕ ಬರಲಿಲ್ಲ. ೧೯೫೫ ರಲ್ಲಿ ನಾನು ಧಾರವಾಡದ ಕರ್ನಾಟಕದ ವಿಶ್ವವಿದ್ಯಾಲಯದಲ್ಲಿ ಇತಿಹಾಸ ಪ್ರವಾಚಕನಾಗಿ ನೇಮಕನಾದೆ. ಅದೇ ವೇಳೆಗೆ ಈ ವಿಶ್ವವಿದ್ಯಾಲಯದಲ್ಲಿ ಅರ್ಥಶಾಸ್ತ್ರದ ಪ್ರಾಧ್ಯಾಪಕರ ಹುದ್ದೆ ಖಾಲಿಯಾಗಿತ್ತು. ಅದಕ್ಕೆ ಯೋಗ್ಯ ನೇಮಕವಾಗಬೇಕಾಗಿತ್ತು. ಅದೇ ಇನ್ನು ವಿ.ಸೀ. ಅವರು ನಿವೃತ್ತರಾಗಿ, ಆಕಾಶವಾಣಿ ಕೆಲಸಕ್ಕೆ ಇನ್ನೂ ಸೇರಿರಲಿಲ್ಲ. ಅವರು ಅರ್ಥಶಾಸ್ತ್ರದಲ್ಲಿ ಎಂ.ಎ. ಮಾಡಿ, 'ಹಣಪ್ರಪಂಚ'ವೆನ್ನುವ ಪ್ರಸಿದ್ಧ ಪುಸ್ತಕವನ್ನು ಬರೆದದ್ದು ತಿಳಿದ ನಮ್ಮಂಥವರಿಗೆ ವಿ.ಸೀ. ಅವರನ್ನು ನೇಮಿಸಿದ್ದರೆ ಎಷ್ಟು ಚೆನ್ನಾಗಿರುತ್ತೆಂದು ಅನಿಸಿತು. ಅವರ ಹಿನ್ನೆಲೆ ತಿಳಿಯದ ಉತ್ತರ ಕರ್ನಾಟಕದವರು ಅವರನ್ನು ಕನ್ನಡ ಸಾಹಿತಿಯೆಂದು ಗುರುತಿಸುತ್ತಿದ್ದರೆ ವಿನಾ ಅರ್ಥಶಾಸ್ತ್ರದಲ್ಲಿ ಅವರಿಗಿದ್ದ ಪ್ರೌಢಿಮೆ, ಒಲವು ಅವರಿಗೆ ಗೊತ್ತಿರಲಿಲ್ಲ. ಗೊತ್ತಿದ್ದರೂ ವಿ.ಸೀ. ಅವರು ಎಲ್ಲಿಯೂ ಅರ್ಥಶಾಸ್ತ್ರವನ್ನು ಬೋಧಿಸದೆ ಇದ್ದುದರಿಂದ ಅವರನ್ನು ಪ್ರಾಧ್ಯಾಪಕರನ್ನಾಗಿ ಮಾಡುವುದು ಅಸಾಧ್ಯವಾಗಿತ್ತು. ಹೇಗಾದರೂ ಸಾಧ್ಯವಾಗಿದ್ದರೆ, ಕರ್ನಾಟಕ ವಿಶ್ವವಿದ್ಯಾಲಯ ಅರ್ಥಶಾಸ್ತ್ರದ ಅಭ್ಯಾಸಕ್ಕೆ ಮತ್ತು ಸಂಶೋಧನೆಗೆ ದೊಡ್ಡ ಹೆಸರು ಸಿಗುವ ಹಾಗೆ ಮಾಡುವ ಸಾಮರ್ಥ್ಯ ವಿ.ಸೀ. ಅವರಲ್ಲಿತ್ತು. 'ಹಣಪ್ರಪಂಚ'ದಂತಹ ಅನೇಕ ಮೌಲಿಕ ಗ್ರಂಥಗಳು ಕನ್ನಡದಲ್ಲಿ ಪ್ರಕಟವಾಗುತ್ತಿದ್ದವು.

ಈ ರೀತಿಯಾಗಿ ಕರ್ನಾಟಕ ವಿಶ್ವವಿದ್ಯಾಲಯಕ್ಕೂ ಅವರಿಗೂ ಸಂಬಂಧವಾಗದೆ

ಇದ್ದರೂ ಇನ್ನೊಂದು ವಿಧದಲ್ಲಿ ಅವರಿಗೂ ಈ ವಿಶ್ವವಿದ್ಯಾಲಯಕ್ಕೂ ಸಂಬಂಧವಾಯಿತು. ೧೯೬೪ರಲ್ಲಿ ಹೊನ್ನಾವರದಲ್ಲಿ ಹೊಸ ಕಾಲೇಜು ಸ್ಥಾಪನೆಯಾದಾಗ ವಿ.ಸೀ. ಅವರು ನಾಲ್ಕು ವರ್ಷ ಆ ಕಾಲೇಜಿನ ಪ್ರಥಮ ಪ್ರಿನ್ಸಿಪಾಲರಾಗಿ ಆ ಕಾಲೇಜನ್ನು ಭದ್ರವಾದ ಬುನಾದಿಯ ಮೇಲೆ ಕಟ್ಟಿದರು. ಉತ್ತರ ಕನ್ನಡ ಜಿಲ್ಲೆಗೂ ವಿ.ಸೀ. ಅವರಿಗೂ ಮಧುರ ಬಾಂಧವ್ಯವಿತ್ತು. ೧೯೩೧ರಷ್ಟು ಹಿಂದೆ ಕಾರವಾರದಲ್ಲಿ ನಡೆದ ಸಾಹಿತ್ಯ ಸಮ್ಮೇಳನದಲ್ಲಿ ಕವಿಗೋಷ್ಠಿಯ ಅಧ್ಯಕ್ಷರಾಗಿದ್ದರು. ಕುಮಟೆಯಲ್ಲಿ ೧೯೫೩ರಲ್ಲಿ ನಡೆದ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ನಿಸರ್ಗರಮ್ಯ ಕಡಲತೀರದ ಹೊನ್ನಾವರದಲ್ಲಿ ವಿ.ಸೀ. ಅವರು ಬಹಳ ನೆಮ್ಮದಿಯಿಂದ ಇದ್ದರು. ಹತ್ತಿರವಿರುವ ಯಕ್ಷಗಾನ ಕಲಾವಿದರಾದ ಹಾಸ್ಯಗಾರ ಮನೆತನದವರ ಪರಿಚಯ ಮಾಡಿಕೊಂಡು ಅವರ ಬಗ್ಗೆ ಬರೆಯುವಷ್ಟು ಅವರಿಗೆ ಹತ್ತಿರದವರಾದರು. ಅದೇ ವೇಳೆಗೆ ವಿಶ್ವವಿದ್ಯಾಲಯದ ಮುಖ್ಯಸ್ಥಳವಾದ ಧಾರವಾಡಕ್ಕೂ ಅವರಿಗೂ ನೆಂಟಸ್ತನ ಆರಂಭವಾಯಿತು. ಈ ಕಾಲದಲ್ಲಿಯೆ ನಾನು ಅವರನ್ನು ಅನೇಕ ಸಲ ನೋಡುವ ಅವಕಾಶ ದೊರಕಿತು. ಅವರು ಸೆನೆಟ್, ಅಕಾಡೆಮಿಕ್ ಕೌನ್ಸಿಲ್ಲಿನ ಸಭೆಗಳಿಗೆ ತಪ್ಪದೆ ಬರುತ್ತಿದ್ದರು. ನಾನೂ ಈ ಸಭೆಗಳ ಸದಸ್ಯನಾಗಿದ್ದೆ. ಈ ಸಭೆಗಳಲ್ಲಿ ಅವರು ಪ್ರಮುಖ ಭಾಗ ವಹಿಸುತ್ತಿದ್ದರು. ಕುಲಪತಿ ಪಾವಟೆಯವರಿಗೂ ಅವರಿಗೂ ಸೌಹಾರ್ದಯುತ ಸಂಬಂಧವಿತ್ತು. ವಿಶೇಷ ಉಪನ್ಯಾಸ ಕೊಡಲು ಒಂದು ಸಲ ಬಂದಿದ್ದರು. ನಾನು ಒಂದು ಸಲ ಹೊನ್ನಾವರದ ಅವರ ಕಾಲೇಜಿಗೆ ಭೇಟಿ ಕೊಡುವ ಅವಕಾಶ ಸಿಕ್ಕಿತ್ತು. ಆ ಭೇಟಿಯನ್ನು ನಾನು ಎಂದಿಗೂ ಮರೆಯುವ ಹಾಗಿಲ್ಲ. ನಾವು ಕಾಲೇಜಿಗೆ ಹೋದಾಗ ಸಂಜೆ ಹೊತ್ತು. ವಿ.ಸೀ. ಅವರು ನನಗೂ ನನ್ನ ಜತೆಗೆ ಬಂದವರಿಗೂ ಕಾಲೇಜನ್ನು ತೋರಿಸಲು ಬಂದರು. ನಾನು ಅವರನ್ನು ಅನೇಕ ಸಲ ನೋಡಿದ್ದೇನೆ. ಆದರೆ ಆ ಸಂಜೆ ಹೊನ್ನಾವರದ ಪ್ರಶಾಂತ ವಾತಾವರಣದಲ್ಲಿ ಗಿಡಗಳ ಮಧ್ಯೆ ಕಂಗೊಳಿಸುತ್ತಿದ್ದ ಆ ಕಾಲೇಜಿನಲ್ಲಿ ವಿ.ಸೀ. ಅವರು ಹಿಂದೆ ಎಂದೂ ನಾನು ನೋಡದಿದ್ದ ಉಲ್ಲಸಿತ ವ್ಯಕ್ತಿಯಾಗಿ ಕಂಡರು. ತಮ್ಮ ಕೆಲಸದಲ್ಲಿ ಹಿಂದೆ ಎಂದೂ ಸಿಗದ ನೆಮ್ಮದಿ ಅವರದಾಗಿತ್ತೆಂದು ನನ್ನ ಊಹೆ. ಅವರ ವೇಷವೇ ಅವರ ಆರಾಮದ ಮನಃಸ್ಥಿತಿಯನ್ನು ತೋರಿಸುತ್ತಿತ್ತು. ಗರಿಗರಿ ಪೇಟಾ ಆಗಲಿ, ಅವರ ಮಾಮೂಲು ಕೋಟಾಗಲಿ ಅವರು ಹಾಕಿರಲಿಲ್ಲ. ಅವುಗಳ ಬದಲು ಒಂದು ಸಾದಾ ಉತ್ತರೀಯವನ್ನು ಹೊದ್ದಿದ್ದರು. ಮೈಸೂರು ವಿಶ್ವವಿದ್ಯಾಲಯದಲ್ಲಿ ಅವರ ವಿದ್ವತ್ತಿಗೆ ಮತ್ತು ಅವರ ಸೇವೆಯ ಜ್ಯೇಷ್ಠತೆಗೆ ಸಿಗಬೇಕಾದ ಮನ್ನಣೆ ಸಿಕ್ಕಿರಲಿಲ್ಲ. ಅಂಥ ಕಹಿ ಅನುಭವ ಹೊಂದಿದ ಅನೇಕರು ಒಂದು ತರಹ ಸಿನಿಕರಾಗಿ ಜೀವನದಲ್ಲಿ ತಾವು ಉತ್ಸಾಹವನ್ನು ಕಳೆದುಕೊಂಡದ್ದಲ್ಲದೆ, ಅವರ ಹತ್ತಿರ ಬಂದವರಿಗೆ ತಮಗೆ

ಆದ ಅನ್ಯಾಯವನ್ನು ಹೇಳಿಕೊಂಡು ಕೇಳುಗರಿಗೆ ಬೇಸರವಾಗುವ ಹಾಗೆ ಮಾಡುತ್ತಾರೆ. ಹೊನ್ನಾವರ ಕಾಲೇಜಿನಲ್ಲಿ ನಾನು ನೋಡಿದ ವಿ.ಸೀ. ಅವರು ಹಿಂದೆ ತಮಗಾದ ಅನ್ಯಾಯವನ್ನು ಎಂದೂ ಮರೆತು ತಾವು ಸಂತೃಪ್ತರಾಗಿದ್ದುದಲ್ಲದೆ ತಮ್ಮ ಹತ್ತಿರ ಬಂದವರನ್ನು ಸಂತೃಪ್ತರಾಗಲು ಸ್ಫೂರ್ತಿಯನ್ನು ಕೊಡುವ ಹಾಗಿದ್ದರು.

ಹೊನ್ನಾವರ ಕಾಲೇಜಿನಿಂದ ನಿವೃತ್ತರಾದ ಮೇಲೆ ನಾನು ಅನೇಕ ಸಲ ವಿ.ಸೀ. ಅವರನ್ನು ಅವರ ಚಾಮರಾಜಪೇಟೆ ನಿವಾಸದಲ್ಲಿ ಭೇಟಿಯಾಗಿದ್ದೇನೆ. ಹೋದಾಗಲೆಲ್ಲಾ ತಿಂಡಿ ತೀರ್ಥಗಳಿಲ್ಲದೆ ಅತಿಥಿಗಳನ್ನು ಅವರು ಬೀಳ್ಕೊಡುತ್ತಿರಲಿಲ್ಲ. ಅವರೊಡನೆ ಮಾತನಾಡುವುದೇ ಒಂದು ವಿದ್ಯಾಭ್ಯಾಸ. ಪ್ರಚಲಿತ ಸಮಸ್ಯೆಗಳ ಬಗ್ಗೆ ಗಾಢವಾದ ಆಲೋಚನೆ ಅಭ್ಯಾಸಗಳನ್ನು ಅವರು ಮಾಡುತ್ತಿದ್ದರು. ಹೀಗೆ ಮಾಡುವುದಕ್ಕೆ ಅವರಿಗೆ ಮೂರು ಇಂಗ್ಲಿಷ್ ನಿಯತ ಕಾಲಿಕೆಗಳು ಸಹಾಯ ಮಾಡುತ್ತಿದ್ದವು. ಅವು ಯಾವುದೆಂದರೆ, 'ದಿ ಇಕಾನಮಿಸ್ಟ್', 'ದಿ ಲಿಸೆನರ್' ಮತ್ತು 'ದಿ ಟೈಮ್ಸ್ ಲಿಟೆರರಿ ಸಪ್ಲಿಮೆಂಟ್'. ಇವುಗಳಲ್ಲಿ 'ದಿ ಇಕಾನಮಿಸ್ಟ್' ಪ್ರಪಂಚದ ಆರ್ಥಿಕ ಮತ್ತು ರಾಜಕೀಯ ಸಮಸ್ಯೆಗಳನ್ನು ಚರ್ಚಿಸುತ್ತದೆ. 'ದಿ ಲಿಸೆನರ್' ಬಿ.ಬಿ.ಸಿ.ಯಲ್ಲಿ ಯಾರ ಯಾರ ಭಾಷಣಗಳಲ್ಲಿ ಮುಖ್ಯವಾದವನ್ನು ಕೊಡುತ್ತದೆ. ಬಿ.ಬಿ.ಸಿ. ತನ್ನಲ್ಲಿ ಆಗುವ ಭಾಷಣಗಳು ಅತ್ಯಂತ ಶ್ರೇಷ್ಠವಾದುವೆಂಬುದನ್ನು ನೋಡಿಕೊಳ್ಳುತ್ತದೆ. 'ದಿ ಟೈಮ್ಸ್ ಲಿಟೆರರಿ ಸಪ್ಲಿಮೆಂಟ್' ನಲ್ಲಿ ಇಂಗ್ಲೆಂಡಿನಲ್ಲಿ ಮತ್ತು ಹೊರಗೆ ಎಲ್ಲಾ ವಿಷಯಗಳ ಮೇಲೂ ಪ್ರಕಟವಾಗುವ ಶ್ರೇಷ್ಠ ಪುಸ್ತಕಗಳ ವಿಮರ್ಶೆಯನ್ನು ಆ ವಿಷಯಗಳಲ್ಲಿ ತಜ್ಞರಾದವರು ಮಾಡುತ್ತಾರೆ. ಈಚೆಗೆ ಈ ನಿಯತಕಾಲಿಕೆಗಳ ಚಂದಾ ಹಣ ಎಷ್ಟು ಹೆಚ್ಚಾಗಿದೆಯೆಂದರೆ ವಿಶ್ವವಿದ್ಯಾಲಯದಂಥ ಸಂಸ್ಥೆಗಳು ಕೂಡ ಅವುಗಳನ್ನು ತರಿಸುವುದನ್ನು ಬಿಟ್ಟು ಬಿಟ್ಟಿವೆ. ಆದರೆ ವಿ.ಸೀ.ಯವರು ಅವುಗಳನ್ನು ಕೊನೆಯವರೆಗೂ ತಾವೇ ಚಂದಾ ತೆತ್ತು ತರಿಸುತ್ತಿದ್ದರು. ಇದು ಹೇಗೆ ಇವರಿಗೆ ಸಾಧ್ಯವಾಯಿತೊ ದೇವರೇ ಬಲ್ಲ. Simple living ಮತ್ತು High thinking ಗೆ ವಿ.ಸೀ. ಅವರು ಪ್ರಸಿದ್ಧರು. Simple living ಗೆ ಯಾವ furniture ಇಲ್ಲದ ಇವರ ಕೂತುಕೊಳ್ಳುವ ರೂಮು ಸಾಕ್ಷಿಯಾದರೆ. ಮೇಲೆ ಹೇಳಿದ ನಿಯತಕಾಲಿಕೆಗಳು ಇವರ High thinking ಗೆ ಸಾಕ್ಷಿ. ಇಂಥವರ ಸರಳ ಜೀವನ ಮತ್ತು ಉನ್ನತ ಚಿಂತನೆಗಳು ನಮಗೆ ಸದಾ ಮಾರ್ಗದರ್ಶಿಯಾಗಬೇಕು.

■

4

ಡಾ. ರಂ.ಶ್ರೀ. ಮುಗಳಿ ಅವರು

ತಿಲಕ-ಗೋಖಲೆ ಪ್ರಭೃತಿಗಳು ಪುಣೆಯಲ್ಲಿ ಸ್ಥಾಪಿಸಿದ ಡೆಕ್ಕನ್ ಎಜುಕೇಶನ್ ಸೊಸೈಟಿ, ಪುಣೆಯಲ್ಲಿ ಫರ್ಗುಸನ್ ಕಾಲೇಜ್ ಮತ್ತು ಸಾಂಗ್ಲಿಯಲ್ಲಿ ವಿಲ್ಲಿಂಗ್‌ಡನ್ ಕಾಲೇಜುಗಳನ್ನು ನಡೆಸುತ್ತಿದ್ದಿತು. ೧೯೩೯ರ ಹೊತ್ತಿಗೆ ಸಾಂಗ್ಲಿಯ ಕಾಲೇಜಿನಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗುತ್ತಾ ಹೋಗಿತ್ತು. ಈ ಸಂಖ್ಯೆಯನ್ನು ಬೆಳೆಸಲಿಕ್ಕೆ ಸೊಸೈಟಿ ಕಾರ್ಯಕರ್ತರಿಗೆ ಹೊಳೆದ ಒಂದು ಮಾರ್ಗ, ಉತ್ತರ ಕರ್ನಾಟಕದಿಂದ ವಿದ್ಯಾರ್ಥಿಗಳನ್ನು ಆಕರ್ಷಿಸುವುದು. ಈ ಉದ್ದೇಶದಿಂದ ಅವರು ಪ್ರಾ. ವಿ.ಕೃ. ಗೋಕಾಕರನ್ನು ಆ ಕಾಲೇಜಿನ ಪ್ರಾಚಾರ್ಯರನ್ನಾಗಿ ೧೯೪೦ರಲ್ಲಿ ನೇಮಿಸಿದರು. ಈ ನೇಮಕದಿಂದ ಕಾಲೇಜು ಉಳಿದಿದ್ದಲ್ಲದೆ ಖ್ಯಾತಿಯ ಉತ್ತುಂಗ ಶಿಖರವನ್ನು ಮುಟ್ಟಿತು. ನನ್ನ ಸುದೈವದಿಂದ ನಾನು ಅದೇ ವರ್ಷ ಆ ಕಾಲೇಜಿನಲ್ಲಿ ಉಪನ್ಯಾಸಕನಾಗಿ ಸೇರಿದೆ. ಪ್ರಾ. ರಂಗನಾಥ ಶ್ರೀನಿವಾಸ ಮುಗಳಿಯವರು ಅಷ್ಟೊತ್ತಿಗೆ ಆ ಕಾಲೇಜನ್ನು ಸೇರಿ ಏಳು ವರ್ಷಗಳಾಗಿದ್ದವು. ಅವರು ಆ ಸೊಸೈಟಿಯ ಅಜೀವ ಸದಸ್ಯರಾಗಿದ್ದರು.

ಕಾಲೇಜು ಇದ್ದ ಆವರಣಕ್ಕೆ ವಿಶ್ರಾಮ್‌ಬಾಗ ಎನ್ನುತ್ತಾರೆ. ಇದು ಸಾಂಗ್ಲಿಯ ಪೂರ್ವಕ್ಕೆ ಒಂದೂವರೆ ಮೈಲಿ ದೂರದಲ್ಲಿದೆ. ಅದರ ಪೂರ್ವಕ್ಕೆ ಮಿರಜ್ ೩-೪ ಮೈಲೂ ದೂರದಲ್ಲಿದೆ. ವಿಶ್ರಾಮ್‌ಬಾಗ್ ಒಂದು ಸ್ಟೇಷನ್ ಆಗಿತ್ತು. ಈ ರೈಲ್ವೆ ಲೈನಿನ ಉತ್ತರಕ್ಕೆ ಕಾಲೇಜಿನ ಆವರಣವಿದೆ. ಅಲ್ಲಿ ಭವ್ಯವಾದ ಕಾಲೇಜಲ್ಲದೆ, ಕೆಲವು ಪ್ರಾಧ್ಯಾಪಕರ ವಾಸಕ್ಕೆ ಮನೆಗಳು, ೩ ಹಾಸ್ಟೆಲುಗಳು ಇವೆ. ರೈಲ್ವೆ ಲೈನಿನ ದಕ್ಷಿಣಕ್ಕೆ ೪-೫ ಖಾಸಗಿಯವರ ಮನೆಗಳಿದ್ದವು. ಒಂದು ಮನೆಯಲ್ಲಿ ಮುಗಳಿಯವರು ಇರುತ್ತಿದ್ದರು. ಇನ್ನೊಂದರಲ್ಲಿ ನಾನು ಇರುತ್ತಿದ್ದೆ. ನಮ್ಮಿಬ್ಬರ ಮನೆಗಳ ಮಧ್ಯೆ ಒಂದು ವಿಶಾಲವಾದ ತೋಟವಿತ್ತು. ನಾವಿಬ್ಬರೂ ಕನ್ನಡಿಗರಾಗಿದ್ದುದರಿಂದ ನಮ್ಮ ಎರಡು ಮನೆತನಗಳು ಆತ್ಮೀಯವಾದವು. ಮುಗಳಿಯವರ ಜತೆಗೆ ಅವರ ಅತ್ತೆ ಇರುತ್ತಿದ್ದರು. ನಮ್ಮ ಮನೆಯಲ್ಲಿ ನನ್ನ ತಾಯಿ ಇರುತ್ತಿದ್ದರು. ನಾವು ಆ ಊರಿಗೆ ಹೊಸಬರಾದರೂ ಬಹಳ ಬೇಗನೆ ಅಲ್ಲಿಯ ವಾತಾವರಣಕ್ಕೆ ಒಗ್ಗಿಕೊಂಡೆವು.

ಓದುಗರಿಂದ ದೊರೆತ ಬಹುಮಾನ

ಆಗ ಮುಂಬಯಿ ಪ್ರಾಂತದಲ್ಲಿ ಒಂದೇ ಒಂದು ವಿಶ್ವವಿದ್ಯಾಲಯವಿತ್ತು. ಆ ವರ್ಷ (೧೯೪೦) ಮುಂಬಯಿ ವಿಶ್ವವಿದ್ಯಾಲಯವು "ಭೌದಾಜಿ ಬಹುಮಾನ"ವನ್ನು ಕರ್ನಾಟಕ ಇತಿಹಾಸ ಮತ್ತು ಸಂಸ್ಕೃತಿಗಳಿಗೆ ಮೀಸಲಾಗಿರಿಸಿತ್ತು. ಈ ವಿಷಯಕ್ಕೆ ಸಂಬಂಧಿಸಿದಂತೆ ಬರೆದ ಶ್ರೇಷ್ಠ ಹಸ್ತಪ್ರತಿಗೆ ಈ ಬಹುಮಾನವನ್ನು ಕೊಡಬೇಕೆನ್ನುವ ನಿರ್ಣಯವಾಗಿತ್ತು. ಮುಗಳಿಯವರು ಈ ಸ್ಪರ್ಧೆಯಲ್ಲಿ ಭಾಗವಹಿಸುವ ಸಲುವಾಗಿ ಒಂದು ಹಸ್ತಪ್ರತಿಯನ್ನು ಸಿದ್ಧಪಡಿಸಿದ್ದರು. ಈ ವಿಷಯದಲ್ಲಿ ಅವರಷ್ಟು ಹೆಸರು ಮಾಡಿದವರು ಆಗಿನ ಮುಂಬಯಿ ಕರ್ನಾಟಕದಲ್ಲಿ ಬೇರೆ ಯಾರೂ ಕಾಣಿಸಲಿಲ್ಲ. ನಾವೆಲ್ಲರೂ ಈ ಬಹುಮಾನ ಅವರಿಗೆ ಸುಲಭವಾಗಿ ಸಿಗುತ್ತದೆಂದು ಎಣಿಸಿದ್ದೆವು. ಆದರೆ ನಮ್ಮ ಎಣಿಕೆ ತಪ್ಪಾಯಿತು. ಬಹುಮಾನವನ್ನು ಘೋಷಿಸಿದಾಗ ಅದು ಡಾ. ಆರ್.ಎನ್. ಸಾಲೆತೊರೆಯವರಿಗೆ ಸಂದಿತ್ತು. ಇವರು ಪ್ರಸಿದ್ಧ ಇತಿಹಾಸಕಾರ ಡಾ. ಬಿ.ಎ. ಸಾಲೆತೊರೆಯವರ ತಮ್ಮ. ಸಹೋದರರಿಬ್ಬರೂ ಇತಿಹಾಸ ಸಂಶೋಧನೆಯಲ್ಲಿ ಉಚ್ಚ ಸ್ಥಾನದಲ್ಲಿದ್ದರು. ಆದ್ದರಿಂದ ಅವರಿಗೆ ಬಹುಮಾನ ಸಂದಿದ್ದರಲ್ಲಿ ತಪ್ಪೇನೂ ಇರಲಿಲ್ಲ. ಡಾ. ಆರ್.ಎನ್. ಸಾಲೆತೊರೆಯವರು ಮುಂಬಯಿಯಲ್ಲಿದ್ದು ಸಂಶೋಧನೆ ಮಾಡುತ್ತಿದ್ದುದರಿಂದಲೂ ಮತ್ತು ಅವರು ಕರ್ನಾಟಕದ ಬಗ್ಗೆ ಕನ್ನಡದಲ್ಲಿ ಬರೆಯದೆ ಇದ್ದುದರಿಂದಲೂ ಅವರ ಹೆಸರನ್ನು ಕನ್ನಡಿಗರು ಅಷ್ಟು ಕೇಳಿರಲಿಲ್ಲ. ಮುಗಳಿಯವರು ತಮ್ಮ ಬರೆಹಗಳಿಂದ ಮತ್ತು ಪಾಠಪ್ರವಚನಗಳಿಂದ ಕರ್ನಾಟಕಾದ್ಯಂತ ಹೆಸರು ಮಾಡಿದ್ದರಿಂದ ಅವರಿಗೆ ಬಹುಮಾನ ಬರದೇ ಇದ್ದುದಕ್ಕೆ ಅನೇಕರಿಗೆ ಸಹಜವಾಗಿ ಆಶ್ಚರ್ಯವಾಯಿತು. ಆದರೆ ಮುಗಳಿಯವರು ಇದರಿಂದ ವಿಚಲಿತರಾಗಲಿಲ್ಲ. ಅವರಿಗೆ ತಮ್ಮ ಬರೆಹ ಉತ್ಕೃಷ್ಟವಾದುದೆನ್ನುವ ನಂಬಿಕೆಯಿತ್ತು. ಅವರು ಅದನ್ನು ಪ್ರಕಟಿಸಬೇಕೆಂದು ನಿಶ್ಚಯ ಮಾಡಿದರು. ಅವರು ಆಗ ಯಾರಿಂದ ಮುನ್ನುಡಿಯನ್ನು ಬರೆಯಿಸಬೇಕೆಂದು ನನ್ನನ್ನು ಕೇಳಿದರು. ನಾನು ನನ್ನ ಪ್ರಾಧ್ಯಾಪಕರಾಗಿದ್ದ ಡಾ. ಎಂ.ಹೆಚ್. ಕೃಷ್ಣರಿಂದ ಮುನ್ನುಡಿಯನ್ನು ಬರೆಸಲು ಸಹಾಯ ಮಾಡುತ್ತೇನೆಂದೆ.

ಮುಗಳಿಯವರಿಗೆ ಬಹಳ ಸಂತಸವಾಯಿತು. ಡಾ. ಕೃಷ್ಣ ಅವರು ಮುನ್ನುಡಿಯನ್ನು ಬರೆದು ಕಳಿಸಿದರು. ಮುಗಳಿಯವರು ಎಣಿಸಿದ ಹಾಗೆ ಅವರ ಇಂಗ್ಲಿಷ್ ಪುಸ್ತಕ The Heritage of Karnataka ಪ್ರಕಟವಾದ ತಕ್ಷಣ ಪ್ರಸಿದ್ಧವಾಯಿತು. ಇವತ್ತಿಗೂ ಅದು ತನ್ನ ಪ್ರಸಿದ್ಧಿಯನ್ನು ಕಳೆದುಕೊಂಡಿಲ್ಲ. ಯಾಕೆಂದರೆ ಇಂಗ್ಲಿಷಿನಲ್ಲಿ The Heritage of Karnataka ದಷ್ಟು ಕರ್ನಾಟಕ ಸಂಸ್ಕೃತಿ ಕುರಿತ ಅಧಿಕಾರಯುತವಾದ ಪುಸ್ತಕಗಳು ವಿರಳ. ಹೀಗೆ ಆ ಪುಸ್ತಕಕ್ಕೆ

ಮುಂಬಯಿ ವಿಶ್ವವಿದ್ಯಾಲಯದರು ಬಹುಮಾನವನ್ನು ಕೊಡದಿದ್ದರೂ ಓದುಗರಿಂದ ಮೆಚ್ಚಿಗೆ ಸಿಕ್ಕಿದೆ. ಈ ಪುಸ್ತಕವು ಮುಗಳಿಯವರ ಪಾಂಡಿತ್ಯ ಮತ್ತು ಆತ್ಮವಿಶ್ವಾಸಗಳ ಪ್ರತೀಕವಾಗಿದೆ.

ಆಗ ನನಗೆ ಕನ್ನಡದಲ್ಲಿ ಬರೆಯುವ ಮತ್ತು ಸಾರ್ವಜನಿಕರ ಮುಂದೆ ಭಾಷಣ ಮಾಡುವ ಅಭ್ಯಾಸವಾಗಲಿ ಇರಲಿಲ್ಲ. ಮುಗಳಿಯವರು ಇವೆರಡರಲ್ಲಿಯೂ ಮುಂದೆ ಬರಲು ನನಗೆ ಅವಕಾಶಮಾಡಿಕೊಟ್ಟರು.

ಕನ್ನಡದ ಮಹಾವಿದ್ವಾಂಸರು

ಹಿಂದೆ ಹೇಳಿದ ಹಾಗೆ ಪ್ರೊ. ಗೋಕಾಕರು ವಿಲ್ಲಿಂಗ್‌ಡನ್ ಕಾಲೇಜಿನ ಪ್ರಿನ್ಸಿಪಾಲರಾದ ಕೂಡಲೆ ಅವರ ಮತ್ತು ಪ್ರೊ. ಮುಗಳಿಯವರ ಪ್ರಭಾವದಿಂದ ಆ ಕಾಲೇಜಿಗೆ ಉತ್ತರ ಕರ್ನಾಟಕದಿಂದ ವಿದ್ಯಾರ್ಥಿಗಳು ಬಹಳ ಸಂಖ್ಯೆಯಲ್ಲಿ ಸೇರಲಾರಂಭಿಸಿದರು. ಅಷ್ಟು ಜನ ಕನ್ನಡ ವಿದ್ಯಾರ್ಥಿಗಳು ಆ ಕಾಲೇಜಿನಲ್ಲಿ ಹಿಂದೆಯೂ ಇರಲಿಲ್ಲ, ಮುಂದೆಯೂ ಇರಲಿಲ್ಲ. ಇದರಿಂದ ವಿದ್ಯಾರ್ಥಿಗಳಿಗೆ ಇರಲು ಮನೆಗಳಿರಲಿಲ್ಲ. ಒಂದು ದೊಡ್ಡ ಮನೆಯಲ್ಲಿ ಜನರು ವಾಸಮಾಡಲಿಕ್ಕೆ ಹಿಂಜರಿಯುತ್ತಿದ್ದರು. ಅದಕ್ಕೆ ಕಾರಣ ದೆವ್ವದ ಮನೆಯೆಂದು ಅದಕ್ಕೆ ಅಪಖ್ಯಾತಿ ಇತ್ತು. ಕನ್ನಡಿಗ ವಿದ್ಯಾರ್ಥಿಗಳು ಅಲ್ಲಿ ಧೈರ್ಯದಿಂದ ಇರಲಾರಂಭಿಸಿದರು. 'ಪರ್ಣಕುಟಿ' ಎನ್ನುವ ಇನ್ನೊಂದು ಮನೆಯಲ್ಲಿ ಜನರು ಇರುವ ಹಾಗಿರಲಿಲ್ಲ. ಅದಕ್ಕೆ ಮೇಲ್ಛಾವಣಿ ಸರಿಯಾಗಿರಲಿಲ್ಲ. ಅಲ್ಲಿ ವಿ.ಜಿ. ಭಟ್ ಮತ್ತು ಸು.ರಂ. ಎಕ್ಕುಂಡಿಯವರು ವಾಸಿಸಲಾರಂಭಿಸಿದರು. ಕಾಲೇಜಿನ ಬೆಳ್ಳಿಹಬ್ಬದ ಸಂಭ್ರಮದಲ್ಲಿ ಕನ್ನಡ ಹುಡುಗರ ಸಲುವಾಗಿಯೇ ದಾನಶೂರ ಕಬ್ಬೂರ ಕೃಷ್ಣರಾಯರು ೧೯೪೪ರಲ್ಲಿ ಒಂದು ಹಾಸ್ಟೆಲನ್ನು ಕಟ್ಟಿಸಿಕೊಟ್ಟರು. ಸಂಖ್ಯೆಯಲ್ಲಿ ಅಲ್ಲದೆ ಗುಣಮಟ್ಟದಲ್ಲಿಯೂ ಮೇಲಿನ ಸ್ಥಾನದಲ್ಲಿದ್ದ ವಿದ್ಯಾರ್ಥಿಗಳು ಈ ಕಾಲೇಜಿಗೆ ಬರಲಾರಂಭಿಸಿದರು. ಅವರಲ್ಲಿ ಮುಖ್ಯರಾದವರು ಎಸ್.ಪಿ. ಭಟ್ (ಕೇಂದ್ರ ಆದಾಯಕರ ಇಲಾಖೆ), ಜಿ.ಎಸ್. ಸಭಾಹಿತ (ಹೈಕೋರ್ಟಿನ ನ್ಯಾಯಾಧೀಶರು), ಎಲ್.ಟಿ. ಶರ್ಮಾ (ಶಿರಸಿ ಕಾಲೇಜಿನ ಸಂಸ್ಥಾಪಕ ಪ್ರಾಚಾರ್ಯರು), ಆರ್.ವೈ. ಧಾರವಾಡಕರ (ಧಾರವಾಡದ ಜನತಾ ಕಾಲೇಜಿನ ಪ್ರಾಚಾರ್ಯರು), ಶ್ರೀನಿವಾಸ ಹಾವನೂರ (ಮುಂಬಯಿ ವಿಶ್ವವಿದ್ಯಾಲಯದಲ್ಲಿ ಕನ್ನಡ ಪ್ರಾಧ್ಯಾಪಕರು), ಕೆ.ಜಿ. ಶಾಸ್ತ್ರಿ (ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಕನ್ನಡ ಪ್ರಾಧ್ಯಾಪಕರು), (ಎಲ್.ಆರ್. ಹೆಗ್ಡೆ) ಜಾನಪದ ವಿದ್ವಾಂಸರು) ಮತ್ತು ಜಿ.ಡಿ. ನಾಡಕರ್ಣಿ (ಜನತಾ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರು). ಗೋಕಾಕ್–ಮುಗಳಿಯವರ ಆಕರ್ಷಣೆ ಕನ್ನಡ ಸಾಹಿತ್ಯದಲ್ಲಿಯ ದಿಗ್ಗಜಗಳನ್ನು ವಿಶ್ರಮ್‌ಬಾಗಿಗೆ ಬರಮಾಡಿತು. ಬಿ.ಎಂ. ಶ್ರೀಕಂಠಯ್ಯನವರು,

ವರಕವಿ ಬೇಂದ್ರೆ, ಅ.ನ. ಕೃಷ್ಣರಾಯರು, ಶಿವರಾಮ ಕಾರಂತರು, ಎಂ.ಹೆಚ್. ಕೃಷ್ಣರವರು ನನಗೆ ನೆನಪಿರುವಲ್ಲಿ ಕೆಲವರು. ಇವರಲ್ಲಿ ಬಿ.ಎಂ.ಶ್ರೀ ಮತ್ತು ಅ.ನ. ಕೃಷ್ಣರಾಯರು ಇಂಗ್ಲಿಷಿನಲ್ಲಿಯೂ ನಿರರ್ಗಳವಾಗಿ ಮತ್ತು ವಿದ್ವತ್ಪೂರ್ಣವಾಗಿ ಭಾಷಣ ಮಾಡಿ ಮರಾಠಿ ಪ್ರಾಧ್ಯಾಪಕ ಮತ್ತು ವಿದ್ಯಾರ್ಥಿಗಳಿಂದಲೂ ಮನ್ನಣೆಯನ್ನು ಪಡೆದರು.

ಇನ್ನೊಂದು ರೀತಿಯಲ್ಲಿ ಕನ್ನಡ ಮತ್ತು ಮರಾಠಿ ಸಾಹಿತಿಗಳ ಸಮಾಗಮವು ಈ ಕಾಲದಲ್ಲಿ ವಿಶ್ರಾಮ್‌ಬಾಗಿನಲ್ಲಿ ನಡೆಯಿತು. ವಿಲ್ಲಿಂಗ್‌ಡನ್ ಕಾಲೇಜಿನಲ್ಲಿ ಗಿರೀಶ್ (ಕಾವ್ಯನಾಮ) ಅಥವಾ ಶಂಕರರಾವ್ ಕಾನೆಟ್‌ಕರರು ಮರಾಠಿ ಪ್ರಾಧ್ಯಾಪಕರಾಗಿದ್ದರು. ಅವರು ಮುಗಳಿಯವರ ನೆರೆಹೊರೆಯವರು. ಇವರು ರವಿಕಿರಣ ಮಂಡಳಿಯೆನ್ನುವ ಮರಾಠಿ ಕವಿಗಳ ಗುಂಪಿನ ಸದಸ್ಯರಾಗಿದ್ದರು. ಈ ಗುಂಪು ಧಾರವಾಡದ ಗೆಳೆಯರ ಗುಂಪನ್ನು ಹೋಲುತ್ತಿತ್ತು. ಮುಗಳಿ-ಗೋಕಾಕರು ಗೆಳೆಯರ ಗುಂಪಿಗೆ ಸೇರಿದವರಾಗಿದ್ದರು. ಈ ಎರಡು ಗುಂಪಿನ ಸದಸ್ಯರು ವಿಶ್ರಾಮ್‌ಬಾಗಿನಲ್ಲಿ ಸೇರಿದಂತಾಯಿತು.

ವರುಣ ಕುಂಜ ಸಾಹಿತ್ಯ ಸಭೆ

ಅವರಿಗೂ ಗೋಕಾಕ್ - ಮುಗಳಿಯವರಿಗೂ ಪರಸ್ಪರ ಚರ್ಚೆ ಮಾತು ಕತೆಗಳು ನಡೆಯುತ್ತಿದ್ದವು. ಈ ಚರ್ಚೆಗಳಿಂದ ಎರಡೂ ಸಾಹಿತ್ಯಗಳ ಮೇಲೆ ಯಾವ ಪರಿಣಾಮವಾಯಿತೊ ಹೇಳುವುದು ಕಠಿಣ. ಆದರೆ ಪರಿಣಾಮವಾಗಿರುವುದು ಖಚಿತ. ಗೋಕಾಕ್ ಮುಗಳಿಯವರ ಪ್ರಭಾವದಿಂದ ವಿಶ್ರಾಮ್‌ಬಾಗಿನಲ್ಲಿ ಉದಯೋನ್ಮುಖ ಕನ್ನಡ ಸಾಹಿತಿಗಳ ನಿರ್ಮಾಣ ಆರಂಭವಾಯಿತು. ಈ ಇಬ್ಬರು ಸಾಹಿತಿಗಳು ಕೆಲವು ವಿದ್ಯಾರ್ಥಿಗಳನ್ನು ಕೂಡಿಕೊಂಡು ಪ್ರತಿ ಶುಕ್ರವಾರ "ವರುಣ ಕುಂಜ"ವೆಂಬ ಹೆಸರಿನ ಸಾಪ್ತಾಹಿಕ ಸಭೆಯನ್ನು ನಡೆಸುತ್ತಿದ್ದರು. ಅವರಲ್ಲಿ ಪಾಲ್ಗೊಂಡ ವಿದ್ಯಾರ್ಥಿಗಳು ಮುಂದೆ ಉದ್ದಾಮ ಸಾಹಿತಿಗಳಾಗಿ ಕರ್ನಾಟಕದಲ್ಲಿ ಮನೆಮಾತಾಗಿದ್ದಾರೆ. ಸು.ರಂ. ಎಕ್ಕುಂಡಿ (ಸಾಹಿತ್ಯ ಅಕಾಡೆಮಿ ಪುರಸ್ಕೃತ) ವಿ.ಜಿ. ಭಟ್ (ವಿಡಂಬನಕ್ಕೆ ಹೆಸರಾದ ಕವಿ) ಆರ್.ವೈ. ಧಾರವಾಡಕರ್ (ಪ್ರಬಂಧಕಾರ) ಜಿ.ಡಿ. ನಾಡಕರ್ಣಿ (ಹಾಸ್ಯಲೇಖಕ) ಶ್ರೀನಿವಾಸ ಹಾವನೂರ (ಸಂಶೋಧಕ) ವರದರಾಜ ಹುಯಿಲಗೋಳ (ಕಥೆಗಾರ) ಇವರೆಲ್ಲ ನನಗೆ ನೆನಪಿನಲ್ಲಿದ್ದಾರೆ. "ವರುಣಕುಂಜ"ದ ಇನ್ನೊಬ್ಬ ಸದಸ್ಯರ ಪ್ರಗತಿ ಮರೆಯುವಂತಿಲ್ಲ. ಡಾ. ಎ.ಟಿ. ಪಾಟೀಲರೆನ್ನುವ ಕನ್ನಡಿಗರು. ಮೊದಲಿನಿಂದ ಕೊನೆಯವರೆಗೂ ಮರಾಠಿಯಲ್ಲಿ ವಿದ್ಯಾಭ್ಯಾಸ ಮಾಡಿದ ವಿಜ್ಞಾನದ ವಿದ್ಯಾರ್ಥಿ. ವಿಶ್ರಾಮ ಬಾಗಿನ ವಾತಾವರಣದಲ್ಲಿ ಪುನಃ ಕನ್ನಡದಲ್ಲಿ ವಿದ್ಯಾಭ್ಯಾಸವನ್ನು ಆರಂಭಿಸಿ ಮುಗಳಿಯವರ ಮಾರ್ಗದರ್ಶನದಲ್ಲಿ

ಮಹೀಪತಿದಾಸರ ಮೇಲೆ ಪ್ರಬಂಧವನ್ನು ಬರೆದು ಪಿಎಚ್.ಡಿ ಪದವಿಯನ್ನು ಸಂಪಾದಿಸಿದರು. ವಿದ್ಯಾರ್ಥಿಗಳಲ್ಲದೆ, ಸಾಂಗ್ಲಿಯ ಹತ್ತಿರವಿದ್ದ ಶೇಡಬಾಳ, ಅಥಣಿಗಳಿಂದ ಕನ್ನಡ ಬರೆಹಗಾರರು ಬಂದು ಮುಗಳಿ - ಗೋಕಾಕರಿಂದ ಪ್ರಭಾವಿತರಾಗುತ್ತಿದ್ದರು. ಇಂಥವರಲ್ಲಿ ಶೇಡಬಾಳದ ಮಿರ್ಜಿ ಅಣ್ಣಾರಾಯರು. ಅವರು ತಪ್ಪದೆ ಪ್ರತಿವಾರವು ಒಂದು ಸಲ ಮುಗಳಿಯವರಲ್ಲಿ ಬಂದು ಹೋಗುತ್ತಿದ್ದರು. ಅವರ ಕಾದಂಬರಿ 'ನಿಸರ್ಗ' ಇದೇ ವೇಳೆಯಲ್ಲಿ ಪ್ರಸಿದ್ಧಿಯಾಯಿತು. ಹೀಗೆ ಗೋಕಾಕ್ - ಮುಗಳಿಯವರು ವಿಶ್ರಾಮಬಾಗನ್ನು ಕನ್ನಡ ಮತ್ತು ಮರಾಠಿ ಸಾಹಿತಿಗಳ ಮತ್ತು ಸಾಹಿತ್ಯಗಳ ಸಂಗಮವಾಗಿ ಮಾಡಿದರು.

ಈ ಸಮಾಗಮದಿಂದ ಮುಗಳಿಯವರ ಮೇಲೆ ಆದ ಪರಿಣಾಮವೆಂದರೆ, ಅವರು ವ್ಯಾಕರಣಶುದ್ಧ ಮರಾಠಿಯಲ್ಲಿ ಮಾತನಾಡುವುದನ್ನು ಕಲಿತರು. ಮೊದಲಿನಿಂದ ಶಾಲೆಯಲ್ಲಿ ಮರಾಠಿ ಕಲಿಯದ ಕನ್ನಡಿಗರಿಗೆ ಅದರ ವ್ಯಾಕರಣ ದಾಟಲಿಕ್ಕೆ ಬರದ ಅಡ್ಡಿಯಾಗಿರುತ್ತದೆ. ಮುಗಳಿಯವರು ವ್ಯಾಕರಣ ಶುದ್ಧ ಮರಾಠಿ ಮಾತನಾಡುತ್ತಿದ್ದ ಅಪರೂಪದ ಕನ್ನಡಿಗರು. ಎಷ್ಟೋ ಜನ ಕನ್ನಡಿಗರು ಮರಾಠಿಯಲ್ಲಿ ಚೆನ್ನಾಗಿ ಮಾತನಾಡಲು ಬಂದಕೂಡಲೆ ತಾವು ಮರಾಠಿಗರೆಂದು ಹೆಮ್ಮೆಯಿಂದ ಹೇಳಿಕೊಂಡ ಉದಾಹರಣೆಗಳಿವೆ. ಮುಗಳಿಯವರ ಕನ್ನಡದ ಅಭಿಮಾನ ಯಾವಾಗಲೂ ಕುಂದಲಿಲ್ಲ. ತಮ್ಮ ಇಬ್ಬರು ಮಕ್ಕಳಿಗೆ ಕನ್ನಡ ಕಲಿಸುವುದು ಸಾಂಗ್ಲಿಯಲ್ಲಿ ಆಗುತ್ತಿರಲಿಲ್ಲ. ಮಕ್ಕಳನ್ನು ಕನ್ನಡದಲ್ಲಿಯೆ ವಿದ್ಯಾಭ್ಯಾಸ ಮಾಡಿಸುವ ಸಲುವಾಗಿ ಧಾರವಾಡದಲ್ಲಿ ಮನೆ ಮಾಡಿ ಅವರನ್ನು ನೋಡಿಕೊಳ್ಳುವುದಕ್ಕೆ ಖರ್ಚಿನ ಪರಿವೆ ಇಲ್ಲದೆ ವ್ಯವಸ್ಥೆಯನ್ನು ಮಾಡಿದರು. ಅವರು ಮರಾಠಿ ಚೆನ್ನಾಗಿ ಮಾತನಾಡುತ್ತಿದ್ದುದರಿಂದ ನಿವೃತ್ತರಾದ ಮೇಲೆ ಸಾಂಗ್ಲಿಯಲ್ಲಿಯೆ ನೆಲೆಸಬಹುದಾಗಿತ್ತು. ಅಲ್ಲಿ ಅವರು ಬಹಳ ಜನಕ್ಕೆ ಬೇಕಾದವರಾಗಿದ್ದರು. ಆದರೆ ನಿವೃತ್ತರಾದ ಮೇಲೆ ಕರ್ನಾಟಕಕ್ಕೆ ಬರುವ ನಿರ್ಣಯ ಮೊದಲೇ ಮಾಡಿದ್ದರು.

೧೯೬೬ರಲ್ಲಿ ಮುಗಳಿಯವರು ವಿಲ್ಲಿಂಗಡನ್ ಕಾಲೇಜಿನಲ್ಲಿ ಜನಪ್ರಿಯ ಮತ್ತು ಯಶಸ್ವಿ ಪ್ರಾಚಾರ್ಯರೆಂದು ಹೆಸರು ಮಾಡಿ ನಿವೃತ್ತರಾದರು. ಅದೇ ಸುಮಾರಿಗೆ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಕನ್ನಡ ಪ್ರಾಧ್ಯಾಪಕರ ಹುದ್ದೆಗೆ ಅರ್ಜಿಯನ್ನು ಕರೆದಿದ್ದರು. ಆಗ ನಾನು ಆ ವಿಶ್ವವಿದ್ಯಾಲಯದಲ್ಲಿ ಕೆಲಸ ಮಾಡುತ್ತಿದ್ದೆ. ಆಗ ಅವರು ತಾವು ಆ ಹುದ್ದೆಗೆ ಅರ್ಜಿ ಹಾಕುವ ವಿಷಯದಲ್ಲಿ ನನ್ನ ಸಲಹೆಯನ್ನು ಕೇಳಿದರು. ಅವರಿಗೆ ನಾನು ಆಗಿನ ಕುಲಪತಿಗಳಾಗಿದ್ದ ರ್‍ಯಾಂಗ್ಲರ್ ಪಾವಟೆಯವರ ಧೋರಣೆಯನ್ನು ತಿಳಿಸಿದೆ. ಈ ಧೋರಣೆ ಏನಾಗಿತ್ತೆಂದರೆ :

ಎಲ್ಲಾ ವಿಭಾಗಗಳಲ್ಲಿಯೂ ಹೊರಗಿನಿಂದ ನಿವೃತ್ತರಾದ ಮತ್ತು ರಾಷ್ಟ್ರಮಟ್ಟದಲ್ಲಿ ಪ್ರಸಿದ್ಧರಾದವರನ್ನು ಮೊದಲ ಪ್ರಾಧ್ಯಾಪಕರನ್ನಾಗಿ ನೇಮಿಸುತ್ತಿದ್ದರು. ಅವರ ನಂತರದವರು ವಯಸ್ಸಿನಲ್ಲಿ ಚಿಕ್ಕವರು. ಸ್ಥಳೀಯ ಮತ್ತು ಮೇಲಿನವರಿಂದ ಸ್ಫೂರ್ತಿಯನ್ನು ಪಡೆದು ಅವರ ಸ್ಥಾನವನ್ನು ಅಲಂಕರಿಸಲು ಯೋಗ್ಯರಾಗಿರತಕ್ಕವರಾಗಿದ್ದರು. ಹೀಗೆ ಮಾಡಿದ್ದರಿಂದ ಚಿಕ್ಕ ವಯಸ್ಸಿನ ಪ್ರತಿಭಾವಂತ ಪ್ರಾಧ್ಯಾಪಕರು ತಮ್ಮ ವಿಭಾಗವನ್ನು ಉತ್ತಮ ರೀತಿಯಲ್ಲಿ ಬೆಳೆಸಲು ಸಾಧ್ಯವಾಯಿತು. ಈ ಧೋರಣೆಯನ್ವಯ ಮುಗಳಿಯವರು ಅರ್ಜಿ ಹಾಕಿದ ಹುದ್ದೆಗೆ ನಿವೃತ್ತರಾದವರಿಗೆ ಆಸ್ಪದವಿರಲಿಲ್ಲ. ಇದನ್ನು ಮುಗಳಿಯವರಿಗೆ ಹೇಳಿದೆ. ಆದರೂ ನೋಡೋಣ ಏನಾಗುತ್ತದೆ ಎಂದು ಅರ್ಜಿ ಹಾಕಿದರು. ಅವರಿಗೆ ಆ ಹುದ್ದೆ ಸಿಗಲಿಲ್ಲ. ಅವರಿಗೆ ಬಹಳ ನಿರಾಶೆಯಾಯಿತು. ಸುದೈವದಿಂದ ಈ ನಿರಾಶೆ ಬಹಳ ದಿನಗಳು ಉಳಿಯಲಿಲ್ಲ. ೧೯೬೭ ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಕನ್ನಡ ವಿಭಾಗದ ಮುಖ್ಯಸ್ಥರಾಗಿ ನೇಮಕಗೊಂಡು ೧೯೭೦ರವರೆಗೂ ಆ ಹುದ್ದೆಯಲ್ಲಿದ್ದರು. ಆ ಹುದ್ದೆಯಲ್ಲಿದ್ದಾಗ ಮತ್ತು ಮುಂದು ಆ ವಿಶ್ವವಿದ್ಯಾಲಯ ಪ್ರಕಟಿಸಿದ ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆಯ ಸಂಪುಟಗಳ ಕಾರ್ಯನಿರ್ವಾಹಕ ಸಂಪಾದಕರಾಗಿ ದುಡಿದರು. ಬೆಂಗಳೂರಿನ ರಾಜಾಜಿನಗರ ಮೊದಲನೆ ಬ್ಲಾಕಿನಲ್ಲಿ ಮನೆಯನ್ನು ಕಟ್ಟಿಸಿ ಅಲ್ಲಿ ನೆಲಸಿ ಬೆಂಗಳೂರಿನ ಗಣ್ಯ ನಾಗರಿಕರಾದರು. ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದ ಶ್ರೀ ಜಿ. ನಾರಾಯಣರು ಮುಗಳಿಯವರ ಅಗಾಧವಾದ ಪಾಂಡಿತ್ಯವನ್ನು ಪರಿಷತ್ತಿನ ಅನೇಕ ಯೋಜನೆಗಳಿಗೆ ಉಪಯೋಗಿಸಿಕೊಂಡರು.

ಗ್ರಂಥಾಲಯ ಸಮಸ್ಯೆ

೧೯೮೫ ರಲ್ಲಿ ಮುಗಳಿಯವರಿಗೆ ೮೦ ವರ್ಷ ತುಂಬಿದಾಗ ಧಾರವಾಡದಲ್ಲಿ ಆಲೂರ ವೆಂಕಟರಾವ್ ಪ್ರತಿಷ್ಠಾನದವರು ಅವರನ್ನು ಸತ್ಕರಿಸಿದರು. ಮುಗಳಿಯವರು ಈ ಸಂಸ್ಥೆಯ ಸ್ಥಾಪಕರಲ್ಲಿ ಒಬ್ಬರಾಗಿದ್ದರು. ೧೯೮೫ ರಲ್ಲಿ ನಾನು ಬೆಂಗಳೂರಿನಲ್ಲಿ ವಾಸಿಸಲು ಹೋಗಬೇಕಾಯಿತು. ಅಲ್ಲಿ ಮುಗಳಿಯವರ ಸಂಪರ್ಕ ಪುನಃ ಆರಂಭವಾಯಿತು. ಇಬ್ಬರಿಗೂ ವಯಸ್ಸಾಗಿದ್ದುದರಿಂದ ಮತ್ತು ಬೆಂಗಳೂರಿನಲ್ಲಿ ಓಡಾಟ ಸುಲಭವಾಗಿರಲಿಲ್ಲವಾದ್ದರಿಂದ ನಾವು ಎಷ್ಟು ಸೇರಲು ಬಯಸಿದ್ದೆವೊ ಅಷ್ಟು ಸೇರಲು ಆಗುತ್ತಿರಲಿಲ್ಲ. ಆದರೂ ಅವರನ್ನು ಕಾಡುತ್ತಿದ್ದ ಒಂದು ಸಮಸ್ಯೆಗೆ ನಾನು ಪರಿಹಾರವನ್ನು ಕಂಡುಹಿಡಿಯಲು ಸಹಾಯ ಮಾಡಿದೆ. ಸಮಸ್ಯೆಯೆಂದರೆ, ಅವರ ಲೈಬ್ರೆರಿಯ ವಿಲೇವಾರಿ. ಅವರ ಲೈಬ್ರರಿ ಎಷ್ಟು ಸಮೃದ್ಧವಾಗಿತ್ತೆನ್ನುವುದಕ್ಕೆ ಈಚೆಗೆ ಒಂದು ಉದಾಹರಣೆ ಹೊರಬಂದಿದೆ. ಈ ಲೈಬ್ರರಿಯನ್ನು ಆಧರಿಸಿ ಅವರು ಅರವಿಂದರ ಪ್ರಭಾವ ಕನ್ನಡ ಸಾಹಿತ್ಯದ ಮೇಲೆ ಆದ ಪುಸ್ತಕಗಳ ಪಟ್ಟಿಯನ್ನು ಮಾಡಿದ್ದಾರೆ. ಅವರ ಶಿಷ್ಯೋತ್ತಮರಾದ ಡಾ. ಶ್ರೀನಿವಾಸ ಹಾವನೂರರು

ಈ ಪಟ್ಟಿಯನ್ನು ಆಧರಿಸಿ ಡೆಕ್ಕನ್ ಹೆರಾಲ್ಡ್‌ನಲ್ಲಿ ಈ ವಿಷಯದ ಮೇಲೆ ಅಂದರೆ ಕನ್ನಡ ಸಾಹಿತ್ಯದ ಮೇಲೆ ಅರವಿಂದರ ಪ್ರಭಾವ ಎನ್ನುವ ಲೇಖನವನ್ನು ಬರೆದಿದ್ದಾರೆ. ಈ ಲೇಖನವನ್ನು ಓದಿ ಆ ಪಟ್ಟಿಯಲ್ಲಿರುವ ಪುಸ್ತಕಗಳನ್ನು ಅಭ್ಯಾಸ ಮಾಡಿ ಒಂದು ಪಿಎಚ್.ಡಿ. ಪ್ರಬಂಧವನ್ನು ಬರೆಯಬಹುದು. ಹೀಗಿತ್ತು ಮುಗಳಿಯವರ ಲೈಬ್ರರಿ ಮತ್ತು ಅದನ್ನು ಆಧರಿಸಿದ ಅವರ ಅಭ್ಯಾಸ. ಅವರ ಕೊನೆಯ ಕೆಲಸವೆಂದರೆ ಅರವಿಂದರ ಮಹಾಕಾವ್ಯ 'ಸಾವಿತ್ರಿ'ಯ ಕನ್ನಡ ಅನುವಾದ. ಅದನ್ನು ಮುಗಿಸಿದ ಮೇಲೆಯೆ ಅವರಿಗೆ ತೃಪ್ತಿಯಾಯಿತು.

ನನ್ನ ಸಲಹೆ ಮೇರೆಗೆ ಅವರ ಪುಸ್ತಕ ಸಂಗ್ರಹವನ್ನು ಮಿಥಿಕ್ ಸೊಸೈಟಿ ಲೈಬ್ರರಿಗೆ ಕೊಡಬೇಕೆಂದು ಅವರು ನಿರ್ಧರಿಸಿದರು. ಆದರೆ ಒಂದೇ ಒಂದು ಕರಾರಿನ ಮೇ... ತಮ್ಮ ಪುಸ್ತಕಗಳನ್ನು ಕೊಡಲು ಒಪ್ಪಿದರು. ತಮ್ಮ ಪುಸ್ತಕಗಳನ್ನು ಪ್ರತ್ಯೇಕವಾಗಿಡಬೇಕು ಮತ್ತು ಆ ಸಂಗ್ರಹಕ್ಕೆ ತಮ್ಮ ಹೆಸರನ್ನಿಡಬೇಕೆನ್ನುವುದು ಈ ಕರಾರು. ಕರಾರಿನ ಪ್ರಕಾರ ಡಾ. ರಂ.ಶ್ರೀ. ಮುಗಳಿಯವರ ಸಂಗ್ರಹವೆಂದು ಪ್ರತ್ಯೇಕವಾಗಿಡಲು ಸೊಸೈಟಿಯವರು ಒಪ್ಪಿದರು. ಈ ವಿಷಯದಲ್ಲಿ ಸೊಸೈಟಿಯ ಕಾರ್ಯಕರ್ತ ಡಾ. ಸೂರ್ಯನಾಥ ಕಾಮತರ ಸಹಾಯವನ್ನು ನೆನಸತಕ್ಕದ್ದು.

೧೯೯೩ ರ ಫೆಬ್ರವರಿ ೨೦ ರಂದು ಡಾ. ರಂ.ಶ್ರೀ. ಮುಗಳಿಯವರ ಇಹಲೋಕಯಾತ್ರೆ ಮುಗಿಯಿತು. ಮಾರ್ಚ್ ತಿಂಗಳಲ್ಲಿ ಅವರು ವಿಲ್ಲಿಂಗ್‌ಡನ್ ಕಾಲೇಜಿಗೆ ಭೇಟಿ ಕೊಡುವ ಕಾರ್ಯಕ್ರಮ ನಿಶ್ಚಯವಾಗಿತ್ತು. ಅಲ್ಲಿ ಅವರ ಶಿಷ್ಯರು, ಅಭಿಮಾನಿಗಳು ಅವರನ್ನು ಸ್ವಾಗತಿಸಲು ಉತ್ಸುಕರಾಗಿದ್ದರು. ಅವರ ಅಕಾಲ ಮರಣದಿಂದ ಅವರ ಸಾಂಗ್ಲಿ ಅಭಿಮಾನಿಗಳಿಗೂ ಮತ್ತು ಕರ್ನಾಟಕದಲ್ಲಿಯೆ ಅವರ ಎಲ್ಲಾ ಅಭಿಮಾನಿಗಳಿಗೂ ಅತೀವ ದುಃಖವಾಯಿತು. ಮರಾಠಿ ದೈನಿಕ ಪತ್ರಿಕೆ "ಸಕಾಳ"ದಲ್ಲಿ ಅವರ ನಿಧನಕ್ಕೆ ಸಂತಾಪ ಸೂಚಿಸಿ ಅವರ ಮರಾಠಿ ಶಿಷ್ಯೆ ಶ್ರೀಮತಿ ಮಾಲತಿ ಕಿರ್ಲೋಸ್ಕರ್ ಅವರು ಬರೆದಂಥ ಲೇಖನ ಯಾವ ಕನ್ನಡ ಪತ್ರಿಕೆಯಲ್ಲೂ ಬಂದಿಲ್ಲ. ಅದರಲ್ಲಿಯ ಒಂದೆರಡು ಉದಾಹರಣೆ ಹೀಗಿದೆ. ಮುಗಳಿ ಅವರ ಮಗಳ ಹೆಸರು ಪರಿಮಳ ಮತ್ತು ಮಗನ ಹೆಸರು ಆನಂದ. ಈ ಲೇಖಕಿಯ ಪ್ರಕಾರ ಮುಗಳಿಯವರ ಸಂಸಾರ ಪರಿಮಳದಿಂದ ಆನಂದವಾಗಿತ್ತಂತೆ. ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ಮುಗಳಿಯವರ ಹೆಸರು ಅಮರವಾಗಿ ಉಳಿಯುವುದು.

■

5

ನಾಡಿಗೇರ ಕೃಷ್ಣರಾಯರು

ನಾಡಿಗೇರ ಕೃಷ್ಣರಾಯರೂ ನಾನು ಹರಿಹರದವರು. ಕೃಷ್ಣರಾಯರು ನನಗಿಂತ ಮೂರು ವರ್ಷ ದೊಡ್ಡವರು. ಅವರು ಹುಟ್ಟಿದ್ದು ೧೯೦೮ರಲ್ಲಿ. ೧೯೯೨ ರಲ್ಲಿ ನಿಧನರಾದರು. ನನ್ನ ಚಿಕ್ಕಪ್ಪನ ಮಗ ದಾಶರಥಿ ದೀಕ್ಷಿತರೂ ನಾಡಿಗೇರ ಕೃಷ್ಣರಾಯರೂ ಕನ್ನಡ ಹಾಸ್ಯ ಸಾಹಿತ್ಯಕ್ಕೆ ಹರಿಹರದ ಕೊಡುಗೆಗಳು. ಕೃಷ್ಣರಾಯರ ತಂದೆ ದತ್ತಾತ್ರಿರಾಯರು, ಅವರಿಗೆ ಐವರು ಗಂಡು ಮಕ್ಕಳು. ಕೃಷ್ಣ, ರಾಮು, ಅಚ್ಯುತ, ಗೋವಿಂದ ಮತ್ತು ಆನಂದ.

ನೋವನ್ನೇ ನಗೆಯಾಗಿ ಪರಿವರ್ತಿಸಿಕೊಳ್ಳಬೇಕು. ನೋವಿನ ಕಾಯಿಲೆಗೆ ನಗೆಯ ಇಂಜೆಕ್ಷನ್ ಕೊಟ್ಟು ರೋಗ ಪರಿಹರಿಸಿಕೊಳ್ಳಬೇಕು – ಇದು ನಾಡಿಗೇರರ ಸಿದ್ಧಾಂತ. ತಮ್ಮ ಕೃತಿಗಳಲ್ಲಿ ಈ ಸಿದ್ಧಾಂತವನ್ನು ರೂಪಿಸಿದ್ದು ಮಾತ್ರವಲ್ಲ, ತಮ್ಮ ಬದುಕಿನಲ್ಲೂ ಅಳವಡಿಸಿಕೊಂಡಿದ್ದು ನಾಡಿಗೇರರ ವ್ಯಕ್ತಿತ್ವದ ವಿಶೇಷ.

ನಾಡಿಗೇರ ದತ್ತಾತ್ರಿ ರಾಯರು ಹರಿಹರದ ಗಣ್ಯವ್ಯಕ್ತಿ. ವೃತ್ತಿಯಿಂದ ಶಾನುಭೋಗರು. ಪ್ರವೃತ್ತಿಯಿಂದ ಸಾಹಿತಿಗಳು, ಗಮಕಿಗಳೂ ಆಗಿದ್ದರು. ಹರಿಹರದಲ್ಲಿ ಕೆಲವು ವರ್ಷಗಳಿದ್ದ ಹರ್ಡೇಕರ ಮಂಜಪ್ಪನವರ ಸ್ನೇಹಿತರಾಗಿದ್ದರು. ಇಬ್ಬರೂ ಸ್ವಾಮಿ ರಾಮತೀರ್ಥರ ಅಭಿಮಾನಿಗಳು. ಹರಿಹರದ ಕೋಟೆಯ ನಿವಾಸಿಗಳಿಗೆ ದತ್ತಾತ್ರಿರಾಯರ ಪರಿಚಯವಾದುದು ಅವರು ಗಮಕಿಯಾದುದರಿಂದ. ರಾತ್ರಿ ಹತ್ತು ಗಂಟೆಯಿಂದ ಅವರು ಜೈಮಿನಿ ಭಾರತವನ್ನು ಓದಿ ಅರ್ಥ ಹೇಳುತ್ತಿದ್ದರು. ಕೋಟೆಯ ಗಂಡಸರೂ, ಹೆಂಗಸರು ಮಕ್ಕಳು ಇದನ್ನು ಕೇಳುತ್ತಿದ್ದರು. ನನಗೆ ಕನ್ನಡ ಸಾಹಿತ್ಯದ ಮೊದಲ ಪರಿಚಯ ಆದದ್ದು ಆಗ. ನನಗೆ ಆಗ ೧೦–೧೧ ವರ್ಷಗಳು. ಅವರು ಬಹಳ ರಸವತ್ತಾಗಿ ಓದಿ ಸ್ವಾರಸ್ಯವಾಗಿ ಹೇಳುತ್ತಿದ್ದರು. ಸಾಹಿತ್ಯದಲ್ಲಿ, ವ್ಯವಹಾರದಲ್ಲಿ ಅವರ ಕುಶಲತೆಯ ಹೇಳುವ ಹಾಗಿರಲಿಲ್ಲ. ಅವರ ಪಿತ್ರಾರ್ಜಿತ ಆಸ್ತಿಯನ್ನು ಕಳೆದುಕೊಂಡರು. ಒಂದು ಕಿರಾಣಿ ಅಂಗಡಿಯನ್ನು ಸರಿಯಾಗಿ ನಡೆಸದೆ ಮೈತುಂಬ ಸಾಲ ಮಾಡಿಕೊಂಡರು. ಅವರ ಹಿರಿಯ

ಮಗ ಕೃಷ್ಣರಾಯ (ನಮಗೆಲ್ಲಾ ಕಿಟ್ಟಿ) ತಮ್ಮ ತಂದೆ ಮಕ್ಕಳಿಗೆ ಬಿಟ್ಟ ಆಸ್ತಿಯನ್ನು ಹೀಗೆ ವರ್ಣಿಸುತ್ತಿದ್ದ. ಸ್ಥಿರ ಆಸ್ತಿ, ಸಾಲ, ಚರ ಆಸ್ತಿ ಮಕ್ಕಳು. ಮಕ್ಕಳಾದರೂ ವ್ಯವಹಾರದಲ್ಲಿ ಮುಂದಕ್ಕೆ ಬಂದಿದ್ದರೆ, ಆಸ್ತಿಯನ್ನು ಉಳಿಸಿಕೊಳ್ಳಬಹುದಾಗಿತ್ತು. ತಂದೆಯಂತೆ ಮಕ್ಕಳು, ಕಿಟ್ಟಿ ಅಂಗಡಿಯೊಳಗೆ ಸ್ವಲ್ಪ ದುಡ್ಡು ಸಂಗ್ರಹವಾಗುವವರೆಗೂ ಕುಳಿತು, ಅದನ್ನು ತೆಗೆದುಕೊಂಡು ಸ್ನೇಹಿತರ ಜತೆಗೆ ಹೋಟಲಿಗೆ ಹೋಗಿ ಖರ್ಚು ಮಾಡುತ್ತಿದ್ದ.

ಹರಿಹರದ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಯಲ್ಲಿ ನಾನೂ ಕಿಟ್ಟಿ ಒಂದೇ ವೇಳೆಯಲ್ಲಿ ವಿದ್ಯಾರ್ಥಿಗಳಾಗಿದ್ದೆವು. ನನಗಿಂತ ಅವನು ಒಂದು ಕ್ಲಾಸು ಮುಂದೆ ಇದ್ದ. ಕಿಟ್ಟಿನಿಗೆ ಓದಿಗಿಂತ ಪಠ್ಯೇತರ ಚಟುವಟಿಕೆಗಳಲ್ಲಿ ಆಸಕ್ತಿ ಹೆಚ್ಚಾಗಿತ್ತು. ಈ ಚಟುವಟಿಕೆಗಳೆಲ್ಲಾ ಒಂದು ಗುಂಪಿನ ಮುಖಾಂತರ ನಡೆಯುತ್ತಿದ್ದವು. ಈ ಗುಂಪಿಗೆ ಕಿಟ್ಟನೇ ಮುಖಂಡ. ಈ ಚಟುವಟಿಕೆಗಳಲ್ಲಿ ತುಂಗಭದ್ರಾ ನದಿಯಲ್ಲಿ ಈಸುವುದು ಮುಖ್ಯವಾದದ್ದು. ರಜಾ ದಿನಗಳಲ್ಲಿ ಬಹಳ ಹೊತ್ತನ್ನು ನದಿಯಲ್ಲಿಯೇ ಕಳೆಯುತ್ತಿದ್ದೆವು. ನನಗೆ ಅವನೇ ಈಜುವುದನ್ನು ಹೇಳಿಕೊಟ್ಟ. ಅದನ್ನು ಹೇಳಿಕೊಡುತ್ತಿದ್ದ ವೇಳೆ ರಜಾದಿನಗಳಲ್ಲಿ ಮಟ ಮಟ ಮಧ್ಯಾಹ್ನ ೧ ರಿಂದ ೨. ಆಗ ಮನೆಯಲ್ಲಿ ಹಿರಿಯರು ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದರು. ಅವನು ಚೆನ್ನಾಗಿ ಈಜುತ್ತಿದ್ದ. ನಾನೋ ಹೊಸಬ. ನೀರಿಗೆ ಹೆದರುತ್ತಿದ್ದೆ. ಅವನು ನೀರು ಆಳವಾಗಿರುವಲ್ಲಿಗೆ ಹೋಗಿ, ನೀರನ್ನು ಕಾಲಿನಲ್ಲಿ ತುಳಿಯುತ್ತಾ ನಿಂತುಕೊಂಡು "ನೋಡು, ಶ್ರೀಧರ, ನೀರು ಇಲ್ಲಿ ಆಳವಾಗಿಲ್ಲ, ನೀನು ಇಲ್ಲಿಗೆ ಬಾ" ಎಂದು ಕರೆಯುತ್ತಿದ್ದ. ನಾನು ಅವನ ಮಾತನ್ನು ನಂಬಿ, ಅವನು ಇದ್ದಲ್ಲಿಗೆ ಹೋಗುತ್ತಿದ್ದೆ. ಕ್ರಮೇಣ ಧೈರ್ಯವಾಗಿ ಈಜುವುದನ್ನು ಕಲಿತೆ.

ಕಿಟ್ಟಿ ಬುದ್ಧಿವಂತನಾದರೂ ಪಾಠಗಳಲ್ಲಿ ಆಸಕ್ತಿಯನ್ನು ತೋರಿಸುತ್ತಿರಲಿಲ್ಲ. ಹೇಗೊ ಲೋಯರ್ ಸೆಕೆಂಡರಿ ಪರೀಕ್ಷೆಯನ್ನು ಪಾಸು ಮಾಡಿ, ದಾವಣಗೆರೆಯಲ್ಲಿ ಸರ್ಕಾರಿ ಹೈಸ್ಕೂಲನ್ನು ಸೇರಿದ. ದಾವಣಗೆರೆಯಲ್ಲಿ ಹರಿಹರದಲ್ಲಿ ಇದ್ದುದಕ್ಕಿಂತ ಹೊರಗಡೆ ಆಕರ್ಷಣೆಗಳು ಕಿಟ್ಟಿನಿಗೆ ಹೆಚ್ಚಾಗಿದ್ದವು. ಹೋಟಲಿಗೆ ಹೋಗುವುದರಲ್ಲಿ, ನಾಟಕಗಳನ್ನು ನೋಡುವುದರಲ್ಲಿ ಅವರಪ್ಪ ಕೊಟ್ಟ ದುಡ್ಡನ್ನೆಲ್ಲಾ ಖರ್ಚು ಮಾಡುತ್ತಿದ್ದ. ಶಾಲೆಯ ಫೀಯನ್ನು ಕೊಡುತ್ತಿರಲಿಲ್ಲ. ಹೆಡ್ಮಾಸ್ತರು ದತ್ತಾತ್ರೇಯನಿಗೆ ಪತ್ರ ಬರೆದು ನಿಮ್ಮ ಮಗ ಫೀಸನ್ನು ಕೊಟ್ಟಿಲ್ಲ, ಆದ್ದರಿಂದ ಅವನ ಹೆಸರನ್ನು ಶಾಲೆಯ ರಿಜಿಸ್ಟರಿನಿಂದ ತೆಗೆದು ಹಾಕುತ್ತೇವೆಂದು ತಿಳಿಸಿದರು. ಇದನ್ನು ಕೇಳಿ ದತ್ತಾತ್ರಿರಾಯರು ಗಾಬರಿಯಾಗಿ ತಾನೇ ಫೀಸು ಕೊಡಲು ಕಿಟ್ಟಿನನ್ನು ಕರೆದುಕೊಂಡು ಹೆಡ್ಮಾಸ್ತರ್ ಭೇಟಿಗೆ ಹೊರಟರು. ಅವರು ಜೋರಾಗಿ, ಮುಂದೆ ನಡೆಯುತ್ತಿದ್ದರು. ಕಿಟ್ಟಿ ಅವರ ಹಿಂದೆ ಮೆಲ್ಲಗೆ

ಹೋಗುತ್ತಿದ್ದ. ದಾರಿಯುದ್ದಕ್ಕೂ ಮಗನಿಗೆ ಬುದ್ಧಿ ಹೇಳುತ್ತಾ ಹೊರಟಿದ್ದರು. ಅವನಿಂದ ಉತ್ತರ ಬರದೇ ಇದ್ದಾಗ ಹಿಂದೆ ತಿರುಗಿ ನೋಡಿದರೆ ಕಿಟ್ಟಿ ಪರಾರಿಯಾಗಿದ್ದ. ಆಗಿನ ಐದನೇ ಫಾರಂಗೆ ಅಥವಾ ಈಗಿನ ಒಂಬತ್ತನೆಯ ಸ್ಟ್ಯಾಂಡರ್ಡಿಗೆ ಕಿಟ್ಟನ ವಿದ್ಯಾಭ್ಯಾಸ ಮುಗಿಯಿತು. ಮುಂದೆ ಅವನು ಒಳ್ಳೆಯ ನಗೆ ಬರಹಗಾರನೆಂದೂ, ಭಾಷಣಕಾರನೆಂದೂ ಹೆಸರು ಮಾಡಿದ. ಒಂದು ಸಲ ಅವನನ್ನು ಒಂದು ಸ್ಕೂಲಿಗೋ ಅಥವಾ ಕಾಲೇಜಿಗೋ ಭಾಷಣಕ್ಕೆ ಕರೆದರಂತೆ. ಹಾಗೆ ಕರೆದವನಿಗೆ ಇವನು ಎಷ್ಟು ಓದಿದ್ದಾನೆನ್ನುವುದು ಗೊತ್ತಿರಲಿಲ್ಲ. ಅವನನ್ನು ವಿಚಾರಿಸಲು ಹೋಗಲಿಲ್ಲ. ಇಂತಹ ಶ್ರೇಷ್ಠ ಬರಹಗಾರ ಕನ್ನಡದಲ್ಲಿ ಎಂ.ಎ. ಆಗಿರಬೇಕೆಂದು ಊಹಿಸಿ ಅವನನ್ನು ಸಭೆಗೆ ಪರಿಚಯಿಸುವಾಗ ಧೈರ್ಯವಾಗಿ ನಾಡಿಗೇರರು ಕನ್ನಡದಲ್ಲಿ ಎಂ.ಎ. ಆಗಿದ್ದಾರೆಂದು ಹೇಳಿಬಿಟ್ಟರಂತೆ. ಆಗ ಇವನು ತನ್ನ ಮಾತನ್ನು ಆರಂಭಿಸುವಾಗ ಹೀಗೆ ಹೇಳಿದೆನೆಂದು ಅವನೇ ನನಗೆ ಹೇಳಿದ. "ನನ್ನನ್ನು ಪರಿಚಯಿಸಿದವರು ನಾನು ಎಮ್ಮೆ ಎಂದು ಹೇಳಿದರು. ಆದರೆ ನಾನು ಸ್ಕೂಲಿನಲ್ಲಿ ಓದುತ್ತಿರುವಾಗ ನಮ್ಮ ಮೇಷ್ಟ್ರು ನನಗೆ ಕೋಣ ಎನ್ನುತ್ತಿದ್ದರು" ಎಂದು ಹೇಳಿದನಂತೆ.

ಕಲಹಚೇಷ್ಟ

ಸ್ಕೂಲು ಬಿಟ್ಟ ಮೇಲೆ ಕಿಟ್ಟಿ ಸಣ್ಣಪುಟ್ಟ ಕೆಲಸಗಳನ್ನು ಮಾಡಿ, ಕೊನೆಗೆ ಪತ್ರಿಕಾ ವ್ಯವಹಾರದಲ್ಲಿ ತನ್ನನ್ನು ತೊಡಗಿಸಿಕೊಂಡ. ಬೆಂಗಳೂರಿನಲ್ಲಿ ನೆಲೆಸಿದ. ನಾನು ಬೇರೆಕಡೆ ಇರಲೇಬೇಕಾಗಿ ಬಂತು. ಹೀಗಾಗಿ ನಮ್ಮ ಭೇಟಿ ಕಡಿಮೆ ಆಯಿತು. ಆದರೂ ಸೇರಿದಾಗಲೆಲ್ಲಾ ನನ್ನನ್ನು ರಂಜಿಸುತ್ತಿದ್ದನು. ಅವನು ಬೆಂಗಳೂರಿನಲ್ಲಿ ಬಸವನಗುಡಿಯಲ್ಲಿರುತ್ತಿದ್ದನು. ಅವರ ಮನೆಯ ಹತ್ತಿರ ಹರಿಹರದ ಒಬ್ಬ ರಾಯರು ಇರುತ್ತಿದ್ದರು. ಅವರ ಮಗಳ ಲಗ್ನದ ಸಮಯ. ಲಗ್ನಪತ್ರಿಕೆ ಸಿದ್ಧವಾಯಿತು. ರಾಯರ ಪರಿಚಯಸ್ಥ ಕಿಟ್ಟನಿಗೂ ಲಗ್ನಪತ್ರಿಕೆಯನ್ನು ಕೈಯಲ್ಲಿ ಹಿಡಿದುಕೊಂಡು ರಾಯರ ಮನೆಗೆ ಬಂದು "ರಾಯರೇ, ನೀವು ಕಳಿಸಿದ ಲಗ್ನ ಪತ್ರಿಕೆಯಲ್ಲಿ ಒಂದು ಮಾತು ಬಿಟ್ಟುಹೋಗಿದೆ" ಎಂದ ಕಿಟ್ಟಿ. ರಾಯನಿಗೆ ಕಿಟ್ಟನ ಹಾಸ್ಯ ಸ್ವಭಾವ ಗೊತ್ತಿದ್ದರೂ, ಅವನ ಈ ಮಾತನ್ನು ಗಂಭೀರವಾಗಿ ಪರಿಗಣಿಸಿ, ಯಾಕೆ ಏನಾಯಿತೆಂದು ಹೆದರಿಕೊಂಡು ಕೇಳಿದರು. ಅವನು "ನೋಡಿ, ಇದರಲ್ಲಿ ನೀವು ನಿಮ್ಮ ಮಗಳನ್ನು ಇಂಥಾವರನಿಗೆ ಕೊಟ್ಟು ಇಂಥಲ್ಲಿ ಮದುವೆಯಾಗುತ್ತದೆಂದು ಹೇಳಿದ್ದೀರಿ. ಅದೆಲ್ಲಾ ಸರಿ. ಆದರೆ ಮುಂದೆ ಇನ್ನೊಂದನ್ನು ಬಿಟ್ಟಿದ್ದೀರಿ." ಏನು ಬಿಟ್ಟಿದ್ದು ಅದು ಎಂದು ಕೇಳಿದ್ದಕ್ಕೆ ಅವನು ಹೇಳಿದ್ದು "ಅದೇ ಮುಹೂರ್ತದಲ್ಲಿ ನಿಮ್ಮ ಚಂಡಿಕೆ (ಹಜಾಮತಿ) ಯಾಗುತ್ತದೆಂದು ಹೇಳುವುದನ್ನು ಬಿಟ್ಟಿದ್ದೀರೆಂದು" ಹೇಳಿ ಅಲ್ಲಿದ್ದವರನ್ನು ನಗೆಯಲ್ಲಿ ಮುಳುಗಿಸಿದರು.

ಇದೇ ಕಲಹ ಚೇಷ್ಟೆಯನ್ನು ಅವನು ಬೆಂಗಳೂರಿನಲ್ಲಿ ಊಟ ಮಾಡುತ್ತಿದ್ದ ಹೋಟೇಲ್ ಮಾಲಿಕರಿಗೂ ಮಾಡಿದ್ದ. ಆ ಹೋಟೇಲಿನಲ್ಲಿ ಅಡಿಗೆ ಚೆನ್ನಾಗಿರುತ್ತಿರಲಿಲ್ಲ. ಅದು ಮಾಲಿಕರಿಗೂ ಗೊತ್ತಿತ್ತು. ಊಟ ಮಾಡುವವರಿಗೆ ಚೆನ್ನಾಗಿ ಗೊತ್ತಿತ್ತು. ಯಾಕೆ ಅಡಿಗೆ ಚೆನ್ನಾಗಿ ಆಗುತ್ತಿರಲಿಲ್ಲವೆನ್ನುವುದು ಇಬ್ಬರಿಗೂ ಗೊತ್ತಿತ್ತು. ಲಾಭ ಗಳಿಸುವುದೇ ಮುಖ್ಯವೆಂದು ಗಿರಾಕಿಗಳ ಆಕ್ಷೇಪಗಳಿಗೆ ಮಾಲಿಕರು ಲಕ್ಷ್ಯ ಕೊಡುತ್ತಿರಲಿಲ್ಲ ಮತ್ತು ತಮ್ಮ ಗಿರಾಕಿಗಳಿಂದ ಒಳ್ಳೆಯ ಮಾತನ್ನು ಕೇಳಲು ಸಾಧ್ಯವಿಲ್ಲವೆನ್ನುವುದೂ ಅವರಿಗೆ ಗೊತ್ತಿತ್ತು. ಹೀಗಿರುವಾಗ ಒಂದು ದಿನ ಕಿಟ್ಟಿ ಊಟ ಮಾಡಿದ ಮೇಲೆ ಮಾಲಿಕರ ಹತ್ತಿರ ಬಂದು ಆತ್ಮೀಯವಾಗಿ 'ರಾಯರೇ ನಿಮ್ಮ ಅಡಿಗೆಯವರು ನಿಮಗೆ ಬಹಳ ನಷ್ಟವನ್ನುಂಟು ಮಾಡುತ್ತಿದ್ದಾರೆ' ಎಂದು ಅವರ ಹಿತಚಿಂತಕರ ಹಾಗೆ ಮಾತನ್ನು ಆರಂಭಿಸಿದ. ಮಾಲಿಕರು ತಮ್ಮ ಪರವಾಗಿ ಮಾತಾಡುವವರನ್ನು ನೋಡಿರಲಿಲ್ಲ. ಆಗ ಅವರು ಆಶ್ಚರ್ಯದಿಂದ 'ಯಾಕೆ ಏನಾಯಿತು' ಎಂದು ಕೇಳಿದರು. ಆಗ ಕಿಟ್ಟಿ ಹೇಳಿದ, ನೋಡಿ, ನಿಮ್ಮ ಅಡಿಗೆಯವರು ಹುಳಿಗೆ ಹಾಕಿದ ನುಗ್ಗೆಕಾಯಿಯನ್ನು ಸೌದೆಯಾಗಿ ಉಪಯೋಗಿಸುತ್ತಿದ್ದರೆ ನಿಮಗೆ ಹೆಚ್ಚು ಲಾಭವಾಗುತ್ತಿತ್ತೆಂದ. ಮಾಲಿಕರು ನಿರುತ್ತರರಾದರು.

ಆಯುರ್ವೇದ ಔಷಧಿಗಳು ಏಕೆ ಜನಪ್ರಿಯವಾಗುತ್ತಿಲ್ಲವೆಂದು ಒಬ್ಬ ಸ್ನೇಹಿತನು ಕೇಳಿದನು. ಅವುಗಳ ಜಾಹೀರಾತು ಪರಿಣಾಮಕಾರಿಯಾಗಿರುವುದಿಲ್ಲವೆಂದು ಕಿಟ್ಟಿ ಹೇಳಿದ. ಹಾಗಾದರೆ ನೀನು ಅಂತಹ ಪರಿಣಾಮಕಾರಿಯಾದ ಜಾಹೀರಾತಿಗೆ ಒಂದು ಉದಾಹರಣೆಯನ್ನು ಕೊಡು ಎಂದರೆ, ಕಿಟ್ಟಿನ ಉತ್ತರ, ಈಗ ಕೇಶವರ್ಧಿನಿ ತೈಲವನ್ನು ತೆಗೆದುಕೊ. ಅದರ ಜಾಹೀರಾತು ಪರಿಣಾಮಕಾರಿಯಾಗಿರಬೇಕಾದರೆ ಹೀಗಿರಬೇಕು. "ಒಬ್ಬ ಹೆಂಗಸು ಕೇಶವರ್ಧಿನಿ ತೈಲದ ಬಾಲಟಿಯ ಬಿರಡೆಯನ್ನು ತೆಗೆದು ಮೂಸಿ ನೋಡಿದರೆ ಅವಳಿಗೆ ಮೀಸೆ ಬಂದಿತ್ತು!"

ಇನ್ನೊಂದು ಅವನ ಜೋಕು ಹೆಂಗಸರಿಗೆ ಬಹಳ ಹಿಡಿಸುತ್ತದೆ. ಭಿಕ್ಷುಕರ ವಿರುದ್ಧ ಒಂದು ಕಾನೂನನ್ನು ಹೊಸದಾಗಿ ಮಾಡಿದ್ದರು. ಅದರ ಪ್ರಕಾರ ಯಾರು ಭಿಕ್ಷೆ ಕೇಳುತ್ತಾರೋ ಅವರನ್ನು ದಸ್ತಗಿರಿ ಮಾಡಬೇಕು ಎಂದು ಆ ಕಾನೂನಿನಲ್ಲಿ ಹೇಳಿತ್ತು. ಈ ಕಾನೂನಾದ ಮೇಲೆ ಒಂದು ಶ್ರಾವಣ ಶನಿವಾರ ಬಂತು. ಆಗಿನ ಕಾಲದಲ್ಲಿ ಆ ದಿನ ಬ್ರಹ್ಮಚಾರಿಗಳು ಐದು ಮನೆಗಳಿಗೆ ಹೋಗಿ 'ವೆಂಕಟೇಶಾಯ ಮಂಗಳಂ' ಎಂದು ಹೇಳಿ ಭಿಕ್ಷಾ (ಅಕ್ಕಿ) ಹಾಕಿಸಿಕೊಂಡು ಬರಬೇಕು. ಹೀಗೆ ಹೋಗಿದ್ದ ಕಿಟ್ಟನ ಮಕ್ಕಳನ್ನು ಪೋಲೀಸಿನವರು ಹೊಸ ಕಾಯಿದೆಯ ಅನ್ವಯ ಭಿಕ್ಷುಕರೆಂದು ಹಿಡಿದುಕೊಂಡು ಹೋದರಂತೆ. ಈ ವಿಷಯ ತಿಳಿದ ಕೂಡಲೆ ಆ ಮಕ್ಕಳ ತಾಯಿ ಸಹಜವಾಗಿ ಚಿಂತಾಕ್ರಾಂತರಾದರು. ಆಗ ಅವರ ಸ್ನೇಹಿತರು ಬಂದು ಯಾಕೆ ಚಿಂತಿಸುತ್ತಿದ್ದೀರೆಂದು ಕೇಳಿದರು. ನೋಡಿ ನನ್ನ ಮಕ್ಕಳನ್ನು

ಪೋಲೀಸನವರು ಹಿಡಿದುಕೊಂಡು ಹೋಗಿದ್ದಾರೆಂದು ಹೇಳಿದರು: "ಅಯ್ಯೋ ಪಾಪ ಎಂಥ ಒಳ್ಳೆಯ ಹುಡುಗರೆಂದು ಹೇಳಿ ಸ್ನೇಹಿತರು ತಮ್ಮ ಸಹಾನುಭೂತಿಯನ್ನು ತೋರಿಸಿದರು. ಆಗ ಆ ಹುಡುಗರ ತಾಯಿ ಹೇಳಿದರು. ನಾನು ನಮ್ಮ ಹುಡುಗರ ಸಲುವಾಗಿ ಅಷ್ಟು ಚಿಂತಿಸುವುದಿಲ್ಲ. ಅವರು ದಾಂಡಿಗರು, ಅವರು ಎಲ್ಲಿಗೆ ಹೋದರೂ ಹೇಗಾದರೂ ಮಾಡಿ ವಾಪಸು ಬಂದೇ ಬರುತ್ತಾರೆ. ಅವರ ಸಲುವಾಗಿ ನಾನು ಒದ್ದಾಡುವುದಿಲ್ಲ. ನಾನು ಒದ್ದಾಡುತ್ತಿದ್ದುದು. ಎಷ್ಟು ದಪ್ಪಗಿರುವ ಕೊಳತಪ್ಪಲೆಗಳು ಹೋದವಲ್ಲಾ."

ಹೊಟೇಲ್ ಮ್ಯಾನೇಜರ್

ನಾವಿಬ್ಬರೂ ಕೊನೆಯ ಸಲ ಜತೆಗಿದ್ದುದು ೧೯೩೨ ಫೆಬ್ರುವರಿ – ಮಾರ್ಚ್ ತಿಂಗಳಿನಲ್ಲಿ. ಆಗ ನಾನು ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಬಿ.ಎ. ಆನರ್ಸ್ ಕ್ಲಾಸಿನಲ್ಲಿ ಓದುತ್ತಿದ್ದೆ. ಕೊನೆಯ ಪರೀಕ್ಷೆಯಲ್ಲಿ ಮೊದಲನೆ ಸ್ಥಾನ ಪಡೆಯಬೇಕೆಂದು ಬಹಳ ಓದುತ್ತಿದ್ದೆ. ಹಗಲೂ ರಾತ್ರಿ ಓದಿ ನನ್ನ ಆರೋಗ್ಯವನ್ನು ಕೆಡಿಸಿಕೊಂಡೆ. ಪರೀಕ್ಷೆಯ ದಿನಗಳು ಹತ್ತಿರ ಬರುತ್ತಿದ್ದವು. ನನಗೆ ಓದಿದ್ದೇ ತಿಳಿಯುತ್ತಿರಲಿಲ್ಲ. ಮಧ್ಯಾಹ್ನ ಸಂಜೆ ಸ್ವಲ್ಪ ಜ್ವರ ಬಂದ ಹಾಗೆ ಆಗುತ್ತಿತ್ತು. ನನ್ನ ಸಂಕಟವನ್ನು ಯಾರಿಗೆ ಹೇಳಬೇಕು? ಜತೆಗಿದ್ದವರೆಲ್ಲಾ ತಮ್ಮ ತಮ್ಮ ಓದಿನಲ್ಲಿ ಮಗ್ನರಾಗಿದ್ದರು. ಇಂತಹ ಬಿಕ್ಕಟ್ಟಿನಲ್ಲಿ ನಾನಿರುವಾಗ ಕಿಟ್ಟ ಮೈಸೂರಿನ ಮಾಡರ್ನ್ ಹಿಂದೂ ಹೊಟೇಲಿಗೆ ಸಹಾಯಕ ಮ್ಯಾನೇಜರಾಗಿ ಬಂದ. ನಾನಿದ್ದ ಎಂ.ಕೆ. ಹಾಸ್ಟೆಲ್, ಮಾಡರ್ನ್ ಹಿಂದೂ ಹೊಟೇಲ್‌ಗೆ ಬಹಳ ಹತ್ತಿರ. ಇವೆರಡರ ಮಧ್ಯೆ ನಂಜರಾಜ ಬಹದ್ದೂರ ಛತ್ರ ಮಾತ್ರ. ಅವನಿಗೆ ಕೆಲಸ ಸಿಕ್ಕಿದ್ದು ನನ್ನ ಸುದೈವ. ಅವನ ಹತ್ತಿರ ಹೋಗಿ ನನ್ನ ಕಷ್ಟವನ್ನು ಹೇಳಿಕೊಂಡೆ. ಅವನು ಹೇಳಿದ, ನಿನಗೇನೂ ಆಗಿಲ್ಲ. ನೀನು ಬಹಳ ಓದಿ ಹೀಗೆ ಮಾಡಿಕೊಂಡಿದೀಯಾ. ದಿನಾ ನನ್ನ ರೂಮಿಗೆ ಬಂದು ಮಲಗಿಕೊಂಡು ವಿಶ್ರಾಂತಿ ತೆಗೆದುಕೊಂಡರೆ ಎಲ್ಲಾ ಸರಿಹೋಗುತ್ತದೆಂದು ನನಗೆ ಧೈರ್ಯ ಹೇಳಿದ. ನಿನಗೆ ಯಾವಾಗ ಬೇಕೋ ಆಗ ಕಾಫಿ ತರಿಸಿಕೋ ಎಂದು ಉತ್ತೇಜಿಸಿದ. ನಿನ್ನ ಓದನ್ನು ನೀನು ಮರೆತು ಬಿಡು ಎಂದ. ನಾನು ಹಾಗೆ ಮಾಡಿದೆ. ಬಹುಶಃ ಒಂದು ವಾರ ಈ ರೀತಿ ವಿಶ್ರಾಂತಿ ತೆಗೆದುಕೊಂಡೆ. ಪರೀಕ್ಷೆ ದಿನ ಬಂತು. ಕಿಟ್ಟ ಹೇಳಿದ 'ನೀನು ಪರೀಕ್ಷೆಗೆ ಹೋಗು' ನಾನು ಹೇಳಿದೆ, 'ನನಗೆ ನಡೆಯುವುದಕ್ಕೆ' ಆಗುವುದಿಲ್ಲ. ಪರೀಕ್ಷೆಗೆ ಹೇಗೆ ಹೋಗಲಿ? ಟಾಂಗಾ ಮಾಡಿಕೊಂಡು ಹೋಗು ಎಂದ. ನಾನು ಹಾಗೆ ಮಾಡಿದೆ. ಕೈಗೆ ಮೊದಲನೆ ಪೇಪರು ಕೊಟ್ಟರು. ಅದನ್ನು ನೋಡಿದ ಕೂಡಲೇ ನನಗೆ ಎಲ್ಲಿಲ್ಲದ ಧೈರ್ಯ ಬಂತು. ಆಗಿನಿಂದ ಕೊನೆಯ ಪೇಪರು ಬರೆಯುವವರೆಗೂ ಒಂದೇ ಸಮನೆ ಅತ್ಯಂತ ಸಮರ್ಪಕವಾಗಿ ಉತ್ತರಗಳನ್ನು

ಬರೆದೆ. ಕಿಟ್ಟಿ ನನ್ನ ಸಹಾಯಕ್ಕೆ ಬರದೇ ಇದ್ದಿದ್ದರೆ ಇದು ಸಾಧ್ಯವಾಗುತ್ತಿರಲಿಲ್ಲ. ನನಗೆ ನನ್ನ ಪರೀಕ್ಷೆಯಲ್ಲಿ ಮೊದಲನೆ ಕ್ಲಾಸಿನಲ್ಲಿ ಮೊದಲನೆಯ ಸ್ಥಾನ ಸಿಗುತ್ತಿರಲಿಲ್ಲ. ಇಂತಹ ಸ್ನೇಹಿತರು ಎಲ್ಲಿ ಸಿಗುತ್ತಾರೆ? ಇಂಥವರನ್ನು ಮರೆಯುವುದು ಹೇಗೆ ಸಾಧ್ಯ?

ನೋವನ್ನೇ ನಗೆಯಾಗಿ ಪರಿವರ್ತಿಸಿಕೊಳ್ಳಬೇಕು. ನೋವಿನ ಕಾಯಿಲೆಗೆ ನಗೆಯ ಇಂಜೆಕ್ಷನ್ ಕೊಟ್ಟು ರೋಗ ಪರಿಹರಿಸಿಕೊಳ್ಳಬೇಕು – ಇದು ನಾಡಿಗೇರರ ಸಿದ್ಧಾಂತ. ತಮ್ಮ ಕೃತಿಗಳಲ್ಲಿ ಈ ಸಿದ್ಧಾಂತವನ್ನು ರೂಪಿಸಿದ್ದು ಮಾತ್ರವಲ್ಲ, ತಮ್ಮ ಬದುಕಿನಲ್ಲೂ ಅಳವಡಿಸಿಕೊಂಡಿದ್ದು ನಾಡಿಗೇರರ ವ್ಯಕ್ತಿತ್ವದ ವಿಶೇಷ.

ಪ್ರಜಾಮತ, ಕಥಾಂಜಲಿ, ಜನವಾಣಿ, ದೇಶಬಂಧು, ಸತ್ಯ, ಕ್ರಾಂತಿ, ಚಲನಚಿತ್ರ, ತಾಯಿನಾಡು ಪತ್ರಿಕೆಗಳಲ್ಲಿ ಕಾರ್ಯನಿರ್ವಹಿಸಿದ್ದ ನಾಡಿಗೇರರು ಅನಂತರ ಸೇರಿದ್ದು ಬಿ.ಎನ್. ಗುಪ್ತರ 'ಜನಪ್ರಗತಿ' 'ಮಲ್ಲಿಗೆ'ಯನ್ನು.

"ಒಂದೇ ಕಲ್ಲಿನಿಂದ ಎರಡು ಹಕ್ಕಿ" ಎಂಬ ಚಿಕ್ಕ ಹಾಸ್ಯ ಪ್ರಬಂಧದಿಂದ ನಾಡಿಗೇರರ ಸಾಹಿತ್ಯ ರಚನೆ ಆರಂಭ. 'ತಲೆಹರಟೆ' ಪ್ರಕಟವಾದ ಪ್ರಥಮ ಹಾಸ್ಯಕೃತಿ (೧೯೪೫). 'ಎದಿರೇಟು' ಅವರ ಪ್ರಥಮ ಸಾಮಾಜಿಕ ಕಾದಂಬರಿ (೧೯೬೦). ಹಾಸ್ಯ ಹಾಗೂ ಸಾಮಾಜಿಕ ಕಾದಂಬರಿಗಳನ್ನು ಬರೆದ ಅವರ ಪ್ರಕಟಿತ ಕೃತಿಗಳ ಸಂಖ್ಯೆ ೭೦ಕ್ಕೂ ಹೆಚ್ಚು.

ನಾಡಿಗೇರರ ಕೃತಿಗಳಲ್ಲಿ ಪಾಂಡಿತ್ಯಕ್ಕಿಂತ ಆಡುನುಡಿಗೆ, ಸರಳ ಶೈಲಿಗೆ ಹೆಚ್ಚು ಪ್ರಾಮುಖ್ಯ. ಕಸದ ಬುಟ್ಟಿ, ಅಡ್ಡಾದಿಡ್ಡಿ, ಹಾಸ್ಯರಸಾಯನ, ಇವುಗಳು ವಿಡಂಬನಾ ಸಾಹಿತ್ಯದಲ್ಲಿ ಎತ್ತರದಲ್ಲಿ ನಿಲ್ಲಬಲ್ಲ ನಾಡಿಗೇರರ ಕೃತಿಗಳು. ತವರಿಗೆ ಬಂದ ಹೆಣ್ಣು, ಮೂರಕ್ಕೆ ಮುಕ್ತಿ, ಕಮಲೆಯ ಕನಸು, ಶಿಲಾಬಾಲಿಕೆ, ನಾಲ್ಕು ಸುಂದರಿಯರು, ಕೈಹಿಡಿದವಳ ಪುಣ್ಯ, ಚಕ್ರವ್ಯೂಹ, ಪ್ರಣಯ ಕೋಲಾಹಲ, ಕವಲೊಡೆದ ಪ್ರೇಮ, ತೆರೆಮರೆಯ ಸುಂದರಿಯರು– ಇವು ನಾಡಿಗೇರರ ಸಾಮಾಜಿಕ ಕಾದಂಬರಿಗಳಲ್ಲಿ ಪ್ರಮುಖವಾಗಿವೆ.

ಪುಢಾರಿ ಪೂರ್ಣಯ್ಯ ಅವರು ರಚಿಸಿದ ಏಕೈಕ ನಾಟಕ. ಕನ್ನಡದ ಉತ್ಕಟ ಅಭಿಮಾನಿಗಳಾಗಿದ್ದ ಅವರು ಕನ್ನಡ ಪ್ರಗತಿಶೀಲ ಚಳವಳಿಯ ಕಾರ್ಯದರ್ಶಿಯಾಗಿ ಶ್ರಮಿಸಿದರು.

6

ಸಹಪಾಠಿ ಸೀತಾರಾಮಯ್ಯ

ಎಂ.ವಿ. ಸೀತಾರಾಮಯ್ಯನವರು, ನಾನು ಒಂದೇ ಕಾಲದಲ್ಲಿ (೧೯೨೯–೩೦) ಮೈಸೂರು ಮಹಾರಾಜರವರ ಕಾಲೇಜಿನಲ್ಲಿ ಬಿ.ಎ. ಕ್ಲಾಸಿನಲ್ಲಿ ಓದುತ್ತಿದ್ದೆವು. ನನ್ನ ವಿಷಯ ಇತಿಹಾಸ, ಅವರ ವಿಷಯ ಕನ್ನಡ ಸಾಹಿತ್ಯ. ಹೀಗಾಗಿ ನಮ್ಮ ಕ್ಲಾಸುಗಳು, ಅಧ್ಯಾಪಕರು ಬೇರೆಬೇರೆ. ಇಂಗ್ಲಿಷ್ ಪಾಠಗಳಿಗೆ ಮಾತ್ರ ಒಂದೇ ಕ್ಲಾಸಿನಲ್ಲಿ ಸೇರುತ್ತಿದ್ದೆವು. ಹೊಸದಾಗಿ ಕನ್ನಡ ಸಾಹಿತ್ಯದ ವಿದ್ಯಾರ್ಥಿಗಳಿಗೆ ದಕ್ಷಿಣ ಭಾರತದ ಇತಿಹಾಸವನ್ನು ಒಂದು ವಿಷಯವನ್ನಾಗಿ ಇಟ್ಟಿದ್ದರು. ಅದನ್ನು ಕಲಿಸುತ್ತಿದ್ದ ಡಾ॥ ಎಂ.ಹೆಚ್. ಕೃಷ್ಣರವರು ಎಂ.ವಿ.ಸೀ. ಅವರಿಗೂ ನಮಗೂ ಗುರುಗಳಾಗಿದ್ದರು. ವಿದ್ಯಾರ್ಥಿ ದೆಸೆಯಲ್ಲಿ ನನಗೂ ಎಂ.ವಿ.ಸೀ. ಯವರಿಗೂ ಮುಖ ಪರಿಚಯವಿತ್ತೇ ವಿನಾ, ವ್ಯಕ್ತಿಶಃ ಪರಿಚಯವಿರಲಿಲ್ಲ. ಆದರೆ ಕೆಲವು ನನ್ನ ಸ್ನೇಹಿತರು ಅವರಿಗೆ ಸ್ನೇಹಿತರಿದ್ದರು. ಅಂಥವರಲ್ಲಿ ಕೆ.ಆರ್. ಪೂರ್ಣ ಮತ್ತು ಸಿ. ನರಸಿಂಹಮೂರ್ತಿಯವರ ಹೆಸರುಗಳನ್ನು ಹೇಳಬಹುದು. ಆಗ ಎಂ.ವಿ.ಸೀ.ಯವರ ವೇಷ ವಿಚಿತ್ರವಾಗಿರುತ್ತಿತ್ತು. ಅವರ ಆಕಾರದಲ್ಲಿ ಆಗ್ಯೂ ನಂತರವೂ ಯಾವ ಬದಲಾವಣೆಯೂ ಆಗಲಿಲ್ಲ. ಅದೇ ಎತ್ತರ, ಅದೇ ಮೈಕಟ್ಟು. ಅವರು ಕುಳ್ಳ ಇದ್ದರೂ, ಅವರು ಹಾಕಿಕೊಳ್ಳುತ್ತಿದ್ದ ಟೋಪಿ ಬಹಳ ಉದ್ದ. ಅದರ ಬಣ್ಣವೂ ವಿಚಿತ್ರ. ಈ ಅಭಾಸದಿಂದ ಅವರನ್ನು ಎಲ್ಲರೂ ನೆನಪಿಟ್ಟುಕೊಳ್ಳುತ್ತಿದ್ದರು. ಇನ್ನು ಎರಡು ಕಾರಣಗಳಿಂದ ಅವರನ್ನು ನಾವು ಮರೆಯುವ ಹಾಗಿರಲಿಲ್ಲ. ಒಂದು, ಅವರಿಗೆ ಚಿತ್ರಕಲೆ ಬಹಳ ಚೆನ್ನಾಗಿ ಸಾಧಿಸಿತ್ತು. ಎರಡನೆಯದು, ಅವರು ನಾಟಕದಲ್ಲಿ ಬಹಳ ಸೊಗಸಾಗಿ ಪಾರ್ಟು ಮಾಡುತ್ತಿದ್ದರು. ನಮ್ಮ ಕಾಲದಲ್ಲಿ ಚಿಕ್ಕ ಹುಡುಗಿಯ ಪಾತ್ರಕ್ಕೆ ಎಂ.ವಿ.ಸೀ.ಯವರು ಹೇಳಿ ಮಾಡಿಸಿದ ಹಾಗೆ ಇದ್ದರು. ಆಷಾಢಭೂತಿ ನಾಟಕದಲ್ಲಿ ಲಲಿತೂಪಿನ ಪಾರ್ಟು ಅವರಿಗೆ ಚೆನ್ನಾಗಿ ಒಪ್ಪುತ್ತಿತ್ತು.

ಪದವಿ ತೆಗೆದುಕೊಂಡಮೇಲೆ ನಾವು ಬೇರೆ ಬೇರೆ ಕಡೆ ಹೋಗಬೇಕಾಗಿ ಬಂತು. ಪುನಃ ನಮ್ಮ ಭೇಟಿ ೧೯೭೦ರ ದಶಕದಲ್ಲಿ ಆಯಿತು. ನಾನು ಆಗ ಧಾರವಾಡದ ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿದ್ದೆ. ಅವರು ಬೆಂಗಳೂರು

ವಿಶ್ವವಿದ್ಯಾನಿಲಯದಲ್ಲಿದ್ದರು. ಅವರ ಒಬ್ಬ ಪಿಎಚ್.ಡಿ. ವಿದ್ಯಾರ್ಥಿಗೆ ನಾನು ಪರೀಕ್ಷಕನಾಗಿದ್ದೆ. ಈ ವಿದ್ಯಾರ್ಥಿಯ ಮೌಖಿಕ ಪರೀಕ್ಷೆಯಾಗಬೇಕಿತ್ತು. ಈ ಪರೀಕ್ಷೆಯೂ ಅವರ ಮನೆಯಲ್ಲಿ ಅವರ ಕೋಣೆಯಲ್ಲಿ ಆಯಿತು. ಆ ಕೋಣೆ ಬಹಳ ಪ್ರಸಿದ್ಧವಾದುದು. ಅದನ್ನು ವರ್ಣಿಸಲಿಕ್ಕೆ ಅವರಂಥ ಸಾಹಿತಿಯೇ ಬರಬೇಕು. ಆ ಸಣ್ಣ ಕೋಣೆಯಲ್ಲಿ ಒಂದು ಕಡೆ ಪುಸ್ತಕಗಳ ರಾಶಿ. ಇವುಗಳ ಮಧ್ಯ ಒಂದು ಮಂಚದ ಮೇಲೆ ಇವರು ಕೂತುಕೊಂಡು ತಮ್ಮ ಎಲ್ಲಾ ವ್ಯವಹಾರವನ್ನು ನಡೆಸುತ್ತಿದ್ದರು. ಆಗ ಆರಂಭವಾದ ನಮ್ಮ ನಿಜವಾದ ಸ್ನೇಹ ದಿನದಿನಕ್ಕೂ ಬೆಳೆಯುತ್ತಾ ಹೋಯಿತು. ಕರ್ನಾಟಕ ವಿಶ್ವವಿದ್ಯಾನಿಲಯದವರು, ಎಂ.ವಿ.ಸೀ.ಯವರನ್ನು ವಿಶೇಷ ಉಪನ್ಯಾಸಗಳನ್ನು ಕೊಡಲಿಕ್ಕೆ ಧಾರವಾಡಕ್ಕೆ ಕರೆದಿದ್ದರು. ಎಂ.ವಿ.ಸೀ. ಅವರಿಗೆ ಈ ಆಹ್ವಾನವನ್ನು ಸ್ವೀಕರಿಸಲಿಕ್ಕೆ ಆಗಿರಲಿಲ್ಲ. ನಮ್ಮ ಭೇಟಿಯಾದ ಕೂಡಲೇ ಒಪ್ಪಿಕೊಂಡರು. ಧಾರವಾಡದಲ್ಲಿ ನನ್ನ ಮನೆಯಲ್ಲಿಯೆ ಇದ್ದರು. "ಕನ್ನಡ ಸಾಹಿತ್ಯದಲ್ಲಿ ಶಾಂತರಸ" ಎಂಬ ವಿಷಯದ ಮೇಲೆ ಇವರ ಮೂರು ವ್ಯಾಖ್ಯಾನಗಳು ಇವರ ವಿದ್ವತ್ತಿಗೆ ಪ್ರತೀಕವಾಗಿದ್ದವು. ಅವರು ಮತ್ತು ಅವರ ಮಗ ರಾಮಪ್ರಸಾದ ನಮ್ಮ ಮನೆಯಲ್ಲಿ ಕಳೆದ ದಿನಗಳು ನಾನು ಮರೆಯುವಹಾಗಿಲ್ಲ. ಇದಕ್ಕೆ ಕಾರಣವನ್ನು ಅವರ ಮಾತಿನಲ್ಲಿಯೇ ಹೇಳಬೇಕೆಂದರೆ ನಾವಿಬ್ಬರೂ ಮೈಸೂರಿನಲ್ಲಿ ವಿದ್ಯಾರ್ಥಿಗಳಾಗಿದ್ದಾಗ ಬಾಳಿನ ಬುತ್ತಿಯನ್ನು ಒಟ್ಟಿಗೆ ಕಟ್ಟಿದ್ದೆವು. ಆ ಬುತ್ತಿಯ ಗಂಟನ್ನು ಬಿಚ್ಚಿ ತಿನ್ನುವಾಗ ಬಹು ರುಚಿಯಾಗಿರುತ್ತಿತ್ತು.

ಇದಾದ ಮೇಲೆ ನಮ್ಮ ಪತ್ರವ್ಯವಹಾರ ಆರಂಭವಾಯಿತು. ಬೊಂಬಾಯಿನಿಂದ ಹೊರಡುತ್ತಿರುವ ಅಂತರರಾಷ್ಟ್ರೀಯ ಪ್ರಸಿದ್ಧಿಯ'ಮಾರ್ಗ'ವೆನ್ನುವ ಪತ್ರಿಕೆಯವರು ಕರ್ನಾಟಕದ ಬಗೆಗೆ ಒಂದು ವಿಶೇಷ ಸಂಚಿಕೆಯನ್ನು ಹೊರಡಿಸಬೇಕೆಂದಿದ್ದರು. ಅದರ ಸಂಪಾದಕರು ಡಾ॥ (ಶ್ರೀಮತಿ) ಸರಿಯೂ ದೋಷಿಯವರು ಈ ಸಂಚಿಕೆಗೆ ಕನ್ನಡ ಸಾಹಿತ್ಯದ ಮೇಲೆ ಒಂದು ಲೇಖನವನ್ನು ಬರೆಯಲು ಬರೆಹಗಾರನ ಹೆಸರನ್ನು ಸೂಚಿಸಿ ಎಂದು ಕೇಳಿದಾಗ ನಾನು ಎಂ.ವಿ.ಸೀ. ಯವರನ್ನು ಸೂಚಿಸಿದೆ. ಸಂಪಾದಕರು ಬೆಂಗಳೂರಿಗೆ ಬಂದು ಅವರನ್ನು ಭೇಟಿಯಾಗಿ ಒಪ್ಪಿಸಿದರು. ಈ ಲೇಖನವನ್ನು ಎಂ.ವಿ.ಸೀ. ಬರೆದರು. ಎಂ.ವಿ.ಸೀ.ಯವರು ಸಾಹಿತ್ಯ ಪರಿಷತ್ತಿನ ಸುವರ್ಣ ಮಹೋತ್ಸವದ ಸಂಸ್ಮರಣ ಪತ್ರಿಕೆಯ ಸಂಪಾದಕರಾದಾಗ ನನಗೆ ಮೈಸೂರು ದಿವಾನರುಗಳ ಮೇಲೆ ಲೇಖನ ಬರೆಯಲು ಹೇಳಿದರು. ನಾನು ಬರೆದೆ. ೧೯೮೬ ರಲ್ಲಿ ಧಾರವಾಡವನ್ನು ಬಿಟ್ಟು ಬೆಂಗಳೂರಿನಲ್ಲಿ ವಾಸಮಾಡಲು ನಾನು ಬಂದೆ. ಆಗ ನಮ್ಮ ಒಡನಾಟ ಇನ್ನೂ ಹೆಚ್ಚಾಯಿತು. ಇದರ ಪರಮಾವಧಿಯೆಂದರೆ ಮಿಥಿಕ್ ಸೊಸೈಟಿಯ ಕಾರ್ಯದರ್ಶಿಗಳಾಗಿದ್ದ ಶ್ರೀ ಎಸ್. ಶ್ರೀಕಂಠಯ್ಯನವರ ಜನ್ಮ ಶತಮಾನೋತ್ಸವದ ವೇಳೆಯಲ್ಲಿ (೧೯೮೬-೮೭) ಈ

ಉತ್ಸವವನ್ನು ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದ ಪರವಾಗಿ ಆಚರಿಸಲಾಯಿತು. ಎಸ್. ಶ್ರೀಕಂಠಯ್ಯನವರ ಐತಿಹಾಸಿಕ ಸಂಶೋಧನೆಯ ಕ್ಷೇತ್ರ ವಿಜಯನಗರ. ಇದರ ಇತಿಹಾಸಕ್ಕೆ ಸಂಬಂಧಪಟ್ಟ ಒಂದು ವಿಚಾರಗೋಷ್ಠಿಯನ್ನು ನಡೆಸಬೇಕೆಂದು ಪ್ರತಿಷ್ಠಾನವು ನಿರ್ಧರಿಸಿತು. ಇದರ ಸಂಪೂರ್ಣ ನಿರ್ವಹಣೆಯನ್ನು ಎಂ.ವಿ.ಸೀ.ಯವರು ನನಗೆ ವಹಿಸಿದರು. ಆ ವಿಚಾರಗೋಷ್ಠಿಗೆ ಬಂದ ಪ್ರಬಂಧಗಳನ್ನು ಪುಸ್ತಕ ರೂಪದಲ್ಲಿ ತರುವ ಜವಾಬ್ದಾರಿಯನ್ನೂ ನನಗೆ ವಹಿಸಲಾಗಿತ್ತು. ಅದು ಪುಸ್ತಕ ರೂಪವಾಗಿ (Early Vijayanagara) ಬಂತು. ಈಚೆಗೆ ಅದರ ಕನ್ನಡ ಅನುವಾದವೂ ಸಿದ್ಧವಾಗಿದೆ. ವಿಚಾರಗೋಷ್ಠಿ ನಡೆಯುವಾಗ ಎಂ.ವಿ.ಸೀ.ಯವರು ಪ್ರತಿಷ್ಠಾನವನ್ನು ಹೇಗೆ ನಡೆಸಿಕೊಂಡು ಹೋಗುತ್ತಿದ್ದಾರೆನ್ನುವುದನ್ನು ತೀರ ಹತ್ತಿರದಿಂದ ನೋಡಿದೆ. ಪ್ರತಿಷ್ಠಾನದ ನಿರ್ವಹಣೆಗೆ ತಮ್ಮ ತನು, ಮನ, ಧನಗಳನ್ನು ಅರ್ಪಿಸಿದ್ದರು. ಹಿರಿಯರ ಮತ್ತು ಕಿರಿಯರ ಸಹಕಾರವನ್ನು ಅವರು ದೊರಕಿಸುತ್ತಿದ್ದ ರೀತಿ ಆಶ್ಚರ್ಯವನ್ನುಂಟು ಮಾಡುತ್ತಿತ್ತು. ಸಂಸ್ಥೆಗಳನ್ನು ಕಟ್ಟುವವರು ಕಲಿಯುವ ಹಾಗೆ ಇತ್ತು. Ford Foundation ನವರು ಪ್ರತಿಷ್ಠಾನಕ್ಕೆ ಸಹಾಯ ಮಾಡಬಹುದೇನೊ ಕೇಳಿನೋಡೋಣವೆಂದರು. ಭಾರತದಲ್ಲಿಯ ಅದರ ಮುಖ್ಯಸ್ಥರ ಪರಿಚಯ ನನಗೆ ಇದ್ದುದರಿಂದ ಅವರು ಬೆಂಗಳೂರಿಗೆ ಬಂದಾಗ ಅವರ ಹತ್ತಿರ ಇವರನ್ನು ಕರೆದುಕೊಂಡು ಹೋದೆ. ಸಂಭಾಷಣೆ ಸೌಹಾರ್ದಯುತವಾಗಿದ್ದರೂ ಕೆಲಸ ಆಗಲಿಲ್ಲ. ನನಗೆ ಬಹಳ ನಿರಾಶೆಯಾಯಿತು. ಎಂಥಲ್ಲ ಕರೆದುಕೊಂಡು ಬಂದೆನಲ್ಲಾ ಅಂದುಕೊಂಡೆ. ಎಂ.ವಿ.ಸೀ.ಯವರು ಮಾತ್ರ ನಿರಾಶರಾಗಲಿಲ್ಲ. ಎಲ್ಲಾ ತರಹ ಅನುಭವಗಳು ಆಗಬೇಕೆಂದರು. ರಾಷ್ಟ್ರೀಯ ಪತ್ರಾಗಾರದ ನಿರ್ದೇಶಕರು ಶ್ರೀ ಪರ್ಟಿಯವರು ನನ್ನ ಸ್ನೇಹಿತರು. ಅವರು ಡೆಲ್ಲಿಯಿಂದ ಬೆಂಗಳೂರಿಗೆ ಬಂದು ಪ್ರತಿಷ್ಠಾನದ ಕೆಲಸವನ್ನು ನೋಡಿ, ಮೆಚ್ಚಿಕೊಂಡು ತಮ್ಮ ಸಂಸ್ಥೆಯಿಂದ ಪ್ರತಿಷ್ಠಾನಕ್ಕೆ ಸಾಧ್ಯವಾದ ಸಹಾಯವನ್ನು ಮಾಡಲು ಒಪ್ಪಿದರು.

ಎಂ.ವಿ.ಸೀ.ಯವರ ಆರೋಗ್ಯದ ವಿಷಯ ಒಂದೆರಡು ಮಾತನ್ನು ಹೇಳುವುದು ಅವಶ್ಯ. ಅವರೇ ತಮ್ಮ ಆರೋಗ್ಯದ ಬಗೆಗೆ ಸ್ವಾರಸ್ಯವಾಗಿ ಬರೆದಿದ್ದಾರೆ. ತಮ್ಮನ್ನು ತಾವು ಹುಟ್ಟುರೋಗಿಯೆಂದು ಕರೆದುಕೊಂಡಿದ್ದಾರೆ. ಇದು ಉತ್ಪ್ರೇಕ್ಷೆ. ಯಾಕೆಂದರೆ ಅವರ ವಿದ್ಯಾರ್ಥಿ ದೆಸೆಯಲ್ಲಿ ಅವರ ಆರೋಗ್ಯ ಚೆನ್ನಾಗಿತ್ತು. ರೋಗಾನುಭವದಿಂದ ತಮಗೆ ತತ್ವಜ್ಞಾನ ಹೇಗೆ ಬಂತು ಮತ್ತು ಬರವಣಿಗೆಗೆ ಅವಕಾಶ ಹೇಗೆ ಸಿಕ್ಕಿತು ಎಂದು ಹೇಳಿ ಅನಾರೋಗ್ಯ ಕಾಲವನ್ನೂ ಸದುಪಯೋಗ ಮಾಡಿಕೊಳ್ಳಬಹುದೆಂಬುದನ್ನು ತೋರಿಸಿಕೊಟ್ಟಿದ್ದಾರೆ. ಇನ್ನೊಂದು ಕಡೆ "ಬಾಳಿನಬುತ್ತಿ" ಎನ್ನುವ ಲೇಖನದಲ್ಲಿ ವ್ಯಾಯಾಮಕ್ಕೆ ತಾವು ಲಕ್ಷ್ಯ ಕೊಡದೇ ಇದ್ದುದು ತಪ್ಪು ಎಂದು ಒಪ್ಪಿಕೊಂಡಿದ್ದಾರೆ.

ಇವರ ಅನಾರೋಗ್ಯ ಇತರರ ಕುತೂಹಲವನ್ನು ಕೆರಳಿಸುವಂತಿತ್ತು. ಇಂತಹ 'ಹುಟ್ಟುರೋಗಿ' ೮೦ ವರ್ಷದವರೆಗು ಬದುಕಿದ್ದು, ಪ್ರಸಿದ್ಧ ಸಾಹಿತಿಯಾಗಿ ಪ್ರಕಾಂಡ ಪಂಡಿತರಾಗಿ, ನೂರಾರು ಜನರ ಸ್ನೇಹವನ್ನು ಸಂಪಾದಿಸಿ, ಒಂದು ಅಪೂರ್ವ ಸಂಸ್ಥೆಯನ್ನು ಕಟ್ಟಿ, ತಾವೇ ಒಂದು ಸಂಸ್ಥೆಯಾಗಿರಲು ಹೇಗೆ ಸಾಧ್ಯ. ಇವರು ವೈದ್ಯಕೀಯ ನಿಯಮಗಳಿಗೆ ಅಪವಾದವೇ ಎನ್ನುವಷ್ಟು ನಾಜೂಕಾಗಿತ್ತು ಅವರ ದೇಹಸ್ಥಿತಿ. ಅವರು ರೋಗಿಯಾದರೂ ಹೇಗೆ ಕೆಲಸ ಮಾಡುತ್ತಿದ್ದರೆನ್ನುವುದಕ್ಕೆ ನನಗೆ ಗೊತ್ತಿರುವ ಒಂದೆರಡು ಉದಾಹರಣೆಗಳನ್ನು ಕೊಡಬಹುದು. ಮೇಲೆ ಹೇಳಿದ ಶತಮಾನೋತ್ಸವದ ಸಮಯದಲ್ಲಿ ಮತ್ತು ಅದಕ್ಕೆ ಮುಂಚೆ ನಾವು ಮೇಲಿಂದ ಮೇಲೆ ಭೇಟಿಯಾಗುತ್ತಿದ್ದೆವು. ಈ ಭೇಟಿ ಎಲ್ಲಾ ಅವರ ಮನೆಯಲ್ಲಿ ಆಗುತ್ತಿತ್ತು. ಯಾವಾಗಲೂ ಇಲ್ಲಿಯೆ ಭೇಟಿಯಾಗುತ್ತೇವೆ, ಒಂದು ಸಲ ನಮ್ಮ ಮನೆಗೆ ಬನ್ನಿ ಎಂದು ಕರೆದೆ. ಅದಕ್ಕೆ ಅವರು ಒಪ್ಪಿಕೊಂಡರು. ಈ ನೆಪದಲ್ಲಿಯಾದರೂ ಅವರು ನಮ್ಮ ಮನೆಗೆ ಬರಲೆಂದು ಹೀಗೆ ಮಾಡಿದೆ. ಅವರು ನಮ್ಮ ಮನೆಗೆ ಬರುವ ದಿನ ಬಂತು. ಆದಿನ ಬೆಳಿಗ್ಗೆ ಅವರ ಪತ್ರ ನನಗೆ ಬಂತು. ಅದು ಹೀಗಿತ್ತು– "ಮಾನ್ಯ ಮಿತ್ರರಾದ ಶ್ರೀ ಗಿರೀಧರ ದೀಕ್ಷಿತ್ ಅವರಿಗೆ ನಮಸ್ಕಾರ. ಇದ್ದಕ್ಕಿದ್ದ ಹಾಗೆ ಬೆಳಗ್ಗೆಯಿಂದ ಡಯೋರಿಯಾಕ್ಕೆ ಇಟ್ಟುಕೊಂಡಿದೆ. ಸದ್ಯಕ್ಕೆ ನಿಂತಿದ್ದರೂ, ಸ್ವಲ್ಪ ನಿಶ್ಶಕ್ತಿಯಾಗಿದೆ. ನಾನು ಈ ಮೊದಲು ತಿಳಿಸಿದಂತೆ ಇಂದು ಸಂಜೆ ಬರಲು ಸಾಧ್ಯವಾಗುತ್ತಿಲ್ಲ. ನೀವು ನನಗಾಗಿ ಇಂದು ನಿರೀಕ್ಷೆ ಮಾಡುತ್ತಿರುವಿರಿ ಎಂದು ಬಲ್ಲೆ. ನನ್ನ ಗೈರುಹಾಜರಿ ನಿಮಗೆ ಬೇಸರ ಉಂಟುಮಾಡಿರುತ್ತದೆ. ಯತ್ನವಿಲ್ಲ, ಮತ್ತೆ ಯಾವತ್ತು ಬರುತ್ತೇನೆ ಎನ್ನುವುದನ್ನು ಮುಂದಾಗಿ ತಿಳಿಸಿ ಬರುತ್ತೇನೆ. ದಯವಿಟ್ಟು ಕ್ಷಮಿಸಿ. ತಮ್ಮ ವಿಶ್ವಾಸಿ, ಎಂ.ವಿ. ಸೀತಾರಾಮಯ್ಯ". ಶತಮಾನೋತ್ಸವದ ಪ್ರತಿಯೊಂದು ಕಾರ್ಯಕ್ರಮಕ್ಕೂ ಅವರು ತಮ್ಮ ಪಾತ್ರವನ್ನು ಎಂ.ವಿ.ಸೀ.ಯವರು ಚೊಕ್ಕವಾಗಿ ನಿರ್ವಹಿಸುತ್ತಿದ್ದರು. ಅದರ ಸಮಾರೋಪದ ದಿನ ಬಂತು. ಅಂದು ಬೆಳಿಗ್ಗೆ ಅವರಿಂದ ಫೋನ್ ಬಂತು. "ದೀಕ್ಷಿತರೆ, ನನಗೆ ಜ್ವರ ಬಂದಿದೆ. ಇವತ್ತು ನನಗೆ ಬರಲಿಕ್ಕೆ ಆಗುವುಲ್ಲ" ಎಂದರು. ನಾನು ಅವರಿಗೆ ಹೇಳಿದೆ– ನೀವೇನು ಯೋಚನೆ ಮಾಡಬೇಡಿ, ವಿಶ್ರಾಂತಿ ತೆಗೆದುಕೊಳ್ಳಿ ಎಂದು ಸಮಾಧಾನ ಮಾಡಿದೆ. ಸಮಾರೋಪ ಸಮಾರಂಭ ವೇಳೆಗೆ ಸರಿಯಾಗಿ ಆರಂಭವಾಯಿತು. ಅದೇ ಹೊತ್ತಿಗೆ ಎಂ.ವಿ.ಸೀ.ಯವರು ಬಂದರು. ಬರೋದಿಲ್ಲವೆಂದು ಹೇಳಿದ್ದಿರಿ ಬಂದಿರಲ್ಲವೆಂದು ಕೇಳಿದ್ದಕ್ಕೆ ಬರದೆ ಇರಲಿಕ್ಕೆ ಆಗಲಿಲ್ಲ, ಬಂದುಬಿಟ್ಟೆ ಎಂದು ಹೇಳಿ ಸಭೆಯಲ್ಲಿ ತಮ್ಮ ಪಾತ್ರವನ್ನು ಏನೂ ಆಗದೆ ಇರುವವರ ಹಾಗೆ ನಿರ್ವಹಿಸಿದರು. ಹೀಗಿತ್ತು ಅವರ ಅನಾರೋಗ್ಯದ ಉದಾಹರಣೆಗಳು ಮತ್ತು ಕಾರ್ಯತತ್ಪರತೆ.

ಅವರು ಸಂಪೂರ್ಣವಾಗಿ ಆರೋಗ್ಯವಂತರಾಗಿಲ್ಲದಿದ್ದರೂ ಇಷ್ಟೆಲ್ಲಾ ಸಾಧಿಸಲಿಕ್ಕೆ ಹೇಗೆ ಸಾಧ್ಯವಾಯಿತೆನ್ನುವುದಕ್ಕೆ ಕಾರಣ ಹೀಗೆ ಹೇಳಬಹುದೊ ಏನೊ. ಅವರು ಸಂಪೂರ್ಣವಾಗಿ ಆರೋಗ್ಯವಂತರಾಗಿದ್ದರೆ, ತಮ್ಮ ಆರೋಗ್ಯ ಚೆನ್ನಾಗಿದೆಯೆಂದು ಊಟ ತಿಂಡಿಯಲ್ಲಿ ಹೆಚ್ಚು ಕಡಿಮೆ ಮಾಡಿಕೊಂಡು ಆರೋಗ್ಯವನ್ನು ಕೆಡಿಸಿಕೊಳ್ಳುತ್ತಿದ್ದರು. ಇವರಿಗೆ ಆ ತರಹ ಆರೋಗ್ಯ ಇಲ್ಲದ್ದರಿಂದ ಇವರು ಬಹಳ ಜಾಗರೂಕರಾಗಿರುತ್ತಿದ್ದರು. ಒಂದೇ ತೂಕದ ಮೇಲೆ ಇರುತ್ತಿದ್ದರು. ಸದಾರೋಗಿಯಾಗಿದ್ದರಿಂದ ಸದಾ ಪಥ್ಯದಲ್ಲಿರುತ್ತಿದ್ದರು. ಆದ್ದರಿಂದ ಅವರ ಆರೋಗ್ಯ ಅಷ್ಟು ಕೆಡಲಿಲ್ಲ. ಇಲ್ಲದೆ ಹೋಗಿದ್ದರೆ, ದೊಡ್ಡ ರೋಗಗಳು ಬಂದು ಇವರನ್ನು ಹಣ್ಣು ಮಾಡುತ್ತಿತ್ತು. ಅದಕ್ಕೆ ಇವರು ಅವಕಾಶ ಕೊಡದಿದ್ದ ಹಾಗೆ ಕಾಣುತ್ತದೆ.

ಅವರು ನನಗೆ ಮಾಡಿದ ಮಹತ್ವದ ಕೊನೆಯ ಸಹಾಯವನ್ನು ತಿಳಿಸಿ ಈ ಲೇಖನವನ್ನು ಮುಗಿಸುತ್ತೇನೆ. ಕೆಳದಿ ಇತಿಹಾಸಕ್ಕೆ ನೆರವಾಗುವ ಹಾಗೆ ಕೆಳದಿಯಲ್ಲಿ ಒಂದು ವಸ್ತುಸಂಗ್ರಹಾಲಯವನ್ನು ಮತ್ತು ಒಂದು ಸಂಶೋಧನಾ ಕೇಂದ್ರವನ್ನು ಈಚೆಗೆ ಸ್ಥಾಪಿಸಲಾಗಿದೆ. ಇವನ್ನು ನೋಡಿಕೊಳ್ಳಲಿಕ್ಕೆ ಕೆಳದಿ ಟ್ರಸ್ಟ್ ಎನ್ನುವ ಸಂಸ್ಥೆ ಇದೆ. ಇದರ ಅಧ್ಯಕ್ಷರು ಡಾ॥ ಎಸ್.ಆರ್. ರಾವ್, ಉಪಾಧ್ಯಕ್ಷರು ಎಂ.ವಿ.ಸೀ., ನಾನು, ಡಾ॥ ಎಸ್.ವಿ. ದೇಶಿಕಾಚಾರ್ಯರು ಮತ್ತು ಇತರರು ಸದಸ್ಯರು. ಬಹಳ ಹಿಂದೆ ಕೆಳದಿ ಇತಿಹಾಸಕ್ಕೆ ಸಂಬಂಧಿಸಿದಂತೆ ಒಂದು ವಿಚಾರ ಗೋಷ್ಠಿಯನ್ನು ಏರ್ಪಡಿಸಿದ್ದೆ. ಅದರಲ್ಲಿ ಮಂಡಿಸಿದ ಪ್ರಬಂಧಗಳನ್ನು Studies in Keladi History ಎಂದು ನಾನು ಸಂಪಾದಿಸಿದ್ದೇನೆ. ಅದರ ಕನ್ನಡ ಅನುವಾದವನ್ನು "ಕೆಳದಿಯ ಐತಿಹಾಸಿಕ ನಿಬಂಧಗಳು" ಎಂದು ಮುದ್ರಿಸಬೇಕಾಗಿತ್ತು. ಈ ಮುದ್ರಣದ ಎಲ್ಲಾ ಜವಾಬ್ದಾರಿಯನ್ನು ಎಂ.ವಿ.ಸೀ.ಯವರು ಹೊತ್ತುಕೊಂಡರು. ಈಗ ಅದರ ಬಿಡುಗಡೆಯಾಗಬೇಕಾಗಿದೆ. ಅದಕ್ಕಾಗಿ ಶ್ರಮಿಸಿದವರು ಇಲ್ಲವಲ್ಲಾ ಎಂದು ವ್ಯಥೆಯಾಗುತ್ತದೆ. ಎಲ್ಲಿ ಸಿಗುತ್ತಾರೆ ಇಂತಹ ಗೆಳೆಯರು!

■

7

ಕೆ. ಅಭಿಶಂಕರ ಅವರು

ಶ್ರೀ ಕೆ. ಅಭಿಶಂಕರ ಇವರು ಕರ್ನಾಟಕ ರಾಜ್ಯ ಗೆಜೆಟಿಯರಿನ ಮುಖ್ಯ ಸಂಪಾದಕರಾಗಿದ್ದಾಗ. ನಾನು ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡದಲ್ಲಿಯ ಇತಿಹಾಸ ವಿಭಾಗದ ಮುಖ್ಯಸ್ಥನಾಗಿದ್ದೆ. ಕೆಳದಿ ಇತಿಹಾಸದ ಬಗ್ಗೆ ಮಾಹಿತಿಗಾಗಿ ತಮ್ಮ ಇಬ್ಬರು ಸಹಾಯಕರನ್ನು ನನ್ನ ಕಡೆಗೆ ಕಳಿಸಿಕೊಟ್ಟಿದ್ದರು. ಹೀಗೆ ಆರಂಭವಾದ ನಮ್ಮ ಪರಿಚಯ ನಾನು ೧೯೮೫ ರಿಂದ ೧೯೯೬ ರವರೆಗೂ ಬೆಂಗಳೂರಿನಲ್ಲಿ ಇದ್ದ ವೇಳೆಯಲ್ಲಿ ನಿಕಟವಾಯಿತು. ಮಿಥಿಕ್ ಸೊಸೈಟಿಯ ಕಾರ್ಯಕ್ರಮಗಳಲ್ಲಿ ಸೇರುತ್ತಿದ್ದೆವು. ಕರ್ನಾಟಕ ಇತಿಹಾಸ ಅಕಾಡೆಮಿಯ ಕಾರ್ಯಕ್ರಮಗಳಲ್ಲಿ ಇಬ್ಬರಿಗೂ ಸಮಾನ ಆಸಕ್ತಿ ಇದ್ದುದರಿಂದ ನಮ್ಮ ಸ್ನೇಹ ಬೆಳೆಯಿತು. ನಾವಿಬ್ಬರೂ ಸೇರುತ್ತಿದ್ದ ಮೂರನೆಯ ವೇದಿಕೆ ಕೆಳದಿ ಮ್ಯೂಜಿಯಂನ ಟ್ರಸ್ಟ್. ಅವರು ಬನವಾಸಿಯಲ್ಲಿ ಅಂತಹ ಮ್ಯೂಜಿಯಂ ಸ್ಥಾಪನೆಗೆ ಹೋರಾಡಿದ್ದರಿಂದ ಕೆಳದಿ ಮ್ಯೂಜಿಯಂ ಟ್ರಸ್ಟಿಗೆ ಅವರ ಸಲಹೆಗಳು ಅತ್ಯವಶ್ಯವಾಗಿತ್ತು. ಬನವಾಸಿ ವಲಯ ಅಭ್ಯುದಯ ಸಮಿತಿ ಎಂಬ ಸ್ವಯಂ ಸೇವಾ ಸಮಿತಿಯ ಸಂಚಾಲಕರಾಗಿ ೧೯೮೭ ರಿಂದ ಆಭಾಗದ ಗತ ವೈಭವವನ್ನು ಈಗಿನ ಜನರಿಗೆ ತಿಳಿಸುವುದಕ್ಕೋಸ್ಕರ ಅಲ್ಲೊಂದು ಮ್ಯೂಜಿಯಂ ಸ್ಥಾಪಿಸಲು ಹೆಣಗಾಡಿದರು. ಇದರ ಜೊತೆಗೆ ಆ ಭಾಗದ ಸರ್ವತೋಮುಖ ಅಭಿವೃದ್ಧಿಗೂ ಈ ಸಂಸ್ಥೆ ಕಂಕಣಬದ್ಧವಾಗಿತ್ತು. ಈ ಎರಡೂ ಉದ್ದೇಶಗಳು ನೆರವೇರುವುದಕ್ಕೆ ಅವರು ಹಗಲು ರಾತ್ರಿ ಶ್ರಮಿಸುತ್ತಿದ್ದರು. ತಮ್ಮ ಕಾರ್ಯಕ್ರಮದ ಯಶಸ್ಸಿಗೆ ಕರ್ನಾಟಕ ಮತ್ತು ಭಾರತ ಸರ್ಕಾರ ಸಂಬಂಧಪಟ್ಟ ಖಾತೆಗಳ ಜತೆಗೆ ಪತ್ರ ವ್ಯವಹಾರವನ್ನು ಬೇಸರವಿಲ್ಲದೆ ಮಾಡುತ್ತಿದ್ದರು. ಈ ಪತ್ರಗಳನ್ನು ನನಗೂ ಮತ್ತು ಇತರ ತಮ್ಮ ಸ್ನೇಹಿತರಿಗೂ ತಪ್ಪದೆ ಕಳಿಸಿಕೊಡುತ್ತಿದ್ದರು. ಸರ್ಕಾರದವರು ಇದರ ಕಡೆ ಲಕ್ಷ್ಯ ಕೊಡುವುದಿಲ್ಲ. ಇವರು ಯಾಕೆ ವ್ಯಥಾ ಶ್ರಮ ಪಡುತ್ತಾರೆಂದು ನನಗೆ ಅನಿಸುತ್ತಿತ್ತು. ಇವರ ಒತ್ತಾಯದಿಂದ ಕರ್ನಾಟಕ ಸರ್ಕಾರದ ಕೆಲವು ಖಾತೆಯವರು ಸಭೆಗಳನ್ನು ಮಾಡುತ್ತಿದ್ದರು. ನಾನು ಒಂದೆರಡು ಸಭೆಗಳಿಗೆ ಹೋಗಿದ್ದೆ. ಅಲ್ಲಿಯ ವಾತಾವರಣ ಅಷ್ಟೇನೂ ಆಶಾದಾಯಕವಾಗಿರಲಿಲ್ಲ. ಆದರೆ

ಕೊನೆಗೆ ಅವರು ಕೇಳಿದ ಪ್ರತಿಯೊಂದು ಬೇಡಿಕೆಯನ್ನು ಕರ್ನಾಟಕ ಮತ್ತು ಭಾರತ ಸರ್ಕಾರದವರು ಮನ್ನಿಸಿದರು. ಬನವಾಸಿಯಲ್ಲಿ ಒಳ್ಳೆಯ ಮ್ಯೂಜಿಯಂ ಸ್ಥಾಪನೆಯಾಯಿತು. ಬನವಾಸಿ ಸಮೀಪದ ಗುಡ್ನಾಪುರದಲ್ಲಿ ಉತ್ಖನನ ನಡೆಯಲು ಆರಂಭವಾಯಿತು. ಡಾ: ಬ.ರಾ. ಗೋಪಾಲರು ಗುಡ್ನಾಪುರದ ಶಾಸನವನ್ನು ಕಂಡು ಹಿಡಿದರು. ಅದರಿಂದ ಅಲ್ಲಿಯ ದೇವಾಲಯ ಅರಮನೆ ಇತ್ಯಾದಿಗಳ ಬಗ್ಗೆ ಮಾಹಿತಿ ದೊರಕಿತು. ಶ್ರೀ ಅಭಿಶಂಕರರ ಭಗೀರಥಪ್ರಯತ್ನಕ್ಕೆ ತಕ್ಕ ಯಶಸ್ಸು ದೊರೆಯಿತು. ಆದಿ ಕದಂಬರ ಇತಿಹಾಸದ ಬಗ್ಗೆ ದಿ. ಪ್ರೊ. ಲಿಂಗೇಶ ಶರ್ಮರು ಆಯೋಜಿಸಿದ ವಿಚಾರ ಸಂಕಿರಣ ಶ್ರೀ ಅಭಿಶಂಕರ ಅವರಿಗೆ ಬಹಳ ಸಂತೋಷವನ್ನುಂಟು ಮಾಡಿರಬೇಕು. ಅದಕ್ಕೆ ಕದಂಬಕುಲ ಪುಸ್ತಕದ ಲೇಖಕರಾದ ಪ್ರೊ. ಈ. ಮೊರೇಸ ರವರು ಡಾ॥ ಎನ್.ಆರ್. ರಾವ್ ರವರು ಡಾ. ಸೌಂದರ್ ರಾಜನ್ ಅವರು, ಪ್ರೊ ಶ್ರೀನಿವಾಸ ರಿತ್ತಿಯವರು, ಡಾ.ಬಾ.ರಾ. ಗೋಪಾಲ್ ಅವರು ಹೀಗೆ ಅನೇಕ ಗಣ್ಯರು ಬಂದದ್ದು ಒಂದು ವಿಶೇಷವಾದರೆ, ಇನ್ನೊಂದು ಬನವಾಸಿಯ ಮಧುಕೇಶ್ವರ ದೇವಸ್ಥಾನದಲ್ಲಿಯ ಈ ವಿಚಾರ ಸಂಕಿರಣವಾಗಿದ್ದು ಇನ್ನೊಂದು ವಿಶೇಷ. ಪ್ರತಿನಿಧಿಗಳನ್ನೆಲ್ಲಾ ಆ ದೇವಸ್ಥಾನದ ಸುತ್ತಮುತ್ತಲ ಮನೆಗಳಲ್ಲಿ ಇಳಿಸಿದ್ದರಿಂದ ಇಂತಹ ಸಮ್ಮೇಳನ ಇನ್ನೆಲ್ಲಿಯೂ ಆಗಿರಲಿಕ್ಕಿಲ್ಲವೆಂದು ಹೇಳಬಹುದು. ಡಾ. ಬಾ.ರಾ. ಗೋಪಾಲ ಅವರು ಸಂಪಾದಿಸಿದ ಆದಿಕದಂಬ ಶಾಸನ ಸಂಗ್ರಹದ ಪುಸ್ತಕವನ್ನು ಬಿಡುಗಡೆ ಮಾಡುವ ಸೌಭಾಗ್ಯ ನನ್ನದಾಗಿತ್ತು.

ಈಗ ಕದಂಬೋತ್ಸವಗಳು ಪ್ರತಿವರ್ಷ ಬನವಾಸಿಯಲ್ಲಿ ನಡೆಯಬೇಕೆಂದು ಕರ್ನಾಟಕ ಸರ್ಕಾರದವರು ನಿಶ್ಚಯಿಸಿದ್ದು ಪ್ರೊ. ಲಿಂಗೇಶ ಶರ್ಮ ಮತ್ತು ಶ್ರೀ ಅಭಿಶಂಕರ್ ಇವರ ಶ್ರಮಕ್ಕೆ ದೊರಕಿದ ತಕ್ಕ ಪ್ರತಿಫಲ. ೧೯೯೭ ರ ಅಕ್ಟೋಬರಿನಲ್ಲಿ ಶಿರಸಿಯಲ್ಲಿ ನಡೆದ ಕರ್ನಾಟಕ ಇತಿಹಾಸ ಅಕಾಡೆಮಿ ಹನ್ನೊಂದನೆಯ ವಾರ್ಷಿಕ ಸಮ್ಮೇಳನದ ಅಧ್ಯಕ್ಷರನ್ನಾಗಿ ಶ್ರೀ ಅಭಿಶಂಕರ್ ಇವರನ್ನು ಆರಿಸಿದ್ದು ಅವರ ಅವಿರತ ಹೋರಾಟಕ್ಕೆ ಉಚಿತ ಮನ್ನಣೆಯಾಗಿತ್ತು.

ಇತಿಹಾಸ, ಅದರಲ್ಲಿಯೂ ಕರ್ನಾಟಕ ಇತಿಹಾಸದಲ್ಲಿ, ಅವರಿಗೆ ತುಂಬಾ ಆಸಕ್ತಿ ಇತ್ತು. ಧಾರವಾಡದಲ್ಲಿ ಜರುಗಿದ ಕರ್ನಾಟಕ ಇತಿಹಾಸ ಅಕಾಡೆಮಿ ಸಮ್ಮೇಳನದಲ್ಲಿ ಅವರು ಓದಿದ ಪ್ರಬಂಧ ಮತ್ತು ಶಿರಸಿ ಸಮ್ಮೇಳನದಲ್ಲಿ ಅವರು ಮಾಡಿದ ಅಧ್ಯಕ್ಷೀಯ ಭಾಷಣಗಳಿಂದ ಅವರ ಅಭ್ಯಾಸ ಎಷ್ಟು ಆಳ ಮತ್ತು ಅವರ ನಿರ್ಣಯಗಳು ಎಷ್ಟು ನಂಬಲರ್ಹವೆನ್ನುವುದಕ್ಕೆ ಸಾಕ್ಷಿ ಮೊದಲನೆಯದರಲ್ಲಿ ಅವರು ವಿಜಯನಗರ ಸಾಮ್ರಾಜ್ಯವು ಧರ್ಮವನ್ನು ನೂರಾರು ವರ್ಷ ರಕ್ಷಿಸಲು ಸಮರ್ಥವಾದುದು ಅರ್ಧ ಸಫಲವಾದರೆ, ದಖನ್ನಿನ ಸುಲ್ತಾನರನ್ನು ಸೋಲಿಸಲು

ಸಾಕಷ್ಟು ಸೈನಿಕ ಬಲವನ್ನು ಬೆಳೆಸಿಕೊಳ್ಳದೆ ಇದ್ದುದು ವಿಫಲವೆನ್ನುವ ನಿರ್ಣಯಕ್ಕೆ ಬಂದಿದ್ದಾರೆ. ಶಿರಸಿಯಲ್ಲಿಯ ಅವರ ಅಧ್ಯಕ್ಷೀಯ ಭಾಷಣದಲ್ಲಿ ಅನೇಕ ವ್ಯವಹಾರ್ಯ ಸೂಚನೆಗಳನ್ನು ಮಾಡಿದ್ದಾರೆ. ಇವುಗಳಲ್ಲಿ ಒಂದೆರಡು ಉದಾಹರಣೆಗಳನ್ನು ಕೊಡಬಹುದು. ಪ್ರತಿಯೊಬ್ಬ ಇತಿಹಾಸಪ್ರೇಮಿ ತನಗೆ ಅನುಕೂಲಕರವಾದ ಕೆಲವು ಗ್ರಾಮಗಳನ್ನು ಅಥವಾ ಪಟ್ಟಣಗಳನ್ನು ದತ್ತು ತೆಗೆದುಕೊಂಡು ಅಲ್ಲಿನ ಜನರಲ್ಲಿ ಶಿಕ್ಷಿತರಲ್ಲಿ ಸಹ ಇತಿಹಾಸ ಅರಿವಿನ ಬಗ್ಗೆ ಇರುವ ತಾತ್ಸಾರವನ್ನು ಹೋಗಲಾಡಿಸಿ ಅವರನ್ನು ಇತಿಹಾಸಕುತೂಹಲಿಗಳನ್ನಾಗಿ ಮಾಡಬೇಕೆಂದು ಹೇಳಿ ಬನವಾಸಿ ವಲಯದಲ್ಲಿ ಮತ್ತು ಕೆಳದಿಯಲ್ಲಿ ಇಂತಹ ಕೆಲಸ ನಡೆಯುತ್ತಿದೆಯೆಂದು ಹೇಳಿದ್ದಾರೆ. ಇನ್ನೊಂದು ಅವರ ಸೂಚನೆಗಳನ್ನು ಹೇಳಿ ಈ ಲೇಖನವನ್ನು ಮುಗಿಸುತ್ತೇನೆ. ನಮ್ಮ ರಾಷ್ಟ್ರದ ಪ್ರತಿಯೊಂದು ರಾಜ್ಯದಲ್ಲಿಯೂ ಇತರ ರಾಜ್ಯಗಳ ಇತಿಹಾಸ, ಕಲೆ, ಸಾಹಿತ್ಯ ಮುಂತಾದವುಗಳ ಮಾಹಿತಿ ಕೇಂದ್ರ ಮತ್ತು ಚಿಕ್ಕ ಚೊಕ್ಕ ವಸ್ತು ಸಂಗ್ರಹಾಲಯಗಳನ್ನು ಏರ್ಪಡಿಸುವುದು ಅಪೇಕ್ಷಣೀಯ. ಸದರಿ ಭಾವೈಕ್ಯತೆ, ರಾಷ್ಟ್ರೀಯ ಸಮಗ್ರತೆಗೆ ಸಹಾಯಕವಾಗಬಲ್ಲದು. ಕರ್ನಾಟಕ ಏಳಿಗೆಗೂ ಅದರ ಮುಖಾಂತರ ಭಾರತದ ಏಳಿಗೆಗೂ ಸದಾ ಚಿಂತಿಸುತ್ತಿದ್ದ ಮತ್ತು ಶ್ರಮಿಸುತ್ತಿದ್ದ ಒಬ್ಬ ಇತಿಹಾಸ ಪ್ರೇಮಿಯ ಅಕಾಲ ಮರಣದಿಂದ ದೇಶಕ್ಕೆ ತುಂಬಲಾರದ ನಷ್ಟವಾಗಿದೆ.

■

8

ಡಾ॥ ಕೃಷ್ಣಾನಂದ ಕಾಮತರು

ಡಾ॥ ಜ್ಯೋತ್ಸ್ನಾ ಮತ್ತು ಡಾ॥ ಕೃಷ್ಣಾನಂದ ಕಾಮತರ ಬೆಂಗಳೂರಿನ ಮಲ್ಲೇಶ್ವರದಲ್ಲಿರುವ ನಿವಾಸ "ಶಶಿಕಿರಣ"ಕ್ಕೆ ನಾನು ಅನೇಕ ಸಲ ಹೋಗಿದ್ದೇನೆ. ಇತ್ತೀಚೆಗೆ, ಕೊನೆಯ ಸಲ, ೨೦೦೦ ದ ಮೇ ತಿಂಗಳಲ್ಲಿ ಹೋಗಿದ್ದನ್ನು ನಾನು ಮರೆಯುವ ಹಾಗಿಲ್ಲ. ಯಾಕೆಂದರೆ ಅದು ನನ್ನ ಮತ್ತು ಈ ದಂಪತಿಗಳ ಭೇಟಿ, ಬಹಳ ದಿನಗಳಾದ ಮೇಲೆ ಆದ ಭೇಟಿ. ಈ ಭೇಟಿಯಲ್ಲಿ ಅವರಿಬ್ಬರೂ ನನ್ನನ್ನು ಯಾವಾಗಲೂ ಸಾಗಿಸುವದಕ್ಕಿಂತ ಹೆಚ್ಚಿನ ಆದರ, ಪ್ರೀತಿಗಳಿಂದ ಬರಮಾಡಿಕೊಂಡರು. ಆಗ ಅವರು ಹೇಳಿದ್ದನ್ನು ಕೇಳಿ ನನಗೆ ಅವರ ಬಗ್ಗೆ ಹಿಂದೆ ಇರದ ಮತ್ತು ಮುಂದೆ ಮರೆಯಲಾರದ ಹೆಚ್ಚಿನ ಆತ್ಮೀಯತೆ ಹುಟ್ಟಿತು. ಅವರಿಬ್ಬರೂ ಏಕಕಾಲಕ್ಕೆ ಏನು ಹೇಳಿದರೆಂದರೆ "ನಮ್ಮ ಬಾಬಾರ ನಂತರದ ಆತ್ಮೀಯರು!", ಇವು, ಅವರು ಯಥಾವತ್ ಉಪಯೋಗಿಸಿದ ಶಬ್ದಗಳಿರದೇ ಇರಬಹುದು. ಆದರೆ ಆ ಶಬ್ದಗಳ ಭಾವ ಹಾಗಿತ್ತು. ಬಾಬಾ, ಅಂದರೆ ಜ್ಯೋತ್ಸ್ನಾಳ ತಂದೆ, ದಿವಂಗತ ಶ್ರೀ ಗಣೇಶಬುರ್ಡೆ ಅವರು. ಇವರನ್ನು ಕೃಷ್ಣಾನಂದರೂ ತಮ್ಮ ತಂದೆಯ ಸಮನಾಗಿ ನೋಡಿಕೊಳ್ಳುತ್ತಿದ್ದರು. ಮೊನ್ನೆ ಮೊನ್ನೆ ಬಾಬಾ ಅವರು ಹಣ್ಣು ಹಣ್ಣು ಮುದುಕರಾಗಿ, ವಯಸ್ಸಿನಲ್ಲಿ ನೂರರ ಸಮೀಪಕ್ಕೆ ಬಂದು ಕಣ್ಣು ಮುಚ್ಚಿದರು. ಅದಕ್ಕೆ ಕೆಲವೇ ತಿಂಗಳ ಮೊದಲು ಕೃಷ್ಣಾನಂದರು ೬೭ನೇ ವಯಸ್ಸಿನಲ್ಲಿ ಅಕಾಲ ಮರಣವನ್ನು ಅಪ್ಪಿದರು. ಇವರಿಬ್ಬರೂ ಜ್ಯೋತ್ಸ್ನಾ ಅವರ ಎಲ್ಲಾ ತರದ ಬೆಳವಣಿಗೆಗೆ ನೆರವಾಗಿದ್ದರು. ಷೇಕ್ಸ್‌ಪಿಯರನ "ಜ್ಯೂಲಿಯಸ್ ಸೀಝರ್" ನಾಟಕದಲ್ಲಿ ಸೀಝರ್‌ನ ಹೆಂಡತಿ ಕಲ್ಪುರ್ನಿಯಾಳ ಜೀವನದಲ್ಲಿಯ ಸೌಭಾಗ್ಯವನ್ನು ವರ್ಣಿಸುವಾಗ, ಆ ಸೌಭಾಗ್ಯಕ್ಕೆ, ಅವಳ ತಂದೆ ಮತ್ತು ಅವಳ ಯಜಮಾನರು ಕಾರಣರೆಂದು ಕವಿ, ಅವಳನ್ನು Thus father and thus husband ಎಂದು ವರ್ಣಿಸುತ್ತಾನೆ. ಜ್ಯೋತ್ಸ್ನಾ ಅವರ ಸೌಭಾಗ್ಯವೂ ಅದೇ ತೆರನಾದದ್ದು.

ಇಂತಹ ಅಪೂರ್ವ ವ್ಯಕ್ತಿಗಳ ಪರಿಚಯ ನನಗಾದದ್ದು ಜ್ಯೋತ್ಸ್ನಾ ಅವರ ಮೂಲಕವೇ!

'ಕಮ್ಮಟಿಗ' ಸಂಪುಟದಿಂದ

ಜ್ಯೋತ್ಸ್ನಾ, ಎಂ.ಎ. ವಿದ್ಯಾರ್ಥಿನಿಯಾಗಿದ್ದಾಗ ನಾನು ೧೯೬೧ರಲ್ಲಿ ಅಮೇರಿಕೆಗೆ ಹೊರಟಿದ್ದೆ. ಯಾರಾದರೂ ಊರಿಗೆ ಹೊರಟ್ಟಿದ್ದರೆ, "ಆ ಊರಿನಲ್ಲಿ ನನ್ನ ಪರಿಚಯದ ಇಂಥವರು ಇದ್ದಾರೆ, ಅವರನ್ನು ನೋಡಿಕೊಂಡು ಬನ್ನಿ" ಎಂದು ಹೇಳುವದು ರೂಢಿ. ಜ್ಯೋತ್ಸ್ನಾ ನನಗೆ ಹೇಳಿದ್ದು – "ಸಿರೆಕ್ಯೂಸ್ ವಿಶ್ವವಿದ್ಯಾಲಯದಲ್ಲಿ ನನ್ನ ಪರಿಚಯದವರು ಇದ್ದಾರೆ. ನೀವು ಆ ಕಡೆ ಹೋದರೆ ಆ ವಿಶ್ವವಿದ್ಯಾಲಯ ನೋಡಿಕೊಂಡು ಬನ್ನಿ". ನಾನು ಸಿರೆಕ್ಯೂಸಿಗೆ ಹೋಗುವ ಅವಕಾಶ ತಾನಾಗಿ ಸಿಕ್ಕಿತು. ಹೋದಾಗ ಅಲ್ಲಿಯ ವಿಶ್ವವಿದ್ಯಾಲಯದ ಕ್ಯಾಂಪಸ್ ನೋಡಿಕೊಂಡು ಬಂದೆ. ಅಲ್ಲಿ ಸಂಶೋಧನೆ ಮಾಡುತ್ತಿದ್ದ ಜ್ಯೋತ್ಸ್ನಾಳ ಪರಿಚಯಸ್ಥರು ಡಾ॥ ಕೃಷ್ಣಾನಂದ ಕಾಮತರೆಂದು ನನಗೆ ನಂತರ ತಿಳಿಯಿತು. ಕೃಷ್ಣಾನಂದರು ತಮ್ಮ 'ನಾನೂ ಅಮೇರಿಕೆಗೆ ಹೋಗಿದ್ದೆ' ಪುಸ್ತಕದಲ್ಲಿ, ಸಿರೆಕ್ಯೂಸಿನಲ್ಲಿ ನಡೆದ ಘಟನೆಗಳನ್ನೆಲ್ಲಾ ಬಹಳ ಸ್ವಾರಸ್ಯಕರವಾಗಿ ವರ್ಣಿಸಿದ್ದಾರೆ. ಮೊದಲೇ ಅವರಿಬ್ಬರ ಪರಿಚಯ ಇತ್ತು ಎಂದು ಕಾಣುತ್ತದೆ! ಮುಂದೆ ಅವರ ಮದುವೆ ಆಯಿತು. ಅದೇ ಸುಮಾರಿಗೆ ಕೃಷ್ಣಾನಂದರಿಗೆ ರಾಜಸ್ಥಾನದ ಉದಯಪುರ ಕೃಷಿ ವಿಶ್ವವಿದ್ಯಾಲಯಕ್ಕೆ ಸೇರಿದ ಜೋಬನೇರ ಕೇಂದ್ರದಲ್ಲಿ ಕೆಲಸ ಸಿಕ್ಕಿತ್ತು. ಈ ಊರು ಜಯಪುರಕ್ಕೆ ಹತ್ತರವಿದ್ದುದರಿಂದ ಜ್ಯೋತ್ಸ್ನಾ ಧಾರವಾಡ ಆಕಾಶವಾಣಿಯಿಂದ ಅಲ್ಲಿ ವರ್ಗಾವಾಡಿಸಿಕೊಂಡರು. ಕೃಷ್ಣಾನಂದರಿಗೆ ಉದಯಪುರ ವಿಶ್ವವಿದ್ಯಾಲಯದಲ್ಲಿ ಕಾಯಂ ಕೆಲಸ ಸಿಗಲಿಲ್ಲ. ಅವರ ಜೋಬನೇರ ವಾಸದ ಫಲಶ್ರುತಿಯೆಂದರೆ ಇನ್ನೊಂದು ಪ್ರವಾಸ ಕಥನ 'ನಾ ರಾಜಸ್ಥಾನದಲ್ಲಿ'. ಈ ಗ್ರಂಥ ಬಹಳ ಸ್ವಾರಸ್ಯವಾಗಿದೆ. ಇದರಲ್ಲಿ ಅವರು ತಮ್ಮ ಸಹೋದ್ಯೋಗಿಗಳು ಹಾಗೂ ಅ ವಿಶ್ವವಿದ್ಯಾಲಯದ ಆಗುಹೋಗುಗಳನ್ನು ಯಥಾವತ್ತಾಗಿ ವರ್ಣಿಸಿದ್ದಾರೆ. ನನ್ನ ನೆಂಟರೊಬ್ಬರು, ಕೇಂದ್ರ ಕೃಷಿ ಇಲಾಖೆಯಲ್ಲಿ ಕೆಲಸ ಮಾಡಿದವರು ಮತ್ತು ಉದಯಪುರ ವಿಶ್ವವಿದ್ಯಾಲಯದ ವಿದ್ಯಮಾನಗಳನ್ನು ಮತ್ತು ಅಲ್ಲಿ ಕೆಲಸ ಮಾಡುತ್ತಿದ್ದ ಪ್ರಾಧ್ಯಾಪಕರನ್ನು ಚೆನ್ನಾಗಿ ಬಲ್ಲವರು, ಕೃಷ್ಣಾನಂದರ ಈ ಬರಹವನ್ನು ಬಹುವಾಗಿ ಮೆಚ್ಚಿಕೊಂಡರು.

ಅಲ್ಲಿಂದ ಕೃಷ್ಣಾನಂದರು, ಇತಿಹಾಸ ಪ್ರಸಿದ್ಧ ಪ್ಲಾಸಿಯಲ್ಲಿ ಕಾಮನ್‌ವೆಲ್ತ್ ಸಂಸ್ಥೆ ನಡೆಸುತ್ತಿದ್ದ ಸಂಶೋಧನಾ ಕೇಂದ್ರದಲ್ಲಿ ಕೆಲಕಾಲ ದುಡಿದರು. ಅದರ ಫಲವಾಗಿ ಬಂಗಾಲಿಗಳನ್ನು ಕುರಿತು ಇನ್ನೊಂದು ಪ್ರವಾಸ ಕಥನ 'ವಂಗದರ್ಶನ'

ಹೊರಬಂದಿತು. ಮುಂದೆ ಅವರು ಬೆಂಗಳೂರನ್ನು ತಮ್ಮ ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಂಡು, ತಮ್ಮ ಹವ್ಯಾಸವಾದ ಛಾಯಾಚಿತ್ರಕಲೆಯನ್ನೇ ವೃತ್ತಿಯನ್ನಾಗಿ ಮಾಡಿಕೊಳ್ಳಬೇಕಾಯಿತು. ವೈಜ್ಞಾನಿಕ ಸಂಶೋಧಕರಿಗೆ ಅವಶ್ಯವಾದ ಛಾಯಾಚಿತ್ರಗಳ ಲ್ಯಾಬೊರೇಟರಿಯನ್ನು ಮಲ್ಲೇಶ್ವರದ ಸಂಪಿಗೆ ರಸ್ತೆಯಲ್ಲಿ ಪ್ರಾರಭಿಸಿದರು. ಅದು ಚೆನ್ನಾಗಿ ನಡೆಯಿತು ಎನ್ನುವುದನ್ನು ನಾನು ಅನೇಕ ಸಲ ಅಲ್ಲಿ ಹೋದಾಗ ನೋಡಿದ್ದೇನೆ. ಅವರು ಮಲ್ಲೇಶ್ವರದ 'ದತ್ತಪ್ರಸಾದ'ದಲ್ಲಿ ಕೆಲ ವರ್ಷವಿದ್ದು ಕೊನೆಗೆ ೧೯೮೩ರಲ್ಲಿ ತಮ್ಮ ಸ್ವಂತ ನಿವಾಸವಾದ 'ಶಶಿಕಿರಣ'ದ ೧೧೦ನೇ ನಂಬರಿನ ತಮ್ಮ ಫ್ಲಾಟಿನಲ್ಲಿ ಇರಲಾರಂಭಿಸಿದರು. ಅವರು ಎಲ್ಲಿಯೇ ಇದ್ದರೂ ತಮ್ಮ ಲ್ಯಾಬಿಗೆ ಪ್ರತಿದಿನವೂ ಕಾಲುನಡಿಗೆಯಿಂದ ಹೋಗಿಬರುತ್ತಿದ್ದರು. ಈ ನಡಿಗೆಯಿಂದ ಅವರ ಆರೋಗ್ಯ ಅತ್ಯುತ್ತಮವಾಗಿತ್ತು.

ಅವರ ಸಂಕೋಚ ಸ್ವಭಾವ

ಕೃಷ್ಣಾನಂದರು ಬಹಳ ಸಂಕೋಚ ಸ್ವಭಾವದವರು. ಪಾರ್ಟಿಗಳನ್ನು ಕೊಡುವುದು ಮತ್ತು ಇತರರ ಪಾರ್ಟಿಗಳಿಗೆ ಹೋಗುವದು ಅವರಿಗೆ ರುಚಿಸುತ್ತಿರಲಿಲ್ಲ. ಜ್ಯೋತ್ಸ್ನಾಗೆ ಪಿಹೆಚ್.ಡಿ. ಪದವಿ ಬಂದಾಗ "ನೀವು ಒಂದು ಪಾರ್ಟಿಕೊಡಿ. ಮತ್ತು ಕೃಷ್ಣಾನಂದರನ್ನು ಇತರರಿಗೆ ಪರಿಚಯಿಸಿ" ಎಂದು ನಾನು ಹೇಳಿದಾಗ "ಅವರಿಗೂ ಪಾರ್ಟಿಗೂ ಬಹಳ ದೂರ ಸರ್!" ಎಂದು ಜ್ಯೋತ್ಸ್ನಾ ಉದ್ಗರಿಸಿದ್ದು ನೆನಪಾಗುತ್ತದೆ. ಅವರು ಸಭೆ ಸಮ್ಮೇಳನಗಳಿಗೆ ಹೋಗಲೂ ಇಷ್ಟಪಡುತ್ತಿರಲಿಲ್ಲ. ನನಗೆ ಗೊತ್ತಿರುವ ಹಾಗೆ ಅವರು ಹೋದ ಮೊದಲಿನ ಸಮ್ಮೇಳನ, ಅವರೇ ಅಧ್ಯಕ್ಷರಾಗಿದ್ದ ಉತ್ತರಕನ್ನಡ ಜಿಲ್ಲೆಯ ಸಾಹಿತ್ಯ ಸಮ್ಮೇಳನ! ಅದಾದನಂತರ ಜ್ಯೋತ್ಸ್ನಾ ಜೊತೆಗೆ ಎರಡು ಸಲ ಧಾರವಾಡದ ಸಭೆಗಳಿಗೆ ಬಂದದ್ದು ನಮ್ಮನ್ನು ಭೇಟಿಯಾಗಿದ್ದು ಚಿರಸ್ಮರಣೀಯ. ಮೊದಲ ಬಾರಿ ೧೯೯೯ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದ ಜಾನಪದ ವಿಭಾಗ-ನಿಯೋಜಿತ ಸಮ್ಮೇಳನಕ್ಕೆ ಕೃಷ್ಣಾನಂದರನ್ನು ಕರೆದಿದ್ದರು. ಆಗ ದಂಪತಿಗಳು ಬಂದಿದ್ದರು. ಕೃಷ್ಣಾನಂದರು ಧಾರವಾಡಕ್ಕೆ ಬರದೇ ೨೫ ವರ್ಷಗಳು ಕಳೆದಿದ್ದವು. ತಾನು ಓದಿದ ಕಾಲೇಜು, ವಿಶ್ವವಿದ್ಯಾಲಯಗಳನ್ನು ನೋಡಿದ್ದು, ಅನೇಕ ಪರಿಚಿತರನ್ನು ಭೇಟಿಮಾಡಿದ್ದು, ಅವರಿಗೆ ಬಹಳ ಸಂತೋಷವನ್ನುಂಟು ಮಾಡಿರಲು ಸಾಕು. ನಮ್ಮ ಮನೆಗೆ ಬಂದಾಗ ನನ್ನ ಶ್ರೀಮತಿಯ ಹಾಗೂ ಮನೆಯ ಛಾಯಾಚಿತ್ರಗಳನ್ನು ತೆಗೆದರು. ನನ್ನ ಛಾಯಾಚಿತ್ರಗಳನ್ನು ಎಷ್ಟು ತೆಗೆದಿದ್ದಾರೋ ಅದರ ಲೆಕ್ಕವೇ ಇಲ್ಲ! ಪ್ರತಿಸಲ ತೆಗೆದಾಗಲು ಪ್ರತಿಗಳನ್ನು ಕೊಡುವುದು ಅವರ ಪದ್ಧತಿಯಾಗಿತ್ತು. ಜೀವನದ ಅನೇಕ ರಂಗಗಳಲ್ಲಿ ಮಿತವ್ಯಯವನ್ನು ಅನುಸರಿಸುತ್ತಿದ್ದ ಕೃಷ್ಣಾನಂದರು, ಛಾಯಾಚಿತ್ರ

ಕ್ಷೇತ್ರದಲ್ಲಿ ಮಾಡುತ್ತಿದ್ದ ಖರ್ಚನ್ನು 'ದುಂದು' ಎಂದು ಯಾರಾದರೂ ಹೇಳಬಹುದು. ಆದರೆ ಈಚೆಗೆ ಅವರ ಮಗನು ಪ್ರಾರಂಭಿಸಿದ Internet website ದಿಂದಾಗಿ ಅವರ ಕಮ್ಮಟದಲ್ಲಿ ಅನಾಥವಾಗಿದ್ದ ಸಹಸ್ರಾರು ನೆಗೆಟಿವ್‌ಗಳು ಪಾಸಿಟಿವ್ ರೂಪ ಪಡೆದು ಜಗತ್ತಿನ ಮೂಲೆ ಮೂಲೆಗೂ ತಲುಪುವಂತೆ ಆಯಿತು.

ಈ ಭೇಟಿಯಲ್ಲಿ ನಡೆದ ಸಣ್ಣ ವಿಷಯದಿಂದ, ನನಗೂ ಕೃಷ್ಣಾನಂದರೂ ಇದ್ದ ಸಂಬಂಧವನ್ನು ತಿಳಿದುಕೊಳ್ಳಬಹುದು. ವಯಸ್ಸಿನ ಕಾರಣದಿಂದ ಪೇಟೆಗೆ ಹೋಗಿ ನನಗೆ ಅವಶ್ಯವಿದ್ದ ಸಾಮಾನನ್ನು ಕೊಂಡು ತರುವ ಸ್ಥಿತಿಯಲ್ಲಿ ನಾನಿರಲಿಲ್ಲ. ಕೃಷ್ಣಾನಂದರಿಂದ ಒಂದು ಒಳ್ಳೆಯ ಪೆನ್ನಿನ ಪರಿಚಯ ನನಗೆ ಆಗಿತು. ಅದು ಚೈನಾ ಪೆನ್ನು ಎಂದು ಕಾಣುತ್ತದೆ. ಹಿಂದೆ ಅವರೇ ನನಗೆ ಈ ಪೆನ್ ಕೊಟ್ಟಿದ್ದರು. ಈ ಭೇಟಿಯಲ್ಲಿ ಅವರ ಜೇಬಿನಲ್ಲಿ ಚೈನಾಪೆನ್ ಇದ್ದುದನ್ನು ನೋಡಿ ಯಾರನ್ನೂ ಏನನ್ನೂ ಕೇಳದವನು, "ಆ ಪೆನ್ನನ್ನು ನನಗೆ ಕೊಡಿ!" ಎಂದು ಕೇಳಿದ ಕೂಡಲೇ ಅವರು ಸಂತೋಷದಿಂದ ಕೊಟ್ಟರು. ನನ್ನ ಈ ನಡತೆ ನನ್ನ ಶ್ರೀಮತಿಯವರಿಗೆ ಸುತರಾಮ ಹಿಡಿಸಲಿಲ್ಲ! ಅದನ್ನವರು ಆ ಬಳಿಕ ಶ್ರುತಪಡಿಸಿದರು. ಆದರೆ ನನಗೆ ಪೆನ್ ಬೇಕಿತ್ತು. ಅವರು ಅದನ್ನು ನನಗೆ ಬಹಳ ಪ್ರೀತಿಯಿಂದ ಕೊಡುತ್ತಾರೆಂದೂ ಗೊತ್ತಿತ್ತು. ಯಾಕೆಂದರೆ ಹಿಂದಿನದನ್ನೂ ತುಂಬ ಖುಷಿಯಿಂದ ತಾವಾಗಿ ತಂದುಕೊಟ್ಟಿದರು. ಹೀಗಿರುವಾಗ ನಾನಾಗಿ ಈ ಬಾರಿ ಕೇಳಿದರೆ ಏನು ತಪ್ಪು? ಎಂದು ನನ್ನಷ್ಟಕ್ಕೆ ಸಮಾಧಾನ ಮಾಡಿಕೊಂಡೆ. ನಾನು ತಿಳಿದುಕೊಂಡದ್ದು ಅಷ್ಟು ತಪ್ಪಲ್ಲವೆಂದು, ಜ್ಯೋತ್ಸ್ನಾ ತಾನಾಗಿ ಬರೆದ ಪತ್ರದಿಂದ ತಿಳಿಯಿತು. "ಕಾಮತರಿಂದ ನೀವಾಗಿ ಪೆನ್ ಕೇಳಿ ಪಡೆದದ್ದು ಅವರಿಗೆ ಹೆಚ್ಚಿನ ಸಂತೋಷಕೊಟ್ಟಿದೆ. ಅವರ ಬಳಿ ಇರುವುದಕ್ಕಿಂತ ನಿಮ್ಮ ಬಳಿ ಇದ್ದರೆ ಅದು ಹೆಚ್ಚು ಕೆಲಸಮಾಡುತ್ತದೆ ಎಂಬುದು ಅವರ ಸ್ಪಷ್ಟ ಅಭಿಪ್ರಾಯ! ನಿಮಗೆ ಅಂಥ ಇನ್ನೂ ಒಂದೆರಡು ಪೆನ್‌ಗಳನ್ನು ಒದಗಿಸಲು ಸಿದ್ಧನಿದ್ದೇನೆಂದು ಬರಿ! ಎಂದು ಹೇಳಿದ್ದಾರೆ." ಆ ಪೆನ್ನಿನ ಅದೃಷ್ಟ! ಸೋಮದೇವ ಸೂರಿಯ ನೀತಿವಾಕ್ಯಾಮೃತದ (ನಾನಾಗ ಈ ಗ್ರಂಥದ ಸಂಪಾದನಾ ಕಾರ್ಯದಲ್ಲಿ ನಿರತನಾಗಿದ್ದೆ) ಕರಡು ತಿದ್ದಲು ಅದು ದುಡಿಯಿತು.

ಎರಡನೇ ಬಾರಿ ಅವರು ಬಂದದ್ದು ಅವರ ಪುಸ್ತಕ 'ಮರುಪಯಣ'ದ ಬಿಡುಗಡೆ ಸಮಾರಂಭಕ್ಕೆ. ಆಗ ಮೊದಲನೇ ಸಲ ಆದ ಅನುಭವದ ಪುನರಾವೃತ್ತಿ ಆಯಿತು. ಇನ್ನು ಕೃಷ್ಣಾನಂದರು ಸಭೆಗಳಿಗೆ ಹೋಗಲು ಹಿಂಜರಿಯಲಾರರೆಂದು ತಿಳಿದೆವು. ಜ್ಯೋತ್ಸ್ನಾ, ೨೦೦೧ನೇ ವರ್ಷದ ಉಡುಪಿಯ ಕರ್ನಾಟಕ ಇತಿಹಾಸ ಅಕಾಡೆಮಿ ಸಮ್ಮೇಳನದ ಅಧ್ಯಕ್ಷರಾದಾಗ ಅವರ ಜೊತೆಗೆ ಉಡುಪಿಗೆ ಹೋಗಲು ಹಿಂದೆ ಮುಂದೆ ನೋಡಿದರು. ಡಾ॥ ಸೂರ್ಯನಾಥ

ಕಾಮತರೂ, ಜ್ಯೋತ್ಸ್ನಾ ತಿಳಿಸಿದಂತೆ ಮುಖ್ಯವಾಗಿ ನನ್ನ ಒತ್ತಾಯದಿಂದ ಅವರೂ ಹೋದರು. ಯಥಾಪ್ರಕಾರ, ಅವರ ಕ್ಯಾಮರಾಕ್ಕೆ ಬಿಡುವಿಲ್ಲದ ಕೆಲಸವಾಯ್ತು. ನಮ್ಮೆಲ್ಲರ ಛಾಯಾಚಿತ್ರಗಳನ್ನು ತೆಗೆದರು.

ಬಿ.ಜಿ.ಎಲ್. ಸ್ವಾಮಿ ಹಾಗೂ ಕೃಷ್ಣಾನಂದ ಕಾಮತ

'ಮರುಪಯಣ' ಅವರ ಕೊನೆಯಕೃತಿ, ಅದನ್ನು ಕೆಲವರು ಬಿ.ಜಿ.ಎಲ್. ಸ್ವಾಮಿಯವರ 'ಹಸಿರು ಹೊನ್ನು' ಕೃತಿಗೆ ಹೋಲಿಸುತ್ತಾರೆ. ಎರಡೂ ಕೃತಿಗಳು ಆಯಾ ಲೇಖಕರ ಹೆಸರುಗಳನ್ನು ಕನ್ನಡ ಸಾಹಿತ್ಯದಲ್ಲಿ ಶಾಶ್ವತವಾಗಿ ಉಳಿಯುವ ಹಾಗೆ ಮಾಡುವದರಲ್ಲಿ ಸಂದೇಹವಿಲ್ಲ. ಕೃಷ್ಣಾನಂದರೂ ಸ್ವಾಮಿಯವರೂ ಶ್ರೇಷ್ಠ ವಿಜ್ಞಾನಿಗಳಾಗಿ, ಶ್ರೇಷ್ಠ ಕನ್ನಡ ಲೇಖಕರಾಗಿದ್ದುದು ಕನ್ನಡ ನಾಡಿನ ಪುಣ್ಯ. ಡಾ॥ ಸ್ವಾಮಿಯವರಿಗೆ ಇದ್ದ ಕೆಲ ಅನುಕೂಲಗಳು ಕೃಷ್ಣಾನಂದರಿಗೆ ಇರಲಿಲ್ಲ. ಸ್ವಾಮಿಯವರು ಕನ್ನಡ ಸಾಹಿತ್ಯ ಪ್ರಪಂಚದ ದಿಗ್ಗಜರಾಗಿದ್ದ ಡಿ.ವಿ. ಗುಂಡಪ್ಪನವರ ಮಕ್ಕಳು. ಕೃಷ್ಣಾನಂದರು ಹೊನ್ನಾವರದ ಒಂದು ವ್ಯಾಪಾರಿ ಮನೆತನದವರು. ಸ್ವಾಮಿಯವರು ಮದ್ರಾಸಿನ ಪ್ರಖ್ಯಾತ ಪ್ರೆಸಿಡೆನ್ಸಿ ಕಾಲೇಜಿನ ಪ್ರಿನ್ಸಿಪಾಲರಾಗಿದ್ದರು. ಸಸ್ಯಶಾಸ್ತ್ರದಲ್ಲಿ ಸಂಶೋಧಕರೆಂದು ಅಂತಾರಾಷ್ಟ್ರೀಯ ಖ್ಯಾತಿಯ ವಿಜ್ಞಾನಿಗಳಾಗಿದ್ದರು. ಕೃಷ್ಣಾನಂದರು ನ್ಯೂಯಾರ್ಕ್ ವಿಶ್ವವಿದ್ಯಾಲಯದ ಶಿಷ್ಯವೇತನ ಪಡೆದು ಕೀಟಶಾಸ್ತ್ರದಲ್ಲಿ ಪಿಎಚ್.ಡಿ. ಪದವಿಯನ್ನು ಪಡೆದರು. ಆದರೆ ಭಾರತದ ಯಾವ ವಿಶ್ವವಿದ್ಯಾಲಯದಲ್ಲೂ ಅವರಿಗೆ ನೌಕರಿ ಸಿಗಲಿಲ್ಲ. ಕೊನೆಗೆ ಹಿಂದೆ ಹೇಳಿದಂತೆ, ಅವರ ಹವ್ಯಾಸವಾಗಿದ್ದ ಛಾಯಾಚಿತ್ರಕಲೆಯಿಂದ ಉಪಜೀವನ ನಡೆಸಬೇಕಾಯಿತು.

ಸ್ವಾಮಿ ಮತ್ತು ಕೃಷ್ಣಾನಂದರು ಕನ್ನಡದಲ್ಲಿ ನುರಿತ ಲೇಖಕರಾಗಿದ್ದರೂ ಅವರ ಮಾತೃಭಾಷೆ ಕನ್ನಡವಾಗಿರಲಿಲ್ಲ. ಸ್ವಾಮಿಯವರ ಮನೆ ಮಾತು ತಮಿಳು. ಕೃಷ್ಣಾನಂದರು ಕೊಂಕಣಿ. ಸ್ವಾಮಿಯವರು ತಮ್ಮ ವೃತ್ತಿಜೀವನವನ್ನು ತಮಿಳುನಾಡಿನಲ್ಲಿಯೇ ಕಳೆದರು. ಅವರು ತಮಿಳಿನಲ್ಲಿ ಬರೆಯಲಿಲ್ಲ. ತಮಿಳುನಾಡಿನ ಬಗ್ಗೆ ಬರೆದಿದ್ದಾರೆ. 'ತಮಿಳು ತಲೆಗಳ ನಡುವೆ' ಮತ್ತು 'ಕಾಲೇಜುರಂಗ' ಈ ಎರಡೂ ಪುಸ್ತಕಗಳು, ತಮಿಳು ಶಿಕ್ಷಣ ಕ್ಷೇತ್ರದಲ್ಲಿಯ ರಾಜಕಾರಣಿಗಳನ್ನು ಅಪಹಾಸ್ಯಕ್ಕೆ ಗುರಿಮಾಡಿದ ಕೃತಿಗಳು. ತಮಿಳುನಾಡಿನ ಶೈವ ಆಚಾರ್ಯರ ಬಗೆಗಿನ ಇವರ ಬರೆಹ, ಇತಿಹಾಸ ಸಂಶೋಧನೆಯಲ್ಲಿ ಗಣ್ಯಸ್ಥಾನವನ್ನು ದೊರಕಿಸಿಕೊಟ್ಟಿದೆ. ಕೃಷ್ಣಾನಂದರಿಗೆ ಕೊಂಕಣಿ ಭಾಷೆ ಮತ್ತು ಕೊಂಕಣಿಗರ ಬಗ್ಗೆ ಸಹಜಾಭಿಮಾನವಿತ್ತು. ಆ ಭಾಷೆಯ ಉಗಮ ಮತ್ತು ಇತಿಹಾಸಗಳ ಬಗೆಗೆ ಸಾರ್ವಜನಿಕರು ತಿಳಿದುಕೊಳ್ಳಬೇಕಾದುದನ್ನು 'ಅಕ್ಷತ' ಎನ್ನುವ ಆವರ ಪುಸ್ತಕದಲ್ಲಿ ಬರೆದಿದ್ದಾರೆ.

ಕಾವಿಕಲೆಯ ಬಗ್ಗೆ ಕೊಂಕಣಿಯಲ್ಲಿ ಬರೆಯುವ ಸಂದರ್ಭ ಒದಗಿದಾಗ ದಂಪತಿಗಳು ಸೇರಿಯೇ ಆ ಕೆಲಸ ಮುಗಿಸಿದರು.

ಸ್ವಾಮಿ ಮತ್ತು ಕೃಷ್ಣಾನಂದರಲ್ಲಿ ಇನ್ನೂ ಒಂದು ಸಾಮ್ಯ, ಇಬ್ಬರೂ ಉದಯನೋನ್ಮುಖ ಸಂಶೋಧಕರಿಗೆ, ಲೇಖಕರಿಗೆ ಉತ್ತೇಜನ ನೀಡುತ್ತಿದ್ದರು. ಇಬ್ಬರೂ ಡಾ॥ ಆರ್. ಶೇಷಶಾಸ್ತ್ರಿಗಳಿಗೆ ಪ್ರತ್ಯೇಕವಾಗಿಯೇ ಆ ಉತ್ತೇಜನವನ್ನು ನೀಡಿದ್ದು ಒಂದು ವಿಶೇಷ!

ಕಲೆಯ ಆರಾಧಕರು

ಕೃಷ್ಣಾನಂದರಿಗೆ ವಿಜ್ಞಾನ ಮತ್ತು ಸಾಹಿತ್ಯಕ್ಷೇತ್ರದಲ್ಲಿ ಇದ್ದಷ್ಟೇ ಕಲೆಯಲ್ಲಿಯೂ ವಿಶೇಷ ಆಸಕ್ತಿ ಇತ್ತು. ಕಾವಿಕಲೆಯನ್ನು ಒಂದು ಶಿಷ್ಟ ಹಾಗೂ ಜಾನಪದ ಕಲೆಯ ಪ್ರಕಾರವೆಂದು ಗುರುತಿಸಿ, ಅದಕ್ಕೆ ಯೋಗ್ಯಸ್ಥಾನವನ್ನು ದೊರಕಿಸಿದ್ದು ಅವರ ಪ್ರಾಮುಖ್ಯತೆ. ಕನ್ನಡದಲ್ಲಿ ಹಾಗೂ ಕೊಂಕಣಿಯಲ್ಲಿ ಈ ಕಲೆಯ ಬಗ್ಗೆ ಅಧಿಕೃತವಾಗಿ ಬರೆದಿದ್ದಾರೆ. ಸೀಬಿಯ ಚಿತ್ರಗಳು ಹಾಗೂ ಲೇಪಾಕ್ಷಿಯ ಚಿತ್ರಗಳ ಬಗೆಗೂ ಬರೆದಿದ್ದಾರೆ. ಛಾಯಾಚಿತ್ರಕಲೆಯಂತೆ ಚಿತ್ರಕಲೆಯಲ್ಲೂ ಸಹ ಸ್ವಂತ ಪರಿಶ್ರಮದಿಂದ ಪರಿಣತಿಯನ್ನು ಪಡೆದಿದ್ದರು. ಇವೆರಡೂ ಪ್ರಕಾರಗಳು ಒಂದಕ್ಕೊಂದು ಪೂರಕವಾಗಿದೆ ಎಂಬುದನ್ನು ಚೆನ್ನಾಗಿ ಅರಿತಿದ್ದರು. ಅವರ ಪ್ರಕಾರ ಚಿತ್ರಕಾರನು ತನ್ನ ಕಲಾಕೃತಿಯನ್ನು ಛಾಯಾಚಿತ್ರದೊಂದಿಗೆ ಸ್ಪರ್ಧಿಸಬೇಕೆಂದು ಸಕಲ ಪ್ರಯತ್ನ ಮಾಡುವಂತೆ, ಛಾಯಾಚಿತ್ರಕಾರನೂ ಕ್ಯಾಮರಾ ಸೆರೆಹಿಡಿದುದು ವಾಸ್ತವಿಕ ಚಿತ್ರದಷ್ಟು ಸುಂದರ ಕಲಾಕೃತಿಯನ್ನಾಗಿಸಬೇಕೆಂದು ಕನಸು ಕಾಣುತ್ತಿರುತ್ತಾನೆ. ಇದನ್ನು ಸಾಧಿಸುವದಕ್ಕಾಗಿ ಲಭ್ಯವಿರುವ ಸಾಧನಗಳು ಅಸಂಖ್ಯಾತ. ಆದರೆ ಅವುಗಳಿಗಿಂತ ಕ್ಯಾಮರಾ ಹೊತ್ತವರ ಕಲಾಭಿರುಚಿ, ಪರಿಶ್ರಮ, ಅನುಭವ, ಮತ್ತು ಶಿಸ್ತುಗಳು ಮಾತ್ರ ಅತ್ಯುತ್ತಮ ಛಾಯಾಚಿತ್ರಗಳನ್ನು ಕೊಡಬಲ್ಲವು. ಇಂತಹ ಛಾಯಾಚಿತ್ರಗಳು ನೆಳಲು-ಬೆಳಕುಗಳ ಚಮತ್ಕಾರವನ್ನು ಒಳಗೊಂಡು, ವೀಕ್ಷಕನ ಅಂತರಾಳವನ್ನು ತಟ್ಟುತ್ತವೆ ಎಂಬುದು ಇವರ ಅಭಿಪ್ರಾಯ. ಎರಡೂ ಮಾಧ್ಯಮಗಳಲ್ಲಿ ಲೇಖಕರಿಗೆ ಪರಿಶ್ರಮವಿದ್ದುದರಿಂದ ಈ ಅಭಿಪ್ರಾಯ ಮಹತ್ವದ್ದಾಗಿದೆ.

ಕೃಷ್ಣಾನಂದರ ಛಾಯಾಚಿತ್ರ ಕಲೆ ಮತ್ತು ರೇಖಾಚಿತ್ರ ಪ್ರಾವಿಣ್ಯವನ್ನು ಜ್ಯೋತ್ಸ್ನಾರ ಸಂಶೋಧನಾ ಲೇಖಗಳಲ್ಲಿಯೂ ಕೃತಿಗಳಲ್ಲಿಯೂ ಕಾಣಬಹುದು. ಅವುಗಳಿಂದ ಅವರ ಬರಹಕ್ಕೆ ಎಲ್ಲಿಲ್ಲದ ಮೆರುಗು ಬಂದಿದೆ. ನಮ್ಮ ಪ್ರಾಚೀನ ಶಿಲ್ಪಗಳಲ್ಲಿ ಅಂದಿನವರ ಸಾಮಾಜಿಕ ಜೀವನದ ಚಿತ್ರಗಳು ದೊರಕುತ್ತವೆ, ಎಂಬುದನ್ನು ಪತ್ತೆ ಹಚ್ಚುವಲ್ಲಿ ಇಬ್ಬರೂ ನಿಸ್ಸೀಮರು! ಭಟ್ಕಳದಲ್ಲಿಯ ದೇವಸ್ಥಾನದ ಶಿಲ್ಪಗಳಲ್ಲಿ ಆ

ಕಾಲದ ಜನಜೀವನ ಅತ್ಯಂತ ವಾಸ್ತವಿಕವಾಗಿ ಚಿತ್ರಿತವಾಗಿದೆಯೆಂದು ಇವರು ಪತ್ತೆ ಮಾಡಿರುವದು ಒಂದು ವಿಶೇಷ.

ಕೃಷ್ಣಾನಂದರ ಛಾಯಾಚಿತ್ರಗಳ ಸಂಗ್ರಹ ಒಂದು ಮಹಾ ಸಾಗರ. ಅದರ ಲಾಭವನ್ನು ಅನೇಕರು ಪಡೆದಿದ್ದಾರೆ. ಅವನ್ನು ಒದಗಿಸುವಾಗ ಅವರಿಗಾದ ಶ್ರಮ ಅವರಿಗೇ ಗೊತ್ತು! ಇವರ ಲ್ಯಾಬ್ ಸಣ್ಣದಾಗಿತ್ತು. ಅದರ ಹಿಂದಿನ ಅರ್ಧಭಾಗ ಇವರ ಕತ್ತಲೆ ಕೋಣೆಯಾಗಿತ್ತು. ಗ್ರಾಹಕರಿಗೆ, ಸ್ನೇಹಿತರಿಗೆ, ಸ್ವಂತಕ್ಕೆ, ಭಾವಚಿತ್ರಗಳನ್ನು ತಯಾರಿಸುವಾಗ ಗಾಳಿಬೆಳಕುಗಳಿಲ್ಲದೇ ಇದ್ದ dark room ನಲ್ಲಿ ಕೆಲಸ ಮಾಡದೆ, ವಿಧಿಯೇ ಇರುತ್ತಿರಲಿಲ್ಲ. ಈ ಅನುಭವಕ್ಕೆ ವ್ಯತಿರಿಕ್ತವಾದ ಅವರ ತೀವ್ರ ಆಸಕ್ತಿ, ಚಿತ್ರಗಳನ್ನು ಕ್ಲಿಕ್ಕಿಸಲು ನಾಡು, ದೇಶವಿಡೀ ಸುತ್ತಾಡುವದು. ಇಂತಹ ತಿರುಗಾಟದಲ್ಲಿ ಇವರ ಜಿಲ್ಲೆಯಾದ ಉತ್ತರ ಕನ್ನಡದಲ್ಲಿ ೧೯೮೩ರಲ್ಲಿ ಇವರು ತಿರುಗಾಡಿದ್ದು ವಿಶೇಷವಾದುದು. ಆ ವರ್ಷ ಡಾ॥ ಸೂರ್ಯನಾಥ ಕಾಮತರು, ಕೃಷ್ಣಾನಂದನರು ಆ ಜಿಲ್ಲೆಯ ಗೆಝೆಟಿಯರಿಗೆ ಅವಶ್ಯವಾದ ಛಾಯಾಚಿತ್ರಗಳನ್ನು ತೆಗೆಯಲು ಕರೆದುಕೊಂಡುಹೋಗಿದ್ದರು. ಈ ಕೆಲಸದಿಂದ ಅವರಿಗೆ ಬಹಳ ಸಮಾಧಾನವಾಗಿರಬೇಕು. ತನ್ನ ಜಿಲ್ಲೆಯ ಬೇರೆ ಬೇರೆ ಜನಾಂಗಗಳ ಆಳವಾದ ಅಭ್ಯಾಸ ಸಾಧ್ಯವಾಯಿತು. 'ಅಕ್ಷತ' ಎನ್ನುವ ಇವರ ಪ್ರಬಂಧ ಸಂಕಲನದಲ್ಲಿ ಉತ್ತರಕನ್ನಡದ ಗೌಳಿಗಳು, ಮಾಪಿಳ್ಳೆಯರು, ಹಾಲಕ್ಕಿಗೌಡರು, ಸಾರಸ್ವತರು, ಖಾರ್ವಿಯರು, ಸಿದ್ದಿ, ನವಾಯತರು ಹಾಗೂ ಕ್ರೈಸ್ತರ ರೀತಿ-ರಿವಾಜುಗಳನ್ನು ಜನಸಾಮಾನ್ಯರ ಮನ ಮುಟ್ಟುವಂತೆ ವಿವರಿಸಿದ್ದಾರೆ.

ಆದಿವಾಸಿಗಳ ಅಧ್ಯಯನ

೧೯೭೭ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಕೃಷ್ಣಾನಂದರಿಗೆ ಶಿಷ್ಯವೇತನವನ್ನು ಕೊಟ್ಟು ಮಧ್ಯಪ್ರದೇಶದಲ್ಲಿ ಪ್ರವಾಸ ಮಾಡುವ ಅವಕಾಶವನ್ನು ಕಲ್ಪಿಸಿತು. ಈ ಪ್ರವಾಸದ ಪರಿಣಾಮವನ್ನು ಕೃಷ್ಣಾನಂದರ ಮೂರು ಪುಸ್ತಕಗಳಲ್ಲಿ ನೋಡಬಹುದು. ಮೊದಲನೆಯದು ೧೯೮೨ರಲ್ಲಿ ಧಾರವಾಡದ ಮನೋಹರ ಗ್ರಂಥಮಾಲೆಯಿಂದ ಹೊರಬಂದ 'ಕಾಲರಂಗ', ಎರಡನೆಯದು ಬೆಂಗಳೂರು ಪುಸ್ತಕಾಲಯದವರು ಪ್ರಕಟಿಸಿದ ೧೯೯೧ರ 'ಬಸ್ತರ ಪ್ರವಾಸ': ಮೂರನೆಯದು ೧೯೯೩ರಲ್ಲಿ ಹೊರಬಂದ 'ಮಧ್ಯಪ್ರದೇಶದ ಮಡಿಲಲ್ಲಿ'.

ಬಸ್ತರ ಪ್ರವಾಸದಲ್ಲಿ ಕೃಷ್ಣಾನಂದರು ಮಾಡಿರುವ ಆದಿವಾಸಿಗಳ ಜೀವನವರ್ಣನೆ ಅನನ್ಯವಾದದ್ದು. ವೆರಿಯರ್ ಎಲ್ವಿನ್ ಎನ್ನುವ ಇಂಗ್ಲಿಷ್ ಲೇಖಕ ಹಾಗೂ ಪಾದ್ರಿ, ಇವರಿಗೆ ಅಚ್ಚುಮೆಚ್ಚು. ಈ ಪುಸ್ತಕದಲ್ಲಿ ಆತನಿಗೆ ಒಂದು ಅಧ್ಯಾಯ ಮೀಸಲಿಟ್ಟಿದ್ದಾರೆ.

ಎಲ್ವಿನ್ನನು ಆದಿವಾಸಿಗಳ ಜೀವನಕ್ಕೆ ಮಾರುಹೋದ ಹಾಗೆ ಇವರೂ ಮಾರುಹೋಗಿದ್ದರು. ಆದಿವಾಸಿಗಳನ್ನು ಕ್ರೈಸ್ತಮತಕ್ಕೆ ಧರ್ಮಾಂತರ ಮಾಡಲೆಂದು ನೇಮಿಸಲ್ಪಟ್ಟ ಎಲ್ವಿನ್ನನು ತಾನೇ ಇಲ್ಲಿಯವರ ಮತವನ್ನು ಸ್ವೀಕರಿಸಿದನು! ಆದಿವಾಸಿ ತರುಣಿಯನ್ನು ಮದುವೆಯಾಗಿ ಮಕ್ಕಳನ್ನು ಪಡೆದರು. ಆದಿವಾಸಿಗಳ ಕಲ್ಯಾಣಕ್ಕಾಗಿ ತನ್ನನ್ನು ಸಂಪೂರ್ಣವಾಗಿ ವಿನಿಯೋಗಿಸಿಕೊಂಡನು. ಭಾರತ ಸರ್ಕಾರಕ್ಕೆ ಆದಿವಾಸಿ ಕಲ್ಯಾಣದ ಸಲಹಾಕಾರನಾಗಿಯೂ ಇದ್ದ. ಆದರೆ ಆ ಸಲಹೆಗಳನ್ನು ಕಾರ್ಯರೂಪಕ್ಕೆ ತರುವ ವಿಕೃತ ವಿಧಾನದಿಂದಾಗಿ ಆದಿವಾಸಿಗಳಿಗೆ ಒಳಿತು ಆಗುವ ಬದಲು ಘೋರ ಅನ್ಯಾಯವಾಗಿದೆ. ಅದಕ್ಕೆ ಕೃಷ್ಣಾನಂದರು ಈ ರೀತಿ ತಮ್ಮ ಅಸಂತೋಷವನ್ನು ವ್ಯಕ್ತಪಡಿಸುತ್ತಾರೆ. "ಸ್ವಾತಂತ್ರ್ಯ ಬಂದು ನಲವತ್ತಾರು ವರ್ಷಗಳು ಜಾರಿಕೊಂಡ ಬಳಿಕವೂ ನಾವು ನಮ್ಮ ಈ ದುರ್ದೈವಿ ಬಾಂಧವರನ್ನು ನಡೆಸಿಕೊಳ್ಳುವ ಕ್ರೂರ ರೀತಿಯನ್ನು ಕಂಡರೆ, ಎಲ್ವಿನ್ನನ ಆತ್ಮ ನೋವಿನಿಂದ ನರಳುತ್ತಿರಬೇಕು."

ಬಸ್ತರದ ಆದಿವಾಸಿಗಳೂ ಇತರ ಎಲ್ಲ ಆದಿವಾಸಿಗಳಂತೆ ಪರಕೀಯರನ್ನು ದೂರ ಇಟ್ಟಿರುತ್ತಾರೆ. ಅವರ ವಿಶ್ವಾಸವನ್ನು ಗಳಿಸಿದವರಿಗೆ ಮಾತ್ರ ತಮ್ಮ ಜೀವನ ಪದ್ಧತಿಯನ್ನು ಅಭ್ಯಸಿಸಲು ಅವಕಾಶವನ್ನು ಕೊಡುತ್ತಾರೆ. ಕೃಷ್ಣಾನಂದರು ಈ ವಿಶ್ವಾಸವನ್ನು ಸಂಪೂರ್ಣವಾಗಿ ಗಳಿಸಿದರು. ಅದ್ದರಿಂದ ಈ ಆದಿವಾಸಿಗಳ ಜೀವನ ವಿಧಾನವನ್ನು ತೀರ ನಿಕಟವಾಗಿ ತಿಳಿದುಕೊಳ್ಳಲು ಸಹಾಯವಾಯಿತು. ಆದಿವಾಸಿಗಳ ಜೀವನ ಎಷ್ಟು ಪರಿಪೂರ್ಣವಾಗಿತ್ತು ಎನ್ನುವುದಕ್ಕೆ ಕೃಷ್ಣಾನಂದರು ಹೀಗೆ ಉದ್ಗರಿಸುತ್ತಾರೆ. "ಆದಿವಾಸಿ ತನಗೆ ಬೇಕಾದ ಮನೆಕಟ್ಟುತ್ತಿದ್ದ, ಕೃಷಿಮಾಡುತ್ತಿದ್ದ, ಬೇಟೆಯಾಡುತ್ತಿದ್ದ, ಮೀನು ಹಿಡಿಯುತ್ತಿದ್ದ, ಮರ ಹತ್ತುತ್ತಿದ್ದ, ಬಾವಿಯಲ್ಲಿ ಇಳಿಯುತ್ತಿದ್ದ. ವೈದ್ಯ, ಬಡಗಿ, ಕಮ್ಮಾರ, ನಾಯಿಂದರ ಕೆಸಲಗಳೆಲ್ಲ ಅವನಿಗೆ ಬರುತ್ತಿದ್ದವು. ಪೋಲಿಸರು ಅವನಿಗೆ ಬೇಕಿರಲಿಲ್ಲ. ಅವನಿಗೆ ಸುಳ್ಳು ಹೇಳುವದು ಗೊತ್ತಿರಲಿಲ್ಲ. ಮೊನ್ನೆ ಮೊನ್ನೆಯವರೆಗೂ ಇಂಥ ಪ್ರಜೆಗಳು ನಮ್ಮ ದೇಶದಲ್ಲಿ ಇದ್ದರೆಂಬುದು ನಂಬುವದು ಕಷ್ಟ! ಮಹಾತ್ಮಾ ಗಾಂಧಿಯವರ, ಪ್ರತಿಯೊಬ್ಬ ವ್ಯಕ್ತಿಯೂ, ಪ್ರತಿ ಹಳ್ಳಿಯೂ ಸರ್ವತಂತ್ರ ಸ್ವತಂತ್ರವಾಗಬೇಕನ್ನುವ ಕನಸನ್ನು ಆದಿವಾಸಿಯು ನನಸುಮಾಡಿದ್ದ. ಅಂಥವರನ್ನು ನಾವು ನಿರ್ಗತಿಕನನ್ನಾಗಿ ಮಾಡಿದ್ದೇವೆ. ಅವನ ಕೆಲವು ಉತ್ತಮ ಸಂಪ್ರದಾಯಗಳು ಸುಶಿಕ್ಷಿತರೆನಿಸಿಕೊಳ್ಳುವ ನಮಗೆ ಮಾರ್ಗದರ್ಶಕವಾಗಬಲ್ಲುದು" ಎಂಬುದು ಕೃಷ್ಣಾನಂದರ ಮತ.

"ಪಟ್ಟಣದವರು ಬಳಸುವ ಯಾವ ಆಧುನಿಕ ಸಲಕರಣೆಗಳೂ ಈ ಆದಿವಾಸಿಗಳಿಗೆ ಲಭ್ಯವಿಲ್ಲ. ಆದರೆ ಅವರದೇ ಆದ ನೆಮ್ಮದಿಯ ಜೀವನ ನಡೆಸಲು ಏನೇನೂ ಕೊರತೆ ಇರಲಿಲ್ಲ. ಅಮೇರಿಕನ್ನರಂತೆ ಧನಸಂಪಾದನೆಯೇ ಸುಖದ

ಹೆದ್ದಾರಿ, ಎಂಬ ಸೂತ್ರವನ್ನು ನೆಚ್ಚಿಕೊಳ್ಳುವದಕ್ಕಿಂತ ಹಣದ ಅವಶ್ಯಕತೆಯೇ ಇಲ್ಲದ ಈ ಆದಿವಾಸಿಗಳ ಆದರ್ಶವನ್ನು ನಾವು ಏಕೆ ಬಳಸಬಾರದು?" ಎಂದು ಪ್ರಶ್ನಿಸಿದ್ದಾರೆ. ಹಾಗೇನಾದರೂ ಸಾಧ್ಯವಾದಲ್ಲಿ ಆಧುನಿಕರ ಕೊನೆಯಿಲ್ಲದ ಅಸಂತೋಷಕ್ಕೆ ಆಸ್ಪದವೇ ಇರುತ್ತಿರಲಿಲ್ಲ.

ಅತ್ಯಾಧುನಿಕರು ಬಿಡಿಸಲು ಹೆಣಗುವ ಯುವಜನರ ಸಮಸ್ಯೆಗಳನ್ನು, 'ಮುರಿಯ'ಎಂಬ ಆದಿವಾಸಿಗಳು ಯಾವಾಗಲೋ ಹೋಗಲಾಡಿಸಿದ್ದಾರೆ. ಇವರಲ್ಲಿ ಗಂಡು ಹೆಣ್ಣು ಎಂಬ ಅಂತರವಿಲ್ಲ. ಯುವಕ ಯುವತಿಯರು ಜತೆಜತೆಯಾಗಿ ಉಣ್ಣುತ್ತಾರೆ, ಉಡುತ್ತಾರೆ. ನದಿಯಲ್ಲಿ ಒಟ್ಟಾಗಿ ಬಟ್ಟೆಯಿಲ್ಲದೆ ಸ್ನಾನಮಾಡುತ್ತಾರೆ. ಒಂದೇ ಚಾಪೆಯ ಮೇಲೆ ಮಲಗುತ್ತಾರೆ. ಇವರೆಲ್ಲ ಸರಿ ಸಂತೆಗೆ, ಜಾತ್ರೆಗೆ, ನೃತ್ಯಕ್ಕೆ ಕೂಡಿ ಹೋಗುವುದನ್ನು ನೋಡಿ, ಕೃಷ್ಣಾನಂದರು ಪ್ರಶ್ನಿಸುತ್ತಾರೆ, 'ಸುಸಂಸ್ಕೃತರು ನಾವೋ? ಅವರೋ?' ಇದರ ಪ್ರತಿಯೊಂದು ಹಳ್ಳಿಗೂ ಸಾಂಸ್ಕೃತಿಕ ಚಟುವಟಿಕೆಗಳಿಗಾಗಿ ಮತ್ತು ದೈನಂದಿನ ಜೀವನೋಪಯೋಗಿ ಕೆಲಸಕ್ಕಾಗಿ ಒಂದು ಕೇಂದ್ರ ಇರುತ್ತಿತ್ತು. ಇದರ ಹೆಸರು ಘೋಟುಲ್. ಇದೊಂದು ಜೀವಂತ ವಿದ್ಯಾಲಯ. ಇಲ್ಲಿ ದಿನವೂ ಬಾಳಿ ಬದುಕುವ ಬಗ್ಗೆ ವಿದ್ಯೆ ನೋಡಲಾಗುತ್ತದೆ. ಇದರ ನಿರ್ವಹಣೆಗೆ ಊರವರು ಹೊಲಗಳನ್ನು ಬಿಟ್ಟುಕೊಡುತ್ತಾರೆ. ಇದರ ಆವಾರದಲ್ಲಿ ಬೆಳೆಗಳನ್ನು, ಕಾಯಿಪಲ್ಲೆಗಳನ್ನು, ಎಲ್ಲರೂ ಸೇರಿ ಬೆಳೆಸುತ್ತಾರೆ. ಇದು ವಿದ್ಯಾಲಯವೂ ಹೌದು, ಕ್ಲಬ್ಬೂ ಹೌದು. ಮೇಲ್ನೋಟಕ್ಕೆ ಇಂತಹ ಸಂಸ್ಥೆ ಇರುವದು ಗೊತ್ತಾಗುವುದಿಲ್ಲ. ಅವರ ವಿಶ್ವಾಸಗಳಿಸಿದರೆ, ಈ ಕೇಂದ್ರದ ಚಟುವಟಿಕೆಗಳನ್ನು ಅಭ್ಯಸಿಸಬಹುದು. ಕೃಷ್ಣಾನಂದರ ಯಾವುದಾದರೂ ಪುಸ್ತಕವನ್ನು ಇಂಗ್ಲಿಷಿಗೆ ಅನುವಾದ ಮಾಡುವದಾದರೆ, ಅವರ ಬಸ್ತರ ಪ್ರವಾಸಕ್ಕೆ ಮೊದಲ ಸ್ಥಾನ ಕೊಡಬೇಕು. ಹಾಗೆ ಮಾಡಿದರೆ ವೆರಿಯರ್ ಎಲ್ವಿನ್‌ರಂತೆ ಅವರ ಹೆಸರಿಗೂ ಅಂತಾರಾಷ್ಟ್ರೀಯ ಖ್ಯಾತಿ ಬರುತ್ತದೆ.

ಪರಿಸರ ಪ್ರಜ್ಞೆ

ಎರಡನೆಯ ಮಹಾಯುದ್ಧದ ಕೊನೆಯವರೆಗೂ ಆದಿವಾಸಿಗಳ ಜೀವನ ಮತ್ತು ನಮ್ಮ ಪೂರ್ವಜರ ಜೀವನ, ಒಂದು ವಿಧವಾದ ತೃಪ್ತಿ ನೆಮ್ಮದಿಗಳಿಂದ ಕೂಡಿತ್ತು. ನಿಸರ್ಗ, ಇವತ್ತು ಇರುವಂತೆ ಪೂರ್ಣನಾಶವಾಗಿರಲಿಲ್ಲ. ಪರಿಸರ ವಿಜ್ಞಾನದ ಅಧ್ಯಯನ ಹಾಗೂ ಸಂಶೋಧನೆಗಳ ಆಧಾರದ ಮೇಲೆ ಕೃಷ್ಣಾನಂದರು ನಿಸರ್ಗವನ್ನು ಕುರಿತು ಹೇಳುವದೇನೆಂದರೆ, "ನಿಸರ್ಗದ ಆಗು-ಹೋಗುಗಳನ್ನು ಸೂಕ್ಷ್ಮವಾಗಿ ಅರಿತು, ಅವುಗಳ ಸಮತೋಲವನ್ನು ಕಾಯ್ದುಕೊಳ್ಳುವದು ಸರ್ವದೃಷ್ಟಿಯಿಂದಲೂ ಅಪೇಕ್ಷಣೀಯ. ಬಳಸಿದಷ್ಟೂ ಅರಣ್ಯ ಬೆಳಸಬೇಕು.

ಮಳೆಬೀಳುವಷ್ಟು ನೀರನ್ನು ಬಳಸಬೇಕು. ಲಾಭಕ್ಕಾಗಿ ಸಹಜೀವಿಗಳ ಪಾಲನ್ನು ಕಸಿದುಕೊಳ್ಳಬಾರದು. ಪರಿಸರ ಸಂಹಾರಕನಾಗಿ ಪರಿಣಮಿಸಿದ ಮಾನವನು ಅದರ ಸಂರಕ್ಷಕನಾಗಬೇಕು. ಅಂದರೇ ನಿಸರ್ಗದ ಸಮತೋಲ ಕಾಯ್ದುಕೊಳ್ಳಲು ಸಾಧ್ಯ."

ಈ ಸಮತೋಲವನ್ನು ಕಾಯ್ದುಕೊಳ್ಳುವಲ್ಲಿ ಮಾನವನು ವಿಫಲನಾಗಿರುವುದಕ್ಕೆ ಕಾರಣವನ್ನು ಕೃಷ್ಣಾನಂದರು ಹೀಗೆ ತೋರಿಸುತ್ತಾರೆ. "ತನ್ನ ಅಪ್ರತಿಮ ಬುದ್ಧಿಮತ್ತೆಯಿಂದ ಬಾಹ್ಯಾಕಾಶ ಉಡ್ಡಾಣ, ಕಂಪ್ಯೂಟರ್ ಬಳಕೆ, ಇಂಟರ್‌ನೆಟ್ ಪ್ರಸಾರ ಇತ್ಯಾದಿ ಕ್ಷೇತ್ರಗಳಲ್ಲಿ ಮುಂದುವರಿದ ಪ್ರಾಣಿ ಮಾನವನು, ಸಂತಾನೋತ್ಪತ್ತಿ ನಿಯಂತ್ರಣದಲ್ಲಿ ಹಿಂದೆ ಬಿದ್ದಿದ್ದಾನೆ. ಇದರಿಂದ ಅವನು ಬೆಳೆಯುವ ಆಹಾರಕ್ಕಿಂತ ಹೆಚ್ಚಾಗಿ ಜನಸಂಖ್ಯೆ ಮಿತಿ ಮೀರಿದೆ. ಈ ಜನಸಂಖ್ಯೆಯ ಒತ್ತಡದಿಂದ ಮತ್ತು ಅದರ ಜೊತೆಗೆ ಮಧ್ಯ, ಧೂಮ್ರಪಾನ, ಸ್ವಚ್ಛಂದ ಲೈಂಗಿಕ ಜೀವನ, ಏಡ್ಸ್ ಕಾಯಿಲೆ, ಕೊಲೆ, ಸುಲಿಗೆ, ದರೋಡೆ, ಅತ್ಯಾಚಾರಗಳಿಂದ ಪರಿಸರ ನಾಶ, ತಡೆಯಲಾಗದಷ್ಟು ಹೆಚ್ಚಿದೆ. ಇದನ್ನು ತಡೆಗಟ್ಟಬೇಕಾದರೆ, ವ್ಯಕ್ತಿ, ಸಮಾಜ ಮತ್ತು ಸರಕಾರಗಳು ಒಟ್ಟಾಗಿ ನಿವಾರಣೋಪಾಯಗಳನ್ನು ಕೈಕೊಳ್ಳಬೇಕು. ಇಲ್ಲದಿದ್ದರೆ ಎಡೆಬಿಡದೆ ನಡೆದಿರುವ ಪರಿಸರ ಸಂಪೂರ್ಣ ನಾಶವಾಗಿ ಮಾನವಕೋಟಿ ಘೋರವಾದ ಪ್ರಾಯಶ್ಚಿತ್ತವನ್ನು ಅನುಭವಿಸಬೇಕಾಗುತ್ತದೆ" ಎಂದು ಕೃಷ್ಣಾನಂದರು ಎಚ್ಚರಿಸುತ್ತಾರೆ.

ಇತಿಹಾಸಪ್ರಜ್ಞೆ

ಕೃಷ್ಣಾನಂದರ ಪರಿಸರ ಪ್ರಜ್ಞೆಯ ಹಾಗೆ, ಅವರ ಇತಿಹಾಸ ಪ್ರಜ್ಞೆಯ ಬಗೆಗೂ ಬರೆಯಬಹುದು. ಆದರೆ ಈ ಲೇಖನ ನಾನು ತಿಳಿದುಕೊಂಡದ್ದಕ್ಕಿಂತ ದೊಡ್ಡದಾಗಿರುವದರಿಂದ ಅವರ ಇತಿಹಾಸ ಪ್ರಜ್ಞೆ, ಅವರ ಬರವಣಿಗೆಯಲ್ಲಿ ಎಲ್ಲೆಲ್ಲಿ ನೋಡಬಹುದೆಂದು ಹೇಳಲು ಮಾತ್ರ ಇಲ್ಲಿ ಸಾಧ್ಯ.

'ಅಕ್ಷತ' ಎನ್ನುವ ಇವರ ಪುಸ್ತಕದಲ್ಲಿ ಕೊಂಕಣಿ ಮತ್ತು ಕೊಂಕಣಿಗರ ಇತಿಹಾಸ, ಅದರಲ್ಲೂ ಹೊನ್ನಾವರದ ಮಲ್ಯ ಮನೆತನದ ಚರಿತ್ರೆ, 'ಮರುಪಯಣ'ದಲ್ಲಿ ಹೊನ್ನಾವರ ಗೆರಸೊಪ್ಪಗಳ ಇತಿಹಾಸ, ಬಸವರಾಜದುರ್ಗ, ಕರ್ನಲ್‌ಹಿಲ್, ಸೆಟ್ಟಿಕೆರೆಗಳ ಇತಿಹಾಸ ಮುಂತಾದವು ಇವರ ಬಲವಾದ ಇತಿಹಾಸ ಪ್ರಜ್ಞೆಗೆ ಜ್ವಲಂತ ನಿದರ್ಶನಗಳು. ಇದೇ ಪುಸ್ತಕದಲ್ಲಿ ಅತಿಮುಖ್ಯವಾದ ಸೂಚನೆಯೊಂದು ಭವಿಷ್ಯದ ಇತಿಹಾಸಕಾರರಿಗೆ ಇದೆ. ಹೊನ್ನಾವರ, ಹಿಂದೊಮ್ಮೆ ಸಾಗರಗಾಮಿ ಹಡಗುಗಳ ತಾಣವಾಗಿತ್ತು. ಅದರ ಬಳಿ ಹಲವಾರು ನೌಕಾಯುದ್ಧಗಳು ವಿಜಯನಗರ ಕಾಲದಲ್ಲಿ, ನಂತರದ ಶತಮಾನಗಳಲ್ಲಿ ನಡೆದಿವೆ. ಇಲ್ಲಿ ನದಿ ಮತ್ತು ಸಾಗರ

ಶೋಧನೆ ಮಾಡಿದರೆ, ಆಗ ಮುಳುಗಿದ ಅದೆಷ್ಟೋ ಹಡುಗುಗಳನ್ನು ಪತ್ತೆ ಮಾಡಬಹುದು, ಎನ್ನುವದು ಸಾಗರಶೋಧಕರಿಗೆ ಅತ್ಯಂತ ವ್ಯವಹಾರ್ಯ ಸೂಚನೆಯಾಗಿದೆ. ಕಾವಿಕಲೆಯ ಬಗ್ಗೆ, ಅದರ ಐತಿಹಾಸಿಕತೆ ಕಾದಿರಿಸುವಲ್ಲಿ ಅವರ ಶ್ರಮ ಆ ಪುಸ್ತಕದಲ್ಲಿ ಮೇಲಿಂದ ಮೇಲೆ ಕಂಡುಬರುತ್ತದೆ. ಲೇಪಾಕ್ಷಿ ಕಲೆಯ ವೈಶಿಷ್ಟ್ಯದ ಬಗೆಗಿನ ಅವರ ಅಧ್ಯಯನ ಹಾಗೂ ಅವರು ಸಂಗ್ರಹಿಸಿರುವ ಛಾಯಾಚಿತ್ರಗಳು ಮತ್ತು ವಿಶ್ಲೇಷಣೆ, ಅಲ್ಲಿಯ ಕಲೆಯ ಬಗೆಗಿನ ಅತ್ಯಾಧುನಿಕ ಮತ್ತು ಆಧಾರಯುತ ಗ್ರಂಥವಾಗಬಹುದು. ಇದೇ ರೀತಿಯಾಗಿ ಅವರ ಅಪ್ರಕಟಿತ ಲೇಖಗಳನ್ನೂ, ಬರವಣಿಗೆಯನ್ನು, ಪ್ರಕಟಿಸುವದು, ನಾವು ಕೃಷ್ಣಾನಂದರಿಗೆ ಸಲ್ಲಿಸಬಹುದಾದ ಯೋಗ್ಯ ಕಾಣಿಕೆಯಾಗಿದೆ.

■

9

ಚ.ವಿ. ಮುಳಗುಂದರು

ಗುರುವಿಗೆ ತಕ್ಕ ಶಿಷ್ಯ

ಪ್ರಾಚಾರ್ಯ ಚ.ವಿ. ಮುಳಗುಂದ ಅವರ ಪರಿಚಯ ನನಗೆ ಮೊದಲು ಆಗಿದ್ದು ೧೯೭೦ರಲ್ಲಿ. ತಾಳಿಕೋಟೆ ಯುದ್ಧ ಬಹಳ ಪ್ರಸಿದ್ಧಿ. ಆದರೆ ಆ ಯುದ್ಧ ಅಲ್ಲಿ ಆಗಲೇ ಇಲ್ಲ. ರಕ್ಕಸಗಿಯಲ್ಲಿ ಆಯಿತೆಂದು ಈಚೆಗಿನ ಸಂಶೋಧನದಿಂದ ತಿಳಿಯಲಾಗಿದೆ. ರಕ್ಕಸಗಿಯನ್ನು ನೋಡಿ ಅದು ರಣರಂಗವಾಗಿದ್ದನ್ನು ಖಚಿತಪಡಿಸಿಕೊಳ್ಳಬೇಕೆಂದು ನಾನು ಮತ್ತು ನನ್ನ ಕೆಲವು ಸ್ನೇಹಿತರು ತಾಳಿಕೋಟೆ ಮತ್ತು ಅದರ ಹತ್ತಿರವಿರುವ ರಕ್ಕಸಗಿಗಳನ್ನು ನೋಡಲು ಹೊರಟೆವು. ದಾರಿಯಲ್ಲಿ ಮುದ್ದೇಬಿಹಾಳಿನ ಕಾಲೇಜಿಗೆ ಬಂದೆವು. ಅದರ ಪ್ರಾಚಾರ್ಯರಾಗಿದ್ದ ಪ್ರೊ. ಮುಳಗುಂದ ಅವರು ನಮ್ಮನ್ನು ತಮ್ಮ ಕಾಲೇಜಿಗೆ ಬರಮಾಡಿಕೊಂಡರು. ತಾಳಿಕೋಟೆ ಮತ್ತು ರಕ್ಕಸಗಿಗಳಿಗೆ ಹೋಗುವ ವ್ಯವಸ್ಥೆ ಮಾಡಿದ್ದಲ್ಲದೆ ನಮ್ಮ ಜತೆಗೆ ತಾವು ಬಂದರು. ರಕ್ಕಸಗಿಯಲ್ಲಿ ಕೃಷ್ಣಾನದಿಯ ಸುತ್ತ ಮುತ್ತ ಅಡ್ಡಾಡಿ ಕದನ ನಡೆದ ಕುರುಹುಗಳನ್ನು ನೋಡಿದೆವು. ಅಲ್ಲಿಂದ ಮುದ್ದೇಬಿಹಾಳಿಗೆ ಹಿಂತಿರುಗಿ ಪ್ರೊ. ಮುಳಗುಂದ ಅವರ ಕಾಲೇಜಿನಲ್ಲಿ ಒಂದು ಕಾರ್ಯಕ್ರಮದಲ್ಲಿ ಭಾಗವಹಿಸಿ ಧಾರವಾಡಕ್ಕೆ ಬಂದೆವು. ಈ ಪ್ರವಾಸದಲ್ಲಿ ಪ್ರೊ. ಮುಳಗುಂದ ಅವರಲ್ಲಿ ಕಂಡ ಲವಲವಿಕೆ ಇಂದಿಗೂ ಅವರಲ್ಲಿ ಕಾಣುತ್ತವೆ. ಹೊಸ ಕಾಲೇಜನ್ನು ಅವರು ವ್ಯವಸ್ಥಿತವಾದ ರೀತಿಯಲ್ಲಿ ನಡೆಸುತ್ತಿದ್ದರು. ಅಲ್ಲಿಯ ವಾತಾವರಣ ಒಂದು ಕುಟುಂಬದವರಲ್ಲಿ ಇದ್ದ ಹಾಗೆ ನಮಗೆ ಕಾಣಿಸುತ್ತಿತ್ತು. ಇವರ ಸಹೋದ್ಯೋಗಿಗಳೆಲ್ಲಾ ಇವರನ್ನು ಒಂದು ಮನೆಯ ಯಜಮಾನರ ಹಾಗೆ ಗೌರವಿಸುತ್ತಿದ್ದರು.

ಪುನಃ ನಮ್ಮ ಭೇಟಿ ೧೯೭೫ ರಲ್ಲಿ ಧಾರವಾಡದಲ್ಲಿ ಆಯಿತು. ಇಷ್ಟೊತ್ತಿಗೆ ಪ್ರೊ. ಮುಳಗುಂದರು ಮುದ್ದೇಬಿಹಾಳಿನ ಕಾಲೇಜಿನಿಂದ ನಿವೃತ್ತರಾಗಿ ಧಾರವಾಡದ ನಿವಾಸಿಗಳಾಗಿದ್ದರು. ನಮ್ಮಿಬ್ಬರನ್ನು ತೀರ ಹತ್ತಿರದವರನ್ನಾಗಿ ಮಾಡಿದವರು ಡಾ. ಕೆ. ಈಶ್ವರನ್ನರು ಬಹಳ ಬೇಕಾಗಿದ್ದವರು. ಕರ್ನಾಟಕ ವಿಶ್ವವಿದ್ಯಾಲಯದಲ್ಲಿ

ಸಹೋದ್ಯೋಗಿಗಳಾಗಿದ್ದೆವು. ಅವರು ಧಾರವಾಡಕ್ಕೆ ಬಂದಾಗಲೆಲ್ಲಾ ನಾವು ಸೇರುತ್ತಿದ್ದೆವು. ೧೯೮೭ ರಲ್ಲಿ ನಾನು ಡಾ. ಈಶ್ವರನ್ನರು ಧಾರವಾಡದಲ್ಲಿ ಸೇರಿದಾಗ ಪರಿಸ್ಥಿತಿ ಬದಲಾಗಿತ್ತು. ಅವರ ಆರೋಗ್ಯ ಮೊದಲಿನ ಹಾಗೆ ಇರಲಿಲ್ಲ. ದೈವವಶಾತ್ ಪ್ರೊ. ಮುಳಗುಂದ ಅವರು ಸಹಾಯಕ್ಕೆ ಬಂದರು. ಅವರಿಬ್ಬರೂ ದಿನಾ ಸಾಯಂಕಾಲ ಕಲ್ಯಾಣನಗರದಿಂದ ನವೋದಯ ನಗರದಲ್ಲಿರುವ ನನ್ನ ಮನೆಗೆ ಬರುತ್ತಿದ್ದರು. ನಮ್ಮ ಮನೆಯ ಕಟ್ಟೆಯ ಮೇಲೆ ಸಾಯಂಕಾಲದ ಪ್ರಶಾಂತ ವಾತಾವರಣದಲ್ಲಿ ಸುಖಸಂಕಥಾ ವಿನೋದದಲ್ಲಿ ಕಾಲವನ್ನು ಕಳೆಯುತ್ತಿದ್ದೆವು. ಹೀಗೆ ಸೇರಿದಕೂಡಲೆ ಡಾ. ಈಶ್ವರನ್ನರ ಮೊದಲನೆ ಪ್ರಶ್ನೆ ಇವತ್ತು ಏನು ಮಾಡಿದಿರಿ. ಪ್ರೊ. ಮುಳಗುಂದರಿಗೂ ಇದೇ ಪ್ರಶ್ನೆಯನ್ನು ಕೇಳುತ್ತಿದ್ದರೆಂದು ಅವರು ಬರೆದಿದ್ದಾರೆ. ನಾನು ಉತ್ತರಿಸಿದ ಮೇಲೆ ಅನೇಕ ವಿಷಯಗಳ ಮೇಲೆ ಚರ್ಚೆ ಮಾಡುತ್ತಿದ್ದೆವು. ನನಗಾಗಲಿ, ಪ್ರೊ. ಮುಳಗುಂದರಿಗೆ ಆಗಲಿ ಅನ್ಯಾಯವಾಗಿದ್ದನ್ನು ನಾವು ಸಹಿಸಿಕೊಳ್ಳುತ್ತಿದ್ದುದನ್ನು ಅವರು ಒಪ್ಪುತ್ತಿರಲಿಲ್ಲ. ನೀವು ಎಲ್ಲವನ್ನು ನುಂಗಿಕೊಳ್ಳುತ್ತೀರಿ. ಹಾಗೆ ಮಾಡಬಾರದು. ಪ್ರತಿಭಟಿಸಬೇಕೆನ್ನುತ್ತಿದ್ದರು. ಈ ಸಂಜೆಯ ಸಂತೋಷಕೂಟ ಮತ್ತು ವಾಯುವಿಹಾರ ಅವರಿಗೆ ಎಷ್ಟು ಸೇರುತ್ತಿತ್ತೆಂದರೆ, ಪ್ರೊ. ಮುಳುಗುಂದ ಅವರ ಜತೆಗೆ ನಮ್ಮ ಮನೆಗೆ ಬರುವುದನ್ನು ಒಂದು ದಿನವೂ ತಪ್ಪಿಸುತ್ತಿರಲಿಲ್ಲ. ಅವರ ಮನೆಗೆ ಅತಿಥಿಗಳು ಬಂದರೆ ಪ್ರೊ. ಮುಳಗುಂದ ಅವರ ಜತೆಗೆ ಅತಿಥಿಗಳನ್ನು ಕರೆದುಕೊಂಡು ಬರುತ್ತಿದ್ದರು. ಅವರು ಜಮಖಾನ ಕ್ಲಬ್ಬಿನ ಸದಸ್ಯರಾಗಿದ್ದರು. ಅಲ್ಲಿಗೆ ಒಂದು ಸಲ ಅವರಿಗೆ ಹೋಗಬೇಕೆನಿಸಿದಾಗ ನಮ್ಮಿಬ್ಬರನ್ನು ತಮ್ಮ ಜತೆಗೆ ಕರೆದುಕೊಂಡು ಹೋಗಿದ್ದರು. ಡಾ. ಈಶ್ವರನ್ನರು ಗಂಭೀರ ಸ್ವಭಾವದವರು. ಹೆಚ್ಚಾಗಿ ತಮ್ಮ ವೇಳೆಯನ್ನು ಬರವಣಿಗೆಯಲ್ಲಿ ಕಳೆಯುತ್ತಿದ್ದರು. ಇತರರ ಮನೆಗೆ ಹೋಗಿ ಕಾಡಹರಟೆಯಲ್ಲಿ ವೇಳೆಯನ್ನು ಕಳೆಯುವವರಲ್ಲವೇ ಅಲ್ಲ. ಇಂಥವರು ನಾವು ಮೂವರು ಸೇರಿದಾಗ ಬಹಳ ಪ್ರಸನ್ನರಾಗಿರುತ್ತಿದ್ದರು. ಚೇಷ್ಟೆಗೆ ನನ್ನನ್ನು ರಾಜಗುರು ಎಂದು ಕರೆಯುತ್ತಿದ್ದರೆಂದು ಪ್ರೊ. ಮುಳಗುಂದರು ಬರೆದಿದ್ದಾರೆ. ಪ್ರೊ. ಮುಳಗುಂದರ ಹಾಗೆ ಡಾ. ಈಶ್ವರನ್ನರ ಇನ್ನೊಬ್ಬ ಶಿಷ್ಯರು ಪ್ರೊ. ಕೆ.ಜಿ. ಗುರುಮೂರ್ತಿಯವರು. ಅವರಿಗೆ ನಮ್ಮ ಮೂವರ ಸಂತೋಷಕೂಟದ ಬಗ್ಗೆ ಹೇಳಿದರೆ ಅವರು ತಮ್ಮ ಗುರುಗಳು ಹೀಗಿರುತ್ತಾರೆಂದು ನಾನು ತಿಳಿದಿರಲಿಲ್ಲವೆಂದರು.

೧೯೮೭ರ ಆರಂಭದಲ್ಲಿ ಪ್ರಾರಂಭವಾದ ಈ ಸಂತೋಷಕೂಟ ಬಹಳದಿನ ನಡೆಯಲಿಲ್ಲ. ಅದರ ಕೊನೆಯ ದಿನ ೬-೬-೧೯೮೮. ಅಂದು ನಮ್ಮ ಮನೆಯಲ್ಲಿ ಈಶ್ವರನ್ನರು ಮುಳಗುಂದ ಅವರಿಗೆ ನಾಳೆ ಬೆಳಗಾವಿಗೆ ವೈದ್ಯಕೀಯ ತಪಾಸಣೆಗೆ ಹೋಗಿ ಬರೋಣವೆಂದರು. ಮುಳಗುಂದ ಅವರು ಆಗಲೆಂದರು. ಆದರೆ ಅವರು ಬೆಳಗಾವಿಗೆ ಹೋಗಲೇ ಇಲ್ಲ.

೭-೬-೧೯೯೮ ರಿಂದ ೨೩-೬-೧೯೯೮ ರವರೆಗೆ ಡಾ. ಈಶ್ವರನ್ನರು ಪಾರ್ಶ್ವವಾಯುವಿನಿಂದ ನರಳಿದರು. ಇದೊಂದು ಅವರ ಜೀವನದ ಕೊನೆಯ ದುರಂತ. ಈ ದುರಂತದಲ್ಲಿ ಮೊದಲಿನಿಂದ ಕೊನೆಯುವರೆಗು ಮುಳಗುಂದ ಅವರು ತಮ್ಮ ಗುರುಗಳ ಸೇವೆಯನ್ನು ಮಾಡಿದರು. ಈ ಸೇವೆ ಅನನ್ಯವಾದುದು. ತಮ್ಮ ಗುರುಗಳ ಕಿರುಪರಿಚಯದಲ್ಲಿ ಈ ದುರಂತವನ್ನು ಯಥಾವತ್ತಾಗಿ ವರ್ಣಿಸಿದ್ದಾರೆ. ಅದನ್ನು ಓದಿದವರೆಗಲ್ಲರಿಗೂ ಎಂಥಾ ಮಹಾನ್ ವ್ಯಕ್ತಿಗೂ ವಿಧಿಲಿಖಿತವನ್ನು ಮೀರಲಿಕ್ಕೆ ಆಗುವುದಿಲ್ಲವೆನ್ನುವುದು ಖಚಿತವಾಗುತ್ತದೆ. ಪಾರ್ಶ್ವವಾಯುವಿನ ಬೇನೆ ಹೆಚ್ಚಾದ ಕೂಡಲೆ ಈಶ್ವರನ್ನರನ್ನು ಡಾ. ಕಬ್ಬೂರರ ಸಲಹೆ ಮೇಲೆ ಜರ್ಮನ್ ದವಾಖಾನೆಗೆ ಮುಳಗುಂದ ಅವರು ಸೇರಿಸಿದರು. ಅಲ್ಲಿಯ ವಾತಾವರಣ ಈಶ್ವರನ್ನರಿಗೆ ಸರಿಹೋಗಲಿಲ್ಲ. ಮನೆಗೆ ಬಂದುಬಿಟ್ಟರು. ಮುಳಗುಂದ ಅವರಿಗೆ ಅವರ ಒಬ್ಬ ಸ್ನೇಹಿತರ ಸಲಹೆ ಮೇರೆ ಅಂಕೋಲಾ ಔಷಧಿಯಿಂದ ಪಾರ್ಶ್ವವಾಯು ಗುಣವಾಗುತ್ತೆಂದು ತಿಳಿದುಬಂತು. ಆಗ ಮುಳಗುಂದ ಅವರು ಈಶ್ವರನ್ನರನ್ನು ಅಲ್ಲಿಗೆ ಕರೆದುಕೊಂಡು ಹೋಗಿ ಅಲ್ಲಿಯ ಔಷಧಿಯನ್ನು ತಂದರು. ಅದರಿಂದಲೂ ಅಪೇಕ್ಷಿತ ಗುಣ ಕಂಡುಬರಲಿಲ್ಲ. ಪುನಃ ಡಾ. ಗಳಾದ ಕಬ್ಬೂರ ಮತ್ತು ಕುಂದೂರರ ಸಲಹೆ ಮೇರೆ ಎರಡನೇ ಸಲ ಜರ್ಮನ್ ದವಾಖಾನೆಗೆ ಜೂನ್ ೨೨ನೇ ರಾತ್ರಿ ಮುಳಗುಂದ ಅವರು ಈಶ್ವರನ್ನರನ್ನು ಸೇರಿಸಿ ಬಂದರು. ೨೩ನೇ ಬೆಳಗು ಮುಂಜಾನೆ ಈಶ್ವರನ್ನರು ಇಹಲೋಕ ಯಾತ್ರೆ ಮುಗಿಯಿತು. ಅವರ ಪತ್ನಿ ಶೈಲಜಾ ಅವರು ಕೆನಡಾದಿಂದ ಬಂದ ಮೇಲೆ ಶವಸಂಸ್ಕಾರ ಆಯಿತು. ಈ ದುರಂತ ಮುಗಿಯುವವರೆಗೂ ಮುಳಗುಂದ ಅವರ ಜತೆಗೆ ಈಶ್ವರನ್ನರ ನೆಂಟರು, ಸೇವಕರು ಇರುತ್ತಿದ್ದರು.

ನಮ್ಮ ಪರಂಪರೆಯಲ್ಲಿ ತಾಯಿ, ತಂದೆ ಮತ್ತು ಗುರುಗಳ ಇಹಲೋಕ ಯಾತ್ರೆಯ ಕೊನೆ ದಿನಗಳಲ್ಲಿ ಅವರ ಸೇವೆಯನ್ನು ಮಾಡಲಿಕ್ಕೆ ಅವಕಾಶ ಸಿಗುವುದು ಅವರ ಪುಣ್ಯವೆನ್ನುತ್ತಾರೆ. ಮುಳಗುಂದ ಅವರಿಗೆ ಆ ಪುಣ್ಯ ಲಭ್ಯವಾಯಿತು. ಆದರೆ ತಮ್ಮ ಗುರುಗಳ ಸೇವೆ ಇಲ್ಲಿಗೆ ಮುಗಿಯಲಿಲ್ಲ. ಗದುಗಿನ ತೋಂಟದಾರ್ಯ ಮಠವು ಪ್ರಕಟಿಸುತ್ತಿರುವ ವೀರಶೈವ ಪುಣ್ಯಪುರುಷ ಸಾಹಿತ್ಯ ರತ್ನಮಾಲೆಗೆ ಈಶ್ವರನ್ನರ ಬಗ್ಗೆ ಇವರು ಬರೆದು ಕೊಟ್ಟಿದ್ದಾರೆ. ಈ ಕಿರುಪರಿಚಯ ಎರಡು ದೃಷ್ಟಿಯಿಂದ ಮಹತ್ವದ್ದಾಗಿದೆ. ಮೊದಲನೆಯದು ಈಶ್ವರನ್ನರು ತಮ್ಮ ಆತ್ಮಚರಿತ್ರೆಯನ್ನು "ವಲಸೆ ಹೋದ ಕನ್ನಡಿಗನ ಕಥೆ" ಮತ್ತು "ಅರುಂಧತಿ ನನ್ನ ಮಗಳು" ಈ ಪುಸ್ತಕಗಳಲ್ಲಿ ರಸವತ್ತಾಗಿ ಬರೆದಿದ್ದಾರೆ. ಆದರೆ ಈ ಪುಸ್ತಕಗಳು ಓದಲಿಕ್ಕೆ ಸುಲಭವಾಗಿ ಸಿಗುವುದಿಲ್ಲ. ಅವುಗಳಲ್ಲಿಯ ಮುಖ್ಯ ಅಂಶಗಳನ್ನು ಮುಳಗುಂದ ಅವರು ತಮ್ಮ

ಪುಸ್ತಕದಲ್ಲಿ ಕೊಟ್ಟಿರುವುದರಿಂದ ಈಶ್ವರನ್ನರ ಮಾತಿನಲ್ಲಿಯೆ ಅವರ ಸಂಕ್ಷಿಪ್ತ ಜೀವನ ಚರಿತ್ರೆಯನ್ನು ತಿಳಿದುಕೊಂಡಹಾಗಾಗಿದೆ. ಮುಳಗುಂದ ಅವರ ಗುರುಗಳ ಸೇವೆ ಇಲ್ಲಿಗೆ ಮುಗಿಯಲಿಲ್ಲ. ಈಶ್ವರನ್ನರು ಧಾರವಾಡದಲ್ಲಿಯ ತಮ್ಮ ಭವ್ಯವಾದ ಮನೆಯನ್ನು ಗದುಗಿನ ತೋಂಟದಾರ್ಯ ಮಠಕ್ಕೆ ದಾನಮಾಡಿದ್ದಾರೆ. ಅದೇ ಮನೆಯಲ್ಲಿ ಪ್ರತಿ ಗುರುವಾರ ಸಂಜೆ ವಚನ ಚಿಂತನವೆಂಬ ಕಾರ್ಯಕ್ರಮವನ್ನು ಮುಳಗುಂದ ಅವರು ನಡೆಸುತ್ತಿದ್ದಾರೆ. ಆ ಸ್ಥಳ ಮತ್ತು ಅಲ್ಲಿ ನಡೆಯುವ ವಚನ ಚಿಂತನೆ ಈಶ್ವರನ್ನರ ಆತ್ಮಕ್ಕೆ ಶಾಂತಿಯನ್ನು ಕೊಡುತ್ತವೆನ್ನುವುದರಲ್ಲಿ ಸಂಶಯವಿಲ್ಲ.

ತಮ್ಮ ಗುರುಗಳು ನನ್ನಲ್ಲಿಗೆ ಬರುತ್ತಿದ್ದ ಹಾಗೆ ಮುಳಗುಂದ ಅವರು ಬರುತ್ತಾರೆ. ಆದರೆ ಅವರ ಕಾರ್ಯಬಾಹುಳ್ಯ ದಿನದಿಂದ ದಿನಕ್ಕೆ ಹೆಚ್ಚುತ್ತಿರುವುದರಿಂದ ಅವರಿಗೆ ಯಾವಾಗ ಸಾಧ್ಯವಾಗುತ್ತದೊ ಆಗ ಬರುತ್ತಾರೆ. ಅವರು ಬರುವುದನ್ನು ನಾನು ಮತ್ತು ನನ್ನ ಮನೆಯವರು ಎದುರುನೋಡುತ್ತೇವೆ. ಮುಂಬಯಿಯಲ್ಲಿರುವ ನನ್ನ ಮಗಳು ಆಗಿಂದಾಗ್ಗೆ ಮುಳಗುಂದರು ಬರುತ್ತಾರೊ ಇಲ್ಲವೊ ಇದನ್ನು ವಿಚಾರಿಸುತ್ತಿರುತ್ತಾಳೆ. ನಾವೆಲ್ಲಾ ಯಾಕೆ ಇವರ ಬರುವಿಕೆಯನ್ನು ನಿರೀಕ್ಷಿಸುತ್ತೇವೆ ಎಂದರೆ, ನನಗೆ ವಯಸ್ಸಾಯಿತು. ಎಲ್ಲಿಗೂ ಹೋಗಲಿಕ್ಕೆ ಆಗುವುದಿಲ್ಲ. ಮುಳಗುಂದ ಅವರು ಸದಾ ಒಂದಲ್ಲಾ ಒಂದು ಚಟುವಟಿಕೆಯಲ್ಲಿರುವವರು. ಅವರು ಸಂಪರ್ಕ ಇಟ್ಟುಕೊಂಡಿರುವ ಸಂಘ-ಸಂಸ್ಥೆಗಳು ಅನೇಕ. ಅಲ್ಲದೇ ಇತರ ಕಾರ್ಯಕ್ರಮಗಳಿಗೂ ಹೋಗಿಬರುತ್ತಿರುತ್ತಾರೆ. ದೇಶನೋಡಿ ಕೋಶಗೆಲ್ಲುವವರು ಇವರು. ಅಮರನಾಥ, ಬದರಿ ಕೇದಾರ, ಅಮೃತಸರ, ಕಾನಪುರ ಹೀಗೆ ಯಾತ್ರೆ ನೆಪದಲ್ಲಿ ಅಥವಾ ಸಮ್ಮೇಳನಗಳಲ್ಲಿ ಭಾಗವಹಿಸಲಿಕ್ಕೆ ದೇಶಾದ್ಯಂತ ತಿರುಗಾಡುತ್ತಿರುತ್ತಾರೆ. ಆದ್ದರಿಂದ ಅವರಿಂದ ಅವರು ಭಾಗವಹಿಸಿದ ಕಾರ್ಯಕ್ರಮಗಳ ಬಗ್ಗೆ, ದೇಶಾಟನೆಯಲ್ಲಿ ನಡೆದ ಕೌತುಕಗಳ ಬಗ್ಗೆ ಕೇಳಲು ಕುತೂಹಲನಾಗಿರುತ್ತೇನೆ. ನನ್ನಲ್ಲಿ ಬಂದಹಾಗೆ ಅವರು ತಮ್ಮ ಆತ್ಮೀಯ ಸ್ನೇಹಿತರಾದ ಪ್ರೊ. ಎಚ್.ವಿ. ನಾಗೇಶ ಅವರಲ್ಲಿಯೂ ತಪ್ಪದೆ ಹೋಗಿ ಬರುತ್ತಾರೆ. ಹೀಗೆ ತಮ್ಮ ಎಲ್ಲ ಸ್ನೇಹಿತರಿಗೂ ಬೇಕಾದವರಾಗಿದ್ದಾರೆ. ಆದ್ದರಿಂದ ಅವರ ಸ್ನೇಹಿತರು, ಅಭಿಮಾನಿಗಳು ಮತ್ತು ಅವರ ಸಂಪರ್ಕವಿಟ್ಟುಕೊಂಡಿರುವ ಸಂಘ-ಸಂಸ್ಥೆಗಳು ಅವರನ್ನು ಗೌರವಿಸಲು ಕುತೂಹಲರಾಗಿರುತ್ತಾರೆ. ಇಂತಹ ಸಂಸ್ಥೆಗಳಲ್ಲಿ ಅವರು ಸ್ಥಾಪಿಸಿದ ಮಾತೋಶ್ರೀ ಗಂಗಮ್ಮ ಚಿನಿವಾರ ಕಾಲೇಜು ಮೊದಲನೆ ಸ್ಥಾನದಲ್ಲಿದೆ. ಅದರ ಪ್ರಗತಿ ಇವರು ಹಾಕಿದ ಭದ್ರವಾದ ತಳಹದಿಯ ಮೇಲೆ ನಡೆದಿದೆ. ಈ ಸಂಘ-ಸಂಸ್ಥೆಗಳು, ಸ್ನೇಹಿತರು, ಅಭಿಮಾನಿಗಳು ಅವರನ್ನು ಗೌರವಿಸುವುದು ಯಥಾಯೋಗ್ಯ. ■

10

ಡಾ. ಸೂರ್ಯನಾಥ ಕಾಮತರು
(ಗುರುಬಲ ಹೆಚ್ಚೋ – ಶಿಷ್ಯಬಲ ಹೆಚ್ಚೋ)

ಬೆಂಗಳೂರಿನಲ್ಲಿ ೧೯೯೮ರ ನವೆಂಬರಿನಲ್ಲಿ ಕರ್ನಾಟಕ ಇತಿಹಾಸ ಅಕಾಡೆಮಿಯ ವಾರ್ಷಿಕ ಸಮ್ಮೇಳನ ನಡೆದದ್ದು – ಎಲ್ಲರಿಗೂ ಗೊತ್ತಿದೆ. ಆದರ ಸಮಾರೋಪ ಅಧಿವೇಶನದ ಅಧ್ಯಕ್ಷತೆ ನನ್ನ ಪಾಲಿಗೆ ಬಂದಿತ್ತು. ಆ ಸಭೆಯ ಪ್ರಾರಂಭದಲ್ಲಿ ಡಾ॥ ಸೂರ್ಯನಾಥ ಕಾಮತರು ಪ್ರಾಸ್ತಾವಿಕ ಭಾಷಣದಲ್ಲಿ, ತಮಗೆ ಈಚೆಗೆ ಅನಿರೀಕ್ಷಿತವಾಗಿ ಕೆಲವು ಗೌರವಸ್ಥಾನಗಳು ದೊರಕಿವೆ. ಈ ತಮ್ಮ ಸಾಧನೆಗಳಿಗೆಲ್ಲಾ ಗುರುಬಲವೇ ಕಾರಣವೆಂದು ನನ್ನನ್ನು ಉದ್ದೇಶಿಸಿ ಹೇಳಿದರು. ನನಗೆ ಇಷ್ಟು ಬಲವಿದೆಯೆಂದು ತಿಳಿದು ನಾನು ತಬ್ಬಿಬ್ಬಾದೆ. ನಾನು ಮಾತನಾಡುವಾಗ ನಾನು ಗುರುವಾಗಿ ಕೊಟ್ಟದ್ದಕ್ಕಿಂತ, ಈ ಶಿಷ್ಯನಿಂದ ಹೆಚ್ಚಿಗೆ ಪಡೆದಿದ್ದೇನೆಂದು ಹೇಳಬೇಕಾಗಿತ್ತು. ಆದರೆ ಗಡಿಬಿಡಿಯಲ್ಲಿ ಆಗಲಿಲ್ಲ. ನಾನು ಎಂತಹ ತಪ್ಪು ಮಾಡಿದೆನೆಂದು ಪಶ್ಚಾತ್ತಾಪಪಟ್ಟೆ, ಆಗ ಹೇಳಬೇಕಾದ್ದನ್ನು ಈಗ ಹೇಳುವ ಅವಕಾಶ ಸಿಕ್ಕಿದಕ್ಕೆ ನನಗೆ ಅತ್ಯಂತ ಆನಂದವಾಗಿದೆ.

ನಮ್ಮಿಬ್ಬರಲ್ಲಿ – ಅವರಿಗೆ ನನ್ನ ಗುರುಬಲ ಹೆಚ್ಚಾಗಿದೆಯೊ ಅಥವಾ ಅವರಿಂದ ನನಗೆ ಶಿಷ್ಯಬಲ ಹೆಚ್ಚಾಗಿದೆಯೊ ಎನ್ನುವುದನ್ನು ಈಗ ಪರಿಶೀಲಿಸೋಣ. ಈ ಗುರುಬಲ ಮತ್ತು ಶಿಷ್ಯಬಲಗಳನ್ನು ತಕ್ಕಡಿಯಲ್ಲಿಟ್ಟು ತೂಗೋಣ.

ನನ್ನ ಅವರ ಸಂಬಂಧ ೪೦ ವರ್ಷಕ್ಕಿಂತ ಹೆಚ್ಚಿನದು. ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಅವರು ನನ್ನ ಎಂ.ಎ. ವಿದ್ಯಾರ್ಥಿಯಾಗಿದ್ದಾಗ (೧೯೫೮-೬೦) ಈ ಸಂಬಂಧ ಆರಂಭವಾಯಿತು. ಎಂ.ಎ. ವರ್ಗದಲ್ಲಿ ವಿದ್ಯಾರ್ಥಿಗಳು ಸ್ವಲ್ಪವಿದ್ದುದರಿಂದ ಗುರು–ಶಿಷ್ಯ ಸಂಬಂಧ ನಿಕಟವಾಗಿರುತ್ತಿತ್ತು. ಡಾ॥ ಬಿ.ಎ. ಸಾಲೆತೊರೆಯವರು ಆಗ ಇತಿಹಾಸ ವಿಭಾಗದ ಮುಖ್ಯಸ್ಥರಾಗಿದ್ದರು. ಅವರು ನನಗೆ ಪಿಹೆಚ್.ಡಿ. ಮಾರ್ಗದರ್ಶಕವಾಗಿದ್ದರು. ಅವರ ವಿದ್ವತ್ತು, ವ್ಯಕ್ತಿತ್ವ, ರಾಷ್ಟ್ರ ಪ್ರೇಮ ಮತ್ತು ನಿರ್ಭಯ ನಡವಳಿಕೆ ಅವರ ವಿದ್ಯಾರ್ಥಿಗಳ ಮೇಲೆ ತನ್ನ

ಪ್ರಭಾವವನ್ನು ಬೀರುತ್ತಿತ್ತು. ಈ ಪ್ರಭಾವವವು ನನ್ನ ಮೇಲೂ ಆಯಿತು ; ಡಾ॥ ಕಾಮತರ ಮೇಲೂ ಆಯಿತು. ಡಾ॥ ಕಾಮತರು ಎಂ.ಎ. ಪಾಸು ಮಾಡಿದ ಮೇಲೆ ತಾವು ದುಡಿಯಬೇಕು ಮತ್ತು ಅದೇ ವೇಳೆ ಪಿಎಚ್.ಡಿಯನ್ನು ಮಾಡಬೇಕು. ಧಾರವಾಡದಲ್ಲಿ ಕೆಲಸ ಸಿಗುವ ಅವಕಾಶಗಳಿಲ್ಲವಾದ್ದರಿಂದ ತಾವು ಮುಂಬಯಿಗೆ ಹೋಗಿ ದುಡಿದು ಪಿಹೆಚ್.ಡಿ. ಮಾಡಬೇಕೆನ್ನುವ ತಮ್ಮ ಆಶಯವನ್ನು ನನಗೆ ಹೇಳಿದರು. ಈ ವಿಷಯವನ್ನು ಅವರು ಡಾ॥ ಸಾಲೆತೊರೆಯವರಿಗೂ ಹೇಳಿ, ಅವರ ಮಾರ್ಗದರ್ಶನವನ್ನೂ ಪಡೆದಿರಬೇಕು. ಮುಂಬಯಿಗೆ ಹೋಗಿ ಅಲ್ಲಿಂದ ನನಗೆ ಪತ್ರಬರೆದರು. ನನಗೆ Free Press Journal ಎನ್ನುವ ದೈನಿಕ ಪತ್ರಿಕೆಯಲ್ಲಿ ಕೆಲಸ ಮಾಡುವ ಇಚ್ಛೆಯಿದೆ. ಅಲ್ಲಿ ನಿಮಗೆ ಯಾರಾದರೂ ಪರಿಚಯಸ್ಥರಿದ್ದರೆ ನನ್ನನ್ನು ಅವರಿಗೆ ಶಿಫಾರಸ್ಸು ಮಾಡಿ ಎಂದು ಕೇಳಿದರು.

ಮುಂಬಯಿಯಲ್ಲಿ ನನಗೆ ಶ್ರೀ ಮದ್ದೂರು ಸುಬ್ಬರಾಯರೆಂಬ ಹಿತೈಷಿಗಳಿದ್ದರು. ಅವರು ಒಂದು ಖಾಸಗಿ ಕಂಪನಿಯಲ್ಲಿ ದೊಡ್ಡ ವೃತ್ತಿಯಲ್ಲಿದ್ದರು. ನಾನು ಮುಂಬಯಿಗೆ ಹೋದಾಗ ಅವರಲ್ಲಿಳಿದುಕೊಳ್ಳುತ್ತಿದ್ದೆ. ನಮ್ಮ ಸುದೈವದಿಂದ ಶ್ರೀ ಸುಬ್ಬರಾಯರಿಗೂ Free Press Journal ನ ಸಂಪಾದಕರಾದ ಶ್ರೀ ನಾಯರ್ ಅವರಿಗೂ ನಿಕಟ ಸ್ನೇಹವಿತ್ತು. ಇಬ್ಬರೂ ದಿನಾ ಬೆಳಿಗ್ಗೆ ವಾಕಿಂಗ್ ಹೋಗುತ್ತಿದ್ದರು. ನಾನು ಶ್ರೀ ಕಾಮತರ ವಿಷಯವನ್ನು ಶ್ರೀ ಸುಬ್ಬರಾಯರಿಗೆ ಹೇಳಿದ ಮೇಲೆ ಅವರು ಶ್ರೀ ನಾಯರರಿಗೆ ಶ್ರೀ ಕಾಮತರನ್ನು ಸಿಫಾರಸು ಮಾಡಿ ಅವರಿಗೆ ಆ ದೈನಿಕ ವರ್ತಮಾನಪತ್ರಿಕೆಯಲ್ಲಿ ಕೆಲಸವನ್ನು ಮಾಡಿಸಿಕೊಟ್ಟರೆಂದು ನನಗೆ ನೆನಪು. ಡಾ॥ ಕಾಮತರು ಈ ವಿಷಯದಲ್ಲಿ ಬೇರೆಯವರ ಸಹಾಯವನ್ನು ಪಡೆದಿರಬಹುದು. ಈ ವ್ಯವಸ್ಥೆಯಿಂದ ಡಾ ॥ ಕಾಮತರಿಗೆ ಪಿಎಚ್.ಡಿ. ಅಭ್ಯಾಸವನ್ನು ನಿರಾತಂಕವಾಗಿ ಮುಗಿಸಲು ಸಹಾಯವಾಯಿತೆಂದು ತಿಳಿದಿದ್ದೇನೆ. ಅವರ ಪಿಎಚ್.ಡಿ. ವಿಷಯ "ವಿಜಯನಗರ ಕಾಲದ ತುಳುವ" ಪ್ರೊ॥ ವಿಲಿಯಂ ಕೊಹಿಲೊ ಅವರ ಸಮರ್ಥ ಮಾರ್ಗದರ್ಶನವು ಅವರಿಗೆ ದೊರತಿತ್ತು. ನಾನು ಅವರ ಪರೀಕ್ಷಕನಾಗಿದ್ದುದರಿಂದ ಅವರ ಪ್ರಬಂಧದ ಮೌಲ್ಯ ನನಗೆ ಚೆನ್ನಾಗಿ ಗೊತ್ತಿದೆ. ಅದು ಪ್ರಕಟವಾಗಿದ್ದರೆ ಒಂದು ಉತ್ತಮ ಗ್ರಂಥವಾಗುತ್ತಿತ್ತು; ಆದರೆ ಅದು ಸಾಧ್ಯವಾಗಲಿಲ್ಲ.

ಡಾಕ್ಟರೇಟ್ ಸಿಕ್ಕ ಮೇಲೆ ಡಾ॥ ಕಾಮತರು ಬೆಂಗಳೂರಿಗೆ ಬಂದರು. ಅವರು ಬೆಂಗಳೂರಿಗೆ ಬಂದಮೇಲೆ Deccan Herald ಗುಂಪನ್ನು ಸೇರಿದರು. ಅಲ್ಲಿಂದ ಅವರು ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಉಪನ್ಯಾಸಕರಾದರು. ಈ ಅವಧಿಯಲ್ಲಿ ಅವರು ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳನ್ನು ಸಂಪಾದಿಸಿದರು. ಅಲ್ಲಿಂದ ಅವರು ೧೯೭೮ರಲ್ಲಿ ಕರ್ನಾಟಕ ರಾಜ್ಯ ಸರ್ಕಾರದ ಪತ್ರಾಗಾರ ಖಾತೆಯ

ಮುಖ್ಯಸ್ಥರು ಮತ್ತು ಕರ್ನಾಟಕ ರಾಜ್ಯ ಗೆಸೆಟಿಯರಿನ ಮುಖ್ಯ ಸಂಪಾದಕರು ಆದರು. ಕೆಲವು ವರ್ಷಗಳಾದ ಮೇಲೆ ಪತ್ರಾಗಾರದ ಕೆಲಸ ಇವರ ಕೈ ತಪ್ಪಿತು. ಗೆಸೆಟಿಯರ್ ಹುದ್ದೆಯಲ್ಲಿ ಮುಂದುವರಿದು ಈಚೆಗಷ್ಟೇ ಅದರಿಂದ ನಿವೃತ್ತರಾಗಿದ್ದಾರೆ. ೧೯೭೭ರ ಹೊತ್ತಿಗೆ ಅವರು ಮಿಥಿಕ್ ಸೊಸೈಟಿಯಲ್ಲಿ ಪ್ರಮುಖ ಕಾರ್ಯಕರ್ತರಾಗಿ ಅದರ ನಿಯತಕಾಲಿಕವಾದ Quarterly Journal of the Mythic Society (QJMS)ಯ ಸಂಪಾದಕರಾದರು. ಈ ಪತ್ರಿಕೆಯನ್ನು ಅನೇಕ ವರ್ಷ ನಡೆಸಿಕೊಂಡು ಬಂದು ಈ ವಿಷಯದಲ್ಲಿ ಒಂದು ದಾಖಲೆಯನ್ನು ಮಾಡಿದ್ದಾರೆ. ಈಗ ಮಿಥಿಕ್ ಸೊಸೈಟಿಯ ಅಧ್ಯಕ್ಷರೂ ಆಗಿದ್ದಾರೆ. ಇತ್ತೀಚೆಗೆ ಅವರು ಕರ್ನಾಟಕ ಇತಿಹಾಸ ಅಕಾಡೆಮಿಯನ್ನು ಆರಂಭಿಸಿ ಅದನ್ನು ಒಂದು ಪ್ರಭಾವಶಾಲಿ ಸಂಸ್ಥೆಯನ್ನಾಗಿ ಮಾಡಿರುವುದು ಎಲ್ಲರಿಗೂ ಗೊತ್ತಿದೆ. ಇವು ಅವರ ಜೀವನದಲ್ಲಿಯ ಮುಖ್ಯ ಸಾಧನೆಗಳ ವಿಹಂಗಮ ನೋಟ.

ಇಷ್ಟು ಸಾಧನೆಗಳನ್ನು ಇವರು ಸಾಧಿಸುವುದಕ್ಕೆ ಇವರಿಗಿದ್ದ ಅನುಕೂಲಗಳೇನು ಮತ್ತು ಈ ಅನುಕೂಲ ಪರಿಸ್ಥಿತಿಯನ್ನು ಇವರು ಹೇಗೆ ಕಲ್ಪಿಸಿಕೊಂಡರು ಎಂದು ಯಾರಾದರೂ ಕೇಳಬಹುದು. ಅವರ ಆರ್.ಎಸ್.ಎಸ್. ಸಂಬಂಧ ಮತ್ತು ರಾಷ್ಟ್ರೀಯ ಕಾಂಗ್ರೆಸ್ ಚಳವಳಿಗಳು ಅವರ ಮೇಲೆ ಮಾಡಿದ ಪ್ರಭಾವದಿಂದ, ಅವರಿಗೆ ರಾಷ್ಟ್ರ ಮತ್ತು ಕರ್ನಾಟಕದ ಏಳಿಗೆಗೆ ದುಡಿಯಬೇಕೆಂಬ ಉದಾತ್ತ ಧ್ಯೇಯ, ಹೀಗೆ ದುಡಿಯಬೇಕಾದರೆ ನಿಸ್ಪೃಹರಾಗಿ ಶಿಸ್ತಿನಿಂದ ನಡೆದುಕೊಂಡು ಹೋಗಬೇಕೆಂಬ ವಿವೇಕ – ಈ ಗುಣಗಳು ಲಭಿಸಿವೆ. ಪತ್ರಿಕಾ ವ್ಯವಸಾಯದಿಂದ ಇತರ ವ್ಯವಸಾಯಿಗಳ ಸ್ನೇಹದ ಜತೆಗೆ ಶೀಘ್ರವಾಗಿ ಮತ್ತು ಆಕರ್ಷಕವಾಗಿ ಬರೆಯುವ ಕಲೆ ಇವರಿಗೆ ಕರಗತವಾಗಿದೆ. ಶಿಕ್ಷಕರಾಗಿದ್ದುದರಿಂದ ಮತ್ತು ಮಿಥಿಕ್ ಸೊಸೈಟಿಯಲ್ಲಿಯ ಸಭೆಗಳಲ್ಲಿ ಭಾಗವಹಿಸುವುದರಿಂದ ಮಾತನಾಡುವ ಕಲೆ ಸಾಧಿಸಿದೆ. ಸಂಗ್ರಾಮ ಸ್ಮೃತಿಗಳ ಸಂಪಾದನೆಯಿಂದ, ಸ್ವಾತಂತ್ರ್ಯ ಹೋರಾಟಗಾರರ ಮತ್ತು ಸರ್ಕಾರದವರ ಸಹಾನುಭೂತಿ ಮತ್ತು ಸಹಕಾರಗಳು ದೊರಕಿವೆ. ಸರ್ಕಾರದ ಸೇವೆಯಲ್ಲಿ ಅವರು ಜಿಲ್ಲಾ ಗೆಜೆಟಿಯರುಗಳನ್ನು ಒಂದರ ಮೇಲೊಂದನ್ನು ಶೀಘ್ರವಾಗಿ ಮತ್ತು ಅಚ್ಚುಕಟ್ಟಾಗಿ ಮತ್ತು ಮಿತವ್ಯಯದಿಂದ ಹೊರತಂದಿದ್ದರಿಂದ ಸರ್ಕಾರದಲ್ಲೂ ಮತ್ತು ಹೊರಗೂ ಕರ್ನಾಟಕಕ್ಕೆ ಒಳ್ಳೆಯಹೆಸರು ಬಂದಿದೆ. ಈ ಎಲ್ಲಾ ಅನುಕೂಲತೆಗಳ ಜತೆಗೆ ಅವರಿಗೆ ಅವರೆಲ್ಲರ ಗುರುಗಳ ಬಲವೂ ಇದೆಯೆಂದು ಅವರು ನಂಬಿದ್ದಾರೆ.

ಗುರುಬಲದಿಂದ ಡಾ॥ ಕಾಮತರ ಮೇಲೆ ಏನು ಪರಿಣಾಮವಾಗಿ ದೆಯೆನ್ನುವುದನ್ನು ನೋಡಿದ ಮೇಲೆ, ನನಗೆ ಶಿಷ್ಯನಿಂದ ಆದ ಲಾಭವನ್ನು ನೆನಮ ಮಾಡಿಕೊಳ್ಳುತ್ತೇನೆ. ಮಿಥಿಕ್ ಸೊಸೈಟಿಯಲ್ಲಿ ಆನೇಕ ರೀತಿಯಲ್ಲಿ ನನ್ನನ್ನು

ಗೌರವಿಸಿದ್ದಾರೆ. ೧೯೭೯ರಲ್ಲಿ ಶ್ರೀ ಆರ್.ಎಸ್. ಪಂಚಮುಖಿಯವರೊಡನೆ ಆ ವರ್ಷದಲ್ಲಿ ಅತ್ಯುತ್ತಮ ಇತಿಹಾಸಕಾರರೆಂದು ಸತ್ಕರಿಸಿದರು. ನಂತರ ಈ ಸೊಸೈಟಿಯವರು Fellowship ಪ್ರಧಾನ ಮಾಡುವ ಪದ್ಧತಿಯನ್ನು ಆರಂಭಿಸಿದ ಒಡನೆಯೆ, ನನ್ನನ್ನು Fellow ಎಂದು ಗೌರವಿಸಿದ್ದಾರೆ. ಕೆಲವು ದತ್ತಿ ಉಪನ್ಯಾಸಗಳನ್ನು ಕೊಡುವ ಅವಕಾಶವನ್ನು ಕೊಟ್ಟಿದ್ದಾರೆ. ಲೆಕ್ಕವಿಲ್ಲದಷ್ಟು ಸಭೆಗಳಿಗೆ ಅಧ್ಯಕ್ಷ ಸ್ಥಾನವನ್ನು ಕೊಟ್ಟಿದ್ದಾರೆ. ಇವುಗಳ ಜತೆಗೆ ಕರ್ನಾಟಕ ಇತಿಹಾಸ ಅಕಾಡೆಮಿಯಲ್ಲಿಯೂ ಗೌರವಸ್ಥಾನವನ್ನು ಕೊಟ್ಟಿದ್ದಾರೆ. ಹತ್ತು ವರ್ಷ ಅಧ್ಯಕ್ಷಸ್ಥಾನವನ್ನು, ಒಂದು ಸಲ ಸಮ್ಮೇಳನ ಅಧ್ಯಕ್ಷಸ್ಥಾನವನ್ನು, ಅದಾದ ಕೂಡಲೆ ಅಜೀವ ಗೌರವಾಧ್ಯಕ್ಷನನ್ನಾಗಿ ಮಾಡಿರುವುದು, ಇವೆಲ್ಲಾ ಶಿಷ್ಯ ಬಲದಿಂದ ಆಗಿವೆ. ಇವೆಲ್ಲಾ ಸಾರ್ವಜನಿಕ ಜೀವನದಲ್ಲಿ ನನಗೆ ಇವರಿಂದ ದೊರೆತ ಮನ್ನಣೆ. ನನ್ನ ವೈಯಕ್ತಿಕ ಜೀವನದಲ್ಲಿ ಈ ಶಿಷ್ಯನ ಬಲದಿಂದ ದೊರೆತ ಲಾಭ ಅಗಣ್ಯ. ಅದರಲ್ಲಿ ಒಂದು ಉದಾಹರಣೆಯನ್ನು ಕೊಡಬಯಸುತ್ತೇನೆ. ನನಗೆ ಒಬ್ಬ ಉನ್ನತ ಅಧಿಕಾರಿಯಿಂದ ಒಂದು ಕೆಲಸವಾಗಬೇಕಿತ್ತು. ಆ ಕೆಲಸವನ್ನು ಬೇರೆಯವರ ಮುಖಾಂತರ ಮಾಡಿಸಲು ಅದು ಎಷ್ಟು ಕಷ್ಟಪಟ್ಟೆನೊ ದೇವರೇ ಬಲ್ಲ. ಡಾ॥ ಕಾಮತರು ನನ್ನನ್ನು ನೇರವಾಗಿ ಆ ಅಧಿಕಾರಿಯ ಕಡೆಗೆ ಕರೆದುಕೊಂಡು ಹೋದರು, ಅವರಿಗೆ ನನ್ನ ವಾದವನ್ನು ಎಷ್ಟು ಸಮರ್ಪಕವಾಗಿ ಮಂಡಿಸಿದರೆಂದರೆ ಅದರ ಪರಿಣಾಮವಾಗಿ ಆ ಕೆಲಸ ಆಗಿಹೋಯಿತು. ಆಗ ನಾನು ಅಂದುಕೊಂಡೆ, ಡಾ॥ ಕಾಮತರು ವಕೀಲರಾಗಿದ್ದರೆ ಎಷ್ಟು ಚೆನ್ನಾಗಿತ್ತು ಎಂದು. ಆ ಅಧಿಕಾರಿ ಯಾರಿಗೂ ಸುಲಭವಾಗಿ ಕೆಲಸ ಮಾಡಿಕೊಡುವುದಿಲ್ಲವೆಂದು ಎಲ್ಲರಿಗೂ ಗೊತ್ತಿದ್ದ ವಿಷಯ. ಅಂಥವರಿಂದ ತಕ್ಷಣ ಕೆಲಸ ಮಾಡಿಸಿದ್ದು ಸರ್ಕಾರಿ ವಲಯದಲ್ಲಿ ಡಾ ॥ ಕಾಮತರಿಗೆ ಎಂತಹ ಹೆಸರಿತ್ತೆನ್ನುವುದಕ್ಕೆ ಒಳ್ಳೆಯ ಉದಾರಣೆ.

ಬೆಂಗಳೂರಿನಲ್ಲಿ ನಾನು ಇದ್ದ ೧೨ ವರ್ಷಗಳು ನನಗೇನಾದರು ಸಮಸ್ಯೆ ಬಂತೆಂದರೆ ಅಥವಾ ಸಹಾಯ ಬೇಕಾಗಿದ್ದರೆ ತಕ್ಷಣ ಡಾ ॥ ಕಾಮತರಿಗೆ ಫೋನ್ ಮಾಡುತ್ತಿದ್ದೆ. ಅವರು ಎಂದೂ ಬೇಸರ ಪಡದೆ ತಮ್ಮ ಕೈಲಾದ ಸಹಾಯವನ್ನು ಮಾಡುತ್ತಿದ್ದರು. ಆ ದಿನಗಳಲ್ಲಿ ನನ್ನ ಹತ್ತಿರ ನನ್ನ ಒಬ್ಬ ೩–೪ ವರ್ಷದ ಮೊಮ್ಮಗಳು, ಅಂದರೆ ಮಗಳ ಮಗಳು, ಇರುತ್ತಿದ್ದಳು. ನಂತರ ಅವಳು ಮುಂಬಯಿಯಲ್ಲಿದ್ದ ತನ್ನ ತಂದೆ– ತಾಯಿಯವರ ಹತ್ತಿರ ಇರಲು ಹೋದಳು. ಡಾ ॥ ಕಾಮತರು ಒಂದು ಸಲ ಮುಂಬಯಿಗೆ ಹೋದಾಗ ಅವರ ಮನೆಗೆ ಹೋದರು. ಹಾಲಿನಲ್ಲಿ ನನ್ನ ಅಳಿಯಂದಿರ ಜತೆಗೆ ಮಾತನಾಡುತ್ತ ಕುಳಿತರು. ಈ ಮೊಮ್ಮಗಳು ಒಳಗೆ ಹೋಗಿ ಯಾರು ಬಂದಾರೆನ್ನುವುದನ್ನು ಅಮ್ಮನಿಗೆ ಹೇಳಲು ಹೋದಳು. ಯಾರು?

ಎಂದು ಅವಳ ಅಮ್ಮ ಕೇಳಿದಾಗ. "ಅವರೇ ಅಮ್ಮ, ಬೆಂಗಳೂರಿನಲ್ಲಿ ಅಷ್ಟು ದಿನಾ ಬೆಳಗ್ಗೆ ಅವರಿಗೆ ಫೋನ್ ಮಾಡುತ್ತಿದ್ದರಲ್ಲ ಆ ಕಾಮತರು ಬಂದಿದ್ದಾರೆ" ಎಂದು ಹೇಳಿದಳು.

ಈಗ ನೀವೇ ಹೇಳಿ ಗುರುಬಲ ಹೆಚ್ಚೋ ಶಿಷ್ಯಬಲ ಹೆಚ್ಚೋ. ಇದಕ್ಕೆ ಉತ್ತರ ಇವೆರಡೂ ಅಲ್ಲ; ಭಾರತೀಯ ಸಂಸ್ಕೃತಿಯ ವೈಶಿಷ್ಟ್ಯವಾದ ಗುರುಶಿಷ್ಯ ಪರಂಪರೆಯೇ ಹೆಚ್ಚು. ಇದರ ಪ್ರಕಾರ ಶಿಷ್ಯನು "ಗುರುವಿನ ಗುಲಾಮನಾಗುವತನಕ ದೊರೆಯದಣ್ಣ ಮುಕುತಿ" ಎಂದಾದರೆ. 'ಶಿಷ್ಯಾದಿಚ್ಛೇತ್ ಪರಾಜಯಾತ್' – ಅಂದರೆ ಶಿಷ್ಯನು ಗುರುವನ್ನು ಸೋಲಿಸುವಷ್ಟು ಸಮರ್ಥನಾಗಬೇಕೆಂಬ ಇಚ್ಛೆ ಗುರುವಿನದಾಗಬೇಕು. ನಮ್ಮ ಪರಂಪರೆಯಲ್ಲಿ ಗುರು–ಶಿಷ್ಯರಲ್ಲಿ ಯಾರ ಬಲ ಹೆಚ್ಚು, ಯಾರ ಬಲ ಕಡಿಮೆಯೆನ್ನುವ ಪ್ರಶ್ನೆ ತಪ್ಪು; ಇಬ್ಬರೂ ಸೇರಿ ಮುಂದೆ ಹೋಗಬೇಕೆಂಬುದೇ ಇಬ್ಬರ ಗುರಿಯೂ ಆಗಬೇಕು.

ಕೊನೆಯಲ್ಲಿ ನಮ್ಮ ನಾಟಕಗಳಲ್ಲಿ ಬರುವ ಭರತವಾಕ್ಯದ ಮಾದರಿಯಲ್ಲಿ ಡಾ॥ ಕಾಮತರಿಗೆ ಶುಭವನ್ನು ಕೋರುತ್ತೇನೆ. ಅವರು ಇತಿಹಾಸವನ್ನು ಜನಪ್ರಿಯಗೊಳಿಸಿದ್ದಕ್ಕೆ ಅವರ ಹೆಸರು ಶಾಶ್ವತವಾಗಿ ಉಳಿಯುತ್ತದೆ. ಅವರು ಆರಂಭಿಸಿದ 'ಪರಂಪರೆ ಉಳಿಸಿ' ಕಾರ್ಯಕ್ರಮ ಕರ್ನಾಟಕದ ಮೂಲೆ ಮೂಲೆಗಳಲ್ಲಿಯೂ ಆಚರಿಸಲಾಗುತ್ತಿದೆ. ದೂರದರ್ಶನದಲ್ಲಿ ಬಿತ್ತರಗೊಂಡ "ಒಂದಿಷ್ಟು ಇತಿಹಾಸ" ಕಾರ್ಯಕ್ರಮ ಕರ್ನಾಟಕ ಇತಿಹಾಸವನ್ನು ಮತ್ತು ಇವರನ್ನು ಕರ್ನಾಟಕದಾದ್ಯಂತ ಎಷ್ಟು ಜನಪ್ರಿಯಗೊಳಿಸಿದೆ ಎನ್ನುವುದನ್ನು ಹೇಳಲಾಗುವುದಿಲ್ಲ. ಕರ್ನಾಟಕ ಇತಿಹಾಸ ಅಕಾಡೆಮಿಯ ಸಮ್ಮೇಳನಗಳು ಇತಿಹಾಸಪ್ರಜ್ಞೆಯನ್ನು ಜನಸಾಮಾನ್ಯರಲ್ಲಿ ಪ್ರಸಾರ ಮಾಡಿವೆ. ಸಂಶೋಧಕರಿಗೆ ಇವು ಒದಗಿಸುವ ಅವಕಾಶ ಅವರಿಗೆ ಇನ್ನೆಲ್ಲಿಯೂ ದೊರಕುವುದಿಲ್ಲ. ಅವರ ಪುಸ್ತಕಗಳು ಇತಿಹಾಸದ ವಿದ್ಯಾರ್ಥಿಗಳಿಗೆ ಇತ್ತೀಚಿನ ಸಂಶೋಧನೆಗಳನ್ನು ಒಳಗೊಂಡ ಒಳ್ಳೆಯ ಪಠ್ಯಪುಸ್ತಕಗಳಾಗಿವೆ. ಅವರ ಪ್ರವಾಸಗಳಿಂದ ಮತ್ತು ಭಾಷಣಗಳಿಂದ ಸಾಹಿತಿಗಳಿಗೆ ಇರುವ ಜನಪ್ರಿಯತೆಯನ್ನು ಇತಿಹಾಸಕಾರರಿಗೂ ಅವರು ದೊರಕಿಸಿಕೊಟ್ಟಿದ್ದಾರೆ. ಯಾವ ಇತಿಹಾಸಕಾರನೂ ಇಷ್ಟು ಕೆಲಸ ಮಾಡಿಲ್ಲ. ದೇವರು ಅವರಿಗೂ ಅವರ ಕುಟುಂಬದವರಿಗೂ ಆಯುರಾರೋಗ್ಯ ಐಶ್ವರ್ಯವನ್ನು ಕೊಡಲೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

■

11

ಹೆರಂಜೆ ಕೃಷ್ಣಭಟ್ಟರು

ಪ್ರೊ॥ ಹೆರಂಜೆ ಕೃಷ್ಣ ಭಟ್ಟರ ಜೊತೆಗಿನ ನನ್ನ ಸಂಪರ್ಕವನ್ನು ಅವರನ್ನು ಅಭಿನಂದಿಸುತ್ತಿರುವ ಈ ಸಂದರ್ಭದಲ್ಲಿ ಸ್ಮರಿಸಿಕೊಳ್ಳಲು ಬಯಸುತ್ತೇನೆ. ಅವರ ಜೊತೆಗಿನ ನನ್ನ ನೇರ ಸಂಪರ್ಕ ಎರಡು ಸಂದರ್ಭಗಳಲ್ಲಿ ಸೀಮಿತ. ಆದರೆ ಪತ್ರವ್ಯವಹಾರದ ಮೂಲಕ ನಮ್ಮ ಸಂಬಂಧ ಬೆಳೆದುಬಂದಿದೆ. ಆದರೆ ಈ ಎರಡು ಸಂದರ್ಭಗಳಿಂದಲೇ ನಾನು ಅವರ ಪ್ರಶಾಂತ ಆಕರ್ಷಕ ವ್ಯಕ್ತಿತ್ವಕ್ಕೆ ಮಾರುಹೋಗಿದ್ದೇನೆ.

ನನಗೆ ತಿಳಿದಂತೆ ಅವರು ಮಾಡಿರುವ ಮಹಾಕಾರ್ಯವೆಂದರೆ ಗೋವಿಂದ ಪೈ ಸಂಶೋಧನ ಲೇಖನಗಳ ಸಮಗ್ರ ಸಂಪುಟದ ಸಂಪಾದಕತ್ವ. ಪ್ರೊ॥ ಹೆರಂಜೆಯವರ ಅನನ್ಯ ಪರಿಶ್ರಮ ಹಾಗೂ ಶ್ರದ್ಧೆಯಿಲ್ಲದಿರುತ್ತಿದ್ದರೆ ಈ ಅವಿಸ್ಮರಣೀಯ ಗ್ರಂಥ ಬೆಳಕಿಗೆ ಬರುವುದು ಸಾಧ್ಯವಿರುತ್ತಿರಲಿಲ್ಲ. ಈ ಮಹಾಕಾರ್ಯವನ್ನು ಕೈಗೆತ್ತಿಕೊಳ್ಳಲು ಪ್ರೊ॥ ಕು.ಶಿ. ಹರಿದಾಸ ಭಟ್ಟರು ಅವರಿಗೆ ಪ್ರೇರಣೆ ನೀಡಿದರು ಎಂಬುದರಲ್ಲಿ ಎರಡು ಮಾತಿಲ್ಲ. ಇತರ ಸಂಶೋಧಕ ವಿದ್ವಾಂಸರು ಅವರಿಗೆ ಬೆಂಬಲವಾಗಿ ನಿಂತರು ಎಂಬುದೂ ನಿಜ. ಆದರೆ ಈ ಎಲ್ಲವನ್ನು ಕೇಂದ್ರವಲ್ಲಿಟ್ಟು ದುಡಿದವರು ಪ್ರೊ॥ ಹೆರಂಜೆಯವರು. ಗೋವಿಂದ ಪೈ ಅವರ ಸಾಧನೆಯ ಮೇಲೆ ಬೆಳಕುಚೆಲ್ಲಲು ಕರ್ನಾಟಕದ ವಿವಿಧ ಭಾಗಗಳಿಂದ ಬಂದಿದ್ದ ವಿದ್ವಾಂಸರ ಸಂತೋಷದ ನಡುವೆ ಉಡುಪಿಯಲ್ಲಿ ಸಡಗರ ಸಂಭ್ರಮದ ವಾತಾವರಣದಲ್ಲಿ ಈ ಮಹಾನ್ ಗ್ರಂಥ ಬಿಡುಗಡೆಯಾಯಿತು. ಡಾ॥ ಕೆ.ವಿ. ರಮೇಶ್ ಅವರ ಸಲಹೆ ಹಾಗೂ ಪ್ರೊ॥ ಕು.ಶಿ. ಹರಿದಾಸ ಭಟ್ಟರ ಸಮ್ಮತಿಯ ಮೇರೆಗೆ ಪ್ರೊ॥ ಹೆರಂಜೆ ಅವರು ಗೋವಿಂದ ಪೈ ಅವರ ಸಾಧನೆಯ ಬಗ್ಗೆ ಉಪನ್ಯಾಸ ನೀಡಲು ನನ್ನನ್ನು ಆಹ್ವಾನಿಸಿದ್ದರು. ಆ ಹೊತ್ತಿಗಾಗಲೆ ನನಗೆ ಎಂಬತ್ತನಾಲ್ಕು ವರ್ಷ (ಈಗ ತೊಂಬತ್ತನಾಲ್ಕು). ದೂರ ಪ್ರಯಾಣ ಮಾಡಬೇಕಾದ ಕಾರ್ಯಕ್ರಮಗಳನ್ನು ನಾನಾಗ ಒಪ್ಪಿಕೊಳ್ಳುವ ಸ್ಥಿತಿಯಲ್ಲಿರಲಿಲ್ಲ. ಭಟ್ಟರ ಆಹ್ವಾನ ಕೈ ಸೇರಿತು. ನನ್ನ ಜೊತೆ ನನ್ನ ಪತ್ನಿಯನ್ನು ಹಾಗೂ ನಮ್ಮನ್ನು ನೋಡಿಕೊಳ್ಳಲು ಸ್ನೇಹಿತ ದಂಪತಿಗಳನ್ನು ಹಾಗೂ

ವೈದ್ಯರನ್ನು ಕರೆತರಲು ಅನುಮತಿ ನೀಡಬೇಕೆಂದು ಕೇಳಿಕೊಂಡೆ. ಪ್ರೊ॥ ಹೆರಂಜೆಯವರು ನನ್ನೆಲ್ಲ ಕೋರಿಕೆಯನ್ನು ಒಪ್ಪಿಕೊಂಡರು. ಮಣಿಪಾಲದ ವ್ಯಾಲಿವ್ಯೂನಲ್ಲಿ ನಮಗೆ ತಂಗುವ ವ್ಯವಸ್ಥೆ ಮಾಡಿದ್ದರು. ನಮ್ಮ ವಾಸ್ತವ್ಯ ಸುಖಕರವಾಗುವುದಕ್ಕೆ ಬೇಕಾದ ಎಲ್ಲ ವ್ಯವಸ್ಥೆಯನ್ನೂ ಅವರು ಕಲ್ಪಿಸಿದರು.

ನಾನು ನೋಡಿದ ಅತ್ಯಂತ ಶ್ರೇಷ್ಠ ಮಟ್ಟದ ಸಾಹಿತ್ಯೋತ್ಸವವನ್ನು ಹಮ್ಮಿಕೊಳ್ಳುವಲ್ಲಿ ಪ್ರೊ॥ ಕು.ಶಿ. ಹರಿದಾಸ ಭಟ್ಟರು ಹಾಗೂ ಕೃಷ್ಣಭಟ್ಟರು ಹೇಗೆ ಒಂದು ತಂಡವಾಗಿ ದುಡಿದರು ಎಂಬುದು ನನಗೆ ಈ ಭೇಟಿಯ ಸಂದರ್ಭದಲ್ಲಿ ಪ್ರತ್ಯಕ್ಷವಾಗಿ ಮನವರಿಕೆಯಾಯಿತು. ಎರಡನೆಯ ಸಲ ಕೃಷ್ಣಭಟ್ಟರನ್ನು ಭೇಟಿಯಾಗುವ ಸಂದರ್ಭ ಒದಗಿದ್ದು ಹೀಗೆ: ತಮ್ಮ ಸಂಸ್ಥೆಯ ಸಹಯೋಗದಲ್ಲಿ ೨೦೦೧ರಲ್ಲಿ ಉಡುಪಿಯಲ್ಲಿ ಕರ್ನಾಟಕ ಇತಿಹಾಸ ಅಕಾಡೆಮಿಯ ವಾರ್ಷಿಕ ಸಮ್ಮೇಳನವನ್ನು ಹಮ್ಮಿಕೊಳ್ಳಲು ಅವರು ಕೇಳಿಕೊಂಡರು. ಈ ಎರಡನೆಯ ಭೇಟಿಯ ಸಂದರ್ಭದಲ್ಲಿ ಹೆರಂಜೆಯವರನ್ನು ನಾನು ಹೆಚ್ಚು ಆತ್ಮೀಯವಾಗಿ ತಿಳಿದುಕೊಳ್ಳಲು ಸಾಧ್ಯವಾಯಿತು. ಅವರು ಎಂ.ಜಿ.ಎಂ. ಕಾಲೇಜಿನಲ್ಲಿ ನನ್ನ ಉಪನ್ಯಾಸ ಏರ್ಪಡಿಸಿದರು. ತಮ್ಮ ನಯವಿನಯದಿಂದ ನನ್ನ ಮನ ಗೆದ್ದರು. ತಮ್ಮ ಭವ್ಯವಾದ ಸಂಸ್ಥೆಯ ವಿವಿಧ ಮುಖಗಳನ್ನು ನನಗೆ ಪರಿಚಯಿಸಿದರು.

ನನ್ನ ಜನ್ಮಸ್ಥಳವಾದ ಹರಿಹರದಲ್ಲಿ ನನ್ನ ಗೆಳೆಯರು ನನ್ನ ಹೆಸರಿನಲ್ಲಿ ಒಂದು ಸಂಶೋಧನ ಗ್ರಂಥಾಲಯವನ್ನು ಸ್ಥಾಪಿಸಲು ಬಯಸಿದ್ದಾರೆ. ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರಕ್ಕೆ ಭೇಟಿಕೊಟ್ಟು ಪ್ರೊ॥ ಹೆರಂಜೆ ಕೃಷ್ಣ ಭಟ್ಟರು ಮಾಡಿರುವ ಅಸಾಧಾರಣ ಕಾರ್ಯವನ್ನು ಕಂಡು ಅವರಿಂದ ಪ್ರೇರಣೆ ಪಡೆದು ಅವರ ಹಾದಿಯಲ್ಲಿ ನಡೆಯುವಂತೆ ನಾನು ನನ್ನ ಗೆಳೆಯರನ್ನು ಕೇಳಿಕೊಳ್ಳುತ್ತೇನೆ. ಕೃಷ್ಣಭಟ್ಟರು ಹಾಗೂ ಅವರ ಮನೆಯವರಿಗೆಲ್ಲ ನನ್ನ ಶುಭಕಾಮನೆಗಳು.

■

12

ಪ್ರೊ. ಬಿ. ರಾಮಸ್ವಾಮಿಯವರು

೨೧.೧೨.೧೯೮೫ರಲ್ಲಿ ಬೆಂಗಳೂರಿನ ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯಲ್ಲಿ ಪ್ರೊ॥ ಬಿ. ರಾಮಸ್ವಾಮಿಯರ ಮತ್ತು ನನ್ನ ಮೊದಲ ಭೇಟಿಯಾಯಿತು. ಆ ದಿನ ಅಲ್ಲಿ ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದವರು ದಿವಂಗತ ಎಸ್.ಶ್ರೀಕಂಠಯ್ಯ ದತ್ತಿ ಉಪನ್ಯಾಸವನ್ನು ನಾನು ಮಾಡಬೇಕೆಂದು ನಿಯೋಜಿಸಿದ್ದರು. ಈ ವ್ಯಾಖ್ಯಾನವನ್ನು ಕೇಳಲು ಎಸ್. ಶ್ರೀಕಂಠಯ್ಯನವರ ಮಗ ಶ್ರೀ ಎಸ್. ರಾಮಚಂದ್ರ ಮತ್ತು ಅವರ ಮಾವ ಪ್ರೊ॥ ಬಿ. ರಾಮಸ್ವಾಮಿಯವರು ಬಂದಿದ್ದರು. ಭಾಷಣ ಮುಗಿದ ಮೇಲೆ ಶ್ರೀ ರಾಮಚಂದ್ರ ಅವರು ತಮ್ಮ ಮಾವನವರನ್ನು ನನಗೆ ಪರಿಚಯಿಸುವ ಸಲುವಾಗಿ ನನ್ನ ಹತ್ತಿರ ಬಂದರು. ಶ್ರೀ ರಾಮಚಂದ್ರ ಅವರು ಮುಂದಿದ್ದರು. ಅವರ ಮಾವನವರು ಅವರ ಹಿಂದೆ ಇದ್ದರು. ಅದೇ ವೇಳೆಯಲ್ಲಿ ನನ್ನ ಇತರ ಸ್ನೇಹಿತರು ನನ್ನನ್ನು ಮಾತನಾಡಿಸಲು ಕುತೂಹಲರಾಗಿದ್ದರು. ಈ ಗದ್ದಲದಲ್ಲಿ ನಾನು ಪ್ರೊ॥ ರಾಮಸ್ವಾಮಿಯವರನ್ನು ಸರಿಯಾಗಿ ಮಾತನಾಡಿಸಲು ಆಗುತ್ತದೋ ಇಲ್ಲವೋ ಎನ್ನುವ ಅನುಮಾನ ಪ್ರೊ॥ ರಾಮಸ್ವಾಮಿಯವರಿಗೆ ಇದ್ದಹಾಗೆ ಕಂಡಿತು. ಆದರೂ ನಮ್ಮ ಮೊದಲ ಭೇಟಿ ಇಬ್ಬರಿಗೂ ಸಮಾಧಾನಕರವಾಗಿತ್ತು. ಅದಕ್ಕೆ ಮುಖ್ಯವಾದ ಕಾರಣ ಶ್ರೀ ರಾಮಚಂದ್ರ ಅವರು. ಇವರು ನಾನು ಬೆಂಗಳೂರಿನಲ್ಲಿ ವಾಸಿಸಲು ಆಗಸ್ಟ್ ೧೯೮೫ರಲ್ಲಿ ಬಂದಾಗಿನಿಂದ ನನಗೆ ಅನೇಕ ವಿಧದಲ್ಲಿ ಬೇಕಾದವರಾಗಿದ್ದರು. ಅವರ ತಂದೆ ಎಸ್. ಶ್ರೀಕಂಠಯ್ಯನವರು ಮಿಥಿಕ್ ಸೊಸೈಟಿಯನ್ನು ಅನೇಕ ವರ್ಷಗಳು ಚೆನ್ನಾಗಿ ನಡೆಸಿಕೊಂಡು ಬಂದಿದ್ದರಿಂದ "ಮಿಥಿಕ್ ಸೊಸೈಟಿ ಶ್ರೀಕಂಠಯ್ಯ" ಎಂದೇ ಪ್ರಸಿದ್ಧರಾಗಿದ್ದರು. ಅವರ ಜನ್ಮಶತಾಬ್ದಿ ಪ್ರಯುಕ್ತ ೧೮ ಮತ್ತು ೧೯ ಅಕ್ಟೋಬರ್ ೧೯೮೬ ಈ ಎರಡು ದಿನಗಳಲ್ಲಿ ವಿಜಯನಗರ ಇತಿಹಾಸ ಕುರಿತು ಗೋಷ್ಠಿಯನ್ನು ಬಿ.ಎಂ. ಶ್ರೀ ಸ್ಮಾರಕ ಪ್ರತಿಷ್ಠಾನವು ಹಮ್ಮಿಕೊಂಡಿತ್ತು. ಅದನ್ನು ನಡೆಯಿಸುವ ಜವಾಬ್ದಾರಿಯನ್ನು ಅದರ ಕಾರ್ಯದರ್ಶಿ ಪ್ರೊ॥ ಎಂ.ವಿ. ಸೀತಾರಾಮಯ್ಯನವರು ನನಗೆ ವಹಿಸಿದ್ದರು. ಈ ಗೋಷ್ಠಿಯನ್ನು ನಿರ್ವಹಿಸುವಲ್ಲಿ ಮತ್ತು ನಂತರ ಅದರಲ್ಲಿ ಮಂಡಿಸಿದ ಪ್ರಬಂಧಗಳ

ಪ್ರಕಟಣೆಯ ಕಾಲದಲ್ಲಿ ಶ್ರೀ ರಾಮಚಂದ್ರ ಅವರು ನನ್ನ ಬಲಗೈಯಾಗಿದ್ದರು. ಇವರು ಪರಿಚಯಿಸಿದ ಅವರ ಮಾವನವರ ಮತ್ತು ನನ್ನ ಸ್ನೇಹ ದಿನದಿಂದ ದಿನಕ್ಕೆ ನಿಕಟವಾಗುತ್ತ ನಡೆಯಿತು. ಹೀಗಾಗಲಿಕ್ಕೆ ಪ್ರೊ॥ ಎಂ.ವಿ. ಸೀತಾರಾಮಯ್ಯನವರೂ ಕಾರಣರಾದರು. ಅವರು ತನ್ನ ಜತೆಗೆ ಎಷ್ಟು ಆತ್ಮೀಯವಾಗಿ ನಡೆದುಕೊಳ್ಳುತ್ತಿದ್ದರೋ ಪ್ರೊ॥ ರಾಮಸ್ವಾಮಿಯವರ ಜೊತೆಗೂ ಹಾಗೇ ನಡೆದುಕೊಳ್ಳುತ್ತಿದ್ದರು.

ನಾವು ಮೂವರು ಒಂದೇ ಕಾಲದಲ್ಲಿ (೧೯೨೯-೩೩) ಮೈಸೂರಿನ ಮಹಾರಾಜಾ ಕಾಲೇಜಿನಲ್ಲಿ ಓದುತ್ತಿದ್ದೆವು. ಮೂವರಿಗೂ ಇಂಗ್ಲಿಷ್ ಸಾಮಾನ್ಯ ವಿಷಯವಾಗಿತ್ತು. ಅದನ್ನು ಬೋಧಿಸುತ್ತಿದ್ದ ಪ್ರೊಫೆಸರುಗಳಾದ ಜೆ.ಸಿ. ರೋಲೊ ಮತ್ತು ಎ.ಎನ್. ಮೂರ್ತಿರಾಯರು ಆದರ್ಶಶಿಕ್ಷಕರಾಗಿದ್ದರು. ನನ್ನ ವಿಷಯ ಇತಿಹಾಸ, ಅವರಿಬ್ಬರ ವಿಷಯ ಕನ್ನಡವಾಗಿತ್ತು. ಅವರಿಗೆ ದಕ್ಷಿಣ ಭಾರತದ ಸಂಸ್ಕೃತಿಯು ಪಠ್ಯದ ವಿಷಯವಾಗಿತ್ತು. ಇದನ್ನು ಅವರಿಗೆ ಕಲಿಸುತ್ತಿದ್ದವರು ಡಾ॥ ಎಂ.ಹೆಚ್. ಕೃಷ್ಣ ಅವರು. ಇವರು ನಮ್ಮ ಇತಿಹಾಸ ವಿಭಾಗದ ಮುಖ್ಯಸ್ಥರಾಗಿದ್ದರು. ಆಗ ಕಾಲೇಜಿನಲ್ಲಿ ನಡೆಯುತ್ತಿದ್ದ ಚರ್ಚಾಕೂಟಗಳು, ನಾಟಕಗಳು ಮತ್ತು ಇತರ ಪಠ್ಯೇತರ ಚಟುವಟಿಕೆಗಳ ಎಲ್ಲರನ್ನೂ ಆಕರ್ಷಿಸುತ್ತಿದ್ದವು. ಪ್ರೊ॥ ಎ.ಎನ್. ಮೂರ್ತಿರಾಯರ "ಆಷಾಢಭೂತಿ" ಎನ್ನುವ ನಾಟಕವನ್ನು ಮೊದಲ ಸಲ ಆಡಲಾಗಿತ್ತು. ನಟನಟಿಯರೆಲ್ಲರೂ ಸೊಗಸಾಗಿ ತಮ್ಮ ಪಾತ್ರಗಳನ್ನು ನಿರ್ವಹಿಸಿದ್ದರು. ಅದನ್ನು ನೋಡಿದವರು ಯಾರೂ ಅದನ್ನು ಮರೆಯುವ ಹಾಗಿರಲಿಲ್ಲ. ಪ್ರೊ॥ ಸೀತಾರಾಮಯ್ಯನವರು ಅದರಲ್ಲಿ ಒಂದು ಚಿಕ್ಕ ಸ್ತ್ರೀಪಾತ್ರವನ್ನು ಬಹಳ ಚೆನ್ನಾಗಿ ನಟಿಸಿದ್ದರು. ಅದರಿಂದ ಆಮೇಲೆ ಅನೇಕರ ಪರಿಚಯ ಅವರಿಗೆ ಆಯಿತು. ನನಗೂ ಆಯಿತು. ಪ್ರೊ॥ ರಾಮಸ್ವಾಮಿಯವರ ಪರಿಚಯ ನಮ್ಮ ಕಾಲೇಜು ದಿನಗಳಲ್ಲಿ ನನಗೆ ಆಗಿರಲಿಲ್ಲ. ಮುಂದೆ ಅನೇಕ ವರ್ಷಗಳ ನಂತರ ನಮ್ಮ ಪರಿಚಯವಾದಾಗ ನಮ್ಮ ಮಹಾರಾಜ ಕಾಲೇಜಿನ ದಿನಗಳನ್ನು ಮೆಲುಕುಹಾಕುವುದರಲ್ಲಿ ಇಬ್ಬರಿಗೂ ಆನಂದವಾಗುತ್ತಿತ್ತು. ಒಂದು ಸಲ ಶ್ರೀ ರಾಮಚಂದ್ರ ಅವರು ಅವರ ಮಾವನವರನ್ನು ನಮ್ಮ ಮನೆಗೆ ಕರೆತರುತ್ತಿದ್ದಾಗ ಮಾವನವರು ಅಳಿಯಂದಿರಿಗೆ ಈ ವಿಷಯ ಹೀಗೆ ಹೇಳಿದರು, "ನಮ್ಮ ಕಾಲೇಜಿನ ದಿನಗಳನ್ನು ನಾನೂ ದೀಕ್ಷಿತರೂ ನೆನಪುಮಾಡಿಕೊಳ್ಳುವಾಗ ನಾವು ಪುನಃ ಯುವಕರಾಗುತ್ತೇವೆ" ಎಂದು ಹೇಳಿದರಂತೆ; ಅದಕ್ಕೆ ಶ್ರೀರಾಮಚಂದ್ರ ಅವರು "ನೀವು ಮಾತನಾಡುವ ವಿಷಯ ನನಗೆ ಗೊತ್ತಿರುವುದಿಲ್ಲವಾದುದರಿಂದ ನೀವು ಯುವಕರಾದಾಗ ನಾನು ಮುದುಕನಾಗುತ್ತೇನೆ" ಎಂದರಂತೆ.

ಮೇಲೆ ಹೇಳಿದ ರೀತಿಯಲ್ಲಿ ನಮ್ಮ ಸ್ನೇಹ ಬೆಳೆಯುತ್ತಿರುವಾಗ, ೧೯೮೫ರಲ್ಲಿ ನಾನು ಪ್ರೊ॥ ರಾಮಸ್ವಾಮಿಯವರಿಗೆ "ನಾನು ವಿಜಯನಗರದ ಕೃಷ್ಣದೇವರಾಯನ ಮೇಲೆ ಪುಸ್ತಕವನ್ನು ಬರೆಯುತ್ತಿದ್ದೇನೆ. ನೀವು ನನ್ನ ಜೊತೆಗೆ ಸೇರಿದರೆ ಚೆನ್ನಾಗಿರುತ್ತದೆ" ಎಂದು ಹೇಳಿದೆ. ನಾನು ಅವರ ಸಹಾಯವನ್ನು ಕೇಳುವುದಕ್ಕೆ ಬಲವಾದ ಕಾರಣಗಳಿದ್ದವು. ಕೃಷ್ಣದೇವರಾಯನ ಕಾಲದ ಕನ್ನಡ, ತೆಲುಗು ಮತ್ತು ಸಂಸ್ಕೃತ ಸಾಹಿತ್ಯ ಅವರಿಗೆ ತಿಳಿದ ಹಾಗೆ ನನಗೆ ತಿಳಿಯುವುದು ಅಸಾಧ್ಯವಾಗಿತ್ತು. ಅವರು ಹೈದರಾಬಾದಿನ ಉಸ್ಮಾನಿಯಾ ವಿಶ್ವವಿದ್ಯಾಲಯದಲ್ಲಿ ಕನ್ನಡದ ಪ್ರಾಧ್ಯಾಪಕರಾಗಿ ನಿವೃತ್ತರಾಗಿದ್ದರು. ಹೈದರಾಬಾದಿನಲ್ಲಿದ್ದುದರಿಂದ ತೆಲುಗು ಸಾಹಿತ್ಯವನ್ನು ತಿಳಿದುಕೊಂಡಿದ್ದರು. ಅವರ ತಂದೆ ಶ್ರೀ ಬೇಟೆರಾಯ ದೀಕ್ಷಿತರು ಸಂಸ್ಕೃತದಲ್ಲಿ ಪ್ರಚಂಡ ಪಂಡಿತರಾಗಿದ್ದರು. ಅವರ ರಾಮಾಯಣ ಕುರಿತ ಪ್ರವಚನಗಳು ಉತ್ತರ ಕರ್ನಾಟಕದಲ್ಲಿಯೂ ಅವರ ಹೆಸರನ್ನು ಪ್ರಸಿದ್ಧಮಾಡಿದ್ದವು. ಅವರಿಂದ ಅವರ ಮಗ ಸಂಸ್ಕೃತದಲ್ಲಿ ಪಾಂಡಿತ್ಯವನ್ನು ಬಳುವಳಿಯಾಗಿ ಪಡೆದಿದ್ದರು. ಒಟ್ಟಿನಲ್ಲಿ ಕೃಷ್ಣದೇವರಾಯನ ಕಾಲದ ಸಾಹಿತ್ಯವನ್ನು ವಿಶ್ಲೇಷಿಸುವಲ್ಲಿ ಪ್ರೊ॥ ರಾಮಸ್ವಾಮಿಯವರ ಪರಿಣತಿ ಅಗಾಧವಾಗಿತ್ತು. ನಾವಿಬ್ಬರೂ ಸೇರಿ ಬರೆಯಬೇಕೆಂಬ ನನ್ನ ಸೂಚನೆಯನ್ನು ಅವರು ತಕ್ಷಣ ಒಪ್ಪಿಕೊಂಡರು. ಒಪ್ಪಿಕೊಂಡ ಕೂಡಲೆ ಕಾರ್ಯಪ್ರವೃತ್ತರಾದರು. ಮೊದಲು ಅವರು ಕೃಷ್ಣದೇವರಾಯನ ಸಂಸ್ಕೃತದ ಜಾಂಬವತೀ ಕಲ್ಯಾಣ ನಾಟಕದ ಅಭ್ಯಾಸವನ್ನು ಮಾಡಿದರು. ಈ ಅಭ್ಯಾಸ ಎಷ್ಟು ಆಳವಾಗಿತ್ತೆನ್ನುವುದನ್ನು ಈ ಸಂಸ್ಮರಣಗ್ರಂಥದಲ್ಲಿ ಸೇರ್ಪಡೆಯಾಗಿರುವ ಅವರ ೨-೩ ಲೇಖನಗಳಲ್ಲಿ ನೋಡಬಹುದು.

"ಜಾಂಬವತೀ ಕಲ್ಯಾಣ"ದ ತರುವಾಯ ಪ್ರೊ॥ ರಾಮಸ್ವಾಮಿಯವರು ಕೃಷ್ಣದೇವರಾಯ ಕುರಿತ ಮುಖ್ಯ ತೆಲುಗು ಆಧಾರವಾದ "ರಾಯವಾಚಕಮು" ಎನ್ನುವ ಗ್ರಂಥವನ್ನು ಅಭ್ಯಾಸ ಮಾಡತೊಡಗಿದರು. ಅದನ್ನು ಕನ್ನಡಕ್ಕೆ ಅನುವಾದಿಸಿದರು. ಈ ಅನುವಾದವು ಸ್ವತಂತ್ರ ಗ್ರಂಥವಾಗಿ ಪ್ರಕಟವಾಗಲು ಯೋಗ್ಯವಾಗಿದೆ. ಬಿ.ಎಂ.ಶ್ರೀ. ಪ್ರತಿಷ್ಠಾನದವರು "ಶ್ರೀ ಕೃಷ್ಣದೇವರಾಯನ ದಿನಚರಿ" ಎನ್ನುವ ಗ್ರಂಥವನ್ನು ಪ್ರಕಟಿಸಿದ್ದಾರೆ. ದಿನಚರಿ ಮತ್ತು ರಾಯವಾಚಕಮು ಇವರೆಡರಲ್ಲಿ ಅನೇಕ ಸಾಮ್ಯಗಳಿವೆ ಮತ್ತು ಕೆಲವು ವೈಷಮ್ಯಗಳಿವೆ. ಪ್ರೊ॥ ರಾಮಸ್ವಾಮಿಯವರ ಇವೆರಡು ಗ್ರಂಥಗಳ ತೌಲನಿಕ ಅಧ್ಯಯನ ಸಂಶೋಧಕರಿಗೆ ಒಂದು ಮಾದರಿಯಾಗಬಲ್ಲದು. ಈ ವಿಷಯದ ಮೇಲೆ ಅವರ ಒಂದು ಭಾಷಣವನ್ನು ಮಿಥಿಕ್ ಸೊಸೈಟಿಯಲ್ಲಿ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನದ ಅಧ್ಯಕ್ಷ ಪ್ರೊ॥ ಸೀತಾರಾಮಯ್ಯನವರು ೨೮-೨-೧೯೮೯ರಂದು ವಿವರಿಸಿದ್ದರು. ಈ ಎರಡು

ಗ್ರಂಥಗಳ ಬಗ್ಗೆ ಮತ್ತು ಅವುಗಳ ತೌಲನಿಕ ವಿವೇಚನವನ್ನು ಕುರಿತ ಹಾಗೆ ಎರಡು ಲೇಖನಗಳು ಈ ಸಂಸ್ಮರಣ ಗ್ರಂಥದಲ್ಲಿವೆ.

ಜೂನ್ ೧೯೮೮ರಲ್ಲಿ ಪ್ರೊ॥ ರಾಮಸ್ವಾಮಿಯವರ ಹಿರಿಯ ಮಕ್ಕಳು ಶ್ರೀ ಟಿ.ಆರ್. ಬೇಟೆರಾಯರ ಮಗಳ ಮದುವೆ ಬೆಂಗಳೂರಿನಲ್ಲಿ ನಡೆಯಿತು. ಈ ಮದುವೆಗೆ ಪ್ರೊ॥ ರಾಮಸ್ವಾಮಿಯವರು ಆಗ ಬೆಂಗಳೂರಿನಲ್ಲಿದ್ದ ತಮ್ಮ ಸಹಪಾಠಿಗಳನ್ನೆಲ್ಲಾ ಕರೆದಿದ್ದರು. ಅವರು ಯಾರು ಯಾರೆಂದರೆ ಪ್ರೊ॥ ಎಂ.ವಿ. ಸೀತಾರಾಮಯ್ಯನವರು, ಶ್ರೀ ಡಿ.ಎ. ಆಚಾರ್ಯರು, ಶ್ರೀ ಎಸ್. ನಾಗೇಶರಾಯರು ಮತ್ತು ನಾನು. ಈ ಸಹಪಾಠಿಗಳು ಅರ್ಧಶತಮಾನಕ್ಕೂ ಹೆಚ್ಚಿನ ವರ್ಷಗಳ ನಂತರ ಏಕತ್ರ ಸೇರಿದ್ದು ಒಂದು ಅಪರೂಪದ ಸಮಾಗಮವಾಗಿತ್ತು. ಸುದೈವದಿಂದ ನಾವು ಸೇರಿದಾಗ ಕೆಲವು ಛಾಯಾಚಿತ್ರಗಳನ್ನು ಸ್ನೇಹಿತರು ತೆಗೆದಿದ್ದಾರೆ. ಆ ಚಿತ್ರಗಳು ಈ ಸಮಾಗಮವನ್ನು ಶಾಶ್ವತಗೊಳಿಸಿವೆ. ಈ ಐವರಲ್ಲಿ ಪ್ರೊ॥ ರಾಮಸ್ವಾಮಿ ಮತ್ತು ಶ್ರೀ ಡಿ.ಎ. ಆಚಾರ್ಯರು ಬಹಳ ಕೇವಲ. ಪ್ರೊಫೆಸರರು ಬೆಂಗಳೂರಿಗೆ ಬಂದಾಗ ಶ್ರೀ ಆಚಾರ್ಯರು ಅವರನ್ನು ಚಿಕ್ಕಬಳ್ಳಾಪುರಕ್ಕೆ ಆಹ್ವಾನಿಸುತ್ತಿದ್ದರು. ಒಂದು ಸಲ ನನ್ನನ್ನೂ ಪ್ರೊಫೆಸರರು ಕರೆದುಕೊಂಡು ಹೋಗಿದ್ದರು. ಪ್ರೊ॥ ರಾಮಸ್ವಾಮಿಯವರಿಗೂ ಮತ್ತು ಶ್ರೀ ನಾಗೇಶರಾಯರಿಗೂ ಕಾಲೇಜು ದಿನಗಳಿಂದ ಸ್ನೇಹವಿತ್ತು. ನಾಗೇಶರಾಯರು ವಿಧಾನಸೌಧದಲ್ಲಿ ನೌಕರಿ ಮಾಡಿ ನಿವೃತ್ತರಾಗಿದ್ದರು. ತೀರ ಇತ್ತೀಚೆಗೆ ನಿಧನರಾದರು. ಗಮಕಿ ಎಂದು ಸುಪ್ರಸಿದ್ಧರಾಗಿದ್ದರು. ನಾನೂ ಅವರೂ ಮೈಸೂರಿನಲ್ಲಿ ಅಲ್ಲದೆ, ಶಿವಮೊಗ್ಗೆಯಲ್ಲಿಯೂ ಇಂಟರ್ ಮೀಡಿಯಟ್ ಕ್ಲಾಸಿನಲ್ಲಿ ಸಹಪಾಠಿಗಳಾಗಿದ್ದೆವು. ನಾನು ಮತ್ತು ಪ್ರೊ॥ ಸೀತಾರಾಮಯ್ಯನವರು ಪ್ರತಿಷ್ಠಾನದ ಕಾರ್ಯಕ್ರಮಗಳಿಂದ ಹೆಚ್ಚು ಆತ್ಮೀಯರಾದೆವು. ಅದಕ್ಕೂ ಮುಂಚೆ ಅವರು ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ವಿಶೇಷ ಉಪನ್ಯಾಸ ಮಾಡಲಿಕ್ಕೆ ಬಂದಾಗ ಒಂದು ವಾರ ನನ್ನ ಅತಿಥಿಯಾಗಿದ್ದರು. ೧೯೮೫ ರಲ್ಲಿ ನಾನು ಬೆಂಗಳೂರಿನಲ್ಲಿ ಕೆಲವು ವರ್ಷಗಳು ಇರಬೇಕಾಗಿ ಬಂದಾಗ ನಾವು ಭೇಟಿಯಾಗಲು ಅನೇಕ ಅವಕಾಶಗಳು ಒದಗಿಬಂದವು. ಈ ಐವರು ಸಹಪಾಠಿಗಳು ಒಬ್ಬರಿಗೊಬ್ಬರು ಆತ್ಮೀಯರಾಗಿದ್ದರೂ ಒಂದು ಕಡೆ ಸೇರಲಾಗಿರಲಿಲ್ಲ. ಪ್ರೊ॥ ರಾಮಸ್ವಾಮಿಯವರು ಈ ಅವಕಾಶವನ್ನು ಒದಗಿಸಿಕೊಟ್ಟರು.

ಪ್ರೊ॥ ರಾಮಸ್ವಾಮಿಯವರು ಮತ್ತು ನಾನು ಬೆಂಗಳೂರಿನಲ್ಲಿ ಕೆಲವು ಕಾರ್ಯಕ್ರಮಗಳಲ್ಲಿ ಒಟ್ಟಿಗೆ ವೇದಿಕೆ ಮೇಲೆ ಇದ್ದ ಸಂದರ್ಭಗಳು ಕೆಲವೇ ಆದರೂ ಅವುಗಳನ್ನು ನೆನಸಿಕೊಳ್ಳುವುದರಲ್ಲಿ ನನಗೆ ಆನಂದವಾಗುತ್ತದೆ. ಅವರು ಮಿಥಿಕ್ ಸೊಸೈಟಿಯಲ್ಲಿ ಮೇಲೆ ಹೇಳಿದಂತೆ ಮಾಡಿದ ಭಾಷಣ ಒಂದಕ್ಕೆ ನಾನು ಅಧ್ಯಕ್ಷನಾಗಿದ್ದೆ.

೧೨-೩-೧೯೯೧ರಲ್ಲಿ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನದವರು ಎಂ.ವಿ.ಸೀ. ಸಂಸ್ಮರಣೆ ಉಪನ್ಯಾಸಮಾಡಲು ಪ್ರೊ॥ ರಾಮಸ್ವಾಮಿಯವರನ್ನು ವಿನಂತಿಸಿದ್ದರು. ಈ ಸಭೆಗೆ ನಾನು ಅಧ್ಯಕ್ಷನಾಗಿದ್ದೆ. ಪ್ರೊ॥ ರಾಮಸ್ವಾಮಿಯವರಿಗೂ ಮತ್ತು ಅವರ ಆತ್ಮ ಮಿತ್ರ ಶ್ರೀ ಡಿ.ಎ. ಆಚಾರ್ಯರಿಗೂ ನನ್ನ ಜತೆಯಲ್ಲಿ ಹಂಪಿಯನ್ನು ನೋಡಬೇಕೆಂಬ ಆಸೆ ಇತ್ತು. ಎಷ್ಟೋ ಯೋಜನೆಗಳನ್ನು ಹಾಕಿಕೊಂಡವು. ಅವು ಯಾವುವೂ ಫಲಿಸಲಿಲ್ಲ. ಕೊನೆಗೆ ೧೯೯೬ರ ಫೆಬ್ರವರಿಯಲ್ಲಿ ಹಂಪಿಯಲ್ಲಿ ಒಂದು ವಿಚಾರಸಂಕಿರಣದ ವೇಳೆ ನಾನೂ ಪ್ರೊ॥ ರಾಮಸ್ವಾಮಿಯವರೂ ಅಲ್ಲಿ ಸೇರಿದೆವು. ನಾವು ಜತೆಗಿದ್ದ ಕಟ್ಟಕಡೆಯ ಕಾರ್ಯಕ್ರಮ ೨೪-೬-೧೯೯೬ರಲ್ಲಿ ಮಲ್ಲೇಶ್ವರದ ಗಾಂಧಿ ಸಾಹಿತ್ಯ ಸಂಘದಲ್ಲಿ ನಡೆಯಿತು. ಆ ದಿನ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನವು ಪ್ರಕಟಿಸಿದ ಮೂರು ಪುಸ್ತಕಗಳು ಬಿಡುಗಡೆಯಾದವು. ಪ್ರೊ॥ ರಾಮಸ್ವಾಮಿಯವರ, ಪ್ರತಿಷ್ಠಾನಕ್ಕಾಗಿ ಸಿದ್ಧಪಡಿಸಿಕೊಟ್ಟಿದ್ದ ಅವರ ತಂದೆ ಬೇಟೆರಾಯದೀಕ್ಷಿತರ "ದೇವರ ನಾಮುಗಳು ಮತ್ತು ಸಂಪ್ರದಾಯದ ಹಾಡುಗಳು" ಈ ಪುಸ್ತಕದ ಬಿಡುಗಡೆ ಮತ್ತು ಬೇಟೆರಾಯ ದೀಕ್ಷಿತ ಸ್ಮಾರಕದತ್ತಿನಿಧಿಯ ಉದ್ಘಾಟನೆಯನ್ನು ಪ್ರೊ॥ ಎಂ.ಪಿ.ಎಲ್. ಶಾಸ್ತ್ರಿಗಳು ಮಾಡಿದರು. ಶ್ರೀ ಎಸ್. ಶಿವಣ್ಣನವರು ಸಂಪಾದಿಸಿಕೊಟ್ಟಿದ್ದ ಪ್ರತಿಷ್ಠಾನದ ಪ್ರಕಟಣೆಯಾದ "ಪದ್ಮಿನಿ ಕಲ್ಯಾಣ"ವನ್ನು ಮತ್ತು ಎಂ.ವಿ.ಸೀ.ಯವರ ಕವಿರಾಜಮಾರ್ಗವನ್ನು ಕುರಿತ ಲೇಖನಗಳ ಸಂಪುಟ "ಕವಿರಾಜಮಾರ್ಗವಿವಕ್ಷೆ" ಯನ್ನು ನಾನು ಬಿಡುಗಡೆ ಮಾಡಿದೆ. ಕೊನೆಯದು ಎಂ.ವಿ.ಸೀ ಸಮಗ್ರ ಸಾಹಿತ್ಯಮಾಲೆಯ ಮೂರನೆ ಸಂಪುಟ. ಇದನ್ನು ಶ್ರೀ ಎಸ್.ಎಸ್. ರಾಮಸ್ವಾಮಿ ಅಯ್ಯರ್ ಮತ್ತು ಡಾ. ನಾ. ಗೀತಾಚಾರ್ಯರು ಸಂಕಲಿಸಿದ್ದರು. ಆ ಸಭೆಯಲ್ಲಿ ನಮ್ಮ ರಾಮಸ್ವಾಮಿಯವರೂ. ಈ ಕಾರ್ಯಕ್ರಮವಾದ ಐದು ತಿಂಗಳ ನಂತರ ನವೆಂಬರ್ ೧೯೯೬ರಲ್ಲಿ ನಾನು ನನ್ನ ಬೆಂಗಳೂರು ವಾಸವನ್ನು ಮುಗಿಸಿ ಪುನಃ ಧಾರವಾಡದಲ್ಲಿ ನೆಲೆಸಲು ಹಿಂತಿರುಗಿದೆ. ನಾನು ಬೆಂಗಳೂರನ್ನು ಬಿಟ್ಟ ಮೇಲೆ ಪ್ರೊ॥ ರಾಮಸ್ವಾಮಿ ಮತ್ತು ನನ್ನ ಭೇಟಿ ಅಪರೂಪವಾಯಿತು.

ಭೇಟಿ ಅಪರೂಪವಾದರೇನಾಯಿತು? ಪತ್ರವ್ಯವಹಾರ ಅವ್ಯಾಹತವಾಗಿ ನಡೆದಿತ್ತು. ಈ ಪತ್ರವ್ಯವಹಾರದಲ್ಲಿ ಯೋಗಕ್ಷೇಮಕ್ಕಿಂತ ಸಂಶೋಧನೆಯ ವಿಷಯಗಳೇ ಹೆಚ್ಚಾಗಿದ್ದವು. ನಾನು ಧಾರವಾಡಕ್ಕೆ ಹಿಂತಿರುಗಿದ ಒಂದು ಮುಖ್ಯ ಉದ್ದೇಶ, ನನಗೆ ದೊರಕಿದ್ದ ಸೋಮದೇವ ಸೂರಿಯ "ನೀತಿವಾಕ್ಯಮೃತ"ದ ಅಪ್ರಕಟಿತ ಕನ್ನಡ ಟೀಕೆಯನ್ನು ಪ್ರಕಟಿಸುವ ಸಲುವಾಗಿ. ಈ ಕೆಲಸಕ್ಕೆ ನನಗೆ ಬೆಂಗಳೂರಿಗಿಂತ ಧಾರವಾಡವೇ ಹೆಚ್ಚು ಯೋಗ್ಯವೆನಿಸಿತು. ನನಗೂ ಪ್ರೊ॥ ರಾಮಸ್ವಾಮಿಯವರಿಗೂ ನಮ್ಮ ಜೀವನದ ಪರಿಸ್ಥಿತಿಯಲ್ಲಿ ಕೆಲವು ಸಾಮ್ಯಗಳಿದ್ದವು.

ಅವರ ವೃತ್ತಿಜೀವನ ಹೈದರಾಬಾದಿನಲ್ಲಿ ಆದರೆ, ನನ್ನದು ಧಾರವಾಡದಲ್ಲಿ ಆಯಿತು. ನಾವಿಬ್ಬರೂ ನಮ್ಮ ವೃತ್ತಿ ಜೀವನ ನಡೆದ ಊರಿನಲ್ಲಿ ಮನೆಯನ್ನು ಕಟ್ಟಿಕೊಂಡು ನಿವೃತ್ತಿಜೀವನಕ್ಕೂ ಕೆಲವು ಸೌಲಭ್ಯಗಳನ್ನು ಒದಗಿಸಿಕೊಂಡಿದ್ದೆವು. ಅಲ್ಲಿಯೆ ನಮ್ಮ ಸಂಶೋಧನೆಯ ಕೆಲಸ ಅಚ್ಚುಕಟ್ಟಾಗಿ ನಡೆಯುತ್ತಿತ್ತು. ಆದರೆ ಇಬ್ಬರ ನೆಂಟರೂ ಬೆಂಗಳೂರಿನಲ್ಲಿದ್ದಾರೆ. ಇಬ್ಬರಿಗೂ ಅಲ್ಲಿ ಮನೆಯಿದೆ. ಆದ್ದರಿಂದ ಪ್ರೊ॥ ರಾಮಸ್ವಾಮಿಯವರು ಮೇಲಿಂದ ಮೇಲೆ ಅಲ್ಲಿ ಬರುತ್ತಿದ್ದರು. ನಾನು ಅಲ್ಲಿ ನನ್ನ ಮಗಳ ಮನೆಯಲ್ಲಿ ೧೧ ವರ್ಷಗಳಿರಬೇಕಾಗಿ ಬಂತು. ಆದರೆ ಅಲ್ಲಿ ಸಂಶೋಧನೆ ಅವರಿಗಾಗಲಿ ನನಗಾಗಲಿ ಸಾಧ್ಯವಿಲ್ಲವೆಂದು ಅಂದುಕೊಳ್ಳುತ್ತಿದ್ದೆವು.

ನಾವು ಬೆಂಗಳೂರನ್ನು ಬಿಡುವ ಮುಂಚೆ ನನ್ನ, ಪೊ॥ ರಾಮಸ್ವಾಮಿಯವರ ಮತ್ತು ಡಾ॥ ಶ್ರೀಮತಿ ಭಾರ್ಗವಿ ಶಿವಯ್ಯನವರ 'ಕೃಷ್ಣದೇವರಾಯ – ಜೀವನ ಸಾಧನೆಗಳು' ಎನ್ನುವ ಕೃತಿ ಪ್ರಕಟಣೆಗೆ ಸಿದ್ಧವಾಗಿತ್ತು. ಒಂದು ಪುಸ್ತಕದ ಪ್ರಕಟಣೆ, ಅದರ ಬರವಣಿಗೆಯಷ್ಟೆ ಕಷ್ಟವೆನ್ನುವುದನ್ನು ಎಲ್ಲಾ ಲೇಖಕರು ಅರಿತಿದ್ದಾರೆ. ನಮ್ಮ ಸುದೈವಕ್ಕೆ ಈ ಪುಸ್ತಕದ ಪ್ರಕಟಣೆಗೆ ಮುಂದೆ ಬಂದವರು ಕರ್ನಾಟಕ ಸರ್ಕಾರದ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯದ ನಿರ್ದೇಶಕರು ಡಾ॥ ಡಿ.ವಿ. ದೇವರಾಜ್ ಅವರು. ನಮ್ಮ ಮನೆಗೆ ಅವರು ಒಂದು ಸಲ ಬಂದಾಗ, ಈ ಹಸ್ತಪ್ರತಿ ಪ್ರಕಟಣೆಗೆ ಸಿದ್ಧವಾಗಿದೆಯೆಂದು ಹೇಳಿದ ಕೂಡಲೆ "ಅದನ್ನು ಕೊಡಿ" ಎಂದು ತೆಗೆದುಕೊಂಡು ಹೋಗಿ ತಮ್ಮ ಖಾತೆಯಿಂದ ಅದನ್ನು ಪ್ರಕಟಿಸುವ ವ್ಯವಸ್ಥೆಯನ್ನು ಮಾಡಿದರು. ಪುಸ್ತಕವು ಮುದ್ರಣಾಲಯದಿಂದ ಹೊರಬರುವ ಹೊತ್ತಿಗೆ (ಸೆಪ್ಟೆಂಬರ್ ೧೯೯೭) ಸ್ವಲ್ಪ ಮುಂಚೆ ಅವರು ನಿವೃತ್ತರಾಗಿದ್ದರು. ಅವರ ಆಯಾಚಿತ ಸಹಾಯವನ್ನು ಗ್ರಂಥಕರ್ತರು ಎಂದೂ ಮರೆಯುವ ಹಾಗಿಲ್ಲ.

ನಾನು ಧಾರವಾಡಕ್ಕೆ ಹಿಂತಿರುಗಿದ ಕೂಡಲೆ ಮೇಲೆ ಹೇಳಿದ "ನೀತಿ ವಾಕ್ಯಾಮೃತ"ದ ಅಪ್ರಕಟಿತ ಕನ್ನಡ ಟೀಕೆಯ ಸಂಪಾದನೆಗೆ ನನ್ನ ಆತ್ಮೀಯ ಸ್ನೇಹಿತರಾದ ಪ್ರೊ॥ ಶ್ರೀನಿವಾಸ ರಿತ್ತಿ ಮತ್ತು ಪ್ರೊ॥ ರಾಮಸ್ವಾಮಿಯವರ ಸಹಕಾರವನ್ನು ಕೋರಿದೆ. ಇಬ್ಬರೂ ಆನಂದದಿಂದ ಒಪ್ಪಿಕೊಂಡರು. ಹಸ್ತಪ್ರತಿಯ ಒಂದು ಪ್ರತಿಯನ್ನು ಪ್ರೊ॥ ರಾಮಸ್ವಾಮಿಯವರಿಗೆ ಕಳಿಸಿದೆ. ಅವರಿಗೆ ಅವರ ಗುರು ಪ್ರೊ॥ ಡಿ.ಎಲ್. ನರಸಿಂಹಾಚಾರ್ಯರಿಂದ ಗ್ರಂಥಸಂಪಾದನಕಲೆ ಕರಗತವಾಗಿತ್ತು. ಅವರು ನೀತಿವಾಕ್ಯಾಮೃತದ ಬೇರೆ ಬೇರೆ ಆವೃತ್ತಿಗಳನ್ನು ದೊರಕಿಸಲು ಶ್ರಮಿಸಿದರು. ಅವರಿಗೆ ಎರಡು ಆವೃತ್ತಿಗಳು ದೊರಕಿದವು. ನಮಗೆ ಒಂದು ಆವೃತ್ತಿ ಸಿಕ್ಕಿತು. ಇಬ್ಬರ ಹತ್ತಿರವೂ ಮೈಸೂರಿನ ಆವೃತ್ತಿ ಇತ್ತು. ಪತ್ರವ್ಯವಹಾರ ಮುಖಾಂತರ ಪರಸ್ಪರರ ಸಂದೇಹಗಳನ್ನು ನಿವಾರಿಸಿಕೊಳ್ಳುತ್ತಿದ್ದೆವು. ಒಂದೇ ಒಂದು ಸಲ

೧೯೯೯ರ ಫೆಬ್ರವರಿಯಲ್ಲಿ ಧಾರವಾಡದಲ್ಲಿ ಮೂವರು ಸಂಪಾದಕರೂ ಸೇರಲು ಸಾಧ್ಯವಾಯಿತು. ಈ ಸಮಾಗಮವು ಅಪರೂಪದ್ದಾಗಿತ್ತು. ಸಂಪಾದನೆಗೆ ಕೊನೆಯ ರೂಪವನ್ನು ಈ ಸಮಾಗಮದಲ್ಲಿ ಕೊಟ್ಟೆವು. ಮೂರು ವರ್ಷಗಳಲ್ಲಿ (೧೯೯೭–೧೯೯೯) ಈ ಕೆಲಸವನ್ನು ಮುಗಿಸಿದೆವು. ಈ ಹಂತಕ್ಕೆ ಬರುವ ಮುಂಚೆ ಇಂತಹ ಗ್ರಂಥವನ್ನು ಯಾರು ಪ್ರಕಟಿಸಬಹುದೆಂದು ನಮ್ಮೆಲ್ಲರಿಗೂ ಆತ್ಮೀಯರಾದ ಡಾ॥ ಚಿದಾನಂದ ಮೂರ್ತಿಯವರನ್ನು ವಿಚಾರಿಸಿದೆವು. ಅದೇ ಇನ್ನೂ ಹಂಪಿ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾಗಿದ್ದ ಡಾ॥ ಎಂ.ಎಂ. ಕಲಬುರ್ಗಿಯವರಿಗೆ ಡಾ॥ ಚಿದಾನಂದಮೂರ್ತಿಯವರು ನಮ್ಮ ಹಸ್ತಪ್ರತಿ ಪ್ರಕಟಣೆಗೆ ಸಿದ್ಧವಾಗಿರುವುದನ್ನು ತಿಳಿಸಿದರು. ಡಾ॥ ಕಲಬುರ್ಗಿಯವರು ತಮ್ಮ ವಿಶ್ವವಿದ್ಯಾಲಯದಿಂದ ಈ ಗ್ರಂಥವನ್ನು ಪ್ರಕಟಿಸುತ್ತೇನೆಂದು ಒಪ್ಪಿಕೊಂಡರು. ೧೯೯೯ರ ಕೊನೆಯ ಹೊತ್ತಿಗೆ ಹಸ್ತಪ್ರತಿಯ ಮುದ್ರಣ ಆರಂಭವಾಯಿತು. ಮುದ್ರಣಾಲಯದಿಂದ ಈ ಪುಸ್ತಕ ಹೊರಬಂದದ್ದು ೨೦೦೦ ಇಸ್ವಿಯ ಕೊನೆಗೆ. ಒಂದು ಪ್ರತಿಯನ್ನು ಪ್ರೊ॥ ರಾಮಸ್ವಾಮಿಯವರಿಗೆ ೨೦೦೧ರ ಆರಂಭದಲ್ಲಿ ಕಳಿಸಿದೆವು. ಪುಸ್ತಕವನ್ನು ನೋಡಿದರು. ಮುದ್ರಣ ಇನ್ನೂ ಚೆನ್ನಾಗಿ ಆಗಬೇಕಿತ್ತೆಂದರು. ಡಾ॥ ಚಿದಾನಂದಮೂರ್ತಿಯವರು ಪುಸ್ತಕವನ್ನು ಮೆಚ್ಚಿಕೊಂಡು ಬರೆದ ಪತ್ರವನ್ನು ನೋಡಿ ಸ್ವಲ್ಪ ಸಮಾಧಾನಪಟ್ಟರು. ಅವರ ಅಸಮಾಧಾನಕ್ಕೆ ಕಾರಣ ಮುದ್ರಣದೋಷಗಳು. ಯಾರಿಗೂ ಸುಲಭವಾಗಿ ಕಾಣದ ದೋಷಗಳನ್ನು ಪಟ್ಟಿಮಾಡಿದರು. ಈ ಪಟ್ಟಿಯನ್ನು ನಮಗೆ ಕಳಿಸಿದ್ದಾರೆ. ಎರಡನೇ ಆವೃತ್ತಿಯಲ್ಲಿ ಅವರ ಪಟ್ಟಿಯಲ್ಲಿ ಕಾಣಿಸಿರುವ ದೋಷಗಳನ್ನು ತೆಗೆದು ಹಾಕಿದರೆ ನಮ್ಮ ಕೆಲಸ ಪರಿಪೂರ್ಣವಾಗುತ್ತದೆ. ಎಲ್ಲದರಲ್ಲಿಯೂ ಪರಿಪೂರ್ಣತೆಗೆ ಶ್ರಮಿಸುತ್ತಿದ್ದ ಪ್ರೊ॥ ರಾಮಸ್ವಾಮಿಯವರು ಅಂತಹ ಗ್ರಂಥ ಸಿದ್ಧವಾಗುವುದಕ್ಕೆ ತಮ್ಮ ಭಾಗದ ಕೆಲಸವನ್ನು ಮುಗಿಸಿದ್ದಾರೆ. ಮುದ್ರಣದೋಷಗಳ ಪಟ್ಟಿಯನ್ನು ಸಿದ್ಧಪಡಿಸಿದ ಮೇಲೆ ಅವರು ಬಹಳ ದಿನಗಳಿರಲಿಲ್ಲ. ೧೪.೦೨.೨೦೦೧ ಅವರು ಇದ್ದಾಗ ಯಾರಿಗೂ ಯಾವ ತೊಂದರೆಯನ್ನೂ ಹೇಗೆ ಕೊಡಲಿಲ್ಲವೋ ಇಲ್ಲಿಂದ ಹೋಗುವಾಗಲೂ ಹಾಗೆಯೆ ಯಾರಿಗೂ ತೊಂದರೆ ಕೊಡದೆ ತಮ್ಮ ಇಹಲೋಕಯಾತ್ರೆಯನ್ನು ಮುಗಿಸಿದರು.

ನೀತಿವಾಕ್ಯಾಮೃತದ ಹಸ್ತಪ್ರತಿಯನ್ನು ಮುದ್ರಣಕ್ಕಾಗಿ ಸಿದ್ಧಪಡಿಸುವ ಕಾರ್ಯ ಮುಗಿಯುತ್ತ ಬಂದಹಾಗೆ, ನಾನು ಪ್ರೊ॥ ರಾಮಸ್ವಾಮಿಯವರಿಗೆ ಬಸವಣ್ಣ – ಬಿಜ್ಜಳರ ಸಂಬಂಧ ಕುರಿತು ಸಂಶೋಧನೆ ಮಾಡೋಣವೆನ್ನುವ ಸೂಚನೆಯನ್ನು ತಿಳಿಸಿದ್ದೆ. ಅವರು ನನ್ನ ಸೂಚನೆಯನ್ನು ತಕ್ಷಣ ಒಪ್ಪಿ ಸಿದ್ಧರಾಮ ಚರಿತೆ, ಪಂಡಿತಾರಾಧ್ಯ ಚರಿತೆ, ಬಸವಪುರಾಣ, ಬಸವಣ್ಣನವರ ವಚನಗಳು – ಇತ್ಯಾದಿಗಳ ಅಧ್ಯಯನವನ್ನು ಆರಂಭಿಸಿದರು. (ಇವುಗಳ ಅಭ್ಯಾಸದಿಂದ ಅವರು ಸಿದ್ಧಪಡಿಸಿದ

ಲೇಖನಗಳನ್ನು ನನಗೆ ಕಳಿಸಿಕೊಟ್ಟಿದ್ದಾರೆ, ಆ ಲೇಖನಗಳು ಈ ಸಂಸ್ಮರಣಗ್ರಂಥದಲ್ಲಿವೆ) ಅವರ ಅಕಾಲಮರಣದಿಂದ ನಾವಿಬ್ಬರೂ ಸೇರಿ ಮಾಡಬೇಕೆಂಬ ಈ ಯೋಜನೆ ಅರ್ಧಕ್ಕೆ ನಿಂತುಹೋಗಿದೆ. ನಾವಿಬ್ಬರೂ ಸೇರಿ ಕೆಲಸ ಮಾಡುವಾಗ ನಮ್ಮಿಬ್ಬರಲ್ಲಿಯೂ ಒಂದು ತರಹ ಆರೋಗ್ಯಕರವಾದ ಸ್ಪರ್ಧೆ ಇತ್ತು. ಹೊಸದನ್ನು ಕಂಡುಹಿಡಿಯಬೇಕೆಂಬ ಕುತೂಹಲವಿತ್ತು. ಇದರಿಂದ ಇಬ್ಬರಿಗೂ ಒಬ್ಬರೇ ಸಾಧಿಸುವುದಕ್ಕಿಂತ ಹೆಚ್ಚು ಸಾಧಿಸಲು ಶಕ್ಯವಾಯಿತೆಂದು ತಿಳಿದಿದ್ದೇನೆ. ಪ್ರೊ॥ ರಿತ್ತಿಯವರ ಅನುಭವವೂ ಅದೇ ಎಂದು ತಿಳಿದಿದ್ದೇನೆ. ನಾನೂ ಪ್ರೊ॥ ರಾಮಸ್ವಾಮಿಯವರೂ ೧೫ ವರ್ಷಗಳ ಕಾಲ (೧೯೮೫-೨೦೦೧) ಅನೇಕ ಸಲ ಭೇಟಿಯಾಗಿದ್ದೆವು ಮತ್ತು ಪತ್ರವ್ಯವಹಾರ ಮಾಡಿದ್ದೇವೆ. ಈ ಅವಧಿಯಲ್ಲಿ ಅವರು ಯಾರ ಬಗೆಗೂ ಚಕಾರ ಮಾತನಾಡಿದವರಲ್ಲ. ಎಲ್ಲರಿಗೂ ಆಗುವ ಹಾಗೆ ಅವರಿಗೂ ಕೆಲವರಿಂದ ಅನ್ಯಾಯವಾಗಿರಲೇಬೇಕು.ಅವರ ವಿರುದ್ಧ ಇವರು ತಕರಾರು ಮಾಡುತ್ತಿರಲಿಲ್ಲ. ತಮ್ಮ ಪಾಲಿಗೆ ಬಂದದ್ದು ಪಂಚಾಮೃತವೆನ್ನುವವರು. ಈ ಧೋರಣೆಯನ್ನು ಅವರು ಅನುಸರಿಸದಿದ್ದರೆ ಅವರು ಎಂದೋ ಸಿನಿಕರಾಗಿ ಏನೂ ಸಾಧಿಸಲಿಕ್ಕೆ ಆಗುತ್ತಿರಲಿಲ್ಲ. ಅಂತಹ ಸ್ಥಿತಿಯಲ್ಲಿ ಪ್ರೊ॥ ರಾಮಸ್ವಾಮಿಯವರು ಅಧ್ಯಯನ ಸಂಶೋಧನೆಗಳನ್ನು ಕೈಕೊಂಡರು. ವೇದಗಳು, ಅರವಿಂದ ಸಾಹಿತ್ಯ, ಭಾರತೀಯ ಸಂಸ್ಕೃತಿ ಮತ್ತು ಕನ್ನಡ ಸಾಹಿತ್ಯ ಇವುಗಳ ಅಧ್ಯಯನಕ್ಕಾಗಿ ಪುಸ್ತಕಗಳನ್ನು, ನಿಯತಕಾಲಿಕಗಳನ್ನು ಕೊಳ್ಳುತ್ತಿದ್ದರು. ಇವುಗಳ ಅಭ್ಯಾಸದಲ್ಲಿ ತಮಗೆ ಏನು ಹೊಸದು ಕಾಣುತ್ತದೊ ಅದನ್ನು ಗುರುತುಹಾಕಿಕೊಳ್ಳುತ್ತಿದ್ದರು. ಇಂತಹ ಸಂಶೋಧನೆಯಲ್ಲಿ ನಿರತರಾಗಿ ಸಮಾಧಾನದಿಂದ ಇದ್ದರು. ಅವರಿಗೆ ತಮ್ಮ ಜೀವನ ವ್ಯರ್ಥವಾಗಿದೆ ಎಂದೆನ್ನಿಸುತ್ತಿರಲಿಲ್ಲ. ಇಂತಹ ಸಮಯದಲ್ಲಿ ೧೯೮೫ರಲ್ಲಿ ನನ್ನ ಅವರ ಭೇಟಿಯಾಯಿತು. ಆಗ ನಾನು ಅವರಿಗೆ ಸಂಶೋಧನೆ ಕುರಿತ ನನ್ನ ಧೋರಣೆಯನ್ನು ಹೇಳಿದೆ. ಅದೇನೆಂದರೆ ಯಾರಾದರೂ ನನ್ನನ್ನು ಭಾಷಣಕ್ಕೆ ಕರೆದರೆ ಅಥವಾ ಯಾರಾದರೂ ನನ್ನನ್ನು ಲೇಖನ ಬರೆದುಕೊಡಿ ಎಂದು ಕೇಳಿದರೆ ಅಥವಾ ಒಂದು ಗ್ರಂಥವನ್ನು ಪ್ರಕಟಿಸುವ ಸಾಧ್ಯತೆ ಕಂಡುಬಂದರೆ ನಾನು ಆ ವಿಷಯ ಕುರಿತ ಸಂಶೋಧನೆ ಮಾಡುತ್ತೇನೆ. ಪ್ರಕಟಣೆ ಸಾಧ್ಯವಿಲ್ಲದ ಸಂಶೋಧನೆಯನ್ನು ಸಾಧಾರಣವಾಗಿ ಕೈಕೊಳ್ಳುವುದಿಲ್ಲವೆಂದು ಹೇಳಿದೆ. ಅವರಿಗೆ ಏನು ಅನಿಸಿತೋ ಏನೊ, ಅವರು ನನ್ನ ಜೊತೆಗೆ ಸೇರಿ ಸಂಶೋಧನೆಮಾಡಲು ಒಪ್ಪಿಕೊಂಡರು. ಆ ಸಂಶೋಧನೆಗಳೆಲ್ಲಾ ಈ ಗ್ರಂಥದಲ್ಲಿ ಬೇರೆ ಕಡೆ ಮುದ್ರಣವಾಗಿವೆ. ನಾನು ಅವರನ್ನು ನನ್ನ ಜೊತೆಗೆ ಸಂಶೋಧನೆಗೆ ಆಹ್ವಾನಿಸಿದ್ದರಿಂದ ಆಗಿರುವುದು

ಒಳ್ಳೆಯದೊ ಕೆಟ್ಟದೊ – ಅವರ ದೃಷ್ಟಿಯಿಂದ ಮತ್ತು ಸಂಶೋಧನೆಯ ದೃಷ್ಟಿಯಿಂದ – ನನಗೆ ಗೊತ್ತಿಲ್ಲ.

ನನ್ನ ಪ್ರಭಾವ ಅವರ ಮೇಲೆ ಏನಾಗಿದೆಯೆಂದು ನಾನು ಹೇಳಲಾರೆನಾದರೂ ಅವರ ಪ್ರಭಾವ ನನ್ನ ಮೇಲೆ ಏನಾಗಿದೆ ಎನ್ನುವುದನ್ನು ಸ್ವಲ್ಪಮಟ್ಟಿಗೆ ಹೇಳಬಲ್ಲೆ. ಗ್ರಂಥ ಸಂಪಾದನೆಯ ಕಲೆ ನನಗೆ ಗೊತ್ತಿರಲಿಲ್ಲ. ನಾನು ಮತ್ತು ಪ್ರೊ॥ ರಿತ್ತಿಯವರು ಅವರಿಂದ ನಾವು ಇದನ್ನು ತಿಳಿದುಕೊಂಡೆವು. ಸಂಶೋಧನೆಯಲ್ಲಿ ಅವರ ಶಿಸ್ತನ್ನು ನೋಡಿ ನಾವು ಬೆರಗಾದೆವು. ನನ್ನ ಸಂಶೋಧನೆಯಲ್ಲಿ ಹೆಚ್ಚು ಖಚಿತ ಬಂದಿದ್ದರೆ ಅದು ಅವರ ಸಹಕಾರದ ಪರಿಣಾಮವೆಂದು ಹೇಳಬಹುದು. ಇವೆಲ್ಲಕ್ಕಿಂತ ಹೆಚ್ಚಾಗಿ ಸರ್ವಜ್ಞನ ನುಡಿ "ಸಜ್ಜನರ ಸಹವಾಸ ಹೆಜ್ಜೇನು ಮೆದ್ದಂತೆ" ಎನ್ನುವುದರ ಸಾರ್ಥಕತೆಯನ್ನು ಅವರ ನಿರ್ವ್ಯಾಜಸ್ನೇಹದಲ್ಲಿ ಅನುಭವಿಸಿದ್ದೇನೆ.

ಪ್ರೊ ॥ ರಾಮಸ್ವಾಮಿಗಳ ಜೀವನದ ಸಾರ್ಥಕತೆಯಲ್ಲಿ ಅವರ ಧರ್ಮಪತ್ನಿ ಶ್ರೀಮತಿ ಸಾವಿತ್ರಮ್ಮನವರ ಪಾತ್ರವನ್ನು ದೂರದಿಂದ ನೋಡಿದ್ದೇನೆ. ಸ್ವತಃ ಶ್ರೇಷ್ಠ ವಿದ್ವಾಂಸರೆನಿಸಿಕೊಳ್ಳುವ ಸಾಮರ್ಥ್ಯ ಅವರಲ್ಲಿದೆ. ಈ ಸಾಮರ್ಥ್ಯದಲ್ಲಿ ಕೆಲವು ಅಂಶಗಳನ್ನು ಅವರು ಪ್ರೊ॥ ರಾಮಸ್ವಾಮಿಯವರ ವಿದ್ಯಾರ್ಥಿನಿಯಾಗಿ ಪಡೆದುಕೊಂಡಿರಬೇಕು. ಅವರ ಗುರುಗಳ ಋಣವನ್ನು ಮತ್ತು ಪತಿಯ ಋಣವನ್ನು ಜೀವನದುದ್ದಕ್ಕೂ ಅವರು ತೀರಿಸುತ್ತಾ ಬಂದಿದ್ದಾರೆ. ಪ್ರೊ ॥ ರಾಮಸ್ವಾಮಿಗಳ ಬರಹಗಳನ್ನು ಪ್ರಕಟಣೆಗೆ ಸಿದ್ಧಮಾಡುವುದು ಸುಲಭದ ಕೆಲಸವಲ್ಲ. ಒಂದೇ ವಿಷಯದ ಮೇಲೆ ಅವರು ಅನೇಕ ಸಲ ಬರೆಯುತ್ತಿದ್ದರು. ಅವುಗಳನ್ನು ಓದಲು ಯೋಗ್ಯವಾದ ಒಂದು ಕರಡನ್ನು ತಯಾರುಮಾಡುವ ಕಲೆ ಶ್ರೀಮತಿ ಸಾವಿತ್ರಮ್ಮನವರಿಗೆ ಸಾಧಿಸಿದ ಹಾಗೆ ಇತರರಿಗೆ ಸಾಧಿಸುವುದು ಕಠಿಣ. ತಮ್ಮ ಸಂಪಾದಕತ್ವದ ಕೆಲಸವನ್ನು ಅತ್ಯಂತ ಯಶಸ್ವಿಯಾಗಿ ಮಾಡಿದ್ದಾರೆ. ಇನ್ನೂ ಪ್ರಕಟವಾಗದ ಪ್ರೊ ॥ ರಾಮಸ್ವಾಮಿಗಳ ಬರಹಗಳನ್ನು ಇದೇ ರೀತಿ ಅವರು ಪ್ರಕಟಿಸುತ್ತಾರೆಂದು ನಾವು ಆಶಿಸಬಹುದು.

■

ಬದ್ಧತೆಯಿಂದ ಬುದ್ಧತೆಯೆಡೆಗೆ

'ಉನ್ನತ ಶಿಕ್ಷಣ ಎಲ್ಲರಿಗೂ ಎಲ್ಲೆಡೆ' ಎನ್ನುವ ಕನಸನ್ನು ಹೊತ್ತ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ಶಿಕ್ಷಣವನ್ನು ಪಡೆಯುವ ಅವಕಾಶಗಳ ಆವರಣದ ಪರಿಧಿಗಳನ್ನು ನಿರಂತರವಾಗಿ ವಿಸ್ತರಿಸುವ ಕೆಲಸವನ್ನು ಮಾಡುತ್ತಿದೆ. ಶಿಕ್ಷಣವನ್ನು ಪಡೆಯಲು ಅವಕಾಶವನ್ನು ಕಲ್ಪಿಸುವುದು ಮತ್ತು ಅಂತಹ ಶಿಕ್ಷಣವು ಬದುಕಿನೊಂದಿಗೆ ಸಂಬಂಧ ಹೊಂದುವಂತೆ ಮಾಡುವುದು ಮುಖ್ಯವಾದ ಸಂಗತಿ.

ಬೋಧನೆ, ಸಂಶೋಧನೆಗಳ ಜೊತೆಗೆ ಅಷ್ಟೇ ಮುಖ್ಯವಾಗಿ 'ಪ್ರಸಾರಾಂಗ' ಎನ್ನುವುದು ಸಮಾಜಮುಖಿಯಾಗಿ ವಿಶ್ವವಿದ್ಯೆಯನ್ನು ಜನಗಳೆಡೆಗೆ ಕೊಂಡೊಯ್ಯಲು ಪ್ರಮುಖ ರಹದಾರಿಯಾಯಿತು. ಒಂದು ಅರ್ಥದಲ್ಲಿ ಪ್ರಸಾರಾಂಗವೆಂದರೆ ಮುಕ್ತ ವಿಶ್ವವಿದ್ಯಾನಿಲಯ ಎನ್ನುವ ಅರ್ಥವನ್ನು ಹೊಂದಿತು.

ಮುಗ್ಧತೆ, ಮುಕ್ತತೆ ಮತ್ತು ಪಕ್ವತೆಗಳ ಸಂಗಮವಾಗಿ ಕರ್ನಾಟಕದ ತಿಳುವಳಿಕೆಗೆ ಸಂವಹನದ ತರಂಗಾಂತರಂಗಗಳನ್ನು ಹರಿಯಗೊಡುವುದು ನಮ್ಮ ಪ್ರಸಾರಾಂಗದ ಪ್ರಮುಖ ಕಾಳಜಿ.

ಡಾ.ಜಿ.ಎಸ್.ದೀಕ್ಷಿತ್ ಅವರ ಐತಿಹಾಸಿಕ ಲೇಖನಗಳ ಸಂಗ್ರಹವು ಮಧ್ಯಕಾಲೀನ ಕರ್ನಾಟಕ ಇತಿಹಾಸ ಸಂಶೋಧನೆಯ ದೃಷ್ಟಿಯಿಂದ ಒಂದು ಮಹತ್ವದ ಕೃತಿ. ಡಾ.ಜಿ.ಎಸ್.ದೀಕ್ಷಿತ್ 'ಮಧ್ಯಯುಗೀನ ಕರ್ನಾಟಕ'ವನ್ನು ಕುರಿತು ನಡೆಸಿದ ಆಳವಾದ ಅಧ್ಯಯನದ ಫಲವಾಗಿ ರೂಪುಗೊಂಡ ಸಂಪ್ರಬಂಧಗಳು ಇಲ್ಲಿ ಸಂಕಲಿತವಾಗಿವೆ.

ಕನ್ನಡ ಸಾಹಿತ್ಯ ಮತ್ತು ಸಂಶೋಧನೆಯ ಅರುಣೋದಯದ ಚಿರಂಜೀವಿ ಸಂಶೋಧಕರಾದ ಡಾ. ಶ್ರೀನಿವಾಸ ಹಾವನೂರ ಅವರು ದೀಕ್ಷಿತ್ ಅವರ ಸಂಪ್ರಬಂಧಗಳ ಸಂಕಲನವನ್ನು ಸಂಪಾದಿಸಿಕೊಟ್ಟು ಉಪಕರಿಸಿದ್ದಾರೆ. ಆಕರಗಳ ಶೋಧವನ್ನು ಸಾಗರದಾಚೆಯಿಂದಲೂ ಹೆಕ್ಕಿ ತಂದ, ಇತಿಹಾಸಕ್ಕೆ ಕನ್ನಡ ಸಾಹಿತ್ಯ-ಸಂಸ್ಕೃತಿಯ ಮೂಲಕ ಹೊಸ ಅಧ್ಯಯನ ವಿಧಾನವನ್ನು ರೂಪಿಸಿದ, ಶೋಧಕ ಕ್ರಿಯಾಶೀಲತೆಯ ಪ್ರತಿರೂಪವಾಗಿರುವ ಹಿರಿಯ ಸಂಶೋಧಕ ಡಾ. ಶ್ರೀನಿವಾಸ ಹಾವನೂರ ಅವರು ನಮ್ಮ ನಡುವಿನ ನಡೆದಾಡುವ ಸಂಶೋಧನ ಆಕರ. ನಾನು ಸದಾ ಕಾಲ ಗೌರವಿಸುವ ಹಿರಿಯರೂ ಹಿತೈಷಿಗಳೂ ವಿನಯ-ವಿದ್ವತ್ತುಗಳ ವಿದ್ಯುದಾಲಿಂಗನದ ಸಂಶೋಧಕರೂ ಆಗಿರುವ ಡಾ. ಶ್ರೀನಿವಾಸ ಹಾವನೂರ ಅವರು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಪ್ರಸಾರಾಂಗದ ವತಿಯಿಂದ ಈ ಗ್ರಂಥವನ್ನು ಪ್ರಕಟಿಸಲು ಒಪ್ಪಿಗೆ ಕೊಟ್ಟಿರುವುದಕ್ಕಾಗಿ ಅವರಿಗೆ ಗೌರವದ ನಮನಗಳನ್ನು ಸಲ್ಲಿಸುತ್ತೇನೆ.

ಕನ್ನಡದ ಹಿರಿಯ ವಿದ್ವಾಂಸರೂ ಅನುಭವಿ ಆಡಳಿತಗಾರರೂ ಆಗಿರುವ ಡಾ. ಡಿ.ಕೆ. ರಾಜೇಂದ್ರ ಅವರು ನಮ್ಮ ವಿಶ್ವವಿದ್ಯಾನಿಲಯ ಪ್ರಸಾರಾಂಗದ ಮೊದಲ ಗೌರವ ನಿರ್ದೇಶಕರಾಗಿ ಹೊಸ ಅಡಿಪಾಯವನ್ನು ಸಮರ್ಥವಾಗಿ ಹಾಕಿಕೊಟ್ಟಿದ್ದಾರೆ.

ಬಿ.ಎ. ವಿವೇಕ ರೈ

ಕುಲಪತಿ